ಪ್ರಬುದ್ಧ ಕರ್ಣಾಟಕ

ಸಂಪುಟ ೪೫—ಸಂಚಿಕೆ ೪

೧೭೮

ಶೋಭಕೃತು ಸಂವತ್ಸರ

ಪುಷ್ಯ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೬೪

ಪ್ರಬುದ್ಧ ಕರ್ಣಾಟಕ

(ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ತ್ರೈಮಾಸಿಕ)

ಚೈತ್ರ, ಆಷಾಢ, ಆಶ್ವಯುಜ, ಪುಷ್ಯಮಾಸಗಳ ಹುಣ್ಣಿಮೆಯ ಹೊತ್ತಿಗೆ ಪ್ರಕಟವಾಗುತ್ತದೆ.

ಒಂದು ಸಾವಿರ ಪುಟಗಳಷ್ಟು ಉತ್ತಮ ಸಾಹಿತ್ಯ ಬೇಕೆ?
ಸುಪ್ರಸಿದ್ಧ ಕನ್ನಡ ಲೇಖಕರ ಬರೆಹಗಳು ಬೇಕೆ?

"ಪ್ರಬುದ್ಧ ಕರ್ಣಾಟಕ"ಕ್ಕೆ ಇಂದೇ ಚಂದಾದಾರರಾಗಿ

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ)

ಸಾಮಾನ್ಯ ಚಂದಾದಾರರಿಗೆ	....	ರೂ. ೪.೦೦
ವಾಚನಾಲಯ ಮುಂತಾದ ಸಂಸ್ಥೆಗಳಿಗೆ	....	ರೂ. ೫.೦೦
ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಮಾತ್ರ	....	ರೂ. ೩.೦೦

ವಿನಂತಿ

ಈ ಸಂಚಿಕೆಯೊಂದಿಗೆ ಪ್ರಬುದ್ಧ ಕರ್ಣಾಟಕದ ೪೫ ನೆಯ ಸಂಪುಟವು ಮುಗಿಯುತ್ತದೆ. ಕ್ರೋಧಿ ಸಂವತ್ಸರದ ಚೈತ್ರ ಸಂಚಿಕೆ ಈಗಾಗಲೇ ಸಿದ್ಧವಾಗತೊಡಗಿದೆ. ಚಂದಾದಾರರು ತಮ್ಮ ಚಂದಾಹಣವನ್ನು ಕೂಡಲೆ ಕಳುಹಿಸಿಕೊಡಬೇಕಾಗಿ ಕೋರುತ್ತೇವೆ. ಲೇಖಕರೂ ಮತ್ತು ಚಂದಾದಾರರೂ ಎಂದಿನಂತೆಯೇ ಮುಂದೆಯೂ ನಮ್ಮೊಂದಿಗೆ ಸಹಕರಿಸಬೇಕಾಗಿ ವಿನಂತಿ.

ಚಂದಾದಾರರಲ್ಲಿ ಮತ್ತೊಂದು ವಿಜ್ಞಾಪನೆಯೆಂದರೆ, ಪ್ರಬುದ್ಧ ಕರ್ಣಾಟಕದ ವಾರ್ಷಿಕ ಚಂದಾವನ್ನು ಐವತ್ತು ನಯಾಪೈಸೆಗಳಷ್ಟು ಏರಿಸಲಾಗಿದೆ (ಅಂದರೆ: ರೂ. ೩.೦೦; ೪.೦೦; ೫.೦೦). ದಯೆಯಿಟ್ಟು ಈ ಏರಿಕೆಯನ್ನು ಮನ್ನಿಸಿ ಮುಂದೆಯೂ ಅಭಿಮಾನ ತೋರಬೇಕಾಗಿ ವಿನಂತಿ.

ಸಂಪಾದಕರು

ಪ್ರಬುದ್ಧ ಕರ್ಣಾಟಕ

ಸಂಪುಟ ೪೫—ಸಂಚಿಕೆ ೪

೧೭೮

ಶೋಭಕೃತು ಸಂವತ್ಸರ

ಪುಷ್ಯ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೬೪

ಪ್ರಧಾನ ಸಂಪಾದಕ :

ಪ್ರೊ. ದೇ. ಜವರೇಗೌಡ, ಎಂ.ಎ.

ಸಂಪಾದಕರು :

ಎಸ್. ನಾರಾಯಣಶೆಟ್ಟಿ, ಎಂ.ಎ.

ಡಾ|| ಜಿ. ವರದರಾಜರಾವ್, ಎಂ.ಎ., ಪಿಎಚ್.ಡಿ.

ಪ್ರಕಾಶಕರು :

ಪಿ. ಮಲ್ಲಿಕಾರ್ಜುನಪ್ಪ, ಎಂ.ಎಸ್‌ಸಿ.,

ಡೈರೆಕ್ಟರ್, ಪ್ರಸಾರಾಂಗ

ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ವಿಷಯ ಸೂಚಿಕೆ



ಶ್ರೀ ಸ್ವಾಮಿ ವಿವೇಕಾನಂದ

ಪ್ರಬುದ್ಧ ಕರ್ಣಾಟಕ

ಶೋಭಕೃತು ಸಂವತ್ಸರ ೧೭೮ ಪುಷ್ಯ ಸಂಚಿಕೆ

ಅಂಬಾಸ್ತೋತ್ರಮ್

ಕಾ ತ್ವಂ ಶುಭೇ ಶಿವಕರೇ ಸುಖದುಃಖಹಸ್ತೇ
ಆಘೂರ್ಣಿತಂ ಭವಜಲಂ ಪ್ರಬಲೋರ್ಮಿಭಂಗೈಃ
ಶಾಂತಿಂ ವಿಧಾತುಮಿಹ ಕಿಂ ಬಹುಧಾ ವಿಭಗ್ನಾಮ್
ಮಾತಃ ಪ್ರಯತ್ನಪರಮಾಸಿ ಸದೈವ ವಿಶ್ವೇ.

(ಓ ಮಂಗಳೆ! ಶಿವಕರೆ! ಸುಖದುಃಖ ಹಸ್ತೇ! ನೀನು ಯಾರು? ಪ್ರಬಲೋರ್ಮಿ ಭಂಗದಿಂದ ಭವಜಲಧಿ ಕಲಕಿಹೋಗಿದೆ. ಚೂರುಚೂರಾಗಿರುವ ಶಾಂತಿಯನ್ನು ಈ ವಿಶ್ವದಲ್ಲಿ ನೆಲೆಗೊಳಿಸಲು ನೀನು ಯಾವಾಗಲೂ ಪ್ರಯತ್ನಪರಳಾಗಿರುವೆಯಾ, ಓ ತಾಯಿ?)

ಸಂಪಾದಯತ್ಯವಿರತಂ ತ್ವವಿರಾಮವೃತ್ತಾ
ಯಾ ವೈ ಸ್ಥಿತಾ ಕೃತಫಲಂ ತ್ವಕೃತಸ್ಯ ನೇತ್ರೀ
ಸಾ ಮೇ ಭವತ್ವನುದಿನಂ ವರದಾ ಭವಾನೀ
ಜಾನಾಮ್ಯಹಂ ಧ್ರುವಮಿದಂ ಧೃತಕರ್ಮಪಾಶಾ.

(ನಿಲುಗಡೆಯಿಲ್ಲದ ಕರ್ಮದಲ್ಲಿ ತೊಡಗಿರುವವಳು, ಆಗಿಹೋದ ಕರ್ಮದ ಫಲವನ್ನು ಹಂಚುವವಳು ಮತ್ತು ಮುಂಬರುವ ಎಲ್ಲ ಕರ್ಮವನ್ನೂ ನಡೆಸುವವಳು– ಆ ಭವಾನಿ ಅನುದಿನವೂ ನನಗೆ ವರದೆಯಾಗಲಿ. ಕರ್ಮಪಾಶವನ್ನು ಅವಳೆ ಹಿಡಿದಿದ್ದಾಳೆ ಎಂಬುದು ಧ್ರುವ; ನಾನದನ್ನು ಬಲ್ಲೆ).

ಕೋ ವಾ ಧರ್ಮಃ ಕಿಮಕೃತಂ ಕಃ ಕಪಾಲಲೇಖಃ
ಕಿಂ ವಾದೃಷ್ಟಂ ಫಲಮಿಹಾಸ್ತಿ ಹಿ ಯಾಂ ವಿನಾ ಭೋಃ
ಇಚ್ಛಾ ಪಾಶೈರ್ನಿಯಮಿತಾ ನಿಯಮಾಃ ಸ್ವತಂತ್ರೈಃ
ಯಸ್ಯಾ ನೇತ್ರೀ ಭವತು ಸಾ ಶರಣಂ ಮಮಾದ್ಯಾ.

(ಅವಳಿಲ್ಲದೆ ಧರ್ಮವೆಲ್ಲಿದೆ, ಅಕೃತವೆಲ್ಲಿದೆ, ಹಣೆಬರಹವೆಲ್ಲಿದೆ, ಅದೃಷ್ಟ

ಫಲವೆಲ್ಲಿದೆ? ಅವಳ ಸ್ವತಂತ್ರ ಇಚ್ಛಾಪಾಶಗಳಿಂದ ನಿಯಮಗಳು ನಿಯಮಿತ ವಾಗಿವೆ. ಆ ಸೂತ್ರಧಾರಿಣಿ ನನಗೆ ರಕ್ಷೆಯಾಗಲಿ).

ಸಂತಾನಯಂತಿ ಜಲಧಿಂ ಜನಿಮೃತ್ಯುಜಾಲಂ
ಸಂಭಾವಯಂತ್ಯವಿಕೃತಂ ವಿಕೃತಂ ವಿಭಗ್ನಂ
ಯಸ್ಯಾ ವಿಭೂತಯ ಇಹಾಮಿತಶಕ್ತಿಪಾಲಾಃ
ನಾಶ್ರಿತ್ಯ ತಾಂ ವದ ಕುತಃ ಶರಣಂ ವ್ರಜಾಮಃ

(ಅಮಿತ ಶಕ್ತಿಪಾಲರು ಯಾರ ವಿಭೂತಿಯಾಗಿರುವರೊ, ಯಾರ ವಿಭೂತಿ ಶಕ್ತಿಗಳು ಜನನ ಮರಣಗಳ ಜಾಲಜಲಧಿಯನ್ನುಂಟುಮಾಡುತ್ತವೆಯೊ, ಹುಟ್ಟು ಸ್ಥಿತಿ ಸಾವುಗಳಿಗೆ ಕಾರಣವಾಗುತ್ತವೆಯೊ ಅವಳನ್ನು ಆಶ್ರಯಿಸದೆ ಮತ್ತಾರನ್ನು ಶರಣುಹೋಗುವುದು?)

ಮಿತ್ರೇ ಶತ್ರೌ ತ್ವವಿಷಮಂ ತವ ಪದ್ಮನೇತ್ರಂ
ಸ್ವಸ್ಥೇ ದುಃಸ್ಥೇ ತ್ವವಿತಥಂ ತವ ಹಸ್ತಪಾತಃ
ಮೃತ್ಯುಚ್ಛಾಯಾ ತವ ದಯಾತ್ವಮೃತಂಚ ಮಾತಃ
ಮಾ ಮಾಂ ಮುಂಚಂತು ಪರಮೇ ಶುಭದೃಷ್ಟಯಸ್ತೇ.

(ಮಿತ್ರ, ಶತ್ರು ಇಬ್ಬರಿಗೂ ನಿನ್ನ ತಾವರೆಗಣ್ಣುಗಳು ಸಮಾನ. ಸುಸ್ಥಿತಿಯಲ್ಲಿರುವವರಿಗೂ ದುಸ್ಥಿತಿಯಲ್ಲಿರುವವರಿಗೂ ನಿನ್ನ ಕರಸ್ಪರ್ಶ ಒಂದೇ ರೀತಿಯಲ್ಲಿ ಫಲದಾಯಕ. ಸಾವಿನ ನೆರಳು, ಅಮೃತತ್ವ ಎರಡೂ ನಿನ್ನದಯೆ. ಬೇಡ! ಓ ತಾಯಿ! ಪರಮೆ! ನಿನ್ನ ಶುಭದೃಷ್ಟಿಗಳು ನನ್ನನ್ನು ಬಿಡದಿರಲಿ.)

ಕ್ವಾಂಬಾ ಸರ್ವಾ ಕ್ವ ಗೃಣನಂ ಮಮ ಹೀನಬುದ್ಧೇಃ
ಧರ್ತುಂ ದೋರ್ಭ್ಯಾಮಿವ ಮತಿರ್ಜಗದೇಕಧಾತ್ರೀಂ
ಶ್ರೀಸಂಚಿಂತ್ಯಂ ಸುಚರಣಂ ಅಭಯಪ್ರತಿಷ್ಠಂ
ಸೇವಾಸಾರೈರಭಿನುತಂ ಶರಣಂ ಪ್ರಪದ್ಯೇ.

(ತಾಯಿ! ನೀನು ಸರ್ವವೂ ಆಗಿದ್ದೀಯೆ. ನಿನ್ನನ್ನು ನನ್ನ ಹೀನಬುದ್ಧಿ ಹೊಗಳುವುದೆಂದರೆ, ಜಗದೇಕಧಾತ್ರಿಯನ್ನು ಎರಡು ತೋಳುಗಳಲ್ಲಿ ಹಿಡಿದುಕೊಳ್ಳುವ ಆಸೆಯಂತೆ! ಲಕ್ಷ್ಮೀಸ್ತುತ್ಯವಾದ, ಅಭಯದ ನೆಲೆಯಾದ, ಸೇವಾಸಾರಗಳಿಂದ ಅಭಿನುತವಾದ ನಿನ್ನ ಸುಚರಣಕ್ಕೆ ಶರಣುಬರುತ್ತೇನೆ.)

ಯಾ ಮಾಮಾಜನ್ಮ ವಿನಯತ್ಯತಿದುಃಖಮಾರ್ಗೈಃ
ಆಸಂಸಿದ್ಧೇಃ ಸ್ವಕಲಿತೈರ್ಲಲಿತೈರ್ವಿಲಾಸೈಃ
ಯಾ ಮೇ ಬುದ್ಧಿಂ ಸುವಿದಧೇ ಸತತಂ ಧರಣ್ಯಾಮ್
ಸಾಂಬಾ ಸರ್ವಾ ಮಮ ಗತಿಃ ಸಫಲೇಽಫಲೇ ವಾ.

(ಯಾರು ಆಜನ್ಮವೂ ನನ್ನನ್ನು ತನ್ನ ಲಲಿತವಿಲಾಸಗಳಿಂದ ಅತಿ ದುಃಖ ಮಾರ್ಗಗಳಲ್ಲಿ ನಡೆಸಿ ಗುರಿಮುಟ್ಟಿಸುತ್ತಾಳೋ, ಸಫಲದಲ್ಲಿ ಅಥವಾ ವಿಫಲದಲ್ಲಿ ಯಾರು ನನ್ನ ಬುದ್ಧಿಯನ್ನು ಈ ಭೂಮಿಯಲ್ಲಿ ಸತತವೂ ವಿಧಾನಗೊಳಿಸುವಳೊ ಆ ತಾಯಿಯೆ ನನಗೆ ಗತಿ.)

ಅನು: ಸಿ. ಪಿ. ಕೆ. —ಸ್ವಾಮಿ ವಿವೇಕಾನಂದ

ಅಹಿಂಸಾ ತತ್ತ್ವಕ್ಕೆ
ಶ್ರೀ ವಿವೇಕಾನಂದರಿತ್ತ ಸ್ಥಾನ

ಭಾರತದಲ್ಲಿ, ಜೈನ ಬೌದ್ಧ ಧರ್ಮಗಳು ತಲೆ ಎತ್ತಿದಾಗಿನಿಂದ 'ಅಹಿಂಸಾ ಪರಮೋ ಧರ್ಮಃ' ಎಂಬ ಧಾರ್ಮಿಕ ಸತ್ಯವಾಕ್ಯ ನಮ್ಮ ಜನಜೀವನದಲ್ಲಿ ಬಲವಾಗಿ ಪ್ರಚಲಿತವಾಗಿದೆ. ಅಹಿಂಸೆಯೇ ಪರಮಶ್ರೇಷ್ಠ ಧರ್ಮ ಎಂಬುದನ್ನು ನಾವು ಎಲ್ಲಿಯವರೆಗೆ ಆಚರಣೆಯಲ್ಲಿ ತಂದಿದ್ದೇವೆ ಎಂದರೆ ಉಸಿರಾಡುವಾಗ ನಮಗೆ ತಿಳಿಯದೆಯೇ ಕೆಲವು ಸೂಕ್ಷ್ಮ ಜೀವಜಂತುಗಳು ಅಕಸ್ಮಾತ್ ಹಿಂಸೆಗೊಳಗಾಗ ಬಹುದೆಂದು ಮೂಗುಬಾಯಿಗಳಿಗೆ ಅರಿವೆ ಕಟ್ಟಿಕೊಂಡು ಅಡ್ಡಾಡುವ ಮಟ್ಟಕ್ಕೆ ಬಂದಿದ್ದೇವೆ! ರಾತ್ರಿ ಊಟಮಾಡಿದರೆ ಜೀವಕ್ಕೆ ಅಪಾಯವಾದೀತೆಂದು ಹೊತ್ತು ಮುಳುಗುವ ಮುಂಚೆಯೇ ಊಟ ತೀರಿಸುವ ಪರಿಪಾಠ ಈಗಲೂ ಇದೆ. ತಗಣಿ ಯನ್ನೂ ಕೊಲ್ಲದಿರುವ, ಇರುವೆಗಳಿಗೆ ಸಕ್ಕರೆ ಹಾಕಿ ಸಾಕುವ, ವಿಷಸರ್ಪಗಳನ್ನು ಕೊಲ್ಲದೆ ಕೈಮುಗಿಯುವ . . . . ಅನೇಕ ಚಿತ್ರವಿಚಿತ್ರ ಘಟನೆಗಳನ್ನು ನೋಡುತ್ತೇವೆ!

ಈ ಅಹಿಂಸಾತತ್ತ್ವ ಇತ್ತೀಚಿಗೆ ಮಹಾತ್ಮಾ ಗಾಂಧೀ ರಾಜಕೀಯದಲ್ಲಿ ಪ್ರವೇಶಿಸಿದ ಮೇಲೆ—ರಾಜಕೀಯ ಕ್ಷೇತ್ರದಲ್ಲೂ ನುಗ್ಗಿ ತನ್ನ ಪ್ರತಿಷ್ಠೆಯನ್ನು ಸ್ಥಾಪಿಸಿಕೊಂಡಿತು! ಸ್ವಾತಂತ್ರ್ಯ ಬಂದದ್ದು ಅಹಿಂಸಾಯುತವಾದ ಸತ್ಯಾಗ್ರಹ ಚಳುವಳಿಯಿಂದಲೇ ಎಂದು ಲಕ್ಷವೇದಿಕೆಗಳಿಂದ ಕೋಟಿ ಕೋಟಿ ಕಂಠಗಳು ಇಂದಿಗೂ ಕೂಗಿ ಹೇಳುತ್ತವೆ.[1] ಸ್ವಾತಂತ್ರ್ಯಾನಂತರದಲ್ಲಿ ಸ್ವತಂತ್ರ ಭಾರತಕ್ಕೆ ಸೈನ್ಯದ ಆವಶ್ಯಕತೆಯೇ ಇಲ್ಲವೆಂದು ಪ್ರತಿಪಾದಿಸಿದ ತತ್ತ್ವನಿಷ್ಠರಿಗೇನೂ ಕಡಿಮೆ ಯಿಲ್ಲ. ಇನ್ನೂ, ಮೊನ್ನೆ ಮೊನ್ನೆ, ಹಿಮಾಲಯದ ಗಡಿಯಲ್ಲಿ ಚೀಣಾ ದುರಾ ಕ್ರಮಣ ನಡೆದಾಗ, ಅಹಿಂಸಾಯುತವಾದ ಸತ್ಯಾಗ್ರಹ ಸಮರಕ್ಕೆ ಕರೆಕೊಟ್ಟ ವೀರಾಗ್ರಣಿಗಳನ್ನೂ ನೋಡಿದೆವು!

ಹೀಗೆ ನಮ್ಮ ಹಿಂದಿನ ಮತ್ತು ಇಂದಿನ ಬಾಳು ಅಹಿಂಸಾತತ್ತ್ವದ ಪ್ರಭಾವ ದಿಂದ ರೂಪುಗೊಂಡಿದೆ. ಏನುಣ್ಣಬೇಕು? ಯಾವಾಗ ಉಣ್ಣಬೇಕು? ಸಂಸಾರ ದಲ್ಲಿ, ಸಮಾಜದಲ್ಲಿ ಹೇಗಿರಬೇಕು? ನಾಡಿನ ಆಳ್ವಿಕೆ, ರಾಷ್ಟ್ರದ ಭದ್ರತೆ . . . . . ಎಲ್ಲಕ್ಕೂ ಈ ಅಹಿಂಸಾತತ್ತ್ವವೇ ಆಧಾರಸ್ತಂಭವೆಂಬಂತೆ ವರ್ತಿಸುತ್ತಾ ಬಂದಿದ್ದೇವೆ.

---

[1] ಅದು ನಿಜವಲ್ಲ ಎಂದು ಮೌಲಾನಾ ಅಬುಲ್‌ಕಲಂ ಆಜಾದರು "India Wins Freedom" ಎಂಬ ಗ್ರಂಥದಲ್ಲಿ ಸ್ಪಷ್ಟವಾಗಿ ಸಾರಿದ್ದಾರೆ. ಹಾಗೆಯೇ ಹಿರೇನ್ ಮುಖರ್ಜಿ ಅವರ: "Gandhiji" ಎಂಬ ಗ್ರಂಥದಲ್ಲೂ ಬರೆದಿದೆ.

ಅದರಲ್ಲೂ ಗಾಂಧೀಜಿ ರಾಜಕೀಯವನ್ನು ಪ್ರವೇಶಿಸಿದ ಮೇಲೆ, ಈ ಅಹಿಂಸಾತತ್ತ್ವ ರಾಜಕೀಯದಲ್ಲಿ 'ಧಾರ್ಮಿಕ ವಿಧಿ' (Creed) ಎಂಬಷ್ಟು ಬಲಶಾಲಿಯಾಗಿಬಿಟ್ಟಿದೆ.

ಹೀಗೆ ತಲೆಗೆಲ್ಲ ಒಂದೇ ಮಂತ್ರವನ್ನು ಪ್ರಯೋಗಿಸುವ ಗಾಂಪರೊಡೆಯರ ಸದ್ಭಕ್ತ ಮಂಡಳಿಯಂತೆ ನಾವೀಗ ವರ್ತಿಸುತ್ತಿದ್ದೇವೆ! ಈ ಅಹಿಂಸಾತತ್ತ್ವವನ್ನು ಯಾರು, ಯಾವಾಗ, ಎಷ್ಟು ಆಚರಿಸಬೇಕೆಂಬ ಉಚಿತಾನುಚಿತ ವಿವೇಕವು ಬಹುಜನರಿಗೆ ಕಣ್ಮರೆಯಾಗಿ ಬಿಟ್ಟಿದೆ! ಯಾವ ವಿಧಿಯೂ ಕೇವಲ (Absolute) ಅಲ್ಲ. ಹಾಲು ಆರೋಗ್ಯಕ್ಕೆ ಒಳ್ಳೆಯದು. ಆದರೆ ಕೆಲವು ರೋಗಿಗಳಿಗೆ ಅದು ಕೇವಲ ನಿಷಿದ್ಧ. ಹಾಗೆಯೇ ಅಹಿಂಸೆ ಶ್ರೇಷ್ಠ ಧರ್ಮವೆಂಬುದೇನೋ ತತ್ತ್ವತಃ ಸತ್ಯ. ಆದರೆ ವಾಸ್ತವವಾಗಿ ಅದರ ಆಚರಣೆಯಲ್ಲಿ ಉಚಿತಾನುಚಿತದ ವಿವೇಕ ಬೇಕು.

ಒಮ್ಮೆ ಬ್ರಹ್ಮದೇವರನ್ನು ಕುರಿತು ದೇವತೆಗಳೂ ದಾನವರೂ ಮಾನವರೂ ತಪಸ್ಸುಮಾಡಿದರು. ಇವರ ತಪಸ್ಸಿಗೆ ಮೆಚ್ಚಿದ ಬ್ರಹ್ಮದೇವರು ಅವರ ಮುಂದೆ ಪ್ರತ್ಯಕ್ಷನಾಗಿ ಎಲ್ಲರನ್ನೂ ಆಶೀರ್ವದಿಸಿ "ದ" ಎಂದು ನುಡಿದ. ದೇವತೆಗಳೂ ದಾನವರೂ ಮಾನವರೂ ಮೂರೂ ವರ್ಗದವರು 'ಆಗಲಿ' ಎಂದು ಉತ್ತರಕೊಟ್ಟು ಹೊರಟುಹೋದರು. 'ಇದರಿಂದ ನಿಮಗೇನು ಅರ್ಥವಾಯಿತು?' ಎಂದೊಬ್ಬರು ದೇವತೆಗಳನ್ನು ಕೇಳಿದರು. ಅದಕ್ಕವರು: "ದಮೆ ಇರಲಿ ಎಂದು ಬ್ರಹ್ಮದೇವರು ಅಪ್ಪಣೆಕೊಟ್ಟ" ಎಂದರು. ದಾನವರು: "ದಯೆತೋರಲಿ" ಎಂಧು ಅರ್ಥ ಮಾಡಿಕೊಂಡರು. ಮಾನವರು: "ದಾನಿಗಳಾಗಲಿ" ಎಂದು ತಿಳಿದುಕೊಂಡರು. ಬ್ರಹ್ಮದೇವರ ಸೂತ್ರವೇನೋ ಒಂದೇ! ಆದರೆ ಒಬ್ಬೊಬ್ಬರಿಗೆ ಒಂದೊಂದು ಬಗೆಯಾಗಿ ಅರ್ಥವಾಯಿತು. ಅವರವರ ಅಂತಸ್ಸತ್ವ, ಆವಶ್ಯಕತೆ, ಆತ್ಮವಿಕಾಸ ವನ್ನವಲಂಬಿಸಿ ಆ ಧರ್ಮಸೂತ್ರ ಅರ್ಥವಾಯಿತು. ರಾಕ್ಷಸ ಶಕ್ತಿಯ ದಾನವರಿಗೆ: "ದಯೆತೋರಿರಿ" ಎಂದು ಹೇಳುವುದರಲ್ಲಿ ಔಚಿತ್ಯವಿದೆ. ನೆರಳನ್ನು ನೋಡಿ ಅಂಜುವ ಮಾನವರು ದಯೆತೋರಲು ಅವರಿಗೇನು ಯೋಗ್ಯತೆ ಇದೆ? ಯಾರ ಮೇಲೆ ದಯೆತೋರಬೇಕು? ಮಾನವರು ಹೆಚ್ಚೆಂದರೆ ದಾನಿಗಳಾಗಬಹುದು. ತಮ್ಮಲ್ಲಿದ್ದುದನ್ನು ಸುಮ್ಮನೆ ಸಂಗ್ರಹಿಸಿಟ್ಟುಕೊಂಡು ಇತರರಿಗೆ ತೊಂದರೆ ಕೊಡ ಬಾರದು. ಹಾಗೆಯೇ ಭೋಗಾತಿರೇಕದಿಂದ ಮುಗ್ಗರಿಸುವ ಅಪಾಯವುಳ್ಳ ದೇವತೆಗಳು 'ದಮೆ' ಉಳ್ಳವರಾಗಿರಬೇಕು.

ಹೀಗೆಯೇ ಅಹಿಂಸಾತತ್ತ್ವವೂ ಯಾರಿಗೆ? ಯಾವಾಗ? ಎಷ್ಟು? ಎಂಬುದನ್ನು ವಿವೇಕವರಿತು ಅರ್ಥಮಾಡಿಕೊಳ್ಳಬೇಕು. ಹಿಂದೆ—ಬುದ್ಧನ ಅವತಾರಕ್ಕಿಂತಲೂ ಹಿಂದೆ—ನಮ್ಮ ದೇಶದ ಜನರಲ್ಲಿ ತುಷ್ಟಿ, ಪುಷ್ಟಿ, ನೆಮ್ಮದಿ, ಸಂಪತ್ತು, ಧನಧಾನ್ಯಗಳು ತುಂಬಿ ತೇಲಾಡುತ್ತಿತ್ತು. ಅವರ ಸಾಹಿತ್ಯ, ಸಂಗೀತ, ನೃತ್ಯ, ಚಿತ್ರ, ಕುಶಲಕಲೆ ಪರಮೋತ್ಕೃಷ್ಟ ಮಟ್ಟಕ್ಕೆ ಮುಟ್ಟಿತ್ತು. ಅಪರಿಮಿತವಾದ ವಿಶ್ರಾಂತಿ ದೊರೆತಾಗ ರಾಜಸಿಕ ಗುಣ ವಿಪರೀತ ಬೆಳೆಯಿತು. ದೇಶವಿದೇಶಗಳ ಮೇಲೆ ದಂಡೆತ್ತಿ

ಹೋದರು. ಇಡೀ ಆಗ್ನೇಯ ಏಷ್ಯಾ ಖಂಡವೇ ಭಾರತದ ಪಾದಾಕ್ರಾಂತವಾಗಿತ್ತು. ಭಾರತೀಯರ ಪ್ರಭಾವ ದೇಶವಿದೇಶಗಳಲ್ಲಿ ಯಥೇಚ್ಛವಾಗಿ–ಹಬ್ಬಿತ್ತು. ದೇಶದ ಒಳಗೇ ಸಮಾಜದಲ್ಲಿ ಭಯಂಕರವಾದ ರಾಜಸಿಕ ಪ್ರವೃತ್ತಿ ಬೆಳೆದುಬಿಟ್ಟಿತ್ತು. ಯಜ್ಞ ಯಾಗಾದಿಗಳ ಕಾಲಕ್ಕೆ ಪಶುಬಲಿ ನಿರಾತಂಕವಾಗಿ ನಡೆದಿತ್ತು. ಧರ್ಮದ ಹೆಸರಿನಲ್ಲಿ ಅತ್ಯಂತ ಹೇಯವಾದ ಹಿಂಸಾಪದ್ಧತಿ ಆಚರಣೆಯಲ್ಲಿತ್ತು. ಜೊತೆಗೆ ವ್ಯಕ್ತಿಯ ವೈಯಕ್ತಿಕ ನಡತೆಯಲ್ಲೂ, ತಿವಿ, ಬಡಿ, ಕಡಿ, ಇರಿ....ಎಂಬ ಕಿರಾತ ಪ್ರವೃತ್ತಿಯೇ ಬೃಹತ್ ಪ್ರಮಾಣದಲ್ಲಿ ನಡೆದಿತ್ತು ! ಹೀಗೆ ವ್ಯಕ್ತಿಜೀವನ, ಸಮಾಜ ಜೀವನ, ರಾಷ್ಟ್ರಜೀವನ ಯಾವಾಗ ಅತ್ಯಂತ ಹೇಯವಾದ ಹಿಂಸಾಸ್ವರೂಪವನ್ನು ತಾಳಿತೋ ಆಗ ಭಗವಾನ್ ಬುದ್ಧದೇವ, ಮಹಾಮುನಿ ಮಹಾವೀರ : "ಅಹಿಂಸಾ ಪರಮೋ ಧರ್ಮಃ" ಎಂಬ ತತ್ತ್ವವನ್ನು ಬೀರಿದರು ! ಆಗಿನ ವ್ಯಕ್ತಿಗೆ, ಸಮಾಜಕ್ಕೆ, ರಾಷ್ಟ್ರಕ್ಕೆ ಇದು ಅತ್ಯಗತ್ಯವಾಗಿಯೂ ಬೇಕಾಗಿದ್ದ ಪರಮಧರ್ಮವಾಗಿತ್ತು.

ಆದರೆ ಬೌದ್ಧಯುಗದ ಪ್ರಭಾವ ನಮ್ಮ ರಾಷ್ಟ್ರದ ಮೇಲೆ ಕನಿಷ್ಠ ಆರೇಳು ನೂರು ವರ್ಷದವರೆಗೆ ಅವಿಚ್ಛಿನ್ನವಾಗಿ ಬಿದ್ದಿತು. ಯಾವ ವ್ಯಕ್ತಿ, ಯಾವ ಸಮಾಜ, ಯಾವರಾಷ್ಟ್ರ ಅತ್ಯಂತ ಹೇಯವಾದ ಹಿಂಸಾಕಾರ್ಯಗಳಲ್ಲಿ ತೊಡಗಿತ್ತೋ ಅದು ಕ್ರಿಸ್ತಶಕ ಐದು-ಆರನೆಯ ಶತಮಾನದ ಹೊತ್ತಿಗೆ ಅತ್ಯಂತ ಸೌಮ್ಯವಾಗಿ ಹೋಗಿತ್ತು. ಹಲ್ಲು ಮುರಿದ ಹಾವಿನಂತೆ, ಒಗರು ಮುರಿದ ಗೂಳಿಯಂತೆ ತೆಪ್ಪಗಾಗಿತ್ತು. ಆಗ ಬೌದ್ಧಧರ್ಮದ ಪರಮ ಉತ್ಕೃಷ್ಟ ತತ್ತ್ವಗಳನ್ನು ತಪ್ಪಾಗಿ ತಿಳಿದುಕೊಂಡು ಕೇವಲ ಚಾರ್ವಾಕರಂತೆ, ನಿರೀಶ್ವರೀ ವಾದಿಗಳಂತೆ ವರ್ತಿಸಲು ಪ್ರಾರಂಭಮಾಡಿದರು. ಧಾರ್ಮಿಕ ಕ್ಷೇತ್ರದಲ್ಲಿ ಕೇವಲ ನಿರ್ವೀರ್ಯರಾಗಿ ದಿಕ್ಕುತೋಚದೆ ದುಷ್ಟ ಪದ್ಧತಿಯನ್ನು ಅನುಸರಿಸತೊಡಗಿದರು. ಆತ್ಮಹೀನಾಯ ಮಾಡಿಕೊಂಡು ಕ್ರಿಮಿಕೀಟಗಳಂತೆ ಒದ್ದಾಡತೊಡಗಿದರು ! ಧರ್ಮದ ಹೆಸರಿನಲ್ಲಿ ಅತ್ಯಂತ ತಮೋಗುಣವನ್ನು ಬೆಳೆಸಿಕೊಂಡು, ಪ್ರಾಪಂಚಿಕ ವ್ಯವಹಾರಗಳಿಗೆಲ್ಲ ವಿಮುಖರಾಗಿ, ತ್ಯಾಗ ಎಂದು ತಪ್ಪುಕರೆದ ಸೋಮಾರಿಗಳಾದರು. ದೇವರ ಸುದ್ದಿ ಮಾತಾಡಬೇಡಿ ಎಂದ ಬುದ್ಧನ ಹೆಸರಿನಲ್ಲಿ ದೇವರನ್ನು ಕಾಣಲು ಗಿರಿಗಹ್ವರಗಳನ್ನು ಸೇರಿ ಇಡೀ ದೇಶವೆಲ್ಲ ನಿರ್ವೀರ್ಯವಾಗಿ ಹೋಯಿತು. ಭಾರತೀಯ ಜನಾಂಗದ ಆಧ್ಯಾತ್ಮಿಕ, ಆರ್ಥಿಕ, ಸಾಮಾಜಿಕ, ನೈತಿಕ ಅಧೋಗತಿ ಪರಿಪೂರ್ಣವಾಗಿ ಹೋಯಿತು. ಅಂದು ನಮ್ಮ ಜನಾಂಗ ಇಳಿದ ಅಧೋಗತಿಯ ಪಾತಾಳದಿಂದ ಇನ್ನೂ ಮೇಲೆದ್ದು ಬರುವುದು ಸಾಧ್ಯವೇ ಆಗಿಲ್ಲ !! ಬೌದ್ಧಧರ್ಮದ ಈ ಮಾರಕ ಪರಿಣಾಮವನ್ನು ಮನಗಂಡೇ ಶ್ರೀ ಸ್ವಾಮಿ ವಿವೇಕಾನಂದರು ಒಮ್ಮೆ ಸಿಟ್ಟಿಗೆದ್ದು "Buddhism has brought ruin upon India"[1] (ಬೌದ್ಧಧರ್ಮವು ಭಾರತಕ್ಕೆ ವಿನಾಶವನ್ನು ತಂದಿತು) ಎಂದು ಗುಡುಗಿದರು.

---

[1] The Complete Works of Swami Vivekananda Vol : V pp: 317–318 (4th Ed.)

ಆತ್ಯಂತಿಕ ಅಹಿಂಸೆಯನ್ನು ಅವಲಂಬಿಸಿ ನಿರ್ವೀರ್ಯವಾಗಿ ಕ್ರಿಮಿಕೀಟಗಳಂತೆ ಬಿದ್ದಿದ್ದ ಆ ಪರಿಸ್ಥಿತಿಯಿಂದ ಮೇಲೇಳಲು ಪ್ರಯತ್ನಿಸಿದ ಭಾರತೀಯ ಜನಾಂಗ ಬುದ್ಧ ಹೇಳಿದುದನ್ನೆಲ್ಲ ಖಂಡಿಸಿ ಇಹವಲ್ಲದೆ ಮತ್ತೇನೂ ಇಲ್ಲ; ಕಣ್ಣಿಗೆ ಕಾಣುವ, ಕೈಗೆ ತಾಕುವ, ಇಂದ್ರಿಯಾನುಭವವೇ ಸತ್ಯ; ಧರ್ಮ, ದೇವರು, ನೀತಿ, ನಿಯಮ ಎಂಬುವೆಲ್ಲ ಬರೀ ಕೇವಲ ಭ್ರಮೆ....ಎಂದು ಜನರನ್ನು ಇಂದ್ರಿಯಲೋಲುಪ್ತರಾಗುವ ಇನ್ನೊಂದು ತುದಿಗೆ ಎಳೆದೊಯ್ದರು. ಅದೇ ಚಾರ್ವಾಕ ಪಂಥ. ಹಿಂದೆ ಬೌದ್ಧಧರ್ಮದಿಂದ ಒಂದು ಬಗೆಯ ಹಾನಿಯಾದರೆ, ಚಾರ್ವಾಕರಿಂದ ಇನ್ನೊಂದು ಬಗೆಯ ವಿನಾಶ ಬಂದೊದಗಿತು.

ಇಂದು ಭಾರತೀಯರ ಜೀವನ ಒಂದು ಕಡೆ ಅತ್ಯಂತಿಕ ಇಹಲೋಕ ತುಚ್ಛೀಕಾರ, ಇಹಜೀವನದ ವ್ಯರ್ಥತೆ ಮತ್ತು ಕ್ಷಣಿಕತೆಯ ತುದಿಗೂ, ಇನ್ನೊಂದು ಕಡೆ ಅತಿ ಪ್ರಾಪಂಚಿಕತೆ, ಪರಲೋಕತಿರಸ್ಕಾರ, ಕ್ಷಣಿಕಜೀವನದಲ್ಲಿ ಎಷ್ಟು ಸುಖವನ್ನು ಅನುಭವಿಸಿದರೆ ಅಷ್ಟೇ ದಕ್ಕಿದಂತೆ ಎಂಬ ಕೇವಲ ಇಂದ್ರಿಯ ಭೋಗದ ಇನ್ನೊಂದು ತುದಿಗೂ, ತೂಗುಯ್ಯಾಲೆಯಾಡುತ್ತಿರುವ ಆ ಆಂತರಿಕ, ಮಾನಸಿಕ ಕುರುಕ್ಷೇತ್ರ ನಡೆಯುತ್ತಿದ್ದಾಗ ಭಗವತ್ಪಾದ ಶ್ರೀ ಶಂಕರರು ಅವತರಿಸಿದರು. ಅವರು ಕೈಕೊಂಡ ಮಹಾಕಾರ್ಯ ಇಮ್ಮುಖವಾಗಿತ್ತು. ಒಂದುಕಡೆ ಬೌದ್ಧ ಧರ್ಮದ ಇಹಲೋಕ ತುಚ್ಛೀಕಾರ, ಅಹಿಂಸಾವಾದದ ನಿರ್ವೀರ್ಯತೆಯಿಂದ ಕ್ರಿಮಿಕೀಟಗಳಂತೆ ಬಿದ್ದು ಒದ್ದಾಡುತ್ತಿದ್ದ ಅಸಹಾಯಕತೆಯಿಂದ ಭಾರತೀಯರನ್ನು ಹಿಡಿದೆತ್ತುವ ಮಹಾ ಸಾಹಸವನ್ನು ಕೈಕೊಂಡರು. ಇನ್ನೊಂದು ಕಡೆ ಚಾರ್ವಾಕರ ಇಂದ್ರಿಯಲೋಲುಪ್ತತೆಯನ್ನು, ಪರಲೋಕ ತಿರಸ್ಕಾರವನ್ನು ಖಂಡಿಸಿ ನಮ್ಮ ಆರ್ಷೇಯ ವೇದೋಪನಿಷತ್ ಸತ್ಯವನ್ನು ಪುನಃ ಪ್ರತಿಷ್ಠಾಪಿಸುವ ಪ್ರಚಂಡ ಕಾರ್ಯವನ್ನು ನಿರ್ವಹಿಸಿದರು. ದೇವರನ್ನು ಅರಸುತ್ತ ಗಿರಿಗಹ್ವರಗಳನ್ನು ಸೇರಿ, ದೇಹದಂಡನೆಮಾಡಿಕೊಂಡು, ಅಹಿಂಸೆಯ ಹೆಸರಿನಲ್ಲಿ ನಿರ್ವೀರ್ಯರಾಗಿ ಬಿದ್ದವರಿಗೆ : "ದೇವರು ಇನ್ನೆಲ್ಲಿಯೋ ಹೊರಗಿರುವ ವಸ್ತುವಲ್ಲ. ನಿನ್ನಲ್ಲಿಯೇ ದೈವತ್ವ ಇದೆ. ನೀನೇ ದೇವರಾಗುವೆ. 'ಶಿವೋಹಂ' ಎಂಬುದೇ ಸತ್ಯ" ಎಂದು ಮನುಷ್ಯನ ಆತ್ಮಶಕ್ತಿಯನ್ನು, ಪ್ರಚಂಡ ಪ್ರತಿಭೆಯನ್ನು ಜಾಗ್ರತಗೊಳಿಸಿದರು. ಇತ್ತ : ಇಹವಲ್ಲದೆ ಮತ್ತೇನೂ ಸತ್ಯವಲ್ಲ. ಪರವೆಂಬುದೆಲ್ಲ ಭ್ರಮೆ; ಇದ್ದಷ್ಟು ಕಾಲ ಉಂಡವನೇ ಜಾಣ, ಎಂಬ ಚಾರ್ವಾಕರಿಗೆ: 'ಇದೆಲ್ಲ ಬರೀ ಮಾಯೆ. ನಿಜವೆಂದು ನಾವು ಬೆನ್ನು ಹತ್ತುವ ಈ ಜಗತ್ತು, ಈ ಸೃಷ್ಟಿ, ಈ ತೋರಿಕೆ ಎಲ್ಲದೂ ಬರೀ ಮಾಯೆ. ಈ ಕ್ಷಣಿಕ ಸುಖದ ಬೆನ್ನುಹತ್ತಿ ಬರಿದೆ ಕೆಡಬೇಡವೋ' ಎಂದು ಎಚ್ಚರಿಕೆ ಕೊಟ್ಟರು.

ಶ್ರೀ ಶಂಕರರು ಅಂದಿನ ನಮ್ಮ ಭಾರತೀಯರ ಜನಜೀವನದ ಪುನರ್ ಪ್ರತಿಷ್ಠಾಪನೆಗೆ ಬೇಕಾದ ಸಂದೇಶವನ್ನು ಚತುರ್ದಿಕ್ಕುಗಳೂ ಮೊಳಗುವಂತೆ ಗರ್ಜಿಸಿದರು. ಬೌದ್ಧರ ಅಹಿಂಸಾವಾದಕ್ಕೆ ಶ್ರೀ ಶಂಕರರಿಂದ ಬಿದ್ದ ಕೊಡಲಿಯ

ಆಘಾತ ಅಷ್ಟಿಷ್ಟಲ್ಲ ! ಬೌದ್ಧರ ಅಹಿಂಸಾವಾದದ ಬುಡಕ್ಕೆ ಕೊಡಲಿ ಹಾಕಿದರು ! ಹಾಗೆಯೇ ಚಾರ್ವಾಕರ ನಿರೀಶ್ವರೀ ವಾದವನ್ನೂ ಕುಟ್ಟಿಕುಟ್ಟಿ ಪುಡಿಮಾಡಿದರು. ಭಾರತೀಯ ಜನಜೀವನ ಶ್ರೀ ಶಂಕರರಿಂದ ಬಹುಮಟ್ಟಿಗೆ ಚೇತರಿಸಿಕೊಂಡಿತು. ಅವರ ಪ್ರಭಾವದಿಂದ ಮತ್ತೆ ನಮ್ಮ ಬಾಳು ಸಮತೋಲವನ್ನು ಗಳಿಸಿಕೊಂಡಿತು. ಶಂಕರರ ಪ್ರಭಾವ ಐದಾರು ಶತಮಾನಗಳವರೆಗೆ ಅಖಂಡ ಪ್ರಭಾವವನ್ನು ಬೀರಿ ಭಾರತೀಯರ ಬಾಳನ್ನು ರೂಪಿಸಿತು !

ಆದರೆ ಎಲ್ಲ ತತ್ತ್ವಗಳೂ ಕಾಲ ಉರುಳಿದಂತೆ, ಸಂಕುಚಿತ ದೃಷ್ಟಿಯ ಮತಾಂಧರ ಕೈಯಲ್ಲಿ ಸಿಕ್ಕು ನುಗ್ಗುನುಗ್ಗಾಗಿ ಹೋಗುವಂತೆ ಶ್ರೀ ಶಂಕರರ ಅದ್ವೈತ ಸಿದ್ಧಾಂತವೂ, ಮಾಯಾವಾದವೂ ಕುಲಕೆಟ್ಟುಹೋದುವು. ಈ ಜಗತ್ತು ಮಾಯೆ, 'ಬ್ರಹ್ಮಸತ್ಯ ಜಗನ್ಮಿಥ್ಯಾ' ಎಂಬ ತತ್ತ್ವ ಅತಿರೇಕಕ್ಕೆ ಹೋಗಿ ಇಹಲೋಕ ತುಚ್ಛೀಕಾರವು ಭಾರತೀಯರ ಬಾಳನ್ನು ಮತ್ತೆ ಕುರೂಪಗೊಳಿಸಿತು ! ಜೊತೆಗೆ ಶಿವನೇ ತಾನೆಂಬ ಮಾತನ್ನು ಹಿಡಿದು ಯಾವುದನ್ನೂ ಲಕ್ಷಿಸದೆ ಏನು ಬೇಕಾದರೂ ನಿರಾತಂಕವಾಗಿ ಮಾಡಲು ಸಿದ್ಧರಾದರು ! ಎಲ್ಲವನ್ನೂ ಮಾಡಿಸುವವನೂ ಕಾರಣ ಕರ್ತನೂ ಅವನೇ ಆದುದರಿಂದ ನೀತಿ ಅನೀತಿಯ ಗೊಡವೆ ಯಾರಿಗೂ ಬೇಕಾಗ ಲಿಲ್ಲ ! ಭಾರತೀಯರ ಬಾಳು ಮತ್ತೆ ಅಧೋಮುಖವಾಗಲೆಳಸಿತು. ತಪ್ಪು ತಿಳಿದು ಕೊಂಡು ಅಹಂಕಾರಕ್ಕೆ ಒಳಗಾದವರು ಕೆಲವರಾದರು. ಅಜ್ಞಾನಕ್ಕೆ ಬಲಿಯಾಗಿ ತಲೆ ದಂಡತೆತ್ತವರು ಮತ್ತೆ ಕೆಲವರು.

ಈ ಕಾಲಾವಧಿಯಲ್ಲೇ ಭಾರತದ ಮೇಲೆ ಪರದೇಶದ ದಾಳಿಯೂ ಮೊದ ಲಾದುವು. ಬೌದ್ಧರ ಅಹಿಂಸಾವಾದ, ಚಾರ್ವಾಕರ ಅತಿ ಪ್ರಾಪಂಚಿಕತೆ, ಶಂಕರರ ಮಾಯಾವಾದ—ಎಲ್ಲವೂ ಸೇರಿಕೊಂಡು ಭಾರತೀಯರನ್ನು ಕೇವಲ ನಿರ್ವೀರ್ಯ ರಾದ ಪಶುಗಳನ್ನಾಗಿ ಮಾಡಿದವು ! ದೇಶದ ಮೇಲೆ ಪರದೇಶದವರು, ಪರಮತೀಯರು ದಾಳಿಮಾಡಿ ಮನೆಯ ಬಾಗಿಲಿಗೆ ಬಂದರೂ, ನಮ್ಮ ಗುಡಿಗೋಪುರಗಳನ್ನು ಧ್ವಂಸ ಮಾಡಿದರೂ, ಸ್ತ್ರೀಪುತ್ರರನ್ನು ಸುಮ್ಮನೆ ಕೆಡಿಸಿದರೂ

" ಗುಡಿ ಹಾಳಾದರೆ ಏನಂತೆ ?
ವೈದಿಕ ಧರ್ಮಕೆ ಆದೆ ಚಿಂತೆ ?
ನಶ್ವರ ಕಾಂಚನ ಹೋದರೆ ಹೋಯಿತು !
ಮಂತ್ರದ ಸಾಮರ್ಥ್ಯವು ಸ್ಥಿರವಾಯಿತು ! "[1]

ಎಂದು 'ಸತ್ತರು, ಪಾಪ ಪುರೋಹಿತರೆಲ್ಲ ! ಮೈಲಿಗೆಯಾಯಿತು ದೇವರ ಮನೆಗೆ ; ಮುಸಲರ ಕೈಸೇರಿತು ಸಿರಿ ಕೊನೆಗೆ.'

---

[1] ಶ್ರೀ ಕುವೆಂಪು : 'ಕೋಗಿಲೆ ಮತ್ತು ಸೋವಿಯಟ್ ರಷ್ಯಾ' ಕವನ ಸಂಗ್ರಹದಲ್ಲಿ " ಧ್ರಾಂ ಧ್ರೀಂ ಧ್ರೂಂ " ಕವನ. ಪು : ೨೩. ಸಾಲು ೧೦೪ರಿಂದ ೧೧೧.

ಭಾರತೀಯ ಜನಜೀವನ, ದಾಳಿಯ ಮೇಲೆ ದಾಳಿ, ದಂಡಯಾತ್ರೆಯ ಮೇಲೆ ದಂಡಯಾತ್ರೆ, ಒಬ್ಬ ಪರಕೀಯರಾದ ಮೇಲೆ ಮತ್ತೊಬ್ಬ ಪರಕೀಯರ ಒಡೆತನವನ್ನು ಅನುಭವಿಸಬೇಕಾಯಿತು. ಈ ದೇಶವನ್ನು ಆಳಬೇಕೆಂದು ಇಚ್ಛಿಸಿದ ಯಾರ ಕತ್ತಿಗೂ ಇದಿರೇಯಿಲ್ಲದಂತಾಯಿತು. ಕ್ಷಾತ್ರ ತೇಜದ ರಜಪೂತರು, ವೀರಪರಾಕ್ರಮಿಗಳು, ಸ್ತ್ರೀಪುರುಷರು ಆಗಾಗ ಪರರ ದುರಾಕ್ರಮಣಕ್ಕೆ ಮಲೆತು ನಿಂತು ಹೋರಾಡಿದರೆಂಬುದೇನೋ ನಿಜ. ಆದರೆ ಅಂಥವರ ಸಂಖ್ಯೆ ಅತಿ ವಿರಳ. ಅಂಥವರನ್ನು ತುಳಿದುಹಾಕಲು ಕೊನೆಗೆ ನಮ್ಮವರೇ ಪರಕೀಯರಿಗೆ ನೆರವಾದರು! ಒಂದು ಸಾವಿರ ವರ್ಷಗಳಿಂದ ಅವನತಿಯ ಇಳಿಜಾರಿನ ದಾರಿಯಲ್ಲೇ ನಾವು ಮುಗ್ಗರಿಸುತ್ತ ನಡೆದೆವು.

ಆಗ ನಮ್ಮಲ್ಲಿ ಕ್ಷಾತ್ರತೇಜಸ್ಸೂ ಕ್ಷೀಣವಾಯಿತು. ದೈಹಿಕಬಲ ಕುಗ್ಗಿ ಹೋಯಿತು. ಆರ್ಥಿಕ ಸಂಪತ್ತು ಕೊಳ್ಳೆಯಾಗಿ ಹೋಯಿತು. ದುಶ್ಶಕ್ತಿಗೆ ಮಲೆತು ನಿಲ್ಲುವ ಇಚ್ಛಾಶಕ್ತಿಯೂ ಉಡುಗಿಹೋಯಿತು. ಬಾಳೆಲ್ಲ ಗೋಳಿನಮಯ ವಾಯಿತು. ಪರಮತದ್ವೇಷ; ಅಂತಃಕಲಹದ ದಾವಾನಲ; ಅನೈಕ್ಯಮತ್ಯದ ದುರ್ದೈವ ಮೈವೆತ್ತುವು. ಈ ಜನಾಂಗದ ಪುನರುದ್ಧಾರವಾಗಬೇಕಾದರೆ ಅವರ ನೈತಿಕ ಪುನರುದ್ಧಾರ, ಮಾನಸಿಕ ಪರಿವರ್ತನೆಯೊಂದೇ ಮಾರ್ಗವೆಂದು ವೈಷ್ಣವ ಭಕ್ತಿಪಂಥ ಉದಯವಾಯಿತು. ಮಾಧ್ವ, ರಾಮಾನುಜರು ಭಕ್ತಿಪಂಥವನ್ನು ಜನರಲ್ಲಿ ಬಿತ್ತಿ ಈ ದೇಶದ ಜನಜೀವನವನ್ನು ಉದ್ಧಾರದ ಪಥದಲ್ಲಿ ನಿಲ್ಲಿಸಿದರು. ಅದರಲ್ಲೂ ಕರ್ಣಾಟಕದಲ್ಲಿ ಬಸವಣ್ಣನವರ ಕಾಲದಲ್ಲಿ ಉಂಟಾದ ಧಾರ್ಮಿಕ, ಆರ್ಥಿಕ, ಸಾಮಾಜಿಕ ಕ್ರಾಂತಿ ಯಾವ ದೇಶದ ಇತಿಹಾಸದಲ್ಲೂ ಸುವರ್ಣಾಕ್ಷರ ಗಳಿಂದ ಬರೆದಿಡುವ ಮಹಾ ಅಧ್ಯಾಯ! ಕಾಯಕದ ಹಿರಿಮೆಯನ್ನು, ಭಕ್ತಿಯ ಮಹಿಮೆಯನ್ನು, ಇಹಪರಗಳು ಬೇರೆಯಲ್ಲ ಎಂಬ ಉಪನಿಷತ್ ಸತ್ಯವನ್ನು, ಸ್ತ್ರೀಪುರುಷರ ಸಮಾನತೆಯನ್ನು, ಸಕಲ ವರ್ಣ, ಆಶ್ರಮಗಳು ಒಂದೇ ಎಂಬ ಉಚ್ಚ ನೀತಿಯನ್ನು ಮನೆಮನೆಗೂ ಹಬ್ಬಿಸಿದ ಮಹಾಕಾರ್ಯ ಬಸವಾದಿ ಪ್ರಮುಥರದು. ಆದರೆ ಅವರ ಕಾರ್ಯಕ್ಷೇತ್ರ ಬಹು ಸಣ್ಣದಿತ್ತು.

ಬೌದ್ಧಧರ್ಮವು ಬೋಧಿಸಿದ ಆ 'ಅಹಿಂಸಾ ಪರಮೋ ಧರ್ಮಃ' ತತ್ತ್ವದ ದುಷ್ಪರಿಣಾಮದಿಂದ ಭಾರತೀಯ ಜನಜೀವನ ಚೇತರಿಸಿಕೊಳ್ಳಲಿಲ್ಲ. ಕೊನೆಗೆ ಬ್ರಿಟಿಷರ ಆಳ್ವಿಕೆಯ ಪರದಾಸ್ಯಶೃಂಖಲೆ ನಮ್ಮನ್ನು ಬಲವಾಗಿ ಬಿಗಿಯತೊಡಗಿದವು. ಅದರ ದುರ್ದಮ್ಯ ಪರಿಣಾಮ ಯಾವ ಮಟ್ಟಕ್ಕೆ ಬಂದಿತು ಎಂದರೆ, ಭಾರತೀಯ ಧರ್ಮ, ಭಾರತೀಯ ಸಂಸ್ಕೃತಿ, ಭಾರತೀಯ ಕಥೆ, ಭಾರತೀಯ ಸಂಗೀತ, ಸಾಹಿತ್ಯ . . . . . ಎಲ್ಲವೂ ತುಚ್ಛೀಕರಿಸಲ್ಪಟ್ಟು ಈ ಜನಾಂಗ ರಾಜಕೀಯ ದಾಸ್ಯಕ್ಕಿಂತಲೂ ಘೋರತರವಾದ ಮಾನಸಿಕ ದಾಸ್ಯಕೂಪಕ್ಕೆ ನೆಗೆಯಿತು!! ಇನ್ನು ಇದರ ಅಧೋಗತಿ ಪರಿಪೂರ್ಣವಾಯಿತೆಂದು ನಿರಾಶೆ ತಳೆದಾಗ ಶ್ರೀಮತ್

ಶ್ರೀ ರಾಮಕೃಷ್ಣ ಪರಮಹಂಸರು ಅವತರಿಸಿದರು. ಅವರ ಲೀಲಾಕಾರ್ಯದಲ್ಲಿ ನೆರವಾಗಲು ಶ್ರೀ ವಿವೇಕಾನಂದರೂ ಇಳೆಗೆ ಇಳಿದು ಬಂದರು! ಭಾರತೀಯರ ಪುನರುತ್ಥಾನದ ಕಾರ್ಯ ಶ್ರೀ ರಾಮಕೃಷ್ಣ-ವಿವೇಕಾನಂದರಿಂದ ಪ್ರಾರಂಭ ವಾಗಿ, ಶ್ರೀ ಅರವಿಂದ ಮಹರ್ಷಿಗಳಿಂದ ವಿಕಾಸಗೊಂಡು ನಿಧಾನವಾಗಿ ಮುಂದು ವರಿಯುತ್ತಿದೆ.

ಆದರೆ ಅಹಿಂಸಾವಾದದ ಅಪಾಯದ ಭೀತಿ ನಮ್ಮ ಜನಾಂಗಕ್ಕೆ ಇನ್ನೂ ತಪ್ಪಿಲ್ಲದುದು ಶುಭಚಿಹ್ನೆಯಲ್ಲ. ಯಾರ ತಪಃಪ್ರಭಾವದಿಂದ, ಪ್ರಚಂಡ ತೇಜಸ್ಸಿನಿಂದ, ರಣಡಿಂಡಿಮ ಸದೃಶ ವೀರವಾಣಿಯಿಂದ ಈ ದೇಶದ ಉದ್ಧಾರ ಪ್ರಾರಂಭ ವಾಯಿತೋ, ಅಂಥವರ ಶತಮಾನೋತ್ಸವದ ಈ ಕಾಲದಲ್ಲೂ 'ಅಹಿಂಸಾ ಪರಮೋ ಧರ್ಮಃ' ಎಂಬ ರೋದನದ ದನಿಯನ್ನೇ ಎತ್ತುತ್ತಿದ್ದಾರೆ. ಈ ಸಂದರ್ಭ ದಲ್ಲಿ ಶ್ರೀ ಸ್ವಾಮಿ ವಿವೇಕಾನಂದರಿತ್ತ ಕ್ಷಾತ್ರಸಂದೇಶದ ಕಡೆ ಗಮನಕೊಡ ಬೇಕಾಗಿದೆ. ಉಪವಾಸ ಬಿದ್ದಿರುವವರಿಗೆ ಹೆಚ್ಚು ತಿನ್ನಬೇಡಿರೆಂದು ಅಜೀರ್ಣದ ಅಪಾಯವನ್ನು ಬೋಧಿಸುವುದು ಜಾಣರು ಮಾಡುವ ಕೆಲಸವೆ? ಶ್ರೀ ವಿವೇಕಾ ನಂದರು ಗರ್ಜಿಸಿದರು: 'ನಮಗೀಗ ಬೇಕಾದುದು ರಜಸ್ಸು! ರಜಸ್ಸು! ಅಪರಿಮಿತ ರಜಸ್ಸು!! ತ್ಯಾಗವೆಂದು ತಪ್ಪು ತಿಳಿದುಕೊಂಡ ಸೋಮಾರಿತನಕ್ಕೆ ಬಲಿಯಾದ ನಮಗೆ ಸಾತ್ವಿಕತೆಯನ್ನು ಬೋಧಿಸುವುದೇ? . . . . . ನೂರಾರು ವರ್ಷಗಳಿಂದ ನಾವು ರೋದಿಸುತ್ತಲೇ ಇದ್ದೇವೆ. ಅಂಥವರಿಗೆ ಮತ್ತೆ ದಾಸ್ಯಭಾವದ ಭಕ್ತಿಯನ್ನು ಬೋಧಿಸುವುದೇ? . . . . . ನಮಗೀಗ ಬೇಕಾದುದು ಕಬ್ಬಿಣದ ಸ್ನಾಯು. ಉಕ್ಕಿನ ನರಗಳು . . . . . ದುರ್ಬಲರಿಗೆ ಯಾವುದೂ ಲಭ್ಯವಲ್ಲ. ಆದಕಾರಣ ಏಳು! ಎದ್ದೇಳು! ಗುರಿ ಸೇರುವವರೆಗೆ ನಿಲ್ಲದಿರು ಸಾರು!! . . . . ."[1] ಎಂದು ರಣಡಿಂಡಿಮದಂತೆ ಮೊಳಗಿದರು.

"ಒಂದು ದಿನ ಗೋರಕ್ಷಣೆಯ ಸಭೆಯ ಪ್ರಚಾರಕರೊಬ್ಬರು ಸ್ವಾಮಿಗಳ ಬಳಿಗೆ ಬಂದರು. ಸ್ವಾಮಿಗಳು: 'ನಿಮ್ಮ ಸಂಘದ ಉದ್ದೇಶವೇನು?' ಎಂದು ಕೇಳಿದರು.

ಪ್ರಚಾರಕನು: "ಮುದಿಯಾಗಿ ರೋಗ ಹಿಡಿದ ಗೋಮಾತೆಗಳನ್ನು

---

[1] "Rajas is badly needed just now! More than ninety per cent of those whom you now take to be men with sattva quality are only steeped in deepest Tamas. Enough if you had one-sixteenth of them to be really sattvika! What we want is immense awakening of Rajasika energy, for the whole country is wrapped in the shroud of Tamas . . . ."

—The Complete works Vol. V. p. : 319 (4th ed.)

ಕಟುಕರ ಕೈಯಿಂದ ತಪ್ಪಿಸಿ ಪಿಂಜರಾಪೋಲುಗಳಿಗೆ ಕೊಂಡೊಯ್ದು ಸಲಹು ವೆನು'' ಎಂದನು.

'ಮಧ್ಯಪ್ರಾಂತದಲ್ಲಿ ಭಯಂಕರ ಕ್ಷಾಮಕಾಲವಾಗಿದೆಯಷ್ಟೆ? ೯,೦೦,೦೦೦ ಜನರು ಬರದಿಂದ ಸತ್ತಿರುವರು. ಅಲ್ಲಿ ಜನರಿಗಾಗಿ ನೀವೇನು ಮಾಡಿದ್ದೀರಿ?" ಎಂದು ಸ್ವಾಮಿಗಳು ಕೇಳಿದರು.

"ನಾವು ಕ್ಷಾಮಗೀಮದ ತಂಟೆಗೆ ಹೋಗುವುದೇ ಇಲ್ಲ. ಗೋರಕ್ಷಣೆಯೊಂದೇ ನಮ್ಮ ಕಾರ್ಯ."

"ಲಕ್ಷ ಲಕ್ಷ ಜನರು ಹೊಟ್ಟೆಗಿಲ್ಲದೆ ನರಳಿ ಸಾಯುತ್ತಿರುವಾಗ ಅವರಿಗೆ ಒಂದು ತುತ್ತು ಕೂಳನ್ನಾದರೂ ನೀಡಬೇಕೆಂದು ನಿಮಗೆ ಮನಸ್ಸಾಗಲಿಲ್ಲವೆ?"

"ಅದಕ್ಕೆ ನಾವೇನು ಮಾಡುವುದು? ಅವರ ಕರ್ಮ ಬರಗಾಲ ಬಂತು."

ಈ ಮಾತುಗಳನ್ನು ಕೇಳಿ ಸ್ವಾಮಿಗಳು ಬೆಂಕಿಬೆಂಕಿಯಾದರು. ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು: "ಏನಯ್ಯಾ, ಹಾಗೆ ಹೇಳಲು ನಿಮಗೆ ನಾಚಿಕೆಯಾಗುವುದಿಲ್ಲವೆ? ನೀವೇಕೆ ಗೋವುಗಳನ್ನು ಸಲಹಬೇಕು? ಕಟುಕರ ಕೈಯಿಂದ ಕಡಿಸಿಕೊಳ್ಳುವುದೂ ಅವುಗಳ ಕರ್ಮಫಲ ಎಂದು ಸುಮ್ಮನಿದ್ದುಬಿಡಬಾರದೆ?"

ಪ್ರಚಾರಕನು ಕಂಗೆಟ್ಟು: "ನಮ್ಮ ಶಾಸ್ತ್ರಗಳು ಗೋವನ್ನು ಮಾತೆಯೆಂದು ಹೇಳಿವೆಯಲ್ಲಾ!" ಎಂದನು.

ಸ್ವಾಮಿಗಳು ಗಹಗಹಿಸಿ ನಕ್ಕು: "ಹೌದು ಹೌದು! ಪಶುವೇ ನಿಮ್ಮ ತಾಯಿ. ಹಾಗಲ್ಲದೆ ಹೋದರೆ ನಿಮ್ಮಂತಹ ಪ್ರತಿಭಾಶಾಲಿಗಳನ್ನು ಮತ್ತಾರು ಹೆತ್ತಾರು?" ಎಂದರು.[1]

ಇನ್ನೊಮ್ಮೆ ಅವರ ಶಿಷ್ಯರೊಬ್ಬರು: "ಮೀನು ಮಾಂಸವನ್ನು ತಿನ್ನುವುದು ಅಗತ್ಯವೇ? ಯುಕ್ತವೆ?" ಎಂದು ಕೇಳಿದರು.

ಸ್ವಾಮಿಜಿ: ತಿನ್ನು ವತ್ಸಾ! ತಿನ್ನು. ಅದರಿಂದ ಹಾಗೆ ಏನಾದರೂ ಆದರೆ ಅದನ್ನೆಲ್ಲ ನಾನು ನೋಡಿಕೊಳ್ಳುವೆ.

ಶಿಷ್ಯ: ಹಾಗಾದರೆ 'ಅಹಿಂಸಾ ಪರಮೋ ಧರ್ಮಃ' ಎಂದು ಬೌದ್ಧ ಧರ್ಮವೂ ವೈಷ್ಣವ ಧರ್ಮವೂ ಏಕೆ ಬೋಧಿಸುತ್ತವೆ?

ಸ್ವಾಮಿಜಿ: ಬೌದ್ಧ ಧರ್ಮದ ಅವನತಿ ಕಾಲದಲ್ಲಿ ಹಿಂದೂಧರ್ಮ ಅದರ ಕೆಲವು ನೀತಿತತ್ವಗಳನ್ನು ಅಳವಡಿಸಿಕೊಂಡಿತು. ಅದೇನೊ ಒಳ್ಳೆಯ ತತ್ವವೇ. ಆದರೆ ಅದನ್ನು ಸಾಮಾನ್ಯ ಜನರ ವಿವಿಧ ಶಕ್ತಿಸಾಮರ್ಥ್ಯ ಯೋಗ್ಯತೆಯನ್ನು ಗಮನಿಸದೆ ಎಲ್ಲರ ಮೇಲೂ ಹೇರಲು ಯತ್ನಿಸುವುದರಿಂದ ಬೌದ್ಧ ಧರ್ಮ ಭಾರತಕ್ಕೆ ಮಹಾವಿಪತ್ತನ್ನುಂಟುಮಾಡಿದೆ. ಇರುವೆಗಳಿಗೆ ಸಕ್ಕರೆಯನ್ನು ಹಾಕಿ ಸಲಹುವ

[1] ಸ್ವಾಮಿ ವಿವೇಕಾನಂದ—ಶ್ರೀ ಕುವೆಂಪು. ಪು, ೨೧೨-೨೧೪ (೧೯೩೬ರ ಮುದ್ರಣ)

ಜನರೇ ತಮ್ಮ ಸೋದರರನ್ನು ಕೊಲೆಮಾಡುವಂಥ ಬಕಸಂನ್ಯಾಸಿಗಳನ್ನು ಭಾರತ ದಲ್ಲಿ ನಾನು ನೋಡಿದ್ದೇನೆ.

ಶಿಷ್ಯ : ವೇದಗಳು : " ಮಾ ಹಿಂಸ್ಯಾತ್ ಸರ್ವಭೂತಾನಿ " ಎಂದು ವಿಧಿಸಿವೆ ಯಲ್ಲವೆ ?

ಸ್ವಾಮಿಜಿ : ನಿಜ. ಆದರೆ ಅವುಗಳನ್ನು ಆಚರಿಸುವಾಗ ವಿವಿಧ ಜನರ ಶಕ್ತಿ, ಸಾಮರ್ಥ್ಯ, ಒಲವು, ಯೋಗ್ಯತೆಯನ್ನವಲಂಬಿಸಬೇಕು . . . . . ಆದಕಾರಣ ಬೇಕಾದಷ್ಟು ಮೀನು ಮಾಂಸವನ್ನು ತಿನ್ನು. ಕೇವಲ ಶಾಕಾಹಾರವನ್ನು ತಿಂದು ರೋಗದಿಂದ ನರಳುವ ಬಾಬಾಜಿಗಳಿಂದ ಈ ದೇಶ ತುಂಬಿಹೋಗಿದೆ . . . . "[1]

ಅರವತ್ತೈದು ವರ್ಷಗಳ ಕೆಳಗೆ ತಮ್ಮ ಶಿಷ್ಯರಿಗೆ ಹೇಳಿದ ಈ ಮಾತುಗಳು ಇಂದೇ ಈ ನಾಡಿನ ಜನತೆಗೆ ಹೇಳಿದಷ್ಟು ಸಮರ್ಪಕವಾಗಿ ತೋರುತ್ತದೆ. ನಮಗೀಗ ಬೇಕಾದುದು ಅಹಿಂಸಾವಾದದ ಹೆಣ್ಣು ಶೋಬಾನೆಯಲ್ಲ ! ಗಂಡುಗಲಿಗಳ ವೀರಗೀತೆ ಬೇಕಾಗಿದೆ ! ಕತ್ತಿಯನ್ನು ಕಂಡರೆ ಗಡಗಡ ನಡುಗುವ ಉತ್ತರ ಕುಮಾರರು 'ಅಹಿಂಸೆ'ಯನ್ನಲ್ಲದೆ ಮತ್ತೇನು ಮಾಡಿಯಾರು ? ಸೂಳೆ ಮುಪ್ಪಾದಮೇಲೆ ಜೋಗಿತಿ ಆಗಿಯೇ ಆಗುವಳು ! ಕಣ್ಣಿದ್ದ ಭಂಡನಿಗಾದರೆ ಪರಸ್ತ್ರೀಯನ್ನು ನೋಡ ಬೇಡ ಎಂದು ಬೋಧಿಸುವುದರಲ್ಲಿ ಕಿಂಚಿತ್ತಾದರೂ ಅರ್ಥವಿದೆ. ಹುಟ್ಟುಕುರುಡನ ಮುಂದೆ ಈ ತತ್ತ್ವ ಹೇಳುವುದು ಬುದ್ಧಿವಂತರ ಲಕ್ಷಣವೆ ? ಹಾಗೆಯೇ, ಈಗ ಲಾದರೂ, ನಿರ್ವಿಣ್ಣರಾಗಿ ಬಿದ್ದಿರುವ ಈ ಜನರಿಗೆ 'ಅಹಿಂಸಾ ಪರಮೋ ಧರ್ಮಃ' ಎಂದು ಬೋಧಿಸುವುದು ಕೇವಲ ಹಾಸ್ಯಾಸ್ಪದ !

ಈ ಪ್ರಬಂಧವನ್ನು ಶ್ರೀ ರಾಮಕೃಷ್ಣರ ದೃಷ್ಟಾಂತ ಕತೆಯಿಂದ ಮುಗಿಸೋಣ:

"ಒಬ್ಬಾತ ತನ್ನ ಮನೆಯಲ್ಲಿ ದುರ್ಗಾಪೂಜೆಯನ್ನು ತುಂಬ ವಿಜೃಂಭಣೆ ಯಿಂದ ಮಾಡುತ್ತಿದ್ದ. ಬೆಳಗಿನಿಂದ ಬೈಗಿನವರೆಗೆ ಆಡುಗಳ ಬಲಿದಾನ ನಡೆಯು ತ್ತಿತ್ತು. ಆದರೆ ಕೆಲವು ವರ್ಷಗಳ ತರುವಾಯ ಆಡಿನ ಬಲಿ ಅಷ್ಟೊಂದು ಭರ್ಜರಿ ನಡೆಯುತ್ತಿರಲಿಲ್ಲ. ಆಗ ಯಾರೋ ಒಬ್ಬರು : 'ಸ್ವಾಮಿ, ನಿಮ್ಮ ಮನೆಯಲ್ಲಿ ನಡೆಯುತ್ತಿದ್ದ ದುರ್ಗಾಪೂಜೆ ಇತ್ತೀಚಿಗೆ ಬಹು ಸಪ್ಪೆಯಾಗಿದೆಯಲ್ಲ ? " ಎಂದು ಕೇಳಿದ. ಅದಕ್ಕೆ ಆತ: 'ಕಾಣುವುದಿಲ್ಲವೆ ? ಈಗ ನನ್ನ ಹಲ್ಲುಗಳೆಲ್ಲ ಉದುರಿಹೋಗಿದೆ' ಎಂದು ಉತ್ತರಕೊಟ್ಟನಂತೆ !! "[1]

—ಕೋ. ಚನ್ನಬಸಪ್ಪ

---

[1] The complete works of Swami Vivekananda, Vol. V, pp. 317-19 4th ed.

[1] ಶ್ರೀ ರಾಮಕೃಷ್ಣರ ದೃಷ್ಟಾಂತ ಕತೆಗಳು–ಶ್ರೀ ಕೋ. ಚನ್ನಬಸಪ್ಪ ಪು. ೬ (ದ್ವಿತೀಯ ಮುದ್ರಣ) ಪ್ರ : ಸಮಾಜ ಪುಸ್ತಕಾಲಯ, ಧಾರವಾಡ.

ಶ್ರೀ ವಿವೇಕಾನಂದ

ಓ ಬಂದ
ಶ್ರೀ ಗುರು ವಿವೇಕಾನಂದ
ಆ ಧ್ರುವಮಂಡಲದಿಂದ!

ಮೊರೆಯುವ ಕಡಲಿಗೆ ಹಾರಿ ಧುಮುಕಿದ,
ತೆರೆಗಳ ಸೀಳಿದ, ಈಜಿದ ನುಗ್ಗಿದ;
ಘಟ್ಟ ಬಂಡೆಯಲಿ ಬೇರೂರಿದ, ಮುಗಿಲೆತ್ತರ ನೆಗೆದ,
ಬೆಳಕಿನ ಗೋಪುರವಾದ!

ಓ ಬಂದ
ಶ್ರೀ ಗುರು ವಿವೇಕಾನಂದ
ಆ ಧ್ರುವಮಂಡಲದಿಂದ!

ದಕ್ಷಿಣೇಶ್ವರದ ವಿದ್ಯುತ್ ಕೇಂದ್ರದ ಕೋಶಾಗಾರ!
ಪೂರ್ವ–ಪಶ್ಚಿಮಕೆ ತಂತಿಯ ಹಾಯಿಸಿ
ಕೊಟ್ಟನು ಬೆಳಕಿನ ಆಹಾರ!
ಕೊಲಂಬೋದಿಂದಾಲ್ಮೋರದ ತನಕವು
ಇವನದೆ ಮಿಂಚಿನ ತೇರು!

ಇವನಡಿಗಳ ನುಡಿಗಳ ಸ್ಪರ್ಶಕೆ ಝುಗ್ಗನೆ
ಹತ್ತದೆ ಇದ್ದವನಾರು!

ಓ ಬಂದ
ಶ್ರೀ ಗುರು ವಿವೇಕಾನಂದ
ಆ ಧ್ರುವಮಂಡಲದಿಂದ!

ವಜ್ರದ ಮೈ, ಉಕ್ಕಿನ ನರ, ಕುಡಿಮಿಂಚಿನ ಕಣ್ಣು;
ಗುಡುಗಿನ ದನಿ, ಮುಂಗಾರಿನ ವಾಗ್ ವೈಖರಿ, ಹೊನಲಿನ ನಡೆ,
ಎದೆ ಬೆಳುದಿಂಗಳ ಹಣ್ಣು!

ಕವಿ, ಋಷಿ, ಯೋಗೀ, ಸಂತ
ಲೋಕಾದ್ಯಂತ ನಡೆವ ವಸಂತ!

—ಜಿ. ಎಸ್. ಶಿವರುದ್ರಪ್ಪ

ಸಾಹಿತಿ, ಕಲಾವಿಮರ್ಶಕ ವಿವೇಕಾನಂದರು

> " His works are great music, phrases in the style of Beethoven, stirring rhythms like the march of Handel choruses. I cannot touch these sayings of his . . . . without receiving a thrill through my body."
>
> —ROMAIN ROLLAND

ಸ್ವಾಮಿ ವಿವೇಕಾನಂದರು ಬರಿಯ ಗೊಡ್ಡು ಸನ್ಯಾಸಿಯಲ್ಲ; ಅವರು ಪ್ರಧಾನವಾಗಿ ಧಾರ್ಮಿಕ ವ್ಯಕ್ತಿಯಾದರೂ, ಇನ್ನೂ ಅನೇಕ ಮುಖಗಳು ಅವರ ವ್ಯಕ್ತಿತ್ವಕ್ಕುಂಟು. ರಾಷ್ಟ್ರಪ್ರೇಮಿಯಾಗಿ, ಸಮಾಜೋದ್ಧಾರಕರಾಗಿ, ದಾರ್ಶನಿಕ ಇತಿಹಾಸಜ್ಞರಾಗಿ, ಕವಿ ಕಲಾವಿದ ವಿಮರ್ಶಕರಾಗಿ ಅವರು ಹಲವಾರು ಬಣ್ಣದ ಎಳೆಗಳನ್ನು ತಮ್ಮ ಧವಳವ್ಯಕ್ತಿತ್ವದಲ್ಲಿ ಸಮನ್ವಯಗೊಳಿಸಿಕೊಂಡಿರುವುದನ್ನು ಕಾಣುತ್ತೇವೆ. ಅವರು ವೈಯಕ್ತಿಕ ಸಿದ್ಧಿಸಾಕ್ಷಾತ್ಕಾರಗಳಷ್ಟರಿಂದಲೆ ಸಂತೃಪ್ತರಾಗಿ ಕೂರದೆ, ಭರತಖಂಡದ ಪುನರುದ್ಧಾರಕ್ಕಾಗಿ ಮತ್ತು ತನ್ಮೂಲಕ ಲೋಕದ ಕಲ್ಯಾಣಕ್ಕಾಗಿ ಟೊಂಕಕಟ್ಟಿ ನಿಂತರು; ನಿರ್ವಿಕಲ್ಪ ಸಮಾಧಿಯಿಂದ ಹೊರಬಿದ್ದು ಕರ್ಮರಂಗಕ್ಕೆ ಧುಮುಕಿ ಜಂಝಾವಾತವಾಗಿ ಬೀಸಿದರು, ಸಾಗರವಾಗಿ ಭೋರ್ಗರೆದರು. ಅವರು ಸಾಧಿಸಿದ ಮಹತ್ಕಾರ್ಯ ಎರಡು ಬಗೆಯದು: ಮೊದಲನೆಯದಾಗಿ ಹಿಂದೂಧರ್ಮದ ಎತ್ತರ ಬಿತ್ತರಗಳನ್ನು ತಾರಸ್ವರದಲ್ಲಿ ಪ್ರಪಂಚಕ್ಕೆ ಸಾರಿ, ಭಾರತ ದರ್ಶನದಿಂದ ಜಗದ್ರಂಗ ಪುಳಕಗೊಳ್ಳುವಂತೆ ಮಾಡಿದರು. ಎರಡನೆಯದಾಗಿ, ಯುಗಯುಗಗಳಿಂದ ಹಲವಾರು ಅನಿಷ್ಟಗಳಿಗೆ ಬಲಿಯಾಗಿರುವ ಈ ಸನಾತನ ಧರ್ಮದ ಶುದ್ಧೀಕರಣವನ್ನು ಅವರು ಕೈಗೊಂಡರು; ಭಾರತೀಯ ಸಂಸ್ಕೃತಿಯ ಮಹಾವೃಕ್ಷಕ್ಕೆ ಅಂಟಿರುವ ಬಂದಳಿಕೆಗಳನ್ನು ನಿರ್ಮೂಲ ಮಾಡುವ ಸಾಹಸದಲ್ಲಿ ಉದ್ಯುಕ್ತರಾದರು; ಭಾರತೀಯರನ್ನು ಬಡಿದೆಬ್ಬಿಸಿ, ಅವರ ಆಚಾರ ವಿಚಾರಗಳನ್ನು ವ್ಯಾಪಿಸಿರುವ ದೋಷ ದೌರ್ಬಲ್ಯಗಳಿಗೆ ಕನ್ನಡಿ ಹಿಡಿದರು; ಭರತಖಂಡದ ನಾನಾ ಮುಖವಾದ ಸಮಸ್ಯೆಗಳನ್ನೆಲ್ಲ ವಿಶ್ಲೇಷಿಸಿ ಪರಿಹಾರವನ್ನು ಸೂಚಿಸಿದರು; ಈ ದೇಶ ತನ್ನ ಗತಕಾಲದ ತೇಜಸ್ಸನ್ನು ಕಳೆದುಕೊಳ್ಳದೆ, ನವಯುಗಕ್ಕೆ ಹೊಂದಿಕೊಂಡು ಬದುಕಬೇಕಾದುದು ಎಷ್ಟು ಅವಶ್ಯವೆಂಬುದನ್ನು ಒತ್ತಿ ಹೇಳಿದರು. ಆಧ್ಯಾತ್ಮಿಕ ಶ್ರೇಯಸ್ಸು ಭರತಭೂಮಿಗೆ ಎಷ್ಟು ಮುಖ್ಯವೊ ಲೌಕಿಕ ಪ್ರೇಯಸ್ಸು ಅಷ್ಟೆ ಮುಖ್ಯವೆಂಬುದು ವಿವೇಕಾನಂದರ ಸಂದೇಶ; ಇಲ್ಲಿಯ ದಾರುಣ ದಾರಿದ್ರ್ಯವನ್ನು ಕಂಡು ಸಂತಪ್ತಹೃದಯರಾಗಿ, 'ಮೊದಲು ಅನ್ನ, ಅನಂತರ ಆಧ್ಯಾತ್ಮ' ಎಂಬ ಸೂತ್ರಕ್ಕೆ ಅವರು ಪ್ರಾಶಸ್ತ್ಯಕೊಟ್ಟರು; ದೀನದಲಿತರ ಸೇವೆಗೆ ಆದ್ಯತೆಯನ್ನಿತ್ತು,

'ದರಿದ್ರನಾರಾಯಣ' ಎಂಬ ಹೊಸ ದೇವತೆಯನ್ನು ಕಂಡುಹಿಡಿದರು. ಒಟ್ಟಿನಲ್ಲಿ, ನವಭಾರತದ ನಿರ್ಮಾಪಕರಲ್ಲೊಬ್ಬರೆಂದು ವಿವೇಕಾನಂದರನ್ನು ಧಾರಾಳವಾಗಿ ವರ್ಣಿಸಬಹುದು.

ವಿವೇಕಾನಂದರನ್ನು ಸಾಹಿತಿ ಎಂದು ಕರೆಯುವ ಸಾಹಸ ಮಾಡಬಹುದೆ? ಎಂಬುದು ಪ್ರಕೃತ ವಿಚಾರಮಾಡಬೇಕಾದ ಪ್ರಶ್ನೆ. ಈ ಪ್ರಶ್ನೆಗೆ 'ಹೌದು', 'ಅಲ್ಲ' ಎಂಬ ಎರಡು ಉತ್ತರಗಳೂ ಸಾಧ್ಯ, ಬೇರೆ ಬೇರೆ ಅರ್ಥಗಳಲ್ಲಿ. ನಿಯತವಾಗಿ ಸಾಹಿತ್ಯದ ಜಾತಿಗೆ ಸೇರಬಹುದಾದ ಕೃತಿಗಳನ್ನೇನೂ ಅವರು ರಚಿಸಿಲ್ಲ–ಆದ್ದರಿಂದ ಅವರು ಸಾಹಿತಿಗಳಲ್ಲ. ಆದರೆ ಒಂದು ದೃಷ್ಟಿಯಲ್ಲಿ, ಅವರು ಆಡಿದ್ದೆಲ್ಲ ಸಾಹಿತ್ಯ, ಬರೆದದ್ದೆಲ್ಲ ಕವಿತೆ; ಆದ್ದರಿಂದ ಅವರು ಸಾಹಿತಿಗಳು, ಕವಿಗಳು. ಅವರ ಜೀವನವೇ ಒಂದು ಮಹಾಕಾವ್ಯ. ಏಕೆಂದರೆ, ಗಾಂಧೀಜಿಯವರೆನ್ನುವಂತೆ, "ಎಲ್ಲ ಕಲೆಗಳ ಮೊತ್ತಕ್ಕಿಂತ ಬದುಕು ಉನ್ನತವಾಗಬೇಕು. ನನ್ನ ಪಾಲಿಗೆ, ಯಾರು ಅತ್ಯುತ್ತಮವಾದ ಬದುಕನ್ನು ಬದುಕುತ್ತಾನೊ ಅವನೆ ಅತ್ಯಂತ ದೊಡ್ಡ ಕಲಾವಿದ." ವಿವೇಕಾನಂದರು ಅಂತಹ ಕಲಾವಿದರು. 'ಋಷಿಯಲ್ಲದವನು ಕವಿಯಾಗಲಾರ', ಎಂಬ ಸೂಕ್ತಿಯನ್ನು ಕೇಳಿದ್ದೇವಷ್ಟೆ. ಎಂದಮೇಲೆ, ಋಷಿಯಾದವನು ಆಡುವ ಮಾತೆಲ್ಲ ಕಾವ್ಯವಾಗಬೇಕಾದುದು ಸಹಜ. ಈ ಅರ್ಥದಲ್ಲಿ, ದ್ರಷ್ಟಾರರಾದ ಸ್ವಾಮಿ ವಿವೇಕಾನಂದರ ವಾಣಿ ಕವಿಸಹಜವಾದದ್ದು, ಸಾಹಿತ್ಯಗುಣದಿಂದ ಕೂಡಿದ್ದು ಎನ್ನಲು ಅಡ್ಡಿಯಿಲ್ಲ. ಅವರ ಭಾಷಣಗಳನ್ನೂ ಬರಹಗಳನ್ನೂ ಈ ನಿಟ್ಟಿನಲ್ಲಿ ಅಭ್ಯಾಸಮಾಡಬಹುದು.

ವಿವೇಕಾನಂದರ ಭಾಷಣಗಳು ಮತ್ತು ಲೇಖನಗಳೆಂದರೆ ಒಂದು ಪುಟ್ಟ ವಿಶ್ವಕೋಶವಿದ್ದಂತೆ—ಅವುಗಳಲ್ಲಿ ಪ್ರವೇಶಿಸದಿರುವ ವಿಷಯವೆ ಇಲ್ಲ. ಅಧ್ಯಾತ್ಮ, ಧರ್ಮ, ಇತಿಹಾಸ, ಪುರಾಣ, ಸಾಹಿತ್ಯ, ಕಲೆ, ವಿಜ್ಞಾನ—ಹೀಗೆ ಹಲವಾರು ಕ್ಷೇತ್ರಗಳು ಅವರ ದೃಷ್ಟಿಯ ವ್ಯಾಪ್ತಿಯೊಳಗೆ ಬರುತ್ತವೆ. ಭರತಖಂಡದ ಸಾರಸರ್ವಸ್ವವೂ ಅವರ ಕೃತಿಗಳಲ್ಲಿ ಅಡಕವಾಗಿದೆ. ಟಾಗೂರ್ ನುಡಿದಿರುವಂತೆ, "ಭಾರತವನ್ನು ತಿಳಿಯಬೇಕೆಂದಿದ್ದರೆ, ವಿವೇಕಾನಂದರನ್ನು ಅಧ್ಯಯನಮಾಡಿ" ಎನ್ನಬಹುದು. ಹೀಗೆ ಬಹುಮುಖವಾಗಿರುವ ಅವರ ಬೃಹತ್‌ಪ್ರಮಾಣದ ಕೃತಿರಾಶಿಯಲ್ಲಿ ಸಾಹಿತ್ಯಗುಣ ಎಲ್ಲಿಂದ ಬಂತು? ಅದನ್ನು ವಸ್ತುವಿನಲ್ಲಿ ಅರಸುವುದಕ್ಕಿಂತ ರೀತಿಯಲ್ಲಿ ಅರಸಿ ಕಾಣುವುದು ಸಮರ್ಪಕವಾದ ಮಾರ್ಗ. ವಿವೇಕಾನಂದರ ಕೃತಿಗಳಲ್ಲಿ ಜ್ವಲಿಸುತ್ತಿರುವ ಪ್ರಚಂಡ ಶಕ್ತಿಯಲ್ಲಿದೆ ಈ ಸಾಹಿತ್ಯಗುಣ. ಅವರ ನುಡಿಗಳೆಂದರೆ ಓದುವವರ ನರನಾಡಿಗಳಲ್ಲಿ ಮಿಂಚನ್ನು ಚಿಮ್ಮುವ ವಿದ್ಯುದಾಗಾರಗಳು! ಸಿಡಿಲಿನ ಸಿಗುರುಗಳು! 'ಶಕ್ತಿ ಸಾಹಿತ್ಯ' ಎನ್ನುವ ಮಾತು ಅವರ ಕೃತಿಗಳಿಗೆ ಪೂರ್ಣವಾಗಿ ಅನ್ವಯಿಸುತ್ತದೆ. ಭಾವನೆಗಳ ಪ್ರಾಮಾಣಿಕ ಅಭಿವ್ಯಕ್ತಿಯೆ ಸಾಹಿತ್ಯ ಎನ್ನಬಹುದಾದಲ್ಲಿ, ಅಂತಹ ಅಭಿವ್ಯಕ್ತಿಯನ್ನು ವಿವೇಕಾನಂದರಲ್ಲಿ

ಕಾಣುತ್ತೇವೆ. ಅವರ ಒಂದೊಂದು ಉಕ್ತಿಯೂ ಹೃದಯಾಂತರಾಳದಿಂದ ಹೊಮ್ಮಿ ಬಂದು ಹೃದಯವನ್ನೆ ಸೇರುತ್ತದೆ; ಬಿಲ್ಲಿನಿಂದ ಹೊರಟ ಬಾಣದಂತೆ ಅದರ ನೇರ ಮತ್ತು ವೇಗ. ವ್ಯಕ್ತಿತ್ವದ ಪ್ರತಿಬಿಂಬವೆ ಶೈಲಿ ಎನ್ನುವ ಹೇಳಿಕೆಗೆ ವಿವೇಕಾನಂದರ ಕೃತಿಗಳಿಗಿಂತ ಉತ್ತಮವಾದ ನಿದರ್ಶನ ಪ್ರಾಯಶಃ ಸಿಗಲಾರದು—ಅವರ ವಜ್ರ ವ್ಯಕ್ತಿತ್ವದ ಪಡಿ ನೆಳಲಾಗಿ ಮಿರುಗುತ್ತಿದೆ ಅವರ ಓಜೋಗುಣ ಸಮನ್ವಿತವಾದ ಶೈಲಿ. ಸಂಗ್ರಹವಾಗಿ ಹೇಳುವುದಾದರೆ, ವಿವೇಕಾನಂದರದು ಶಕ್ತಿಪೂರ್ಣವಾದ, ಆತ್ಮೀಯವಾದ ನಿರರ್ಗಳ ಶೈಲಿ ; ಅದು ಅಷ್ಟು ಬಲಿಷ್ಠವಾಗಿದ್ದರೂ ಬಹು ಸರಳವಾದ ಮತ್ತು ತಿಳಿಯಾದ ಶೈಲಿ. ಸ್ಫಟಿಕಸ್ವಚ್ಛತೆ ಅದರ ವೈಶಿಷ್ಟ್ಯ. ಅದು ಎಷ್ಟು ತೂಕವೊ ಅಷ್ಟೂ ಹಗುರ. ಅದರ ಹೃದ್ಯತೆಗೆ ನಾವು ಮಾರುಹೋಗುತ್ತೇವೆ, ದೃಢತೆಗೆ ವಶವಾಗುತ್ತೇವೆ, ಪ್ರಖರತೆಗೆ ಬೆರಗಾಗುತ್ತೇವೆ.

ಈ ದೃಷ್ಟಿಯಿಂದ ಸ್ವಾಮಿಜಿಯವರ ಕೃತಿಗಳನ್ನು ನೋಡಿದರೆ ಅವುಗಳಲ್ಲಿರುವ ಸಾಹಿತ್ಯಶಕ್ತಿ ಎಂಥದೆಂಬುದು ಅರಿವಾಗುತ್ತದೆ. ಇಲ್ಲಿ ಅವರ ಕೃತಿಗಳಿಂದ ನಾಲ್ಕಾರು ಉದಾಹರಣೆಗಳನ್ನು ಎತ್ತಿಕೊಡುವುದಕ್ಕಿಂತ ಯುಕ್ತವಾದ ಕ್ರಮ ಬೇರೊಂದಿಲ್ಲ. (ಈ ಭಾಗಗಳು ಆರಿಸಿಕೊಟ್ಟವಲ್ಲ, ಅಲ್ಲಿ ಇಲ್ಲಿ ಕೈ ಹಾಕಿದಾಗ ಸಿಕ್ಕಿದವು).

ಹಳೆಯದನ್ನು ಬಿಟ್ಟು ನವದಿಗಂತದತ್ತ ಮುನ್ನಡೆಯಲು ಅವರು ನೀಡುವ ಆಹ್ವಾನ ಎಷ್ಟು ಪರಿಣಾಮಕಾರಿಯಾಗಿದೆ !—

"ಓ ಮಾನವ, ಅತೀತದ ಪೂಜೆಯಿಂದ ಪ್ರತ್ಯಕ್ಷದ ಪೂಜೆಗೆ, ನಿನಗಿದೋ ಆಹ್ವಾನ ! ಹೋದ ದುಃಖದಿಂದ ಬರುವ ಸುಖಕ್ಕೆ, ನಿನಗಿದೋ ಆಹ್ವಾನ ! ಗತಾನುಶೋಚನೆಯಿಂದ ಆಧುನಿಕ ನವಪ್ರಯತ್ನಕ್ಕೆ, ನಿನಗಿದೋ ಆಹ್ವಾನ ! ಲುಪ್ತಪಂಥದ ಪುನರುದ್ಧಾರ ಸಾಹಸದ ವೃಥಾಶಕ್ತಿಕ್ಷಯದಿಂದ ಸದ್ಯೋ ನಿರ್ಮಿತ ವಿಶಾಲ ಸನ್ನಿಕಟ ಪಥಕ್ಕೆ, ನಿನಗಿದೋ ಆಹ್ವಾನ ! ಓ ಬುದ್ಧಿಮಾನ್ ಮಾನವಾ, ಇದನ್ನು ತಿಳಿ, ಸಿದ್ಧನಾಗು, ಪ್ರಬುದ್ಧನಾಗು !

ಯಾವ ಶಕ್ತಿಯ ಉನ್ಮೇಷಮಾತ್ರದಿಂದಲೆ ದಿಗ್ದಿಗಂತವ್ಯಾಪಿಯಾದ ಪ್ರತಿಧ್ವನಿಯಿಂದ ಜಗತ್ತು ಜಾಗೃತವಾಗುತ್ತಿರುವುದೋ ಆ ಶಕ್ತಿಯ ಪೂರ್ಣತ್ವವನ್ನು ಭಾವಿಸಿ ಅನುಭವಿಸು ; ವೃಥಾ ಸಂದೇಹ ಬೇಡ ; ದುರ್ಬಲತೆ ಬೇಡ ; ದಾಸಜಾತಿ ಸುಲಭವಾದ ಈರ್ಷ್ಯಾ ದ್ವೇಷಗಳನ್ನು ದೂರಮಾಡಿ ಈ ಮಹಾಯುಗ ಚಕ್ರಪರಿವರ್ತನೆಯ ಸಹಾಯಾರ್ಥವಾಗಿ ಹೆಗಲು ಕೊಟ್ಟು ನಿಲ್ಲು ; ಸೊಂಟ ಕಟ್ಟಿ ನಿಲ್ಲು, ಧೀರನಾಗಿ ನಿಲ್ಲು !

ನಾವು ಪ್ರಭುವಿನ ದಾಸರು, ಪ್ರಭುವಿನ ಪುತ್ರರು ; ಪ್ರಭುವಿನ ಲೀಲೆಗೆ ಸಹಾಯಕರು ಎಂಬುದನ್ನು ತಿಳಿ. ವಿಶ್ವಾಸಹೃದಯದಿಂದ ದೃಢಭಾವಧಾರಿಯಾಗಿ ಕಾರ್ಯಕ್ಷೇತ್ರಕ್ಕೆ ಧುಮುಕು ! ನಿರ್ಭರತೆಯಿಂದ ಧುಮುಕು "[1]

---

[1] 'ಶ್ರೀರಾಮಕೃಷ್ಣ ಪರಮಹಂಸ' (ಕುವೆಂಪು)-ಪು. ೨೪೫.

ಹೀಗೆಯೆ ಧಮನಿಧಮನಿಗಳಲ್ಲಿ ಉತ್ಸಾಹ ಸ್ಫೂರ್ತಿಗಳನ್ನು ಹರಿಸಬಲ್ಲ ಈ ವೀರಮಂತ್ರವನ್ನು ಪರಿಭಾವಿಸಿ:

"ನಮ್ಮ ನರಗಳಿಗೆ ವಜ್ರಸಾಣೆಯಾಗಲಿ; ನಮಗೀಗ ಬೇಕಾದುದು ಕಬ್ಬಿಣದ ಖಂಡಗಳು, ಉಕ್ಕಿನ ನರಗಳು. ಬಹುಕಾಲದಿಂದಲೂ ನಾವು ಕಣ್ಣೀರು ಕರೆದಿದ್ದೇವೆ. ಇನ್ನು ಸಾಕು, ಅಳು ಬೇಡ. ಮೇಲೆದ್ದು ನಿಂತು ಗಂಡಸರಾಗಿ; ನಮಗೆ ಬೇಕು ವೀರಧರ್ಮ, ವೀರನಿರ್ಮಾಣಕ ಧರ್ಮ."[2]

ಭಾರತಮಾತೆ ಸುದೀರ್ಘನಿದ್ರೆಯಿಂದ ಎಚ್ಚತ್ತು ಅದಮ್ಯಳಾಗಿ ನಿಲ್ಲುತ್ತಿರುವುದರ ದಿವ್ಯದರ್ಶನವನ್ನು ವಿವೇಕಾನಂದರು ಭಾವಪೂರ್ಣವಾಗಿ, ಪ್ರೋಜ್ವಲವಾಗಿ ಬಣ್ಣಿಸುವ ಪರಿಯಿದು:

"ಸುದೀರ್ಘರಾತ್ರಿ ಕಡೆಗಿಂದು ಕೊನೆಗಾಣುತ್ತಿದೆ. ಬಹುಕಾಲದ ಕೋಪತಾಪಗಳು ಕಡೆಗಿಂದು ಮಾಯವಾಗುತ್ತಲಿವೆ. ಇದುವರೆಗೆ ಶವದಂತೆ ಬಿದ್ದಿದ್ದ ಶರೀರವಿಂದು ಸಚೇತನವಾಗುತ್ತಿದೆ. ಅದೋ ಕಿವಿಗೊಡಿ; ತೂರ್ಯವಾಣಿಯೊಂದು ಕೇಳಿಬರುತ್ತಿದೆ—ಬಹು ಪುರಾತನ ಕಾಲದ ಇತಿಹಾಸಗರ್ಭದಿಂದ ಹೊಮ್ಮಿ, ಪರ್ವತ ಪರ್ವತ ಶಿಖರಗಳಿಂದ ಮರುದನಿಯಾಗಿ ಚಿಮ್ಮಿ, ಅರಣ್ಯಾರಣ್ಯ ಕಂದರ ಕಂದರಗಳಲ್ಲಿ ಸಂಚರಿಸಿ, ಬರಬರುತ್ತ ಪ್ರಬಲವಾಗಿ, ಬಂದಂತೆಲ್ಲ ಅಪ್ರತಿಹತವಾಗಿ, ನಮ್ಮಾ ಪುಣ್ಯಭೂಮಿಯನ್ನು ನಿದ್ದೆಯಿಂದೊದೆದೆಬ್ಬಿಸಿ, ಜ್ಞಾನ ಭಕ್ತಿ ಕರ್ಮ ವೈರಾಗ್ಯ ಸೇವಾತತ್ತ್ವಗಳನ್ನು ಉಚ್ಚಕಂಠದಿಂದ ಸಾರುವ ತೂರ್ಯವಾಣಿಯೊಂದು ಕೇಳಿಬರುತ್ತಿದೆ. ಹಿಮಾಲಯಗಳಿಂದ ಬೀಸಿಬರುವ ಪುಣ್ಯಸಮೀರಣನಂತೆ, ನಿರ್ಜೀವವಾದಂತಿದ್ದ ಅಸ್ಥಿಮಾಂಸಗಳಿಗೆ ಜೀವದಾನ ಮಾಡುತ್ತಿದೆ; ಜಡನಿದ್ದೆಯನ್ನು ಪರಿಹರಿಸುತ್ತಿದೆ; ಕಾರ್ಯೋತ್ಸಾಹ ಸ್ಥೈರ್ಯ ಧೈರ್ಯಗಳನ್ನು ಉದ್ರೇಕಿಸುತ್ತಿದೆ. ಕುರುಡರಿಗೆ ಕಾಣದು; ಮೂರ್ಖರಿಗೆ ತಿಳಿಯದು. ನಮ್ಮ ಭಾರತಭೂಮಿ ಯುಗಯುಗಗಳ ನಿದ್ರೆಯಿಂದ ಮೇಲೇಳುತ್ತಿದೆ. ಆಕೆಯನ್ನು ಇನ್ನಾರೂ ತಡೆಯಬಲ್ಲವರಿಲ್ಲ; ಇನ್ನಾಕೆ ನಿದ್ದೆಮಾಡುವುದಿಲ್ಲ. ಯಾವ ಶಕ್ತಿಯೂ ಆಕೆಯನ್ನು ಬಗ್ಗಿಸಲಾರದು. ಏಕೆಂದರೆ, ಅದೋ ನೋಡಿ! ಮಹಾಕಾಳಿ ಮತ್ತೊಮ್ಮೆ ಎಚ್ಚತ್ತು ಉಸಿರೆಳೆದು ನಿಲ್ಲುತ್ತಿದ್ದಾಳೆ!"[3]

ವೇದಾಂತದ ಮಹಿಮೆ ಪ್ರಭಾವಗಳನ್ನು ಅವರು ಭಾವುಕತೆಯಿಂದ ಹೀಗೆ ವಿವರಿಸುತ್ತಾರೆ:

"ಬಹಳ ಹಿಂದೆ ಎಲ್ಲಿ ಲಿಪಿವತ್ ಇತಿಹಾಸ, ಇಲ್ಲ, ಕಿಂವದಂತಿ ಎಂಬ ಕಥೆಗಳ ಮಂದಪ್ರಕಾಶ ಕೂಡ ತೂರಿ ಹೋಗಲಾರದೊ, ಅಲ್ಲಿ ಅನಂತ ಕಾಲಗರ್ಭದಿಂದಲೂ

[2] 'ಸ್ವಾಮಿ ವಿವೇಕಾನಂದ' (ಕುವೆಂಪು)–ಪು. ೨೦೬.

[3] 'ಶ್ರೀರಾಮಕೃಷ್ಣ ಪರಮಹಂಸ' (ಕುವೆಂಪು)–ಪು. ೨೩೨–೩೩.

ಒಂದು ಕಾಂತಿ ಕೋರೈಸುತ್ತಿದೆ. ಬಾಹ್ಯಪ್ರಕೃತಿಗೆ ಅನುಗುಣವಾಗಿ ಕೆಲವು ವೇಳೆ ಉಜ್ವಲವಾಗಿಯೂ ಕೆಲವು ವೇಳೆ ಮಂದವಾಗಿಯೂ ಆದರೆ ಎಂದಿಗೂ ನಾಶವಾಗದೆ ಸ್ಥಿರವಾಗಿ ಭರತಖಂಡವನ್ನು ಮಾತ್ರವಲ್ಲ ಇಡಿಯ ಭಾವನಾಪ್ರಪಂಚವನ್ನು ಮೌನವಾಗಿ, ಅಗೋಚರವಾಗಿ, ಮೃದುವಾಗಿ ಆದರೂ ಅತಿ ಪ್ರಬಲವಾಗಿ ವ್ಯಾಪಿಸಿ, ಮುಂಜಾನೆ ಯಾರಿಗೂ ಕಾಣದೆ, ಯಾರ ಅರಿವಿಗೂ ಬಾರದ ಹಿಮಮಣಿ ಅತಿ ಸುಂದರವಾದ ಗುಲಾಬಿಯನ್ನು ಅರಳಿಸುವಂತೆ ಇದೆ–ಇದೇ ಉಪನಿಷತ್ತಿನ ಭಾವನೆ, ವೇದಾಂತತತ್ತ್ವದ ಪ್ರಭಾವ. "[4]

ಮೇಲೆ ಕೊಟ್ಟಿರುವುದು ಭಾಷಾಂತರಗಳನ್ನು ; ವಿವೇಕಾನಂದವಾಣಿಯ ಭೀಮಬಲ ಭವ್ಯತೆಗಳನ್ನು ಅನುಭವಿಸಬೇಕಾದರೆ ಇಂತಹ ಸಮರ್ಥ ಭಾಷಾಂತರಗಳಲ್ಲಿ ಮಾತ್ರ ಸಾಧ್ಯ. ಆದರೆ ಭಾಷಾಂತರಗಳನ್ನೆ ಯಾವಾಗಲೂ ಅವಲಂಬಿಸುವುದು ಅನುಚಿತವಾಗುತ್ತದೆ. ವಿವೇಕಾನಂದರ ಶೈಲಿಯ ವರ್ಚಸ್ಸು ಅನೂನವಾಗಿ ಗೋಚರಿಸುವಂತೆ, ಇಂಗ್ಲಿಷ್ ಮೂಲದಿಂದಲೆ ಕೆಲವು ಭಾಗಗಳನ್ನು ಈಗ ಪರಿಶೀಲಿಸಬಹುದು.

ಭಾರತೀಯರ ಪರಾನುಕರಣ ಪ್ರವೃತ್ತಿಯನ್ನು ಖಂಡಿಸಿ, ದೇಶಾಭ್ಯುದಯಕ್ಕೆ ತಕ್ಕ ಅವಕಾಶವನ್ನು ನಿರ್ಮಿಸುವಂತೆ ವಿವೇಕಾನಂದರು ಕರೆಗೊಡುತ್ತಾರೆ:

"Do not be dragged away out of this Indian Life; do not for a moment think that it would be better for India if all the Indians dressed, ate and behaved like another race.... The Lord knows how many thousands of years are in your blood. Therefore, make way for the life-Current of the nation. Take away the blocks that bar the way to the progress of this mighty river... and out it will rush by its own natural impulse and the nation will go on Careering and progressing."[5]

ಸಂಕುಚಿತ ಮನೋಧರ್ಮದ ವಿರುದ್ಧ ಭಾರತವನ್ನು ಎಚ್ಚರಿಸಿ, ವಿಕಾಸ ವೈಶಾಲ್ಯಗಳ ಸಂದೇಶವನ್ನು ಹೀಗೆ ಮೊಳಗಿಸಿದ್ದಾರೆ:

"Give and take is the law; and if India wants to raise herself once more, it is absolutely necessary that she brings out her treasures and throw them broadcast among the

[4] 'ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ'–ಪು. ೨೨೯.

[5]. Complete works—Vol. 3, p. 382.

nations of the earth, and in return be ready to receive what others have to give her. Expansion is life, contraction is death."[6]

ಜಾತಿಯನ್ನೆ ಮೂಲನೀತಿಯನ್ನಾಗಿ ಮಾಡಿ, ಜ್ಞಾನವನ್ನು ತಮ್ಮ ಸೊತ್ತಾಗಿಟ್ಟುಕೊಂಡು ಉಳಿದ ವರ್ಗಗಳನ್ನು ಅಜ್ಞಾನಪಂಕದಲ್ಲಿ ಉಳಿಸಿ ಕೊಳೆಯಿಸಿದ ಭರತಭೂಮಿಯ ಉಚ್ಚವರ್ಗದ ಜನರಿಗೆ ವಿವೇಕಾನಂದರು ಹೇಳುವ ಮಾತುಗಳಲ್ಲಿ ಭರ್ತ್ಸನೆಯಿದೆ, ಅನುನಯವಿದೆ, ಕಳಕಳಿಯಿದೆ :

" Vain is your pride of birth and ancestry. Shake it off . . . If you are not bold enough to do that, then admit your weakness and stretch forth a helping hand and open the gates of knowledge to one and all, and give the down-trodden masses once more their legitimate rights and privileges."[7]

ನಮ್ಮ ದೇಶದಲ್ಲಿ ಬಡತನವಿದೆ ಎಂದು ಕೂಗುಹಾಕುತ್ತ, ಅದರ ನಿವಾರಣೆಗೆ ಏನೂ ಮಾಡದಿರುವವರನ್ನು ಕಂಡು ಕೆರಳಿದ ಸ್ವಾಮಿಜಿಯ ಕಿಡಿನುಡಿಗಳಿವು :

" In India there is a howling cry that we are very poor, but how many charitable associations are there for the well-being of the poor? How many people really weep for the sorrows and sufferings of millions of the poor in India? Are we men? What are we doing, for their livelihood, for their improvement? We do not touch them, we avoid their company! Are we men? "[8]

ಇಂತಹ ಬಡತನ ಮೌಢ್ಯ ಮೋಸಗಳಿರುವ ದೇಶ ದೇಶವೆ? ಇದನ್ನೆಲ್ಲ ತೊಡೆದುಹಾಕಲಾರದ ಧರ್ಮ ಧರ್ಮವೆ? ಎಂಬುದು ವಿವೇಕಾನಂದರ ಪ್ರಶ್ನೆ. ಎಂತಲೆ, " Is it a country or a hell?" ಎಂದು ಗುಡುಗುತ್ತಾರೆ.

ಲಕ್ಷಾಂತರ ಜನ ಹೊಟ್ಟೆಗಿಲ್ಲದೆ ನರಳುತ್ತಿರುವಾಗ ಅಧ್ಯಾತ್ಮವನ್ನು ಪ್ರಚಾರ ಮಾಡುವುದು ಹುಚ್ಚು; ಸನ್ಯಾಸಿಗಳು ಮೊದಲು ಮಾಡಬೇಕಾದುದು ಹಸಿವಿನ ಉಚ್ಚಾಟನೆ; ಅನಂತರವೇ ಧರ್ಮದ ಪ್ರತಿಷ್ಠಾಪನೆ ಎನ್ನುತ್ತಾರೆ ಸ್ವಾಮಿಜಿ :

---

6. Complete works—Vol. 4, pp. 310–11.

7. Complete works—Vol. 3, p. 461.

8. Complete works—Vol. 5, p. 23.

"What have we, several million Sannyasins, been doing for the masses? Teaching them metaphysics! It is all madness! It is a mockery to offer religion to a starving man. How can the millions rise, how can they be a power for good to society, when they are starving?"[9]

ಈ ಭರತಖಂಡಕ್ಕೆ ಬಡವರೆ ಆಧಾರ; ಆದರೆ ಅವರಿಗೇ ಅನುಕಂಪ ತೋರುವವರಿಲ್ಲ. ಇದೆಂತಹ ವಿರೋಧಾಭಾಸ! ಶೋಚನೀಯವಾದ ಈ ಸತ್ಯ ಚಿತ್ರವನ್ನು ನೋಡಿ ವಿವೇಕಾನಂದರ ಹೃದಯ ಮರುಗಿ ನಿಟ್ಟುಸಿರಿಡುವ ಪರಿ ಇಲ್ಲಿದೆ :

"Alas! nobody thinks of the poor of the country. They are the backbone of the country, who by the labour are producing food-these poor people, the sweepers and labourers, who, if they stop work for one day will create a panic in the town. But there is none to sympathise with them, none to console them in their misery."[10]

ವಿವೇಕಾನಂದರು ಒಳ್ಳೆಯ ವಿಮರ್ಶಕರೂ ಹೌದು. ಅಲ್ಲಲ್ಲಿ ಅವರು ವೇದ ಉಪನಿಷತ್ತು ಪುರಾಣ ಇತಿಹಾಸ ಇತ್ಯಾದಿಗಳ ಬಗೆಗೆ ಆಡುವ ವಿಮರ್ಶನೋಕ್ತಿಗಳು ಅವರ ರಸಜ್ಞತೆಗೆ ಸಾಕ್ಷಿ. ಉಪನಿಷತ್ತನ್ನು ಕುರಿತ ಒಂದು ಸೊಗಸಾದ ವಿಮರ್ಶೆಯಿದು :

"ಉಪನಿಷತ್ತಿನ ಅಪೂರ್ವ ಕವಿತ್ವ, ಮಹತ್ವದ ಚಿತ್ರ, ಮಹೋಚ್ಚಭಾವ ಸಮೂಹ. . . ಅಲ್ಲಿಯ ಭಾಷೆ ಭಾವನೆ ನೇರವಾಗಿ ಸರಳವಾಗಿ ಹರಿದುಬರುವುದು. ಸುತ್ತಿಗೆಯ ಪೆಟ್ಟಿನಂತೆ ಬೀಳುವುದು. ಹಿರಿದ ಅಲಗಿನಂತೆ ಬೀಳುವುದು. ಅದರ ಅರ್ಥವನ್ನು ತಿಳಿದುಕೊಳ್ಳಲು ಕಷ್ಟವಿಲ್ಲ. ಅದರ ಸಂಗೀತದ ಪ್ರತಿಯೊಂದು ಸ್ವರದಲ್ಲಿಯೂ ಶಕ್ತಿಯಿರುವುದು. ಅದು ಪೂರ್ಣಪ್ರಭಾವವನ್ನು ನಮ್ಮ ಮೇಲೆ ಬೀರುವುದು. ಅಲ್ಲಿ ಯಾವ ಯಾವ ವಿಧದ ಅಸ್ಪಷ್ಟತೆಯೂ ಇಲ್ಲ. ಒಂದು ಅಸಂಭವ ಭಾವನೆಯೂ ಇಲ್ಲ. ಒಂದು ಜಟಿಲವಾಕ್ಯವಿಲ್ಲ. ಅವನತಿಯ ಚಿಹ್ನೆಯಿಲ್ಲ. ಉಪಮಾನದ ಹೊರೆಯಿಲ್ಲ. ಗುಣವಾಚಕಗಳ ಹೊರೆಯನ್ನು ಹೇರಿ ಸಮಸ್ಯೆಯನ್ನು ಮತ್ತೂ ಜಟಿಲಮಾಡಿ ತಲೆ ಕೆಡಿಸಿಕೊಂಡು ಪಾರಾಗುವುದಕ್ಕೆ ಅವಕಾಶವೆ ಇಲ್ಲದ ಹಾಗಿಲ್ಲ. ಇದು ಮಾನವಸಾಹಿತ್ಯವಾಗಿದ್ದರೆ, ಜನಾಂಗ ತನ್ನ ತೇಜಸ್ಸಿನ ವೀರ್ಯವನ್ನು ಕಳೆದುಕೊಳ್ಳುವುದಕ್ಕಿಂದ ಮುಂಚೆ ಇದನ್ನು ಸೃಷ್ಟಿಸಿರಬೇಕು."[11]

9.–10. Complete works—Vol. 7, p. 244.

11. 'ಸ್ವಾಮಿವಿವೇಕಾನಂದರ ಕೃತಿಶ್ರೇಣಿ"—ಪು. ೧೩೩.

ವಿವೇಕಾನಂದರು ಶುಷ್ಕ ವೇದಾಂತಿಯಲ್ಲ; ಅವರದು ಸರಸವಾದ ಹೃದಯ; ಸೌಂದರ್ಯಪ್ರಜ್ಞೆಯನ್ನು ಅದರಲ್ಲಿ ವಿಶೇಷವಾಗಿ ಗುರುತಿಸುತ್ತೇವೆ. ಜಗತ್ತಿನ ಹಲವು ಚೆಲುವುಗಳನ್ನು ಕಂಡು ಅವರು ನಲಿದಿದ್ದಾರೆ, ಅಲ್ಲಿ ಜಗದ್ಧಾತ್ರಿಯ ಮಹಿಮೆಯನ್ನು ಸಂದರ್ಶಿಸಿದ್ದಾರೆ; ತಮಗಾದ ಆನಂದವನ್ನು ವ್ಯಕ್ತಪಡಿಸಿದ್ದಾರೆ. ಅವರು ಕೊಟ್ಟಿರುವ ಗಂಗೆಯ ಒಂದು ಮನೋಜ್ಞ ಚಿತ್ರವಿದು :

"ಹೃಷೀಕೇಶದಲ್ಲಿರುವ ಗಂಗೆಯ ಚಿತ್ರ ನೆನಪಿದೆಯೆ? ಎಂತಹ ನಿರ್ಮಲ ನೀಲಾಭಸಲಿಲ! ಸುಳಿಗಳಿಂದ ತಪ್ಪಿಸಿಕೊಂಡು ಸುಳಿದಾಡುವ ಹೊಳೆಹೊಳೆಯುವ ಮೀನುಗಳು! ಆ ಅಪೂರ್ವ ಸುಸ್ವಾದು ಹಿಮಶೀತಲವಾರಿ! ಆ ಅದ್ಭುತವಾದ 'ಹರ! ಹರ! ಹರ!' ಎಂಬ ತರಂಗವಾಣಿ! ಆ ನೀರವಗಿರಿ ನಿರ್ಝರಗಳ 'ಹರ! ಹರ! ಹರ!' ಎಂಬ ಪ್ರತಿಧ್ವನಿ! ಆ ವಿಪಿನವಾಸ, ಆ ಮಾಧುಕರೀ ಭಿಕ್ಷೆ; ಆ ಗಂಗೆಯ ವಿಶಾಲ ವಕ್ಷಸ್ಥಳದಿಂದ ಮೇಲೆದ್ದಿರುವ ಸಣ್ಣ ಸಣ್ಣ ದ್ವೀಪಗಳಂತಹ ಬಂಡೆಗಳು! ಅವುಗಳಮೇಲೆ ಕುಳಿತು ಬೊಗಸೆ ಬೊಗಸೆಯಾಗಿ ನೀರೀಂಟುವ ದೃಶ್ಯ! ಅಲ್ಲಿಯ ಮತ್ಸ್ಯಗಳಿಗೆ ಎಷ್ಟು ದುರ್ಭರತೆ? ಆ ಗಂಗೆಯ ಪ್ರೀತಿ! ಆ ಗಂಗೆಯ ಮಹಿಮೆ! ಆ ಗಂಗೆಯ ವೈರಾಗ್ಯಪ್ರದಸ್ಪರ್ಶ!"[12]

ಅವರ ಸೌಂದರ್ಯೋಪಾಸನೆಗೆ ಇನ್ನೊಂದು ನಿದರ್ಶನ: ಒಮ್ಮೆ ಹಡಗಿನ ಮೇಲೆ ಅವರು ಅಡ್ಡಾಡುತ್ತಿದ್ದಾಗ, ಬೆಳದಿಂಗಳು ಹಬ್ಬಿದ ಕಡಲು ಆಗಸಗಳನ್ನು ನಿಟ್ಟಿಸುತ್ತ, "ಮಾಯೆಯ ರಾಜ್ಯದಲ್ಲಿರುವ ಈ ದೃಶ್ಯಾವಳಿಗಳೆ ಇನಿತು ಸುಂದರ ವಾಗಿರುವಾಗ, ಮಾಯೆಯ ಹಿಂದಿರುವ ಆ ಸತ್ಯಸ್ವರೂಪ ಇನ್ನೆಷ್ಟು ಸುಂದರತರ ವಾಗಿರಬೇಕು!" ಎಂದು ವಿಸ್ಮಯಪಟ್ಟರಂತೆ. ಮತ್ತೊಮ್ಮೆ ಅಂಥದೇ ಚಂದ್ರಿಕಾ ರಜನಿಯ ಸೌಂದರ್ಯಕ್ಕೆ ಪರವಶರಾಗಿ, ಒಳಗೆ ಕವಿತೆಯೋದುತ್ತಿದ್ದ ಶಿಷ್ಯರನ್ನು ಕರೆದು, "ಕವಿತೆಯ ಸಾರವೇ ಸಮ್ಮುಖದಲ್ಲಿ ಚೆಲ್ಲಿ ಸೂಸುತ್ತಿರಲು ಒಳಗೆ ಕುಳಿತು ಕವಿತೆಯೋದುವುದರಿಂದ ಪ್ರಯೋಜನವೇನು?" ಎಂದರಂತೆ.

ಸ್ವಾಮಿಜಿ ಗಂಭೀರಪ್ರವೃತ್ತಿಯವರು ಮಾತ್ರವಲ್ಲ; ಹಾಸ್ಯಪರತೆ ವಿನೋದ ಶೀಲಗಳು ಅವರಲ್ಲಿದ್ದುವೆಂಬುದಕ್ಕೆ ಎಷ್ಟೋ ನಿದರ್ಶನಗಳು ಅವರ ಜೀವನ ಚರಿತ್ರೆಯಲ್ಲಿ ದೊರಕುತ್ತವೆ. ಒಂದೇ ಒಂದು ಉದಾಹರಣೆ ಕೊಡಬಹುದು: ಯೋಕೋಹಾಮದಿಂದ ಅವರು ಬರೆದ ಪತ್ರವೊಂದರಲ್ಲಿ ಚೀಣೀಯರ ಬಗ್ಗೆ ಹೀಗೆ ಬರೆದಿದ್ದಾರೆ! "ಚೀಣಾ ಕೂಸು ಪೂರ್ಣ ತತ್ತ್ವಜ್ಞಾನಿ. ನಿಮ್ಮ ಇಂಡಿಯಾ ದೇಶದ ಹುಡುಗನು ಮಂಡಿಗಾಲಿನಲ್ಲಿ ತೆವಳುವುದಕ್ಕೆ ಕೂಡ ಕೈಲಾಗದ ವಯಸ್ಸಿನಲ್ಲಿ ಅದು ಕೆಲಸಕ್ಕೆ ಹೋಗುತ್ತದೆ, ಶಾಂತಚಿತ್ತದಿಂದ" "ಆ ಚೀಣನಿದ್ದಾನಲ್ಲ—ತಾನೆಂದೂ ಮೈತೊಳೆಯುವುದಿಲ್ಲವೆಂದು ಹರಕೆ ಕಟ್ಟಿಕೊಂಡಿರುವಂತೆ ತೋರುತ್ತದೆ!"[13]

---

12 'ಸ್ವಾಮಿ ವಿವೇಕಾನಂದ'—ಪು. ೧೨೨.

13 'ವಿವೇಕಾನಂದರ ಪತ್ರಗಳು'-ಭಾಗ ೧, ಪು. ೯-೭ (ನಂ. ವೆಂಕಟೇಶಯ್ಯಂಗಾರ್ಯರ ಅನುವಾದ).

೨

ಇದುವರೆಗೆ ಅವಲೋಕಿಸಿದ್ದು ವಿವೇಕಾನಂದರ ಗದ್ಯಕೃತಿಗಳನ್ನು ; ಅವುಗಳಲ್ಲಿ ವ್ಯಕ್ತವಾಗಿರುವ ಸಾಹಿತ್ಯಲಕ್ಷಣಗಳನ್ನು. ಆದರೆ ವಾಸ್ತವವಾಗಿ, ವಿವೇಕಾನಂದರು ಸಾಹಿತಿಯೆಂಬುದನ್ನು ಸಾಧಿಸಲು ಇಷ್ಟು ಪ್ರಯಾಸಪಡುವ ಅಗತ್ಯವಿಲ್ಲ. ಏಕೆಂದರೆ, ಅವರು ರಚಿಸಿರುವ ಕವನಗಳಿಂದ ಕವಿಯೆಂಬ ಅಭಿಧಾನಕ್ಕೆ ಅವರು ನಿರ್ವಿವಾದವಾಗಿ ಅರ್ಹರಾಗಿದ್ದಾರೆ.

ಇಂಗ್ಲಿಷ್, ಬಂಗಾಳಿ, ಸಂಸ್ಕೃತಗಳಲ್ಲಿ ಸ್ವಾಮಿಜಿ ಕವಿತೆಗಳನ್ನು ಬರೆದಿದ್ದಾರೆ. (ಹಿಂದಿಯಲ್ಲೂ ಬರೆದಿದ್ದಾರಂತೆ). ಅವರ ಗದ್ಯಕೃತಿಯೊಡನೆ ಹೋಲಿಸಿದಾಗ, ಅವರ ಕಾವ್ಯದ ಪ್ರಮಾಣ ತೀರ ಕಡಮೆ ; ಆದರೆ ಅದು ಬೆಲೆಯುಳ್ಳದ್ದು. ಅವರ ಗದ್ಯಕ್ಕೂ ಪದ್ಯಕ್ಕೂ ಹೆಚ್ಚಿನ ಭೇದವೇನೂ ಇಲ್ಲ ; ಎರಡರಲ್ಲೂ ವಿಷಯವೊಂದೆ ; ಗದ್ಯದಲ್ಲಿರುವ ಕಸುವು ಕಾಂತಿಗಳೇ ಪದ್ಯದಲ್ಲೂ ಇವೆ ; ರೂಪ ಮಾತ್ರ ಬೇರೆ ಬೇರೆ.

ಎರಡೇ ಎರಡು ಸ್ತೋತ್ರಗಳನ್ನು ವಿವೇಕಾನಂದರು ಸಂಸ್ಕೃತದಲ್ಲಿ ಸಾಂಪ್ರದಾಯಿಕವಾಗಿ ರಚಿಸಿದ್ದಾರೆ : 'ಅಂಬಾಸ್ತೋತ್ರ' ಮತ್ತು 'ಶಿವಸ್ತೋತ್ರ'. ಇವುಗಳಲ್ಲಿ ಕಲ್ಪನೆ, ಭಾವನಿರ್ಭರತೆಗಳಿದ್ದರೂ ಸ್ವಲ್ಪಮಟ್ಟಿಗೆ ಕ್ಲಿಷ್ಟತೆಯುಂಟು ; ಪಾಂಡಿತ್ಯಪ್ರದರ್ಶನಕ್ಕೆ ಸ್ವಾಮಿಜಿ ಪ್ರಯತ್ನಿಸಿದರೇನೊ ಎಂಬ ಸಂಶಯ ಕೆಲವೆಡೆ ಬರುತ್ತದೆ. ಇದು 'ಅಂಬಾಸ್ತೋತ್ರ'ದ ಮೊದಲನೆಯ ಪದ್ಯ :

ಕಾ ತ್ವಂ ಶುಭೇ ಶಿವಕರೇ ಸುಖದುಃಖಹಸ್ತೇ
ಆಘೂರ್ಣಿತಂ ಭವಜಲಂ ಪ್ರಬಲೋರ್ಮಿಭಂಗೈಃ
ಶಾಂತಿಂ ವಿಧಾತುಮಿಹ ಕಿಂ ಬಹುಧಾ ವಿಭಗ್ನಾವ್
ಮಾತಃ ಪ್ರಯತ್ನಪರಮಾಸಿ ಸದೈವ ವಿಶ್ವೇ.

'ಶಿವಸ್ತೋತ್ರ'ದ ಕಡೆಯ ಈ ಎರಡು ಪದ್ಯಗಳು ವಿವೇಕಾನಂದರ ಕಲ್ಪನೆಯ ಔನ್ನತ್ಯಕ್ಕೆ ದ್ಯೋತಕವಾಗಿವೆ :

ಗಲಿತತಿಮಿರಮಾಲಃ ಶುಭ್ರತೇಜಃ ಪ್ರಕಾಶಃ
ಧವಲಕಮಲಶೋಭಃ ಜ್ಞಾನಪುಂಜಾಟ್ಟಹಾಸಃ
ಯಮಿಜನಹೃದಿಗಮ್ಯಃ ನಿಷ್ಕಲಂ ಧ್ಯಾಯಮಾನಃ
ಪ್ರಣತಮವತು ಮಾಂ ಸಃ ಮಾನಸೋ ರಾಜಹಂಸಃ

ದುರಿತದಲನದಕ್ಷಂ ದಕ್ಷಜಾದತ್ತದೋಷಂ
ಕಲಿತಕಲಿಕಲಂಕಂ ಕಮ್ರಕಹ್ಲಾರಕಾಂತಂ
ಪರಹಿತಕರಣಾಯ ಪ್ರಾಣವಿಚ್ಛೇದಸೂತ್ರಕಂ
ನತನಯನನಿಯುಕ್ತಂ ನೀಲಕಂಠಂ ನಮಾಮಃ.

ಇನ್ನು ವಿವೇಕಾನಂದರ ಇಂಗ್ಲಿಷ್ ಕವಿತೆಗಳನ್ನು ಗಮನಿಸೋಣ. ಈ ವರ್ಗದಲ್ಲಿ ಏಳೆಂಟು ಕವನಗಳು ಮಾತ್ರ ಸಿಗುತ್ತವೆ. ಇವುಗಳಲ್ಲಿ 'ಸನ್ಯಾಸಿ ಗೀತೆ'

ಯೆಂಬ ಕವನವನ್ನು ಪ್ರಥಮವಾಗಿ ಉಲ್ಲೇಖಿಸಬೇಕು. ಅದ್ವೈತದ ನಿಲುವಿನಲ್ಲಿ ನಿಂತು, ಮಾಯಾ ಮೋಹಗಳ ನಿರಸನಕ್ಕೆ ಕರೆ ಕೊಡುವ ಧೀರಗಂಭೀರವಾದ, ಸ್ಫೂರ್ತಿಪ್ರಚೋದಕವಾದ ಕವನವಿದು. ಇದರ ಕೆಲವು ಚರಣಗಳು ಇಂತಿವೆ:

ಏಳು, ಮೇಲೇಳೇಳು ಸಾಧುವೆ ಹಾಡು ಚಾಗಿಯ ಹಾಡನು;
ಹಾಡಿನಿಂದೆಚ್ಚರಿಸು ಮಲಗಿಹ ನಮ್ಮ ಈ ತಾಯ್ನಾಡನು!

ಕುಟ್ಟಿ ಪುಡಿಪುಡಿಮಾಡು ಮಾಯೆಯು ಕಟ್ಟಿಬಿಗಿದಿಹ ಹಗ್ಗವ;
ಕಿತ್ತು ಬಿಸುಡೈ ಹೊಳೆವ ಹೊನ್ನಿನ ಹೆಣ್ಣು ಮಣ್ಣಿನ ಕಗ್ಗವ!
ಮುದ್ದಿಸಲಿ ಪೀಡಿಸಲಿ ದಾಸನು ದಾಸನೆಂಬುದೆ ಸತ್ಯವು;
ಕಬ್ಬಿಣವೊ? ಕಾಂಚನವೊ? ಕಟ್ಟಿದ ಕಣ್ಣಿ ಕಣ್ಣಿಯೆ ನಿತ್ಯವು.

ಪಾಪಪುಣ್ಯಗಳೆಂಬವು-ಮಾ
ತ್ಸರ್ಯ ಪ್ರೇಮುಗಳೆಂಬವು
ದ್ವಂದ್ವರಾಜ್ಯದ ಧೂರ್ತಚೋರರು; ಬಿಟ್ಟು ಕಳೆ, ಕಳೆಯವರನು!
ಮೋಹಗೊಳಿಪರು, ಬಿಗಿವರಿರಿವರು; ಎಚ್ಚರಿಕೆಯಿಂದವರನು
ತಳ್ಳು ದೂರಕೆ, ಓ ವಿರಕ್ತನೆ! ಹಾಡು ಚಾಗಿಯ ಹಾಡನು!
ಹಾಡಿನಿಂದೆಚ್ಚರಿಸು ಮಲಗಿಹ ನಮ್ಮ ಈ ತಾಯ್ನಾಡನು!
ಹಾಡು ಮುಕ್ತಿಯ ಗಾನವನು, ಓ ವೀರ ಸನ್ಯಾಸಿ—
ಓಂ! ತತ್! ಸತ್! ಓಂ![14].

'ಕಾಳೀಮಾತೆ' ಎಂಬ ಕವನದಲ್ಲಿ ಪ್ರಳಯದ ರುದ್ರರಮಣೀಯ ಚಿತ್ರವೊಂದನ್ನು ವಿವೇಕಾನಂದರು ಕೊಡುತ್ತಾರೆ: "ಚುಕ್ಕೆಗಳೆಲ್ಲ ಅಳಿಸಿಹೋಗಿವೆ, ಮೋಡಗಳು ಒಂದರಮೇಲೊಂದು ಕವಿಯುತ್ತಿವೆ, ಕತ್ತಲು ಕಂಪಿಸುತ್ತಿದೆ. **ಗರ್ಜಿಸುವ ಗಾಳಿಯಲ್ಲಿ ಆಗತಾನೆ ಕಾರಾಗೃಹದಿಂದ ಬಿಡುಗಡೆಗೊಂಡ ಲಕ್ಷಾಂತರ ಮಂದಿ ಹುಚ್ಚರ ಆತ್ಮಗಳಿವೆ.** ಮರಗಳೆಲ್ಲ ಬುಡಮೇಲಾಗಿವೆ. ಸಮುದ್ರವೂ ಈ ಗೊಂದಲದಲ್ಲಿ ಸೇರಿಕೊಂಡು, ಕತ್ತಲು ಮೆತ್ತಿದ ಆಗಸದೆತ್ತರಕ್ಕೆ ಪರ್ವತಾಕಾರದ ಅಲೆಗಳನ್ನೆಬ್ಬಿಸುತ್ತಿದೆ. ಮಿಂಚಿನ ಬೆಳಕಿನಲ್ಲಿ ನೋಡಿದಾಗ ಎಲ್ಲ ದಿಕ್ಕುಗಳಲ್ಲೂ ಸಾವಿರ ಸಾವಿರ ಮೃತ್ಯುಛಾಯೆಗಳು ಕಾಣುತ್ತಿವೆ. . . . ಉನ್ಮತ್ತಳಾಗಿ ನರ್ತಿಸುತ್ತ ತಾಯಿ ಬರುತ್ತಾಳೆ." ಈ ಚಿತ್ರ ಅಪೂರ್ವ ಎನ್ನಬಹುದು. ಕಾಳಿಯನ್ನು ಕವಿ ಹೀಗೆ ಸಂಬೋಧಿಸಿ ಆಹ್ವಾನಿಸುತ್ತಾರೆ:

ಭೀತಿಯೆಂಬುದು ನಿನ್ನ ಹೆಸರು,
ಸಾವು ನಿನ್ನುಸಿರು;
ನೀನು ಹಾಕುವ ಹೆಜ್ಜೆ ಹೆಜ್ಜೆಗೆ
ಲೋಕವಳಿಯುವುದು;
ಕಾಲಶಕ್ತಿಯೆ, ಪ್ರಳಯಂಕರಿ!
ಬಾರೆ, ಬಾ ತಾಯಿ!

---

14 ಕುವೆಂಪುರವರ ಅನುವಾದ ('ಅಗ್ನಿಹಂಸ').

'ಪ್ರಬುದ್ಧ ಭಾರತಕ್ಕೆ' ಎಂಬ ಕವಿತೆಯಲ್ಲಿ, ಭಾರತೀಯರು ಕನಸುಗಳ ಕಗ್ಗವಿಯಿಂದ ಹೊರಬಂದು ವಾಸ್ತವಿಕತೆಯ ಹಗಲಿಗೆ ಕಣ್ತೆರೆಯಬೇಕೆಂಬ ಸಂದೇಶ ವನ್ನಿತ್ತಿದ್ದಾರೆ:

Be bold and face
the Truth! Be one with it! Let visions cease,
or, if you cannot, dream but truer dreams
which are Eternal Love and Service Free.

'ಸ್ವಲ್ಪ ತಾಳಿಲೊ ಧೀರ ಹೃದಯವೆ' ಎಂಬ ಕವನದಲ್ಲಿ ಆಶಾವಾದದ, ಭರವಸೆಯ ಕಹಳೆ ಕೂಗಿದೆ; ಶಿವಕ್ಕೆ ಎಂದಿಗೂ ಸೋಲಿಲ್ಲವೆಂಬ ನಂಬುಗೆಯಿದೆ:

Not a work will be lost, no struggle vain,
Though hopes be blighted, powers gone;
Of thy loins shall come the heirs to all,
Then hold on yet a while, brave soul,
No good is ever undone.

'ದಿವ್ಯಶಕ್ತಿಗಳು', 'ಶಾಂತಿ' ಮುಂತಾದುವು ಇತರ ಕೆಲವು ಇಂಗ್ಲಿಷ್ ಕವನಗಳು. ಇಷ್ಟಲ್ಲದೆ, ಅಮೆರಿಕದ ಸ್ವಾತಂತ್ರ್ಯ ದಿನಾಚರಣೆಯ ಒಂದು ಸಂದರ್ಭ ದಲ್ಲಿ 'ಜುಲೈ ನಾಲ್ಕನ್ನು ಕುರಿತು' ಎಂಬ ಕವನವನ್ನು ರಚಿಸಿ, ಸಮತೆ ಸ್ವಾತಂತ್ರ್ಯಗಳ ಬಗ್ಗೆ ತಮ್ಮ ಶ್ರದ್ಧೆಯನ್ನು ವ್ಯಕ್ತಪಡಿಸಿದ್ದಾರೆ. ಸ್ವಾತಂತ್ರ್ಯ ದೇವಿಗೆ ಅವರ ಮಾತುಗಳಿವು:

Behold, the dark clouds melt away,
That gathered thick at night, and hung
So like gloomy pall above the earth!
Before thy magic touch, the world
Awakes....

ವಿವೇಕಾನಂದರ ಬಂಗಾಳಿ ಪದ್ಯಗಳು ಮೂರೇ ಮೂರು: 'ಶ್ರೀ ರಾಮಕೃಷ್ಣ ಸ್ತೋತ್ರ', 'ಶ್ಯಾಮ ನರ್ತಿಸಲಿ ಇಲ್ಲಿ' ಮತ್ತು 'ಹಾಡೊಂದ ಹಾಡುವೆನು ನಿನ್ನ ಕುರಿತು.' ಶಂಕರಾಚಾರ್ಯರ ನಿರ್ವಾಣಷಟ್ಕವನ್ನು ಅವರು ಇಂಗ್ಲಿಷಿಗೆ ಪರಿ ವರ್ತಿಸಿದ್ದಾರೆ; ಅಲ್ಲದೆ, ಥಾಮಸ್ ಎಕೆಂಪಿಸ್ ವಿರಚಿತ 'Imitation of Christ ಎಂಬ ಖ್ಯಾತ ಧಾರ್ಮಿಕ ಗ್ರಂಥವನ್ನು ಬಂಗಾಳಿಗೆ 'ಈಶಾನುಸರಣ' ಎಂಬ ಹೆಸರಿನಲ್ಲಿ ಅನುವಾದಿಸಿದ್ದಾರಂತೆ.

೩

ವಿವೇಕಾನಂದರು ಪತ್ರಿಕೋದ್ಯೋಗಿಯೂ ಹೌದು ! 'ಉದ್ಬೋಧನ' ಎಂಬ ಬಂಗಾಳಿ ಪತ್ರಿಕೆಯನ್ನವರು ಹೊರಡಿಸಿದರು. ಅದರಲ್ಲಿ ಪ್ರಕಟವಾದ ಅವರ ಬಂಗಾಳಿ ಲೇಖನಗಳು 'ಪರಿವ್ರಾಜಕ' ಮತ್ತು 'ಪ್ರಾಚ್ಯ ಮತ್ತು ಪಾಶ್ಚಾತ್ಯ' ಎಂಬ ಪುಸ್ತಕಗಳ ರೂಪದಲ್ಲಿ ಸಂಕಲನಗೊಂಡಿವೆ.

ಈ ಲೇಖನಗಳಿಗೆ ಬಂಗಾಳಿ ಸಾಹಿತ್ಯದ ಚರಿತ್ರೆಯಲ್ಲಿ ಒಂದು ಗಮನಾರ್ಹ ಸ್ಥಾನವುಂಟೆಂದು ಹೇಳಲಾಗಿದೆ; ಏಕೆಂದರೆ ಅವುಗಳಲ್ಲಿ ವಿವೇಕಾನಂದರು ಸಂಪ್ರದಾಯವನ್ನು ಮುರಿದು, ನೂತನ ಮಾರ್ಗವೊಂದನ್ನು ಕ್ರಮಿಸಿದರು. ಅದುವರೆಗೆ ಬಂಗಾಳಿ ಸಾಹಿತ್ಯದ ಶೈಲಿ ಸಂಸ್ಕೃತ ಭೂಯಿಷ್ಠವಾಗಿ ಜಟಿಲವಾಗಿತ್ತು. ವಿವೇಕಾನಂದರು ಅಂತಹ ಕೃತಕ ಶೈಲಿಯನ್ನು ತೊರೆದು ಆಡುಮಾತಿನ ಸಹಜ ಶೈಲಿಯಲ್ಲಿ ಬರೆಯತೊಡಗಿದರು. ಇದರಿಂದ, ಸಂಪ್ರದಾಯವಾದಿಗಳ ಅಪಹಾಸ್ಯ ಖಂಡನೆಗಳಿಗೆ ಅವರು ತುತ್ತಾದುದು ಸಹಜ; ರವೀಂದ್ರನಾಥ ಟಾಗೂರರ ಭಾಷೆಯೂ ಈ ಸಂಪ್ರದಾಯಶರಣರ ಟೀಕೆಗೊಳಗಾಗಿತ್ತು. ಈ ಪಂಡಿತರು 'ಉದ್ಬೋಧನ'ವನ್ನು 'ಉದ್ಬಂಧನ'(ನೇಣು)ವೆಂದು ಗೇಲಿಮಾಡುತ್ತಿದ್ದರಂತೆ! ಆದರೂ ಕ್ರಮೇಣ ವಿವೇಕಾನಂದರ ನವಪಂಥಕ್ಕೇ ಜಯವಾಗಿ, ಅವರ ದಿನಬಳಕೆಯ ಶೈಲಿಯೆ ಶಾಲಾ ಕಾಲೇಜುಗಳ ಪಠ್ಯಪುಸ್ತಕಗಳಿಗೆ ಮಾದರಿಯಾಗುವ ಪರಿಸ್ಥಿತಿಯುಂಟಾಯಿತು.

ಹೀಗೆ ವಿವೇಕಾನಂದರ ಸಾಹಿತ್ಯಚಟುವಟಿಕೆಗಳು ಬಂಗಾಳಿ ಸಾಹಿತ್ಯದಲ್ಲಿ ನೂತನ ಶೈಲಿಯೊಂದನ್ನು ಸ್ಥಾಪಿಸಿದುವು. 'ಬಂಗಾಳಿ ಭಾಷೆ'ಯನ್ನು ಕುರಿತ ಲೇಖನವೊಂದರಲ್ಲಿ ಅವರು ಜನಸಾಮಾನ್ಯರ ಭಾಷೆಯ ಪರವಾಗಿ ವಾದಿಸಿ, ಅರ್ಥವಾಗದ ಭಾಷೆ ಬರಿಯ ಕಲ್ಪನೆಯೆಂದಿದ್ದಾರೆ. (ಜನಸಾಮಾನ್ಯರ ಭಾಷೆಯನ್ನೆ ಕಾವ್ಯದಲ್ಲಿ ಪ್ರಯೋಗಿಸಬೇಕೆಂದು ಪ್ರತಿಪಾದಿಸಿದ ವರ್ಡ್ಸ್‌ವರ್ತ್ ವಿವೇಕಾನಂದರ ಅಚ್ಚುಮೆಚ್ಚಿನ ಕವಿಯೆಂಬುದನ್ನಿಲ್ಲಿ ನೆನೆಯಬಹುದು).

ಅವರ 'ಪ್ರಾಚ್ಯ ಮತ್ತು ಪಾಶ್ಚಾತ್ಯ'ವನ್ನು ಕುರಿತು ಸ್ವಾಮಿ ವೇದಾನಂದರು ಹೀಗೆನ್ನುತ್ತಾರೆ: "ಅದು ಬಂಗಾಳಿ ಸಾಹಿತ್ಯಕ್ಕೆ ಸ್ವಾಮಿಜಿಯ ಅನುಪಮ ಕೊಡುಗೆ; ಬಂಗಾಳಿ ವಾಙ್ಮಯದಲ್ಲಿ ಅಂತಹ ಮತ್ತೊಂದು ಗ್ರಂಥ ದುರ್ಲಭವೆಂದರೆ ಅತ್ಯುಕ್ತಿಯಲ್ಲ." ರವೀಂದ್ರನಾಥ ಟಾಗೂರರ ಅಪಾರ ಪ್ರಶಂಸೆಗೆ ಪಾತ್ರವಾದ ಕೃತಿಯದು.

೪

ವಿವೇಕಾನಂದರದು ಬಹುಮುಖ ಪ್ರತಿಭೆ; ಅದರಲ್ಲಿ ಸಾಹಿತ್ಯ ಕಲೆಗೆ ಮಾತ್ರವಲ್ಲ, ಉಳಿದ ಕಲೆಗಳಿಗೂ ಸ್ಥಾನವುಂಟೆಂಬುದು ತಿಳಿದುಬರುತ್ತದೆ.

ಅವರು ಬಾಲ್ಯದಲ್ಲಿಯೆ ಜಲವರ್ಣಗಳಲ್ಲಿ ಚಿತ್ರಗಳನ್ನು ಬಿಡಿಸುತ್ತಿದ್ದರು; ಇಪ್ಪತ್ತನೆಯ ವಯಸ್ಸಿನಲ್ಲೆ 'ಬಾಲ್ಯವಿವಾಹ' ಮೊದಲಾದ ಮೂರು ಸಾಮಾಜಿಕ

ಕಿರುನಾಟಕಗಳನ್ನು ರಚಿಸಿದ್ದರು—ಅವುಗಳಲ್ಲಿ ಒಂದು ಲೇಖಕನ ಹೆಸರಿಲ್ಲದೆ ಅಚ್ಚಾದುದೂ ಉಂಟು. ಈ ನಾಟಕಗಳು ಹುಡುಗರ ಗುಂಪಿನಲ್ಲಿ ಅಭಿನಯಗೊಳ್ಳು ತ್ತಿದ್ದುವು; ವಿವೇಕಾನಂದರು ಸ್ವತಃ ಪಾತ್ರವಹಿಸುತ್ತಿದ್ದರು ಅಥವಾ 'ಢೋಲ್' ಬಾರಿಸುತ್ತಿದ್ದರು. ಮುಂದೆ, ಬ್ರಾಹ್ಮ ಸಮಾಜದವರು ಅಭಿನಯಿಸಿದ 'ನವಬೃಂದಾ ವನ' ಎಂಬ ನಾಟಕದಲ್ಲಿ ಅವರು ಸಂತನ ಪಾತ್ರವನ್ನು ಧರಿಸಿ ಶ್ರೀ ರಾಮಕೃಷ್ಣ ಪರಮಹಂಸರನ್ನು ಮೆಚ್ಚಿಸಿದರು. ಅವರಿಗೆ ಸಂಗೀತದಲ್ಲೂ ಪರಿಶ್ರಮವಿದ್ದು, ಸೊಗಸಾದ ಕಂಠವಿತ್ತು; ಅವರ ಗಾನಮಾಧುರ್ಯಕ್ಕೆ ಶ್ರೀ ರಾಮಕೃಷ್ಣರು ಹೇಗೆ ಮರುಳಾದರೆಂಬುದು ಎಲ್ಲರಿಗೂ ಗೊತ್ತು. ವಿವೇಕಾನಂದರ ಈ ಕಲಾಪ್ರತಿಭೆ ಬಹುಮಟ್ಟಿಗೆ ಆನುವಂಶಿಕವಾಗಿ ಬಂದದ್ದು.

ಸ್ವಾಮಿಜಿ ಪ್ರಬುದ್ಧ ಕಲಾವಿಮರ್ಶಕರು; ಅವರ ವಿಮರ್ಶೆ ಭಾರತೀಯ ಚಿತ್ರಕಲೆಯ ಮೇಲೆ ಸಾಕಷ್ಟು ಪ್ರಭಾವ ಬೀರಿದೆ. ಆದರೆ ಇದು ಅಷ್ಟೊಂದು ಪ್ರಸಿದ್ಧವಲ್ಲದ ಸಂಗತಿ. ಕಲೆಯನ್ನು ಕುರಿತು ಅವರು ಪ್ರತ್ಯೇಕವಾಗಿ ಏನೂ ಬರೆದಿಲ್ಲ; ಅವರ ಭಾಷಣ ಮತ್ತು ಬರಹಗಳಿಂದ ಈ ಬಗ್ಗೆ ಅವರ ಅಭಿಪ್ರಾಯ ಗಳನ್ನು ಸಂಗ್ರಹಿಸಬೇಕಾಗುತ್ತದೆ.

ತಮ್ಮ ಲೋಕಸಂಚಾರದ ಕಾಲದಲ್ಲಿ ವಿವೇಕಾನಂದರು ಬೇರೆ ಬೇರೆ ದೇಶಗಳ ಚಿತ್ರಕಲೆ ಶಿಲ್ಪಕಲೆಗಳನ್ನು ಆಸಕ್ತಿಯಿಂದ ಅಧ್ಯಯನಮಾಡುತ್ತಿದ್ದರು. ಆದ್ದರಿಂದ ಅವರ ವಿಮರ್ಶೆ ತುಲನಾತ್ಮಕವಾಗಿ, ಮಾರ್ಗದರ್ಶಕವಾಗಿ ಪರಿಣಮಿಸಿತು. ಭಾರತೀಯ ಕಲೆಯ ಹಿರಿಮೆಯ ಬಗ್ಗೆ ಅವರಾಡಿದ ಮಾತುಗಳಿವು: "ಜಗತ್ತಿನ ಪ್ರತಿಯೊಂದು ನಾಗರಿಕ ರಾಷ್ಟ್ರದ ಕಲಾಸೌಂದರ್ಯವನ್ನೂ ನಾನು ನೋಡಿದ್ದೇನೆ; ಆದರೆ ಬೌದ್ಧಯುಗದಲ್ಲಿ ನಮ್ಮ ದೇಶದಲ್ಲಾದ ಕಲೆಯ ಬೆಳವಣಿಗೆಗೆ ಸದೃಶವಾದು ದನ್ನು ನಾನೆಲ್ಲೂ ಕಾಣಲಿಲ್ಲ. ಮೊಗಲ್ ಚಕ್ರವರ್ತಿಗಳ ಕಾಲದಲ್ಲಿ ಕೂಡ ಕಲೆಯು ವಿಶಿಷ್ಟ ಬೆಳವಣಿಗೆಯಿದೆ–ತಾಜ್, ಜುಮ್ಮಾ ಮಸೀದಿ ಇತ್ಯಾದಿಗಳು ಆ ಸಂಸ್ಕೃತಿಯ ಚಿರಸ್ಮಾರಕಗಳು."[15] ಯೂರೋಪಿನಲ್ಲಿ ಅವರು ಮಾಡಿದ ಉಪನ್ಯಾಸವೊಂದರಲ್ಲಿ, ಇಂಗ್ಲೆಂಡ್ ಮತ್ತು ಭಾರತದ ಕಲೆಗಳನ್ನು ಹೋಲಿಸಿದ್ದಾರೆ:

"Compare India and England in the Elizabethan period. What a dark age it was for your people, and how enlightened we were even then. The Anglo-Saxan people have always been badly fitted for art. They have good poetry for instance, how wonderful is the blank verse of Shakespeare. Merely the rhyming of words is not good. It is not the most civilised thing in the world."[16]

---

[15] Complete works—Vol. 7, p. 199.

[16] Complete works—Vol. 4, pp. 196—197.

ಆದರೆ ಇಂದು ಭಾರತೀಯ ಕಲೆಗೆ ಅಂಧಾನುಕರಣದ ರಾಹು ಹಿಡಿದಿರುವುದನ್ನು ಕಂಡು ವಿಷಾದದಿಂದ ಹೀಗೆ ನುಡಿಯುತ್ತಾರೆ:

> "In India, music was developed to the full seven notes, even to half and quarter notes, ages ago. India led in music, also in drama and sculpture. Whatever is done now is merely an attempt at imitation. Everything now in India hinges on the question of how little a man requires to live upon."[16]

ಇಡೀ ಏಷ್ಯಾದ ಜೀವನದಲ್ಲಿ ಕಲೆ ವ್ಯಾಪಕವಾಗಿರುವುದನ್ನು ಅವರು ಗಮನಿಸಿದ್ದಾರೆ. ಜಪಾನೀಯರು ಒಂದು ಮಹಾ ಜನಾಂಗವಾಗಿರುವುದಕ್ಕೆ ಕಾರಣ ಅವರ ಕಲೆಯೆಂಬುದು ವಿವೇಕಾನಂದರ ಅಭಿಮತ. ಅವರೆನ್ನುತ್ತಾರೆ: "ಏಷ್ಯಾದ ಆತ್ಮದಲ್ಲಿ ಕಲೆ ಹಾಸುಹೊಕ್ಕಾಗಿದೆ. ಏಷ್ಯಾದ ಜನ ಕಲಾರಹಿತವಾಗಿ ಯಾವ ಪದಾರ್ಥವನ್ನೂ ಬಳಸುವುದಿಲ್ಲ. ನಮ್ಮ ಪಾಲಿಗೆ ಕಲೆಯೆಂಬುದು ಧರ್ಮದ ಒಂದು ಅಂಗವಾಗಿರುವುದು ನಿಮಗೆ ತಿಳಿದಿಲ್ಲವೆ? ಶುಭ ಸಂದರ್ಭಗಳಲ್ಲಿ ನೆಲವನ್ನೂ ಗೋಡೆಗಳನ್ನೂ ಸೊಗಸಾಗಿ ಅಲಂಕರಿಸಬಲ್ಲ ಹೆಣ್ಣನ್ನು ನಾವೆಷ್ಟು ಹೊಗಳುತ್ತೇವೆ? ಶ್ರೀ ರಾಮಕೃಷ್ಣರೆ ಎಂತಹ ದೊಡ್ಡ ಕಲಾವಿದರು!"[17].

ಹೀಗೆಂದಾಗ ಒಬ್ಬರು, "ಇಂಗ್ಲಿಷ್ ಕಲೆ ಕೂಡ ಉತ್ತಮವಾಗಿಲ್ಲವೆ?" ಎಂದು ವಿವೇಕಾನಂದರನ್ನು ಪ್ರಶ್ನಿಸಿದರಂತೆ. ಆಗ ಬಂತು ಈ ವಾಗ್ಬಾಣ: "ಎಂತಹ ಮೂರ್ಖರು ನೀವು? ಆದರೆ ಪ್ರಚಲಿತ ಆಲೋಚನಾಪ್ರವೃತ್ತಿಯೆ ಹೀಗಿರುವಾಗ ನಿಮ್ಮನ್ನು ದೂಷಿಸಿ ಏನು ಫಲ?....ತಿಳಿದುಕೊಳ್ಳಿ, ಯೂರೋಪಿಯನ್ನರು ಏಷ್ಯಾದ ಸಂಸರ್ಗ ಪಡೆದಂದಿನಿಂದ ತಮ್ಮ ಸ್ವಂತ ಜೀವನಕ್ಕೆ ಕಲೆಯನ್ನು ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ! ಅವರ ಕಟ್ಟಡಗಳನ್ನು ನೋಡಿ–ಎಷ್ಟು ಸಾಮಾನ್ಯ, ಎಷ್ಟು ಅರ್ಥಹೀನ!....ಅವರ ವಸ್ತ್ರಗಳನ್ನು ತೆಗೆದುಕೊಳ್ಳಿ: ದೇಹಕ್ಕಂಟಿಕೊಳ್ಳುವ ಅವರ ಬಿಗಿಯಾದ ಉಡುಪುಗಳು ನಮ್ಮ ದೃಷ್ಟಿಯಲ್ಲಿ ಸಭ್ಯವೆ ಅಲ್ಲ. ಅದರಲ್ಲೇನಿದೆ ಸೌಂದರ್ಯ? ಇನ್ನು, ನಮ್ಮ ಮಾತೃಭೂಮಿಯನ್ನೆಲ್ಲ ಸುತ್ತಿ ಬನ್ನಿ....ನಮ್ಮ ಕಟ್ಟಡಗಳ ಅರ್ಥವನ್ನೂ ಅವುಗಳಲ್ಲೆಷ್ಟು ಕಲೆಯುಂಟೆಂಬುದನ್ನೂ ಕಣ್ಣಾರೆ ನೋಡಿ.... ನಮ್ಮ ಹಳ್ಳಿಗಳಲ್ಲಿ ಒಕ್ಕಲಿಗರ ಮನೆಗಳನ್ನು ನೀವು ನೋಡಿದ್ದೀರಾ?....ಅವರ ಬತ್ತದ ಕಣಜಗಳನ್ನು ಕಂಡಿದ್ದೀರಾ? ಅವುಗಳಲ್ಲೆಂಥ ಕಲೆಯಿದೆ! ಅವರ ಮಣ್ಣಿನ ಗೋಡೆಗಳ ಮೇಲೆ ಕೂಡ ಎಂತಹ ಚಿತ್ರವೈವಿಧ್ಯ!....ಪಾಶ್ಚಿಮಾತ್ಯರಿಗೆ ಉಪಯುಕ್ತತೆಯೆ ಆದರ್ಶ, ನಮಗಾದರೂ ಕಲೆ."[18]

ಆದರೆ ಹಿಂದೂ ಕಲೆಯನ್ನು ಸ್ವಾಮಿಜಿ ಟೀಕಿಸದೆ ಬಿಡಲಿಲ್ಲ. ಹೀಗೆಂದಿ

17–18 Complete works—Vol. 5, pp. 288—289.

ದ್ದಾರೆ ಅವರು : "ಹಿಂದೂಗಳು ಆದರ್ಶದಲ್ಲಿ ಮುಳುಗಿ ವಾಸ್ತವಿಕತೆಯನ್ನು ಹೇಗೆ ಮರೆತರೆಂಬುದಕ್ಕೆ ಸಾಕ್ಷಿಯಿದು—ಚಿತ್ರ, ಶಿಲ್ಪಕಲೆಗಳನ್ನು ತೆಗೆದುಕೊಳ್ಳಿ. ಹಿಂದೂ ಚಿತ್ರಕಲೆಯಲ್ಲಿ ಕಾಣುವುದೇನು? ಎಲ್ಲ ಬಗೆಯ ವಿಕಾರವಾದ ಅಸಹಜ ಮೂರ್ತಿಗಳು. ಹಿಂದೂ ದೇವಾಲಯದಲ್ಲಿ ಕಾಣುವುದೇನು? ಒಂದು 'ಚತುರ್ಭಂಗ' ಅಥವಾ ಅಂತಹ ಮತ್ತೇನೊ ಒಂದೊಂದು. ಆದರೆ ಇಟ್ಯಾಲಿಯನ್ ಚಿತ್ರವನ್ನೊ ಗ್ರೀಕ್ ವಿಗ್ರಹವನ್ನೊ ಪರಿಭಾವಿಸಿ . . . . . ಪ್ರಕೃತಿಯ ಎಂತಹ ಅಭ್ಯಾಸವನ್ನಲ್ಲಿ ಕಾಣುತ್ತೀರಿ!"[19] ರಾಜಾ ರವಿವರ್ಮನ ಚಿತ್ರಗಳ ದೋಷವನ್ನೊಮ್ಮೆ ವಿವೇಕಾನಂದರು ಎತ್ತಿ ತೋರಿಸಿದರು.

ಭಾರತೀಯ ಕಲೆಯನ್ನು ಪ್ರಾಚೀನ ಗ್ರೀಕ್ ಕಲೆಯೊಡನೆ ಹೋಲಿಸುತ್ತ, ಕಲೆಯ ಬಗ್ಗೆ ಅವರು ವ್ಯಕ್ತಪಡಿಸಿರುವ ವಿಚಾರಗಳು ಬೋಧಪ್ರದವಾಗಿವೆ: "ಗ್ರೀಕ್ ಕಲೆಯ ರಹಸ್ಯವೆಂದರೆ, ಅತ್ಯಂತ ಸೂಕ್ಷ್ಮ ವಿವರಗಳ ನಡುವೆಯೂ ಪ್ರಕೃತಿಯ ಅನುಕರಣ, ಭಾರತೀಯ ಕಲೆಯ ರಹಸ್ಯವಾದರೊ ಆದರ್ಶದ ನಿರೂಪಣೆ. . . . . ಆದರೆ ಆದರ್ಶವನ್ನು ಚಿತ್ರಿಸುವ ಭಾರತೀಯ ಪ್ರವೃತ್ತಿ ವಿಕೃತ ಮೂರ್ತಿಗಳನ್ನು ಚಿತ್ರಿಸುವ ಕೆಳಮಟ್ಟಕ್ಕಿಳಿದಿದೆ. ನಿಜವಾದ ಕಲೆಯನ್ನು ಒಂದು ನೈದಿಲೆಗೆ ಹೋಲಿಸಬಹುದು; ಅದು ನೆಲದಿಂದ ಹುಟ್ಟಿ, ನೆಲದಿಂದ ಪೋಷಣೆಗೊಂಡು, ನೆಲದ ಸಂಪರ್ಕಹೊಂದಿದ್ದರೂ (ಸಂಪೂರ್ಣ ಅರಳಿದಾಗ) ನೆಲದಿಂದ ಬಹಳ ಮೇಲಿರುತ್ತದೆ. ಹಾಗೆಯೆ ಕಲೆಗೆ ಪ್ರಕೃತಿಯ ಸಂಪರ್ಕವಿರಬೇಕು—ಆ ಸಂಪರ್ಕವಿಲ್ಲದಿದ್ದರೆ ಅದು ಅವನತಿಗೊಳ್ಳುತ್ತದೆ; ಆದರೂ ಕಲೆ ಪ್ರಕೃತಿಗಿಂತ ಎತ್ತರದಲ್ಲಿರಬೇಕು"[20]

'ಕಲೆಗಾಗಿ ಕಲೆ' ಎಂಬ ತತ್ತ್ವವನ್ನು ಸ್ವಾಮಿಜಿ ಒಪ್ಪಿದವರಲ್ಲ. ಯಾವುದೊ ಒಂದು ಭಾವನೆಯ ಅಭಿವ್ಯಕ್ತಿಗಾಗಿ ಕಲೆ ಎಂಬುದು ಅವರ ಮತ. ಒಂದು ಶಿಲ್ಪಕ್ಕೂ ಒಂದು ಕಟ್ಟಡಕ್ಕೂ ಇರುವ ವ್ಯತ್ಯಾಸದಿಂದ ಅವರು ನಿದರ್ಶನ ಕೊಡುತ್ತಾರೆ. ಮೊದಲನೆಯದು ಒಂದು ಭಾವನೆಯ ಅಭಿವ್ಯಕ್ತಿ, ಎರಡನೆಯದು ಆರ್ಥಿಕ ತತ್ತ್ವಗಳ ಮೇಲೆ ಕಟ್ಟಿದ ಒಂದು ರಚನೆ; ಆದ್ದರಿಂದ ವಸ್ತುವಿನ ಮೌಲ್ಯ ಅದರ ಭಾವಾಭಿವ್ಯಕ್ತಿಯ ಸಾಮರ್ಥ್ಯವನ್ನು ಅವಲಂಬಿಸಿದೆ ಎನ್ನುತ್ತಾರೆ ವಿವೇಕಾನಂದರು.

ಭಾರತೀಯ ಕಲೆಗಳ ಮೇಲೆ ಗ್ರೀಕ್ ಪ್ರಭಾವ ಬಿದ್ದಿದೆಯೆಂಬ ಸಿದ್ಧಾಂತ ವಿವೇಕಾನಂದರ ಕಾಲಕ್ಕೆ ಸ್ವೀಕೃತವಾಗಿತ್ತು. ಅದನ್ನು ವಿವೇಕಾನಂದರು ಅಲ್ಲಗಳೆದರು. ಚಿಕಾಗೊ ಧರ್ಮಸಮ್ಮೇಳನದಲ್ಲಿ ಅವರ ಪ್ರತಿಭಟನೆ ವ್ಯಕ್ತ

---

[19] Complete works—Vol. 6, p. 72.

[20] Complete works—Vol. 5, pp. 185-186.

ವಾಯಿತು. ಎರಡು ದೇಶಗಳಿಗೂ ಸಾಂಸ್ಕೃತಿಕ ಸಂಪರ್ಕವಿರುವುದು ಸಹಜ; ಗ್ರೀಕರು ಅನೇಕ ವಿಷಯಗಳನ್ನು ಭಾರತದಿಂದ ಕಲಿತಂತೆ, ಭಾರತೀಯ ಕಲಾವಿದರೂ ಗ್ರೀಕ್ ಕಲಾವಿದರಿಂದ ಕೆಲವಂಶಗಳನ್ನು ಗ್ರಹಿಸಿದ್ದಾರೆ. ಅಷ್ಟು ಮಾತ್ರದಿಂದಲೆ, ಭಾರತೀಯ ಕಲೆಯ ಆತ್ಮದ ಮೇಲೆ ಗ್ರೀಕ್ ಪ್ರಭಾವದ ನೆರಳು ಕವಿಯಿತು ಎನ್ನುವುದು ಸಾಧುವಲ್ಲ–ಎಂದು ಸ್ವಾಮಿಜಿ ವಾದಿಸಿದರು. ಇ. ಬಿ. ಹ್ಯಾವೆಲ್ ಮತ್ತು ಡಾ|| ಆನಂದಕುಮಾರಸ್ವಾಮಿಯವರು ಇದೇ ಅಭಿಪ್ರಾಯಗಳನ್ನು ಅನಂತರ ಪ್ರತಿಪಾದಿಸಿದರೆನ್ನುವುದು ಗಮನಾರ್ಹ.

ಭಾರತೀಯ ಚಿತ್ರಕಲೆಯ ಮೇಲೆ ವಿವೇಕಾನಂದರು ಬೀರಿದ ಪ್ರಭಾವ ಒಂದು ರೀತಿಯಲ್ಲಿ ಪರೋಕ್ಷವಾದುದು; ಸೋದರಿ ನಿವೇದಿತಾರವರ ಮೂಲಕ ಪ್ರವೃತ್ತವಾದುದು. ನಿವೇದಿತಾ ತಮ್ಮ ಗುರು ವಿವೇಕಾನಂದರಿಂದ ಭಾರತೀಯ ಕಲೆಯ ವಿಷಯದಲ್ಲಿ ಸ್ಫೂರ್ತಿ ಪಡೆದು, ಅನಂತರ ತಮ್ಮ ವಿಚಾರ ವಿಮರ್ಶೆಗಳಿಂದ ಅದರ ಅಧ್ಯಯನಕ್ಕೊಂದು ಹೊಸ ದಿಕ್ಕು ಕಾಣಿಸಿದರು. ಆಧುನಿಕ ಚಿತ್ರಕಲೆಯ ಆಚಾರ್ಯರಾದ ಹ್ಯಾವೆಲ್, ಅವನೀಂದ್ರನಾಥ ಟಾಗೂರ್ ಮತ್ತು ನಂದಾಲಾಲ್ ಬೋಸ್–ಇವರೆಲ್ಲ ನಿವೇದಿತಾರಿಂದ ಮಾರ್ಗದರ್ಶನ ಪಡೆದು, ರಾಷ್ಟ್ರೀಯ ಶೈಲಿಯೊಂದನ್ನು ರೂಪಿಸಿದರು. ಆದ್ದರಿಂದ, ಭಾರತೀಯ ಕಲೆಯ ಈ ನವಯುಗವನ್ನು 'ವಿವೇಕಾನಂದ–ನಿವೇದಿತಾ ಯುಗ'ವೆಂದು ಕೆಲವರು ಗುರುತಿಸಿದ್ದಾರೆ.

ಹೀಗೆ ಒಂದಲ್ಲ, ಹಲವು ಅರ್ಥಗಳಲ್ಲಿ ಸ್ವಾಮಿ ವಿವೇಕಾನಂದರು 'ನವಯುಗಾಚಾರ್ಯ' ಎಂಬ ಸಂಬೋಧನೆಗೆ ಅರ್ಹರಾಗುತ್ತಾರೆ. ನಾನಾ ಮುಖವಾದ ಇಷ್ಟೆಲ್ಲ ಸಾಧನೆಗಳನ್ನು ಅವರು ಕೇವಲ ಮೂವತ್ತೊಂಬತ್ತು ವರ್ಷಗಳ ಅವಧಿಯಲ್ಲಿ ಮಾಡಿದ್ದು ಸಾಮಾನ್ಯ ಮನುಷ್ಯನ ಊಹೆಗೂ ನಿಲುಕದ ಸಂಗತಿ. ವಿವೇಕಾನಂದರು ಇಷ್ಟೆಲ್ಲ ಸಾಧಿಸಿದರಲ್ಲ, ಅವರ ಜೀವನದ ಗುರಿಯೇನು? ಅವರೇ ಹೇಳಿಕೊಂಡಿದ್ದಾರೆ: "ನಿಮ್ಮಲ್ಲಿ ಒಂದು ತುಮುಲವನ್ನೆಬ್ಬಿಸುವುದೆ ನನ್ನ ಜೀವನಧ್ಯೇಯ" ("My mission in life is to rouse a struggle in you") ನಿಸ್ಸಂದೇಹವಾಗಿ ಅವರು ಈ ಧ್ಯೇಯವನ್ನು ನೆರವೇರಿಸಿದರು. ಧರ್ಮ ಸಾಹಿತ್ಯ ಕಲೆ ಎಲ್ಲವೂ ಮಾಡಬಹುದಾದ ಕೆಲಸ ಇಷ್ಟೆ ಎಂದು ತೋರುತ್ತದೆ.[21]

—ಸಿ. ಪಿ. ಕೆ.

---

21. ಶ್ರೀ ವಿವೇಕಾನಂದರ ಸೋದರರೆ ಆದ ಭೂಪೇಂದ್ರನಾಥದತ್ತರು ರಚಿಸಿರುವ "Swami Vivekananda Patriot and Prophet" ಎಂಬ ಗ್ರಂಥದಿಂದ ಈ ಲೇಖನಕ್ಕೆ ತುಂಬ ಸಹಾಯವಾಗಿದೆ–ಲೇ.

ಸ್ವಾಮಿ ವಿವೇಕಾನಂದರ ಮನೋಧರ್ಮ

ಸ್ವಾಮಿ ವಿವೇಕಾನಂದರ ವಜ್ರದೇಹವೂ ತೇಜೋನ್ವಿತ ಮುಖಮಂಡಲವೂ ಯಾರ ಹೃದಯವನ್ನಾದರೂ ಆಕರ್ಷಿಸದಿರದು ! ಅವರ ಕಣ್ಣುಗಳಲ್ಲಿ ಮಿಂಚುವ ಯೌಗಿಕ ಕಾಂತಿ ಜನಸಾಮಾನ್ಯರಲ್ಲಿ ಕಾಣುವುದು ಅಪೂರ್ವ. ಅವರು ಉಪನ್ಯಾಸಕ್ಕೆ ನಿಂತು ಕೆಲವು ಕ್ಷಣ ಮೌನವಾಗಿದ್ದರೆ ಸಾಕು, ಸಭಿಕರೆಲ್ಲರೂ ಮಂತ್ರ ಮುಗ್ಧರಾದಂತೆ ಮನಸ್ಸನ್ನು ಏಕಾಗ್ರಮಾಡುತ್ತಿದ್ದರು-ಎಂದು ಸೋದರಿ ನಿವೇದಿತಾ ಹೇಳಿದ್ದಾರೆ. ಪಾವಿತ್ರ್ಯವೇ ಘನೀಭೂತವಾದ ಈ ವೀರಸಂನ್ಯಾಸಿಯ ದರ್ಶನ ದಿಂದಲೇ ಅನೇಕರು ತಮ್ಮ ಬದುಕನ್ನು ಅರಳಿಸಿದರು. ಅವರು ಹೋದೆಡೆಗಳಲ್ಲಿ ಸ್ಫೂರ್ತಿಯನ್ನು ಜನಮನದಲ್ಲಿ ತುಂಬಿದರು. ಅವರ ಭವ್ಯ ವ್ಯಕ್ತಿತ್ವದ ಸಾನ್ನಿಧ್ಯದಲ್ಲಿ ಅಹಂಕಾರವೆಲ್ಲ ಅಡಗಿ, ದೈವೀಗುಣಗಳ ಉನ್ಮೀಲನವಾಗುತ್ತಿತ್ತು. ಜೀವನದಲ್ಲಿ ಅವರು ಎಂದೂ ಉದ್ವಿಗ್ನರಾದವರಲ್ಲ. ಒಮ್ಮೆ ಬಸ್ಸಿಗೆ ಹೊತ್ತಾಯಿತೆಂದು ಅವರನ್ನು ಅವಸರ ಪಡಿಸಿದಾಗ, "ಏಕೆ—ಅಷ್ಟೊಂದು ಅವಸರ! ಇನ್ನೊಂದು ಬಸ್ಸಿನಲ್ಲಿ ಹೋದರಾಯಿತು!" ಎಂದರಂತೆ. ಸುಖಕಷ್ಟಗಳನ್ನು ಸಮಭಾವದಿಂದ ಕಂಡ ಧೀರ ಪುರುಷರವರು.

ಸ್ವಾಮಿಜಿಯ ಮನಸ್ಸು ಮಗುವಿನಂತೆ ಸರಳ, ಮುಗ್ಧ ! ಅವರ ಗಾಂಭೀರ್ಯ ದಲ್ಲಿ ಮಂದಹಾಸವೂ ಬೆರೆತಿತ್ತು. ವಿದ್ವಾಂಸರು, ಬಡವರು, ಶ್ರೀಮಂತರು, ಸಮಾಜ ಸೇವಕರು, ದೀನರು, ದಲಿತರು, ಇವರೆಲ್ಲರೊಡನೆ ಅವರು ಸ್ನೇಹಪರ ರಾಗಿದ್ದರು. ಮೇರುಸದೃಶವಾದ ಅವರ ವ್ಯಕ್ತಿತ್ವದಲ್ಲಿ ನಮ್ರತೆಯೂ ಸೇರಿ ಹೋಗಿತ್ತು. "ಈ ಜಗತ್ತಿನಲ್ಲಿ ನಾನು ಪ್ರಭುವಲ್ಲ, ನಾನೊಬ್ಬ ಸೇವಕ" ಎಂದು ಅವರು ಹೇಳಿದುದುಂಟು. ಗಂಭೀರವ್ಯಕ್ತಿಯಾದ ಸ್ವಾಮಿಜಿ ವಿನೋದಪ್ರಿಯರೂ ಆಗಿದ್ದರು. ಭಕ್ತರೊಬ್ಬರು, "ಸ್ವಾಮಿಜಿ, ನೀವು ದೇವರನ್ನು ನೋಡಿರುವಿರಾ ?" ಎಂದು ಪ್ರಶ್ನಿಸಿದಾಗ "ನನ್ನಂಥ ಸ್ಥೂಲಕಾಯನನ್ನು ನೋಡಿದರೆ, ದೇವರನ್ನು ನೋಡಿದವರಂತೆ ಕಾಣುತ್ತಾನೆಯೆ ?" ಎಂದು ಉತ್ತರವಿತ್ತು ಎಲ್ಲರನ್ನೂ ಸ್ವಾಮಿಜಿ ನಗಿಸಿದರಂತೆ ! ಒಂದು ದಿನ ಮಹಿಳೆಯೊಬ್ಬರು "ಅಮೆರಿಕದ ಸುಂದರ ಮಹಿಳೆಯ ರನ್ನು ನೀವು ನೋಡಿದರೆ, ಹೇಗಿರುತ್ತೀರಿ ?" ಎಂದು ಕೇಳಿದರು. "ನನ್ನನ್ನು ನೋಡಿದ ಮಹಿಳೆಯರಲ್ಲಿ ಸಭ್ಯತೆಗೆ ದೂರವಾದ ಭಾವನೆ ಮೂಡಿದರೆ ಅವರೆಲ್ಲರೂ ಹಸುರು ಬಣ್ಣದ ಕಪ್ಪೆಗಳಾಗುತ್ತಾರೆ" ಎಂದು ಹೇಳಿ ಎಲ್ಲರನ್ನೂ ಸ್ವಾಮಿಜಿ ನಗಿಸಿಬಿಟ್ಟರಂತೆ ! ವಾಗ್ಮಿಗಳೂ ಸಂಭಾಷಣೆಯಲ್ಲಿ ಚತುರರೂ ಆದ ಸ್ವಾಮಿಜಿ, ಉಪನ್ಯಾಸ ಮುಗಿದ ಬಳಿಕ ಪ್ರಶ್ನೆಗಳನ್ನು ಕೇಳಲು ಅವಕಾಶ ನೀಡುತ್ತಿದ್ದರು. ಜಯಪುರದಲ್ಲಿ ಒಬ್ಬ ಮಹಾಶಯರು, "ಸ್ವಾಮಿಜಿ, ನಾನು ವೇದಾಂತಿ. ನಾನು ಬ್ರಹ್ಮವೆಂದು ತಿಳಿದಿದ್ದೇನೆ. ನನಗೂ ಅವತಾರಕ್ಕೂ ಏನಾದರೂ ವ್ಯತ್ಯಾಸ

ವಿದೆಯೆ ? ಎಂದು ಪ್ರಶ್ನಿಸಿದರು. "ಮಹಾಶಯ, ನೀವು ಹೇಳುವುದು ನಿಜ. ಮತ್ಸ್ಯ, ಕೂರ್ಮ, ವರಾಹ—ಈ ಅವತಾರಗಳಲ್ಲಿ ನಿಮ್ಮದು ಯಾವ ಅವತಾರ ?" ಎಂದು ಸ್ವಾಮಿಜಿ ಕೇಳಿದಾಗ ಅಲ್ಲಿ ನೆರೆದಿದ್ದ ಜನರು ಹೊಟ್ಟೆ ಬಿರಿವಂತೆ ನಕ್ಕು ನಲಿದಾಡಿದರು. ಯಾರಿಗೂ ಮನಸ್ಸಿಗೆ ನೋವಾಗದ, ತೇಜೋಭಂಗವಾಗದ ರೀತಿಯಲ್ಲಿ ಉತ್ತರ ಕೊಡುತ್ತಿದ್ದುದು ಸ್ವಾಮಿಜಿಯ ಸ್ವಭಾವ. ಗಂಭೀರವಾಗಿಯೂ ಅವರು ಉತ್ತರ ನೀಡುತ್ತಿದ್ದರು. ಒಮ್ಮೊಮ್ಮೆ ವಿನೋದಪೂರ್ಣವಾದ ಉತ್ತರ ವನ್ನೂ ನೀಡುತ್ತಿದ್ದರು. ಅವರ ಉದ್ದೇಶ ಸಂದೇಹಗ್ರಸ್ತರ ಸಂದೇಹವನ್ನು ದೂರಮಾಡುವುದೇ ಆಗಿತ್ತು.

ಚಿಕಾಗೋ ನಗರದಲ್ಲಿ ೧೧–೯–೧೮೯೩ರಲ್ಲಿ ನಡೆದ ಸರ್ವಧರ್ಮ ಸಮ್ಮೇಳನ ದಲ್ಲಿ ಅವರು ಮಾಡಿದ ಸ್ಫೂರ್ತಿಯುತ ಭಾಷಣವನ್ನು ಪತ್ರಿಕೆಗಳೂ ಜನಸ್ತೋಮವೂ ಮುಕ್ತಕಂಠದಿಂದ ಶ್ಲಾಘಿಸಿದುವು. ಅವರ ಸುಮಧುರ ಗಂಭೀರನಾದ, ಶಕ್ತಿಯುತ ಪದಪುಂಜಗಳು, ವಿಚಾರಪೂರ್ಣವಾದ ನಿರೂಪಣೆ ಇವೆಲ್ಲವೂ ಅವರನ್ನು ಶ್ರೇಷ್ಠ ವಾಗ್ಮಿಯನ್ನಾಗಿ ಮಾಡಿತ್ತು. ಅವರ ಭಾಷಣವನ್ನು ಕೇಳುತ್ತ ಸಭಿಕರು ತದೇಕ ಚಿತ್ತರಾಗುತ್ತಿದ್ದರು, ಸ್ಫೂರ್ತಿಯನ್ನು ಪಡೆಯುತ್ತಿದ್ದರು. ಪೂರ್ವಸಿದ್ಧತೆ ಮಾಡಿ ಕೊಂಡು ಭಾಷಣ ಮಾಡಿದವರಲ್ಲ ಸ್ವಾಮಿಜಿ. ಅವರಿಗೆ ವಾಗ್ಮಿತೆ ದೈವದತ್ತ ವಾಗಿತ್ತು.

ಸ್ವಾಮಿಜಿಯವರಿಗೆ ಅದ್ಭುತವಾದ ಜ್ಞಾಪಕಶಕ್ತಿ ಇತ್ತು. ವೇದೋಪ ನಿಷತ್ತುಗಳಿಂದ ಅನೇಕ ಭಾಗಗಳನ್ನು ಉದಾಹರಿಸುವುದು ಅವರಿಗೆ ಸುಲಭ ವಾಗಿತ್ತು. ಜರ್ಮನಿಯಲ್ಲಿ ಡಾಯಿಸನ್ ಎಂಬ ತತ್ತ್ವಶಾಸ್ತ್ರಜ್ಞರನ್ನು ಸ್ವಾಮಿಜಿ ಭೇಟಿಮಾಡಿ ಅವರೊಡನೆ ಮಾತನಾಡುತ್ತಿದ್ದರು. ಸ್ನೇಹಿತರೊಬ್ಬರು ಬರಲು ಡಾಯಿಸನ್ನರು ಅವರೊಡನೆ ಮಾತನಾಡಲು ತಮ್ಮ ಕೊಠಡಿಯನ್ನು ಬಿಟ್ಟು ಹೋದರು. ಆಗ ಸ್ವಾಮಿಜಿ ಕೊಠಡಿಯಲ್ಲಿದ್ದ ಪುಸ್ತಕವೊಂದನ್ನು ಓದುತ್ತ ಕುಳಿತರು. ಡಾಯಿಸನ್ ಪುನಃ ಕೊಠಡಿಗೆ ಪ್ರವೇಶಮಾಡಿದುದನ್ನೂ ಸ್ವಾಮಿಜಿ ಗಮನಿಸಲಿಲ್ಲ. ಅವರ ಏಕಾಗ್ರತೆಯನ್ನು ಭಂಗಪಡಿಸಬಾರದೆಂದು ಸ್ವಲ್ಪಕಾಲ ಆ ದೃಶ್ಯವನ್ನು ನೋಡುತ್ತ ನಿಂತರು ಡಾಯಿಸನ್ ! ಸ್ವಲ್ಪ ಹೊತ್ತಾದ ಬಳಿಕ ಸ್ವಾಮಿಜಿ ಡಾಯಿಸನ್ನರ ಕ್ಷಮೆ ಕೇಳಿದರು. ಡಾಯಿಸನ್ನರು, "ಸ್ವಾಮಿಜಿ, ನೀವು ಏನು ಓದುತ್ತಿದ್ದಿರಿ ?" ಎಂದು ಪ್ರಶ್ನಿಸಿದಾಗ ತಾವು ಓದಿದ ಪುಸ್ತಕದ ಅನೇಕ ವಾಕ್ಯಗಳನ್ನೇ ಸ್ವಾಮಿಜಿ ಉದಾಹರಿಸಿದರು. ಇಂಥ ಏಕಾಗ್ರತೆಯೂ ಜ್ಞಾಪಕ ಶಕ್ತಿಯೂ ಅವರದಾಗಿತ್ತು. ಒಂದು ಸಲ ಸ್ವಾಮಿಜಿ ಮಿರಾತ್ತಿನ ಪುಸ್ತಕ ಭಂಡಾರ ದಿಂದ ಸರ್‌ಜಾನ್ ಲುಬಕ್ ಅವರ ಕೆಲವು ಪುಸ್ತಕಗಳನ್ನು ಪಡೆದು, ಅವುಗಳನ್ನು ಓದಿ ಮುಗಿಸಿ, ಮರುದಿನ ಪುಸ್ತಕಗಳನ್ನು ಪುಸ್ತಕ ಭಂಡಾರಕ್ಕೆ ಹಿಂದಿರುಗಿಸಿದರು. ಪುಸ್ತಕ ಭಂಡಾರಿಗೆ ಆಶ್ಚರ್ಯವಾಗಿ ಸ್ವಾಮಿಜಿಯನ್ನು ಪರೀಕ್ಷಿಸಲು, ಆ ಪುಸ್ತಕದ

ವಿಚಾರವಾಗಿ ಕೆಲವು ಪ್ರಶ್ನೆಗಳನ್ನು ಕೇಳಿದಾಗ, ಆ ಪುಸ್ತಕದ ವಿಚಾರವನ್ನು ಹೇಳುತ್ತ ಕೆಲವು ವಾಕ್ಯಗಳನ್ನು ಉದಾಹರಿಸಿದ ಬಳಿಕ ಅವರಿಗೆ ಸ್ವಾಮಿಜಿಯ ಅದ್ಭುತ ಮೇಧಾಶಕ್ತಿಯ ಅರಿವಾಯಿತು.

ಶ್ರೇಷ್ಠ ಗುರುವಾದ ಸ್ವಾಮಿಜಿ ತಮ್ಮ ಶಿಷ್ಯವೃಂದವನ್ನು ಸನ್ಮಾರ್ಗದಲ್ಲಿ ಕರೆದೊಯ್ಯಲು ಸಮರ್ಥರಾಗಿದ್ದರು. ಅವರಿಗೆ ಶಿಷ್ಯರಲ್ಲಿ ಅಪಾರ ಪ್ರೇಮವಿತ್ತು. ನ್ಯೂಯಾರ್ಕ್ ನಗರದಲ್ಲಿ ಸಂಚರಿಸುತ್ತಿದ್ದ ಸ್ವಾಮಿಜಿಯವರು ದಲಿತ ಜನರನ್ನು ಕಂಡು ಅವರಿಗೆ ಸಾಧ್ಯವಾದ ನೆರವನ್ನು ನೀಡಿದರೆಂದು ತಿಳಿದಿದೆ. ಅವರ ಪ್ರೀತಿ ಎಲ್ಲೆಡೆಯೂ ವಿಸ್ತರಿಸಿತ್ತು. ಶಿಷ್ಯವರ್ಗಕ್ಕೆ ತಮ್ಮ ಸಂದೇಹಗಳನ್ನು ಪರಿಹರಿಸಿ ಕೊಳ್ಳಲು ಅವಕಾಶ ಅವರು ನೀಡುತ್ತಿದ್ದರು. ಅವರು ಶಿಷ್ಯವರ್ಗಕ್ಕೆ ಅತಿಮುಖ್ಯ ವೆಂದು ಹೇಳುತ್ತಿದ್ದುದು, ಚಾರಿತ್ರ್ಯಶುದ್ಧಿ ಹಾಗೂ ತ್ಯಾಗಮನೋಭಾವ. ಭಿನ್ನ ಭಿನ್ನ ಪ್ರವೃತ್ತಿಯ ಶಿಷ್ಯರಿಗೆ, ಯುಕ್ತವಾದ ರೀತಿಯಲ್ಲಿ ಉಪದೇಶವೀಯುತ್ತಿದ್ದುದು ಸ್ವಾಮಿಜಿಯ ವೈಶಿಷ್ಟ್ಯ. ಗೃಹಸ್ಥ ಶಿಷ್ಯರು ಸಂನ್ಯಾಸಿಗಳಾಗಬೇಕೆಂದು ಅವರು ಎಂದಿಗೂ ಹೇಳುತ್ತಿರಲಿಲ್ಲ. ಅಮೆರಿಕಾದ ಮಹಿಳೆಯೊಬ್ಬರಿಗೆ, "ನಿನ್ನ ಪತಿಯಲ್ಲಿ ಹಾಗೂ ಸಂಸಾರದಲ್ಲಿ ದೇವರನ್ನು ಕಾಣು" ಎಂದು ಅವರು ನುಡಿದರು.

ತಮ್ಮ ಶಿಷ್ಯವರ್ಗವನ್ನು ಬೆಳೆಸಬೇಕೆಂಬ ಅಭಿಲಾಷೆ ಸ್ವಾಮಿಜಿಗಿರಲಿಲ್ಲ. ಅವರಿಗೆ ಅನೇಕರು ಸ್ನೇಹಿತರಿದ್ದರು. ಅವರ ಸ್ನೇಹದಲ್ಲಿ ಹಾಗೂ ಗುರುತ್ವದಲ್ಲಿ ನಿಸ್ವಾರ್ಥದೃಷ್ಟಿ ಇತ್ತು. ಅವರು ಅಮೆರಿಕದಿಂದ ಭಾರತಕ್ಕೆ ಹಿಂದಿರುಗಿದ ಬಳಿಕ ಶ್ರೀ ರಾಮಕೃಷ್ಣ ಮಹಾಸಂಸ್ಥೆಯನ್ನು ಸ್ಥಾಪಿಸಿ, ಸಂನ್ಯಾಸಿ ವೃಂದವನ್ನೂ ಕರ್ಮ ಯೋಗದಲ್ಲಿ ನಿರತರಾಗುವಂತೆ ಮಾಡಿದರು. ಸ್ವಾಮಿ ತುರೀಯಾನಂದರು ಸಾಮಾನ್ಯವಾಗಿ ಅಂತರ್ಮುಖಿಯಾಗಿ ಧ್ಯಾನದಲ್ಲಿರುತ್ತಿದ್ದುದೇ ಹೆಚ್ಚು. ವಿವೇಕಾ ನಂದರು ಎಷ್ಟು ಹೇಳಿದರೂ ಅವರ ಮನಸ್ಸು ಬಹಿರ್ಮುಖವಾಗಲಿಲ್ಲ. ಆಗ ತಮ್ಮ ಸ್ನೇಹಿತರಾದ ತುರೀಯಾನಂದರ ಎದೆಯ ಮೇಲೆ ತಲೆಯಿಟ್ಟು, ಸ್ವಾಮಿಜಿ ಕಣ್ಣೀರು ಸುರಿಸುತ್ತ, 'ನಾನು ಹೆಚ್ಚು ದಿನ ಬದುಕುವುದಿಲ್ಲ. ಶ್ರೀ ರಾಮಕೃಷ್ಣ ಪರಮ ಹಂಸರು ನೇಮಿಸಿದ ಕಾರ್ಯವನ್ನು ನಾವು ಮಾಡಬೇಕಲ್ಲವೆ? ನನ್ನ ಹೊರೆಯನ್ನು ಸ್ವಲ್ಪ ಕಡಿಮೆಮಾಡು" ಎಂದು ಹೇಳಿದಾಗ ಸ್ವಾಮಿ ತುರೀಯಾನಂದರ ಹೃದಯ ಕರಗಿ ಅಮೆರಿಕದಲ್ಲಿ ಶ್ರೀ ರಾಮಕೃಷ್ಣ ಮಹಾಸಂಸ್ಥೆಯ ಕಾರ್ಯವನ್ನು ನಡೆಸಲು ಸಿದ್ಧರಾದರು. ವಿಶ್ವಪ್ರೇಮಿಗಳಾದ ಸ್ವಾಮಿ ವಿವೇಕಾನಂದರ ಸ್ನೇಹದಲ್ಲಿ ಶಕ್ತಿ ಇತ್ತು, ವೈಶಾಲ್ಯವಿತ್ತು.

ರಾಷ್ಟ್ರಭಕ್ತಿ ಸ್ವಾಮಿಜಿಯ ರಕ್ತದ ಕಣಕಣದಲ್ಲಿಯೂ ತುಂಬಿತ್ತು. ಭಾರತದ ಕೋಟಿ ಕೋಟಿ ಜನರು ದಾರಿದ್ರ್ಯ, ಅಜ್ಞಾನ, ರೋಗರುಜಿನಗಳಲ್ಲಿ ಬಳಲುತ್ತಿರುವು ದನ್ನು ಕಂಡು ನೊಂದು, ಅವರ ಉದ್ಧಾರಕ್ಕಾಗಿ ಅವರು ಕಾರ್ಯತತ್ಪರರಾದರು. ಸ್ವತಂತ್ರ ಭಾರತದ ಆದರ್ಶವನ್ನೂ ಸುಖೀರಾಜ್ಯದ ಕಲ್ಪನೆಯನ್ನೂ ಅವರು

ಯೆಂದೋ ಸಖನೆಂದೋ ಭಾವಿಸುತ್ತಾನೆ. ಇದೇ ಭಕ್ತಿಯ ಉದಯಕ್ಕೆ ಕಾರಣ. ಆ ದೈವೀಶಕ್ತಿಗೆ ಮಾನವನು ಒಂದು ಪಾತ್ರವಾಗಿ ದೈವೀಕಾರ್ಯದಲ್ಲಿ ಮಗ್ನನಾದಾಗ, ಜ್ಞಾನ ಲಭಿಸುತ್ತದೆ. ಜ್ಞಾನವೂ ಭಗವದರ್ಪಿತವಾದರೆ ಜ್ಞಾನಯೋಗವಾಗುತ್ತದೆ. ಕರ್ಮ ಭಕ್ತಿ ಜ್ಞಾನಗಳ ಸಮನ್ವಯದಿಂದ ಜೀವನ ಪೂರ್ಣವಾಗುತ್ತದೆ. ಇಂಥ ಪೂರ್ಣದೃಷ್ಟಿಯತ್ತ ಜಗತ್ತು ಸಾಗಿದರೆ ವಿಶ್ವದಲ್ಲಿ ಶಾಂತಿ.

ಸ್ವಾಮಿಜಿಯವರ ಧೈರ್ಯ ಅಸಾಧಾರಣ. ಒಂದು ದಿನ ಇಂಗ್ಲೆಂಡಿನ ಒಂದು ಬಯಲಲ್ಲಿ ಕೆಲವರು ಸ್ನೇಹಿತರೊಡನೆ ಸ್ವಾಮಿಜಿ ನಡೆದು ಹೋಗುತ್ತಿದ್ದರು. ಆಗ ಒಂದು ಗೂಳಿ ಅವರನ್ನು ಅಟ್ಟಿಸಿಕೊಂಡು ಬಂತು. ಸ್ನೇಹಿತರೆಲ್ಲರೂ ದಿಕ್ಕುದಿಕ್ಕಿಗೆ ಓಡಿದರು. ಆ ಗೂಳಿ ಅಲ್ಲಿದ್ದ ಒಬ್ಬ ಮಹಿಳೆಯನ್ನು ಇನ್ನೇನು ತಿವಿಯುವುದರಲ್ಲಿತ್ತು. ಆಗ ಸ್ವಾಮಿಜಿ ಧೈರ್ಯವಾಗಿ ಆ ಗೂಳಿಯನ್ನು ಎದುರಿಸಿದರು. ಆ ಮಹಿಳೆ ಅನಾಹುತದಿಂದ ಪಾರಾದರು! ಅವರ ಧೈರ್ಯಕ್ಕೆ ಕಾರಣ ಅವರ ಆತ್ಮವಿಶ್ವಾಸ. ಭಾರತದ ದೌರ್ಬಲ್ಯಕ್ಕೆ ಆತ್ಮವಿಶ್ವಾಸದ ಅಭಾವವೇ ಮುಖ್ಯ ಕಾರಣವೆಂದರು ಸ್ವಾಮಿಜಿ. ಮನುಷ್ಯನು ಶಕ್ತಿಯನ್ನು ಗಳಿಸುವುದು ಇತರರನ್ನು ತನ್ನ ಗುಲಾಮರನ್ನಾಗಿ ಮಾಡಿಕೊಳ್ಳುವುದಕ್ಕಲ್ಲ; ಪ್ರಕೃತಿಯ ದುರ್ಭರ ಜಟಿಲ ಜಾಲವನ್ನು ಗೆಲ್ಲುವುದಕ್ಕಾಗಿ! ಶರೀರ ಶಕ್ತಿಯೊಡನೆ ಆಧ್ಯಾತ್ಮಿಕ ಶಕ್ತಿಯನ್ನು ಸಮ್ಮಿಳನಗೊಳಿಸಬೇಕು. ನವಭಾರತವನ್ನು ನಿರ್ಮಿಸಲು ನಿಸ್ವಾರ್ಥಿಗಳು ಬೇಕು, ಶ್ರದ್ಧಾವಂತರು ಬೇಕು, ನಿಷ್ಠಾವಂತರು ಬೇಕು, ವಿಶ್ವಪ್ರೇಮದಿಂದ ತುಂಬಿದ ದೃಢಕಾಯರು ಬೇಕು ಎಂದು ಸಾರಿದರು ಸ್ವಾಮಿಜಿ.

ಇತರ ಮತೀಯರನ್ನು ಹಿಂದೂ ಧರ್ಮಕ್ಕೆ ಸೇರಿಸಿ, ಹಿಂದೂಗಳ ಸಂಖ್ಯೆಯನ್ನು ಬೆಳೆಸುವ ಉದ್ದೇಶ ಭಾರತೀಯ ಇತಿಹಾಸದಲ್ಲಿ ಕಂಡುಬರುವುದಿಲ್ಲ. ಹಿಂದೂ ಧರ್ಮವನ್ನು ಪ್ರಸಾರಮಾಡಿದುದು ಕೇವಲ ಸಾಂಸ್ಕೃತಿಕ ದೃಷ್ಟಿಯಿಂದ. ಸ್ವಾಮಿ ವಿವೇಕಾನಂದರ ಬಳಿಗೆ ಬಂದು, ಕೆಲವರು ತಾವು ಹಿಂದೂ ಧರ್ಮಾವಲಂಬಿಗಳಾಗಲು ಉತ್ಕಟ ಅಭಿಲಾಷೆಯನ್ನು ತೋರಿದರು. ಇಂತಹ ವ್ಯಕ್ತಿಗಳನ್ನು ಸ್ವಾಮಿಜಿ ಹಿಂದೂ ಧರ್ಮಕ್ಕೆ ಸೇರಿಸಲು ಹಿಂಜರಿಯಲಿಲ್ಲ. ಚೆನ್ನಾಗಿ ವಿಚಾರಮಾಡಿ ಸತ್ಯವೆಂದು ಕಂಡುದನ್ನು ಸ್ವಾಮಿಜಿ ಅನುಸರಿಸುತ್ತಿದ್ದರು. ಸೋದರಿ ನಿವೇದಿತಾ, ಕೃಪಾನಂದ, ಅತುಲಾನಂದ, ವಿರಜಾದೇವಿ, ಅಭಯಾನಂದ ಇವರೆಲ್ಲರೂ ಸ್ವಾಮಿಜಿಯ ನೇತೃತ್ವದಲ್ಲಿ ವಿಧಿಪೂರ್ವಕವಾಗಿ ಹಿಂದೂಧರ್ಮವನ್ನು ಸ್ವೀಕರಿಸಿದರು.

ವಿಚಾರ ಮತ್ತು ವೈಜ್ಞಾನಿಕ ದೃಷ್ಟಿ—ಇವೆರಡೂ ಸ್ವಾಮಿಜಿಯವರಲ್ಲಿದ್ದುವು. ತಮ್ಮ ಗುರುವಾದ ಶ್ರೀ ರಾಮಕೃಷ್ಣ ಪರಮಹಂಸರನ್ನೂ ಅವರು ಪರೀಕ್ಷಿಸಿದರು. ಕಾಮಕಾಂಚನಗಳನ್ನು ತೊರೆದ ಪರಮಹಂಸರು ನಿಜವಾಗಿಯೂ ಅವುಗಳನ್ನು ತ್ಯಜಿಸಿರುವರೋ ಎಂಬುದನ್ನು ಪರೀಕ್ಷಿಸಲು ಒಂದು ದಿನ ಅವರ ಕೊಠಡಿಯ

3

ಚಾಪೆಯ ಕೆಳಗಡೆ ಒಂದು ರೂಪಾಯಿ ನಾಣ್ಯವನ್ನು ಸ್ವಾಮಿಜಿ ಬಚ್ಚಿಟ್ಟರು. ಪರಮಹಂಸರು ಹೊರಗಡೆ ಹೋಗಿದ್ದವರು ಕೊಠಡಿಗೆ ಕಾಲಿಟ್ಟೊಡನೆ ಅವರಿಗೆ ಯಾತನೆಯಾಯಿತು. ಕೊಠಡಿಯನ್ನು ಶುದ್ಧಗೊಳಿಸಿದಾಗ, ಚಾಪೆಯಿಂದ 'ಟಣ್' ಎಂದು ನಾಣ್ಯ ಬಿತ್ತು. ಅದನ್ನು ತೆಗಿಸಿದ ಬಳಿಕ ಪರಮಹಂಸರು ನಿರಾತಂಕವಾಗಿ ಕೊಠಡಿಯನ್ನು ಪ್ರವೇಶಿಸಿದರು. ಈ ಎಲ್ಲ ದೃಶ್ಯವನ್ನೂ ಸ್ವಾಮಿಜಿ ಸ್ವತಃ ನೋಡಿದ ಬಳಿಕ ಪರಮಹಂಸರು ತ್ಯಾಗಿಗಳೆಂಬುದನ್ನು ಪ್ರಜ್ಞಾಪೂರ್ವಕವಾಗಿ ಅರಿತರು. ಸ್ವಾಮಿಜಿ ಇನ್ನೂ ವಿದ್ಯಾರ್ಥಿಗಳಾಗಿದ್ದಾಗಲೇ ಈ ಪರೀಕ್ಷೆ ಅವರು ನಡೆಸಿದ್ದು! ತಮ್ಮ ಶಿಷ್ಯರಿಗೂ ಸ್ನೇಹಿತರಿಗೂ ವಿಚಾರ ಹಾಗೂ ವೈಜ್ಞಾನಿಕ ದೃಷ್ಟಿಯ ಆವಶ್ಯಕತೆಗಳನ್ನು ಅವರು ವಿಶದಪಡಿಸುತ್ತಿದ್ದರು. ಭಾರತದಲ್ಲಿ ಮನೋವಿಜ್ಞಾನ ಬಹು ಪ್ರಾಚೀನ ಕಾಲದಿಂದಲೂ ಬೆಳೆದುಬಂದಿದೆ. ಋಷಿಗಳು ಭ್ರಾಂತಿಜನ್ಯವಾದ ಧರ್ಮವನ್ನು ವೇದ ಮತ್ತು ಉಪನಿಷತ್ತುಗಳಲ್ಲಿ ಬೋಧಿಸಲಿಲ್ಲ. ಋಷಿಗಳ ದೃಷ್ಟಿಯಲ್ಲಿ ಪ್ರಧಾನವಾದುದು ವಿಚಾರ ಮತ್ತು ವಿವೇಕ. ವೈಜ್ಞಾನಿಕ ದೃಷ್ಟಿಯತ್ತ ಭಾರತೀಯರ ಗಮನವನ್ನು ಸೆಳೆದ ಸ್ವಾಮಿಜಿ, ವಿಜ್ಞಾನವೇ ಜೀವನದ ಸರ್ವಸ್ವವೆಂದಾಗಲಿ, ವಿಜ್ಞಾನ ಹೇಳಿದುದೇ ಪೂರ್ಣಸತ್ಯವೆಂದಾಗಲಿ ಭಾವಿಸಬಾರದೆಂಬ ಎಚ್ಚರಿಕೆಯನ್ನೂ ನೀಡಿದರು. ಡಾರ್ವಿನ್ನನ ವಾದವನ್ನು ಪ್ರಾಣಿ ಮತ್ತು ಸಸ್ಯವರ್ಗಗಳಿಗೆ ಅನ್ವಯಿಸಬಹುದಾದರೂ ಮಾನವಜೀವನಕ್ಕೆ ಸಂಪೂರ್ಣವಾಗಿ ಅನ್ವಯಿಸಲಾಗುವುದಿಲ್ಲವೆಂಬುದು ಸ್ವಾಮಿಜಿಯ ದೃಷ್ಟಿ. ಮನುಷ್ಯನು ಪ್ರಗತಿ ಪಥದಲ್ಲಿ ಮುಂಬರಿಯಲು ಇತರರ ನಾಶಮಾಡಬೇಕಾಗಿಲ್ಲ. ತ್ಯಾಗದಿಂದಲೆ ಮಹಾ ಪುರುಷರು ಪ್ರಬುದ್ಧರಾದರು, ಬಾಳಿದರು, ಇತರರಿಗೆ ಬೆಳಕನ್ನು ನೀಡಿದರು. ವಿಜ್ಞಾನ ನುಡಿವುದೆಲ್ಲ ಸತ್ಯವಲ್ಲ. ವೈಜ್ಞಾನಿಕ ದೃಷ್ಟಿಯ ಉತ್ತಮಾಂಶಗಳನ್ನು ಮಾತ್ರ ಸ್ವೀಕರಿಸುವುದರಲ್ಲಿ ಮಾನವಕುಲದ ಅಭ್ಯುದಯವಿದೆ. ಪಾಶ್ಚಿಮಾತ್ಯ ದೇಶಗಳಿಂದ ಭಾರತೀಯರು ವೈಜ್ಞಾನಿಕ ಪ್ರಗತಿಯನ್ನು ಅರಿಯಬೇಕು. ಆ ದೇಶಗಳಿಗೆ ಭಾರತ ಅಧ್ಯಾತ್ಮವನ್ನು ನೀಡಬೇಕು. ಹೀಗೆ ಪರಸ್ಪರ ದೃಷ್ಟಿಸಮ್ಮೇಳನದಿಂದ ವಿಶ್ವಕ್ಕೆ ಪರಮಶ್ರೇಯಸ್ಸು. ಸನಾತನಧರ್ಮವೆಂದರೆ ಕೊಳೆತು ನಾರುವುದಲ್ಲ. ಬೆಳೆದು ನವದೃಷ್ಟಿಯನ್ನು ಪಡೆಯುವುದು. ಶ್ರೀ ರಾಮಕೃಷ್ಣ ಮಹಾ ಸಂಸ್ಥೆ ಈ ನವದೃಷ್ಟಿಯ ದ್ಯೋತಕ.

ವಿದ್ಯಾಭ್ಯಾಸದ ವಿಚಾರವಾಗಿಯೂ ಸ್ವಾಮಿಜಿ ಕೆಲವು ಉತ್ತಮ ಸಲಹೆಗಳನ್ನು ನೀಡಿದ್ದಾರೆ. ಮಾನವನಲ್ಲಿ ಅಂತರ್ಗತವಾಗಿರುವ ಪೂರ್ಣತೆಯ ವಿಕಾಸವೇ ವಿದ್ಯೆ. ವಿದ್ಯಾಭ್ಯಾಸದಿಂದ ಮನುಷ್ಯನ ಇಚ್ಛಾಶಕ್ತಿ ವೃದ್ಧಿಯಾಗಬೇಕು. ಕೇವಲ ವಿಷಯಸಂಗ್ರಹವೇ ವಿದ್ಯೆಯಲ್ಲ. ವಿಷಯಸಂಗ್ರಹ ಪುಸ್ತಕಗಳಿಂದ ಮಾಡಬಹುದು. ಆದರೆ ಪುಸ್ತಕಗಳಿಂದಲೆ ಸಂಗ್ರಹಿಸುವ ವಿಷಯಗಳಿಂದ ಮನುಷ್ಯ ವಿದ್ಯಾವಂತನಾಗುವುದಿಲ್ಲ. ಹಾಗೆ ಸಂಗ್ರಹಿಸಿದ ಸದ್ಭಾವನೆಗಳು ಹೃದ್ಗತವಾಗಿ

ಕಾರ್ಯರೂಪಕ್ಕೆ ಬಂದಾಗ ಮಾತ್ರ ವಿದ್ಯೆಯಾಗುತ್ತದೆ. ಐದು ಭಾವನೆಗಳನ್ನು ಹೃದ್ಗತಮಾಡಿಕೊಂಡು ಅವುಗಳನ್ನು ಜೀವನದಲ್ಲಿ ಕಾರ್ಯರೂಪಕ್ಕೆ ತರುವವನು ಒಂದು ಪುಸ್ತಕ ಭಂಡಾರವನ್ನೆ ಬಾಯಿಯಲ್ಲಿ ಹೇಳುವ ಪಂಡಿತನಿಗಿಂತ ಹೆಚ್ಚಿನ ವಿದ್ಯೆ ಪಡೆಯುತ್ತಾನೆ. ವಿದ್ಯಾಭ್ಯಾಸದಲ್ಲಿ ಮುಖ್ಯವಾದುದು ಏಕಾಗ್ರತೆ, ಅದರೊಡನೆ ಮನೋನಿಗ್ರಹ. ಇಂದಿನ ವಿದ್ಯಾಭ್ಯಾಸ ಪದ್ಧತಿಯಲ್ಲಿ ಇವೆರಡಕ್ಕೆ ಸಾಕಷ್ಟು ಗಮನವಿಲ್ಲದಂತಾಗಿದೆ. ವಿದ್ಯೆಯನ್ನು ಮಾರುವ ಯೋಚನೆ ಗುರುವಾದವನಿಗೆ ಸಲ್ಲದು. ಗುರುವಿನಲ್ಲಿರಬೇಕಾದ ಗುಣಗಳೆಂದರೆ ಜ್ಞಾನ, ಶುಚಿಶೀಲ, ವಿಶ್ವಪ್ರೇಮ. ಭಾವಶುದ್ಧಿ, ಸ್ವಾಧ್ಯಾಯ, ಅಭೀಪ್ಸೆ-ಇವು ಮೂರು ಶಿಷ್ಯನಲ್ಲಿರಬೇಕಾದ ಶಕ್ತಿತ್ರಯಗಳು. ರಾಷ್ಟ್ರದಲ್ಲಿ ಬಡವರು ಶಾಲೆಗಳಿಗೆ ಬರುವುದಕ್ಕೆ ಅಸಾಧ್ಯವಾದಾಗ ಶಾಲೆಯೇ ಬಡವರ ಬಳಿಗೆ ಹೋಗಬೇಕೆಂದರು ಸ್ವಾಮಿಜಿ. ಹಳ್ಳಿಹಳ್ಳಿಯಲ್ಲಿ ಆರೋಗ್ಯ ಮತ್ತು ನಾಡಿನ ಸಂಸ್ಕೃತಿಗಳನ್ನು ತಿಳಿಸುವ ಚಲನಚಿತ್ರಗಳನ್ನು ಪ್ರದರ್ಶಿಸಬೇಕು. ದರಿದ್ರರನ್ನು ನಾರಾಯಣರೆಂದು ಕಂಡು ಅವರಿಗೆ ಸೇವೆ ಸಲ್ಲಿಸಿದರೆ ಭಾರತದ ನಿಜವಾದ ಅಭ್ಯುದಯ. ದೇಶದಲ್ಲಿ ನಾಯಿಯೊಂದು ಹಸಿದಿದ್ದರೂ ಅದಕ್ಕೆ ಆಹಾರವನ್ನು ಒದಗಿಸುವುದು ಧರ್ಮ. ಹೃದಯವಿಲ್ಲದ ವಿದ್ಯಾಭ್ಯಾಸ ವ್ಯರ್ಥ, ಅದು ಮಹಾವಂಚನೆ ಎಂದರು ಸ್ವಾಮಿಜಿ.

ಭಾರತದ ಜನಸಾಮಾನ್ಯರ ಉದ್ಧಾರವಾಗಬೇಕೆಂಬ ದೃಢನಿಶ್ಚಯ ಸ್ವಾಮಿಜಿಯವರದು. ಮೈಸೂರಿನಲ್ಲಿ ಮಹಾರಾಜರನ್ನು ಸ್ವಾಮಿಜಿ ಕಂಡಾಗ, "ಸನ್ಮಾನ್ಯ ಮಹಾರಾಜರೆ, ಜೀವನ ತುಂಬ ಸಂಕ್ಷಿಪ್ತ. ಜಗತ್ತಿನ ಸುಖವೈವಿಧ್ಯಗಳು ಕ್ಷಣಿಕ. ಲೋಕಕ್ಷೇಮವನ್ನು ಚಿಂತಿಸುವವರೆ ನಿಜವಾದ ಮಾನವರು. ಉಳಿದವರು ಬದುಕಿರುವುದಕ್ಕಿಂತ ಹೆಚ್ಚಾಗಿ ಸತ್ತಂತೆಯೇ! ನಿಮ್ಮಂಥ ಖ್ಯಾತ ಮಹಾರಾಜರು ಭಾರತದ ಉದ್ಧಾರಕ್ಕಾಗಿ ಹೆಚ್ಚಿನ ಸೇವೆ ಸಲ್ಲಿಸುವಿರೆಂದು ಭಾವಿಸಿದ್ದೇನೆ" ಎಂದು ನುಡಿದರು. ಅಜ್ಞಾನ ಹಾಗೂ ಹಸಿವಿನಲ್ಲಿ ನರಳುವ ಲಕ್ಷಾಂತರ ಜನರನ್ನು ಕಂಡು, ಅವರಿಗಾಗಿ ಸ್ವಲ್ಪವೂ ಮರುಗದವರನ್ನು ದೇಶದ್ರೋಹಿಗಳೆಂದು ಕರೆದರು ಸ್ವಾಮಿಜಿ.

ಸಂಕುಚಿತ ದೃಷ್ಟಿಯಿಂದ ಎಂದಿಗೂ ಅಭ್ಯುದಯವಿಲ್ಲ. ಮೌಢ್ಯ ಮತ್ತು ಕುರುಡು ಸಂಪ್ರದಾಯದಲ್ಲಿ ಸಮಾಜವು ಬದ್ಧವಾದರೆ ದೇಶಕ್ಕೆ ಮಹಾವಿಪತ್ತು ಸಂಭವಿಸುವುದು. ಹುಟ್ಟಿನಿಂದಲೇ ಜಾತಿಯನ್ನು ನಿಷ್ಕರ್ಷೆ ಮಾಡಬೇಡಿ; ಗುಣಕರ್ಮದಂತೆ! ಪ್ರತಿಯೊರ್ವ ವ್ಯಕ್ತಿಯೂ ತನ್ನ ಸ್ವಧರ್ಮದಂತೆ ಕರ್ಮದಲ್ಲಿ ಪ್ರವೃತ್ತವಾಗಲಿ. ಸ್ಥಾನಭದ್ರತೆಗಾಗಿ ನಾನಾ ಪ್ರಯತ್ನಗಳನ್ನು ಮಾಡುವ ಅಧ್ಯಾಪಕನು ಬ್ರಾಹ್ಮಣನಲ್ಲ, ಶೂದ್ರ; ಹಣಸಂಪಾದನೆಗಾಗಿಯೇ ಪುಸ್ತಕಗಳನ್ನು ಬರೆಯುವವನು ಬ್ರಾಹ್ಮಣನಲ್ಲ, ವೈಶ್ಯ; ಆದರೆ ಕೂಲಿಮಾಡುವವನು ನಿರ್ಮಲನೂ ಭಗವದ್ಭಕ್ತನೂ ಆದರೆ ಅವನೇ ನಿಜವಾದ ಬ್ರಾಹ್ಮಣ ಎಂದರು ಸ್ವಾಮಿಜಿ. ಬ್ರಾಹ್ಮಣನಾಗಲು ವೃತ್ತಿಯಲ್ಲ ಮುಖ್ಯ, ಹೃದಯದ ನೈರ್ಮಲ್ಯ ಮತ್ತು ಭಗವದ್ಭಕ್ತಿ. ಹಿಂದೂ

ಧರ್ಮದ ಆದರ್ಶವೇ ಬ್ರಾಹ್ಮಣ್ಯ ! ಬ್ರಾಹ್ಮಣರನ್ನು ಗೌರವಿಸಿ, ಬ್ರಾಹ್ಮಣರಾಗಲು ಯತ್ನಿಸಿ ಎಂದು ಘೋಷಿಸಿದರು ಸ್ವಾಮಿಜಿ.

ಸ್ವಾಮಿಜಿಯವರ ಮನೋಧರ್ಮವನ್ನು ಅವರ ಕೃತಿಗಳಿಂದಲೂ ಅವರ ಜೀವನದ ಮಹತ್ಕಾರ್ಯಗಳಿಂದಲೂ ಅರಿಯಬೇಕು. ಆಕಾಶದಂತೆ ವಿಸ್ತಾರವೂ ಭವ್ಯವೂ ಆದ ಅವರ ಪ್ರತಿಭೆಯ ಬಹುಮುಖಗಳನ್ನು ಒಂದು ಪುಟ್ಟ ಕನ್ನಡಿ ಪ್ರತಿಬಿಂಬಿಸುವುದು ಸಾಧ್ಯವೆ ?

—ಉ. ಕಾ. ಸುಬ್ಬರಾಯಾಚಾರ್

ರಾಷ್ಟ್ರ ನಿರ್ಮಾಪಕ ಸ್ವಾಮಿ ವಿವೇಕಾನಂದ

ಸ್ವಾಮಿ ವಿವೇಕಾನಂದರ ಹೆಸರನ್ನು ಕೇಳಿದಾಗ ನಮ್ಮ ಮನಸ್ಸಿನಲ್ಲಿ ಒಂದು ಚಿತ್ರ ಮೂಡುವುದು. ಅದೇ ದ್ವಾಪರಯುಗದ ಅಂತ್ಯದ ಕುರುಕ್ಷೇತ್ರ ಸಮರಾಂಗಣದ ದೃಶ್ಯ. ಅರ್ಜುನನ ಕೈಯಿಂದ ಗಾಂಢೀವ ಜಾರಿಹೋಗಿದೆ, ಕಣ್ಣುಗಳಲ್ಲಿ ನೀರು, ಅವನು ಕಿಂಕರ್ತವ್ಯಮೂಢನಾಗಿ ವಿಷಾದದಲ್ಲಿ ಮುಳುಗಿ ಹೋಗಿದ್ದಾನೆ. ಅವನ ಕ್ಷಾತ್ರಪೌರುಷದ ಅಗ್ನಿಕುಂಡದ ಮೇಲೆ ವೈರಾಗ್ಯದ ಬೂದಿ ಮುಸುಕಿಕೊಂಡಿದೆ. ಶ್ರೀಕೃಷ್ಣ ಪಾಂಚಜನ್ಯದಿಂದ ಊದಿ, ಅಗ್ನಿಕುಂಡವನ್ನು ಕುಲಕುವಂತಹ ಪೌರುಷದ ಸಲಾಕಿಯನ್ನೇ ಉಪಯೋಗಿಸಿ ಅವನನ್ನು ಕಾರ್ಯೋನ್ಮುಖನನ್ನಾಗಿ ಮಾಡುವ ಈ ಮುಂದಿನ ಶ್ಲೋಕ ನಮ್ಮ ನೆನಪಿಗೆ ಬರುವುದು :

ಕುತಸ್ತ್ವಾ ಕಶ್ಮಲಮಿದಂ ವಿಷಮೇ ಸಮುಪಸ್ಥಿತಮ್
ಅನಾರ್ಯ ಜುಷ್ಟಮಸ್ವರ್ಗ್ಯಮಕೀರ್ತಿಕರಮರ್ಜುನ ॥
ಕ್ಲೈಬ್ಯಂ ಮಾ ಸ್ಮ ಗಮಃ ಪಾರ್ಥ ನೈತತ್ತ್ವಯ್ಯುಪಪದ್ಯತೇ
ಕ್ಷುದ್ರಂ ಹೃದಯ ದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ ಪರಂತಪ ॥

"ಆರ್ಯರಿಗೆ ಅಯೋಗ್ಯವೂ ಸ್ವರ್ಗಗತಿಗೆ ವಿರೋಧವೂ, ಅಪಕೀರ್ತಿಯನ್ನುಂಟುಮಾಡುವುದೂ ಆದ ಈ ಮೋಹವು ಇಂತಹ ವಿಷಮ ಸಮಯದಲ್ಲಿ ನಿನಗೆ ಹೇಗೆ ಬಂತು ? ಎಲೈ ಅರ್ಜುನ ! ಷಂಡತನವನ್ನು ಹೊಂದಬೇಡ. ಇದು ನಿನಗೆ ಯೋಗ್ಯವಲ್ಲ. ಎಲೈ ಶತ್ರುತಾಪನನೆ ತುಚ್ಛವಾದ ಮನಸ್ಸಿನ ದೌರ್ಬಲ್ಯವನ್ನು ಬಿಟ್ಟು ಏಳು."

ಅಲ್ಲಿ ಶ್ರೀಕೃಷ್ಣ ಅರ್ಜುನನೊಬ್ಬನನ್ನು ಕಾರ್ಯೋನ್ಮುಖನನ್ನಾಗಿ ಮಾಡುವನು ತನ್ನ ಗೀತೆಯ ಬೋಧನೆಯಿಂದ. ಸ್ವಾಮಿ ವಿವೇಕಾನಂದರು ಅರ್ಜುನನ ಸ್ಥಿತಿಗೆ ಇಳಿದಿದ್ದ ಭಾರತೀಯರನ್ನೆಲ್ಲ ತಮ್ಮ ಪಾಂಚಜನ್ಯಸದೃಶವಾದ ವಾಣಿಯಿಂದ ಜಾಗ್ರತರನ್ನಾಗಿ ಮಾಡಬೇಕಾಯಿತು.

ಎಂತಹ ಹೀನಸ್ಥಿತಿಗೆ ಇಳಿದಿದ್ದರು ನಮ್ಮ ಭಾರತೀಯರು ಆ ಕಾಲದಲ್ಲಿ. ಮೂವತ್ತು ಕೋಟಿ ತಮಸ್ಸಿನ ಕೆಸರಿನಲ್ಲಿ ಸಿಕ್ಕಿಹೋಗಿದ್ದರು. ಇಂದಿನದನ್ನು ಎದುರಿಸುವುದಕ್ಕೆ ಧೈರ್ಯವಿಲ್ಲ; ಮುಂದಿನದನ್ನು ನಿರ್ಮಿಸುವುದಕ್ಕೆ ಉತ್ಸಾಹವಿಲ್ಲ; ನಮ್ಮನ್ನು ಮುತ್ತಿಕಿತ್ತು ತಿನ್ನುತ್ತಿರುವ ಕಷ್ಟಪರಂಪರೆಗಳೊಂದಿಗೆ ಹೋರಾಡುವ ಛಲವಿಲ್ಲ, ನಮಗಾಗುತ್ತಿರುವ ಅವಮಾನಗಳನ್ನು ಇದು ನಮ್ಮ ಹಣೆಯಬರಹ ಎಂದು ಕೈಕಟ್ಟಿಕೊಂಡು ಸ್ವೀಕರಿಸುವ ಷಂಡಮನೋಭಾವ. ತಮ್ಮಲ್ಲಿ ಶ್ರದ್ಧೆಯಿಲ್ಲ, ಭರತಖಂಡದ ಭವಿಷ್ಯದಲ್ಲಿ ಶ್ರದ್ಧೆಯಿಲ್ಲ. ಇಂತಹ ಪ್ರಕೃತಿಯ ಜನರ ಮಂದೆಯನ್ನು ಜಾಗ್ರತಗೊಳಿಸುವುದಕ್ಕೆ, ನರಕುರಿಗಳೆದೆಯಲ್ಲಿ ಸಿಂಹ ಪರಾಕ್ರಮವನ್ನು ಬೀರುವು

ದಕ್ಕೆ, ಜೀವನವನ್ನು ಒಂದು ವರದಂತೆ ಭಾವಿಸಿ ಸಾಹಸದಿಂದ ಬಾಳುವುದಕ್ಕೆ, ಸೃಷ್ಟಿಕರ್ತನೇ ಶಕ್ತಿಸಮುದ್ರದಿಂದ ಒಂದು ಭೀಮ ಅಲೆಯನ್ನು ಎಸೆದಂತಿದೆ ವಿವೇಕಾನಂದರ ವ್ಯಕ್ತಿತ್ವ.

ಭರತಖಂಡದಲ್ಲಿ ತತ್ತ್ವಕ್ಕೆ ಬರಗಾಲವಿಲ್ಲ, ಸಿದ್ಧಾಂತಗಳಿಗೆ ಕೊರತೆಯಿಲ್ಲ. ಹಿಂದಿನಿಂದ ಬಂದ ಆಚಾರ್ಯಪರಂಪರೆ ಶ್ರೇಷ್ಠವರ್ಗಕ್ಕೆ ಸೇರಿದ ತಾತ್ತ್ವಿಕ ಗ್ರಂಥಗಳನ್ನು ರಚಿಸಿದೆ. ನಮ್ಮ ಒಂದು ಕೊರತೆ ಎಂದರೆ ಅದು ಅನುಷ್ಠಾನ ಪ್ರಪಂಚದಲ್ಲಿ ಪ್ರವೇಶಿಸದೇ ಇದ್ದುದು. ಗೀತೆ ಉಪನಿಷತ್ತು ಮುಂತಾದುವುಗಳು ಪರಲೋಕದ ಸಂಧಾನಕ್ಕೆ ಎಂಬ ಭಾವ ಮೂಡಿಹೋಗಿತ್ತು ನಮ್ಮ ಜನರಲ್ಲಿ. ಸ್ವಾಮಿವಿವೇಕಾನಂದರು ಅದನ್ನು ಬಿಡಿಸಿದರು. ಗೀತೋಪನಿಷತ್ತಿನ ಸಂದೇಶ ನಮ್ಮ ನಮ್ಮ ಮುಕ್ತಿಗೆ ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ಪ್ರಪಂಚದಲ್ಲಿ ಗೌರವದಿಂದ ಬಾಳಬೇಕೆಂದು ಆಶಿಸುವವನಿಗೆ. ನಮ್ಮ ಕಣ್ಣೆದುರಿಗೆ ಇರುವ ಪ್ರಪಂಚದಲ್ಲಿ ಹೀಗೆ ಧೀರರಾಗಿರಬೇಕು, ಸಾಹಸದಿಂದ ಬಾಳಬೇಕು, ಪೌರುಷದಿಂದ ಇರಬೇಕು ಎಂಬುದನ್ನು ಅದು ಬೋಧಿಸುವುದು. ಗೀತೆ ಹುಟ್ಟಿದ್ದೇ ಇದಕ್ಕೆ. ಅರ್ಜುನನಿಗೆ ವೈರಾಗ್ಯ ಬಂದಾಗ ಶ್ರೀಕೃಷ್ಣ ಅದನ್ನು ಶ್ಲಾಘಿಸಿ ಹೋಗು ಹಿಮಾಲಯಕ್ಕೆ ತಪಸ್ಸು ಮಾಡುವುದಕ್ಕೆ ಎನ್ನಲಿಲ್ಲ. ಅದಕ್ಕೆ ವ್ಯತಿರಿಕ್ತವಾಗಿ ಬಿಸುಟ ಗಾಂಢೀವ ವನ್ನು ಧರಿಸುವಂತೆ ಮಾಡುವನು. ಬಾಣಗಳ ಮಳೆಯನ್ನು ಅದರ ಮೂಲಕ ಸುರಿಸುವಂತೆ ಮಾಡುವನು. ಬಂಧುಬಾಂಧವರು ಗುರುಹಿರಿಯರು ಯಾರಾದರೂ ಆಗಲಿ ಅಧರ್ಮಕ್ಕೆ ಸಹಾಯಕರಾಗಿ ನಿಂತರೆ ನಿಸ್ಸಂಕೋಚವಾಗಿ ಅವರನ್ನು ತರಿದುಬಿಸುಡುವಂತೆ ಮಾಡುವನು. ಇಂತಹ ಕರ್ಮವನ್ನು ಪ್ರೋತ್ಸಾಹಿಸು ವಂತಹ ತತ್ತ್ವ ನಮಗೆ ಗೀತೆಯಲ್ಲಿ ದೊರಕುವುದು.

ಸ್ವಾಮಿ ವಿವೇಕಾನಂದರು ಭವಜೀವಿಗಳಿಗೆ ದಾರಿ ಬೆಳಕಾಗಬಲ್ಲಂತಹ ಆಧ್ಯಾತ್ಮಿಕ ಸತ್ಯಗಳನ್ನು ನಮ್ಮ ಭರತಖಂಡ ನೀಡಿದ್ದರೂ ನಮ್ಮ ನಾಡು ಈಗ ಇಂತಹ ಅಧೋಗತಿಗೆ ಬರುವುದಕ್ಕೆ ಕಾರಣಗಳನ್ನು ಕುರಿತು ಆಲೋಚಿಸ ತೊಡಗಿದರು. ಅದನ್ನು ಕಂಡುಹಿಡಿದರು, ಅದಕ್ಕೆ ಮದ್ದನ್ನೂ ಕಂಡುಹಿಡಿದರು. ಅದನ್ನು ಅಷ್ಟೇ ನಿಸ್ಸಂಕೋಚವಾಗಿ ಪ್ರಯೋಗಮಾಡಿದರು. ಶಸ್ತ್ರ ಚಿಕಿತ್ಸಕನ ಕೈಯಲ್ಲಿರುವ ಶಸ್ತ್ರದಂತಿದೆ ಅವರ ಮಾತು ; ಹರಿತವಾಗಿ, ಕೆಲವು ವೇಳೆ ನೋವನ್ನೂ ಉಂಟುಮಾಡುತ್ತದೆ. ಆದರೆ ಇದು ರೋಗಿಯನ್ನು ಗುಣಮಾಡುವುದಕ್ಕೆ ವಿನಾ ವೃಥಾ ನೋವನ್ನು ಕೊಟ್ಟು ತಾವು ಆನಂದಿಸಬೇಕು ಎಂದಲ್ಲ.

ತಾತ್ತ್ವಿಕ ಪ್ರಪಂಚದಲ್ಲಿ ನಮ್ಮಷ್ಟು ಮೀರಿಹೋದವರು ಮತ್ತೊಬ್ಬರಿಲ್ಲ. ಸರ್ವವೂ ಬ್ರಹ್ಮಮಯ ಎಂದು ಸಾರಿದೆವು. ಎಲ್ಲರಲ್ಲಿಯೂ ಒಂದೇ ಪರಮಾತ್ಮ ನೆಲೆಸಿರುವುದು ಎಂದು ಸಾರಿದೆವು. ಆದರೆ ವ್ಯವಹಾರದಲ್ಲಿ ನೋಡಿದರೆ ಎಷ್ಟು ವ್ಯತ್ಯಾಸ ! ಪರೆಯ ಹತ್ತಿರ ಬಂದರೆ ನಾವು ಮೈಲಿಗೆ ಆಗಿಹೋಗುತ್ತೇವೆ ಎಂದು

ಭಾವಿಸಿದೆವು. ಕೀಳುವರ್ಗದವರಿಗೆ ಯಾವ ಉತ್ತಮ ಬೋಧನೆಯನ್ನೂ ಕೊಡಲಿಲ್ಲ. ರಸಾನ್ನವನ್ನು ನಾವುಂಡು ಕದನ್ನವನ್ನು ಅವರಿಗೆ ಕೊಟ್ಟೆವು. ಹಾಗೆ ಮಾಡುವುದಕ್ಕೆ ನಾವು ವಿಚಿತ್ರವಾದ ವಿವರಣೆಗಳನ್ನು ಕಂಡುಹಿಡಿದೆವು. ನಮಗೂ ಅವರಿಗೂ ಇರುವ ಅಂತರ ಹೆಚ್ಚುವುದಕ್ಕೆ ಏನುಬೇಕೊ ಅದನ್ನು ಮಾಡಿದೆವು. ಅನ್ಯಧರ್ಮದವರು ಬಂದು ನಮ್ಮವರನ್ನೇ ತಮ್ಮ ಧರ್ಮಕ್ಕೆ ಸೇರಿಸಿಕೊಳ್ಳುತ್ತಿದ್ದರೆ ಅವನ್ನು ತಡೆಗಟ್ಟುವುದಕ್ಕೆ ಯಾವ ಪ್ರಯತ್ನವನ್ನೂ ಮಾಡಲಿಲ್ಲ. ನಮ್ಮ ಧರ್ಮ ಬಿಟ್ಟು ಅನ್ಯಧರ್ಮಕ್ಕೆ ಸೇರಿದ ಪ್ರತಿಯೊಬ್ಬ ವ್ಯಕ್ತಿಯಿಂದ ನಮ್ಮ ಧರ್ಮಕ್ಕೆ ಅವನ ಒಂದು ಸಂಖ್ಯೆ ಕಡಿಮೆ ಆಗಿರುವುದು ಮಾತ್ರವಲ್ಲ, ನಮ್ಮ ಧರ್ಮವನ್ನು ವಿರೋಧಿಸುವ ಒಬ್ಬ ವೈರಿ ಹೆಚ್ಚಿರುವನು ಎಂಬುದನ್ನು ಗಮನಿಸಿ ಎಂದು ಸ್ವಾಮಿಜಿ ಅವರು ನಮಗೆ ಅಂದು ಜಾಗರೂಕತೆ ಕೊಟ್ಟರು. ನಮ್ಮ ಅಸಹಿಷ್ಣುತೆ ನಿರ್ದಯತೆಗಳಿಂದಲೇ ನಮ್ಮ ದೇಶದಲ್ಲಿ ಬೃಹದಾಕಾರದ ಸಮಸ್ಯೆ ಏಳುವಂತೆ ಮಾಡಿಕೊಂಡಿರುವೆವು. ಮೇಲಿರುವವರು ಕೆಳಗೆ ಇರುವವರನ್ನು ಮೇಲೆತ್ತಲು ಬರಬೇಕು. ಅನ್ಯಧರ್ಮಕ್ಕೆ ಪಾಲಾದವರು ಪುನಃ ನಮ್ಮ ಧರ್ಮಕ್ಕೆ ಬರಲು ಯತ್ನಿಸಿದರೆ ಅವರಿಗಾಗಿ ನಮ್ಮ ಧರ್ಮದ ಬಾಗಿಲುಗಳನ್ನು ತೆರೆಯಬೇಕು ಎಂದರು ವಿವೇಕಾನಂದರು.

ನಮ್ಮ ಶಾಸ್ತ್ರಗಳಲ್ಲಿ ಮುಖ್ಯಾಂಶಗಳಿಗೆ ಗೌಣ ಅಂಶಗಳಿವೆ. ಯಾವುದಕ್ಕೆ ಹೆಚ್ಚುಬೆಲೆ ಕೊಡಬೇಕು, ಯಾವುದಕ್ಕೆ ಕಡಿಮೆ ಬೆಲೆಯನ್ನು ಕೊಡಬೇಕು ಎಂಬುದನ್ನು ಮರೆತೆವು. ಕರಟವನ್ನು ಹಿಡಿದುಕೊಂಡೆವು. ಅದು ಯಾವುದನ್ನು ರಕ್ಷಿಸುವುದಕ್ಕಾಗಿ ಇದ್ದಿತೊ ಆ ತಿರುಳನ್ನು ಮರೆತೆವು. ಒಂದು ಸಲ ಸ್ವಾಮಿಜಿ ಹೀಗೆ ಹೇಳುತ್ತಾರೆ: "ಇಂದು ನಮ್ಮ ಧರ್ಮವೆಲ್ಲಾ ಅಡಿಗೆ ಮನೆ ಪ್ರವೇಶಿಸಿದೆ. ಅಡಿಗೆ ಮಾಡುವ ಪಾತ್ರೆಗಳೇ ನಮ್ಮ ಸಾಲಿಗ್ರಾಮಗಳಾಗಿವೆ. ನಾನು ಮಡಿ ನೀವು ಮೈಲಿಗೆ. ನೀವು ಯಾರೂ ನನ್ನ ಮುಟ್ಟಬೇಡಿ ಎಂಬುದೇ ಗಾಯತ್ರಿ ಮಂತ್ರವಾಗಿದೆ. ಇದು ಹೀಗೆಯೇ ಮುಂದುವರಿದರೆ ನಾವೆಲ್ಲ ಹುಚ್ಚರ ಆಸ್ಪತ್ರೆಗೆ ಸೇರಬೇಕಾಗುವುದು. ಮಂಗಳಾರತಿಯನ್ನು ಮೂರು ಬಾರಿ ಮಾಡುವುದೇ, ಐದು ಬಾರಿಯೆ ಏಳು ಬಾರಿಯೆ ಎಂಬ ವಿಷಯದಲ್ಲಿ ಮಹಾ ಚರ್ಚೆಗಳಾಗಿವೆ. ಹೊರಗೆ ಹೋಗಿ ಬಂದರೆ ಕೈಯ್ಯನ್ನು ಎಷ್ಟು ಬಾರಿ ತೊಳೆದುಕೊಳ್ಳಬೇಕು, ಎಂತಹ ಮಣ್ಣನ್ನು ಆಗ ಉಪಯೋಗಿಸಬೇಕು ಎಂಬ ವಿಷಯದಲ್ಲಿ ಉದ್‌ಗ್ರಂಥಗಳು ಹುಟ್ಟಿವೆ. ಯಾರು ಸತ್ತರೆ ಎಷ್ಟು ದಿವಸ ಸೂತಕ ಇರಬೇಕು, ಆಗ ಏನು ತಿನ್ನಬೇಕು, ಏನು ಕುಡಿಯಬೇಕು ಎಂಬ ವಿಷಯದಲ್ಲಿ ದೊಡ್ಡ ವಾದಗಳೇ ಆಗಿವೆ. ಈ ಗಲಾಟೆಯಲ್ಲಿ ನಿರತರಾಗಿ ಗಹನವಾದ ಆಧ್ಯಾತ್ಮಿಕ ವಿಷಯಗಳ ಕಡೆ ನಮ್ಮ ಮನಸ್ಸು ಹೋಗಲಿಲ್ಲ."

ನಮ್ಮಲ್ಲಿರುವ ಮತ್ತೊಂದು ದೊಡ್ಡ ದೋಷವೇ ಸಹಕಾರಮನೋಭಾವದ ಅಭಾವ. ಪ್ರತ್ಯೇಕ ವ್ಯಕ್ತಿಗಳಲ್ಲಿ ಎಷ್ಟೋ ಒಳ್ಳೆಯ ಗುಣಗಳಿವೆ. ಆದರೆ ಹಲವು

ಜನ ಒಟ್ಟು ಕಲೆತು ಒಂದು ಸಂಘವನ್ನು ಬಹುದಿನ ನಡೆಯುವಂತೆ ಮಾಡಲಾರೆವು. ಕಲೆತ ಕೆಲವು ದಿನಗಳಲ್ಲಿಯೇ ಭಿನ್ನಾಭಿಪ್ರಾಯ ಘರ್ಷಣೆ ಪ್ರಾರಂಭವಾಗಿ ಅದು ನಾಮಾವಶೇಷವಾಗಿ ಹೋಗುವುದು. ಹುಟ್ಟುವಷ್ಟೇ ಬೇಗ ಅದು ಸಾಯುವುದು. ನಾವು ಸಂಘದಿಂದ ನಮಗೆ ಬರುವ ಕೀರ್ತಿ ಅಧಿಕಾರದ ಲಾಭಗಳನ್ನು ಗಮನಿಸುತ್ತೇವೆಯೇ ಹೊರತು ಸಂಸ್ಥೆಯನ್ನಲ್ಲ. ವ್ಯಕ್ತಿ ಎಷ್ಟೇ ಪ್ರಖ್ಯಾತನಾಗಿದ್ದರೂ ಅಲ್ಪಾಯು. ಸಂಸ್ಥೆಮಾತ್ರ ದೀರ್ಘಕಾಲ ಬಾಳಬಲ್ಲದು. ಹಲವು ಜನರಿಗೆ ನಂತರವೂ ಪ್ರಯೋಜನವಾಗಬಲ್ಲದು. ರಾಜಕೀಯವೇ ಆಗಲಿ ವ್ಯಾಪಾರ ಉದ್ಯಮವೇ ಆಗಲಿ, ಯಾಂತ್ರಿಕವಸ್ತುವನ್ನು ಉತ್ಪಾದನೆ ಮಾಡುವುದೇ ಆಗಲಿ ಇವುಗಳನ್ನೆಲ್ಲ ಸಾಧಿಸಬೇಕಾದರೆ ನಾವು ದೊಡ್ಡ ಸಂಸ್ಥೆಯನ್ನೇ ಕಟ್ಟಬೇಕಾಗುವುದು. ಒಂದು ಸಂಸ್ಥೆಗೆ ಶಕ್ತಿ ಬರಬೇಕಾದರೆ ಹಲವು ವ್ಯಕ್ತಿಗಳು ಅದಕ್ಕೆ ತ್ಯಾಗ ಮಾಡಬೇಕು. ಅದಕ್ಕೆ ಕೊಡಬೇಕು, ಅದರಿಂದ ಕಸಿದುಕೊಳ್ಳುವುದಲ್ಲ. ಎಲ್ಲಿ ಕೊಡುವುದಕ್ಕಿಂತ ಹೆಚ್ಚಾಗಿ ತೆಗೆದುಕೊಳ್ಳುವೆವೊ ಅಲ್ಲಿ ಸಂಸ್ಥೆ ಬಹಳ ಬೇಗ ನಿರ್ನಾಮವಾಗುವುದು. ಎಲ್ಲಿ ಕೊಡುವುದರ ಕಡೆಗೆ ನಮ್ಮ ಗಮನವಿರುವುದೋ ಅಲ್ಲಿ ಆ ಸಂಸ್ಥೆ ವ್ಯಕ್ತಿಯ ಕಾಲಾನಂತರವೂ ಬಹುಜನರ ಹಿತಕ್ಕೆ ಬಹುಜನರ ಸುಖಕ್ಕೆ ದೀರ್ಘಕಾಲ ಬಾಳಬಲ್ಲದು.

ಗುಲಾಮಗಿರಿಯಲ್ಲಿ ಬಹುಕಾಲ ಬಾಳಿದವರಲ್ಲಿರುವ ಮತ್ತೊಂದು ಅವಗುಣವೇ ಅಸೂಯೆ. ನಮ್ಮಲ್ಲಿ ಯಾರಾದರೂ ಮುಂದೆ ಬಂದರೆ ಅದನ್ನು ಸಹಿಸುವುದಕ್ಕೇ ಆಗುವುದಿಲ್ಲ. ಹೇಗೂ ಅವನನ್ನು ಪದಚ್ಯುತನನ್ನಾಗಿ ಮಾಡಲು ಯತ್ನಿಸುವೆವು. ಅಸೂಯೆ ಎಂಬುದು ನಮ್ಮಲ್ಲಿ ರಕ್ತಗತವಾದ ವಿಷಯ. ಅದರಿಂದ ಪಾರಾಗಲು ನಾವು ಯತ್ನಿಸಬೇಕು. ಎಲ್ಲಿಯವರೆಗೆ ಇದು ನಮ್ಮಲ್ಲಿರುವುದೊ ಅಲ್ಲಿಯವರೆಗೆ ನಾವು ಜೀವನದಲ್ಲಿ ಏನನ್ನೂ ಸಾಧಿಸಲಾರೆವು.

ಮತ್ತೊಂದು, ನಮ್ಮಲ್ಲಿರುವ ಅಧಿಕಾರಲಾಲಸೆ. ಎಲ್ಲರಿಗೂ ಅಪ್ಪಣೆ ಕೊಡಲು ಆಸೆ, ಆಳಲು ಆಸೆ. ಅಪ್ಪಣೆಯನ್ನು ಪರಿಪಾಲಿಸುವುದನ್ನು ಕಲಿಯದೆ ಅಪ್ಪಣೆಯನ್ನು ಕೊಡುವುದು ಬರಲಾರದು ಎಂಬುದನ್ನು ನಾವೆಲ್ಲ ಇನ್ನೂ ಅರಿಯಬೇಕಾಗಿದೆ. ಎಲ್ಲರಿಗೂ ನಾಯಕರಾಗಬೇಕು ಎನ್ನುವ ಕುತೂಹಲ. ಬರೀ ಹಂಬಲದಿಂದಲೇ ಒಂದು ಸ್ಥಿತಿ ಸಿಕ್ಕುವುದೇನೋ ಜೀವಿಗೆ: ಅದಕ್ಕೆ ತಕ್ಕ ಯೋಗ್ಯತೆಯನ್ನು ಪಡೆದಿರಬೇಕು. ಯಾರಿಗೆ ಯೋಗ್ಯತೆ ಇದೆಯೊ ಅವನು ನಾಯಕನಾಗಬೇಕೆಂದು ಇಚ್ಛಿಸುವುದಿಲ್ಲ. ಆ ಪದವಿ ಅವನನ್ನು ಹುಡುಕಿಕೊಂಡು ಬರುವುದು. ಸ್ವಾಮಿ ವಿವೇಕಾನಂದರು "ಯಾರು ಸಿರ್‌ದಾರನೊ ಅವನು ಸರ್‌ದಾರ್" ಎಂದು ಹೇಳುತ್ತಿದ್ದರು. ಎಂದರೆ ಯಾರು ತಮ್ಮ ತಲೆಯನ್ನು ಬಲಿಕೊಡಲು ಸಿದ್ಧನಾಗಿರುವನೊ ಅವನು ನಾಯಕನಾಗಲು ಯೋಗ್ಯ. ಅನೇಕ ವೇಳೆ ಯೋಗ್ಯತೆಯನ್ನು ಸಂಪಾದಿಸುವ ಕಡೆಗೆ ಗಮನವನ್ನೇ ಕೊಡದೇ ನಾಯಕಗಿರಿಗೆ ಆಸೆಪಡುವೆವು. ಇದೊಂದು ದೊಡ್ಡ ನ್ಯೂನತೆ ನಮ್ಮಲ್ಲಿ. ಜೀವನದಲ್ಲಿ ಪ್ರತಿಯೊಬ್ಬನೂ ನಾಯಕನೇ ಆಗಬೇಕೆ?

ಆಣತಿಯನ್ನು ಪರಿಪಾಲಿಸುವುದರಲ್ಲಿ ಒಂದು ಆನಂದವಿಲ್ಲವೆ? ಶ್ರೀರಾಮ ಸೇತುವೆಯನ್ನು ಕಟ್ಟುತ್ತಿದ್ದಾಗ ಅಳಿಲು ಬಂದು ಮರಳನ್ನು ಕೊಡವಿ ಹೋಗುತ್ತಿದ್ದಂತಹ ಕೆಲಸದಿಂದಲೂ ಧನ್ಯರಾಗಲು ಸಾಧ್ಯ ಎಂದರು ಸ್ವಾಮಿ ವಿವೇಕಾನಂದರು. ಇಂತಹ ಮನೋಭಾವವನ್ನು ನಾವು ರೂಢಿಸಬೇಕಾಗಿದೆ.

ಭರತಖಂಡ ಅನ್ಯರಾಷ್ಟ್ರಗಳೊಂದಿಗೆ ಸಂಬಂಧವನ್ನು ದೀರ್ಘಕಾಲ ಕಳೆದುಕೊಂಡುದು ಅದರ ಅವನತಿಗೊಂದು ದೊಡ್ಡ ಕಾರಣ. ನಾವು ಕೂಪಮಂಡೂಕಗಳಾದೆವು. ಹೋಗಿ ಬಂದವರಿಗೆ ಬಹಿಷ್ಕಾರವನ್ನು ಹಾಕಿದರು. ಯಾವ ರಾಷ್ಟ್ರವೇ ಆಗಲಿ, ನಾಗರಿಕತೆಯೇ ಆಗಲಿ, ತನ್ನ ಬಿಲದೊಳಗೆ ತಾನು ಇರುತ್ತೇನೆ ಎಂದರೆ ಬಹಳ ಬೇಗ ಕುಂಠಿತವಾಗಿ ಹೋಗುವುದು. ಅನ್ಯರಲ್ಲಿರುವ ಒಳ್ಳೆಯದನ್ನು ಹೀರಿಕೊಳ್ಳಲಾರದು, ತನ್ನಲ್ಲಿರುವ ನ್ಯೂನತೆಯನ್ನು ತಿಳಿದುಕೊಳ್ಳಲಾರದು. ಸಾಧ್ಯವಿದ್ದಷ್ಟು ಜನ ಭರತಖಂಡದಿಂದ ಹೊರಗೆ ಹೋಗಿ, ಅನ್ಯರಾಷ್ಟ್ರಗಳು ಹೇಗೆ ಮುಂದುವರಿಯುತ್ತಿವೆ ಎಂಬುದನ್ನು ನೋಡಲಿ ಆಗ ಕಣ್ಣು ತೆರೆಯುವುದು ಎನ್ನುತ್ತಿದ್ದರು ಸ್ವಾಮಿಜಿ.

ನಮ್ಮ ಮತ್ತೊಂದು ನ್ಯೂನತೆಯ ಕರ್ಮ ಸಿದ್ಧಾಂತವನ್ನು ಸರಿಯಾಗಿ ಅರ್ಥಮಾಡಿಕೊಳ್ಳದೇ ಇದ್ದುದು. ಯಾವ ಕರ್ಮ ಸಿದ್ಧಾಂತ ನಮ್ಮನ್ನು ಕಾರ್ಯೋನ್ಮುಖರನ್ನಾಗಿ ಮಾಡಬೇಕೊ ಅದನ್ನು ತಪ್ಪು ತಿಳಿದುಕೊಂಡು, ಶುದ್ಧ ಸೋಮಾರಿಯ ಜೀವನಕ್ಕೆ ಉಪಯೋಗಿಸಿಕೊಂಡೆವು. ನಮಗೆ ಯಾವ ಕೆಟ್ಟದ್ದಾಗಲಿ ಅನ್ಯಾಯವಾಗಲಿ ಇದು ನಮ್ಮ ಕರ್ಮ, ಇದು ನಮ್ಮ ಹಣೆಯಬರಹ ಎಂದು ಅದಕ್ಕೆ ಬಾಗುವೆವು. ಅದೇ ಕರ್ಮಸಿದ್ಧಾಂತ ಈಗ ಹೊಸ ಉತ್ತಮ ಕರ್ಮಗಳನ್ನು ಮಾಡುವುದಕ್ಕೆ, ಭವ್ಯವಾದ ಭವಿಷ್ಯದ ತಳಹದಿಯನ್ನು ಹಾಕುವುದಕ್ಕೆ ಪ್ರಚೋದನಕಾರಿಯಾಗಬಲ್ಲದು. ನಾವು ಈಗ ಇರುವುದಕ್ಕೆ ಹಿಂದಿನದು ಕಾರಣವಾದರೆ, ಮುಂದಿನದು ಈಗ ನಾನು ಏನು ಮಾಡುತ್ತಿರುವೆನೊ ಅದರ ಮೇಲೆ ನಿಂತಿದೆ ಎಂಬ ಜವಾಬ್ದಾರಿಯನ್ನು ಕೊಡುವುದು. ದೇವರೂ ಕೂಡ ಸೋಮಾರಿಗೆ ಸಹಾಯ ಮಾಡುವುದಿಲ್ಲ. ನಾವು ಯಾವಾಗ ಸೊಂಟ ಕಟ್ಟುತ್ತೇವೆಯೋ ಆಗ ಅವನ ಶಕ್ತಿ ನಮ್ಮ ನೆರವಿಗೆ ಬರುವುದು.

ನಮ್ಮ ಮತ್ತೊಂದು ದೌರ್ಬಲ್ಯವೇ ನಮ್ಮ ಜನಾಂಗದ ಅರ್ಧ ಭಾಗವಾದ ಸ್ತ್ರೀಯರನ್ನು ನಾವು ಕಡೆಗಣಿಸಿದ್ದು. ವಿದ್ಯೆ ಐಶ್ವರ್ಯ ಅಧಿಕಾರ ಎಲ್ಲವನ್ನೂ ಪುರುಷನಿಗೆ ಮಾತ್ರ ಕೊಟ್ಟೆವು. ಅವನು ತಿಂದು ಮಿಕ್ಕಿದ್ದು, ಅವನ ಎಂಜಲು ಮಾತ್ರ ಉಳಿದ ಅರ್ಧಭಾಗಕ್ಕೆ ಮೀಸಲು. ಸ್ತ್ರೀ ಮತ್ತು ಪುರುಷರು ಹಕ್ಕಿಗೆ ಇರುವ ಎರಡು ರೆಕ್ಕೆಗಳಂತೆ. ಒಂದು ಹಕ್ಕಿಗೆ ಒಂದೇ ರೆಕ್ಕೆ ಎಷ್ಟೇ ಬಲವಾಗಿರಲಿ ಮೇಲೆ ಏರಲಾರದೋ ಹಾಗೆ ಸಮಾಜ. ನಾವು ಮತ್ತೊಂದು ಅಂಗವಾದ ಸ್ತ್ರೀಯರ ಸ್ಥಾನಮಾನಗಳನ್ನು ಅಭಿವೃದ್ಧಿಪಡಿಸಬೇಕು. ಅವರಿಗೆ ವಿದ್ಯೆ ಕೊಡಬೇಕು.

ಅವರನ್ನು ಪೂಜ್ಯದೃಷ್ಟಿಯಿಂದ ನೋಡಬೇಕು. ಅವರ ಆತ್ಮೋನ್ನತಿಗೆ ಎಲ್ಲಾ ಅವಕಾಶಗಳನ್ನೂ ಒದಗಿಸಿಕೊಡಬೇಕು. ಪುರುಷ ಕಲಿತಿದ್ದು ಹೊರಗೆ ಸಂಪಾದನೆ ಮಾಡುವುದರಲ್ಲಿಯೇ ಕೊನೆಗೊಳ್ಳುವುದು. ಆದರೆ ಯಾವ ವಿದ್ಯೆಯನ್ನು ಸಂಸ್ಕೃತಿ ಯನ್ನು ಮನೆಯಲ್ಲಿ ತಾಯಿಯಾಗಿರುವಳು ಪಡೆದಿರುವಳೊ ಅದರಿಂದಲೆ ಬೆಳೆಯುವ ಮಕ್ಕಳಿಗೆ ಪ್ರಯೋಜನ. ಯಾವ ಕೈಗಳು ಈಗ ತೊಟ್ಟಿಲನ್ನು ತೂಗುತ್ತಿವೆಯೋ ಆ ಕೈಗಳೇ ನಾಳೆ ಪುರುಷಸಿಂಹರನ್ನು ಜಗತ್ತಿಗೆ ದಾನಮಾಡುವುದು. ಸ್ತ್ರೀಯರಿಗೆ ಸರಿಯಾದ ವಿದ್ಯೆಯನ್ನು ಕೊಡಬೇಕು. ನಂತರ ಅವರು ತಮ್ಮ ಸಮಸ್ಯೆಗಳನ್ನು ತಾವೇ ಪರಿಹಾರಮಾಡಿಕೊಳ್ಳುವರು ಎನ್ನುತ್ತಿದ್ದರು ಸ್ವಾಮಿಜಿ.

ಭರತಖಂಡ ಮೇಲೇಳಬೇಕಾದರೆ ತನ್ನ ಆರ್ಥಿಕ ಸಂಪತ್ತನ್ನು ವೃದ್ಧಿಮಾಡಿ ಕೊಳ್ಳಬೇಕು. ಏನೊ ಸಿಕ್ಕದ್ದನ್ನು ತಿಂದು ಕಾಲಯಾಪನೆ ಮಾಡಿ ಎಂದು ಜನರಿಗೆ ಸ್ವಾಮಿಜಿ ಹೇಳುತ್ತಿರಲಿಲ್ಲ. ನಾವು ಆರೋಗ್ಯಕರವಾದ ಬಲಿಷ್ಠವಾದ ಆಹಾರವನ್ನು ಸೇವಿಸಬೇಕು. ಗಟ್ಟಿಮುಟ್ಟಾಗಿ ಬೆಳೆಯಬೇಕು. ಕಬ್ಬಿಣದಂತಹ ಮಾಂಸಖಂಡ ಗಳು, ಉಕ್ಕಿನಂತಹ ನರಗಳು ಬೇಕು ನಮ್ಮ ಜನರಿಗೆ ಎನ್ನುತ್ತಿದ್ದರು. ಹಾಗೆ ಆಗಬೇಕಾದರೆ ನಾವು ಹೆಚ್ಚು ಆಹಾರವನ್ನು ಉತ್ಪಾದನೆಮಾಡುವುದನ್ನು ಕಲಿಯ ಬೇಕು. ಪಾಶ್ಚಾತ್ಯ ದೇಶಗಳು ತಮ್ಮ ಯಂತ್ರ ನಾಗರಿಕತೆಯಿಂದ ಇದನ್ನು ಹೇಗೆ ಸಾಧಿಸುತ್ತಿವೆ ಎಂಬುದನ್ನು ಅರಿಯಬೇಕು. ಅದನ್ನು ಸಾಧ್ಯವಾದಷ್ಟು ಭರತ ಖಂಡದಲ್ಲಿ ಜಾರಿಗೆ ತರಬೇಕು.

ಸ್ವಾಮಿಜಿ ಅವರಿಗೆ ಅಳು ಕಂಡರೆ ಆಗುತ್ತಿರಲಿಲ್ಲ. ದೇವರ ಹೆಸರಿನಲ್ಲಿಯೂ ನಾವು ಅಳಕೂಡದು ಎನ್ನುತ್ತಿದ್ದರು. ಅಲ್ಲಿ ಅಳುವುದಕ್ಕೆ ಏನಿದೆ. ಸಚ್ಚಿದಾನಂದ ಸ್ವರೂಪ ಭಗವಂತ. ಅವನಿಂದ ಸಿಡಿದುಬಂದ ಕಿಡಿಗಳು ಜೀವಿಗಳು. ಅವನ ಮುಖ ದಲ್ಲಿರುವ ಮಂದಹಾಸ ಆನಂದ ನಮ್ಮಲ್ಲಿಯೂ ವ್ಯಕ್ತವಾಗುತ್ತಿರಬೇಕು. ಅಳು ಮೋರೆಯವನಿಗೆ ಮನೆಬಿಟ್ಟು ಹೊರಗೆ ಹೋಗಬೇಡ ಎನ್ನುತ್ತಿದ್ದರು ಸ್ವಾಮಿಜಿ. ಮನೆಯಿಂದ ಹೋಗುವುದಕ್ಕೆ ಮುಂಚೆ ಕನ್ನಡಿಯಲ್ಲಿ ನಿನ್ನ ಮುಖವನ್ನು ನೋಡಿಕೊ. ಅಳುಮೋರೆ ಇದ್ದರೆ ಅವತ್ತು ಹೊರಗೆ ಹೋಗಬೇಡ. ಅದೊಂದು ಸಾಂಕ್ರಾಮಿಕ ಜಾಡ್ಯ. ಅದನ್ನು ಇತರರಿಗೆ ಕೊಡಬೇಡ. ಸಾಧ್ಯವಿದ್ದರೆ ಆನಂದ ಕೊಡು, ಪ್ರೋತ್ಸಾಹ ಕೊಡು, ಗೆಲವು ಕೊಡು. ಅದಿಲ್ಲದೇ ಇದ್ದರೆ ತೆಪ್ಪಗೆ ನೀನೊಬ್ಬನೇ ಮನೆಯಲ್ಲಿದ್ದರೆ ದೊಡ್ಡ ಉಪಕಾರಮಾಡುವೆ ಜಗತ್ತಿಗೆ! ಮುಂದೆ ಬರುವ ಅವರ ವಾಣಿಯನ್ನು ಕೇಳೋಣ.

"ಬಹುಕಾಲ ನಾವು ಅತ್ತಿರುವೆವು. ಇನ್ನು ಹೆಚ್ಚು ಅಳಕೂಡದು. ನಿಮ್ಮ ಕಾಲಮೇಲೆ ನಿಂತು ಮನುಷ್ಯರಾಗಿ. ನಮಗೆ ಇಂದು ಪುರುಷಸಿಂಹರನ್ನು ಮಾಡುವ ಧರ್ಮ ಬೇಕು. ಪುರುಷಸಿಂಹರನ್ನು ಮಾಡುವ ಸಿದ್ಧಾಂತಗಳು ಬೇಕು. ಪುರುಷ ಸಿಂಹರನ್ನಾಗಿ ಮಾಡುವ ಸರ್ವತೋಮುಖಿಗಳನ್ನಾಗಿ ಮಾಡುವ ವಿದ್ಯಾಭ್ಯಾಸ

ಬೇಕು. ಸತ್ಯದ ಪರೀಕ್ಷೆ ಇಲ್ಲಿದೆ. ಯಾವುದು ನಿಮ್ಮನ್ನು ದೈಹಿಕವಾಗಿ ಆಗಲಿ, ಆಧ್ಯಾತ್ಮಿಕವಾಗಿ ಆಗಲಿ, ಮಾನಸಿಕವಾಗಿ ಆಗಲಿ, ದುರ್ಬಲರನ್ನಾಗಿ ಮಾಡುವುದೊ ಅದನ್ನು ವಿಷದಂತೆ ತ್ಯಜಿಸಿ. ಅದರಲ್ಲಿ ಚೇತನವಿಲ್ಲ. ಅದು ಸತ್ಯವೆನಿಸಲಾರದು. ಸತ್ಯ ಶಕ್ತಿವರ್ಧಕ. ಸತ್ಯ ಪರಿಶುದ್ಧವಾದುದು. ಸತ್ಯವೇ ಅನಂತಜ್ಞಾನ. ಸತ್ಯ ಶಕ್ತಿಯನ್ನು ನೀಡಬೇಕು, ಬೆಳಕನ್ನು ನೀಡಬೇಕು, ಹೊಸ ಚೇತನವನ್ನು ತುಂಬಬೇಕು.''

ಸ್ವಾಮಿಜಿ ಅವರು ಪದೇ ಪದೇ ಬೋಧಿಸುತ್ತಿದ್ದ ಮತ್ತೊಂದು ಭಾವನೆಯೇ ಆತ್ಮಶ್ರದ್ಧೆ. ನಮಗೆ ನಮ್ಮಲ್ಲಿ ಒಂದು ನಂಬಿಕೆ ಇರಬೇಕು. ಏಕೆಂದರೆ ನಾವು ದೇವರ ಮಕ್ಕಳು. ಅವನಲ್ಲಿ ಯಾವ ಪವಿತ್ರತೆ ಇದೆಯೋ, ಜ್ಞಾನವಿದೆಯೋ, ಶಕ್ತಿ ಇದೆಯೋ ಅವೆಲ್ಲ ನಮ್ಮಲ್ಲಿಯೂ ಒಂದು ಪ್ರಮಾಣದಲ್ಲಿದೆ. ನಾವೀಗ ಅದನ್ನು ಮರೆತಿರುವೆವು. ತಾತ್ಕಾಲಿಕವಾಗಿ ಅದರ ಮೇಲೆ ಕುಳಿತ ಧೂಳನ್ನೇ ಸತ್ಯವೆಂದು ಭ್ರಮಿಸಿ, ನಾವು ಪಾಪಿಗಳು ಮೂಢರು ಎಂದು ಅವಹೇಳನಮಾಡಿಕೊಳ್ಳುತ್ತಿರುವೆವು. ನಾವೇ ಪಾಪಿಗಳಾದರೆ ಇನ್ನು ಪುಣ್ಯಾತ್ಮರು ಯಾರು? ನಾವೇ ದಡ್ಡರಾದರೆ ಇನ್ನು ಸುಜ್ಞಾನಿಗಳು ಯಾರು? ನಾವು ಜೀವನದಲ್ಲಿ ನೆಚ್ಚುಗೆಡಕೂಡದು. ದುಃಖ ಸಂಕಟಗಳು ಬಂದಾಗ ಪಲಾಯನ ಹೇಳಕೂಡದು. ಅವುಗಳೊಂದಿಗೆ ಹೋರಾಡಬೇಕು. ಆಗಲೇ ಅವುಗಳು ಓಡಿಹೋಗಬೇಕಾದರೆ. ದೇವರು ನಮಗೆ ಕಷ್ಟಕೊಡುವುದರಲ್ಲಿ ಒಂದು ರಹಸ್ಯವಿದೆ. ಅವನು ನಮ್ಮ ಅಂತಶ್ಶಕ್ತಿಯನ್ನು ಉದ್ದೀಪನಗೊಳಿಸುವುದಕ್ಕೆ ಇದನ್ನು ಕೊಡುವನು. ಅದನ್ನು ಆರಿಸುವುದಕ್ಕಲ್ಲ. ಹೋರಾಡಿದಷ್ಟು ಆ ಶಕ್ತಿ ಬಲಿಷ್ಠವಾಗುತ್ತ ಬರುವುದು.

ಸ್ವಾಮಿಜಿ ಅವರು ಈ ಪ್ರಪಂಚವನ್ನು ಒಂದು ಗರಡಿಯ ಮನೆಎನ್ನುತ್ತಿದ್ದರು. ಇಲ್ಲಿರುವ ಹಲವು ಅಂಗಸಾಧನೆಯ ಸಾಧನಗಳೇ ಕಷ್ಟ ನಷ್ಟ ಸುಖ ದುಃಖ, ಟೀಕೆ ಹೊಗಳಿಕೆ ಶತ್ರು ಮಿತ್ರ ಮುಂತಾದುವು. ಇವುಗಳೊಂದಿಗೆ ನಾವು ಹೋರಾಡಿದಾಗಲೇ ನಮ್ಮ ಶಕ್ತಿ ಬಲವಾಗಬೇಕಾದರೆ.

ಸ್ವಾಮಿಜಿ ಅವರು ಭರತಖಂಡದ ಪುನರುದ್ಧಾರಕ್ಕೆ ನಿಂತವರಲ್ಲಿ ಕೆಳಗೆ ಬರುವ ಮೂರು ಗುಣಗಳು ಇರಬೇಕೆಂದು ಮದ್ರಾಸಿನಲ್ಲಿ ಮಾಡಿದ ಉಪನ್ಯಾಸದಲ್ಲಿ ವಿವರಿಸುವರು:

'' ಕೋಟ್ಯಂತರ ದೇವ ಮತ್ತು ಋಷಿಸಂತಾನರು ಪಶುಸಂತಾನರಾಗಿರುವರೆಂದು ನಿಮಗೆ ಮನಸ್ಸಿನಲ್ಲಿ ವ್ಯಥೆ ಇದೆಯೆ? ಕೋಟ್ಯಂತರ ಜನ ಈಗ ಉಪವಾಸದಲ್ಲಿ ನರಳುತ್ತಿರುವರು, ಹಿಂದಿನಿಂದಲೂ ನರಳುತ್ತಿದ್ದರು ಎಂಬುದು ಗೊತ್ತೆ? ಅಜ್ಞಾನ ಕಾರ್ಮೋಡದಂತೆ ಭಾರತಾವನಿಯನ್ನೆಲ್ಲ ಆವರಿಸಿದೆ ಎಂಬುದು ನಿಮಗೆ ಗೊತ್ತೆ? ಇದರಿಂದ ನೀವು ವಿಹ್ವಲರಾಗಿರುವಿರಾ? ಇದರಿಂದ ನಿಮ್ಮ ನಿದ್ರೆಗೆ ಭಂಗ ಬಂದಿದೆಯೆ? ಇದು ನಿಮ್ಮ ರಕ್ತದಲ್ಲಿ ವ್ಯಾಪಿಸಿದೆಯೆ? ನಾಡಿಯಲ್ಲಿ ಸಂಚರಿಸಿ

ಹೃದಯದ ಸ್ಪಂದನದೊಂದಿಗೆ ಸ್ಪಂದಿಸುತ್ತಿದೆಯೆ? ಇದು ನಿಮ್ಮನ್ನು ಉನ್ಮತ್ತರನ್ನಾಗಿ ಮಾಡಿದೆಯೆ? ಈ ಸರ್ವನಾಶದ ದುಃಖ ನಿಮ್ಮನ್ನು ವ್ಯಾಪಿಸಿ, ನಿಮ್ಮ ಕೀರ್ತಿ ಯಶಸ್ಸು, ಹೆಂಡತಿ ಮಕ್ಕಳು ಆಸ್ತಿ ಮತ್ತು ನಿಮ್ಮ ದೇಹವನ್ನೇ ನೀವು ಮರೆತಿರುವಿರಾ? ನೀವು ಇದನ್ನು ಮಾಡಿರುವಿರಾ? ದೇಶಭಕ್ತರಾಗುವುದಕ್ಕೆ ಇದೇ ಮೊದಲನೇ ಹೆಜ್ಜೆ.

"ಈ ಉದ್ದೇಶವನ್ನು ಬರೀ ಬಾಯಿಮಾತಿನಲ್ಲಿ ವ್ಯಕ್ತಗೊಳಿಸದೆ, ಈ ಸಮಸ್ಯೆಯಿಂದ ಪಾರಾಗುವುದಕ್ಕೆ ಯಾವುದಾದರೊಂದು ಮಾರ್ಗವನ್ನು ಕಂಡುಹಿಡಿದಿರುವಿರಾ? ಅವರನ್ನು ದೂರದೆ ಸಹಾಯವನ್ನು ನೀಡುವ, ವರ್ತಮಾನ ಮೃತ್ಯುಸ್ಥಿತಿಯಿಂದ ಅವರನ್ನು ಮೇಲೆತ್ತಿ ಅವರ ದುಃಖವನ್ನು ಶಮನಗೊಳಿಸುವ ಸಹಾನುಭೂತಿಯ ನುಡಿಗಳನ್ನು ಉಚ್ಚರಿಸಬಲ್ಲಿರಾ? ಇದು ಮಾತ್ರವಲ್ಲ. ಪರ್ವತದಂತಹ ಆತಂಕವನ್ನು ದಾಟಬಲ್ಲ ಇಚ್ಛಾಶಕ್ತಿ ನಿಮ್ಮಲ್ಲಿದೆಯೆ? ಇಡೀ ಪ್ರಪಂಚವೇ ಹಿರಿದ ಕತ್ತಿಯಿಂದ ನಿಮ್ಮನ್ನು ಎದುರಿಸಿದರೂ, ಸರಿ ಎಂದು ತೋರಿದುದನ್ನು ಮಾಡುವ ಧೈರ್ಯ ನಿಮಗೆ ಇದೆಯೆ? ನಿಮ್ಮ ಹೆಂಡತಿ ಮಕ್ಕಳು ಅದನ್ನು ವಿರೋಧಿಸಿದರೂ, ನಿಮ್ಮ ದ್ರವ್ಯ ಹೋದರೂ, ಕೀರ್ತಿ ನಾಶವಾದರೂ ನೀವು ಅದನ್ನು ಬಿಡದೆ ಇರಬಲ್ಲಿರಾ? ಅದನ್ನೇ ಹಂಬಲಿಸುತ್ತ ಎಡಬಿಡದೆ ಗುರಿ ಎಡೆಗೆ ಧಾವಿಸಬಲ್ಲಿರಾ? ಈ ದೃಢತೆ ನಿಮ್ಮಲ್ಲಿದೆಯೆ? ಈ ಮೂರು ಗುಣಗಳಿದ್ದರೆ ನಿಮ್ಮಲ್ಲಿ ಪ್ರತಿಯೊಬ್ಬರೂ ಅದ್ಭುತ ಕಾರ್ಯವನ್ನು ಸಾಧಿಸಬಲ್ಲಿರಿ."

ಸ್ವಾಮಿಜಿ ಅವರು ಭರತಖಂಡದ ಭವಿಷ್ಯದಲ್ಲಿ ನೆಚ್ಚುಗೆಡಲಿಲ್ಲ. ತಮ್ಮ ಸ್ವರ್ಣಯುಗ ಹಿಂದೆಯೇ ಆಗಿಹೋಯಿತು ಎಂದು ಗತಕಾಲದ ವೈಭವವನ್ನು ಮೆಲಕುಹಾಕುವ ಸೋಮಾರಿಗಳಲ್ಲ ಸ್ವಾಮಿಜಿ. ಹಿಂದಿನದನ್ನು ಗೌರವಿಸಿದರು. ಹಿಂದೆ ಇದ್ದ ಪವಿತ್ರ ಅಂಶಗಳನ್ನೆಲ್ಲ ಹೀರಿಕೊಂಡರು. ಆದರೆ ಅಲ್ಲಿಗೇ ನಿಲ್ಲಲಿಲ್ಲ. ಹಿಂದಿನದು ಈಗ ಮಾಡುವ ಕಾರ್ಯಕ್ಕೆ ಸಹಾಯಕವಾಗಿ ಆಗಬೇಕು. ಮತ್ತೆ ಭವಿಷ್ಯದಲ್ಲಿ ಹೆಚ್ಚು ನೆಚ್ಚುಗೆಯನ್ನು ಇಟ್ಟಿದ್ದರು. ಹಿಂದಿನದನ್ನೆಲ್ಲ ಮೀರಿಸುವ ಭವಿಷ್ಯ ನಮಗೆ ಕಾದಿದೆ ಎಂದು ಆಶಾವಾದಿಗಳಾಗಿದ್ದರು. ಹಿಂದಿನ ಶಾಸ್ತ್ರಗಳನ್ನು ಮೀರುವ ಶಾಸ್ತ್ರಗಳು ಬರುತ್ತವೆ, ಹಿಂದಿನ ಋಷಿಗಳನ್ನು ಮೀರಿದ ಋಷಿಗಳು ಬರುವರು. ಹಿಂದಿನ ಉಚ್ಛ್ರಾಯಸ್ಥಿತಿಯನ್ನು ಅಣಕಿಸುವಂತಹ ಸುದಿನ ನಮಗೆ ಕಾದಿದೆ ಎನ್ನುತ್ತಿದ್ದರು ಸ್ವಾಮಿಜಿ. ಅದನ್ನು ಸ್ವಾಗತಿಸುವುದಕ್ಕೆ ಈಗಿನವರು ಅಣಿಯಾಗಬೇಕು. ಅದಕ್ಕಾಗಿ ದುಡಿಯಬೇಕು. ಭವಿಷ್ಯದ ಸಸಿಗೆ ನಾವು ಹಾಕಬೇಕಾದ ನೀರು ಗೊಬ್ಬರವೇ ನಮ್ಮ ಶ್ರಮ ನಮ್ಮ ದುಡಿತ. ದ್ರಷ್ಟಾರನ ವಾಣಿಯಲ್ಲಿ ನಮ್ಮ ಭಾರತಮಾತೆ ಹೇಗೆ ನಿದ್ರೆಯಿಂದೇಳುತ್ತಿರುವಳು ಎಂಬುದನ್ನು ಅವರ ಒಂದು ಉಪನ್ಯಾಸದ ಮೂಲಕವೇ ಕೇಳೋಣ:

"ಓ ನನ್ನ ಭಾರತೀಯ ಭ್ರಾತೃಗಳಿರಾ, ನಿದ್ರೆಯಿಂದೆದ್ದೇಳಿ, ನವೋದಯ

ವಾಗುತ್ತಿದೆ. ಕಣ್ದೆರೆದು ನೋಡಿ, ಅದೋ ಸುದೀರ್ಘ ರಾತ್ರಿ ಕಡೆಗಿಂದು ಕೊನೆಗಾಣುತ್ತಿದೆ. ಬಹುಕಾಲದ ಶೋಕತಾಪಗಳು ಕಡೆಗಿಂದು ಮಾಯವಾಗುತ್ತಿವೆ. ಇದುವರೆಗೆ ಶವದಂತೆ ಬಿದ್ದ ಶರೀರವಿಂದು ಸಚೇತನವಾಗುತ್ತಿದೆ. ಅದೋ ಕಿವಿಗೊಡಿ, ವಾಣಿಯೊಂದು ಕೇಳಿಬರುತ್ತಿದೆ-ಬಹು ಪುರಾತನ ಕಾಲದ ಇತಿಹಾಸದ ಕಾಲಗರ್ಭದಿಂದ ಹೊಮ್ಮಿ, ಪರ್ವತ ಶಿಖರಗಳಿಂದ ಮರುದನಿಯಾಗಿ ಚಿಮ್ಮಿ, ಕಾನನಗಿರಿ ಕಂದರಗಳಲ್ಲೂ ಸಂಚರಿಸಿ, ಬರಬರುತ್ತ ಪ್ರಬಲವಾಗಿ, ಬಂದಂತೆಲ್ಲ ಅಪ್ರತಿಹತವಾಗಿ, ನಮ್ಮೀ ಪುಣ್ಯಭೂಮಿಯನ್ನು ನಿದ್ರೆಯಿಂದ ಹೊಡೆದೆಬ್ಬಿಸಿ, ಜ್ಞಾನ ಭಕ್ತಿ ವೈರಾಗ್ಯ ಸೇವಾ ತತ್ತ್ವಗಳನ್ನು ಉಚ್ಚಕಂಠದಿಂದ ಸಾರುವ ತೂರ್ಯವಾಣಿಯೊಂದು ಕೇಳಿಬರುತ್ತಿದೆ. ಹಿಮಾಲಯದಿಂದ ಬೀಸಿಬರುವ ಪುಣ್ಯ ಸಮೀರಣದಂತೆ, ನಿರ್ಜೀವದಂತೆ ಇದ್ದ ಅಸ್ಥಿ ಮಾಂಸಗಳಿಗೆ ಜೀವದಾನ ಮಾಡುತ್ತಿದೆ. ಜಡನಿದ್ರೆಯನ್ನು ಪರಿಹರಿಸುತ್ತಿದೆ. ಕಾರ್ಯೋತ್ಸಾಹ ಸ್ಥೈರ್ಯ ಧೈರ್ಯಗಳನ್ನು ಉದ್ರೇಕಿಸುತ್ತಿದೆ. ಕುರುಡರಿಗೆ ಕಾಣದು, ಮೂರ್ಖರಿಗೆ ತಿಳಿಯದು, ನಮ್ಮೀ ಭಾರತಭೂಮಿ ಯುಗಯುಗಗಳ ನಿದ್ರೆಯಿಂದೇಳುತ್ತಿದೆ. ಆಕೆಯನ್ನು ಇನ್ನು ಯಾರೂ ತಡೆಯಬಲ್ಲವರಿಲ್ಲ. ಇನ್ನಾಕೆ ನಿದ್ರೆ ಮಾಡುವುದಿಲ್ಲ. ಯಾವ ಶಕ್ತಿಯೂ ಆಕೆಯನ್ನು ಬಗ್ಗಿಸಲಾರದು, ಏಕೆಂದರೆ ಅದೋ ನೋಡಿ! ಮಹಾಕಾಳಿ ಮತ್ತೊಮ್ಮೆ ಎಚ್ಚೆತ್ತು ಮೈಕೊಡಹಿ ಉಸಿರೆಳೆದು ನಿಲ್ಲುತ್ತಿರುವಳು."

ಜೀವನವನ್ನು ಒಂದು ವರದಂತೆ ಸ್ವೀಕರಿಸಿ ಅವರು ಪ್ರಪಂಚಕ್ಕೆ ಬಂದರು. ಬಾಳನ್ನು ಹಳಿಯಲಿಲ್ಲ, ತುಚ್ಛವಾಗಿ ಕಾಣಲಿಲ್ಲ. ಇಲ್ಲಿ ಧೈರ್ಯದಿಂದಲೂ ಸಾಹಸದಿಂದಲೂ ಬಾಳಿದರು. ಹಾಗೆ ಬಾಳುವಂತೆ ಎಲ್ಲರ ಮೇಲೆಯೂ ತಮ್ಮ ಪ್ರಭಾವವನ್ನು ಬೀರಿದರು. ತ್ಯಾಗಸೇವೆ ಮತ್ತು ಪ್ರೇಮದ ಪರಿಮಳವನ್ನು ದಿಕ್ಕುದಿಕ್ಕಿಗೂ ಬೀರಿದರು. ತಮ್ಮ ಮುಕ್ತಿಯನ್ನು ಬದಿಗೊತ್ತಿ "ನಾನು ಎಷ್ಟುಬಾರಿ ಬೇಕಾದರೂ ಪ್ರಪಂಚಕ್ಕೆ ಬರಲು ಸಿದ್ಧನಾಗಿರುವೆನು, ಪಡಬಾರದ ಕಷ್ಟವನ್ನು ಅನುಭವಿಸಲು ಸಿದ್ಧನಾಗಿರುವೆನು, ಇದರಿಂದ ಯಾವುದಾದರೊಂದು ಜೀವಿ ಭವಬಂಧನದಿಂದ ಪಾರಾದರೆ ಸಾಕು, ಅದಕ್ಕೆ ಶಾಶ್ವತ ಶಾಂತಿ ಸಿಕ್ಕಿದರೆ ಸಾಕು" ಎಂಬ ವಿಶ್ವಾನುಕಂಪದಿಂದ ತುಂಬಿತುಳುಕಾಡುತ್ತಿದ್ದ ಹೃದಯ ಅವರದು.

ಸ್ವಾಮಿ ವಿವೇಕಾನಂದರ ವಾಣಿ ಸ್ವಾತಂತ್ರ್ಯಪೂರ್ವದಲ್ಲಿ ಎಷ್ಟು ಅವಶ್ಯವಾಗಿತ್ತೋ, ಸ್ವಾತಂತ್ರ್ಯ ಉತ್ತರದಲ್ಲಿ ಅದಕ್ಕಿಂತಲೂ ಹೆಚ್ಚು ಆವಶ್ಯಕವಾಗಿದೆ. ಅವರ ವಾಣಿ ಭೈರವನ ತಂಬಟೆಯಂತೆ. ನಮ್ಮನ್ನು ಸುಪ್ತಸ್ಥಿತಿಯಿಂದ ಜಾಗ್ರತಗೊಳಿಸುವುದು. ಅದರಲ್ಲಿ ಮಿಂಚಿನ ಗೊಂಚಲಿನಲ್ಲಿರುವ ಕಾಂತಿಯಿದೆ. ಅದು ನಮ್ಮ ಜಡತನವನ್ನು ಪರಿಹರಿಸುವುದು. ಈಗ ಪತನದಿಂದ ಅಭ್ಯುದಯದ ಕಡೆಗೆ ಜಾಗ್ರತ ಭರತಖಂಡದ ರಥ ಸಾಗುತ್ತಿದೆ. ದಾರಿ ಕಡಿದು. ಆದರೆ ಎಲ್ಲ ಮನಸ್ಸುಮಾಡಿ ನೂಕಿದರೆ ಎಂತಹ ದುರ್ಗಮವಾದ ಸ್ಥಳವನ್ನಾದರೂ ಏರಬಲ್ಲದು. ಸ್ವಾಮೀಜಿ

ಅವರ ವಾಣಿ ಹಾಗೆ ನೂಕಲು ಸೊಂಟಕಟ್ಟಿ ನಿಂತವರ ಹೃದಯದಲ್ಲಿ ಶ್ರದ್ಧೆ ಅದಮ್ಯ ಉತ್ಸಾಹ ಛಲ ಇವುಗಳೆಲ್ಲ ಸ್ಪಂದಿಸುವಂತೆ ಮಾಡಬಲ್ಲದು.

—ಸೋಮನಾಥಾನಂದ

ಸ್ವಾಮಿ ವಿವೇಕಾನಂದ

ಸತ್ತಜನಕುಲವನ್ನು ಮತ್ತೆಬದುಕಿಸಲೆಂದು
ಹೆತ್ತ 'ಭುವನೇಶ್ವರಿ'ಯ ಧೀರಕಂದ,
ಸತ್ಯವದು ಸತ್ತಾಗ ಮಿಥ್ಯವದು ಎದ್ದಾಗ
ಸತ್ಯವನು ಎಬ್ಬಿಸಲು ಉದಿಸಿ ಬಂದ. ॥ ೧ ॥

ಅಂದು ಭಾರತವೆಲ್ಲ ಅಂಧಕಾರದೊಳಿರಲು
ಬಿಂದೆ ತಮವನು ಕಳೆಯೆ ಸೂರ್ಯನಾಗಿ!
ಅಂಧಶ್ರದ್ಧೆಯ ಬಳ್ಳಿ ಮುಂದೆ ಹಬ್ಬುವುದೆಂದು
ಬಂದೆ ಕಮರಿಸಲೆಂದು ಅಗ್ನಿಯಾಗಿ! ॥ ೨ ॥

"ನಮ್ಮ ಧರ್ಮವೆ ಮೇಲು ನಿಮ್ಮದದು ಕೀಳೆಂ"ಬ
ಹೆಮ್ಮೆ ಮೂರ್ತಿಯ ತಲೆಯನೊಡಯಬಂದೆ
"ನಮ್ಮ ಧರ್ಮವೂ ಮೇಲು, ನಿಮ್ಮ ಧರ್ಮವೂ ಮೇಲು
ಕಮ್ಮಿ-ಹೆಚ್ಚುಗಳಿಲ್ಲ"ವೆಂದು ನುಡಿದೆ ॥ ೩ ॥

"ಕುರಿಯ ಮಂದೆಯ ಸೇರಿ ಮರೆತು ಕುರಿಗಳೆ ಆದ
ಹಿರಿಯ ಸಿಂಹಗಳೇಳಿ ಗರ್ಜಿಸೆಂ"ದೆ
"ಕೆರಳಿ ತೂಗುತಲೆದ್ದು ನಿರತ ಕರ್ಮವಮಾಡಿ
ಪರಮ ಮೋಕ್ಷದ ಗುರಿಯ ಮುಟ್ಟಿರೆಂ"ದೆ ॥ ೪ ॥

"ಅಕ್ಕ ಅಣ್ಣದಿ"ರೆಂದು ಕಕ್ಕುಲತೆಯಿಂ ಕರೆದ
ಅಕ್ಕರೆಯ ಅಣ್ಣನಿದೊ ನಮಿಸ ಬಂದೆ
ಚಿಕ್ಕತನದಲಿ ನೀನು ಚೊಕ್ಕಜೀವನ ನಡೆಸಿ
ದಿಕ್ಕುದಿಕ್ಕಿಗೆ ಧರ್ಮ ಬೀರಿಬಂದೆ ॥ ೫ ॥

ರಾಮಕೃಷ್ಣರ ನೀ ವಿರಾಮವಿಲ್ಲದೆ ಭಜಿಸಿ
ರಾಮನಾಮದ ಸುಧೆಯ ಕುಡಿದೆ ತಂದೆ
ಕಾಮಮೋಹಾದಿಗಳ ಭೀಮಬಲದಲಿ ಜಯಿಸಿ
ಸೋಮಶೇಖರನಂತೆ ಯೋಗಿಯಾದೆ ॥ ೬ ॥

ಧರ್ಮ ಎದ್ದೋಡಿಹುದು, ಕರ್ಮ ಕಣ್ಮುಚ್ಚಿಹುದು
ಮರ್ಮ ಯಮಧರ್ಮನೆಡೆ ಸಾಗುತಿಹುದು
ಧರ್ಮ-ಮೇರುವು ನೀನು, ಕರ್ಮದಂಬುಧಿ ನೀನು
ಧರ್ಮ-ಕರ್ಮದ ಮರ್ಮ ತಿಳಿಸಬಾರೋ ॥ ೭ ॥

ಯೋಗಿಗಳ ಯೋಗೇಂದ್ರ ಯೋಗಿ' ರಾಮ 'ರ ಶಿಷ್ಯ
ಯೋಗ ಪಥವನು ಕಲಿಸೆ ಜನಿಸಿ ಬಾರೋ
ಭೋಗಾಭಿಲಾಷೆಗಳ ಸಾಗರದಿ ಮುಳುಗುವರ
ಯೋಗ-ನೌಕೆಯೊಳಿರಿಸಿ ಕಾಯಬಾರೊ ! ॥ ೮ ॥

—ಸುಲೋಚನ

ಶ್ರೀ ಸ್ವಾಮಿ ವಿವೇಕಾನಂದರ ಶತಮಾನೋತ್ಸವ ಜನ್ಮದಿನ

ಶ್ರೀ ರಾಮಕೃಷ್ಣ ಮಠ ಮತ್ತು ಮಿಷನ್ನಿನ ಅಧ್ಯಕ್ಷರ ಸಂದೇಶ

ಪೌರ ಮತ್ತು ಪಾಶ್ಚಾತ್ಯದೇಶದ ಸಹೋದರ ಸಹೋದರಿಯರೆ,

ಶ್ರೀ ಸ್ವಾಮಿ ವಿವೇಕಾನಂದರ ಮೊದಲ ಶತಮಾನದ ಇತಿಹಾಸ ಪ್ರಖ್ಯಾತ ಜನ್ಮೋತ್ಸವ ದಿನದಲ್ಲಿ ನನ್ನ ಹೃತ್ಪೂರ್ವಕವಾದ ಅಭಿನಂದನೆಗಳನ್ನು ನಿಮಗೆಲ್ಲ ಅರ್ಪಿಸಲು ಅವಕಾಶ ಕೊಡಿ. ಸ್ವಾಮಿ ವಿವೇಕಾನಂದರ ಇಹಜೀವನದ ಲೀಲೆ ಎಲ್ಲೋ ಕೆಲವು ವರ್ಷಗಳು ಮಾತ್ರ (೧೮೬೩–೧೯೦೨). ಆದರೆ ಆ ಅಲ್ಪಕಾಲಾವಧಿಯಲ್ಲಿ ಅವರು ಅಭೂತಪೂರ್ವವಾದ ಆಧ್ಯಾತ್ಮಿಕ ಅನುಭವಗಳನ್ನು ಪಡೆದು, ಅದನ್ನು ಪೌರ ಮತ್ತು ಪಾಶ್ಚಾತ್ಯ ದೇಶಗಳಲ್ಲೆಲ್ಲಾ ಪ್ರಚಾರಮಾಡಿದರು.

ಸ್ವಾಮಿ ವಿವೇಕಾನಂದರು ತಮ್ಮ ಯೌವನ ಕಾಲವನ್ನು ದಕ್ಷಿಣೇಶ್ವರದಲ್ಲಿ ಎಲ್ಲಾ ಕಾಲ ದೇಶಕ್ಕೆ ಸೇರಿದ ಮಾನವಕೋಟಿಯ ಆಧ್ಯಾತ್ಮಿಕ ಅಭೀಪ್ಸೆಗಳನ್ನು ಸಾಕ್ಷಾತ್ಕಾರ ಮಾಡಿಕೊಂಡಿದ್ದ ತಮ್ಮ ಗುರುವರ್ಯ ಶ್ರೀ ರಾಮಕೃಷ್ಣ ಪರಮಹಂಸರ ಪದತಳದಲ್ಲಿ ಕಳೆದರು. ಇದರಿಂದ ಪ್ರತಿಯೊಬ್ಬ ಮಾನವನಲ್ಲಿರುವ ಪವಿತ್ರತೆಯನ್ನು ಅರಿತು ವಿಶ್ವಧರ್ಮದ ಉದಾರ ಭಾವವನ್ನು ಪಡೆದಿದ್ದರು. ಆದಕಾರಣ ಸ್ವಾಮಿಜಿಯವರು ಭರತಖಂಡದಲ್ಲಿ ಜನಿಸಿದರೂ, ಅವರು ಇಡೀ ವಿಶ್ವಕ್ಕೆ ಸೇರಿದವರು. ಕೇವಲ ತನ್ನ ದೇಶಕ್ಕೆ ಮಾತ್ರ ಸೇರಿದವನೆಂದು ಭರತಖಂಡ ಹೇಳಿಕೊಳ್ಳಲಾರದು. ಅವರ ಸಂದೇಶ ಪೌರ ಮತ್ತು ಪಾಶ್ಚಾತ್ಯ ದೇಶಗಳಲ್ಲಿ ಮಾನವನಲ್ಲಿ ಸುಪ್ತವಾಗಿರುವ ಪವಿತ್ರತೆಯನ್ನು ಜಾಗ್ರತಗೊಳಿಸುವುದಾಗಿತ್ತು ಮತ್ತು ಮಾನವಕೋಟಿಯ ಐಕ್ಯತೆಯನ್ನು ಸಾರುವುದಾಗಿತ್ತು. ಈರ್ಷ್ಯೆ ಮತ್ತು ದ್ವೇಷಗಳಿಂದ ಹರಿದು ಹಂಚಿಹೋಗಿರುವ ಪ್ರಪಂಚಕ್ಕೆ ಇದು ಮಾತ್ರ ಶಾಂತಿಯನ್ನು ನೀಡಬಲ್ಲದು. ಅವರ ವಾಣಿಯನ್ನೇ ಕೇಳಿ—"ನಿಸ್ಸಂಶಯವಾಗಿ ನಾನು ಭರತಖಂಡವನ್ನು ಪ್ರೀತಿಸುತ್ತೇನೆ. ಆದರೆ, ದಿನಕಳೆದಂತೆ ನನ್ನ ದೃಷ್ಟಿ ಸ್ಪಷ್ಟವಾಗುತ್ತಿದೆ. ನಮಗೆ ಭರತಖಂಡವೇನು ? ಇಂಗ್ಲೆಂಡೇನು ? ಅಮೆರಿಕಾ ಏನು ? ಅಜ್ಞರು, ಯಾರನ್ನು ಕೇವಲ ಮಾನವ ಎಂದು ಕರೆಯುವರೋ ಅಂತಹ ದೇವರ ದಾಸರು ನಾವು."

"ಮಾನವಕೋಟಿಯ ಯೋಗಕ್ಷೇಮಕ್ಕೆ ಸಾಮಾಜಿಕವಾಗಿಯಾಗಲೀ, ರಾಜಕೀಯವಾಗಿಯಾಗಲೀ, ಆಧ್ಯಾತ್ಮಿಕವಾಗಿಯಾಗಲೀ ಒಂದೇ ತಳಹದಿ ಇರುವುದು. ಅದೇ ನಾನು ಮತ್ತು ನನ್ನ ಸಹೋದರ ಒಂದೇ ಎಂದು ಅರಿಯುವುದು. ಇದು ಎಲ್ಲಾ ದೇಶಕ್ಕೂ ಮತ್ತು ಎಲ್ಲಾ ಜನಾಂಗಕ್ಕೂ ಅನ್ವಯಿಸುವ ಸತ್ಯ."

ಸ್ವಾಮೀಜಿಯವರ ಸರ್ವಗ್ರಾಹಿಯಾದ ಸಂದೇಶದಲ್ಲಿ ವಿಜ್ಞಾನ ಮತ್ತು

ಧರ್ಮ, ಯುಕ್ತಿ ಮತ್ತು ಶ್ರದ್ಧೆ, ವ್ಯವಹಾರ ಮತ್ತು ಪಾರಮಾರ್ಥ, ಆಧುನಿಕ ಮತ್ತು ಪುರಾತನ, ಪೌರ ಮತ್ತು ಪಾಶ್ಚಾತ್ಯಗಳೆರಡೂ ಸಂಗಮವಾಗಿದ್ದುವು. ಅವರ ಜೀವನವೇ ಇಂತಹ ಒಂದು ಸಮನ್ವಯಕ್ಕೆ ನಿದರ್ಶನವಾಗಿದೆ. ಅವರ ಜೀವನ ಮತ್ತು ಸಂದೇಶ ಮಾನವಕೋಟಿಯ ನಾಗರಿಕತೆಯ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯದ ಅರುಣೋದಯಕ್ಕೆ ಶಕ್ತಿಯನ್ನು ಒದಗಿಸಿದೆ.

ಸ್ವಾಮಿಜಿಯವರು ತಮ್ಮ ದೇಶದ ಜನರಿಗೆ ಜಾಗೃತರಾಗಿ, ಕಾರ್ಯೋನ್ಮುಖರಾಗಿ ಎಂದು ತೂರ್ಯವಾಣಿಯಲ್ಲಿ ಬೋಧಿಸಿದರು — "ಕಾರ್ಯೋನ್ಮುಖರಾಗಿ, ಕಾರ್ಯೋನ್ಮುಖರಾಗಿ, ಭರತ ಖಂಡದ ಭವಿಷ್ಯ ಇದರ ಮೇಲೆ ನಿಂತಿದೆ" ಎಂದರು. ಕೆಲಸಕ್ಕೆ ಬಾರದ ಎಲ್ಲಾ ದ್ವೇಷಾಸೂಯೆಗಳಿಂದ ಪಾರಾಗಿ ಪೂರ್ವಕಾಲದಿಂದಲೂ ನಮ್ಮ ರಕ್ತಗತವಾಗಿ ಬಂದ "ವೈವಿಧ್ಯತೆಯ ಮಧ್ಯದಲ್ಲಿ ಐಕ್ಯತೆ" ಎಂಬ ಆದರ್ಶಕ್ಕೆ ತಮ್ಮ ಬಾಳನ್ನು ಅರ್ಪಿಸಿ ಎಂದು ಧೀರವಾಗಿ ಘೋಷಿಸಿದರು. ಈ ಆದರ್ಶದ ಆಧಾರದ ಮೇಲೆ ಭರತಖಂಡದಲ್ಲಿರುವ ವಿಭಿನ್ನ ಜಾತಿ, ಭಾಷೆ, ಆಚಾರ ವ್ಯವಹಾರಗಳು, ಇವುಗಳೆಲ್ಲದರಿಂದ ಭವಿಷ್ಯ ಮಹಾರಾಷ್ಟ್ರವನ್ನು ನಿರ್ಮಾಣಮಾಡಿ ಎಂದರು. ಈ ಕೆಲಸ ನಿಧಾನವಾದರೂ, ಶಾಶ್ವತವಾದ ಪ್ರತಿಫಲವನ್ನು ಕೊಡುವುದು; ಅತ್ಯಲ್ಪ ಕಾಲದಲ್ಲಿ ಆಕರ್ಷಣೀಯವಾದ ಫಲಿತಾಂಶಗಳನ್ನು ಪಡೆಯುವುದಕ್ಕಾಗಿ ಬಲ ಪ್ರಯೋಗವನ್ನು ಮಾಡಬಾರದೆಂದೂ, ಇಂತಹ ಫಲಿತಾಂಶಗಳು ಬಹಳ ಬೇಗ ನಾಶವಾಗುವುವೆಂದೂ ಅವರು ಬೋಧಿಸಿದರು. ಯಾವುದನ್ನೂ ನಾಶಮಾಡದೆ ವೈವಿಧ್ಯಗಳೆಲ್ಲವನ್ನೂ ಸೇರಿಸಿ ಒಂದು ಐಕ್ಯತೆಯ ಭಾವವನ್ನು ತರಬೇಕು, ನಾವು ನಾಶಮಾಡಿದರೆ ರಾಷ್ಟ್ರ ಅಷ್ಟು ದುರ್ಬಲವಾಗುವುದು, ಶಿಥಿಲವಾಗುವುದು. ಸ್ವಾಮಿಜಿಯವರು ತಮ್ಮ ದೇಶೀಯರಿಗೆ, ಭರತಖಂಡ ಹಿಂದೆ ಏನನ್ನು ಸಾಧಿಸಿದೆ ಎಂಬ ವಿಷಯದಲ್ಲಿ ಹೆಮ್ಮೆ ಇರಲಿ, ತಮ್ಮ ಮಾತೃಭೂಮಿಯ ಮಹಿಮಾಮಯವಾದ ಭವಿಷ್ಯದಲ್ಲಿ ಶ್ರದ್ಧೆ ಇರಲಿ ಎಂದು ಬೋಧಿಸಿದರು. "ನಾನು ಪ್ರಪಂಚದಲ್ಲಿ ಜನ್ಮತಾಳಿದ ಅಗ್ರಗಣ್ಯ ಸ್ವಾಭಿಮಾನಿಗಳಲ್ಲಿ ಒಬ್ಬನು. ಆದರೆ ಇದು ಕೇವಲ ನನಗಾಗಿ ಅಲ್ಲ ನನ್ನ ದೇಶಕ್ಕಾಗಿ; ಈ ದೇಶ ನನಗೆ ಶಕ್ತಿಯನ್ನು ಇತ್ತಿದೆ, ಪ್ರಪಂಚದ ಧೂಳಿನಿಂದ ನನ್ನನ್ನು ಮೇಲೆತ್ತಿದೆ; ನಿಮ್ಮಲ್ಲಿಯೂ ಅಂತಹ ಅಭಿಮಾನವಿರಲಿ." ಭರತಖಂಡದ ಭವಿಷ್ಯವನ್ನು ಕುರಿತು ಸ್ವಾಮಿಜಿ ಹೀಗೆಂದರು— "ನೋಡಿ, ನಮ್ಮ ಮಾತೃಭೂಮಿ, ತನ್ನ ಮಹಿಮಾಮಯವಾದ ಧ್ಯೇಯಸಾಧನೆಗಾಗಿ ಘನಗೌರವದಿಂದ ನಡೆಯುತ್ತಿರುವಳು. ಪ್ರಪಂಚದಲ್ಲಿ ಮತ್ತಾವ ಶಕ್ತಿಯೂ ಅವಳನ್ನು ಹಿಡಿದು ನಿಲ್ಲಿಸಲಾರದು." "ಏಳಿ, ಏಳಿ, ಸುದೀರ್ಘ ರಾತ್ರಿ ಕಡೆಗಿಂದು ಕಳೆಯುತ್ತಿದೆ. ನವೋದಯವಾಗುತ್ತಿದೆ, ಆ ಭೀಮ ಅಲೆಯ ಪ್ರಚಂಡ ಶಕ್ತಿಯನ್ನು ಯಾರೂ ತಡೆದು ನಿಲ್ಲಿಸಲಾರರು." "ಅವಳು ಇನ್ನು ಮೇಲೆ ನಿದ್ರಿಸ ಹೋಗುವುದಿಲ್ಲ. ಯಾವ ಬಾಹ್ಯಶಕ್ತಿಯೂ ಅವಳನ್ನು ತಡೆದು ನಿಲ್ಲಿಸಲಾರದು. ಅನಂತ ಮಹಿಮಾನ್ವಿತಳು ತನ್ನ ಕಾಲಮೇಲೆ ನಿಲ್ಲುತ್ತಿರುವಳು."

ಸ್ವಾಮೀಜಿಯವರು ಜನರಿಗೆ ತಮ್ಮಲ್ಲಿ ಆತ್ಮಶ್ರದ್ಧೆ ಇರಬೇಕು, ಸೋಮಾರಿತನವನ್ನು ತ್ಯಜಿಸಬೇಕು, ಭವಿಷ್ಯ ಭರತಖಂಡದ ನಿರ್ಮಾಣಕ್ಕೆ ಕಷ್ಟಪಟ್ಟು ದುಡಿಯಬೇಕು ಎಂದು ಬೋಧಿಸಿದರು. "ಆತ್ಮಶ್ರದ್ಧೆ ಇರಲಿ; ಅದು ಇಲ್ಲದೇ ಇದ್ದರೆ ನಿಮಗೆ ಮುಕ್ತಿ ಇಲ್ಲ. ಶ್ರದ್ಧಾವಂತರಾಗಿ, ಬಲಿಷ್ಠರಾಗಿ; ನಮಗೆ ಇಂದು ಬೇಕಾಗಿರುವುದು ಅದು" ಎಂದರು. "ನಿದ್ರಿಸುತ್ತಿರುವ ಆತ್ಮನನ್ನು ಜಾಗೃತಗೊಳಿಸಿ; ನೋಡಿ, ಅದು ಹೇಗೆ ಎದ್ದು ನಿಲ್ಲುವುದು ಎಂಬುದನ್ನು! ಆಗ ಶಕ್ತಿ ಬರುವುದು, ಮಹಿಮೆ ಬರುವುದು; ಯಾವುದು ಅತ್ಯಂತ ಯೋಗ್ಯವಾಗಿರುವುದೋ ಅವುಗಳೆಲ್ಲವೂ ಬರುವುವು." "ಯಾವ ಮಹಾಕಾರ್ಯವನ್ನೂ ತ್ಯಾಗವಿಲ್ಲದೆ ಸಾಧಿಸುವುದಕ್ಕೆ ಆಗುವುದಿಲ್ಲ. ನಿಮ್ಮ ಅನುಕೂಲಗಳು ನಿಮ್ಮ ಸುಖ, ನಿಮ್ಮ ಕೀರ್ತಿ ಹೆಸರು ಅಧಿಕಾರ, ಇಷ್ಟು ಮಾತ್ರವಲ್ಲ, ನಿಮ್ಮ ಪ್ರಾಣ ಸರ್ವಸ್ವವನ್ನೇ ಅರ್ಪಿಸಿ...." "ನಮ್ಮ ದೇಶಕ್ಕೆ ಇಂದು ಬೇಕಾಗಿರುವುದು, ಕಬ್ಬಿಣದಂತಹ ಮಾಂಸಖಂಡಗಳು, ಉಕ್ಕಿನಂತಹ ನರಗಳು, ಯಾವ ರೀತಿಯಲ್ಲಾದರೂ ತಮ್ಮ ಉದ್ದೇಶಗಳನ್ನು ಈಡೇರಿಸಿಕೊಳ್ಳಬಲ್ಲಂತಹ, ಮೃತ್ಯುವನ್ನೇ ಬೇಕಾದರೂ ಎದುರಿಸಬಲ್ಲಂತಹ ಪ್ರಚಂಡ ಇಚ್ಛಾಶಕ್ತಿ" "ಹೇ ಧೀರನೆ ಧೀರವಾಣಿಯಲ್ಲಿ ಹೀಗೆ ಸಾರು: ನಾನು ಭಾರತೀಯ, ಪ್ರತಿಯೊಬ್ಬ ಭಾರತೀಯನೂ ನನ್ನ ಸಹೋದರ.... ಭರತಖಂಡವೇ ನನ್ನ ಪರಂಧಾಮ, ಭರತಖಂಡದ ಹಿತವೇ ನನ್ನ ಹಿತ!" ಹಗಲು ರಾತ್ರಿ ಇದನ್ನು ಮನನಮಾಡಿ:—"ಹೇ ಗೌರೀವಲ್ಲಭ, ಹೇ ವಿಶ್ವೇಶ್ವರೀ, ಪೌರುಷವನ್ನು ನೀಡೆಮಗೆ, ನಮ್ಮನ್ನು ಪುರುಷಸಿಂಹರನ್ನಾಗಿ ಮಾಡು."

ಇಂದಿನ ನಮ್ಮ ವಿಷಮ ಪರಿಸ್ಥಿತಿಯಲ್ಲಿ ಎಂದಿಗಿಂತ ಹೆಚ್ಚಾಗಿ ಸ್ವಾಮೀಜಿಯವರ ವೀರ್ಯ, ಶ್ರದ್ಧೆ, ಶಕ್ತಿ ಮತ್ತು ಐಕ್ಯತೆಯ ಸಂದೇಶ ಬೇಕಾಗಿದೆ.

ಈ ಶತಮಾನದ ಸಂವತ್ಸರ ದೇಶಾದ್ಯಂತವೂ ಸ್ವಾಮೀಜಿಯವರ ಭಾವನೆಯಿಂದ ಅನುರಣಿತವಾಗುವುದನ್ನು ನೋಡುವುದು. ಇದು ಮಾನವನಿಗೆ ಎಂದೂ ಬತ್ತದ ಆಧ್ಯಾತ್ಮಿಕ ವಿದ್ಯೆಯನ್ನು ನೀಡುವ ಚಿರಂತನ ಸ್ಫೂರ್ತಿಯ ಚಿಲುಮೆಯಾಗಿರುವುದು. ಇದು ಮಾನವನಿಗೆ ಭವ್ಯದರ್ಶನವನ್ನಿತ್ತು, ಮಾನವ ಮಾನವರಲ್ಲಿ, ದೇಶದೇಶಗಳಲ್ಲಿ, ಐಕ್ಯತೆ ಸೌಹಾರ್ದ ಸಹೋದರಭಾವ ಮೂಡುವಂತೆ ಮಾಡುವುದು.

ಭರತಖಂಡವನ್ನು ಜಾಗೃತಗೊಳಿಸಿ ಪೌರ ಪಾಶ್ಚಾತ್ಯ ದೇಶಗಳನ್ನು ಒಂದುಗೂಡಿಸಿದ ಸ್ವಾಮೀಜಿ ಅವರ ಮೇರು ಸದೃಶ ಆತ್ಮಶಕ್ತಿ "ಆತ್ಮನ ಮೋಕ್ಷ ಮತ್ತು ಜಗತ್ತಿನ ಹಿತ" ಎಂಬ ಆದರ್ಶಕ್ಕೆ ತಕ್ಕಂತೆ ಬಾಳಿ ಬದುಕಲು ನಮಗೆ ಸ್ಫೂರ್ತಿಯನ್ನು ನೀಡಲಿ.

ಬೇಲೂರು ಮಠ
ಜನವರಿ ೧೭, ೧೯೬೩

ಸ್ವಾಮಿ ಮಾಧವಾನಂದ
ಅಧ್ಯಕ್ಷರು
ಶ್ರೀ ರಾಮಕೃಷ್ಣ ಮಠ ಮತ್ತು ಮಿಷನ್

ವಿಷಾದ

ಈಗ ಕಳೆದಿದೆ ಕನಸು ಮುಗುಳುನಗೆ
ಕತ್ತಲಲಿ ಮುಳುಗಿಹುದು ಜೀವವೃಕ್ಷ
ಜೋತಬಾವಲಿ ಕೀಚು ಒಂದೊಂದು ಎಲೆಗೆ
ಕಾದ ಚಕೋರನಿಗಿದು ಕೃಷ್ಣಪಕ್ಷ.

ಸಿಗರೇಟು ವಾಸನೆಗೆ ಮೊದಲಮಳೆ ಮಣ್ಣಕಂಪಿನ ಪುಳಕ ಇಲ್ಲ ಜಳಕ
ಸತ್ತಂತೆ ದಿನಕೆಂಟುಗಂಟೆ ಮಲಗುವ ರೂಢಿ ಮತ್ತೆ ಸರ್ವಜ್ಞತನದ ಬಿಂಕ.
ಟೆನೋಪಾಲಿನಲಿ ತೊಳೆದ ಬುಷ್‌ಷರಟು ಗ್ಯಬರ್‌ಡೀನ್ ಟ್ರೌಸರಿನಲ್ಲಿ
ಕಾವ್ಯವೆಲ್ಲಿದೆ ಇಲ್ಲಿ ಕನಸಿಲ್ಲದಲ್ಲಿ ?

ಚಿನ್ನದ ತತ್ತಿಯಾಸೆಗೆ ಎದೆಯ ಸೀಳುವ ತುರುಚಿ ಮುಟ್ಟಿರುವ ಗಂಡುಕುನ್ನಿ
ಏನಾದರೂ ಅನ್ನಿ
ಇನ್ನು ಮುಡಿಯುಲು ಬಹುದೆ ವಿಜಯದಶಮಿಯ ದಿವಸ ಶುಭದ ಬನ್ನಿ ?

ಅಣ್ಣಾ ಇನ್ನೆಷ್ಟುದಿವಸ ಕನವರಿಸೀಯೆ ನೀ ಕಂಡಕನಸ ?
ನೆನಪುಹೊತ್ತಗೆಗೆ ಹತ್ತುತಿದೆ ಗೆದ್ದಲು ಜಾಡಿಸುವ ಕೈಗೆ ವಿರಸ.
ಕಣ್ಣಹೊಳಪಿಲ್ಲ ಕೆನ್ನೆತುಂಬಿಲ್ಲ ಗುರುವಿಲ್ಲ ಗರಡಿಯೊಳಗೆ
ಈಗಲೂ ಕಾಲ ತುಂಬಿ ಬಂದಿಲ್ಲವೆ, ಇನ್ನೊಂದು ಹಾಳೆಯನು ಮಗುಚುವುದಕೆ?

—ಸುಮತೀಂದ್ರ ನಾಡಿಗ

ಕೋಗಿಲೆ

" ಕೋಗಿಲೇ, ಚೆಲ್ವ ಕೋಗಿಲೇ
ಮುದ್ದು ಕೋಗಿಲೇ, ಜಾಣ ಕೋಗಿಲೇ."

—' ಅಂಬಿಕಾತನಯದತ್ತ '

೧

ತೇನೆಯ ತೂರ್ಯಸ್ವನ ಬೆಳದಿಂಗಳ ಪ್ರಶಾಂತತೆಯನ್ನು ಕದಡಿತು. ಸಂತೆ ಮಾರನಹಳ್ಳಿಯಿಂದ ಹಿಂತೆರಳುತ್ತಿದ್ದವರು ಅಲ್ಲಿಯೇ ಆಲಿಸುತ್ತ ನಿಂತರು. ಒಂದಲ್ಲ, ಜೋಡಿಹಕ್ಕಿಯ ದನಿ.

ಮರಿಯ ಪಕ್ಕದಲ್ಲಿದ್ದ ಮೂಡಲಿಗೆ ಹೇಳಿದ: " ಯಣ್ಣಾ, ಗುಂಡುಗಲ್ಲು ಬಾರೆಯಾಚೆ ತೇನೆ ಸದ್ದುಹಾಕ್ತಿವೆ. ತೋಪಿಗೆ ಯಾರೊ ಬಂದಿರಬೇಕು. ಈ ಅವೇಳೆಯಲ್ಲಿ ಯಾರು ಬಂದಿದ್ದಾರು ? "

ಉತ್ತರ ಬಂದುದು ಈರನಿಂದ: " ಗೋಸಾಯಿಗಳು ಯಾರಾದರೂ ಬಂದಿದ್ದಾರು–ಮಂಟಪದಲ್ಲಿ ತಂಗಾಕೆ. "

ಮೂಡಲಿ ಈರನ ಊಹೆ ಒಪ್ಪಲಿಲ್ಲ. " ತೇನೆಗೆ ಮನುಷ್ಯರೇ ಆಗಬೇಕಿಲ್ಲ, ಕಾಡು ಪ್ರಾಣಿ ಬಂದರೂ ಕೂಗ್ತವೆ. ಹೋದ ವಾರ ಊರಿಗೆ ಕಿರಬ ನುಗ್ಗಿ ನನ್ನ ಕರ ಹೊತ್ತುಕೊಂಡು ಹೋಗಲಿಲ್ವಾ? ಕಾಡಿನ ಬದಿಯಲ್ಲಿದ್ದು ಇವುಗಳ ಕಾಟ ನಮಗೆ ತಪ್ಪಿದ್ದಲ್ಲ."

ಮಾದನ ಮನಸ್ಸಿನಲ್ಲಿ ತೋಪಿಗೆ ಹೋಗಿ ನೋಡುವ ಆಸೆ. ಆದರೆ ಕಿರುಬದ ಹೆಸರೆತ್ತಿದ ಕೂಡಲೆ ಅವನ ಉತ್ಸಾಹ ತಣ್ಣಗಾಗಹತ್ತಿತು.

ಈರ ಅಷ್ಟು ಸುಲಭಕ್ಕೆ ಸೋಲು ಒಪ್ಪತಕ್ಕವನೆ? '' ಬಾರೆ ಬಳಸಿ ಊರಿಗೆ ಹೋಗಾಕೆ ವಸಿ ದೂರಾದರೆ ಏನಂತೆ, ಈ ಹೊತ್ತಿನಾಗ ಅಲ್ಲಿಗೆ ಯಾರು ಬಂದಿದ್ದಾರು ನೋಡಿಯೇಬಿಡುವ."

ನೆರೆಹಳ್ಳಿಯ ಬಯಲಾಟದವರು ಗೆಜ್ಜೆಪೂಜೆ ಮಾಡುವರೆಂದು ತಿಳಿದು ಸಂಜೆ ಉಂಡವರೆ ಅಲ್ಲಿಗೆ ನಡೆದುಬಿಟ್ಟಿದ್ದರು. ಈಗ ಸರಿಹೊತ್ತು ಮೀರಿದ್ದರೂ ಅವರಿಗೆ ನಿದ್ರೆಯ ಹವ್ಯಾಸವಿಲ್ಲ. ಹಾಲುಬೆಳದಿಂಗಳು ; ಗೆಳೆಯರ ಸಂಗ ; ತಮ್ಮೂರಿಗೆಲ್ಲ ತಾವು ಮಾತ್ರ ಗೆಜ್ಜೆಪೂಜೆಗೆ ಹೋಗಿಬಂದವರೆಂಬ ಬಿಂಕ; ಬೆಳಗಾದರೆ ತಮ್ಮ ದಿಟ್ಟತನದ ಕತೆಕಟ್ಟಿ ಗೆಳೆಯರೊಡನೆ ಕೊಚ್ಚಿಕೊಳ್ಳಬಹುದೆಂಬ ಆಸೆ—ಇಷ್ಟೆಲ್ಲ ಕಾರಣ ಸೇರಿತು ಅವರು ನೇರವಾದ ದಾರಿಬಿಟ್ಟು ತೋಪಿನ ಕಡೆ ತಿರುಗುವುದಕ್ಕೆ. ಅಲ್ಲಿ ಸಂಭವಿಸಬಹುದಾದ ಆಕಸ್ಮಿಕಗಳಿಗೆ ಸಜ್ಜಾಗುವರಂತೆ ದೊಣ್ಣೆಗಳನ್ನು ಕಂಕಳಿಂದ ಕೈಗೆ ತೆಗೆದುಕೊಂಡು, ಹೊದ್ದಿದ್ದ ದುಪಟಿಗಳನ್ನು ಸರಿಪಡಿಸಿಕೊಳ್ಳುತ್ತ,

ಕಿವಿ ಮುಚ್ಚಿ ಕಟ್ಟಿದ್ದ ಲಪ್ಪಟ್ಟಿಗಳನ್ನು ಸಡಲಿಸಿ ಕೇಳಬಹುದಾದ ಎಲ್ಲ ಸದ್ದು ಸುಳುವಿಗೆ ಎಡೆಮಾಡಿ, ಮೈಯೆಲ್ಲ ಕಣ್ಣಾಗಿ ಅತ್ತ ನಡೆದರು.

ಸಂತೆಮಾರನಹಳ್ಳಿಯಿಂದ ಶಿವಪುರಕ್ಕೆ ಹೋಗುವ ಹಾದಿ ಗುಂಡುಗಲ್ಲು ಬಾರೆಯನ್ನು ಬಲಕ್ಕೆ ಬಿಡುತ್ತದೆ. ದಾರಿಯಲ್ಲಿ ಹೋಗುವವರಿಗೆ ಬಾರೆ ಅಡ್ಡವಾಗು ವುದರಿಂದ ಆಚೆಯ ತೋಪು ಕಾಣುವುದಿಲ್ಲ. ಬಾರೆಯನ್ನು ಈಚೆ ಅಂಚಿನಿಂದ ಹತ್ತಿ ಕೆಳಕ್ಕಿಳಿದು ಎಡಕ್ಕೆ ತಿರುಗಿದರೆ ತಾತಪ್ಪನ ತೋಪು ಸಿಗುತ್ತದೆ. ತೋಪಿನ ನಡುವೆ ಕಲ್ಲುಕಟ್ಟಿದ ಕಲ್ಯಾಣಿಯಿದೆ. ಅದರ ತಲವಿಗೆ ಬಡಗ ಮೂಡ ಕಡೆಗಳಲ್ಲಿ ನಾಲ್ಕಾರು ಕಲ್ಲುಮಂಟಪಗಳು. ತೆಂಕಣದ ಬಯಲು ದಾಟಿದರೆ ದೂರದಲ್ಲಿ ಕಾಣುವುದು ಮಸಣ.

ಈ ನಾಲ್ವರು ಬಾರೆ ಏರುತ್ತಿದ್ದಂತೆ ಹಕ್ಕಿಗಳ ಕೂಗು ನಿಂತು ಮತ್ತೆ ನಿಶ್ಶಬ್ದ ಕವಿಯಿತು. ಹಟಾತ್ತನೆಯ ಈ ಮೌನದಿಂದ ಯುವಕರ ಮನಸ್ಸಿಗೆ ಬಿಕೋ ಎನಿಸಿತು. ಇದುವರೆಗೆ ಗಟ್ಟಿಯಾಗಿ ಮಾತನಾಡುತ್ತ ಬರುತ್ತಿದ್ದವರು ಮಾತು ನಿಲ್ಲಿಸಿದರು. ಮಾದ ಮೂಡಲಿಗೆ ಪಿಸುದನಿಯಲ್ಲಿ ಉಸುರಿದ: "ಯಣ್ಣಾ, ಕೂಗ್ತಿದ್ದ ತೇನೆ ತೆಪ್ಪಗಾದ್ವು. ಬಂದಿದ್ದವರು ಹೊಂಟುಹೋಗಿದ್ದಾರು. ನಾವು ಯಾಕಾದರೂ ತೋಪಿಗೆ ಹೋಗಬೇಕು?" ಮೂಡಲಿ ತಾನು ಅಳ್ಳೆದೆಯವನಲ್ಲ ದಿದ್ದರೂ ಹೀಗೆ ಗೆಳೆಯನೊಬ್ಬನು ಹಿಂದೆಳೆಯುವುದು ಕಂಡು ಉಳಿದವರು ಧೈರ್ಯ ಗೆಡಬಹುದೆಂದು ಭಾವಿಸಿ, ಯಾರಿಗೂ ಮುಖಭಂಗವಾಗದೆ ಎಲ್ಲರೂ ಒಪ್ಪುವ ಸಲಹೆ ಮಾಡಿದ: "ಹಂಗಿದ್ದರೆ ಆ ಗುಂಡುಗಲ್ಲು ಹತ್ತಿ ನೋಡುವ. ಮಂಟಪದಲ್ಲಿ ಯಾರಾದರೂ ತಂಗಿದ್ದರೆ ತಿಂಗಳಬೆಳಕಲ್ಲಿ ಕಂಡೇ ಕಾಣ್ತದೆ."

ಗುಂಡುಗಲ್ಲು ಹತ್ತಿ ಎವೆಯಿಕ್ಕದೆ ನೋಡಿದರು. ಮಂಟಪದ ಆಚೆಗೆ ಏನೋ ಸರಿಯುತ್ತಿದೆ. ಮರದ ನೆರಳಲ್ಲಿ ಸರಿಯಾಗಿ ಕಾಣಿಸದು. ಬಯಲಿಗೆ ಹೋಗುವ ವರೆಗೆ ಕಾದು ನಿಂತರು. ಬಿಳಪು ಕಪ್ಪಿನ ಆಕಾರ. ಆಳಿಗೆ ಕಿರಿದು, ನಾಯಿ ನರಿಗೆ ಹಿರಿದು. ಮಸಣದತ್ತ ಸಾಗುತ್ತಿದೆ. ನಿಬ್ಬೆರಗಾಗಿ ನೋಡಿದರು. ದೂರ ಸರಿದಂತೆ ಆಕಾರ ಮಸಕಾದರೂ ಮಸಣದಲ್ಲಿ ಏನನ್ನೋ ಹುಡುಕುತ್ತಿರುವಂತೆ ಗೋಚರಿಸಿತು. ಇನ್ನು ಹೆಚ್ಚು ಅವರಿಂದ ನೋಡಲಾಗಲಿಲ್ಲ. ಅವರ ಕಾಲುಗಳು ತಾವಾಗಿಯೆ ಗುಂಡುಗಲ್ಲ ಹಿಂಬದಿಯಿಂದ ಜಾರಿ ಕಾಲುಹಾದಿ ಹಿಡಿದು ಶಿವಪುರದ ಮಾರ್ಗವನ್ನು ಸೇರಿಕೊಂಡುವು.

* * *

ಎರಡು ವರ್ಷದಿಂದ ಹೊನ್ನಪ್ಪನಿಗೆ ಜೀವನವೇ ಜುಗುಪ್ಸೆಯಾಗಿದೆ. ಇಂದು ಹೇಗೆ ಹೇಗೆ ಹೊರಳಿದರೂ ನಿದ್ರೆಯೇ ಬಾರದು. ಮೊನ್ನೆ ತಾನೆ ಅರುವತ್ತು ದಾಟಿದ ತನ್ನ ಬಾಳಿನ ಎಲ್ಲ ಆಗುಹೋಗುಗಳನ್ನು ಸ್ಮರಿಸಿಕೊಂಡು ಮೆಲುಕಾಡುತ್ತಿದ್ದಾನೆ.

ದೊಡ್ಡಪ್ಪ ಸಿದ್ಧರಾಮಣ್ಣನಿಗೆ ಬಂಗಾರ ಮಾಡುವ ಹುಚ್ಚು. ಅದಕ್ಕಾಗಿ

ಬೈರಾಗಿಗಳ ಹಿಂದೆ ಅಲೆದಾಟ; ಊರಲ್ಲಿರುವಾಗ ತನ್ನನ್ನು ಕಟ್ಟಿಕೊಂಡು ಗಿಡ ಮೂಲಿಕೆಗಳಿಗಾಗಿ ಕಾಡು ಮೇಡು ತಿರುಗಾಟ. ಹೀಗೆ ಪ್ರಾರಂಭವಾದ ಬಾಲ್ಯ-ಪ್ರಭಾವ ಹರೆಯದಲ್ಲಿ ಬಲಿತು ತನಗೂ ಹುಚ್ಚುಹಿಡಿಸಬೇಕೆ? ಬಹುಕಾಲವಾದರೂ ಊರಿಗೆ ಬಾರದ ದೊಡ್ಡಪ್ಪನನ್ನು ಹುಡುಕಿಕೊಂಡು ಬರುವ ನೆಪದಲ್ಲಿ ಮನೆ ಬಿಟ್ಟವನು. ಬೈರಾಗಿಗಳ ಸಂಗಸಹವಾಸಕ್ಕೆ ಬಿದ್ದು ಐದಾರು ವರುಷ ಉರುಳಿವೆ. ಅವರೊಡನೆ ತೋಪಿನ ಮಂಟಪದಲ್ಲಿದ್ದಾಗ ಕಲ್ಯಾಣಿಗೆ ಬಂದ ನಂಜುಂಡ ಜೋಯಿಸರ ದರ್ಶನಲಾಭವಾಗುತ್ತದೆ. ಮತ್ತೆ ಮಾರನೆಯ ದಿನ ಬೆಳಗ್ಗೆ ಕಲ್ಯಾಣಿಗೆ ಅವರು ಬಂದಾಗ ಕರೆದು ಹತ್ತಿರ ಕೂರಿಸಿಕೊಂಡು ಬುದ್ಧಿ ಹೇಳುತ್ತಾರೆ: "ಹೊನ್ನಪ್ಪ, ಇನ್ನು ಈ ಹುಚ್ಚು ಸಾಕುಮಾಡು. ಈ ಅಲೆಮಾರಿಗಳ ಸಂಗ ಬಿಟ್ಟು ಸಂಸಾರಿಯಾಗಿ ಬಾಳು. ನಿನ್ನ ಚಿನ್ನ ರನ್ನ, ಸುಖ ಸಂತೋಷ ಎಲ್ಲ ಇಲ್ಲಿದೆ. ರಟ್ಟೆ ಗಟ್ಟಿಯಾಗಿರುವಾಗ ದುಡಿಯಬೇಕು. ಬೆವರಿನಿಂದ ಸಂಪಾದಿಸಿದ ಅನ್ನ ಮೈ ಹತ್ತುತ್ತದೆ. ನಿನಗೆ ಹೊಲ ಮನೆ ಕೊಡುತ್ತೇನೆ, ಬಾ." ಮನೆಗೆ ಕರೆದುಕೊಂಡು ಹೋಗಿ ಸಾಕಿ ಸಲಹಿದ ದಣಿ. ಕಾಲಕ್ರಮದಲ್ಲಿ ಮದುವೆ ಮಾಡಿದರು. ಊರಲ್ಲಿ ಇನ್ನೊಂದು ಒಕ್ಕಲು ನಿಲ್ಲಿಸಿದರು. ಎಷ್ಟಾದರೂ ಭವಿಷ್ಯ ಬಲ್ಲವರಲ್ಲವೆ!

ಲಕ್ಷ್ಮಿಯ ಕೈಹಿಡಿದು ಯಾವುದಕ್ಕೂ ಕೊರತೆಯಾಗಲಿಲ್ಲ. ಹೌದು, ಇದ್ದ ಒಂದು ಕೊರತೆಯನ್ನೂ ದೇವರು ದೂರಮಾಡಿದ ದಣಿಯ ಮೂಲಕ.

ಹತ್ತು ವರ್ಷದ ಹಿಂದೆ. ಎಂದಿನಂತೆ ಬೆಳಗಿನ ಆಹ್ನಿಕಕ್ಕೆ ಕಲ್ಯಾಣಿಗೆ ಹೋಗಿದ್ದವರು ಹೊದ್ದಿದ್ದ ಪಂಚೆಯಲ್ಲಿ ಏನನ್ನೊ ಅವಚಿಕೊಂಡು ಮನೆಗೆ ಬಂದರು. ಜಗತಿಯ ಮೇಲಿದ್ದವನನ್ನು ಒಳಗೆ ಬರಲು ಸನ್ನೆಮಾಡಿ ಪಡಸಾಲೆಗೆ ಹೋಗಿ ನಿಂತರು. "ಏ ಲಕ್ಷ್ಮವ್ವ, ನಿನಗೊಂದು ದಿವ್ಯವಸ್ತು ತಂದಿದ್ದೇನೆ, ಹಿಡಿ", ಎಂದು ಕೂಗಿಕರೆದು ಒಳಗಿಂದ ಬಂದವಳ ಮಡಲಿಗೆ ಮಗುವನ್ನು ಹಾಕಿದರು. "ದೇವರು ಕೊಟ್ಟಿದ್ದಾನೆ. ಚೆನ್ನಾಗಿ ಸಾಕಿಕೊ. ನಿನ್ನ ಮನೆ ಬೆಳಗುತ್ತಾನೆ." ಹೀಗೆ ಹೇಳುತ್ತಿದ್ದಂತೆ ಹೊರಟೇಬಿಟ್ಟರು. ಲಕ್ಷ್ಮಿ ಬೆಪ್ಪುಬೆರಗಾಗಿ ನಿಂತಳು. ನೋಡು ತ್ತಿದ್ದವನು ಓಡಿಹೋಗಿ ತಲೆಬಾಗಿಲಲ್ಲಿ ಅವರನ್ನು ಅಡ್ಡಹಾಕಿ ಎರಡು ಪಾದ ಗಳನ್ನೂ ಹಿಡಿದುಕೊಂಡಾಗ ಏನೂ ಅರಿಯದವರಂತೆ ಕಣ್ಣರಳಿಸಿ ಕಪಟನಾಟಕ ವಾಡಿದರು. "ಯಾಕೋ, ನಿನಗೇನಾಯಿತು? ಮುದುಕನ ಕಾಲುಬಿಡು ಮಹಾರಾಯಾ!" ಎಂದು ಕೈಕಾಲು ಒದರುತ್ತ ನಗಲು ಮೊದಲಿಟ್ಟರು. ಅವರು ಮಾಡುವುದು ನೋಡಿ ಇಬ್ಬರಿಗೂ ಹಿಡಿಸಲಾರದಷ್ಟು ನಗುಬಂತು. "ಮಹಾ ರಾಯ್ತಿ, ನಿನ್ನ ಹುಚ್ಚು ನಗುವಿನಲ್ಲಿ ಮಗುವನ್ನು ಎತ್ತಿಹಾಕೀಯ. ಅದನ್ನ ದೇವರ ಮುಂದೆ ಮಲಗಿಸಿ ಬೆಚ್ಚಗೆ ಹೊದ್ದಿಸು. ಹೊನ್ನಪ್ಪ ನನ್ನ ಜತೆಗೆ ಬರುತ್ತಾನೆ." ಹೀಗೆನ್ನುತ್ತ ಮನೆಯಿಂದ ನಡೆದೇಬಿಟ್ಟರು. ಹಿಂಬಾಲಿಸಿ ಮನೆಗೆ ಬಂದವನನ್ನು

ನಡುಮನೆಯಲ್ಲಿ ಕುಳ್ಳಿರ ಹೇಳಿ ಒಳಗೆ ಹೋದವರು ಮಧ್ಯಾಹ್ನವಾದರೂ ಈಚೆಗೆ ಹಣಕಲಿಲ್ಲ. ಊಟದ ಹೊತ್ತಿಗೆ ಸುಬ್ಬಣ್ಣನವರು ತೋಟದಿಂದ ಬಂದರು. "ಯಾವಾಗ ಬಂದಿ ಹೊನ್ನಪ್ಪ? ತಿರುಮಲ ನಿನಗಾಗಿ ತೋಟದಲ್ಲಿ ಕಾಯುತ್ತಿದ್ದ" ಎಂದರು.

"ಅಯ್ಯ ಆಗಲೇ ಕರೆದುಕೊಂಡು ಬಂದರು............"

"ಸರಿ. ನಿನ್ನನ್ನ ಇಲ್ಲಿ ಕೂರಿಸಿರುವುದು ಅಪ್ಪನಿಗೆ ಮರೆತುಹೋಗಿರಬೇಕು. ಒಳಗೆ ಹೋಗಿ ನೋಡುತ್ತೇನೆ."

ನೋಡಿ ಬಂದು ಹೇಳಿದರು: "ಅಪ್ಪ ಆಗಲೇ ದೇವರ ಕೋಣೆಯಲ್ಲಿ ಜಪಕ್ಕೆ ಕೂತರಂತೆ; ಇನ್ನೂ ಎದ್ದುಬಂದಿಲ್ಲ."

ಕೊಂಚ ಹೊತ್ತಿನ ಮೇಲೆ ತಂದೆ-ಮಗ ಇಬ್ಬರೂ ಬಂದರು. ಅಯ್ಯನವರು ವಿಭೂತಿಯನ್ನು ಕೈಗಿತ್ತು, "ಇದನ್ನ ಮಗುವಿನ ಮೈಗೆಲ್ಲಾ ಸವರು. ಹೊತ್ತು ಮುಳುಗುವುದರೊಳಗೆ ಬರುತ್ತೇನೆ" ಎಂದರು. ಸುಬ್ಬಣ್ಣನವರು, "ಊಟದ ಹೊತ್ತಿನಲ್ಲಿ ಹಾಗೆಯೇ ಹೋಗುವುದೆ?" ಎಂದು ಗೊಣಗಲು ಅಯ್ಯನವರು ನಗುತ್ತ ಮಗನಿಗೆ ಹೇಳಿದರು: "ಇವೊತ್ತು ಹೊನ್ನಪ್ಪನಿಗೆ ಊಟ ಯಾಕೆ ಬೇಕು? ಅವನಿಗೆ ಮನೆಯಲ್ಲಿ ಮೃಷ್ಟಾನ್ನಭೋಜನ ಕಾದಿದೆ. ನಮ್ಮ ಮನೆಯ ಸಪ್ಪೆಸಾರು ಏನು ರುಚಿಸೀತು!" ಇತ್ತ ತಿರುಗಿ, "ಸುಬ್ಬಣ್ಣನ ಮಾತೇನು—ನೀನು ಬೇಗ ಹೋಗಿ ನಾನು ಹೇಳಿದಂತೆ ಮಾಡು. ಸಂಜೆ ಬರುತ್ತೇನೆ" ಎಂದರು.

ಸಂಜೆಗೆ ಬಂದರು. ಮಗು ಇನ್ನೂ ಎಚ್ಚರವಿರಲಿಲ್ಲ. ತೊಡೆಯಮೇಲಿಟ್ಟು ಕೊಂಡು ಪರೀಕ್ಷಿಸಿದರು. "ಲಕ್ಷ್ಮಿಪ್ಪ, ನಿನಗೆ ಚುಟಿಕೆ ಹಾಕುವುದಕ್ಕೆ ಬರುತ್ತದೆಯೆ?" ಇಲ್ಲವೆಂದು ತಲೆಯಲ್ಲಾಡಿಸಿದಳು. "ಓಹೋ ಮರೆತಿದ್ದೆ—ನೀವೆಲ್ಲ ದನಕ್ಕೆ ಸೂಡು ಹಾಕುವವರು, ಜನಕ್ಕೆ ಬರೆಹಾಕಲು ಬರುವುದಿಲ್ಲ! ಮನೆಗೆ ಹೋಗಿ ಸಾವಿತ್ರಮ್ಮನನ್ನು ಕರೆದುಕೊಂಡು ಬಾ."

ಸುಬ್ಬಣ್ಣನವರ ಹೆಂಡತಿ ಬಂದು ಚುಟಿಕೆ ಹಾಕಿದರು. ಮಗು ಕಿಟಾರನೆ ಕಿರಚಿ ಕಣ್ಣುಬಿಟ್ಟಿತು. "ನಿಮ್ಮ ಅದೃಷ್ಟ ಚೆನ್ನಾಗಿದೆ" ಎಂದರು ದಣಿ.

ಈಗ ಮಗು ಮನೆಯಲ್ಲಿ ಓಡಾಡುತ್ತಾನೆ. ತೊದಲು ಮಾತಾದರೂ ಎಷ್ಟು ಮುದ್ದಾಗಿ ಆಡುತ್ತಾನೆ!

* * *

ಒಂದು ಸಂಜೆ. ಹೊಸಕೆರೆಯಿಂದ ಲಕ್ಷ್ಮಿಯ ತಮ್ಮ ಬಂದು ಮನೆಯ ಮುಂದೆ ಗಾಡಿ ಬಿಟ್ಟಿದ್ದಾನೆ. ಮಗು ಜಗಲಿಯಿಂದ ಇಳಿದು ಎತ್ತುಗಳ ಹತ್ತಿರ ಹೋಗಿರುವುದನ್ನು ಕಂಡು, "ಅಯ್ಯೋ! ಎತ್ತು ಹಾಯುತ್ತದೆ" ಎನ್ನುತ್ತ ಗಾಬರಿಯಿಂದ ಒಂದೇ ಹಾರಿಗೆ ಒಳಗಿಂದ ಬರುತ್ತಾನೆ ಚಿಕ್ಕಣ್ಣ. ಅಷ್ಟರಲ್ಲಿ ಮಗು ಎತ್ತುಗಳ ಕಾಲಡಿ ನುಸಿದು ಎರಡರ ಬಾಲವನ್ನೂ ಹಿಡಿದು ಜಗ್ಗಿಸುತ್ತಿದೆ.

ಚಿಕ್ಕಣ್ಣ ಮಗುವನ್ನು ಎತ್ತಿಕೊಂಡು ಮುಂದೆ ಹೋಗಿ ಎತ್ತುಗಳನ್ನು ಮುಟ್ಟಿಸುತ್ತಾನೆ. ಅವು ಮಗುವಿನ ಕೈ ಮೂಸಿ ನೆಕ್ಕುತ್ತವೆ. ತೋಟದಿಂದ ಜತೆಯಲ್ಲಿ ಬರುತ್ತಿದ್ದ ದಣಿ ನೋಡಿ ತಲೆದೂಗುತ್ತಾರೆ.

* * *

ಇನ್ನೊಂದು ಬೆಳಗ್ಗೆ. ತಮ್ಮ ಹಸು ಒದೆಯಿತೆಂದು ಮೊಮ್ಮಗುವಿನ ಹಾಲಿಗಾಗಿ ಅಯ್ಯನವರು ತಾವೇ ಪಾತ್ರೆ ಹಿಡಿದುಕೊಂಡು ಮನೆಗೆ ಬಂದಿದ್ದಾರೆ. ಲಕ್ಷ್ಮಿ ಆಗತಾನೆ ಹಾಲು ಕರೆದು ಕರುವಿನ ಹಗ್ಗ ಕಳಚಿಬಿಟ್ಟು ಹೋಗಿದ್ದಾಳೆ. ಮಗು ಕರುವಿನೊಡನೆ ತಾನೂ ಹಸುವಿನ ಮೊಲೆಯೂಡುತ್ತಿರುವುದು ಕಂಡು ಎನ್ನುತ್ತಾರೆ: "ಮೂಕು ಪ್ರಾಣಿಗಳ ಇಂಗಿತ ಬಲ್ಲುದು ಈ ಮಗು. ಬುದ್ಧಿ ತಿಳಿಯುವಂತಾಗುತ್ತಲು ನಿನಗೆ ಗೊತ್ತಿರುವ ನಾರುಬೇರಿನ ಮದ್ದೆಲ್ಲ ಹೇಳಿಕೊಟ್ಟುಬಿಡು. ಅಲ್ಲಿಗೆ ನೀನು ಕಲಿತಿದ್ದೂ ಸಾರ್ಥಕ, ಸಹಸ್ರಾರು ಜೀವಜಂತುಗಳೂ ಬದುಕಿಕೊಳ್ಳುತ್ತವೆ."

ಎರಡು ವರ್ಷದಿಂದ ಮನೆಯ ಜ್ಯೋತಿಯಾಗಿ ಬೆಳಗುತ್ತಿದೆ ಮಗು.

* * *

ಚಿಕ್ಕಣ್ಣನ ಹೆಂಡತಿ ಹಡೆದು ಕಾಲವಾದಳೆಂದು ಆಳು ಬಂದಿದೆ. ಲಕ್ಷ್ಮಿ ಹೊಸಕೆರೆಗೆ ಹೋದವಳು ಬರುವಾಗ ಹದಿನೈದು ದಿನದ ಬತ್ತಿಯನ್ನು ತರುತ್ತಾಳೆ. ಮಗು ಪಾಪನನ್ನು ಎಡೆಬಿಡುವುದಿಲ್ಲ. ಲಕ್ಷ್ಮಿ ಹೆಸರಿಗೆ ಮಾತ್ರ ತಾಯಿ, ಸಾಕುವವನು ಮಗು. ಹಾಲು ಕುಡಿಸುತ್ತಾನೆ; ತೊಟ್ಟಿಲು ತೂಗುತ್ತಾನೆ; ಆಟವಾಡಿಸುತ್ತಾನೆ; ಮಾತು ಕಲಿಸುತ್ತಾನೆ.

* * *

ಎರಡು ವರ್ಷದ ಹಿಂದೆ. ತೋಟದಲ್ಲಿ ದನಕರುಗಳನ್ನು ಮೇಯಲು ಬಿಟ್ಟು ಮಕ್ಕಳಿಬ್ಬರೂ ಮಾವಿನ ಮರದ ನೆರಳಲ್ಲಿ ಕುಳಿತಿದ್ದಾರೆ. ಮರದ ಮೇಲೆ ಹಕ್ಕಿಯ ತಂಡವೊಂದು ಬಂದು ಒಟ್ಟಾಗಿ ಚೀರಿಡುತ್ತಿದೆ.

"ಎಷ್ಟು ಗುಲ್ಲು ಈ ಹಕ್ಕಿಗಳದು! ಒಂದೆಡೆ ಕೂಡೋಕಿಲ್ಲ, ಅರೆಚಣ ಸುಮ್ಮಕಿರೋಕಿಲ್ಲ. ಅವು ಹೆಂಗೆ ರೆಕ್ಕೆ ಒದರಾಡಸ್ತವೆ!"

ಏನೋ ಯೋಚನೆಯಲ್ಲಿ ಮಗು ಸುಮ್ಮನಿದ್ದಾನೆ.

"ಕುಂತೇ ನಿದ್ದೆಮಾಡ್ತಿದ್ದಂಗಿದೆ."

ಅದಕ್ಕೂ ಮಾತಿಲ್ಲ.

"ಮಗು, ಇವು ಯಾವ ಹಕ್ಕಿ?"

ಪಾಪನನ್ನು ಎವೆಯಿಕ್ಕದೆ ನೋಡುತ್ತ ಹೇಳುತ್ತಾನೆ: "ತ್ಸಾಯ್ನ ಹಕ್ಕಿ."

"ಅವು ಯಾಕೆ ಹಂಗ್ಮಾಡ್ತವೆ?

"ಅವು ನಿನ್ನ ಹಂಗೆ—ಅರೆಚರಣವಾದರೂ ಸುಮ್ಮಕಿರೊ ಚೈತನ್ಯವಿಲ್ಲ" ಎಂದು ನಗುತ್ತಾನೆ.

ಪಾಪ ಹುಸಿಮುನಿಸಿಂದ ಪ್ರತಿಭಟಿಸುತ್ತಾಳೆ: "ನಾನೇನೂ ಅವುಗಳ ಹಂಗಲ್ಲ."

"ಅವುಗಳ ಹಂಗಲ್ಲದಿದ್ದರ, ಇನ್ನ ಯಾತರ ಹಂಗಂತಾದರೂ ಹೇಳು ಕೇಳೋವ".

ಪಾಪನಿಗೆ ಉತ್ತರಕೊಡಲು ಏನೂ ತೋರುವುದಿಲ್ಲ. ಮಾತು ಮರಸಲು ನೆಪ ಸಿಗುತ್ತದೆ. ಹಕ್ಕಿಯೊಂದು ಎದುರಿಗೆ ಹಾರಿ ಬಂದು ಕುಳಿತು ನೆಲದಲ್ಲಿ ಹುಳು ಹುಡುಕುತ್ತದೆ. ಅದನ್ನು ತೋರಿಸುತ್ತ, "ಅದು ಏನು ಹಕ್ಕಿ? ಅದರ ಚೂಪು ಕೊಕ್ಕು ನೋಡಿದರೆ ಹೆದರಿಕೆಯಾಗ್ತದೆ. ಅದು ಕೊಟ್ಟು ಕೆದರೋದು ನೋಡು!"

ಹಕ್ಕಿಯನ್ನು ಈಕ್ಷಿಸುತ್ತ ಮಗು ಮೌನದಿಂದಿದ್ದಾನೆ.

"ನಿನಗೆ ಗೊತ್ತಿದ್ದ ಹೆಸರಾದರೆ ಎಷ್ಟು ಬೇಗ ಹೇಳಿಬಿಡ್ತಿ! ಗೊತ್ತಿಲ್ಲದಿದ್ದರ ಗೊತ್ತಿಲ್ಲವೆಂತ ಒಪ್ಪಿಕೊಬಾರದ?" ಎಂದು ಹಂಗಿಸುತ್ತಾಳೆ.

"ನೀನು ತ್ವಾಯ್ನ ಹಕ್ಕಿ ಹಂಗಂತೂ ಅಲ್ಲ, ಹೋಗಲಿ; ಈ ಹಕ್ಕಿ ಹಂಗೆ ಅಂತ ಒಪ್ಪಿಕೊ, ಅದರ ಹೆಸರು ಹೇಳ್ತೀನಿ."

"ಥೂ! ನಾನೇನೂ ಈ ಹಕ್ಕಿ ಹಂಗಲ್ಲ."

"ಹಂಗಿದ್ದರ, ನೀನು ಇನ್ನ ಯಾತರ ಹಂಗೆ?"

"ಇನ್ನೊಂದು ದಿನ ಹೇಳ್ತೀನಿ."

"ಇನ್ನೊಂದು ದಿನವೇನು, ಇವತ್ತೇ ಹೇಳಬಾರ್ದ?"

"ನಾನು ಯೋಚಿಸಬೇಕು. ನನಗೆ ಎಷ್ಟೋ ಹಕ್ಕಿ ಗೊತ್ತಿಲ್ಲ."

ಇಬ್ಬರೂ ಸ್ವಲ್ಪಕಾಲ ಸುಮ್ಮನಿರುತ್ತಾರೆ.

ದೂರದ ಮಾವಿನಮರದಿಂದ ಕೋಗಿಲೆಯೊಂದು ಕೂಗುತ್ತದೆ. ನೆತ್ತಿಯ ಮೇಲಿಂದ ಇನ್ನೊಂದು ಕೋಗಿಲೆ ಮರುದನಿಕೊಡುತ್ತದೆ. ಪಾಪ ತಲೆಯೆತ್ತಿ ಹುಡುಕುತ್ತ, "ಈಗ ಕೂಗಿದ್ದು ಯಾವ ಹಕ್ಕಿ?" ಎಂದು ಕೇಳುತ್ತಾಳೆ.

"ಕೋಗಿಲೆ."

"ಆ ಮರದಲ್ಲೊಂದು ಈ ಮರದಲ್ಲೊಂದು ಕುಂತು ಎಷ್ಟು ಮುದ್ದಾಗಿ ಒಂವಕ್ಕೊಂದು ಮಾತಾಡ್ತವೆ!"

ಮತ್ತೆ ಮೌನ.

"ಮಗು, ನಾನು ಯಾವ ಹಕ್ಕಿ ಹಂಗೆ ಹೇಳಲಾ?"

"ಆಗಲೇ ಕೇಳಿದೆನಲ್ಲಾ—ಹೇಳು."

"ನಾನು ಕೋಗಿಲೆ ಹಂಗೆ."

"ಕೋಗಿಲೆ ಹೆಂಗಿರತ್ತೆ ಹೇಳು."

" ನಂಗೆ ಗೊತ್ತಿಲ್ಲ. ಅದನ್ನ ತೋರಿಸ್ತೀಯ ? "

" ಕೊಂಚ ಹೊತ್ತು ಸುಮ್ಮಕಿದ್ದರೆ ತೋರಿಸ್ತೀನಿ."

ಮತ್ತೆ ಇಬ್ಬರೂ ಮೌನ.

ಎದುರು ಮರದಿಂದ ಕೋಗಿಲೆಯೊಂದು ಕೂಗುತ್ತ ಪಕ್ಕದ ಮರಕ್ಕೆ ಹಾರಿ ಹೋಗುತ್ತದೆ.

" ಅದೋ ಕೋಗಿಲೆ ! "

ಪಾಪ ಆ ಕಡೆ ತಿರುಗಿ ನೋಡುವುದರಲ್ಲಿ ಅದು ಎಲೆಮರೆ ಸೇರುತ್ತದೆ; ಅವಳಿಗೆ ಕಾಣಿಸುವುದಿಲ್ಲ.

ಪಕ್ಕನೆ ಏನೊ ನೆನಪಾಗಲು ಪಾಪ ಕೇಳುತ್ತಾಳೆ: " ಮಗು, ನಿನ್ನ ನಾನೊಂದು ಕೇಳಲಾ ? "

ಉತ್ತರವಿಲ್ಲ.

" ಅವತ್ತಿನಿಂದ ನಿನ್ನ ಕೇಳಬೇಕೆಂದಿದ್ದೆ ; ಮರತೇ ಹೋಗಿತ್ತು. ಈಗ ನೆಪ್ಪಾಯಿತು."

" ಅಂತದ್ದೇನು ? ಕೇಳು ನೋಡೋಣ."

" ಅವತ್ತು ನಾನು ಬುತ್ತಿ ತಂದಾಗ ಪಿಳ್ಳಂಗೋವಿ ಊತ್ತಿದ್ದವನು ನನ್ನ ಕಂಡು ಯಾಕೆ ನಿಲ್ಲಿಸಿಬಿಟ್ಟೆ ? ನೀನು ಊದೋದು ಕೇಳಬೇಕಂತ ನನಗೆ ತುಂಬ ಆಸೆ."

" ನನಗೆ ಊದೋಕೆ ಚನ್ನಾಗಿ ಬರೋಕಿಲ್ಲ."

" ನೀನು ಊದಿದ್ದು ನನಗೆ ಚನ್ನಾಗೇ ಇತ್ತು . . . ನಿನಗೆ ಹಕ್ಕಿ ಕೂಗೋ ಹಂಗೆ ಊದಾಕೆ ಬರತೈತ ? "

" ಯಾವ ಹಕ್ಕಿ ಹಂಗೆ—ತ್ವಾಯ್ನ ಹಕ್ಕಿ ? "

" ಥೂ ! ಅದಲ್ಲ ನಾನು ಕೇಳಿದ್ದು."

" ಹೇಳು ಮತ್ತೆ ಯಾವ ಹಕ್ಕಿ ಹಂಗೆ."

" ಕೋಗಿಲೆ ಹಂಗೆ."

" ಇಲ್ಲ. ಇನ್ನೂ ಕಲಿಬೇಕು. ಅದಕ್ಕೇ ನಿನ್ನೆದುರು ಊದೋಕಿಲ್ಲ.

ಅಷ್ಟು ಹೊತ್ತಿಗೆ ಕೋಗಿಲೆಯೊಂದು ಮರದ ಮೇಲಿಂದ ಕೂಗಿತು. ಕಣ್ಣೆಟ್ಟು ಪಾಪ ಹುಡುಕಿದಳು ; ಮಗು ತೋರಿಸಿದ.

* * *

ಮಾರನೆಯ ಸಂಜೆ ಬಿರುಮಳೆ. ತೋಟದಿಂದ ಎಲ್ಲರೂ ನೆಂದುಕೊಂಡೇ ಮನೆಗೆ ಬಂದರು. ಮರುದಿನ ಬೆಳಗ್ಗೆ ಪಾಪ ಹಾಸಿಗೆಬಿಟ್ಟು ಏಳಲಿಲ್ಲ. ಜ್ವರ ಕೆಂಡದಂತೆ ಕಾಯುತ್ತಿದೆ. ಮೈಮೇಲೆ ಎಚ್ಚರವಿಲ್ಲ. ಮಗು ಮೂರು ದಿನವೂ ಪಾಪನ ಪಕ್ಕದಿಂದ ಕದಲಲಿಲ್ಲ. ಕಂಡು ಕೇಳಿದ ಔಷಧೋಪಚಾರವೆಲ್ಲ ಆಯಿತು.

ಅಯ್ಯನವರು ಬಂದು ನೋಡಿ ದೂರ ಕರೆದು ಹೇಳಿದರು: "ಮೊದಲಿಂದ ಅವಲಕ್ಷಣವೇ ಕಾಣುತ್ತಿದೆ. ಪಾಪನ ಆಸೆ ಇನ್ನು ಬಿಟ್ಟುಬಿಡು." ಆ ರಾತ್ರಿ ಪಾಪನ ಲೋಕಯಾತ್ರೆ ಮುಗಿಯಿತು. ಲಕ್ಷ್ಮಿಯು ದುಃಖ ಹೇಳತೀರದು. ಚಿಕ್ಕಣ್ಣ ಸಮಾಧಾನಮಾಡಿದರೂ ಕೇಳಳು. ಕಡೆಗೆ ಕಳೇವರವನ್ನು ಅವಳ ತೋಳ ತೆಕ್ಕೆಯಿಂದ ಬಿಡಿಸಿಕೊಂಡು ಹೋಗಿ ಮಣ್ಣುಮಾಡಿ ಬರಬೇಕಾಯಿತು. ಬೇಡ ವೆಂದರೂ ಕೇಳದೆ ಮಗು ಮಣ್ಣುಮಾಡುವಲ್ಲಿಗೆ ಬಂದಿದ್ದಾನೆ. ಅವನ ಮುಖ ಕಳೆಗುಂದಿದೆ; ಕಣ್ಣು ಗುಳಿಬಿದ್ದಿವೆ. ಆದರೆ ಎಲ್ಲರಂತೆ ಕಣ್ಣೀರ ಕಾಲುವೆಯಿಲ್ಲ. ರೋದನವಿಲ್ಲ.

* * *

ಹಾಲುತುಪ್ಪದ ದಿನ. ಮಗು ತೋಪಿನಲ್ಲಿ ದನಕರುಗಳನ್ನು ಮೇಯಲು ಬಿಟ್ಟು ಸಮಾಧಿಯ ಬಳಿ ಕುಳಿತಿದ್ದುದನ್ನು ದನಕಾಯುವ ಹುಡುಗರು ನೋಡಿದ್ದಾರೆ. ಸಂಜೆ ಗೋವೆಲ್ಲ ಮನೆಗೆ ಬರುತ್ತವೆ; ಆದರೆ ಮಗುವಿನ ನೆಲೆಸೆಲೆಯಿಲ್ಲ. ಎಲ್ಲೆಡೆ ಹುಡುಕಿದ್ದಾಯಿತು. ಕೆರೆಕಟ್ಟೆ ತಡಕಿದ್ದಾಯಿತು. ಪ್ರಯತ್ನವೆಲ್ಲ ನಿರರ್ಥಕ. ಎಂಟು ವರ್ಷದಿಂದ ಸುಖಮಯವಾಗಿದ್ದ ಸಂಸಾರ ಒಮ್ಮೆಗೇ ದುಃಖಕವಿದು ಕಂಗಾಲಾಯಿತು. ಇನ್ನು ಬದುಕಿ ಏನಾಗಬೇಕು ಎನ್ನಿಸಿದೆ ಇಬ್ಬರಿಗೂ. ಸಮಾಧಾನ ಹೇಳಲು ಕಡೆಯ ಸಲ ದಣಿ ಬಂದಿದ್ದಾರೆ. "ಈ ಲೋಕದಲ್ಲಿ ಹುಟ್ಟಿದವರೆಲ್ಲ ಸಾವು ನೋವು ಅನುಭವಿಸಿಯೆ ತೀರಬೇಕು. ಏನು ಬಂದರೂ ಅವನ ಚಿತ್ತವೆಂದು ಸಮಾಧಾನ ತಂದುಕೊಳ್ಳುವುದು ಮನುಷ್ಯಲಕ್ಷಣ . . . ನಮ್ಮ ಕೈಮಿಂಚಿ ನಡೆಯುವುದಕ್ಕೆಲ್ಲ ಚಿಂತಿಸುತ್ತ ಕುಳಿತರೆ ಪ್ರಪಂಚ ಸಾಗುವುದು ಹೇಗೆ? . . . ಪಾಪನ ಆಯುಷ್ಯವೆ ಅಷ್ಟು. ಆದರೆ ಮಗುವಿನ ಮಾತು ಬೇರೆ. ಇನ್ನೆರಡು ವರ್ಷದಲ್ಲಿ ಅವನೆಲ್ಲಿದ್ದರೂ ಇಲ್ಲಿಗೆ ಬರಲೇಬೇಕು, ಬರುತ್ತಾನೆ. ಬಂದು, ಮುಂದೆ ಊರಿಗೆ ಹಿರಿಯನಾಗಿ ಬಾಳುತ್ತಾನೆ; ನಿಮಗೆ ಕೀರ್ತಿ ತರುತ್ತಾನೆ . . . ತೊಂಬತ್ತು ವರ್ಷದ ಈ ಕಡುಮರುಳು ಮುದುಕ ಏನೋ ಹೇಳಿಹೋದನೆಂದುಕೊಳ್ಳಬೇಡಿ."

* * *

ದಣಿ ಅಂದದ್ದು ಹಿಂದೆಂದೂ ಹುಸಿಯಾಗಲಿಲ್ಲ. ಇಂದೇಕೆ ಹುಸಿಯಾದೀತು? ಇಂದು–ನಾಳೆ ಮಗು ಬಂದಾನು. ನಮ್ಮ ಪಾಪಕರ್ಮವೂ ಸವೆಯಬೇಕಲ್ಲ. ದಣಿ ಹೇಳುತ್ತಿದ್ದಂತೆ, ಎಲ್ಲಕ್ಕೂ ಕಾಲಬರಬೇಕು.

* * *

ಕೋಳಿ ಕೂಗಿತು. ತೀಡರು ಹರಿಯಿತು. ಹೊನ್ನಪ್ಪನಿಗೆ ಹಾಗೆಯೆ ಜೊಂಪು ಬಂತು.

೨

ಆಗತಾನೆ ನೇಸರು ಮೂಡಿ ಹೂ ಬಿಸಿಲು ಹಬ್ಬಿತ್ತು. ಆಳುಮಗ ತಿರುಮಲ

ದನಕರುಗಳನ್ನು ಆಚೆ ಕಟ್ಟಲು ಕೊಟ್ಟಿಗೆ ಬಳಿ ಬಂದ. ಕದ ತೆರೆದಿತ್ತು. ತಾನು ಹೊತ್ತಾಗಿ ಬಂದುದರಿಂದ ಯಜಮಾನನೆ ಬಿಚ್ಚುತ್ತಿರಬಹುದೆಂದು ಅಳುಕುತ್ತ ಹೊಸಿಲೊಳಗೆ ಕಾಲಿಟ್ಟ. ಕಣ್ಣು ಕಂಡುದನ್ನು ಮನಸ್ಸು ನಂಬದಿರಲು ಕಣ್ಣುಜ್ಜಿ ಮತ್ತೆ ನೋಡಿದ. ನೋಡಿದ ನಯನ ವಂಚಿಸುತ್ತಿಲ್ಲವೆಂದು ನಿರ್ಧರವಾಗಲು ಸಂತೋಷದ ಸುದ್ದಿಯನ್ನು ಯಜಮಾನನಿಗೆ ತಿಳಿಸಲು ಓಡಿದ. ಒಳಬಾಗಿಲು ಅರೆ ತೆರೆದಿತ್ತು. ಹೊರಗೆ ನಿಂತು ಉತ್ಸಾಹದಿಂದ ಕೂಗಿ ಹೇಳಿದ: "ಯಪ್ಪಾ, ಯಪ್ಪಾ, ಚನ್ನಣ್ಣ ಬಂದವ್ನೆ! ಕೊಟ್ಟಿಗೆಯಲ್ಲವ್ನೆ ಕಣ್ರಪ್ಪ!" ಒಳಗಿಂದ ಏನೊಂದು ಉತ್ತರವೂ ಬರಲಿಲ್ಲ. ಇನ್ನೊಮ್ಮೆ ಕೂಗಿ ಹೇಳಿದ. ಇನ್ನೂ ಮುಂಜಾನೆಯ ಸವಿಜೊಂಪಿನಲ್ಲಿದ್ದ ಹೊನ್ನಪ್ಪನಿಗೆ ಕಿನ್ನರಲೋಕದ ಇಂಚರದಂತೆ ಕೇಳಿತು 'ಚನ್ನಣ್ಣ' ಎಂದ ಹೆಸರು. ಹೊದ್ದಿದ್ದ ಕಂಬಳಿಯನ್ನು ಒದ್ದು ತಳ್ಳಿ ತಟ್ಟನೆ ಎದ್ದುನಿಂತ. ಗಂಟಲು ಸರಿಮಾಡಿಕೊಂಡು ಕೇಳಿದ, "ಯಾರದು?" "ನಾನು ತಿರುಮಲ. ಈಚೆಗೆ ಬರ್ರಪ್ಪ. ಚನ್ನಣ್ಣ ಬಂದವ್ನೆ ಕಣ್ರಪ್ಪ! ಕೊಟ್ಟಿಗೆಯಲ್ಲವ್ನೆ." ಉಟ್ಟಿದ್ದ ಪಂಚೆಯನ್ನು ಸರಿಮಾಡಿಕೊಳ್ಳುತ್ತ ಮೈಮೇಲೆ ದೋತರವಿಲ್ಲದೆಯೆ ಹೊರಗೆ ಬಂದ. ಅವನ ಅರೆನಿದ್ದೆಗಣ್ಣಿನಲ್ಲಿ ಅಚ್ಚರಿ ಆನಂದದ ಕಾಂತಿ ಒಮ್ಮೆಗೆ ಮಿನುಗುತ್ತಿತ್ತು. "ಎಲ್ಲಿ? ಎಲ್ಲಿ?" ಎನ್ನುತ್ತ ತಿರುಮಲನನ್ನು ಹಿಂಬಾಲಿಸಿದ.

ದನದ ಕೊಟ್ಟಿಗೆಯಲ್ಲಿ ಯಾರೂ ಇರಲಿಲ್ಲ. ತಿರುಮಲನ ಮುಖ ಪೆಚ್ಚಾಯಿತು. ಆಶಾಭಂಗದಿಂದ ಯಜಮಾನನ ಕಣ್ಣು ಕೆರಳಿತು. ಅವರೊಳಗೆ ಮಾತುನಡೆಯುವ ಮೊದಲೆ ಕೆಲಸದ ಎತ್ತುಗಳನ್ನು ಕಟ್ಟಿದ್ದ ಕೊಟ್ಟಿಗೆಯ ಬಾಗಿಲು ತೆರೆದು ಮಗು ಹೊರಗೆ ಬಂದ. ತನ್ನ ಕಡೆ ಬೆನ್ನು ಮಾಡಿ ನಿಂತಿದ್ದವರನ್ನು ಕಂಡು ತಾನೇ ಮಾತು ಮೊದಲುಮಾಡಿದ. "ಅಪ್ಪಾಜಿ, ಕೆಂದ ಹೋರಿಕರ ಎಲ್ಲಿ, ಅದರ ಗೊಂತಿನಲ್ಲಿಲ್ಲ?" ಮಗನ ಧ್ವನಿ ಕೇಳಿ ಹೊನ್ನಪ್ಪ ಹಿಂದಿರುಗಿ ನೋಡಿದ. ನೋಡುತ್ತ ನೋಡುತ್ತ ಮೂಕನಾಗಿ ಮರವಟ್ಟು ನಿಂತುಬಿಟ್ಟ. ಮಗು ಮತ್ತೆ ಕೇಳಿದ: "ಅಪ್ಪಾಜಿ, ಆ ಕೆಂದ ಹೋರಿಕರ ಏನಾಯಿತು?" ಹೊನ್ನಪ್ಪನ ಕಣ್ಣು-ಕಿವಿ ಅಮೃತಪಾನ ಮಾಡುತ್ತಿತ್ತು. ಚೇತರಿಸಿಕೊಂಡು ತೊದಲುತ್ತ ಹೇಳಿದ: "ನೋಡು ಮಗು, ನೀನು ಹೀಗೆ ಹೊರಟುಹೋದರೆ ಅವುಗಳನ್ನೆಲ್ಲ ನೋಡಿಕೊಳ್ಳುವವರು ಯಾರು? ನಾನೊಬ್ಬಂಟಿಗ, ಈ ತಿರುಮಲನನ್ನು ಕಟ್ಟಿಕೊಂಡು ಎಷ್ಟೆಂದು ನೋಡಿಕೊಳ್ಳಲಿ? ಅದಕ್ಕೋಸ್ಕರವೆ ಕೋಡಿ ಪರಿಷೆಯಲ್ಲಿ ನಾಲ್ಕಾರು ರಾಸು ಮಾರಿಬಿಟ್ಟೆ." ಅವನ ಧ್ವನಿಯಲ್ಲಿ ನಿಷ್ಠುರವಿರಲಿಲ್ಲ, ತಾನು ಇಷ್ಟು ದಿನ ಅನುಭವಿಸಿದ ಕಷ್ಟದ ಅನುರಣನ ವಿತ್ತು. ಹುಡುಗ ಅಡ್ಡಮಾತಾಡದೆ ಹೇಳಿದ್ದೆಲ್ಲ ಕೇಳಿದ. ಕಡೆಗೆ ಅಂದ: "ಅದು ಎಲ್ಲಿದ್ದರೂ ತರಬೇಕು ಅಪ್ಪಾಜಿ. ನಾನು ನೋಡಿಕೊಳ್ಳುತ್ತೇನೆ ಅದನ್ನ." "ಆ ಕೆಂದಗರುವನ್ನ ತಾವರೆಕೆರೆಯವರು ಹಿಡಿದುಕೊಂಡರು. ಅಲ್ಲಿಗೆ ಹೋಗಿ ವಿಚಾರಿಸಿ ತಂದರಾಯಿತು."

ಮಗು ಮನೆಗೆ ಬಂದುದು ತಿಳಿದಕೂಡಲೆ ಲಕ್ಷ್ಮವ್ವ ಓಡಿಬಂದು ಮಗನನ್ನು ಅಪ್ಪಿಕೊಂಡು ಕಂಬನಿಗರೆಯುತ್ತ ನೂರೆಂಟು ಪ್ರಶ್ನೆ ಕೇಳಿದಳು. ಯಾವುದಕ್ಕೂ ಮಗು ತುಟಿಪಿಟಕ್ಕೆನ್ನಲಿಲ್ಲ.

ಹೊನ್ನಪ್ಪ ಕೈ ಕಾಲು ಮೊಗ ತೊಳೆದು, ನೊಸಲಿಗೆ ವಿಭೂತಿ ಧರಿಸಿ, ದೇವರಿಗೆ ದೀಪ ಹಚ್ಚಿಟ್ಟು ಅಡ್ಡಬಿದ್ದು, ಪಡಸಾಲೆಗೆ ಬಂದ. ಇನ್ನೂ ಮಗನೊಡನೆ ಮಾತನಾಡುತ್ತಿದ್ದವಳನ್ನು ಕುರಿತು, "ಮಾತಿನಿಂದಲೇ ಹೊಟ್ಟೆ ತುಂಬಿಸ ಬೇಕೆಂದಿದ್ದೀಯೇನು? ಎದ್ದು ಹೋಗಿ ಹಾಲುಕರೆದು ರೊಟ್ಟಿಹಾಕು. ಅಷ್ಟು ಹೊತ್ತಿಗೆ ಸುಬ್ಬಣ್ಣನವರನ್ನ ಕಂಡು ಬರುತ್ತೇನೆ."

"ಹೌದವ್ವ, ಅಪ್ಪಾಜಿ ಅಂದದ್ದು ಸರಿ. ನನಗೂ ಹೊಟ್ಟೆ ಹಸಿಯುತ್ತಿದೆ ತುಂಬ."

* * *

ಸುಬ್ಬಣ್ಣನವರು ಹುಜೂರು ಜಮಾಬಂದಿಗೆ ಹೊರಟಿದ್ದರು. ಗಾಡಿಯಲ್ಲಿ ಕುಳಿತಿದ್ದವರು ಹೊನ್ನಪ್ಪ ಬಂದುದು ಕಂಡು ಕರೆದು ತಮ್ಮೊಟ್ಟಿಗೆ ಕೂಡಿಸಿಕೊಂಡರು. ಗಾಡಿ ಮೆಲ್ಲಗೆ ಸಾಗಿತು. ಊರ ಹೆಬ್ಬಾಗಿಲು ದಾಟಿ ಬೇಟೆರಾಯಸ್ವಾಮಿಯ ದೇವಸ್ಥಾನದ ಹತ್ತಿರ ಬರುವ ಹೊತ್ತಿಗೆ ಅವರ ಮಾತುಕತೆ ಮುಗಿದಿತ್ತು. ಗಾಡಿ ನಿಂತಿತು. ಇಬ್ಬರೂ ಕೆಳಕ್ಕಿಳಿದರು. ಬೇಟಪ್ಪನಿಗೆ ಪ್ರದಕ್ಷಿಣೆ ನಮಸ್ಕಾರಮಾಡಿ ಗಾಡಿಯ ಬಳಿ ಬಂದರು. "ಹಾಗೇ ಮಾಡು ಹೊನ್ನಪ್ಪ. ಮಗು ಇಷ್ಟಪಟ್ಟಮೇಲೆ ಕೆಂದಗರ ತರಲೇಬೇಕು. ನಾಳೆ ಕೋಳಿಕೂಗಿಗೆ ಎದ್ದು ಬಂದರೆ ಒಂಬತ್ತುಗಂಟೆಗೆ ತಾವರೆಕೆರೆ. ಅಲ್ಲಿ ವಿಚಾರಿಸಿಕೊಂಡು ಬೆಟ್ಟದಪುರಕ್ಕೆ ಊಟಕ್ಕೆ ಬಂದುಬಿಡು. ನಾನು ಬಂಗಲೆಯ ಹತ್ತಿರ ಹೋಗಿದ್ದರೆ ನನಗಾಗಿ ಕಾಯಬೇಡ. ನೀನು ಬರುವುದನ್ನು ಜಾನಕಿಗೆ ಹೇಳಿರುತ್ತೇನೆ. ಊಟ ಮುಗಿಸಿಕೊಂಡು ಬಂಗಲೆಯ ಹತ್ತಿರ ಬಂದರೆ ಮುಂದಿನ ಏರ್ಪಾಟು ಮಾಡೋಣ. ಜಮಾಬಂದಿಯ ಕೆಲಸ ನನಗೆ ನಾಳೆ ಸಂಜೆಗೆ ಮುಗಿದೀತು. ತಾವರೆಕೆರೆಯಲ್ಲಿ ಕೆಂದಗರ ಹಿಡಕೊಂಡು ಜೊತೆಗೆ ಬಂದುಬಿಡೋಣ." ಹೊನ್ನಪ್ಪ ಅದಕ್ಕೆ ಸಮ್ಮತಿಸಿ ಸುಬ್ಬಣ್ಣನವರನ್ನು ಬೀಳ್ಕೊಟ್ಟು ಮನೆಗೆ ಬಂದ.

೩

ಬೆಟ್ಟದಪುರದ ಬಂಗಲೆಗೆ ಸುತ್ತಿನ ಹಲವಾರು ಹಳ್ಳಿಗಳಿಂದ ಜನ ಬಂದು ಸೇರಿದ್ದಾರೆ. ಹೊಸ ಜಿಲ್ಲಾಧಿಕಾರಿಗಳು ಪರಂಗಿಯವರಾದರೂ ಚೆನ್ನಾಗಿ ಕನ್ನಡ ಮಾತನಾಡಬಲ್ಲರೆಂಬ ಪ್ರತೀತಿ ಹರಡಿ, ಅವರನ್ನು ನೋಡಲೆಂದೇ ಬಂದವರು ನೂರಾರು ಮಂದಿ. ಪರಮತಸ್ಥರಾದರೂ ಹಿಂದೂ ಧರ್ಮಾಭಿಮಾನಿಗಳೆಂದು ಹೇಳತಕ್ಕವರೂ ಹಲವರಿದ್ದರು. ಅಧಿಕಾರಿವಲಯದಲ್ಲಿ ಅವರ ಬಗ್ಗೆ ಹಬ್ಬಿರುವ ಸುದ್ದಿಯೇ ಬೇರೆ. ಕೋಪಿಷ್ಠರಾದರೂ ದಯಾಪರರು, ಕಾರ್ಯದಕ್ಷರು, ನಿಷ್ಪಕ್ಷ

ಪಾತಿಗಳು—ಎಂದು. ಇಂಥವರಿಂದ ಸೈ ಎನ್ನಿಸಿಕೊಂಡರೆ ತಮ್ಮ ಇಷ್ಟುಕಾಲದ ಸೇವೆ ಸಾರ್ಥಕವಾಯಿತೆಂದು ಭಾವಿಸಿದ್ದಾರೆ ಸುಬ್ಬಣ್ಣನವರಂತಹ ಶ್ರದ್ಧಾಳು ಶೀಲವಂತ ಶ್ಯಾನುಭೋಗರು.

* * *

ಸಂಜೆಯ ಹೊಂಗದಿರು ಬಂಗಲೆಯ ಮುಂದಿನ ಮೈದಾನವನ್ನು ರಂಜಿಸಿತ್ತು. ಸಾವಿರಕ್ಕೂ ಮೀರಿದ ಜನಸಂದಣಿಯ ಗೊಂದಲ. ಒಳಗಿನಿಂದ ದವಾಲಿಯ ದಫೇದಾರ ಬಂದುದು ಕಂಡು ಸದ್ದು ಅಡಗಿತು. ಎಲ್ಲರೂ ಚಕ್ಚಕಿತದಿಂದ ಎದ್ದು ನಿಂತರು. ಹೊರಗೆ ಬಂದ ಕಮಿಷನರ್ ಸಾಹೇಬರು ಸುತ್ತಲೂ ಕಣ್ಣು ಹೊರಳಿಸಿ ಹಸನ್ಮುಖಿಗಳಾಗಿ ಆಸನದಲ್ಲಿ ಮಂಡಿಸಿದರು. ಮುಂದಿದ್ದ ಕಾಗದಗಳ ಕಟ್ಟು ನೋಡಿ, " ಅರ್ಜಿ-ಅಹವಾಲುಗಳನ್ನು ಮೊದಲು ಮುಗಿಸಿಬಿಡುವ. ಜನವನ್ನು ಸುಮ್ಮನೆ ಕಾಯಿಸುವುದು ಬೇಡ. ಜಮಾಬಂದಿಯ ಕೆಲಸ ಏನಿದ್ದರೂ ಆಮೇಲೆ ಆಗಲಿ " ಎಂದರು.

ಒಂದೆರಡು ಅರ್ಜಿಗಳ ವಿಲೆ ಆಯಿತು. ಮುಂದೆ ದೂರದಲ್ಲಿ ಗದ್ದಲವೆದ್ದುದು ಕೇಳಿ ಅವರ ದೃಷ್ಟಿ ಅತ್ತ ಹರಿಯಿತು. ಪೋಲೀಸಿನವನ ಕೈಯಿಂದ ಕೊಸರಿಕೊಂಡು ಬರುತ್ತಿದ್ದವನನ್ನು ನೋಡಿ, ಮಾಡುತ್ತಿದ್ದ ಕೆಲಸ ನಿಲ್ಲಿಸಿ ಅವನಿಗಾಗಿ ಕಾದರು.

ಹತ್ತಿರ ಬಂದು ಕೈಮುಗಿದು ಕೈಕಟ್ಟಿ ನಿಂತವನನ್ನು ಕೇಳಿದರು: " ಯಾರು ನೀನು ? ನಿನಗೆ ಏನಾಗಬೇಕು ? "

" ಮಹಾಸ್ವಾಮಿ, ನಾನು ಅಮೃತಮಹಲ್ ಕಾವಲ ಸೇರುವೆಗಾರ. ಮೂರು ದಿನದ ಹಿಂದೆ ಕಾವಲ ಮಳಕವೊಂದು ತಪ್ಪಿಸಿಕೊಂಡಿತು. ಹುಡುಕಿಕೊಂಡು ನಾವಿಬ್ಬರು ಬಂದ್ವಿ. ಈ ಬೆಳಿಗ್ಗೆ ಶಿವಪುರದ ತೋಪಿನಾಗ ಮೇಯ್ತಿದ್ದದ್ದು ಕಂಡು ಅದನ್ನ ಹಿಡಕೊಂಡು ಬಂದ್ವಿ."

" ಒಳ್ಳೆಯದು, ಕಾವಲಿಗೆ ಹೊಡೆದುಕೊಂಡು ಹೋಗು. "

" ಆದರೆ ಏನೇಳೋವ ಬುದ್ಧಿ ! ಹೊತ್ತು ನೆತ್ತಿಗೇರಿತ್ತು. ರಾಯಸಂದ್ರದ ಕಟ್ಟೆ ಹತ್ತಿರ ಬಂದಿದ್ವಿ. ಕರಾನ ದಾರಿ ಪಕ್ಕದಲ್ಲಿ ಕಟ್ಟಿಹಾಕಿ ಬುತ್ತಿ ತಿನ್ನಾಕೆ ಅಂತ ನೀರಿನ ದಂಡೆಗೆ ಹೋದ್ವಿ. ಉಂಡು ಬಂದು ನೋಡ್ದಾಗ ಕರ ಅಲ್ಲಿರನಿಲ್ಲ. ಯಾರೋ ಹಗ್ಗ ಬಿಚ್ಚಿದ್ದರು. ತಿರಗ ಹುಡಕ್ಕೊಂಡು . . . . "

ಸಾಹೇಬರು ಮಧ್ಯೆ ಬಾಯಿಹಾಕಿದರು: " ಏನು, ಕತೆ ಹೇಳುತ್ತಿದ್ದೀಯಾ ? ನಿನ್ನ ಕಗ್ಗ ಬೇಗ ಮುಗಿಸು."

" ಇಲ್ಲ ಮಹಾಸ್ವಾಮಿ, ಎಲ್ಲ ನಡದ ಸಂಗತಿ . . . ದೂರದಲ್ಲಿ ಕರದ ಜತೆಗೊಬ್ಬ ಹುಡುಗ ಹೋಗ್ತಿರೋದು ಕಂಡ್ತು. ಓಡೋಗಿ ಅಡ್ಡಹಾಕಿ ಕರ ಹಿಡಕೊಂಡು ಬಂದ್ವಿ."

" ಒಳ್ಳೆಯದಾಯಿತು. ಕರು ಸಿಕ್ಕಿತಲ್ಲ, ಇನ್ನೇನಾಗಬೇಕು ? "

" ಆ ಹುಡುಗ ನಮ್ಮ ಹಿಂದೇನೇ ಬಂದ . . . . . "

" ಆ . . . . ", ಎಂದು ಸೊಲ್ಲೆತ್ತಿದ ಸಾಹೇಬರು ಅಷ್ಟಕ್ಕೆ ಸುಮ್ಮನಾದರು.

" ಯಾವದೋ ಕಳ್ಳರ ಗುಂಪಿನೋರು ಅವನ್ನ ಮುಂದೆ ಕಳ್ಸಿ ಬಾಕಿಯೋರೆಲ್ಲ ಹಿಂದೆ ಬರತಿರಬೋದಂತ ಅಂಜಿಕೆಯಾಯ್ತು. ಬೇಗ ಬೇಗ ಹೆಜ್ಜೆ ಹಾಕಿದ್ವಿ. ಅವನು ನಮ್ಮ ಬೆನ್ನಿಗೇ ಬಂದ. ಅವನ್ನ ಮುಂದೆ ಹೋಗಾಕೆ ಬಿಡಬೇಕೊಂತ ಮರದಡಿ ನೆರಳಲ್ಲಿ ಕುಂತ್ವಿ. ಸಮೀಪಕ್ಕೆ ಬಂದೋನೆ ಎದುರು ಮರದಡಿ ಹೋಗಿ ತಾನೂ ಕುಂತುಕೊಂಡ. ವೇಳೆ ಭಾಳಾದ್ರೂ ನಾವು ಏಳದಿರೋದು ಕಂಡು ಪಿಳ್ಳಂಗೋವಿ ತೆಗೆದು ಊದಾಕೆ ಸುರುಮಾಡ್ದ. ಚೆಂದಾಗಿತ್ತು. ಕೇಳಿ ನಮ್ಮ ಪಯಣದ ಆಸರೇ ಮರತ್ಹೋತು. ನಮ್ಮ ಪಕ್ಕದಾಗೆ ಮೆಲಕಾಡ್ತಾ ಮಲಗಿದ್ದ ಕರ ಅತ್ತಕಡೇನೆ ತಿರಿಕ್ಕೊಂಡು ಕಿವಿ ನಿಮಿರಿಸಿ ಕೇಳ್ತಿತ್ತು. ಗಾನ ನಿಲ್ಲತ್ಲು ನಮ್ಮ ಪಯಣ ಮುಂದರಿಸಬೇಕಂತ ಕರಾನ ಎಷ್ಟೆಷ್ಟೊ ಎಬ್ಬಿಸಿದ್ವಿ. ಏನು ಮಾಡಿದ್ರೂ ಅದು ಏಳನಿಲ್ಲ. ನಮಗೆ ಒಳ್ಳೆ ಪೀಕಲಾಟ ಬಂತು. ಎತ್ತಿಕೊಂಡು ಹೋಗೋಣಾಂದ್ರೆ ಎಳಗರು ಅಲ್ಲ. ಅದಾಗಿ ಏಳೋಗಂಟ ಎಷ್ಟೊಂತ ಕಾಯ್ತ ಕೂಡೋದು ? ಹುಡುಗ ಕರೆದರೆ ಎದ್ದು ಬರಬೋದು ಅಂತ ಅವನ್ನ ಮೆಲ್ಲಗೆ ಉಪಾಯ ಮಾಡಿದ್ವಿ. ನಾವು ಊಯಿಸ್ದಂಗೇ ಆತು. ಕರ ಎದ್ದು ಅವನ ಹಿಂದೆ ಹೊಂಟ್ತು. ಅವನು ಅದಕ್ಕೇನೋ ಮೋಡಿ ಹಾಕಿದ್ದ. ಬಿಟ್ಟರೆ ಕರ ಅವನ ಹಿಂದೆ ಹೋಯ್ತದೆ. ಮುಂದೆ ಅವನ ಜತೆಯೋರು ಏಸು ಮಂದಿ ಇದ್ದಾರೊ ! ಮೆಲ್ಲಗೆ ಹಿಂದಗಡೇಂದ ಹೋಗಿ ಅವನ ಎರಡು ಕೈನೂ ಹಿಡಕೊಂಡು ಹಿಂದಕ್ಕೆ ಬರೋವಂತೆ ಕರದ್ವಿ. ಕೊಂಚಾನು ತಕರಾರು ಮಾಡ್ದೆ ನಮ್ಮ ಜತೆಯಾಗೆ ಬಂದ. ಕರ ತಾನಾಗಿ ಹಿಂದಾಗಡೆ ಬಂತು. ಜಮಾಬಂದಿ ಆಗ್ತಿರೋದು ಕೇಳಿ ಇಲ್ಲಿಗೆ ಬಂದ್ವಿ. ಅಲ್ಲಿ ಆಚೆ ನಿಂತಿರೊ ಪೋಲೀಸ ನೋನ್ನ ದೂರ ಕರಕೊಂಡು ಹೋಗಿ ಇರೊ ಸಂಗ್ತೀನೆಲ್ಲ ಹೇಳ್ದೆ. ಬಂದು, ಕರನೋಡಿ ಕಣ್ಣರಳಿಸ್ದ. ' ನೀವು ಸೇರವೆಗಾರು ಅನ್ನೋದಕ್ಕೆ ರುಜುವಾತೇನು ? ಕರಾನ ಇಲ್ಲಿ ಬಿಟ್ಟು ಹೋಗಿ. ತನಿಖೆಮಾಡಿ ಕಾವಲ್ದಾದರೆ ಕಳಿಸಿಕೊಡ್ತೇವೆ. ಮೊದಲು ಪೋಲೀಸು ಕಚೇರಿಗೆ ನಡೀರಿ, ನಿಮ್ಮ ಹೇಳಿಕೆ ತೊಗೋಬೇಕು ' ಎಂತ ನನ್ನ ಕೈಹಿಡಿದು ಎಳದು ಹೆದರಿಸ್ದ. ಕೈ ಬಿಡಿಸ್ಕೊಂಡು ಸನ್ನಿಧಾನಕ್ಕೆ ಬಂದಿದ್ದೇನೆ ಮಹಾಸ್ವಾಮಿ ಇನ್ನು ಧಣಿ ಚಿತ್ತ. "

" ಆ ಹುಡುಗ ಕರು ಎಲ್ಲಿ ? "

" ಪೋಲೀಸ್ನೋನು ' ಠಾಣೆಗೆ ನಡೀರಿ ' ಅಂತಿದ್ದ ಮಹಾಸ್ವಾಮಿ. "

ಸಾಹೇಬರು ಅಲ್ಲಿದ್ದ ಪೋಲೀಸ್ ಅಧಿಕಾರಿಗಳಿಗೆ ಹೇಳಿ ಮೂವರನ್ನೂ ಕರಸಿಕೊಂಡರು. ಕರು ಅದಾಗಿಯೆ ಅವರ ಹಿಂದೆ ಬಂತು. ಮಿಂಚುವ ಅಚ್ಚಗಪ್ಪು ಮೈ ; ಮೈತುಂಬಿಕೊಂಡು ಮುದ್ದಾಗಿದೆ. ನೋಡುತ್ತಿದ್ದಂತೆಯೆ ಸಾಹೇಬರು ಅದಕ್ಕೆ ಮನವೊಲಿದರು.

ಸಾಹೇಬರು ಪೋಲೀಸಿನವನನ್ನು ಕೇಳಿದರು: "ನಿನ್ನ ಹೆಸರೇನು?"

"ಖಲಂದರ್" ಎನ್ನುತ್ತ ಶಿಸ್ತಿನಿಂದ ಸಲಾಮುಮಾಡಿದ.

"ನಿನಗೆ ಒಂದು ರೂಪಾಯಿ ಜುಲ್ಮಾನೆ ಹಾಕಿದ್ದೇನೆ, ಹೋಗು."

"ಜನಾಬ್, ನಾನು ಗರೀಬ."

"ಹೋಗು. ಹೆಚ್ಚು ಮಾತನ್ನಾಡಿದರೆ ಐದು ರೂಪಾಯಾಗುತ್ತದೆ ಜುಲ್ಮಾನೆ."

ಪೆಚ್ಚುಮೋರೆ ಹಾಕಿಕೊಂಡು ಮತ್ತೊಮ್ಮೆ ಸಾಹೇಬರಿಗೆ ಸಲಾಮು ಹೊಡೆದು ಹೋದ.

ಈಗ ಸಾಹೇಬರ ದೃಷ್ಟಿ ಹುಡುಗನ ಕಡೆ ತಿರುಗಿತು. ಅವನಲ್ಲಿ ಕಳ್ಳಕೊರಮರ ಲಕ್ಷಣ ಎಳ್ಳನಿತು ಕಾಣಲಿಲ್ಲ ಅವರಿಗೆ. ಎಣ್ಣೆಗೆಂಪು ಬಣ್ಣ; ದುಂಡುಮುಖ; ಹೊಳೆಯುವ ಕಣ್ಣು. ಮುಖದಲ್ಲಿ ಭೀತಿಯ ಸೊಂಕೆಂಬುದಿಲ್ಲ.

"ಕರುವನ್ನೇಕೆ ಕದ್ದೆ?"

"ನಾನು ಕದಿಯಲಿಲ್ಲ."

"ನೀನು ಕದಿಯಲಿಲ್ಲವೊ? ಹಾಗಿದ್ದರೆ ಅದೇ ನಿನ್ನನ್ನು ಕದ್ದಿರಬೇಕು!" ಸಾಹೇಬರ ಹಾಸ್ಯ ಕ್ಷಣಿಕ. "ಏಕೆ ಕದ್ದೆ ಹೇಳು" ಎಂದು ಗದ್ದರಿಸಿದರು.

"ನಾನು ಕದಿಯಲಿಲ್ಲ, ಅದೇ ನನ್ನ ಹಿಂದೆ ಬಂತು."

"ಅದೇ ನಿನ್ನ ಹಿಂದೆ ಬಂದಿತೆನ್ನುವುದು ನಂಬಲಾಗದ ಮಾತು. ನನಗೆ ಠಕ್ಕುಹೊಡೆದು ತಪ್ಪಿಸಿಕೊಳ್ಳಲಾರೆ. ನಿಜ ಹೇಳು. ಇಲ್ಲದಿದ್ದರೆ ಛಡಿ ಏಟು ಬೀಳುತ್ತದೆ."

ಹುಡುಗ ಮಾತಿಲ್ಲದೆ ತಲೆತಗ್ಗಿಸಿದುದನ್ನು ಕಂಡು ಅವನು ತಪ್ಪಿತಸ್ಥನೆಂದು ನಿರ್ಧರಿಸಿದರು. ಬೇಗನೆ ಇತ್ಯರ್ಥಮಾಡಿ ಮುಂದಿನ ಕಾರ್ಯಕ್ಕೆ ಹೋಗುವ ಆತುರದಿಂದ ಮತ್ತೆ ಕೇಳಿದರು: "ಕದಿಯಲು ನಿನ್ನನ್ನು ಯಾರು ಕಳಿಸಿದರು? ನಿಜ ಹೇಳಿದರೆ ಬಿಟ್ಟುಬಿಡುತ್ತೇನೆ."

ಹುಡುಗ ಮೂಕನಾಗಿ ನೆಲ ನೋಡುತ್ತ ನಿಂತ.

"ಕಳ್ಳನ ಬಾಯಲ್ಲಿ ಸೊಲ್ಲು ಹೊರಡುವುದಿಲ್ಲವೆ? ಛಡಿ ಏಟು ಬಿದ್ದರೆ ಆಗ ನಿಜ ಹೊರಬೀಳುತ್ತದೆ."

ತಲೆತಗ್ಗಿಸಿಯೆ ಹುಡುಗ ಉಸುರಿದ: "ನಾನು ಕದಿಯಲಿಲ್ಲ. ಅದೇ ನನ್ನ ಹಿಂದೆ ಬಂತು."

ಸಾಹೇಬರಿಗೆ ಕೋಪ ಬಂತು. "ಕಳ್ಳತನದ ಜೊತೆಗೆ ಸುಳ್ಳು ಹೇಳಿ ಬಚಾಯಿಸಿಕೊಳ್ಳಬೇಕೆಂದಿದ್ದೀಯಾ? ನಿನಗೆ ಛಡಿ ಏಟು ಬೀಳಬೇಕು."

ಹುಡುಗ ತಲೆಯೆತ್ತಿ ಸೆಟೆದು ನಿಂತು ಅಧಿಕಾರಿಗಳನ್ನು ದುರುದುರನೆ ದೃಷ್ಟಿಸುತ್ತ ಸಣ್ಣ ದನಿಯಲ್ಲಿ ಹೇಳಿದ: "ನನ್ನ ಮೇಲೆ ಕಳ್ಳತನ ಯಾಕೆ ಹೊರಿಸುತ್ತೀರಿ? ನಾನು ಸುಳ್ಳು ಹೇಳುತ್ತಿಲ್ಲ."

“ ಹಾಗಿದ್ದರೆ . . . . ?”

“ ಅದೇ ನನ್ನ ಹಿಂದೆ ಬಂತು. ಇನ್ನೇಸು ಸಾರಿ ಕೇಳಿದರೂ ನಾನು ಅದೇ ಹೇಳುವುದು. ”

ಈ ದಿಟ್ಟ ಸ್ಪಷ್ಟ ಮಾತಿನಿಂದ ಕಮಿಷನರ್ ಸಾಹೇಬರ ಮುಖ ಕೆಂಪೇರಿತು. “ ಹಾಗೋ ? ಇರಲಿ. ನಿಜವನ್ನು ನಿನ್ನ ಬಾಯಿಂದಲೇ ನಾನು ಹೊರಡಿಸುತ್ತೇನೆ. ಕಾನ್‌ಸ್ಟೇಬಲ್, ಇವನನ್ನು ಆ ಮರಕ್ಕೆ ಕಟ್ಟಿಹಾಕು. ” ಸೇರುವೆಗಾರರ ಕಡೆ ತಿರುಗಿ ಸಾಹೇಬರು ಹೇಳಿದರು : “ ನೀವು ಕರುವನ್ನು ಹಿಡಿದುಕೊಂಡು ಹೋಗಿ. ”

ತಾವರೆಕೆರೆಯ ಕಾಡಯ್ಯನಿಂದ ಕೆಂದಗರುವನ್ನು ಹಿಂದಕ್ಕೆ ಪಡೆಯುವುದು ಅಷ್ಟೇನೂ ಸುಲಭವಾಗಲಿಲ್ಲ. ಅವನು ಕೊಂಡ ಬೆಲೆಗಿಂತ ಹೆಚ್ಚಿಗೆ ಕೊಡುವ ಆಸೆಯಿಂದ ಒಪ್ಪಿಸಿ ಸಂಚಕಾರ ಕೊಟ್ಟು ಬಂಗಲೆಯ ಬಳಿ ಬರುವ ಹೊತ್ತಿಗೆ ಸೂರ್ಯಾಸ್ತ ಸಮಯವಾಗಿತ್ತು. ಈ ಹೊತ್ತಿಗೆ ಜಿಲ್ಲಾಧಿಕಾರಿಗಳು ಅಹವಾಲು ಕೇಳುವುದನ್ನು ಮತ್ತೆ ಮುಂದುವರಿಸಿದ್ದರು. ತಾವು ಹಾಜರಿಲ್ಲದಾಗ ನಡೆದ ಕಾರ್ಯಕಲಾಪವನ್ನು ತಿಳಿದುಕೊಳ್ಳಲು ಸುಬ್ಬಣ್ಣನವರು ಬಸವಾಪಟ್ಟಣದ ಪಟೇಲರನ್ನು ಮಾತನಾಡಿಸುತ್ತ ನಿಂತರು. ಹೊನ್ನಪ್ಪ ಸಂಚಿಯನ್ನು ಬಿಚ್ಚಿ ಅಡಕೆಗೋಟನ್ನು ಬಾಯಿಗೆ ಎಸೆದುಕೊಂಡು ಜಗಿಯತೊಡಗಿದ. ಇಷ್ಟರಲ್ಲಿ ಹಟಾತ್ತನೆ ಯಾರೊ ಸಿಳ್ಳುಹಾಕಿದ ದನಿ ಕೇಳಿಸಿತು. ಒಂದರ ಹಿಂದೆ ಇನ್ನೊಂದು, ಅದರ ಹಿಂದೆ ಮತ್ತೊಂದು. ಸಂದಣಿಯ ಗುಜುಗುಜು ಪಿಸಪಿಸ ತಟ್ಟನೆ ನಿಂತಿತು. ಜನ ಎಚ್ಚತ್ತು ಏನಾಯಿತೆಂದು ವಿಚಾರಿಸುವಷ್ಟರಲ್ಲಿ ಬಂಗಲೆಯಾವರಣದ ಹೆಬ್ಬಾಗಿಲ ಕಡೆಯಿಂದ ಏನೊ ನಾಗಾಲೋಟದಲ್ಲಿ ಬರುತ್ತಿರುವುದು ಕಂಡು ಅದರ ದಾರಿಯಲ್ಲಿದ್ದವರು ಗಾಬರಿಯಿಂದ ಹಿಂದಕ್ಕೆ ಸರಿದರು. ಎಲ್ಲರ ದೃಷ್ಟಿ ಅತ್ತ ನೆಟ್ಟಿತು. ನಿಟ್ಟೋಟದಿಂದ ಬಂದುದು ಜಿಲ್ಲಾಧಿಕಾರಿಗಳ ಎದುರಲ್ಲಿ ನಿಂತು ಆಯಾಸದಿಂದ ಮೂಗರಳಿಸಿ ಏದುತ್ತ ಕಾತರಗಣ್ಣಿನಿಂದ ಸುತ್ತೆಲ್ಲ ಹುಡುಕಿತು. ನೆರೆದಿದ್ದವರೆಲ್ಲ “ ಏನು ? ಏನಾಯಿತು ? ” ಎಂದು ಪಕ್ಕದವರನ್ನು ಕೇಳುತ್ತ ಉತ್ತರ ದೊರಕದೆ ಕುತೂಹಲಾವಿಷ್ಟರಾಗಿ ಒಮ್ಮೆಲೆ ಸಾಹೇಬರ ಸನಿಹಕ್ಕೆ ನುಗ್ಗಿದರು. ಆ ಸಮಯಕ್ಕೆ ಸರಿಯಾಗಿ ಎದುರಿನ ಬಿಲ್ವಮರದ ಕಡೆಯಿಂದ ಇನ್ನೊಂದು ಸಿಳ್ಳು ಬಂತು. ಸಿಳ್ಳಿನೊತ್ತಿಗೆ “ ಕೋಗಿಲೇ ಕೋಗಿಲೇ ಬಾ ಕೋಗಿಲೆ ! ” ಎಂದು ಕೂಗುವ ಹುಡುಗನೊಬ್ಬನ ಕರೆ, ತನ್ನನ್ನು ಸುತ್ತುಗಟ್ಟಿದ್ದ ಜನಸ್ತೋಮವನ್ನು ಲಕ್ಷಿಸದೆ ಬಾಲವನ್ನು ಮೇಲೆತ್ತಿಕೊಂಡು ಕರು ಚಂಗನೆ ಹಾರಿ ಅತ್ತ ಧಾವಿಸಿತು. ವಿದ್ಯಮಾನವೆಲ್ಲ ಮಿಂಚಿನ ವೇಗದಲ್ಲಿ ನಡೆದುಹೋಯಿತು.

ಕಮಿಷನರ್ ಸಾಹೇಬರು ತಮ್ಮ ಎತ್ತರದ ಪೀಠದಿಂದ ಎಲ್ಲವನ್ನು ಈಕ್ಷಿಸಿದರು. ಕರು ಹುಡುಗನ ಬಳಿ ಸಾರಿ ಏದುತ್ತ ನಿಂತುದನ್ನೂ ಹುಡುಗ ಅದರ ಕೊರಳನ್ನು ಬಾಚಿತಬ್ಬಿ ಮುದ್ದಿಸುವುದನ್ನೂ ಕಂಡು ಅವರ ಎದೆ ಉಬ್ಬಿಬಂತು.

ಆಸನ ಬಿಟ್ಟಿದ್ದು ಸಡಗರದಿಂದ ಸಂದಣಿಯಲ್ಲಿ ನುಗ್ಗಿ ಮರದೆಡೆಗೆ ಹೋದರು. ಹೋದವರೆ ಹುಡುಗನ ಬೆನ್ನು ಚಪ್ಪರಿಸಿ, " ನಿನ್ನ ಹೆಸರೇನು ? " ಎಂದರು.

" ಚಿನ್ನಪ್ಪ. "

" ಯಾರ ಮಗ ? "

" ಶಿವಪುರದ ಹೊನ್ನೇಗೌಡರ ಮಗ. "

" ಚಿನ್ನಪ್ಪ, ನೀನು ಹೇಳಿದ್ದು ನಿಜ. ನಿನ್ನನ್ನು ಕಳ್ಳ ಸುಳ್ಳ ಎಂದು ತಪ್ಪು ನುಡಿದೆ. ಮಹಾಸ್ವಾಮಿಯವರ ಪರವಾಗಿ ಈ ಕರುವನ್ನು ನಿನಗೆ ಬಳುವಳಿ ಕೊಟ್ಟಿದ್ದೇನೆ. ಕರೆದುಕೊಂಡು ಹೋಗಿ ಚೆನ್ನಾಗಿ ಸಾಕಿಕೊಳ್ಳಯ್ಯ."

* * *

ಬಂದಿದ್ದ ಜನವೆಲ್ಲ ಬೆರಗಾಗಿ ಹೋದರು. ಹೊನ್ನಪ್ಪನ ಕಣ್ಣು ಹನಿಗೂಡಿತು. ಸುಬ್ಬಣ್ಣನವರು ಅವನ ಕೈ ಅದಮುತ್ತ, " ಹೊನ್ನಪ್ಪ, ನೀನೇ ಧನ್ಯ ! " ಎಂದು ಭಾವೋದ್ರೇಕದಿಂದ ಹೇಳಿದರು.

—ಶ್ಯಾಮ

ಮಗು-ಚಂದ್ರ

ಮುಗ್ಧ ಮಾತಿನ 'ಮಂಜು' ತುಂಬ ಜಾಣ.
(ತಂದೆ ತಾಯಿಗಳ ಪಂಚಪ್ರಾಣ!)
ಶಿಶು ಸಹಜ ಕಲ್ಪನೆಯ ಬತ್ತಳಿಕೆಯಿಂದ
ಒಂದಾದ ಮೇಲೊಂದು ಮುಗ್ಧ ಪ್ರಶ್ನೆಯ ಬಾಣ
ಬಿಟ್ಟಿ ಬಿಡುವನು ಮಾತ ಕಲಿತಂದಿನಿಂದ!
ಒಂದು ಸಂಜೆ—
ಮಮತೆಯಿಂದೆತ್ತಿ ಎದೆಗಪ್ಪಿಕೊಂಡಿದ್ದ
ತಾಯ ಕೊರಳಿಗೆ ಕೈಯ ಮಾಲೆ ಹಾಕಿ
ಹೇಳಿದನು ತುಂಬು ಚಂದಿರನತ್ತ ಕೈಮಾಡಿ:
'ನೋಡಮ್ಮ, ಯಾರದೋ ಅಲ್ಲಿ ಬಿದ್ದಿಹುದೊಂದು ಭಾರಿ ಬೆಳ್ಳಿ
ರೂಪಾಯಿ!'
[ಇಂಥ ಕಮನೀಯ ಕಲ್ಪನೆಗೆ ಬೆರಗಾಗಿ,
'ಅದು ದೇವರದು, ಓ ನನ್ನ ಜಾಣಮರಿ!' ಎಂದುಸುರಿ
ಮುದಗೊಂಡ ತಾಯಿ
ಮುದ್ದು ಮಗನಿಗೆ ಕೊಟ್ಟಳೊಂದೆ ಸಮ ನೂರು ಮುತ್ತು–
ಮಿಠಾಯಿ!!]
ಮತ್ತೊಂದು ಸಂಜೆ—
ಆಡುತಿದ್ದವನೇಕೊ ಓಡೋಡಿ ಬಂದು
ಒಂದೆ ಉಸಿರಿಗೆ ತಾಯ ಬಳಿಗೈತಂದು
ಬಾನ್ನೀಲಿ ತೊಟ್ಟಿಲಲಿ ಮೌನದಿಂ ಮಲಗಿದ್ದ
ಹೋಳು ಚಂದಿರನತ್ತ ಕೈಮಾಡಿ
'ಅಮ್ಮ, ಚಂದಮಾಮನನಾರೊ
ಒಡೆದು ಹಾಕಿಹರಮ್ಮ' ಎಂದು
ಮರುಕದಿಂದ
ಬಿಕ್ಕಿದನು ತಲೆಯಿಟ್ಟು ತಾಯ ಎದೆಯಲ್ಲಿ ಮುಗ್ಧ ಕಂದ!

—**ಸುಧಾಕರ**

ಮಹಾಜ್ಞಾನಿ ಮುಕ್ತಾಯಕ್ಕ

ಸಾಗರದ ಸವಿಸ್ತಾರವನ್ನಳಿಯಬೇಕಾದರೆ ಸಾಗರೋಪಮ ಶಕ್ತಿ ಬೇಕಾಗುತ್ತದೆ. ಹೊಳೆಯ ಆಳತೆಯನ್ನರಿತು ಸಾಗರದಾಳವನ್ನಳಿಯಲಸಾಧ್ಯ. ಆದರೂ ಹೊಳೆಯನ್ನು ಕಡೆಗಣಿಸುವಂತಿಲ್ಲ. ಅಂತೆಯೇ ಮಹಾತ್ಮರ ಮಹತ್ತನ್ನಳಿಯಲು ಮಹಾಶಕ್ತಿ ಬೇಕಾದರೂ ವ್ಯಕ್ತಿತ್ವವುಳ್ಳ ಅಲ್ಪ ಮಾನವತೆಯೂ ಸಾಕು. ಅಲ್ಪತೆಯ ಹೆಸರೇಳಿ ಅರಿವಿನ ಬಾಗಿಲು ಮುಚ್ಚಿ ಮಹಾಶಕ್ತಿಯ ಇರುವಿಕೆಯನ್ನೇ ಇಲ್ಲವಾಗಿಸಬಾರದು. ಭಾರತೀಯ ಸಂಪ್ರದಾಯ ಅಗ್ಗಿಷ್ಟಿಕೆಯಲ್ಲಿ ಮುಚ್ಚಿಟ್ಟ ಬೆಂಕಿಯನ್ನು ಆಗಾಗ ಬೂದಿ ತೆರೆದು ತೋರಿಸುತ್ತಾ ಬಂದಿದೆ. ಮಹಾತ್ಮರಾದರೂ ಹಲವೊಮ್ಮೆ ಪರೀಕ್ಷೆಗೆ ಸಿಕ್ಕಿಕೊಳ್ಳಲೇಬೇಕಾಗುತ್ತದೆ. ಅದರಿಂದ ಅವರ ವ್ಯಕ್ತಿತ್ವ ಹೆಚ್ಚುತ್ತದೆಯೇ ಹೊರತು ಕುಗ್ಗುವುದಿಲ್ಲ. ಒರೆಗೆ ಸಿಕ್ಕಿದ ಚಿನ್ನ ತನ್ನ ಶ್ರೇಷ್ಠತೆಯ ಬಣ್ಣದ ಅಂತಸ್ತನ್ನು ತಿಳಿಸಿಕೊಡುವಂತೆ ಜ್ಞಾನಿಯಾದರೂ ಅದರ ಎತ್ತರವನ್ನು, ಸ್ಥಿರತೆಯನ್ನು ಅರಿಯಬೇಕಾದರೆ ಒರಟಾದ ಒರೆಗಲ್ಲಿಗೆ ಸಿಕ್ಕಲೇಬೇಕಾಗುತ್ತದೆ. ಇಲ್ಲವಾದರೆ ಮಂಜು ಮುಚ್ಚಿದ ಕಿರುಗುಡ್ಡವೂ ಹಿಮಾಲಯದಂತೆ ಕಂಡು ಮೆರೆಯುವಂತಾಗುತ್ತದೆ. ಮುಮುಕ್ಷುವಾಗಲಿಚ್ಛಿಸುವ ಮಾನವ, ಕಾಯದ ಕತ್ತಲೆಯಳಿದು ಮಿಥ್ಯಾದೃಷ್ಟಿಯಿಂದ ದೂರವಾಗಿ, ಭಾವಭವಸಾಗರದಿಂದ ಮೇಲೆ ಬಂದು, ದಡದಲ್ಲಿ ತನ್ನ ಲಂಗರು ಹಾಕಿ, ಅತ್ತ ಸಾಗರದಲ್ಲೂ ಇಲ್ಲ, ಇತ್ತ ಅದರಿಂದ ಬಹುದೂರವೂ ಹೋಗಿಲ್ಲ ಎನ್ನುವ ನೆಲೆಯಲ್ಲಿ ನಿಂತು, ಸುತ್ತಿ ಸುಳಿವ ಮನದ ಮರ್ಕಟತನವಳಿದು, ತನ್ನ ಸತ್ಯತತ್ವವನ್ನು ತನ್ನಲ್ಲಿ ನೆಲೆಯಾಗಿಸಿಕೊಳ್ಳಬೇಕೆಂಬ ಹೆಬ್ಬಯಕೆ ಜಾಸ್ತಿಯಾಗಿ, ತತ್ವವೇ ತಾನಾಗಬೇಕೆಂಬ ನಿಶ್ಚಯಾತ್ಮಕ ಬುದ್ಧಿ ತಲೆದೋರಿ, ಸತ್ಯದೃಷ್ಟಿ ಸ್ವಾನುಭಾವದ ಮೂಲಾಧಾರದ ಮೇಲೆ ಪರಂಜ್ಯೋತಿಯ ಬೆಳಕನ್ನು ಕಾಣಲು ಪ್ರಯತ್ನಿಸಬೇಕು.

ಇದನ್ನೇ "ಪರವನರಿದ ಸತ್‌ಪುರುಷರ ಸಂಗದಿಂದ ಶಿವಯೋಗದ ವಚನಾಮೃತವನ್ನು ಸದ್‌ಭಕ್ತಿಯುಳ್ಳ ಮಹೇಶ್ವರನು ತನ್ನ ಶ್ರೋತೃಮುಖದಲ್ಲಿ ಕೇಳಿ, ಮನೋಮುಖದಲ್ಲಿ ಹಾರೈಸಿ, ತೃಪ್ತಿಮುಖದಲ್ಲಿ ಸಂತೋಷವನೈದಬಲ್ಲಡೆ ಈ ಸುಖವು ಪರಿಣಾಮವನೊಡಗೂಡುವುದು. ಹೀಗಲ್ಲದೆ ಸಂಸಾರ ವಿಷಯರಸವ ತನ್ನ ಹೃದಯಕೂಪದಲ್ಲಿ ತುಂಬಿಕೊಂಡಿಪ್ಪ ಜೀವರುಗಳ ಕಾಯದಲ್ಲಿ ವಚನಾಮೃತವ ತುಂಬಿದೆಡೆ ಭಿನ್ನ ಘಟದಲ್ಲಿ, ಉದಕ ಹೊಯಿದಂತೆ ಕಾಣಾ ಮಹೇಶ್ವರಾ" ಎಂದು ಪ್ರಭುದೇವರೂ 'ಭವದುಃಖಗಳಿಗೆ ನಮ್ಮ ಶರಣಾನುಭಾವ ವೇದ್ಯವಾಗದು' ಎಂದು ಬಸವಣ್ಣನವರೂ ಸ್ಪಷ್ಟಪಡಿಸಿದ್ದಾರೆ. 'ತನ್ನ ತಾನರಿದೊಡೆ ತಾನೇ ಪರತತ್ವ, ತನ್ನ ತಾ ಮರೆದರೆ ತಾನೇ ಭವಬಂಧನದಲ್ಲಿ ಸಿಕ್ಕ ಜೀವಾತ್ಮ.' ಆದ್ದ

ರಿಂದಲೇ ವಚನಕಾರರು 'ಮರೆದು ಮಾನವನಾದ, ಅರಿತು ಶರಣನಾದ' ಎಂದು ಮತ್ತೆ ಮತ್ತೆ ಒತ್ತಿ ಹೇಳುತ್ತಾರೆ.

ತನುವಿಗೆ 'ಮರೆವಿನ' ಗಂಟನ್ನು ಹಾಕಿದವರಾರು? ಅದನ್ನು ಬಿಚ್ಚಬಲ್ಲವರಾರು? ಬಿಚ್ಚಲು ಮತ್ತೊಬ್ಬರನ್ನು ಅರಸುತ್ತಾ ಹೊರಟರೆ 'ಎತ್ತನೇರಿ ಎತ್ತನರಸುತ್ತ ಬಳಲಿದಂತೆ', 'ತಾಳಮರಕ್ಕೆ ಕೈಯ ನೀಡಿ ಕಾಯ ಬಳಲಿದಂತೆ' ಆಗುತ್ತದೆ. ತೆರಣಿಯ ಹುಳು ತನ್ನ ದೇಹದಲ್ಲಿ ಮನೆಮಾಡಿ ತನ್ನ ನೂಲು ತನ್ನ ಸುತ್ತಿ ಸಾವ ತೆರನಂತೆ ಮರೆವಿನ ಗಂಟನ್ನು ಹುಡುಕುತ್ತಲೇ ಸಾಯಬೇಕಾಗುತ್ತದೆ. ಕತ್ತಲಲ್ಲಿ ಕತ್ತಲೆ ಮೂಲವನ್ನರಸಿ ಕಾಯವನ್ನು ನೋಯಿಸಿಕೊಳ್ಳಲು ಹೋಗದೆ ಕೈಯಲ್ಲಿ ಸುಜ್ಞಾನದ ದೀವಿಗೆಯನ್ನು ಹಿಡಿದರೆ ಕತ್ತಲೆ ತಾನಾಗಿಯೇ ಜಾಗ ಬಿಡುತ್ತದೆ. ಅಂತೆಯೇ ಅರಿವಿನ ಬೆಳಕಿನಲ್ಲಿ ಮರೆವಿನ ಕತ್ತಲೆ ತಾನಾಗಿಯೇ ದೂರ ಸರಿಯುತ್ತದೆ. ಅಂಗವೆಲ್ಲ ಲಿಂಗವಾಗುತ್ತದೆ. ಬೆಳಗಿನೊಳಗಣ ಮಹಾ ಬೆಳಗೇ ಲಿಂಗ. ಲಿಂಗ ತಾನಾದ ಬಳಿಕ, ಲಿಂಗದ ಪ್ರಭೆಯಿಂದ ಪ್ರಜ್ವಲಿಸುವ ಶರಣನಿಗೆ ವಿಶ್ವದ ನಿಜಸ್ವರೂಪ ತಾನಾಗಿಯೇ ಗೋಚರವಾಗುತ್ತದೆ. ಸುಜ್ಞಾನ ತಿಳಿವಿಗೆ ಬಂದ ಮೇಲೆ ಅದು ಕ್ರಿಯಾಶೀಲವಾಗಬೇಕು. ಶರಣನ ನುಡಿಯಂತೆ ಅವನ ನಡೆಯೂ ಇರಬೇಕು. ಶರಣಧರ್ಮದಲ್ಲಿ ನಡೆಗೇ ಪ್ರಾಮುಖ್ಯತೆ. ನುಡಿಯುವುದೊಂದೇ ಶರಣನ ಹಕ್ಕಲ್ಲ. ಅದರಂತೆ ನಡೆದು ತೋರಿಸುವುದೂ ಅವನ ಕರ್ತವ್ಯ. ಇಲ್ಲವಾದರೆ ಅದೊಂದು ದೊಡ್ಡ ಕುಂದಾಗುತ್ತದೆ. ತುಂಬಬಾರದ ಕೊರತೆಯಾಗುತ್ತದೆ. 'ನುಡಿಯಲ್ಲಿ ಭಕ್ತಿಯನಾಡಿ ನಡೆಯಲ್ಲಿಲ್ಲದಿರ್ದಡೆ ಕಡೆ ಮುಟ್ಟ' ಎಂಬುದೇ ಶರಣನ ನಿರ್ಧಾರಸೂತ್ರ.

'ನುಡಿದರೆ ಮುತ್ತಿನ ಹಾರದಂತಿರಬೇಕು, ಮಾಣಿಕ್ಯದ ದೀಪ್ತಿಯಂತಿರಬೇಕು, ಲಿಂಗಮೆಚ್ಚಿ ಅಹುದೆನಬೇಕು.' ಅಂತಲ್ಲದೆ 'ನುಡಿಯೊಳಗಾಗಿ ನಡೆಯದಿದ್ದರೆ ಕೂಡಲಸಂಗಮದೇವನೆಂತೊ ಅವನಯ್ಯ' ಎನ್ನುತ್ತಾರೆ. ಅಂತೆ ನಡೆದ ಬಸವಣ್ಣ. ಶರಣರ ನುಡಿಲಿಂಗ, ಅವರ ನಡೆಯೂ ಲಿಂಗವೆ, ನುಡಿದುದೇ ಪರತತ್ವ, ನಡೆದುದೇ ಪರಮಪಥ, ಅಂತೆಯೇ ಮಾತೆಂಬುದು ಜ್ಯೋತಿರ್ಲಿಂಗ.

ಶರಣಧರ್ಮದ ಈ ಎಲ್ಲ ತತ್ವಗಳನ್ನೂ ಕೂಡಿಕೊಂಡು ಶರಣಧರ್ಮದ ಮೂರ್ತಿರೂಪದಂತಿದ್ದ ಜ್ಯೋತಿರ್ಲಿಂಗವೇ ಪ್ರಭುದೇವ. ಭವದ ಕೆಸರಿನಲ್ಲಿ ತಾವರೆಯ ದಂಟಿನಂತೆ ಹುಟ್ಟಿ, ತಾವರೆಯಂತೆಯೇ ಕೆಸರಲ್ಲಿ ಬೇರು ಬಿಡದೆ ಭವದ ಸಾರವನ್ನು ಹೀರಿ, ನೀರ ಮೇಲೆ ಅರಳಿದ ತಾವರೆಯಂತೆ ಪ್ರಭುದೇವ ಬನವಾಸಿಯ ಬಳ್ಳಿಗಾವೆಯಲ್ಲಿ ಹುಟ್ಟಿ ಸಂಸಾರದ ಕೆಸರಲ್ಲಿ ಬೇರು ಬಿಡದೆ, ಶ್ರದ್ಧೆ, ಭಕ್ತಿ, ಸತ್ಪಥದಲ್ಲಿ ಜೀವನದ, ಲೋಕದ ಸಾರ ಹೀರಿ, ಜ್ಞಾನರೂಪಿಯಾಗಿ ಸುಜ್ಞಾನ ಸೂರ್ಯಕಿರಣಗಳಿಂದ ಅರಳಿದ ತಾವರೆಯಾಗುತ್ತಾನೆ. ರಾಜಕುಮಾರನಾಗಿದ್ದ ಸಿದ್ಧಾರ್ಥ ಸಿದ್ಧಿಯನ್ನು ಪಡೆದು ಬುದ್ಧನಾದ ಮೇಲೆ ಲೋಕದತ್ತ ಹಿಂತಿರುಗಿ ನೋಡಿ ಸೋದರರ

ಮೇಲ್ಮೈಗಾಗಿ ಮತ್ತೆ ಇತ್ತ ಬಂದಂತೆ ಜ್ಞಾನಿಯಾದ ಪ್ರಭುವೂ ಮತ್ತೆ ಲೋಕದತ್ತ ತನ್ನ ದೃಷ್ಟಿಯನ್ನು ಹರಿಸುತ್ತಾನೆ. ಲೋಕವನ್ನೇ ಬೆಳಗುವ ಸೂರ್ಯನ ಪ್ರಖರ ಕಾಂತಿಯಲ್ಲಿಯೂ ಗುಹೆಗಹ್ವರಗಳಲ್ಲಿ ಕಾಳಕತ್ತಲೆ ತುಂಬಿಯೇ ಇರುತ್ತದೆಯಲ್ಲವೆ? ಅಲ್ಲಿ ಹೋಗುವವರು ಕೈಯಲ್ಲಿ ಬೆಳಕು ಹಿಡಿದೇ ಹೋಗಬೇಕಲ್ಲವೆ? ಸುಜ್ಞಾನ ಸೂರ್ಯನ ಮಹಾ ಬೆಳಗಿನಲ್ಲಿ ಬೆಳಗಾಗಿ ಪ್ರಜ್ವಲಿಸುತ್ತಿದ್ದ ಸಿದ್ಧರಾಮ, ಬಸವ, ಚೆನ್ನಬಸವ, ಮಹಾದೇವಿ, ಮುಕ್ತಾಯಿ ಮುಂತಾದವರಿದ್ದರೂ, ಅವರ ಅಂತರಂಗ ದಲ್ಲಿ ಮನೆಮಾಡಿರುವ ಪರಂಜ್ಯೋತಿಯನ್ನು ಕಾಣಲು ಹಾತೊರೆಯುತ್ತ, ಅದರತ್ತ ಸಾಗುವ ಪಥದಲ್ಲಿ ತುಂಬಿದ್ದ ಕತ್ತಲೆಯಲ್ಲಿ ಸಿಲುಕಿ ತಡವರಿಸುತ್ತಿದ್ದರು. ಅವರ ಕೈದೀವಿಗೆಯಾಗಿ ಪ್ರಭು ಸಹಕರಿಸಬೇಕಾಯಿತು. ಆ ಮಹತ್ಕಾರ್ಯಕ್ಕಾಗಿಯೇ ತನ್ನ ಜೀವನದ ಗುರಿಯನ್ನು ನಿರ್ಧರಿಸಿಕೊಂಡ. ಕತ್ತಲೆಂದಾದರೂ ಬೆಳಕಿನ ಬಳಿ ಹೋದುದುಂಟೆ? ಬೆಳಕೇ ಕತ್ತಲೆಯ ಬಳಿ ಸಾರಬೇಕಲ್ಲವೆ? ಅಂತೆಯೇ ಪ್ರಭು ಅವರತ್ತ ಹೊರಟ.

ವೀರಶೈವ ಸಿದ್ಧಾಂತದ ಸಾರವನ್ನೇ ಹೀರಿ ಶರಣಮಾರ್ಗಕ್ಕೆ ಗುರುವಾದವನು ಪ್ರಭುದೇವ. ಕಲ್ಯಾಣನಗರಿಯ ಅನುಭವಮಂಟಪದ ಮಹಾಧ್ಯಕ್ಷತೆ ವಹಿಸಿದ ಅನುಭಾವಿ. ಜ್ಞಾನದ ಮೇರುವೇ ಅವನಾಗಿದ್ದ. ಜನತೆಯ ಮೂಢನಂಬಿಕೆಗಳನ್ನು ಟೀಕಿಸುತ್ತಾ, ಆಡಂಬರ ಭಕ್ತಿ ಮತ್ತು ಭಕ್ತರನ್ನು ಖಂಡಿಸುತ್ತಾ, ಅಜ್ಞಾನಕ್ಕೆ ಬರ ಸಿಡಿಲಂತೆ ಎರಗಿ ನಾಶಮಾಡುತ್ತಾ ಸಾಗುತ್ತಿರುತ್ತಾನೆ. ಇಂತಹ ಪ್ರಭುವೂ ಸಾಮಾನ್ಯ ಹೆಣ್ಣೊಬ್ಬಳ ಪರೀಕ್ಷೆಗೆ ಒಳಗಾಗಬೇಕಾಗಿ ಬರುತ್ತದೆ. ಸ್ತ್ರೀಪುರುಷರು ಸರ್ವದೃಷ್ಟಿಯಲ್ಲೂ ಸರ್ವಸ್ಥಳದಲ್ಲೂ, ಸರ್ವಕಾಲದಲ್ಲೂ ಸರಿಸಮಾನರೆಂದು ವಚನ ಧರ್ಮ ಸಾರುತ್ತದೆ. ವಚನಕಾರರ ಈ ತತ್ವ ಕೇವಲ ನುಡಿಯಲ್ಲೇ ಉಳಿಯಲಿಲ್ಲ, ಆದರ್ಶಮಾತ್ರವೇ ಆಗಲಿಲ್ಲ. ಅದು ನಡೆಯಲ್ಲೂ ಬಂತು. ಮಹಾದೇವಿಯಕ್ಕ, ನಾಗಲಾಂಬೆ, ಮುಕ್ತಾಯಕ್ಕ ಮುಂತಾದ ಇಪ್ಪತ್ತೆಂಟು ಮಂದಿ ವಚನ ಕಾರ್ತಿಯರೇ ಇದಕ್ಕೆ ಸಾಕ್ಷಿ. ಅನುಭವಮಂಟಪದಲ್ಲೂ ಬಸವಣ್ಣನಿಗಿಂತಲೂ ಮಿಗಿಲಾದ ಸ್ಥಾನವನ್ನು ಹಲವು ಸ್ತ್ರೀಯರು ಗಳಿಸಿದ್ದರು.

ಪಚ್ಚೆ ಪೈರುಗಳಿಂದ, ಹೂ ಫಲಗಳಿಂದ ತುಂಬುಗರ್ಭಿಣಿಯಂತೆ ಕಣ್ಣೋಳಿ ಸುತ್ತಿದ್ದ ಭೂದೇವಿ ಬೆಸಲೆಯಾಗಿ ಫಲವಿತ್ತು ಸುಗ್ಗಿಯ ಆನಂದದಲ್ಲಿ ಜನ ಸಂತಸ ಪಟ್ಟು ಕಡುಬೇಸಿಗೆಯ ಪಾದಸ್ಪರ್ಶಕ್ಕೆ ಅಂಜುತ್ತ ಕುಳಿತಿತ್ತು. ಅಜಗಣ್ಣ ಒಕ್ಕಲು ಮಗನಾಗಿ ಲಕ್ಕುಂಡಿಯಲ್ಲಿ ಜನ್ಮತಾಳಿ, ಕಾಯಕದಲ್ಲಿ ನಿರತನಾಗಿಯೇ ಮಹಾಜ್ಞಾನಿಯಾಗಿ ತನ್ನ ಪೂರ್ಣಫಲವನ್ನು ಜಗತ್ತಿಗೆ ಕೊಟ್ಟು, ತಂಗಿ ಮುಕ್ತಾ ಯಕ್ಕನಂತಹ ಹಲವರಿಗೆ ಜ್ಞಾನಸುಗ್ಗಿಯ ಸಿರಿಸಂಪದವನ್ನು ತಂದು, ಸುಗ್ಗಿ ಕಳೆದು ಬೇಸಿಗೆಯಂತೆ ಅವನು ಈ ಜಗತ್ತಿನಿಂದ ಕಣ್ಮರೆಯಾಗಿ ತನ್ನವರಾಗಿದ್ದವ ರೆಲ್ಲರಿಗೂ ಕಡುದುಃಖವನ್ನು ತಂದು ಶಿವಪಥವನ್ನೈದಿದ್ದ. ಅಜ್ಞಾನವನ್ನು ಹೋಗಲಾಡಿಸುವ ಪ್ರಭು ಇಲ್ಲಿಗೆ ಬರುತ್ತಾರೆ.

ವಸಂತಕಾಲದಲ್ಲಿ ಪ್ರಪಂಚವೇ ಚಿಗುರು ಹೂಗಳಿಂದ ತುಂಬಿ ತುಳುಕುವ ಹಾಗೆ ಹನ್ನೆರಡನೇ ಶತಮಾನದ ಶರಣಧರ್ಮದ ಔನ್ನತ್ಯದ ವಸಂತಕಾಲದಲ್ಲಿ ವಚನಧರ್ಮ, ಚಿಗುರು ಹೂ ಹಣ್ಣುಗಳಿಂದ ತುಂಬಿ ಜಿಗಿಯುತ್ತಿತ್ತು. ಯಾವ ಹೂವನ್ನು ಮೆಚ್ಚುವುದು? ಯಾವ ಹೂವನ್ನು ಮುಡಿಯುವುದು? ಎಲ್ಲವೂ ಸುಂದರವೇ; ಯಾವುದನ್ನು ಕಾಣುವುದು? ಯಾವುದನ್ನು ರುಚಿ ನೋಡುವುದು? ಎಲ್ಲವೂ ಆಪ್ಯಾಯಮಾನವೇ, ಎಲ್ಲವೂ ರುಚಿಯಾದುವೇ. ಆದರೂ ರಸಿಕಭೋಗಿ ಸುಂದರವಾದದ್ದನ್ನೇ ಆರಿಸುತ್ತಾನಲ್ಲವೇ? ಮುಡಿವ ಭೋಗಿಯೂ ಸುಂದರ ಕಾಯವುಳ್ಳವನಾಗಿರಬೇಕು. ಹೊನ್ನಾದರೂ ಅದು ಪರಿಷ್ಕೃತ ಹೊಂದಲೇಬೇಕು. ಮಣ್ಣುಮುಚ್ಚಿದ ಹೊನ್ನು, ಪುಡಿಮಾಡಿ, ಕಾಯಿಸಿ, ಕುದಿಸಿ ಒರೆಹಾಕಿದಾಗ ಮಾತ್ರ ಬೆಳಗುವ ಭಂಗಾರವಾಗುತ್ತದೆ. ಹಿಮಾಲಯ ಲೋಕದಲ್ಲೆಲ್ಲ ಹಿರಿದಾದುದ ರಿಂದಲ್ಲವೇ ಅದಕ್ಕೆ ಮಹತ್ತು. ಅಂತದನ್ನು ಮೆಟ್ಟಿ ನಿಂತಿದ್ದರಿಂದಲ್ಲವೇ ವ್ಯಕ್ತಿಯ ಕೀರ್ತಿ ಜಗದ್ವಿಖ್ಯಾತವಾದುದು. ಮಹಾಜ್ಞಾನಿಯಾದರೂ ಅದರ ಶುದ್ಧತೆಯ ಹಿರಿಮೆ ತಿಳಿಯಬೇಕಾದರೆ ಪರೀಕ್ಷೆಗೊಳಗಾಗಲೇಬೇಕಲ್ಲವೆ! ಗಾರ್ಗಿಯು ಪರೀಕ್ಷೆ ಯಲ್ಲಿ ಗೆದ್ದದ್ದರಿಂದ ಅಲ್ಲವೇ ಶಾಂಡಿಲ್ಯನ ಹಿರಿಮೆ ದೊಡ್ಡದಾದದ್ದು. ಹೆಣ್ಣು-ಹೊನ್ನು-ಮಣ್ಣುಗಳ ಮಧ್ಯೆ ಇದ್ದೂ ಮಹಾಭಕ್ತನಾದುದರಿಂದಲಲ್ಲವೇ ಬಸವಣ್ಣ ಮಹಾತ್ಮನಾದದ್ದು. ಜ್ಞಾನಕ್ಕೆ ಲಿಂಗದ ಗೋಜಿಲ್ಲ. ಉತ್ತಮ-ನೀಚವೆಂಬ ಲೋಕದ ಅಂತರದ ಸ್ಪರ್ಶವೂ ಅದಕ್ಕಿಲ್ಲ. ಹಸುವಿನಿಂದ ಕರೆದ ಹಾಲು ಲೌಕಿಕರ ಕೈಗೆ ಸಿಕ್ಕಿ ಬೆಣ್ಣೆ, ತುಪ್ಪ, ಮಜ್ಜಿಗೆಗಳ ರೂಪ ತಾಳಿ ಮೇಲು ಕೀಳಾಗಬಹುದು. ಆದರೆ ಹಾಲು ಹಾಲೇ. ಅಂತೆಯೇ ದೇಹಿಯ ಆಶ್ರಯವನ್ನು ಪಡೆದ ಜ್ಞಾನ ಹಾಲಿನಂತೆಯೇ ಪವಿತ್ರವಾದದ್ದು. ದೇಹವನ್ನು ಹೆಣ್ಣು-ಗಂಡುಗಳೆಂದು ಪ್ರತ್ಯೇಕಿಸ ಬಹುದು, ಆದರೆ ಜ್ಞಾನವನ್ನು ಪ್ರತ್ಯೇಕಿಸಲು ಸಾಧ್ಯವೆ?

ಪ್ರಭು ಲಕ್ಕುಂಡಿಯಲ್ಲಿ ಕಂಡದ್ದೇನು! ಮಾನವನ ದುಃಖಕ್ಕೆ ಸಹ ಮಾನವನು ಅನುತಾಪ ಪಡುವುದು ಸಹಜ. ಮರಣವೇ ಮಹಾನವಮಿ ಎಂದು ತಿಳಿದಿದ್ದರೂ ಮರಣದ ಶಾಶ್ವತ ಅಗಲಿಕೆ ಸಹ ಮಾನವನನ್ನು ದುಃಖಕ್ಕೆ ಗುರಿ ಮಾಡಿಯೇ ತೀರುತ್ತದೆ. ಸತ್ತ ವ್ಯಕ್ತಿಗಾಗಿ ದುಃಖಿಸದೆ ಹೋದರೂ, ಇದ್ದಾಗ ಒಟ್ಟಿಗೆ ಪಡೆದ ಸುಖ, ದುಃಖ, ಆನಂದ ಇವುಗಳನ್ನು ಇನ್ನು ಮತ್ತೆ ಅನುಭವಿಸ ಲಾರದಾಯಿತಲ್ಲ ಎಂದಾದರೂ ಅಳಲು ಉಕ್ಕಿ ಹರಿಯುತ್ತದೆ. ದಿವ್ಯಜ್ಞಾನಿ, ತಪೋಗ್ರಣಿ ಕಣ್ವರೇ ಸಾಕುಮಗಳಾದ ಶಕುಂತಲೆಯನ್ನು ಪತಿಗೃಹಕ್ಕೆ ಕಳಿಸು ವಾಗಲೇ ಅಷ್ಟು ದುಃಖಿಸುತ್ತಾರೆ ಎಂದಮೇಲೆ, ಮುಕ್ತಾಯಕ್ಕ ಮಹಾಜ್ಞಾನಿ ಯಾಗಿದ್ದರೂ ತಂದೆ, ಅಣ್ಣ ಮತ್ತು ಗುರುವಿನೋಪಾದಿಯಲ್ಲಿದ್ದು, ತನಗೆ ಲೌಕಿಕದ ಮತ್ತು ಪಾರಲೌಕಿಕದ ಸ್ಥಿತಿಗಳನ್ನು ಸುವ್ಯವಸ್ಥೆಗೊಳಿಸಿದ್ದ ಅಜಗಣ್ಣನ ಸಾವಿಗಾಗಿ ದುಃಖಿಸುತ್ತಿರುತ್ತಾಳೆ. ಅಣ್ಣನ ಸಾವಿನಿಂದ ಹೊಸ ಸತ್ಯವೊಂದು

ತಿಳಿದಿರುತ್ತದೆ. ತಾನು-ಅಣ್ಣ ಇಬ್ಬರೂ ಒಂದೇ ಎಂದು ಪೂರ್ಣ ನಂಬಿದ್ದ ಆಕೆಗೆ ತಾನುಳಿದು ಅಣ್ಣ ಇಲ್ಲವಾಗಿ ತಮ್ಮಿಬ್ಬರ ಭಿನ್ನತೆಯ ಸತ್ಯವನ್ನು ಸಾವು ತಿಳಿಸಿರುತ್ತದೆ.

ಅಜಗಣ್ಣನಾದರೋ ಹೆಚ್ಚು ಪ್ರಸಿದ್ಧಿಗೆ ಬಾರದ ಒಬ್ಬ ಯೋಗಿ. ಅಜಗಣ್ಣನ ವ್ಯಕ್ತಿತ್ವವನ್ನು ಇಷ್ಟೇ ಸರಿ ಎಂದು ನಿರ್ಧರಿಸಲು ಆತನ ಕೃತಿಗಳ ಅಭಾವದಿಂದ ಅಸಾಧ್ಯವಾಗಿದೆ. ಯಾವ ಕೃತಿಯನ್ನೂ ಆತ ರಚಿಸದೇ ಹೋದರೂ ಆತನ ಬಾಳೇ ಒಂದು ಮಹತ್ಕೃತಿಯಾಗಿದೆ. ಆ ಕಾಲದ ಮಹಾಜ್ಞಾನಿಯೆನಿಸಿದ್ದ ಪ್ರಭುದೇವರು ಮುಕ್ತಾಯಕ್ಕನನ್ನು 'ಅಂಗೈಯೊಳಗೊಂದು ಅರಳ್ದ ತಲೆಯ ಹಿಡಿದುಕೊಂಡು, ಕಂಗಳ ಮುತ್ತ ಪವಣಿಸುವಾಕೆ ನೀನಾರು ಹೇಳು' ಎಂದು ಪ್ರಶ್ನಿಸಲು, 'ಯಾರೆಂದು ಕುರುಹು ಕೇಳಿದರೆ ಏನೆಂದು ಹೇಳಲಿ, ನಾನು ಅಯೋನಿಜೆ, ಆದರೆ ತಲೆಯುಳಿದು ನೆಲೆಗೆಟ್ಟು ಬೆಳಗುವ ಜ್ಯೋತಿ ಎನ್ನ ಅಜಗಣ್ಣ ತಂದೆಯ ಬೆನ್ನ ಬಳಿಯವ ಳಾನಯ್ಯಾ' ಎಂದು ಆಕೆ ತನ್ನ ಮತ್ತು ತನ್ನ ಅಣ್ಣನ ಪರಿಚಯವನ್ನು ಹೇಳಿದಾಗ, 'ಕಾಣದುದ ಕಂಡೆ, ಕೇಳದುದ ಕೇಳಿದೆ, ಮುಟ್ಟಬಾರದುದ ಮುಟ್ಟಿದೆ; ಅಸಾಧ್ಯವ ಸಾಧಿಸಿದೆ, ತಲೆಗೆಟ್ಟುದ ತಲೆವಿಡಿದೆ, ನೆಲೆಗೆಟ್ಟುದ ನಿರ್ಧರಿಸಿದೆ, ಗುಹೇಶ್ವರಾ, ನಿಮ್ಮ ಶರಣ ಅಜಗಣ್ಣಂಗೆ ಶರಣೆಂದು ಬದುಕಿದೆನು' ಎಂದು ತಮ್ಮ ಗೌರವ ತೋರಿಸುತ್ತಾರೆ. ಪ್ರಭುದೇವರ ಈ ಮಾತಿನಿಂದ ಅಜಗಣ್ಣನ ಶ್ರೇಷ್ಠ ವ್ಯಕ್ತಿತ್ವವನ್ನು ತಿಳಿಯಬಹುದು. ತನ್ನ ಜ್ಞಾನವನ್ನು ತನ್ನಲ್ಲಿಯೇ ಅಡಗಿಸಿ ಕೊಂಡು, ಅದರ ಆಡಂಬರಕ್ಕೆ ಅವಕಾಶ ಕೊಡದೆ ಅಜಗಣ್ಣ ಬಾಳುತ್ತಿರುತ್ತಾನೆ. ಈ ಮಹಾವ್ಯಕ್ತಿಯ ತಂಗಿಯೇ ಮುಕ್ತಾಯಕ್ಕ. ಈಕೆ ಬಾಲ್ಯದಿಂದ ಅಣ್ಣನಿಂದ ಉಪದೇಶ ಪಡೆದು ಮಹಾ ಜ್ಞಾನಸಂಪಾದನೆಯಲ್ಲಿ ನಿರತಳಾಗಿರುತ್ತಾಳೆ. ತಾನು ಬೇರೆಯಲ್ಲ ಆತ ಬೇರೆಯಲ್ಲ ಎಂಬ ಪೂರ್ಣ ನಂಬಿಕೆಯಲ್ಲಿರುತ್ತಾಳೆ. ಬೆಳಗು ಮಹಾಬೆಳಗಿನಲ್ಲಿ ಒಂದಾದಂತೆ ತನ್ನ ಮತ್ತು ತನ್ನ ಅಣ್ಣನ ಸಂಬಂಧ. ಆದರೆ, ಇವಳ ಈ ಪರಮ ನಂಬಿಕೆಗೆ ಈಗ ಧಕ್ಕೆ ಬಂದಿತ್ತು. ಅಣ್ಣನ ಸಾವಿನಿಂದಾಗಿ ದಿಕ್ಕೆಟ್ಟಿರುತ್ತಾಳೆ. ಇವರಿಬ್ಬರ ಸಂಬಂಧ ಬಾಯಿಬಿಟ್ಟು ಹೇಳುವಂತಹುದಲ್ಲ. ಅದನ್ನು ಸ್ಮರಿಸಿಕೊಂಡೇ "ಎಮ್ಮೊಳಡಗಿದ ಭೇದವ ಭಿನ್ನವ ಮಾಡುವರೆ ಅಣ್ಣಾ? ನಿಮ್ಮ ನುಡಿಗಳೆಲ್ಲವೂ ಪ್ರತಿಬಿಂಬಗಳಾದುವೆ ಅಣ್ಣಾ! ಕೊಡನೊಳಗಣ ಜ್ಯೋತಿಯು ಅಡಗಿಸಲರಿಯದೆ ಮಿಗೆವರ್ಧಿಸಿದಂತಾದೆಯೋ ಅಜಗಣ್ಣ" ಎಂದು ದುಃಖಿಸುತ್ತಾಳೆ, ಪ್ರಲಾಪಿಸುತ್ತಾಳೆ.

ಈಕೆಯ ಸ್ಥಿತಿಯನ್ನು ಕಂಡ ಪ್ರಭು 'ತಿಳುವಳಿಕೆಯಿಲ್ಲದ ಮರೆವೆಯ ಭ್ರಾಂತಿಯಿಂದ ತನ್ನಲ್ಲಿ ತಾನು ಸನ್ನಿಹಿತನಾದವಂಗೆ ಹೀಗೆ ದುಃಖಿಸುವರೆ? ದೇಹ ವಿಲ್ಲದವಂಗೆ ಉಂಟೆಂದು ಹೇಳುವುದು ಭ್ರಾಂತಿಯಲ್ಲವೆ?' ಎಂದು ನಗುತ್ತಾ 'ಎರಡಿಲ್ಲದ ಐಕ್ಯಂಗೆ ಒಳಹೊರಗಿಲ್ಲ ನೋಡು ತಾಯಿ!' ಎನ್ನುತ್ತಾರೆ. ಪ್ರಭು ದೇವರ ಈ ನಗೆಮಾತು ಆಳವಾದ ಜಿಜ್ಞಾಸೆಗೆ ಎಳೆದೊಯ್ದುಬಿಡುತ್ತದೆ. ಮಹಾ

ಜ್ಞಾನಿಯೆಂದು ಮಣಿದಿದ್ದರೂ ಚರ್ಚೆಯಿಲ್ಲದೆ, ತನ್ನ ಮತಿಗೆ ಸ್ಪಷ್ಟವಾಗದೆ ಒಪ್ಪಿಕೊಳ್ಳಲು ಮುಕ್ತಾಯಕ್ಕ ಸಿದ್ಧಳಿರಲಿಲ್ಲ. ತಾನು ಹೆಣ್ಣು, ಅದರಲ್ಲೂ ಇನ್ನೂ ಸಾಧಕಳು ; ಹೀಗಿರುವಾಗ ಪ್ರಭುದೇವರಂತಹವರನ್ನು ಪ್ರಶ್ನಿಸುವುದಾಗಲೀ, ಅವರ ಮಾತನ್ನು ಪ್ರತಿಭಟಿಸುವುದಾಗಲೀ ಉದ್ಧಟತನವಾಗುತ್ತದೆಂದು ತಿಳಿಯಲಿಲ್ಲ. ಶಿವಪಂಥದ ಹೆಣ್ಣು ಗಂಡುಗಳ ಸಮಾನತೆ ಪ್ರಭುದೇವರನ್ನು ಪ್ರಶ್ನಿಸುವಂತೆ ಮಾಡುತ್ತದೆ. 'ಎರಡಿಲ್ಲದ ಒಂದು' ಎಂಬ ಮಾತನ್ನು ಹಿಡಿದುಕೊಂಡು ಮುಕ್ತಾಯಕ್ಕ 'ಅಂಬರದಲ್ಲಿಡುವ ತುಂಬಿಯ ಬಿಂಬವನ್ನು ಕಂಬನಿಯೊಳಗಣ ರತ್ನದ ಬಯಕೆಯುನ್ನು ವೇದಶಾಸ್ತ್ರಗಳೇ ಸ್ತುತಿಸಲರಿಯವು. ಹೀಗಿರುವಲ್ಲಿ ಈ ತತ್ವವನ್ನು ನಾನು ಹೇಗೆ ಭೇದಿಸಲಿ' ಎನ್ನುತ್ತಾಳೆ. ಈ ಮಾತಿಗೆ ಪ್ರಭು 'ಕಂಡೆನು, ಕಾಣೆನು ಎಂಬುದೆಲ್ಲ ಮರವೆ. ಕೂಡಿದೆ, ಅಗಲಿದೆ ಎಂಬುದೆಲ್ಲ ಭ್ರಾಂತಿ. ತಂಗಿ, ಇವುಗಳನ್ನುಳಿದು ಕಂಡಾಗ ಭಗವಂತನನ್ನಗಲಲು, ಎಡೆಯೇ ಇಲ್ಲ ತಾಯೆ' ಎನ್ನುತ್ತಾರೆ.

ಪ್ರಭುವಿನ ಈ ಮಾತುಗಳು ಅಕ್ಕನನ್ನು ಸಮಾಧಾನಪಡಿಸಲಿಲ್ಲ. ಅದಕ್ಕಿಂತ ಹೆಚ್ಚಾಗಿ, ಅವಳಲ್ಲಿ ಹೆಚ್ಚು ವಿಚಾರಪ್ರಚೋದನೆಯಾಗಲು ಸಹಾಯಕವಾಯಿತು. ಹಲವೊಮ್ಮೆ ದೊಡ್ಡವರೆನ್ನಿಸಿಕೊಂಡವರು ಧಾರ್ಮಿಕ ಪರಿಭಾಷೆಯಲ್ಲಿ ಯಾವುದಾದರೂ ತತ್ವವನ್ನು ಹೇಳಿಬಿಟ್ಟರೆ ತಿಳುವಳಿಕೆಯ ಕೊರತೆಯಿಂದ ಅದು ಅರ್ಥವಾಗದೆ ಒಪ್ಪಿಬಿಡುತ್ತೇವೆ. ಆದರೆ ಸಾಧಕರು, ಅದರಲ್ಲೂ ಮುಕ್ತಾಯಕ್ಕನಂತಹ ಸಾಧಕಳು ಅಷ್ಟು ಸುಲಭವಾಗಿ ಒಪ್ಪಲಾರಳು. 'ದೇಹವಿದ್ದೂ ದೇಹವಿಲ್ಲದಂತೆ ಇರುವುದು ಹೇಗೆ ಸಾಧ್ಯ. ಅದು ತನ್ನ ಅಜಗಣ್ಣನಿಗೆ ಸಾಧ್ಯವಾಗಿತ್ತು. ಕರ್ಪುರದ ಪುತ್ಥಳಿಗೆ ಅಗ್ನಿಸಿಂಹಾಸನವನ್ನಿಕ್ಕಿ ಅಗ್ನಿ ಕರಗಿ ಕರ್ಪುರ ಉಳಿದುದಕ್ಕೆ ಬೆರಗಾದೆನಯ್ಯಾ, ಎನ್ನ ಅಜಗಣ್ಣನ ಯೋಗಕ್ಕೆ' ಎಂದು ಹೇಳಿ ಪ್ರಭುವಿನಿಂದ ಸಮಾಧಾನ ಪಡೆಯಲಿಚ್ಛಿಸುತ್ತಾಳೆ. "ಅಜಗಣ್ಣ ಅಳಿದವನೂ ಅಲ್ಲ, ಉಳಿದವನೂ ಅಲ್ಲ, ಗುಹೇಶ್ವರನಲ್ಲಿ ಒಂದಾದವನು, ಅದರಿಂದ ಅಂತಿಂತೆನಬಾರದು" ಎನ್ನುತ್ತಾರೆ. ಆದರೆ ಮುಕ್ತಾಯಕ್ಕ "ನಾನು ದೇಹಸಂಬಂಧಿಯಾಗಿ, ಮನಸ್ಸು, ಭಾವ ಇವುಗಳ ಸ್ಪಷ್ಟ ನಿಲವನ್ನು ತಿಳಿಯದೆ ನನ್ನನ್ನು ನಾನು ಕಾಣದೆ ಭಿನ್ನಜ್ಞಾನಿಯಾದೆ. ಅಣ್ಣ ನನಗೆ ಘನವೇದ್ಯನಾಗಿದ್ದ. ಅವನೀಗ ನನ್ನನ್ನು ತ್ಯಜಿಸಿಹೋದ. ಪೂರ್ಣಜ್ಞಾನ ಏನು ಎಂಬುದು ತಿಳಿಯದೆ, ಹೋಗುವ 'ದಾರಿ' ಯಾವುದೆಂದು ಅರಿಯದೆ ತಾನಾಗಬಾರದು ಅಲ್ಲವೇ ಅಣ್ಣಾ" ಅಂದರೆ, ದೇಹೇಂದ್ರಿಯ ಮನಃಪ್ರಾಣಾದಿಗಳ ಸೂತಕ ನಮ್ಮನ್ನು ಬಿಡದೆ ಇರುವಾಗ ಅದ್ವೈತವ ಸಾಧಿಸುವುದಾದರೂ ಎಂತು? ಇವುಗಳು ಹಿಂಗದ ಹೊರತು ಶಿವನೇ ತಾನಾಗಬಾರದು. ಪೂರ್ಣಜ್ಞಾನಿ ಮಾತ್ರ ತನ್ನ ದೇಹದ ಎಲ್ಲವನ್ನೂ ಮರೆತು, ಜ್ಞಾನವನ್ನು ತಿಳಿದು ಶಿವನೇ ತಾನಾಗುತ್ತಾನೆ. ಹೀಗಾಗದೆ ಭಿನ್ನ, ಅಪೂರ್ಣಜ್ಞಾನದಿಂದ ದಾರಿ ತಿಳಿಯದೆ ಮುನ್ನಡಿಯಿಟ್ಟರೆ

ಅದರಿಂದ ತೊಂದರೆ ಜಾಸ್ತಿಯೇ ಹೊರತು ಸುಖವಿಲ್ಲ. ಬೆಟ್ಟವನ್ನೇ ಹತ್ತಿ ಅನುಭವವಿಲ್ಲದವನು ಹಿಮಾಲಯವನ್ನು ಹತ್ತುವ ಆಸೆಯಿಂದ ಹೋಗಿ ಹತ್ತಿ ಮಂಜಿನಲ್ಲಿ ಸಿಕ್ಕಿ ಸಾಯುವಂತೆ, ದೇಹಕ್ಕೆ ಸಂಬಂಧಿಸಿದ ಈ ತೊಡಕೆಲ್ಲವೂ ಮನದ ಶಂಕೆಯಿಂದ ಉಂಟಾಗುತ್ತವೆ. ಈ 'ಶಂಕೆ'ಯನ್ನು ತೊರೆದು ನೋಡುವುದಾದರೆ 'ಮನವ ಮನೆಮಾಡಿಕೊಂಡಿರುವ ಲಿಂಗದ ಸ್ಥಿತಿಯನ್ನು ತಿಳಿಯಬಲ್ಲರೆ ಗುಹೇಶ್ವರ ನೆಂಬ ಲಿಂಗ ದೂರವಿಲ್ಲ'—ಎಂಬುದಾಗಿ ಪ್ರಭುದೇವರು ನುಡಿದರು. ಮುಕ್ತಾಯಕ್ಕ ನಿಗೆ ಸಹಜವಾಗಿಯೇ ಈ ಮಾತು ಅರ್ಥವಾಗಲಿಲ್ಲ. 'ತನುವಿನೊಳಗೆ ತನುವಾಗಿ, ಮನದೊಳಗೆ ಮನವಾಗಿ ಎಂದರೆ ನನಗೆ ತಿಳಿಯದು, ಅಂತರಂಗದೊಳಗೇ ಅದೆ ಎಂದರೇನು?' ಎನ್ನುತ್ತಾಳೆ. ವೇದ ಉಪನಿಷತ್ತುಗಳಿಗೆ ಹಾಕುವ ಪ್ರಶ್ನೆಯನ್ನೇ ಇಲ್ಲಿ ಮುಕ್ತಾಯಕ್ಕ ಪ್ರಭುವಿಗೆ ಹಾಕಿದ್ದಾಳೆ. ಜ್ಞಾನಿಯಾದವನು ಧರ್ಮತತ್ವ ಗಳನ್ನು ಹೇಗೆ ಹೇಳುತ್ತಾನೋ ಹೇಳಿದ್ದನ್ನು ಅಷ್ಟೇ ಸ್ಪಷ್ಟವಾಗಿ ವಿವರಿಸಲೂ ಬೇಕು. ಈ ಪ್ರಶ್ನೆಗೆ ಪ್ರಭುದೇವರು ಉತ್ತರಿಸುತ್ತ 'ಅರಿವು ಸ್ವಯವಾಗಿ ಮರೆವು ನಷ್ಟವಾದರೆ ಗುಹೇಶ್ವರನೆಂಬ ಲಿಂಗವು ತಾನೆ ಕಾಣಾ' ಎಂದಾಗ, "ಇದಾಗಬೇಕಾದರೆ ಗುರುವಿನ ಮುಖಾಂತರ ಮಾತ್ರ ಸಾಧ್ಯ. ಗುರುವಿಲ್ಲದೆ ಇದನ್ನು ಸಾಧಿಸು ವುದಾದರೂ ಎಂತು! ಅಂತಹ ಗುರುವಾದ ಅಣ್ಣನನ್ನು ಕಳೆದುಕೊಂಡೆ ಎಂಬುದ ಕ್ಕಾಗಿಯೇ ನಾನಿಷ್ಟು ದುಃಖಿಸುತ್ತಿರುವುದು" ಎಂದು ತಿಳಿಸಿದ ಅಕ್ಕ, ಪ್ರಭುದೇವರ ಪ್ರಥಮ ಪರೀಕ್ಷೆಯಲ್ಲಿ ಗೆಲ್ಲುತ್ತಾಳೆ.

ಭಗವಂತನೇ ತಾನಾದ ವ್ಯಕ್ತಿಗೆ ಗುರು ಯಾರು, ಶಿಷ್ಯ ಯಾರು? ಆ ಮಹಾಮಹಿಮನೇ ತನ್ನ ವಿನೋದಕ್ಕಾಗಿ ಶಿಷ್ಯನಾದ, ಗುರುವಾದ. ಸದಾಚಾರ ಗಳಲ್ಲಿಯೂ ಶಿವ ತಾನೇ ತಾನಾಗಿದ್ದಾನೆ. ಎಲ್ಲವೂ ಅವನೆ ಎಂದಾಗ ಯಾರಿಗೆ ಯಾರು ದಾರಿ ತೋರಿಸಬೇಕು? ಗುರುವಾದವನು ಜ್ಞಾನದ ದಾರಿಯನ್ನು ತೋರಿಸ ಬಲ್ಲ. ವ್ಯಕ್ತಿಯಲ್ಲಿರುವ ಮೂಲಜ್ಞಾನಕ್ಕೆ ಬೆರಳು ತೋರಿಸಿ ಅದನ್ನು ತನ್ನಲ್ಲಿಯೇ ಅರಸುವಂತೆ ಮಾಡುತ್ತಾನೆ. ಅಂತಹ ಮಾರ್ಗದರ್ಶನದಿಂದ ವ್ಯಕ್ತಿ ಹಂತಹಂತ ವಾಗಿ ತಿಳಿದು ತಾನೇ ಜ್ಞಾನಿಯಾಗುತ್ತಾನೆ. ವಿಗ್ರಹವೊಂದನ್ನು ಎದುರಲ್ಲಿಟ್ಟು ಪೂಜಿಸುತ್ತಾ, ಕಣ್ಮುಚ್ಚಿ ಅಂತರಂಗವೀಕ್ಷಕನಾಗಿ ತದೇಕಚಿತ್ತನಾಗಿ ತನ್ನಲ್ಲಿರುವ ಶಿವನಲ್ಲಿ ಒಂದಾದಂತೆ. ಪ್ರಭುದೇವರ ಈ ವಾದ ಒಪ್ಪಲರ್ಹವಾದರೂ ಗುರುವೇ ಇಲ್ಲ ಎನ್ನುವ ಮಾತನ್ನು ಮುಕ್ತಾಯಿ ಒಪ್ಪಲಿಲ್ಲ. ಏಕೆಂದರೆ 'ತನ್ನ ತಾನರಿದವ ನಿಗೆ ಅರಿವೆ ಗುರು, ಸಹಜವ ನೆಲೆಗೊಳಿಸುವ ನಿರ್ಣಯ ನಿಃಪತಿಯೇ ಗುರು ನೋಡಾ! ಗುರು ತಾನಾದರೂ ಗುರುವಿಡಿದಿರಬೇಕು. ಗುರುವಿಲ್ಲದೆ ಮುಕ್ತಿಯಿಲ್ಲ' ಎಂಬುದು ಈಕೆಯ ವಾದ. ಅದ್ವೈತ ಸಿದ್ಧಾಂತ ಸೂತ್ರವನ್ನು ಹಿಡಿದೇ ಪ್ರಭು ಉತ್ತರಿಸುತ್ತಾರೆ. 'ಸಹಜಸಂಬಂಧಕ್ಕೆ ಗುರುವಲ್ಲದೆ ಅಸಹಜಕ್ಕೆ ಗುರು ಉಂಟೆ? ಗುಹೇಶ್ವರ ಲಿಂಗದಲ್ಲಿ ಪರವೆಂದಲ್ಲಿ ಗುರು ಉಂಟಲ್ಲದೆ ಸ್ವಯಂವೆಂದಲ್ಲಿ ನುಡಿಯ

ಲ್ಲಿಲ್ಲ!' ಅಂದರೆ ತಾನು ಲಿಂಗವಾಗುವೆ ಎನ್ನುವವರೆಗೂ ಗುರು ಉಂಟೇ ಹೊರತು ತಾನೇ ಲಿಂಗವಾದಾಗ ಇಲ್ಲ.

ಈ ಮಾತು ಕೇಳಿದ ಮುಕ್ತಾಯಕ್ಕ ಪ್ರಭುವಿನ ಜ್ಞಾನದ ಅಧಿಕಾರವನ್ನೇ ಪ್ರಶ್ನಿಸುತ್ತಾಳೆ. ಬೆಳಗು ತನ್ನ ಬೆಳಗಿನ ಪ್ರಕಾಶವನ್ನು ಹೇಳಲಾರದು. ಅಂತೆಯೇ ಮಹಾಜ್ಞಾನಿಯಾದವನು ಅಥವಾ ತಾನೇ ಶಿವನಾದವನು ಹಾಗೆ ಹೇಳಬಹುದೆ! ಹಾಗೆ ಹೇಳಲು ಸಾಧ್ಯವೆ! ಅದಕ್ಕಾಗಿಯೇ ಅಕ್ಕ 'ಮಹಾಜ್ಞಾನವೆನ್ನುವುದು ಶಿಶು ಕಂಡ ಕನಸಿನಂತಿರಬೇಕು' ಎನ್ನುವಳು. ಮಾತು ಬರದ ಮಗು ಕಂಡ ಕನಸಿನ ರೀತಿ ನೀತಿಗಳನ್ನು ಅದರ ಮುಖದ ಹಾವಭಾವಗಳನ್ನು ಕಂಡು ಬೇರೆಯವರು ತಿಳಿಯಬೇಕೇ ಹೊರತು ಅದನ್ನು ಕಂಡ ಮಗುವೇ ಹೇಳಲಾಗುವುದಿಲ್ಲ. ಅಂತೆಯೇ ಮಹಾಜ್ಞಾನವೂ ಕೂಡ ಹೇಳಲಾಗದುದು. ಅದನ್ನು ಕಂಡಿದ್ದೇನೆ ಎಂದು ಹೇಳುವುದೇ ಭಿನ್ನತೆಯ ಚಿಹ್ನೆಯಲ್ಲವೆ! "ಪೂರ್ಣವಾಗಿ ತಿಳಿದು ಮರೆವನ್ನು ಮರೆಯಬಲ್ಲರೆ ಅದು ಶಬ್ದಮುಗ್ಧವಾಗಿರಬೇಕಲ್ಲದೆ ಶಬ್ದಸಂದಣಿಯ ಮಾತು ಸರಿಯಲ್ಲ ನೋಡಾ ಪ್ರಭುವೆ?" ಎಂದುತ್ತರಿಸುತ್ತಾಳೆ.

ಈ ಮಾತುಗಳನ್ನು ಕೇಳಿದ ಪ್ರಭು ತಾಳ್ಮೆಯಿಂದಲೇ ಚಿಂತಿಸಿ, ಈಕೆಯನ್ನು ತಾನು ತಿಳಿದಷ್ಟು ಸುಲಭವಾಗಿ ಗೆಲ್ಲಲು ಸಾಧ್ಯವಿಲ್ಲವೆಂಬುದನ್ನರಿತು ಆಕೆಗೆ ಸಮಂಜಸವಾದ ಮಾತುಗಳನ್ನು ಹೇಳಲು ಪ್ರಯತ್ನಿಸುತ್ತಾರೆ. ಅಂತು, ಇಲ್ಲಿ ಪ್ರಭು ಒಂದು ರೀತಿಯ ಪರೀಕ್ಷೆಗೆ ಸಿಕ್ಕಿಕೊಂಡರು. 'ಗುಹೇಶ್ವರನ ಶರಣರು ಲಿಂಗವೇ ತಾವಾಗಿರುವುದರಿಂದ ಅವರು ನುಡಿದ ಮಾತೇ ಜ್ಯೋತಿರ್ಲಿಂಗ. ಅವರು ನುಡಿದು ಸೂತಕಿಗಳಲ್ಲ' ಎನ್ನುತ್ತಾರೆ. ಆಗ ಅಕ್ಕ 'ಇದಿರ ಗೆಲಬೇಕೆಂದು ನುಡಿದ ನುಡಿಗಳಿವಲ್ಲದೆ ಅರಿವನರಿದು ಮರೆದ ನುಡಿಗಳಿವಲ್ಲ' ಎಂದು ಉತ್ತರವೀಯುತ್ತಾಳೆ. ಹೇಗೆಂದರೆ 'ನಡೆದು ನಡೆದು ನಡೆಯ ಕಂಡವರು, ನುಡಿದು ನುಡಿದು ಹೇಳುತ್ತಿಹರೆ? ನುಡಿದು ನುಡಿದು ಹೇಳುವನ್ನಕ್ಕರ ನಡೆದುದೆಲ್ಲವೂ ಹುಸಿಯಲ್ಲವೆ? ಇದಿರು ಗೆಲಬೇಕೆಂದು ನುಡಿದುಕೊಂಡರೇನು ಗೆದ್ದಂತಾಯಿತೆ? ಮನಕ್ಕೆ ಮನವೇ ಸಾಕ್ಷಿಯಾಗದ ಹೊರತು ಮೋಕ್ಷವಲ್ಲ, ಅಲ್ಲವೆ ಪ್ರಭು!' ಎನ್ನುತ್ತಾಳೆ.

ಇಲ್ಲಿ ಅಕ್ಕನ ಮಾತು ತರ್ಕಬದ್ಧವಾಗಿದೆ. ಲೌಕಿಕದಲ್ಲಿ ಪೂರ್ಣಜ್ಞಾನ ಅರಸುತ್ತಿದ್ದ ಎಲ್ಲ ಶರಣರ ಅಭಿಪ್ರಾಯವೂ ಇದೇ ಆಗಿದೆ. ಹಣ್ಣಿನ ಸವಿಯನ್ನು ಅರಿತವನು ಅದನ್ನು ಅನುಭವಿಸಿರುತ್ತಾನೆಯೇ ಹೊರತು ಅದು ವರ್ಣನೆಗೆ ಸಾಧ್ಯವಿಲ್ಲ. ವರ್ಣಿಸಿದರೆ ಅದರ ರುಚಿ ಬೇರೊಬ್ಬನಿಗೆ ಸಿಗುವುದೂ ಇಲ್ಲ. ಹೆಚ್ಚಾದರೆ ಹಣ್ಣನ್ನು ತಿಂದು ತಾನೇ ರುಚಿಯ ಅನುಭವ ಪಡೆಯಲು ಅದನ್ನು ದೊರಕಿಸುವ ಮಾರ್ಗ ನಿರ್ದೇಶನಮಾಡಬಹುದು. ಹಾಗೆ ಮಾಡಿದರೆ ನಿರ್ದೇಶಿಸಿದ ವ್ಯಕ್ತಿ ಗುರುವಾಗುತ್ತಾನೆ. ಪೂರ್ಣದ ಸ್ಥಿತಿಯನ್ನು ತಿಳಿಸಿದರೆ ಅಪೂರ್ಣನಾಗುತ್ತಾನೆ. ಇದು ಪ್ರಭು ಸಿಕ್ಕಿಕೊಂಡಿದ್ದ ಸ್ಥಳ. ಪ್ರಭು ಈ ವಾದವನ್ನು ಮೆಚ್ಚಿದರೂ ತಾನು

ಕಂಡ ಪೂರ್ಣದ ಸ್ಥಿತಿಯನ್ನು ಮಿಥ್ಯೆಯೆಂದು ಭಾವಿಸಲಾರ. ಅಕ್ಕನ ಈ ವಾದಕ್ಕೆ ಸಿಲುಕಿದ ಪ್ರಭು ತನ್ನ ಇರವಿನ ಸ್ಥಿತಿಯನ್ನು ತಿಳಿಸುತ್ತಾನೆ.

'ತನ್ನ ತಾನರಿದೊಡೆ ನುಡಿಯೆಲ್ಲ ತತ್ವ ನೋಡಾ! ತನ್ನ ತಾ ಮರೆದೊಡೆ ನುಡಿಯೆಲ್ಲ ಮಾಯೆ ನೋಡಾ. ಅರಿದು ಮರೆದ ಶಿವಯೋಗಿಯು ಶಬುದವೆಲ್ಲ ಉಪದೇಶವಲ್ಲದೆ ಭಿನ್ನ ಉಂಟೆ? ನಿನ್ನಲ್ಲಿರುವ ಕಳವಳವ ತಿಳುಹಲೆಂದು ನುಡಿದೆ, ಎನ್ನ ಮನದೊಳಗೆ ಕಂದು ಕಲೆಯೆಂಬುದಿಲ್ಲ. ನಮ್ಮ ಗುಹೇಶ್ವರನ ಲಿಂಗಕ್ಕೆ ನೀನು ಕರುಣದ ಶಿಶುವಾದ ಕಾರಣ ಬಾಯ್ದೆಗೆದೆನಲ್ಲದೆ ಭಿನ್ನ ಉಂಟೆ ಹೇಳು ಮರುಳೆ' ಎನ್ನುತ್ತಾರೆ. ಜ್ಞಾನಿಯೊಡನೆ ಮಾತ್ರ ಜ್ಞಾನದ ಸ್ಥಿತಿಯನ್ನು ತಿಳಿಸಿದನೇ ಹೊರತು ಅಪೂರ್ಣದೊಂದಿಗೆ ಅಲ್ಲ ಎಂಬ ಈ ಪ್ರಭುದೇವರ ಸಮಾಧಾನವೂ ಅಕ್ಕನನ್ನು ಶಾಂತಗೊಳಿಸಲಿಲ್ಲ. ಪ್ರಭುದೇವರ ವಾದದಿಂದ ಒಂದು ರೀತಿ ಅತೃಪ್ತಿ ಹೊಂದಿದ ಅಕ್ಕ ದಿಟ್ಟತನದಿಂದ 'ಮಡಿಯ ಹಂಗಿನ್ನು ನಿಮಗೆ ಹಿಂಗದು, ಹೀಗಿರುವಾಗ ನಡೆಯನೆಂತು ಪರರಿಗೆ ಹೇಳುವಿರಿ? ಒಡಲ ಹಂಗಿನ ಸುಳುಹು ಬಿಡದು, ಎನ್ನೊಡನೆ ಮತ್ತೀತರನುಭವವಣ್ಣಾ, ತಾನಾದಲ್ಲದೆ ಇದಿರಿಂಗೆ ಹೇಳಬಹುದೆ, ಅದನ್ನು ಸಾಧಿಸಿಕೋ ಹೋಗುಹೋಗು' ಎಂದು ಹಂಗಿಸುತ್ತಾಳೆ. ಈ ಮಾತುಗಳಿಂದ ಪ್ರಭು ಕೋಪತಾಳದೆ ಆಕೆಗೆ ಪೂರ್ಣದ ಸ್ಥಿತಿಯನ್ನು ತಿಳಿಸುತ್ತಾರೆ. 'ಶರಣ ನಡೆದರೆ ನಿರ್ಗಮನಿ, ನುಡಿದರೆ ನಿಶ್ಶಬ್ದಿ, ಗುಹೇಶ್ವರನ ಶರಣಂಗೆ ಕುರುಹಿಲ್ಲ ಕೇಳು ತಾಯೆ.' ಇದು ಭಗವಂತನೆ ತಾನಾದ ಸ್ಥಿತಿ. ದೇಹ ಬೇರೆ ಜ್ಞಾನ ಬೇರೆ ಎಂದಾಗ ಮಾತ್ರ 'ಮಾತು' ಅಪೂರ್ಣದ ಕುರುಹಾಗಬಹುದು. ಆದರೆ ಎರಡೂ ಒಂದಾದವನ ಸ್ಥಿತಿ ಅದಲ್ಲ. ಅವನ ನಡೆಯೂ ನಿರ್ಗಮನಿಯಾದದ್ದು, ನುಡಿಯೂ ನಿಶ್ಶಬ್ದಿಯಾದದ್ದು. ಆದರೆ ಈ ಸ್ಥಿತಿ ಸಾಮಾನ್ಯರಿಗೆ ತಿಳಿಯದುದು. ಸಾಮಾನ್ಯರು ಕೇಳುವ ಪ್ರಶ್ನೆಯನ್ನೇ ಮುಕ್ತಾಯಕ್ಕ ಮತ್ತೆ ಕೇಳುತ್ತಾಳೆ. 'ಕಯ್ಯಿ, ಬಾಯಿ ಇವುಗಳೆಲ್ಲ ಕುರುಹೆ. ಇವುಗಳಿದ್ದೂ ಇಲ್ಲವಾಗುವುದೆಂತು. ಆದ್ದರಿಂದಲೇ ಕಯ್ಯದು ಕುರುಹು, ಬಾಯದು ಬೊಬ್ಬೆ, ಸಾಕು ಉಲಿಯದಿರೋ ಭಾವ ಉಲಿಯದಿರು' ಎಂದು ಹಾಸ್ಯಮಾಡುತ್ತಾಳೆ. ಹಠವಾದಿ ಪ್ರಭು ಇವಳನ್ನು ಈ ನೆಲೆಯಲ್ಲೇ ಬಿಟ್ಟು ಅಗಲಲು ಸಿದ್ಧನಿರಲಿಲ್ಲ. ಮುಕ್ತಾಯಕ್ಕನಲ್ಲಿರುವ 'ಸಂದೇಹ'ವೇ ಇಷ್ಟು ಪ್ರಯಾಸಕ್ಕೆ ಕಾರಣವೆಂದು ತಿಳಿದು, 'ಅರಿವು ಕೆಟ್ಟು ಮರೆವಳಿದು ತಾನಳಿದು ತಾನುಳಿದು ತಾನು ತಾನಾದ ನಿಜಶರಣರಿಗೆ ಅಂತರಂಗದಲ್ಲಿ ಒಂದು ಅರಿವುಂಟೆ? ಸುಗಂಧ ತುಂಬಿದ ವಾತಾವರಣದಲ್ಲಿ ದುರ್ಗಂಧಕ್ಕೆ ತೆರವುಂಟೆ. ದೇಹದ ಸಂಬಂಧವನ್ನು ಬಿಡದವರಿಗೆ ಮಾತ್ರ ಅದು ಸಂದೇಹವಾಗಿದೆ. ಸಂದೇಹ ವಳಿಯದ ಹೊರತು ಅದು ತಿಳಿಯಲಾರದು' ಎನ್ನುವರು. ಈ ಮಾತುಗಳನ್ನು ಕೇಳಿದ ಮುಕ್ತಾಯಕ್ಕ 'ಲಿಂಗದಲ್ಲಿ ಲಿಂಗವಾಯಿತ್ತು ಎಂದರೆ ಅಲ್ಲಿಯೆ ಲಿಂಗವಿದೆ, ನಾನೆ ನಾನಾದೆನೆಂಬಲ್ಲಿ ನೀನೆಂಬುದಿದೆ, ಹೀಗಿರುವಾಗ ಅರಿದು ಮರೆದು ಪರಿಯೆಂತು

ಹೇಳು' ಎಂದು ಪ್ರಶ್ನಿಸುತ್ತಾಳೆ. 'ಅಂಗ ಅನಂಗಗಳೆರಡೂ ಅಳಿದು, ನಿಜದಲ್ಲಿ ನಿಂತ ಲಿಂಗೈಕ್ಯನ ಅನುಭವವೆಲ್ಲವೂ ಜ್ಞಾನನಷ್ಟ ಶಬ್ದ. ಆದ್ದರಿಂದ ತನ್ನಲ್ಲಿ ತಾನು ತದ್ಗತವಾಗಿರುವ ಶಿವಯೋಗಿಗೆ ಭಿನ್ನವಿಲ್ಲ ಅಲ್ಲವೆ ತಾಯಿ' ಎನ್ನುತ್ತಾರೆ.

ಅರಿವು ಮರವೆ ಎಲ್ಲವೂ ದೇಹದ ಕ್ರಿಯೆಗಳು. ಅವುಗಳೆಲ್ಲವೂ ನಷ್ಟವಾದಾಗ ಮಾತ್ರ ಪೂರ್ಣಜ್ಞಾನ ಫಲಿಸುತ್ತದೆ. ಅಂತಹ ಜ್ಞಾನಿಯ ಮಾತೆಲ್ಲವೂ ಭಗವಂತನ ಮಾತೇ ಆಗುತ್ತದೆ. ಅವನಿಗೆ ಒಳಗು ಹೊರಗುಗಳಿರುವುದಿಲ್ಲ. ಹೀಗಿರುವಾಗ ಅದನ್ನು ತಿಳಿಸಲೇಕೆ? ಸಿಡಿಲು ಹೊಡೆದ ಬಾವಿಗೆ ಸೋಪಾನವೇಕೆ? ಸೊಡರುಳ್ಳ ಮನೆಗೆ ತಮಂಧವೆಂದರೇನು? ತನ್ನಲ್ಲಿ ತಾನು ತದ್ಗತವಾಗಿರುವವನಿಗೆ ಬೊಮ್ಮ ಪರಬೊಮ್ಮವಾದವೆಂಬುದಿಲ್ಲ. ಇದರ ಅರ್ಥ ಬಿಡಿಸುವಿರಾ ಅಣ್ಣಾ-ಎಂದು ವಿನಮ್ರಳಾಗಿ ಪ್ರಾರ್ಥಿಸುತ್ತಾಳೆ. ಪ್ರಭು ಈ ನೆಲೆಯಲ್ಲಿ ಪೂರ್ಣ ಸೋತಂತೆ ತೋರುತ್ತದೆ. ಅಕ್ಕನಿಗೆ ಪೂರ್ಣಜ್ಞಾನದ ಅರಿವನ್ನು ಉಂಟುಮಾಡಲು ಪ್ರಭುವಿಂದ ಅಸಾಧ್ಯವಾಯಿತು. ಅಂತೆಯೇ ಅವರು 'ನುಡಿಯಿಂದ ನಡೆ ಕೆಟ್ಟಿತ್ತು, ನಡೆಯಿಂದ ನುಡಿ ಕೆಟ್ಟಿತ್ತು, ಗುಹೇಶ್ವರನೆಂಬ ಅರಿವು ಪೂರ್ಣವಾಗಿ ಬಂಜೆಯಾಯಿತಲ್ಲಾ' ಎಂದು ವ್ಯಾಕುಲಪಡುತ್ತಾರೆ. ಪ್ರಭುವಿನ ಈ ಸ್ಥಿತಿಯನ್ನು ಕಂಡೋ ಅಥವಾ ತಾನು ಅಂತಹ ಉನ್ನತಸ್ಥಿತಿಯಲ್ಲಿ ಇಲ್ಲವೆಂದೋ ಅಕ್ಕ 'ಹೌದು ಅಣ್ಣ, ಕಬ್ಬುನ ಉಂಡ ನೀರಿನಂತೆ, ಉರಿಯೊಳಡಗಿದ ಕರ್ಪೂರದಂತೆ ಶಿವಶರಣರ ಮಹಿಮೆ ಯಾರಿಗೂ ಕಾಣಬಾರದು; ಮಾತಿಗೆ ನಿಲುಕದು, ಅದನ್ನು ತಿಳಿಯುವಲ್ಲಿ ಮತಿಯೂ ಇಲ್ಲ, ನೆನೆಯಲೆಂದರೆ ಮನಸ್ಸೂ ಇಲ್ಲ' ಎಂಬುದಾಗಿ ಹೇಳುತ್ತ ಅವನಿಗೆ ಶರಣೆನ್ನುತ್ತಾಳೆ. ಪ್ರಭು ಮುಕ್ತಾಯಕ್ಕನಿಗೆ ಮುಕ್ತಿತತ್ವವನ್ನು ಬೋಧಿಸುತ್ತಾರೆ. ಜೀವನ್ಮುಕ್ತಿಯ ಸ್ಥಿತಿಯನ್ನರಿತು ಅಕ್ಕ ತನ್ನ ಅಣ್ಣನ ಅಗಲಿಕೆಯ ಅಳಲನ್ನು ಶಮನಗೊಳಿಸಿಕೊಳ್ಳುತ್ತಾಳೆ.

ಜ್ಞಾನಿಯೊಬ್ಬಳನ್ನು ಪರೀಕ್ಷಿಸಲು ಬಂದ ಮಹಾಜ್ಞಾನಿ ತಾನೇ ಪರೀಕ್ಷೆಗೊಳಗಾಗಬೇಕಾಗುತ್ತದೆ. ಇಲ್ಲಿ ಗೆದ್ದವರು ಯಾರು, ಸೋತವರು ಯಾರು ಎಂಬುದನ್ನು ತೀರ್ಮಾನಿಸುವುದು ಕಷ್ಟ. ಎರಡೂ ಕಡೆಗಳಿಂದ ಇಬ್ಬರೂ ಲಾಭ ಹೊಂದಿದ್ದಾರೆ. ಪನ್ನೀರನ್ನು ಪ್ರೀತಿಯಿಂದ ಪ್ರೋಕ್ಷಿಸಿದರೆ ಎಷ್ಟು ಲಾಭವೋ ಕೋಪದಿಂದ ಸುರಿದರೂ ಅಷ್ಟೇ ಲಾಭವಾಗುವುದಲ್ಲವೆ? ಇಬ್ಬರೂ ತಮ್ಮ ತಮ್ಮ ಮಟ್ಟಿಗೆ ಕೃತಾರ್ಥರಾಗಿದ್ದಾರೆ. ಪತಿಗಾಗಿ ಚಿತೆಯೇರಿದ, ದಾಸಿಯಾದ, ಮಗನಿಗಾಗಿ ತಲೆ ಒಡ್ಡಿದ, ದೇಶಕ್ಕಾಗಿ ಕತ್ತಿ ಹಿಡಿದು ಹೋರಾಡಿದ ಹಲವು ಸ್ತ್ರೀಯರಿದ್ದಾರೆ. ಆದರೆ ಅಣ್ಣನಿಗಾಗಿ ಪ್ರಲಾಪಿಸಿದ ಸ್ತ್ರೀ ಮುಕ್ತಾಯಕ್ಕನನ್ನು ಬಿಟ್ಟರೆ ಬೇರೊಬ್ಬಳು ಸದ್ಯಕ್ಕೆ ಸಿಕ್ಕಿಲ್ಲ. ಈಕೆ ಈ ಪವಿತ್ರ ಜ್ಞಾನದಿಂದ ತನ್ನ ಅಣ್ಣನ ಮತ್ತು ಪ್ರಭುವಿನ ಕೀರ್ತಿಯನ್ನು ಅಜರಾಮರವಾಗಿ ನಿಲ್ಲಿಸಿದ್ದಾಳೆ. ಪ್ರಭುವೇ 'ಲಿಂಗಾನುಭಾವಿಗಳ ಸಂಗದಿಂದಾನು ಕಣ್ದೆರೆದೆನು ಕಾಣಾ ಗುಹೇಶ್ವರಾ' ಎಂದು ಹೇಳಿಕೊಂಡಿರುವುದನ್ನು

ನೋಡಿದರೆ ಮುಕ್ತಾಯಕ್ಕ ಮುಂತಾದವರಿಂದ ಪಡೆದ ಜ್ಞಾನಸ್ಮರಣೆಯೇ ಆಗಿರಬಹುದೆಂದು ಊಹಿಸಬಹುದು. ಇಂತಹ ಉನ್ನತ ಗೌರವಕ್ಕೆ ಪಾತ್ರಳಾದವಳು ಮುಕ್ತಾಯಕ್ಕ. ಪ್ರಭುವಿನಂತಹ ಮಹಾವ್ಯಕ್ತಿಯನ್ನು ಸೃಷ್ಟಿಸುವಲ್ಲಿ ಪಾಲುಗೊಂಡ ಹಲವು ಶಕ್ತಿಗಳಲ್ಲಿ ಮುಕ್ತಾಯಕ್ಕನೂ ಒಬ್ಬಳು. ಹೆಣ್ಣು ಅಬಲೆ, ಅವಳು ಆಳವಾದ ವಿಚಾರಗಳನ್ನು, ಅದರಲ್ಲೂ ಆಧ್ಯಾತ್ಮಿಕ ವಿಚಾರಗಳನ್ನು ವಿಚಾರಿಸಲಸಮರ್ಥಳು, ಅವಳೇನಿದ್ದರೂ ಗಂಡಸಿನ ಗುಲಾಮಳು ಎಂಬ ಮಾತನ್ನು ಮುಕ್ತಾಯಕ್ಕ ಸುಳ್ಳು ಮಾಡಿದಳಷ್ಟೇ ಅಲ್ಲದೆ ಮಹಾಪುರುಷನೊಬ್ಬನನ್ನು ಗೆದ್ದು ನಿಂತು, ಎಷ್ಟೋ ಪುರುಷರಿಗಿಂತ ಮೇಲೆ ಎಂದು ತೋರಿಸಿಕೊಟ್ಟಿದ್ದಾಳೆ. ಭರತಖಂಡದ ಸಂಸ್ಕೃತಿ, ಧರ್ಮ, ರಾಜಕೀಯ ಇವುಗಳನ್ನು ರೂಪಿಸಿರುವವರಲ್ಲಿ ಸ್ತ್ರೀಯರೂ ತಮ್ಮ ತಮ್ಮ ಪಾತ್ರವಹಿಸಿದ್ದಾರೆ. ಕನ್ನಡದ ವಚನಕಾರ್ತಿಯರು ಅಂತಹ ಉನ್ನತ ಮಟ್ಟದ ಬಾಳ್ವೆಯ ನಿದರ್ಶನದಿಂದ ಇಡೀ ಸ್ತ್ರೀಜಾತಿಗೇ ಮಾರ್ಗದರ್ಶಕರಾಗಿದ್ದಾರೆ, ಆದರ್ಶರಾಗಿದ್ದಾರೆ. ಮಹಿಮಾನ್ವಿತರಾದ ಗಾರ್ಗಿ, ಮಹಾದೇವಿಯಕ್ಕ, ಮೀರಾ, ಅವ್ವಯ್ಯಾರ್ ಮುಂತಾದವರ ಸಮಾನ ಸಾಲಿನಲ್ಲಿ ಕುಳಿತುಕೊಳ್ಳಲರ್ಹಳಾಗಿದ್ದಾಳೆ ಮುಕ್ತಾಯಕ್ಕ. ಮಹಾಜ್ಞಾನಿಯನ್ನು ಎದುರಿಸಿ, ಆತನಿಗೂ ಜ್ಞಾನವನ್ನು ತುಂಬಿಕೊಟ್ಟ ಮುಕ್ತಾಯಕ್ಕ ಕೇವಲ ಮುಕ್ತಾಯಕ್ಕನಲ್ಲ, ಮಹಾಜ್ಞಾನಿ ಮುಕ್ತಾಯಕ್ಕ. ಹನ್ನೆರಡನೆಯ ಶತಮಾನದ ಮಹಾಜ್ಞಾನಿಗಳ ಸಾಲಿನಲ್ಲಿ ಅರ್ಹವಾದ ಪೀಠದಲ್ಲಿ ಕುಳಿತು, ಚಿರಂತನ ಕೀರ್ತಿಗೆ ಪಾತ್ರವಾಗಿರುವ ಮಹಾಮಹಿಮರಲ್ಲಿ ಮುಕ್ತಾಯಕ್ಕನೂ ಒಬ್ಬಳು. ಆಕೆಯ ಆದರ್ಶ ಮತ್ತೊಮ್ಮೆ ಭಾರತದ, ಕರ್ಣಾಟಕದ ಸ್ತ್ರೀಯರಿಗೆ ಅನುಕರಣೀಯಸಾಧ್ಯವಾದರೆ ಆ ನಾಡು, ಆ ಕಾಲ, ಎಷ್ಟು ದಿವ್ಯ, ಅದೆಷ್ಟು ಭವ್ಯ !

—ಜಿ. ಎಸ್. ಪರಶಿವಮೂರ್ತಿ

ಮೂರು ಕವಿತೆಗಳು

೧

ಇಗೋ ಬಂತು ಹೊಸ ವರುಷ, ಮರ ಮರದಲಿ
ಹೂ ಚಿಗುರಿನ ಹಿಗ್ಗು.
ಹಗಲಿರುಳಿನ ಬಾಗಿಲ ಬಳಿ ನಾ ಬಿದ್ದಿರುವೆನು
ಕಾಲೊರಸುವ ರಗ್ಗು.

೨

ಕಣ್ಣೀರಿನುಪ್ಪುಸೋಂಕದ ಸುಖಕೆ ಹಂಬಲಿಸದಿರೊ ಬೆಪ್ಪೆ ;
ದುಃಖ ಫಲವಿದೆ ಇದೆಕೊ ನಿನ್ನೆದುರು ತಟ್ಟೆಯಲಿ,
ಸುಲಿ, ಸುಖ ಅದರ ಸಿಪ್ಪೆ.

೩

ಕೆಲವರಿದ್ದಾರಯ್ಯ ನನಗೆ ಪ್ರಿಯ ಮಿತ್ರರು ;
ಆದರೂ ಶತ್ರು ಇದ್ದಾನೆ ಒಬ್ಬನೇ—
ಆ ಅವನು ನಾನೇ !

—ಜಿ. ಎಸ್. ಶಿವರುದ್ರಪ್ಪ

ಗಗನಗಾಮಿ

(ನಾಟಕ)

[ವಿಜ್ಞಾನಿಯೊಬ್ಬನ ವಿಶ್ಲೇಷಣೆ. ವಿಜ್ಞಾನದ ಮುಂದೆ ಹೆಡೆ ಎತ್ತಿ ನಿಂತಿರುವ ಸಮಸ್ಯೆಯ ಸತ್ಯರೂಪ.]

ಸಿ. ವಿ. ವೆಂಕಟಾಚಲಯ್ಯ

ಪಾತ್ರವರ್ಗ

೧.	ಬ್ಲೇಗನ್	....	ರಾಕೆಟ್ ವಿಜ್ಞಾನಿ
೨.	ಕಾರ್ಯದರ್ಶಿ	....	ಮತ್ತೊಬ್ಬ ವಿಜ್ಞಾನಿ, ಬ್ಲೇಗನ್‌ನ ಸಹಾಯಕ.
೩.	ಚಂದ್ರರಾಜ	....	ಚಂದ್ರಲೋಕದ ಅಧಿಪತಿ
೪.	ಉಪೇಂದ್ರ	....	ಚಂದ್ರರಾಜನ ಮಗ
೫.	ಜ್ಯೋತಿಷ್ಕ	....	ಚಂದ್ರರಾಜನ ಸಲಹೆಗಾರ
೬.	ವಿಶ್ವಪುತ್ರ	....	ಉಪಗ್ರಹದಲ್ಲಿ ಕುಳಿತು ಚಂದ್ರಲೋಕಕ್ಕೆ ವಿವಾಹ ಮತ್ತು ವಿಹಾರಾರ್ಥವಾಗಿ ಹೋದ ಭೂಮಿಯ ಮೇಲಣ ಮಾನವ
೭.	ಲೈಕೇಂದ್ರೈ	....	ವಿಶ್ವಪುತ್ರನ ಮಗಳು, ಕನ್ಯೆ
೮.	ಸ್ಪೂಟ್ನಿಕ್ ಶಾಸ್ತ್ರಿ	....	ಭೂಗ್ರಹದಿಂದ ವಿಶ್ವಪುತ್ರನ ಜೊತೆ ಚಂದ್ರಲೋಕಕ್ಕೆ ಹೋದ ಆಧುನಿಕ ಜ್ಯೋತಿಷಿ
೯.	ಆತ್ಮ	....	ಮಾನವನ ಹೃದಯದಲ್ಲಿರುವ ಭಗವಂತನ ಸ್ವರೂಪ
೧೦.	ಸೇವಕ	....	ಚಂದ್ರರಾಜನ ಆಸ್ಥಾನದಲ್ಲಿ

ದೃಶ್ಯ ೧

[ರಾಕೆಟ್ ವಿಜ್ಞಾನಿ ಬ್ಲೇಗನ್ನನ ಪ್ರಯೋಗಶಾಲೆ. ಅಂತರಿಕ್ಷಯಾನಕ್ಕೆ ಬೇಕಾದ ಸಾಮಗ್ರಿಗಳು ಅಂದವಾಗಿ ಜೋಡಿಸಲ್ಪಟ್ಟವೆ. ಅವನ ಕಾರ್ಯದರ್ಶಿ ಪ್ರಯೋಗಮಗ್ನನಾಗಿದ್ದಾನೆ. ಅಂತರ ಗ್ರಹ ಸಂಚಾರಕ್ಕೆ ರಾಕೆಟ್ ತಯಾರಾಗಿರುವ ಸಂತೋಷದ ಸುದ್ದಿಯನ್ನು ಬ್ಲೇಗನ್ನನಿಗೆ ತಿಳಿಸಲು ಕುತೂಹಲಕಾರಿಯಾಗಿದ್ದಾನೆ. ಕಾರ್ಯದರ್ಶಿಯ ಚಟುವಟಿಕೆ. ನಿಧಾನವಾಗಿ ಬ್ಲೇಗನ್ ಪ್ರವೇಶಿಸುತ್ತಾನೆ. ಕಾರ್ಯದರ್ಶಿ ಅವನನ್ನು ಸ್ವಾಗತಿಸಿ ರಾಕೆಟ್ ಸಿದ್ಧವಾಗಿರುವ ವಿಚಾರವನ್ನು ಅರುಹುತ್ತಾನೆ.]

ಕಾರ್ಯದರ್ಶಿ : ಸಾರ್.... ಸಾರ್. ರಾಕೆಟ್ Ready ಸಾರ್....ಸಿದ್ಧಗೊಳಿಸಿದ್ದೇನೆ ಸಾರ್....ಉಪಗ್ರಹ; ಮನುಷ್ಯರು ಎಲ್ಲಾ ಇಟ್ಟಿದ್ದೇನೆ ಸಾರ್.

ಬ್ಲೇಗನ್ : (ಆನಂದಪರವಶನಾಗಿ)....Rocketನ್ನು ಸಿದ್ಧಗೊಳಿಸಿದೆಯಾ Secretary? ....ಎಲ್ಲಿ....ಅದನ್ನು ತೆಗೆದುಕೊಂಡು ಬಾ....(ರಾಕೆಟನ್ನು ತಂದುಕೊಡುವನು ....ಅದನ್ನು ನೋಡಿ ಬ್ಲೇಗನ್ ಪುಳಕಿತನಾಗಿ) ಕಾರ್ಯದರ್ಶಿ....ಫಲಿಸಿತು ....ಇಂದಿಗೆ ನನ್ನ ಜೀವನದ ಮಹದಾಸೆ ಫಲಿಸಿತು. ವಿಜ್ಞಾನದ ಪ್ರಯೋಗ ಶಾಲೆಯಲ್ಲಿ ಎಡೆಬಿಡದೆ ನಡೆಸಿದ ೩೦ ವರ್ಷಗಳ ಸಾರಸ್ವತ ತಪಸ್ಸು ಇಂದು ಸಿದ್ಧಿಸಿತು....ಇದರೊಡನೆಯೇ ಮನುಷ್ಯನ ಮಹದಾಸೆಯೂ ಸಿದ್ಧಿಸಿತು.... ಮಾನವನಿಗೆ, ವಿಜ್ಞಾನ, ಮಹಾಜಗತ್ತಿನ ವಿಶ್ವರೂಪದರ್ಶನ ಮಾಡಿಸಲು ಕೈಗೊಂಡ ಯಜ್ಞ ಫಲಕಾರಿಯಾಯಿತು....ಈ ವಿಶ್ವದ ಗರ್ಭದಲ್ಲಿ ಅಡಗಿ ಕೊಂಡಿರುವ ಗ್ರಹಗಳನ್ನು ನಿಮಿಷಮಾತ್ರದಲ್ಲಿ ಏರಬಲ್ಲ....ಏರಿ ಅಲ್ಲಾಡಿಸ ಬಲ್ಲ ಸಾಮರ್ಥ್ಯ ನಮ್ಮ ಕೈವಶವಾಯಿತು....ಇನ್ನು ವಿಶ್ವದ ನಿಗೂಢ ರಹಸ್ಯ ಗಳು ಬಟ್ಟಬಯಲಾಗಿ ಮನುಷ್ಯನ ಕಣ್ಣೆದುರಿಗೇ ಹರಿದು ಚಿಂದಿಯಾಗುತ್ತವೆ ....ಆಧುನಿಕ ವಿಜ್ಞಾನದ ಮೂಸೆಯಲ್ಲಿ ನವಗ್ರಹಗಳೂ ಕರಗಿಹೋಗುತ್ತಾರೆ ....ಹ್ಹ ಹ್ಹ ಹ್ಹ ಹ್ಹಾ....ಕಾರ್ಯದರ್ಶಿ, ಕ್ಷಣಾರ್ಧದಲ್ಲಿ ವಿಶ್ವವನ್ನೇ ಸುತ್ತಿ ಬರಬಲ್ಲ ಕ್ಷಿಪಣಿಗಳ ಯುಗವೇ ಇಂದು ಆರಂಭವಾಯ್ತು........ಗಗನಗಾಮಿ ಯಾಗಿ, ಗ್ರಹದಿಂದ ಗ್ರಹಕ್ಕೆ ಚಲಿಸಿ ಅಂತರಿಕ್ಷ ಜೀವನವನ್ನು ಅಣಿಗೊಳಿಸುವ ಚೈತನ್ಯ ನಮ್ಮ ಕೈಯಲ್ಲಿ ದೊರಕಿತು....ಉರಿಯುವ ಸೂರ್ಯನನ್ನು ಶೈತ್ಯ ಗೊಳಿಸಿ, ಕೊರೆಯುವ ಚಂದ್ರನನ್ನು ಕರಗಿಸಿ, ದೂರದ ಗುರು ಶುಕ್ರರನ್ನು ಅಲ್ಲಾಡಿಸಿ....ಅಂತರಿಕ್ಷವನ್ನೇ ಸಾರಿಸಿ ಗುಡಿಸುವ ಸಾಮರ್ಥ್ಯವುಳ್ಳ ಮಹಾಸ್ತ್ರ ವಿಜ್ಞಾನದ ಕರಗತವಾಗಿದೆ. ಹ ಹಹ ಹ ಹಾ!!! (ರಾಕೆಟ್ಟನ್ನು ಕಾರ್ಯ ದರ್ಶಿಯ ಕೈಯಿಂದ ತೆಗೆದುಕೊಂಡು) ರಾಕೆಟ್ .... ರಾಕೆಟ್ .... ಇದೋ ನಿನಗೊಂದು ಪ್ರಣಾಮ. ನೀನು ನಮ್ಮೆಲ್ಲರ ಭಾಗ್ಯದಾತ....ಇದುವರೆಗೂ ಮಾನವನ ಹಿಡಿತದಿಂದ ತಪ್ಪಿಸಿಕೊಂಡಿದ್ದ ಗ್ರಹಗಳನ್ನು ಮುಟ್ಟಿಬರಲು ಸಾಧಕವಾದ ಪುಷ್ಪಕವಿಮಾನ ನೀನು....ಭೀಮ ಪರಾಕ್ರಮಿ ನೀನು ರಾಕೆಟ್ ....ನಿನ್ನಿಂದ ಈಗ ವಿಶ್ವಶೋಧನೆಗೆ ಸಾಧ್ಯವಾಗಿದೆ....ವಿಜ್ಞಾನದ ಶಿಶುವಾದ

ನಿನ್ನ ರಹಸ್ಯವು ಆ ಗ್ರಹಗಳಿಗೇ ಒಂದು ಒಗಟೆಯಾಗಿದೆ....ನಿನ್ನನ್ನು ನಿರ್ಮಿಸಿದ ನಮ್ಮ ಮೆದುಳಿನ ನಿಗೂಢ ರಹಸ್ಯ ಗಗನಜೀವಿಗಳಿಗೆ ಕಪ್ಪು ತೆರೆಯಾಗಿ ಭ್ರಾಂತಿ ಹಿಡಿಸಿದೆ....ಹ್ಹ ಹ್ಹ ಹ್ಹ ಹ್ಹ ಹ್ಹಾ.

(ಹೆಮ್ಮೆಯಿಂದ) ಕಾರ್ಯದರ್ಶಿ, ಹಾರಿಸು....ಈ ನಮ್ಮ ವಿಜ್ಞಾನದ ರಾಯಭಾರಿಯನ್ನು ಅಂತರಿಕ್ಷಕ್ಕೆ ಹಾರಿಸು....(ರಾಕೆಟ್ಟನ್ನು ನೇವರಿಸುತ್ತಾ) ರಾಕೆಟ್ ಏರು....ಗಗನಕ್ಕೇರು. ಆಧುನಿಕ ಮಾನವನ ಭವ್ಯಸೃಷ್ಟಿಯ ಸಾಕ್ಷಾತ್ಕಾರ ಸ್ವರೂಪವಾಗಿ ಏರು....ಚಂದ್ರ ಮಂಗಳ ಲೋಕಗಳಿಗೆ ದಾರಿ ಮಾಡಿ ಬಾ, ರಾಕೆಟ್....ಹಾರು ಅಸಮಾನವಾದ ವೇಗದಿಂದ ಹಾರು....ಜ್ಞಾಪಕವಿರಲಿ, ರಾಕೆಟ್....ನಿನ್ನ ಜಯದೊಂದಿಗೆ ನಮ್ಮ ಜಯ....ಅದರೊಡನೆ ಮಾನವನ ಶಕ್ತಿಯ ಜಯ....ಅದೇ ವಿಜ್ಞಾನದ ಜಯ....ಸೆಟೆದು ನಿಂತಿರುವ ಪ್ರಕೃತಿಯ ಉತ್ತುಂಗ ಶೃಂಗದಮೇಲೆ ವಿಜ್ಞಾನದ ವಿಜಯಪತಾಕೆ....ನಿನ್ನ ಶಬ್ದವೇ ವಿಜ್ಞಾನದ ರಾಷ್ಟ್ರಗೀತೆ....ನಿನ್ನ ಗರ್ಭದೊಳಗೆ ಹೊತ್ತಿಟ್ಟಿರುವ ಯಂತ್ರಗಳಿಂದ ಗಗನ ವಿಶ್ವದ ದರ್ಶನ ಮಾಡಿಸು, ರಾಕೆಟ್....ಹೋಗಿ ಬಾ....ನಿನಗೆ ಜಯವಾಗಲಿ....(ಕಾರ್ಯದರ್ಶಿ ರಾಕೆಟ್ಟನ್ನು ಹಾರಿಸುವನು: ಶಬ್ದ)

(ಆನಂದದಿಂದ ದೂರದರ್ಶಕದಲ್ಲಿ ಗಗನವನ್ನೇ ನೋಡುತ್ತಾ) ಏರಿತು.... ರಾಕೆಟ್ ಮೇಲೇರಿತು....ಕ್ಷಣಾರ್ಧದಲ್ಲಿ ಗ್ರಹಗಳ ಪಥವನ್ನೇ ಏರಿತು....ಹಾ ಇದೋ ...ಕಾರ್ಯದರ್ಶಿ, ನೋಡು....ಅಲ್ಲೊಂದು ವಿಶ್ವ ಕಾಣಿಸುತ್ತಿದೆ.... ನೂತನ ವಿಶ್ವ....ವಿಜ್ಞಾನದ ಚಾಲಕಶಕ್ತಿಗೆ ಪದಾಕ್ರಾಂತವಾದ ವಿಶ್ವ.... ಎಂದೂ ನಮಗೆ ಸಿಗಲಾರದೆಂದು ನಾವು ತಿಳಿದಿದ್ದ ವಿಶ್ವ....ಅಲ್ಲಿಗೆ ನಾವು.... ನಾವು....(ಎದೆತಟ್ಟುತ್ತಾ) ಮಾನವರು!....ಹ್ಹ ಹ್ಹ ಹ್ಹ ಹ್ಹಾ....ಇದೋ ನನ್ನನ್ನೇ ಕೂಗುತ್ತಿದೆ, ರಾಕೆಟ್....ಅದರ ಗರ್ಭದಲ್ಲಿರುವ ಗೆಳೆಯರು ಕೈ ಬೀಸುತ್ತಿದ್ದಾರೆ....ಚಂದ್ರಲೋಕದಲ್ಲಿ ಸ್ವಾಗತದ ಚಪ್ಪರ ನಿರ್ಮಾಣವಾಗಿದೆ....ನನ್ನನ್ನೇ ಎಡೆಬಿಡದೆ ಕೂಗುತ್ತಿದ್ದಾರೆ....ಇದೋ ರಾಕೆಟ್.... ಬಂದೇ....ಗೆಳೆಯರೇ, ಬಂದೇ....ಇದೋ ಬಂದೆ (ವೇಗವಾಗಿ ಹೊರಡುವನು).

ದೃಶ್ಯ ೨

[ಚಂದ್ರಲೋಕ. ಚಂದ್ರರಾಜ ಒಡ್ಡೋಲಗದಲ್ಲಿ ಆಸನಾರೂಢನಾಗಿದ್ದಾನೆ. ಎಂದಿನಂತೆ ಕಲಾಪೂರ್ಣನಾಗಿಲ್ಲ. ಯೋಚನಾಕ್ರಾಂತನಾಗಿದ್ದಾನೆ. ಅವನ ಬಲಗಡೆ ಒಬ್ಬ ಜ್ಯೋತಿಷ್ಕನೂ ಎಡಗಡೆ ಒಬ್ಬ ಸೇವಕನೂ ಇದ್ದಾರೆ.]

ಚಂದ್ರರಾಜ: ಜ್ಯೋತಿಷ್ಕರೇ ಯೋಚಿಸಿ, ಯೋಚಿಸಿ ನನ್ನ ಮೆದುಳು ಹಿಂಡಿಹೋಗಿದೆ. ಹೃದಯದ ನರನಾಡಿಗಳೆಲ್ಲಾ ಹಿಂಜಿಹೋಗಿವೆ. ನನ್ನ ಶರೀರದಲ್ಲಿ ರಕ್ತ ಸಂಚಾರದ ತೀವ್ರತೆ ಹೆಚ್ಚುತ್ತಿದೆ. ಏನು ಮಾಡಬೇಕೆಂದೇ ಹೊಳೆಯುತ್ತಿಲ್ಲ,

ಭಟ್ಟರೆ....ಒಂದೂ ಹೊಳೆಯುತ್ತಿಲ್ಲ. ನನ್ನ ಲೋಕವನ್ನೆಲ್ಲಾ ಗಲಬರಿಸಿ ನೋಡಿದೆ. ದಿಕ್ಕುದಿಕ್ಕುಗಳ ಅಂಚಿನವರೆಗೂ ದೂತರನ್ನು ಕಳುಹಿಸಿದೆ. ಗ್ರಹಸಂಚಾರ ಮಾಡಿಸಿದೆ. ಅಲ್ಲಿಗೂ ನನ್ನ ಮುದ್ದುಕುವರನಿಗೆ ಅನುರೂಪ ಳಾದ ವಧುವೇ ದೊರೆಯಲಿಲ್ಲ....ನೀವು ಹನ್ನೆರಡು ಮನೆಗಳ ನಡುವೆ ಕೂಡಿ ಹಾಕಿಕೊಂಡ ಗ್ರಹಗಳನ್ನು ನಡೆಸಿ, ನಡೆಸಿ ಸೋತಿರಿ. ಜ್ಯೋತಿಷ್ಯ ಪ್ರಯತ್ನವೂ ವಿಫಲವಾಯಿತು. ಮುಂದೇನು ಗತಿ ಜ್ಯೋತಿಷ್ಕರೇ?

ಜ್ಯೋತಿಷ್ಕ: ಹೆದರಬೇಡಿ ಚಂದ್ರರಾಜ. ತಾವು ಇಷ್ಟು ತೀವ್ರವಾಗಿ ಯೋಚಿಸಲೂ ಬೇಡಿ. ಚಿಂತೆ ಜೀವವನ್ನೇ ಸುಡುತ್ತದೆ, ಚಿತೆಯು ನಿರ್ಜೀವಿಯನ್ನು ಸುಟ್ಟಂತೆ. ನಾನು ಮತ್ತೊಮ್ಮೆ ಗುಣಾಕಾರ ಹಾಕಿ ನೋಡುತ್ತೇನೆ. ಯಾವ ದಿಕ್ಕಿನಲ್ಲಿ ಕನ್ಯೆ ಇದ್ದಿತೋ ನೋಡೋಣ. ಗುಣಾಕಾರ ಸರಿಬಂದರೆ ಸಾಕು. ಆ ಕನ್ಯೆ ಯನ್ನು ಎಲ್ಲಿದ್ದರೂ ಎಳೆಸಿತರೋಣ.

ಚಂದ್ರರಾಜ: ಜ್ಯೋತಿಷ್ಕರೇ, ನಿಮಗೆ ಇನ್ನೂ ಆಸೆಯೇ?....ವಿಶ್ವದಲ್ಲಿಯೇ ಇಲ್ಲದ ಕನ್ಯೆಯನ್ನು ನಿಮ್ಮ ಶಾಸ್ತ್ರ ಸೃಷ್ಟಿಸುತ್ತದೆಯೇ?

ಜ್ಯೋತಿಷ್ಕ: ಜ್ಯೋತಿಷ್ಯಶಾಸ್ತ್ರವನ್ನು ತಾವು ಸಾಮಾನ್ಯವೆಂದು ಭಾವಿಸಬಾರದು. ಪ್ರಭೂ....ಶಾಸ್ತ್ರಕ್ಕೆ ಕನ್ಯೆಯನ್ನು ಸೃಷ್ಟಿಸುವ ಸಾಮರ್ಥ್ಯವಿಲ್ಲದಿದ್ದರೂ, ಅದಿರುವ ದಿಕ್ಕನ್ನೂ, ಅದು ಲಭಿಸುವ ಮಾರ್ಗವನ್ನೂ ಸೂಚಿಸುವ ಸಾಮರ್ಥ್ಯ ಮಾತ್ರ ಖಂಡಿತ ಇದೆ.

ಚಂದ್ರರಾಜ: ಏನಿದೆಯೋ ನಾನರಿಯೆ....ನಮ್ಮ ದೂತರು ಆಗಲೇ ಎಲ್ಲ ದಿಕ್ಕು ಗಳನ್ನೂ ಗ್ರಹಗಳನ್ನೂ ಶೋಧಿಸಿಕೊಂಡು ಬಂದಿದ್ದಾರೆ.

ಜ್ಯೋತಿಷ್ಕ: ಎಲ್ಲ ದಿಕ್ಕುಗಳನ್ನೂ ಶೋಧಿಸಿಕೊಂಡು ಬಂದಿದ್ದಾರೆ ಎಂದು ಹೇಳ ಲಾಗುವುದಿಲ್ಲ ಚಂದ್ರರಾಜ. ಪ್ರಾಯಶಃ ಅವರಿನ್ನೂ ಭೂಲೋಕಕ್ಕೆ ಹೋಗಿರ ಲಾರರು. ಅಲ್ಲಿ ವಿಪರೀತ ಕನ್ಯೆಯರಿದ್ದಾರಂತೆ. ವರಗಳಿಗೇ ಕೊರತೆಯಂತೆ. ಎಷ್ಟೋ ಕನ್ಯೆಯರು ವರಾಭಾವದಿಂದ ಬೇಸತ್ತು ವಿವಾಹದ ಚಿಂತೆಯನ್ನೇ ತೊರೆದಿದ್ದಾರಂತೆ. ಅಲ್ಲಿಗೆ ಒಬ್ಬ ದೂತನನ್ನು ಕಳುಹಿಸಿ ನೋಡಬೇಕಾಗಿತ್ತು.

ಚಂದ್ರರಾಜ: ಏನು, ಭೂಲೋಕವೆ?....ಅಷ್ಟೊಂದು ಕನ್ಯೆಯರಿದ್ದಾರೆಯೇ?.... ಈ ವಿಷಯವನ್ನು ನೀವು ಮೊದಲೇ ನನಗೆ ತಿಳಿಸಬಾರದಿತ್ತೆ....ಛೇ.... ಎಂತಹ ನಿಧಾನವಾಯ್ತು!

ಜ್ಯೋತಿಷ್ಕ: ಚಂದ್ರರಾಜ, ಈ ಯೋಚನೆ ನನಗೆ ಹೊಳೆದು ನಾಲ್ಕು ತಿಂಗಳಾಯ್ತು. ಆದರೂ ಪ್ರಾಯೋಗಿಕ ಕಷ್ಟಗಳಿಗಾಗಿ ನಾನು ಸುಮ್ಮನಿದ್ದೆ. ನೋಡು, ಭೂಲೋಕ ಸಾಮಾನ್ಯವಾದುದಲ್ಲ. ಅಲ್ಲಿ ಕೋಟ್ಯಂತರ ಜನರಿದ್ದಾರೆ.

ದಿನದಿನವೂ ಲಕ್ಷಾಂತರ ಜನ ಹುಟ್ಟುತ್ತಿರುತ್ತಾರೆ. ಜನ ಹೆಚ್ಚಿ ಹೆಚ್ಚಿ ಆಹಾರದ ಅಭಾವ ಉಂಟಾಗಿದೆಯಂತೆ. ಅಲ್ಲಿನವರೇ ಈಗ ಭೂಮಿಯನ್ನು ಬಿಟ್ಟು ನಮ್ಮ ಲೋಕಕ್ಕೆ ಬರಲು ಪ್ರಯೋಗ ನಡೆಸುತ್ತಿದ್ದಾರಂತೆ. ಅದೂ ಅಲ್ಲದೆ ನಾವು ಭೂಲೋಕಕ್ಕೆ ಹೋಗುವ ವಾಹನವಾದರೂ ಯಾವುದು?

ಚಂದ್ರರಾಜ: ವಾಹನವೇ?....ಅದಕ್ಕಾಗಿ ನಿಮಗೇಕೆ ಯೋಚನೆ?........ಚಂದ್ರ ಲೋಕದ ಪುಷ್ಪಕವಿಮಾನಕ್ಕಿಂತ ಮತ್ತೊಂದು ವಿಮಾನ ಬೇಕೆ? .... ಮನುಷ್ಯರ ವಿಮಾನದಂತೆ ಆಟದ ಸಾಮಾನಲ್ಲ, ಅದು. ವಾಯುವೇಗ ದಿಂದ ಚಲಿಸಬಲ್ಲ ಯಂತ್ರ.

[ಚಂದ್ರರಾಜನು ಮಾತನಾಡುತ್ತಿರುವಂತೆಯೇ ದೂತನೊಬ್ಬನು ಏದುತ್ತಾ ಉಸಿರೆಳೆಯುತ್ತಾ ಬಂದು ನಿಂತು ನಮ್ರವಾಗಿ ನಮಸ್ಕರಿಸುತ್ತಾನೆ.]

ದೂತ: ....ಪ್ರಭೂ, ಅನಾಹುತವಾಯಿತು. ಪ್ರಭೂ....ಈ ಚಂದ್ರಲೋಕದ ಪವಿತ್ರತೆಯೇ ನಾಶವಾಯಿತು ಪ್ರಭೂ....ಭೂಲೋಕದ ಜನರು ಚಂದ್ರಲೋಕ ವನ್ನು ಸೇರಿದ್ದಾರೆ, ಪ್ರಭೂ.

ಜ್ಯೋತಿಷ್ಕ: (ಪರಮಾಶ್ಚರ್ಯಚಕಿತನಾಗಿ) ಆಂ....ಭೂಲೋಕದ ಪ್ರಾಣಿಗಳೇ!.... ಈ ನಮ್ಮ ಚಂದ್ರಲೋಕಕ್ಕೆ ಬಂದು ಸೇರಿದ್ದಾರೆಯೇ?....ಚಂದ್ರರಾಜ, ಇದು ಸಾಮಾನ್ಯ ವಿಷಯವಲ್ಲ—ಚಂದ್ರಲೋಕದ ಸ್ವಾತಂತ್ರ್ಯಕ್ಕೆ ಅಪಾಯ ಕಾರಿ... ಪ್ರಕೃತಿ ನಿಯಮದ ಉಲ್ಲಂಘನೆ....ಅವರು ಯಾರಾದರೂ ಆಗಿರಲಿ, ಹಿಡಿದು ಕಟ್ಟಿಹಾಕಿಸು....ಅವರಿಗೆ ತಕ್ಕ ಶಿಕ್ಷೆ ಮಾಡಿಸೋಣ....ನೋಡಿದಿರಾ ಪ್ರಭೂ....ಆ ಭೂಲೋಕದ ಮನುಷ್ಯರ ಸೊಕ್ಕನ್ನು?

ಚಂದ್ರರಾಜ: ಅಂತಹ ಸೊಕ್ಕಿನ ಜನಗಳೊಡನೆ ಸಂಬಂಧ ಬೆಳೆಸಲು ನೀವು ಸಲಹೆ ಮಾಡುತ್ತಿದ್ದೀರಲ್ಲಾ, ಜ್ಯೋತಿಷ್ಕರೇ?

ಜ್ಯೋತಿಷ್ಕ: ಭೂಲೋಕದ ಗಂಡಸರ ವಿಚಾರ ನಾನು ಅಷ್ಟಾಗಿ ಗಮನಿಸಿರಲಿಲ್ಲ. ಚಂದ್ರರಾಜ....ನನ್ನ ಮೆದುಳಿನ ಮುಂದೆ ಇದ್ದ ಚಿತ್ರವೇ ಬೇರೆ. ರಂಭೆ ಯನ್ನು ನಾಚಿಸುವಂತಹ ಸೌಂದರ್ಯವುಳ್ಳ ಭೂಲೋಕದ ಹುಡುಗಿಯ ರನ್ನು ಕುರಿತು ಹೇಳಿದೆ, ಅಷ್ಟೇ....ಅದೂ ಅಲ್ಲದೆ ತಮ್ಮ ಕುಮಾರನಿಗೆ ಭೂಲೋಕದ ಹೆಣ್ಣು ತಂದರೆ ಆ ಹುಡುಗಿ ನಮ್ಮ ಲೋಕಕ್ಕೆ ಸೇರಿದಂತಾಗು ವುದಿಲ್ಲವೆ?

ಚಂದ್ರರಾಜ: ಅದು ಸರಿ,....ಮನುಷ್ಯರನ್ನು ಭೂಲೋಕದಿಂದ ಎರಡು ಲಕ್ಷ ಮೈಲಿ ದೂರಕ್ಕೆ ನಮ್ಮ ಲೋಕಕ್ಕೆ ಎಸೆದ ಆ ಭೀಮಪರಾಕ್ರಮಿಯಾದರೂ ಯಾರಿರಬಹುದು?....ಅದೆಂತಹ ಅದ್ಭುತ ಶಕ್ತಿ ಅವನದು?

ಜ್ಯೋತಿಷ್ಕ: ನಾನೂ ಅದೇ ಯೋಚನೆ ಮಾಡುತ್ತಿದ್ದೇನೆ. ಚಂದ್ರರಾಜ.... ಆದರೆ....!

ಚಂದ್ರರಾಜ: ಆದರೆಂತಹುದು ಜ್ಯೋತಿಷ್ಕರೇ?....ನಾವು ಸುಮ್ಮನಿದ್ದರೆ ನಮಗೆ ಮಾತ್ರವಲ್ಲ ನಿಮಗೂ ಸಂಚಕಾರ ಬರುತ್ತದೆ....ದೇವರ ಸೃಷ್ಟಿಯಿಂದ ಉಂಟಾದ ಒಂಬತ್ತು ಗ್ರಹಗಳನ್ನು ಆಪೋಶನ ತೆಗೆದುಕೊಂಡುಬಿಟ್ಟಾರು ಈ ಮನುಷ್ಯರು....ಅಲ್ಲದೆ ನಮ್ಮ ಲೋಕಕ್ಕೇ ಏರಬಯಸುವ ಮನುಷ್ಯನು, ನಮ್ಮನ್ನೇ ಆಧಾರವಾಗುಳ್ಳ ನಿಮ್ಮ ಜ್ಯೋತಿಷ್ಯಕ್ಕೆ ಹೆದರುತ್ತಾನೆಯೇ? (ದೂತನನ್ನು ಕುರಿತು) ದೂತ, ನೀನಿನ್ನು ಹೊರಡು....ಆ ಯಂತ್ರದ ಬಳಿಯೇ ಕಾವಲಿರು .... ಹೆಚ್ಚು ವಿಚಾರಗಳಿದ್ದರೆ ಬೇಗ ತಿಳಿಸಬೇಕು. ದೂತ ಹೊರಡುವನು.

ಜ್ಯೋತಿಷ್ಕ: ಚಂದ್ರರಾಜ, ದೇವರ ಭಯವೂ ಇಲ್ಲದ ಈ ಮನುಷ್ಯರಿಗೆ ತಕ್ಕ ಶಿಕ್ಷೆ ಮಾಡಿಸಬೇಕು. ಪ್ರಕೃತಿದತ್ತವಾದ ಲೋಕಗಳಿಗೆ ಸಂಚಾರ ಬರುವುದೆಂದರೇನು? ...ಇರಲಿ ಈಗ ಮಾತನಾಡಿಸಿ ಫಲವಿಲ್ಲ. ನಿಧಾನವಾಗಿ ಯೋಚಿಸಿ ಕುಂಡಲಿ ಹಾಕಿಕೊಂಡು ಬರ್ತೀನಿ. ನಾಳೆ ಸೇರಿ ಒಂದು ತೀರ್ಮಾನಕ್ಕೆ ಬರೋಣ (ಹೊರಡಲನುವಾಗುವನು).

—ತೆರೆ—

ದೃಶ್ಯ ೩

[ಚಂದ್ರರಾಜ ಯೋಚನಾಮಗ್ನನಾಗಿದ್ದಾನೆ. ಶತಪಥ ತಿರುಗಾಡುತ್ತಿದ್ದಾನೆ. ಚಂದ್ರರಾಜನ ಮಗ ಉಪೇಂದ್ರನು ತಂದೆಯನ್ನು ಮಾತನಾಡಿಸುವನು.]

ಉಪೇಂದ್ರ: ಅಪ್ಪಾ....ಅಪ್ಪಾ....ಇದೇನಪ್ಪಾ ಇಷ್ಟೊಂದು ಯೋಚನೆ ಮಾಡ್ತಾ ಇದೀಯ?....ಮಾತಾಡಪ್ಪಾ....ನನ್ನ ಮದುವೆ ಯೋಚನೆ ಮಾಡ್ತಿದ್ದೀಯೇನಪ್ಪಾ?....ನಿನ್ನ ಲೋಕವನ್ನೆಲ್ಲಾ ಹುಡುಕಿದರೂ ನನಗೆ ಹೆಣ್ಣು ಸಿಕ್ಕಲಿಲ್ಲವೆಂದು ಯೋಚನೆಯೇನಪ್ಪಾ?....ಅದಕ್ಕೋಸ್ಕರ ಯೋಚನೆ ಮಾಡಬೇಡಪ್ಪಾ....ಭೂಲೋಕದಲ್ಲಿ ಚಿತ್ರತಾರೆಯರು ಬೇಕಾದಷ್ಟು ಇದ್ದಾರಂತೆ....ಅವರ ಪೈಕಿ....ಒಂದಿಬ್ಬರನ್ನು ಕರೆಸಿ ನನಗೆ ಮದುವೆ ಮಾಡಿಸಪ್ಪಾ ಸಾಕು.

ಚಂದ್ರರಾಜ: (ಕೋಪದಿಂದ) ...ಮುಚ್ಚೋ ಬಾಯಿ, ಸಾಕು....ನನ್ನ ಸಿಂಹಾಸನವೇ ನಡುಗಿ ಹೋಗ್ತಿದೆ....ನನ್ನ ಜೀವನಕ್ಕೇ ಸಂಚಕಾರ ಬಂದಿದೆ. ಮನುಷ್ಯರನ್ನು ನಮ್ಮ ಲೋಕಕ್ಕೆ ಎಸೀತಾ ಇದಾರೆ....ನನ್ನ ಲೋಕವೇ ನೆಗೆದು ಬಿದ್ದು

ಹೋಗ್ತಿದೆ ಆ ಭೂಲೋಕದ ಮನುಷ್ಯರಿಂದ....ಅಂಥ ಶತ್ರುಲೋಕದ ಹುಡುಗಿ ತಂದು ನಿನಗೆ ಮದುವೆ ಮಾಡಬೇಕೆ?....ಅಯೋಗ್ಯ....ಮರ್ಯಾದೆ ಇಲ್ಲದ ಕ್ರಿಮಿ....ನಾಚಿಕೆ ಇಲ್ಲವೆ ನಿನಗೆ? ಗಗನವಾಸಿಯಾದ ನಿನ್ನಂಥ ಮನ್ಮಥ, ಆ ಕೊಳಕು ಲೋಕದ ಶತ್ರುಕನ್ಯೆಯನ್ನು ಮದುವೆಯಾಗಬೇಕೇ ....ಪಾಪಿ....ತೊಲಗು.

(ಪ್ರವೇಶ: ಜ್ಯೋತಿಷ್ಕ)

ಜ್ಯೋತಿಷ್ಕ: ಇದೇನು ಚಂದ್ರರಾಜ, ಇಷ್ಟೊಂದು ಕೋಪ!!....ಸದಾ ಹಸನ್ಮುಖ ದಿಂದಿರುವ ನೀನು ಕೋಪಮಾಡಿಕೊಂಡರೆ ಈ ಲೋಕವೇ ತಲೆಕೆಳಕಾಗುವು ದಿಲ್ಲವೆ?

ಚಂದ್ರರಾಜ: (ಬೇಸರದಿಂದ) ಆಗಲೇ ತಲೆಕೆಳಗಾಗಲು ಆರಂಭವಾಗಿದೆ, ಜೋತಿಷ್ಕರೇ ....ನನ್ನ ಮಗನೂ ನಿಮ್ಮ ಸಲಹೆಯನ್ನೇ ಅನುಮೋದಿಸುತ್ತಿದ್ದಾನೆ.... ಅವನಿಗೆ ಭೂಲೋಕದ ಹೆಣ್ಣು ತಂದು ಮದುವೆ ಮಾಡಬೇಕಂತೆ!!

ಜ್ಯೋತಿಷ್ಕ: ಛೇ, ಛೇ! ಎಲ್ಲಾದರೂ ಉಂಟೆ. ಆ ಸಲಹೆಯನ್ನು ನೆನ್ನೆ ರಾತ್ರಿಯೇ ನಾನು ಹಿಂತೆಗೆದುಕೊಂಡು ಬಿಟ್ಟೆನಲ್ಲಾ. ಈಗೇನಿದ್ದರೂ ಭೂಲೋಕದ ವಾಸಿಗಳ ಮರ್ದನದ ಏರ್ಪಾಡು....ಚಂದ್ರಲೋಕದ ರಕ್ಷಣೆ. ಗಗನ ದಲ್ಲಿರುವ ಉಲ್ಕಾಪಾತಗಳನ್ನು ಇಮ್ಮಡಿಗೊಳಿಸಿ ಭೂಲೋಕದಿಂದ ಬರುವ ವಾಹನಗಳನ್ನು ನಾಶಗೊಳಿಸುವ ಕ್ರಮ.

ಚಂದ್ರರಾಜ: ಒಪ್ಪಿದೆ ಜ್ಯೋತಿಷ್ಕ....ಒಪ್ಪಿದೆ....ಎಷ್ಟೇ ಆಗಲಿ ನೀನು ದೇಶ ಭಕ್ತನಲ್ಲವೇ?

ಜ್ಯೋತಿಷ್ಕ: ಕುಂಡಲಿ ಹಾಕಿ ನೋಡಿದೆ, ಚಂದ್ರರಾಜ....ಆ ನರಲೋಕದ ಮನುಷ್ಯರು ಒಂದು ಯಂತ್ರವನ್ನು ತಯಾರಿಸಿದ್ದಾರೆ...ರಾಕೆಟ್ ಅಂತೆ ಅದು....ಅದು ಗಂಟೆಗೆ ಎಷ್ಟೋ ಸಾವಿರ ಮೈಲಿ ಚಲಿಸುತ್ತದಂತೆ....ಅದರ ತುದಿಯಲ್ಲಿ ಒಂದು ಉಪಗ್ರಹವನ್ನಿಟ್ಟಿದ್ದಾರಂತೆ. ಉಪಗ್ರಹ....ನಿನ್ನ ಲೋಕದಂತಹ ಉಪಗ್ರಹ....ಆ ಉಪಗ್ರಹ ಗಗನಗಾಮಿಯಾಗಿ ಅಂತರಿಕ್ಷದ ಎಲ್ಲಾ ಲೋಕಗಳನ್ನೂ ಸುತ್ತು ಹಾಕುವ ಪ್ರಯತ್ನ ಇದು—ಸಂಚಕಾರ ನಿನ್ನೊಬ್ಬನಿಗಲ್ಲ, ಚಂದ್ರರಾಜ, ನವಗ್ರಹಗಳಿಗೂ ಬಂದಿದೆ. ನಾವು ಮಾತ್ರ.........

[ಹಠಾತ್ತನೆ ಪ್ರವೇಶ: ಸ್ಪೂಟ್ನಿಕ್‌ಶಾಸ್ತ್ರಿ, ಲೈಕೇಂದ್ರೆ, ವಿಶ್ವಪುತ್ರ ಅವರನ್ನು ನೋಡಿ ದೊಡನೆಯೇ ಚಂದ್ರರಾಜ ಓಡಿಹೋಗುವನು.]

ವಿಶ್ವಪುತ್ರ: ಇದೇನೋ ಈ ಚಂದ್ರಲೋಕದ ಚಕ್ರವರ್ತಿಯ ಆಫೀಸು?....

ಶಾಸ್ತ್ರಿ: ಒಳ್ಳೆ ಆಫೀಸು!...ಒಬ್ಬ ಗುಮಾಸ್ತ ಗತಿಯಿಲ್ಲ....ಕುರ್ಚಿಯೋ ಮೇಜೋ, Fan ಏ? ಏನೂ ಗತಿಯಿಲ್ಲ. ಅಯ್ಯೋ ಅನಾಗರೀಕ ಪ್ರಾಣಿಗಳಿರಾ!

ಲೈಕೇಂದ್ರೆ: What's this?....ಇಲ್ಲಿ ಮನುಷ್ಯರಿಗೆ ಮುಖ $\frac{1}{2}$ black, $\frac{1}{2}$ white ಇದೆ? Really Wonderful!

ಶಾಸ್ತ್ರಿ: Miss ಲೈಕೇಂದ್ರೆ, ಇದು ಚಂದ್ರಲೋಕ. ನಮ್ಮ ಭೂಲೋಕದಲ್ಲಿ ಅಮಾವಾಸ್ಯೆ, ಪೌರ್ಣಮಿ ಅನ್ನೋದಿಲ್ಲವೆ?....ಈಗ ಗೊತ್ತಾಗುತ್ತೆ ನೋಡು....ನಮಗೆ ಅಮಾವಾಸ್ಯೆಯಾದಾಗ ಇವರ ಚಕ್ರವರ್ತಿ ಕಪ್ಪು ಕೆನ್ನೆ ನಮಗೆ ತೋರಿಸುತ್ತಾನೆ. ಪೌರ್ಣಮಿಯಾದಾಗ "ಬದುಕಿದೆನೇ ಶಿವನೇ" ಅಂತ ಬಿಳೀ ಕೆನ್ನೆ ತೋರಿಸುತ್ತಾನೆ. ಒಂದು ತರಹ ಬುದ್ಧಿಯೇ ಇಲ್ಲ!.... ಇದ್ದರೂ ಸ್ವಾಧೀನವಿಲ್ಲ....ಎಲ್ಲಾ Double, Double, ಕಪಟನಾಟಕ.... ಎರಡು ಮಾತು, ಎರಡು ಮುಖ, ಎರಡು ನಾಲಗೆ. ನಮ್ಮ ಭೂಲೋಕದ ಕೆಲವು ರಾಜಕಾರಣಿಗಳ ಹಾಗೆ.

ವಿಶ್ವಪುತ್ರ: ಇವನೇನು! ಚಕ್ರವರ್ತಿ Common Man ಇದ್ದಹಾಗಿದಾನೆ? ಇಲ್ಲಿ ಏನು ಒಬ್ಬ Peon ಕೂಡ ಗತಿಯಿಲ್ಲ. Interview Slip ಕೊಡೋಣ ಅಂದರೆ....ನಾವೇ ಮಾತಾಡಿಸಿ ಬಿಡೋದು.

ಲೈಕೇಂದ್ರೆ: But Father, ಬಹಳ Careful ಆಗಿರಬೇಕು ಇವರ ಹತ್ತಿರ.... ಏನಾದರೂ Balck Magic ಮಾಡಿದರೆ!

ವಿಶ್ವಪುತ್ರ: ನೀನು ಯಾತಕ್ಕೆ ಹೆದರ್ತಿ, ಲೈಕೇಂದ್ರೆ. Atom Bomb, Hydrogen Bomb, Megaton Bomb ಗಳ ಕಂತೆ ಕಂತೇನೇ ತಂದಿದೀವಿ, ರಾಕೆಟ್ ನಿಂದ. ಜಂಬ ಮಾಡಿದರೆ ಇವನ ಲೋಕವನ್ನೇ ಸುಟ್ಟು ಬೂದಿ ಮಾಡಿ ಬಿಡ್ತೀನಿ. ಭೂಲೋಕದ Ambassadors ಆಗಿ ಬಂದು ಅಷ್ಟೂ ನಮ್ಮ Power ತೋರಿಸಿದೆ ಇದ್ರೆ!!!....(ಚಂದ್ರಲೋಕದ ಜ್ಯೋತಿಷ್ಕನನ್ನು ಕುರಿತು) ಸ್ವಾಮಿ, Mister, ತಾವು ಯಾರೋ ನನಗೆ ಗೊತ್ತಿಲ್ಲ....ಇದು ನಿಮ್ಮ ಚಂದ್ರಲೋಕದ ಚಕ್ರವರ್ತಿ ಜೋಪಡಿ ತಾನೆ?

ಜ್ಯೋತಿಷ್ಕ: (ಸ್ವಗತ) ಆಂ. ಇದೇನು ಇಷ್ಟು ಧೈರ್ಯ ಇವರಿಗೆ....! ಸಾಲದ್ದಕ್ಕೆ ಎಂಥಾದೋ Bomb ಬೇರೆ ತಂದಿದಾರಂತೆ!!....ಶಿವಶಿವಾ!!.... ನಮ್ಮ ಲೋಕಕ್ಕೆ ಈ ದುರವಸ್ಥೆ ಬಂತೇ. (ಪ್ರಕಾಶ) ಆಂ. ಏನಂದರಿ?.... ಇದು....ಚಂದ್ರಲೋಕದ ಚಕ್ರವರ್ತಿಯ ಅರಮನೆಯೇ ಅಂತ ಕೇಳಿದಿರಾ?

ವಿಶ್ವಪುತ್ರ: "ಅರಮನೆ" ಅಂತ ನಾನು ಹೇಳಲಿಲ್ಲರೀ...."ಜೋಪಡಿ" ಅಂದೆ.... ಏಕೆಂದರೆ ನಮ್ಮ ಭೂಲೋಕದಲ್ಲಿ ಇಂತಹ ಜೋಪಡಿ ಒಂದೂ ಇಲ್ಲ.

ಜ್ಯೋತಿಷ್ಕ: ಅಂದರೆ, ನಿಮ್ಮ ಭೂಲೋಕದಲ್ಲಿ ನಿಮಗೆ ವಾಸಕ್ಕೆ ಮನೆಯೂ ಗತಿಯಿಲ್ಲವೆ?....ಪಾಪ!

ಶಾಸ್ತ್ರಿ: ಯಾರ್ರೀ ನೀವು?....ಎಷ್ಟ್ರೀ ತಲೆಹರಟೆ?....ಸಾಹೇಬರು ಕೇಳಿದ ಪ್ರಶ್ನೆಗೆ ನೇರವಾಗಿ ಉತ್ತರ ಕೊಡ್ರಿ....ಏನ್ರೀ, ಭೂಲೋಕದವರಿಗೆ ಇರೋ Decencyನೂ ಇಲ್ಲವಲ್ಲ ನಿಮಗೆ?

ಜ್ಯೋತಿಷ್ಕ: (ಸ್ವಗತ. ಮೂವರನ್ನೂ ಸೂಕ್ಷ್ಮವಾಗಿ ಪರಿಶೀಲಿಸಿ) ಇದೇನೂ....ಮೂರು ಜನ ಬಂದಿದ್ದಾರೆ. ಬಹಳ ಜಬರದಸ್ತಿನಿಂದ ಮಾತನಾಡುತ್ತಾ ಇದಾರೆ.... ಈ ಭೂಪತಿ ಅದೇನೋ Bomb ಅಂದ....ಏನು ಮಾಡ್ತಾನೋ ಏನೋ ಕಾಣೆ....ಈಗ ನನ್ನ ಲೆಕ್ಕಾಚಾರವೆಲ್ಲ ತಲೆಕೆಳಗಾಯ್ತು....ಮನುಷ್ಯರು ನಮ್ಮನ್ನು ನೋಡಿ ನಡುಗುತ್ತಾರೆ ಅಂತಿದ್ದೆ. ಇವರನ್ನ ನೋಡಿದರೆ ನಮಗೆ ಎದೆಯೇ ಬಿಚ್ಚಿಹೋಗುತ್ತದೆ....ಯಾಕೋ ಕೈಬೇರೆ ನಡುಗುತ್ತಿದೆ....ಎದೆ ಹುಯ್ದುಕೊಳ್ಳುತ್ತಿದೆ....ಗ್ರಹಚಾರ....ಏನಾದರೂ ಹೆಚ್ಚು ಕಡಿಮೆ ಮಾತ ನಾಡಿದರೆ ಏನು ಮಾಡುತಾರೋ ಏನೋ?....ಗಂಭೀರವಾಗಿ, ಗೌರವದಿಂದ ಬೆಣ್ಣೆಯಲ್ಲಿ ಕೂದಲು ತೆಗೆದ ಹಾಗೆ ಮಾತನಾಡಿಸಿ, ಮರ್ಯಾದೆ ಮಾಡಿಸಿ ಮೊದಲು ಕಳಿಸಿಕೊಡಬೇಕು....(ಅತಿಥಿಗಳನ್ನು ಸಮೀಪಿಸಿ, ಪ್ರಕಾಶ) ತಾವು ಯಾರೋ ಗೊತ್ತಾಗಲಿಲ್ಲ, ಕ್ಷಮಿಸಬೇಕು. ನಾನು ಚಂದ್ರಲೋಕದ ರಾಜಜ್ಯೋತಿಷಿ....ತಾವು?....

ವಿಶ್ವಪುತ್ರ: ತಾವು ಜ್ಯೋತಿಷಿಗಳೇ? ಪರವಾಗಿಲ್ಲ. ಇಲ್ಲೂ ಸ್ವಲ್ಪ Mathematicsಉ Scienceಉ ಇರೋಹಾಗಿದೆ....Very good....ಶಾಸ್ತ್ರಿಗಳೇ, ನೋಡಿ, ಚಂದ್ರಲೋಕದಲ್ಲೂ ಇದಾನೆ ನಿಮ್ಮ Professional Counter Partಉ.

ಶಾಸ್ತ್ರಿ: ಇವನ ಮುಖ ನೋಡಿದರೆ ಎಡವಟ್ಟುರಾಯನ ಹಾಗಿದ್ದಾನೆ....ಜ್ಯೋತಿಷ್ಯವಂತೋ ಇವನ Subjectಉ....? ಗ್ರಹಗಳ ಜ್ಞಾನವೂ ಇಲ್ಲಾಂತ ಕಾಣುತ್ತೆ. (ಜ್ಯೋತಿಷ್ಕನ ಕಡೆ ತಿರುಗಿ) ಸ್ವಾಮಿ, ತಮ್ಮ ಕಸುಬು ಜ್ಯೋತಿಷ್ಯ ಅಂತ ಅಪ್ಪಣೆ ಕೊಡಿಸಿದರಲ್ಲ, ಒಂದು ಪ್ರಶ್ನೆ ಕೇಳಬಹುದೋ?

ಜ್ಯೋತಿಷ್ಕ: (ಸ್ವಗತ) ಯಾಕೋ ಬುಡಕ್ಕೇ ಕೊಡಲಿ ಹಾಕ್ತಾನಲ್ಲಪ್ಪಾ, ಇವನು! (ಪ್ರಕಾಶ) ಜ್ಯೋತಿಷ್ಯದ ವಿಚಾರವಾಗಿ ತಾವು ಏನು ಬೇಕಾದರೂ ಕೇಳಿ ಹೇಳೋಣ, ಅದಕ್ಕೇನು? ಆದರೆ ತಮ್ಮ ಪರಿಚಯವಾದರೆ ನಾನು ತಮ್ಮ ಗಳನ್ನು ಚಕ್ರವರ್ತಿಯ ದರ್ಶನಕ್ಕೆ ಕರೆದುಕೊಂಡು ಹೋಗಬೇಕು ಅಂತ ಇದೀನಿ....ತಾವು....

ವಿಶ್ವಪುತ್ರ: ಓಹೋ....ಅಗತ್ಯವಾಗಿ....ಅದಕ್ಕೇನು? ನಾನು, ವಿಶ್ವಪುತ್ರ ಅಂತ. Son of the Universeಉ. ಗಗನಗಾಮಿಯಾಗಿ ವಿಶ್ವಸಂಚಾರಮಾಡಿ

ಗ್ರಹಗಳ ಜೀವನ ತಿಳಿದುಕೊಂಡು ಹೋಗೋಣ ಅಂತ ನನ್ನನ್ನು ಭೂಲೋಕದವರು ಕಳುಹಿಸಿಕೊಟ್ಟಿದ್ದಾರೆ .... ಇವರು Mr. ಸ್ಪೂಟ್ನಿಕ್‌ಶಾಸ್ತ್ರಿ ಅಂತ. ಭಾರಿ ಜ್ಯೋತಿಷ್ಕರು; ಕಸುಬು Primary School ಮೇಷ್ಟ್ರು. ಆದರೂ ಜ್ಯೋತಿಷ್ಯದಲ್ಲಿ ಭಾರಿ Research ನಡೆಸಿಬಿಟ್ಟಿದ್ದಾರೆ. ನಿಮ್ಮ ಒಂಬತ್ತು ಗ್ರಹಗಳಿಲ್ಲದಿದ್ದರೂ ಇವರ ಜ್ಯೋತಿಷ್ಯ ನಡೆಯುತ್ತೆ .... ಈಕೆ ನನ್ನ ಮಗಳು Miss. ಲೈಕೇಂದ್ರೆ ಅಂತ .... ನಮ್ಮನ್ನು ತಾವು ತಮ್ಮ ರಾಜರ ಬಳಿಗೆ ಕರೆದುಕೊಂಡು ಹೋದರೆ ನಮ್ಮ ಕೆಲಸವನ್ನು ಅವರಿಗೆ ತಿಳಿಸುತ್ತೇವೆ.

ಜ್ಯೋತಿಷ್ಕ: (ಹೆಗಲ ಮೇಲಿನ ಟವಲ್ಲನ್ನು ಕೊಡುತ್ತಾ) ಸ್ವಾಮಿ ನಮ್ಮ ಲೋಕದಲ್ಲಿ ನೀರಿಲ್ಲ. ಅಂದಮೇಲೆ ನಾವು ಟವಲ್ಲಿನಿಂದ ಮೈ ಒರೆಸಿಕೊಂಡರೆ ಅದಕ್ಕೆ ಸ್ನಾನ ಅಂತ ಹೆಸರು. ತಾವು ಈ ಟವಲ್ಲಿನಿಂದ ಸ್ನಾನ ಮಾಡಿ. ಹೋಗೋಣ. ಸ್ನಾನಮಾಡದೆ ನಮ್ಮ ರಾಜರ ಬಳಿಗೆ ನಾವು ಹೋಗುವ ಹಾಗಿಲ್ಲ.

Miss ಲೈಕೇಂದ್ರೆ: Hopeless........Water ಕೂಡ ಗತಿ ಇಲ್ಲ ಇವರಿಗೆ.... Water ಇಲ್ಲದ್ದಕ್ಕೆ Towel Bathಉ !.......Remarkable discovery ! !

ಶಾಸ್ತ್ರಿ: ರೀ ಜ್ಯೋತಿಷ್ಕರೇ, ನಮಗೆ ಸ್ನಾನದ ಆವಶ್ಯಕತೆಯೇ ಇಲ್ಲ.... ನಿಮಿಷಕ್ಕೊಂದು ಗ್ರಹಕ್ಕೆ ಹಾರೋ ನಾವು ಚರ್ಮ Air condition ಮಾಡಿಕೊಂಡಿದೀವಿ .... ನಿಮಗೆ ಇನ್ನೂ ಆ ಟೆಕ್ನಿಕ್ ಗೊತ್ತಿಲ್ಲ....ನಡೀರಿ ಹೋಗೋಣ.

ದೃಶ್ಯ ೪

[ಉಪೇಂದ್ರ ಭೂಲೋಕಕ್ಕೆ ತೆರಳುವ ಕುತೂಹಲದಲ್ಲಿದ್ದಾನೆ]

ಉಪೇಂದ್ರ: (ಸ್ವಗತ) ನಮ್ಮಪ್ಪನಿಗೆ ಇನ್ನೂ ಬುದ್ಧಿ ಬರಲಿಲ್ಲ. ಚಂದ್ರಲೋಕಕ್ಕೆ ವಿಹಾರಾರ್ಥವಾಗಿ ಬಂದ ಭೂಲೋಕದ ರಾಯಭಾರಿಗಳನ್ನು ಹೇಗೆ ಮರ್ಯಾದೆಯಿಂದ ಕಾಣಬೇಕೆಂದೂ ಗೊತ್ತಿಲ್ಲ. ಭೂಲೋಕವೆಂದರೆ ಕಿಡಿ ಕಿಡಿಯಾಗುತ್ತಾನೆ. ವಿಜ್ಞಾನದ ಗಂಧವಿಲ್ಲ. ಸೌಂದರ್ಯವನ್ನು ಎಂದೂ ಕನಸಿನಲ್ಲೂ ಕಂಡವನಲ್ಲ. ಹಳೇ ಕಂದಾಚಾರ. ಗೊಡ್ಡುತತ್ವದ ಮುದ್ದೆ ಅವನು. ಆ ಜೋತಿಷ್ಕ ಒಬ್ಬ. ಹೊಸದಾಗಿ ನೂರಾರು ಉಪಗ್ರಹಗಳನ್ನು ಹಾರಿಸಿದ್ದರೂ ಒಂಬತ್ತೇ ಗ್ರಹದ ಲೆಕ್ಕಾಚಾರ ಹಾಕಿ ಬಾಯಿಗೆ ಬಂದದ್ದು ಬೊಗಳುತ್ತಿರುತ್ತಾನೆ........ಅಲ್ಲ........ಆ ಭೂಲೋಕದ ರಾಯಭಾರಿಗಳು ಅದೇನು ವಿನಯವಂತರು ! ಆ ಹುಡುಗಿಯ ರೂಪ ನೋಡಿದರೆ ಕಣ್ಣೇ ಕೋರೈಸಿಹೋಗುತ್ತೆ. ಅಂಥ ಭೂಲೋಕದ ರಂಭೆಯನ್ನು ವರಿಸುವ ಭಾಗ್ಯ ನನ್ನದಾಗುತ್ತದೆಯೇ ?....ಅಥವಾ ನನ್ನ ಗ್ರಹಚಾರದಿಂದ ಆಕೆಯೇ

ನನ್ನನ್ನು ತಿರಸ್ಕರಿಸುತ್ತಾಳೋ? ....ನೋಡೇಬಿಡ್ತೀನಿ. ಆಕೆ ಬಂದರೆ ಮಾತಾಡೇಬಿಡ್ತೀನಿ....(ಆಶ್ಚರ್ಯದಿಂದ) ಇಗೋ ಅವಳೇ ಬರ್ತಾ ಇದಾಳೆ.... ಪರವಾಗಿಲ್ಲ, ನನ್ನ ಅದೃಷ್ಟ !

[ಪ್ರವೇಶ—ಲೈಕೇಂದ್ರ]

ಲೈಕೇಂದ್ರ: ನಮಸ್ಕಾರ Mr. ಉಪೇಂದ್ರ.

ಉಪೇಂದ್ರ: ಯಾರು !........ನೀವು ?........ನನ್ನ ಹೆಸರು ? ? ?....

ಲೈಕೇಂದ್ರ: Mr. ಉಪೇಂದ್ರ. ನೀವು ಯಾರೆಂಬುದು ನನಗೆ ಚೆನ್ನಾಗಿ ಗೊತ್ತು ....ನೀವು ನಿಮ್ಮ ತಂದೆಯವರ ಕೈಲಿ ಜಗಳವಾಡಿದುದು ಜ್ಞಾಪಕವಿದೆಯೇ ? ....ಭೂಲೋಕದ ಪ್ರಯಾಣದ ವಿರುದ್ಧ ನಿಮ್ಮ ತಂದೆ ನಿಮ್ಮ ಮೇಲೆ ರೇಗಲಿಲ್ಲವೆ ?

ಉಪೇಂದ್ರ: ಹೌದು. ಇದೆಲ್ಲ ನಿಮಗೆ ಹೇಗೆ ಗೊತ್ತು........ಆಹಾಹಾ........ನೀವು ತುಂಬಾ ಜ್ಞಾನಿಗಳು.

ಲೈಕೇಂದ್ರ: ನಾವು ಜ್ಞಾನಿಗಳಲ್ಲ Mr. ಉಪೇಂದ್ರ, ವಿಜ್ಞಾನಿಗಳು........ನಿಮ್ಮ ಲೋಕದ ಸಕಲ ವ್ಯವಹಾರಗಳೂ ಭೂಲೋಕದವರಾದ ನಮಗೆ ಕ್ಷಣ ಕ್ಷಣಕ್ಕೂ ಗೊತ್ತಾಗುತ್ತವೆ. ಅಂಥ ವ್ಯವಸ್ಥೆ ಮಾಡಿದ್ದೇವೆ. ರೇಡಿಯೋ ಯಂತ್ರಗಳನ್ನು ಇಟ್ಟಿದ್ದೇವೆ. ನಿಮ್ಮ ರೂಪಲಾವಣ್ಯಗಳನ್ನು ಫೋಟೊ ತೆಗೆಯುವ ಯಂತ್ರವನ್ನಿಟ್ಟಿದ್ದೇವೆ. ನಾಗರಿಕತೆಯನ್ನು ನಿಮ್ಮ ಲೋಕಕ್ಕೂ ಹರಡಲು ನಾವು ವಿಜ್ಞಾನದ ರಾಯಭಾರಿಗಳಾಗಿ ಬಂದಿದ್ದೇವೆ.

ಉಪೇಂದ್ರ: ನೀವು ಈಗ ಹೇಳಿದ ಯಂತ್ರಗಳು ಎಲ್ಲಿವೆ ?....ತೋರಿಸುವಿರಾ ?

ಲೈಕೇಂದ್ರ: ಇಲ್ಲಿಯೇ ಇವೆ........ನಿಮ್ಮ ಲೋಕಕ್ಕೆ ತಂದಿದ್ದೇವೆ........ಇಲ್ಲಿಂದ ಭೂಲೋಕಕ್ಕೆ ಹಿಂತಿರುಗಲು ರಾಕೆಟ್ ಕೂಡ ಸಿದ್ಧವಾಗಿದೆ.

ಉಪೇಂದ್ರ: ರಾಕೆಟ್ ....ಹಾಗೆಂದರೇನು ?

ಲೈಕೇಂದ್ರ: ಬನ್ನಿ ಅದರಲ್ಲಿಯೇ ಕುಳಿತು ಭೂಲೋಕಕ್ಕೆ ಹೋಗೋಣ....ನಮ್ಮ ಪ್ರಯೋಗಶಾಲೆಯಲ್ಲಿ ಅದನ್ನೆಲ್ಲಾ ವಿವರಿಸುತ್ತೇವೆ.

ಉಪೇಂದ್ರ: ನನ್ನ ತಂದೆ ನನ್ನನ್ನು ಸಾಯಿಸಿದರೂ ಚಿಂತೆಯಿಲ್ಲ....ನಡೆಯಿರಿ.... ಭೂಲೋಕಕ್ಕೆ ಹೋಗಿಬರೋಣ (ಇಬ್ಬರೂ ನಿಷ್ಕ್ರಮಿಸುವರು).

[ಪ್ರವೇಶ: ಚಂದ್ರರಾಜ, ಜ್ಯೋತಿಷ್ಕ]

ಜ್ಯೋತಿಷ್ಕ: ಅದೇ, ನಾವು ಭೂಲೋಕದ ವಿಷಯವನ್ನು ಮಾತನಾಡುತ್ತಿದ್ದೆವಲ್ಲಾ ಅವರೇ ಬಂದುಬಿಟ್ಟಿದ್ದಾರೆ. ತಾವು ಕನ್ಯಾರ್ಥಿಯಾಗಿರುವ ವಿಷಯ ಅವರಿಗೆ

ಹೇಗೋ ತಿಳಿದುಬಿಟ್ಟಿದೆ. ನಮ್ಮ ಲೋಕದಲ್ಲಿ ನಡೆಯುವ ಸಮಸ್ತ ವ್ಯಾಪಾರವನ್ನೂ ಅವರು ಕೂಲಂಕಷವಾಗಿ ವರ್ಣಿಸುತ್ತಾರೆ. ವರನ ರೂಪ ಲಾವಣ್ಯಗಳನ್ನೂ ಸ್ಪಷ್ಟವಾಗಿ ಹೇಳಿಬಿಟ್ಟರು........ನಾವೇನಾದರೂ ಅವರ ಮೇಲೆ ಯುದ್ಧ ಮಾಡೇವೆಂಬ ಭಯದಿಂದ ಅದೇನೋ ಬಾಂಬುಗಳನ್ನು ಬೇರೆ ತಂದಿದ್ದಾರಂತೆ........ಏನು ಮಾಡುವುದು. ಚಂದ್ರರಾಜ?

ಚಂದ್ರರಾಜ: ಮಾಡುವುದೇನು? ಉಪಾಯವಾಗಿ ಮಾತಾಡಿಸಿ ಶಿಕ್ಷಿಸುವುದು.

ಜ್ಯೋತಿಷ್ಕ: ಶಿಕ್ಷಿಸುವುದು?....ಅದೇನೋ ಸರಿಯಾದ ಮಾರ್ಗವೇ?........ಆದರೆ ಮಾಡುವುದು ಹೇಗೆ?........ನಾವು ಎಂದೂ ಕಾಣದಿರುವ ಯುದ್ಧಸಾಮಗ್ರಿಗಳನ್ನು ತಂದಿರುವವರ ಸಂಗಡ ಹೋರಾಡುವುದು ತಾನೆ ಹೇಗೆ ಚಂದ್ರರಾಜ?

[ದೂತನ ಪ್ರವೇಶ]

ದೂತ: ಮಹಾಪ್ರಭೂ ಭೂಲೋಕದ ಮನುಷ್ಯರು ಬಂದೇಬಿಟ್ಟರು.

ಚಂದ್ರರಾಜ: ಸರಿ, ನೀನು ಹೊರಡು........ಅವರನ್ನು ಒಳಕ್ಕೆ ಕಳಿಸು.

[ದೂತನು ನಿಷ್ಕ್ರಮಿಸುವನು. ಪ್ರವೇಶ: ವಿಶ್ವಪುತ್ರ ಮತ್ತು ಸ್ಫೂಟ್ನಿಕ್‌ಶಾಸ್ತ್ರಿ]

ಚಂದ್ರರಾಜ: (ಕಣ್ಣರಳಿಸಿ) ಭೂಲೋಕದಿಂದ ದಯಮಾಡಿಸಿರುವವರು ತಾವೇ ತಾನೆ?

ವಿಶ್ವಪುತ್ರ: ಹೌದು Your Highness ನಾವೇ........ತಮ್ಮ ಮಗನಿಗೆ ತಾವು ಅನುರೂಪಳಾದ ಕನ್ಯೆಯನ್ನು ಹುಡುಕುತ್ತಿರುವುದು ಸರಿಯಷ್ಟೆ. ಈ ವಿಚಾರ ಟ್ರಾನ್ಸ್‌ಮಿಟರ್‌ನಿಂದ ನಮ್ಮ ಭೂಲೋಕಕ್ಕೆ ಗೊತ್ತಾಯ್ತು. ನಾವು ನಿಮ್ಮ ಲೋಕದಲ್ಲಿ ಇಟ್ಟಿರುವ Telecasting ಯಂತ್ರದ ಮೂಲಕ ವರನ ಭಾವಚಿತ್ರವೂ ದೊರಕಿತು. ಆತನಿಗೆ ಅನುರೂಪಳಾದ ವಧುವನ್ನು ಕರೆದುಕೊಂಡುಬಂದಿದ್ದೇವೆ.

ಚಂದ್ರರಾಜ: ವಿಶ್ವಪುತ್ರರೇ—ನಿಮ್ಮ ಭೂಲೋಕದ ವೈಜ್ಞಾನಿಕ ಸಾಧನೆಗಳನ್ನು ಕಂಡು ನಾವು ಬಹಳವಾಗಿ ಮೆಚ್ಚಿದ್ದೇವೆ....ಅದರಲ್ಲಿಯೂ ನಿಮ್ಮ ಸಂಚಾರ ಸೌಲಭ್ಯಗಳನ್ನು ಕಾಣದಿದ್ದರೂ ಕೇಳಿ ಪ್ರಶಂಸಿಸಿದ್ದೇವೆ........ಅದಿರಲಿ, ಈಗ ವಧುವಿನ ಜಾತಕವನ್ನು ತಂದಿದ್ದೀರಿ ತಾನೆ?

ವಿಶ್ವಪುತ್ರ: (ಶಾಸ್ತ್ರಿಯನ್ನು ತೋರಿಸಿ) ಇವರು ಭೂಲೋಕದ ಅಪ್ರತಿಮ ಜ್ಯೋತಿಷ್ಕರು Mr. ಸ್ಫೂಟ್ನಿಕ್‌ಶಾಸ್ತ್ರಿಗಳು ಅಂತ. ಸಮಸ್ತರ ಜಾತಕವೂ ಅವರ ಮೆದುಳಿನಲ್ಲಿ ಸೇರಿಹೋಗಿದೆ. ನಮ್ಮ ವಧುವಿನ ಜಾತಕವನ್ನು ಅವರೇ ನಿಮಗೆ ವಿವರಿಸುತ್ತಾರೆ. ಹೇಗಿದ್ದರೂ ತಮ್ಮ ಜ್ಯೋತಿಷ್ಕರೂ ಇದ್ದಾರೆ. ಜಾತಕವನ್ನು ಅವರಿಬ್ಬರೂ ವಿಚಾರಮಾಡಲಿ.

ಚಂದ್ರರಾಜ: ಅಗತ್ಯವಾಗಿ ಆಗಲಿ, ನಮ್ಮದೇನೂ ಅಭ್ಯಂತರವಿಲ್ಲ.

ಶಾಸ್ತ್ರಿ: ನಮ್ಮ ಕನ್ಯೆಯ ನಾಮಧೇಯ ಲೈಕೇಂದ್ರಿ ಎಂದು.

ಚಂದ್ರರಾಜ: ಸ್ವಲ್ಪ ತಾಳಿ. ಸ್ವಲ್ಪ ತಾಳಿ............ತಮ್ಮ ಲೋಕದಿಂದ ನಮ್ಮ ಲೋಕಕ್ಕೆ ನೀವು ಎಂದಾದರೂ ಒಂದು ನಾಯಿಯನ್ನು ಎಸೆದಿದ್ದಿರಾ?

ವಿಶ್ವಪುತ್ರ: ಹೌದು, ಎರಡನೆ ಸ್ಪೂಟ್ನಿಕ್ ಅನ್ನುವ ಉಪಗ್ರಹದಲ್ಲಿ ಒಂದು ನಾಯಿಯನ್ನು ಇಟ್ಟು ಕಳುಹಿಸಿದುದು ದಿಟ.

ಚಂದ್ರರಾಜ: ಅದರ ಹೆಸರು ತಮಗೇನಾದರೂ ಜ್ಞಾಪಕವಿದೆಯೆ?

ವಿಶ್ವಪುತ್ರ: ಓಹೋ........ನಮಗೆ ಮಾತ್ರವೇನು?....ಇಡೀ ವಿಶ್ವದಲ್ಲಿಯೇ ಅದರ ಹೆಸರು ಪ್ರಖ್ಯಾತವಾಗಿದೆ. ಮೊನ್ನೆ ಅಂಗಾರಕ ಲೋಕಕ್ಕೆ ಒಂದು Functionಗೆ ಹೋಗಿದ್ದೆವು. ಅಲ್ಲೂ ಇದೇ ಮಾತೇ.

ಜ್ಯೋತಿಷ್ಕ: ಅದರ ಚರಿತ್ರೆ ಆಮೇಲೆ ಹೇಳುವಿರಂತೆ, ಅದರ ಹೆಸರು?........

ವಿಶ್ವಪುತ್ರ: ಅದರ ಹೆಸರು 'ಲೈಕ' ಅಂತ.

ಜ್ಯೋತಿಷ್ಕ: ಅಂದರೆ ನಿಮ್ಮ ಲೋಕದಲ್ಲಿ ಮನುಷ್ಯರೂ ನಾಯಿಗಳ ಹೆಸರನ್ನು ಇಟ್ಟುಕೊಳ್ಳುತ್ತಾರೆ, ಅನ್ನಿ.

ಶಾಸ್ತ್ರಿ: ಹಾಗಲ್ರಿ, ನಾಯಿಗಳಿಗೂ ಮನುಷ್ಯರ ಹೆಸರನ್ನಿಡುತ್ತಾರೆ.

ಚಂದ್ರರಾಜ: ಸರಿ, ಸರಿ........ಲೈಕ ಮನುಷ್ಯನಿಗೆ ಬೇಕಾದರೂ ಇಡಬಹುದು. ನಾಯಿಗೆ ಬೇಕಾದರೂ ಇಡಬಹುದು........ಇರಲಿ ಜಾತಕ ಪರಿಶೀಲನೆ ಮುಂದುವರಿಯಲಿ.

ಶಾಸ್ತ್ರಿ: ಹುಡುಗಿಯ ಹೆಸರು ಲೈಕೇಂದ್ರಿ....ಅಂದರೆ ಲೈಕ ನಾಯಿಯ ಪ್ರೀತಿ ಪಾತ್ರಳು. .... ವಯಸ್ಸು ಮೂವತ್ತು....ಲಗ್ನ....ಕುಂಭ. ಅಂದರೆ ಆಕೆಯ ಮನಸ್ಸು ಮಡಕೆಯಷ್ಟು ಸೂಕ್ಷ್ಮ. ಲಗ್ನಾಧಿಪತಿ ನಿಕಿಟಾ ಕೃಶ್ಚೇವ್.

ಜ್ಯೋತಿಷ್ಕ: ಅದು ಯಾವ ಗ್ರಹ.

ಶಾಸ್ತ್ರಿ: ಉಪಗ್ರಹವನ್ನು ನಿರ್ಮಿಸಿದ ದೊಡ್ಡ ಗ್ರಹ.

ಜ್ಯೋತಿಷ್ಕ: ತಮ್ಮ ಜ್ಯೋತಿಷ್ಯವಿಧಾನ?........

ಶಾಸ್ತ್ರಿ: ವಿಚಿತ್ರವಿಧಾನ........ನಿಮ್ಮ ಹಾಗೆ ಒಂಬತ್ತು ಗ್ರಹಗಳನ್ನು ಲೆಕ್ಕಾಚಾರಕ್ಕೆ ತೆಗೆದುಕೊಳ್ಳುವುದಿಲ್ಲ. ಹೇಗಿದ್ದರೂ ಈಗ ರಾಕೆಟ್ ನಿರ್ಮಾಣವಾದ ಮೇಲೆ ಮನುಷ್ಯರೂ ಗ್ರಹಗಳೂ ಒಂದೇ ಆಗಿರುವುದರಿಂದ, ಮನುಷ್ಯರ ಪೈಕಿಯೇ ತೂಕವಾದ ಒಂಬತ್ತು ಜನರನ್ನು ಆರಿಸಿಕೊಳ್ಳುತ್ತೇವೆ. ಅವರ ಚಲನವಲನ, ದೃಷ್ಟಿ, ಉಚ್ಚ ನೀಚ ಸ್ಥಾನಗಳನ್ನು ಗಮನಿಸುತ್ತೇವೆ. ಅವರಿಂದ ನಿರ್ಮಿತ

ವಾದ ಉಪಗ್ರಹಗಳನ್ನು ಸಹ ಪರಿಶೀಲಿಸುತ್ತೇವೆ.?………ಸರಿ, ಲೆಕ್ಕಾಚಾರವನ್ನು ನಿಮ್ಮ ಹಾಗೆಯೇ ಹಾಕುತ್ತೇವೆ. ನಿಮ್ಮ ಜ್ಯೋತಿಷ್ಯದಲ್ಲಿ ಹೇಳಿದ ಫಲ ನಡೆಯದೇ ಹೋದರೆ ಗ್ರಹಗಳನ್ನು ಮಾತನಾಡಿಸುವ ಹಾಗೇ ಇಲ್ಲ…. ನಮ್ಮ ಪದ್ಧತಿಯಲ್ಲಿ ಹಾಗಲ್ಲ………ಫಲಗಳನ್ನು ಕೊಡದೇ ಹೋದ ಗ್ರಹಗಳನ್ನು ಬದಲಾಯಿಸಬಹುದು. ಆ ಶಕ್ತಿ ಬೆಸಗೊಂಬಾತರಿಗಿದೆ. ಒಟ್ಟಿನಲ್ಲಿ ಅನುಕೂಲಸಿಂಧು ಪಂಚಾಂಗ…………ಅಷ್ಟು ತಿಳಿದುಕೊಳ್ಳಿ ಸಾಕು. ಲಗ್ನಾಧಿಪತಿ ಉಚ್ಚಸ್ಥಾನದಲ್ಲಿದ್ದಾನೆ. ಕಳತ್ರಸ್ಥಾನದಲ್ಲಿ ರೀಟಹೇವರ್ತ್ ಇದ್ದು ಲಗ್ನವನ್ನು ವಕ್ರದೃಷ್ಟಿಯಿಂದ ನೋಡುತ್ತಿದ್ದಾಳೆ. ಒಟ್ಟಿನಲ್ಲಿ ಜಾತಕ ಪ್ರಶಸ್ತವಾಗಿದೆ. ಆಗಬಹುದು.

ವಿಶ್ವಪುತ್ರ: ನಿಮ್ಮ ಹುಡುಗನ ಜಾತಕ ನಮಗೆ ಬೇಡಿ. ನಾವು ವಿಜ್ಞಾನಿಗಳು. ವಿವಾಹದಲ್ಲಿ ಜಾತಕ ನೋಡುವುದಿಲ್ಲ. ನಿಮ್ಮ ಸಮಾಧಾನಕ್ಕಾಗಿ ನಮ್ಮ ಜಾತಕ ತಂದಿದ್ದೆವು. ಅಷ್ಟೇ.

ಜ್ಯೋತಿಷ್ಕ: ತಮ್ಮ ಜ್ಯೋತಿಷ್ಯದ ಪಾಂಡಿತ್ಯ ನಮಗಿಲ್ಲ. ಆದ್ದರಿಂದ ನಾನೇನು ಹೇಳಲಿ. ಒಟ್ಟಿನಲ್ಲಿ ಪ್ರಶಸ್ತವಾಗಿದೆ ಅಂತ ತಾವೇ ಹೇಳ್ತೀರಿ………ಆಗಲಿ ….ಬಾಧಕವೇನಿಲ್ಲ.

ಶಾಸ್ತ್ರಿ: ವಿವಾಹಕ್ಕೆ ತಾವು ಏರ್ಪಾಡುಗಳನ್ನೆಲ್ಲಾ ಸಾಂಗವಾಗಿ ಮಾಡಿಕೊಳ್ಳಿ. ದೇವತಾಶಾಸ್ತ್ರ ಚಂದ್ರಗ್ರಹದಲ್ಲಿ. ಮುಹೂರ್ತ ಶುಕ್ರಲೋಕದಲ್ಲಿ. ಅತಿಥಿಗಳಿಗೆ ಊಟೋಪಚಾರ ಅಂಗಾರಕ ಗ್ರಹದಲ್ಲಿ. ಸರಿ, ವಧೂವರರ Honey-moon ಯಥಾಪ್ರಕಾರ ಭೂಲೋಕದಲ್ಲೇ ನಡೆಯಲಿ.

[ಹಠಾತ್ತನೆ ದೂತನ ಪ್ರವೇಶ]

ದೂತ: ಮಹಾಪ್ರಭೂ, ಭೂಲೋಕದಿಂದ ಬಂದಿದ್ದ ರಾಕೆಟ್ ಇಲ್ಲಿನ ಶೈತ್ಯವನ್ನು ತಡೆಯಲಾರದೆ ಮುರಿದು ಹೋಯಿತು. ಅದರೊಳಗೆ ಇದ್ದ ವಸ್ತುಗಳೆಲ್ಲ ಭೂಲೋಕದ ಮೇಲೆ ಬಿದ್ದವು. ತಮ್ಮ ರಾಜಕುಮಾರ ಉಪೇಂದ್ರರೂ ಭೂಲೋಕದ ಹುಡುಗಿಯೂ ಅದರೊಳಗೆ ಸತ್ತುಬಿದ್ದಿದ್ದಾರೆ.

ಚಂದ್ರರಾಜ: ಹಾ ! ಉಪೇಂದ್ರ ಮರಣಹೊಂದಿದನೇ ?………ಉಪೇಂದ್ರ……… ಉಪೇಂದ್ರ………ಎಂತಹ ಅನಾಹುತ ಮಾಡಿಕೊಂಡೆ, ಮಗನೆ………ಈ ಭೂಲೋಕದ ಚಂಡಾಲರು ನಮ್ಮ ಲೋಕವನ್ನು ಪ್ರವೇಶಿಸಲಾಗಿ ನನ್ನ ಮುದ್ದು ಮಗನನ್ನು ಕಳೆದುಕೊಳ್ಳಬೇಕಾಯ್ತು………ಜ್ಯೋತಿಷ್ಕ, ನಾನು ಅಲ್ಲಿಗೆ ಹೋಗಿ ಬರುತ್ತೇನೆ. ನೀವು ಇಲ್ಲೇ ಇರಿ (‘ಉಪೇಂದ್ರ’ ಎನ್ನುತ್ತಾ ಓಡುವನು).

ಜ್ಯೋತಿಷ್ಕ: ಇನ್ನು ಆಯ್ತು ನಿಮ್ಮ ಗತಿ. ವರಾನ್ವೇಷಣಕ್ಕೆ ಒಂದು ವರನನ್ನೇ ಆಹುತಿ ತೆಗೆದುಕೊಂಡ ಪಾಪಿಗಳಿರಾ, ನಿಮ್ಮ ಗತಿ ಪೂರೈಸಿತು. ನಮ್ಮ ಲೋಕಕ್ಕೆ ಸತ್ತ ನಾಯಿಯನ್ನು ಎಸೆದು ಅಪಚಾರ ಮಾಡಿದಿರಿ. ಮನುಷ್ಯರನ್ನು ಕಳಿಸಿದಿರಿ. ನಿಮ್ಮ ಲೋಕಕ್ಕೆ ಈಗ ನೀವೇ ತಂದ ಅಸ್ತ್ರಗಳ ಸುರಿಮಳೆಯೇ ಆಗಿದೆ. ಅನುಭವಿಸಿ. ನಿಮ್ಮ ಲೋಕ ಈಗ ಉರಿಯುತ್ತಿದೆ. ಅದನ್ನು ತಪ್ಪಿಸಲು ನಿಮ್ಮಿಂದಾಗದು. ವಿಜ್ಞಾನದ ಶಕ್ತಿಯನ್ನು ದುರುಪಯೋಗಪಡಿಸಿಕೊಂಡು ಜನಾಂಗಗಳನ್ನೇ ಹಾಳುಮಾಡಿ, ನಮ್ಮ ಪವಿತ್ರ ಲೋಕವನ್ನು ಯುದ್ಧನೆಲೆಯಾಗಿ ಇಟ್ಟುಕೊಳ್ಳಲು ಬಂದಿದ್ದೀರಿ. ಈಗ ನಿಮ್ಮ ಪಾಪ ನಿಮ್ಮನ್ನೇ ತಿನ್ನುತ್ತಿದೆ. ಅನುಭವಿಸಿ. ಯಾರಲ್ಲಿ....ದೂತ ....ದೂತ....

(ಪ್ರವೇಶ: ದೂತ)

ಈ ಚಂಡಾಲರನ್ನು ಎಳೆದುಕೊಂಡು ಹೋಗಿ ಬಂಡೆಗಳ ಮಧ್ಯೆ ಮಂಜುಗಡ್ಡೆಯಲ್ಲಿ ಹಾಕಿ ಜೀವಸಹಿತವಾಗಿ ಹೂಳಿಬಿಡು.

— ತೆರೆ —

ದೃಶ್ಯ ೫

[ಬ್ಲೀಗನ್ನನ ಪ್ರಯೋಗಶಾಲೆ]

ಕಾರ್ಯದರ್ಶಿ: Professor, Sir. . . . . Recorderನಿಂದ ಚಿತ್ರವಿಚಿತ್ರವಾದ ಸುದ್ದಿ ಬರುತ್ತಿದೆ Sir, ... ನಮ್ಮ ಉಪಗ್ರಹ ಆಕಾಶದಲ್ಲಿ ಹೆಚ್ಚು ಹೊತ್ತು ನಿಲ್ಲಲಿಲ್ಲ. ಚಂದ್ರಗ್ರಹದಿಂದಲೇ ಉರಿದು ಬಿದ್ದಿದೆ . . . . ಉಪಗ್ರಹದಲ್ಲಿರುವ ಯಂತ್ರಗಳೂ ಕೂಡ ಗಗನಶೂನ್ಯತೆಯಲ್ಲಿ ಕೆಲಸಮಾಡುತ್ತಲೇ ಇಲ್ಲ . . . . ಅಂತರಿಕ್ಷದಲ್ಲಿ ಓಡಾಡುವ ಉಲ್ಕಾಪಾತಗಳು ನಮ್ಮ ಉಪಗ್ರಹಗಳನ್ನೂ ರಾಕೆಟ್‌ಗಳನ್ನೂ ಚೂರು ಚೂರು ಮಾಡುತ್ತಿವೆ ಸಾರ್. ಉಲ್ಕಾಪಾತಗಳನ್ನು ಜಯಿಸಲು ಯಾವ ಮಾರ್ಗವೂ ಇದ್ದಂತೆ ತೋರುವುದಿಲ್ಲ ಸಾರ್, ... ಗಗನವನ್ನು ಜಯಿಸುವ ನಮ್ಮ ಪ್ರಯತ್ನ ಅಸಾಧ್ಯವಾಗಿದೆ Sir, ...

ವಿಜ್ಞಾನಿ: (ಕೋಪದಿಂದ ಸಿಡಿದೆದ್ದು) . . . . ಅಸಾಧ್ಯ! . . . . ಕಾರ್ಯದರ್ಶಿ. ಅಸಾಧ್ಯವೇ? . . . ಹ್ಹಹ್ಹಹ್ಹಹ್ಹಹ್ಹ . . . ವಿಜ್ಞಾನಕ್ಕೆ ಅಸಾಧ್ಯವೇ??? . . . ಪರಮಾಣುವನ್ನೇ ವಿಭಜಿಸದ ಆಧುನಿಕ ವಿಜ್ಞಾನಕ್ಕೆ ಉಲ್ಕಾಪಾತಗಳ ತೊಂದರೆ ಒಂದು ಬಿಡಿಸಲಾರದ ಸಮಸ್ಯೆಯೆ? . . . . ಹಿಂತೆಗೆದುಕೊ

ನಿನ್ನ ಮಾತನ್ನು . . . . ಹೊರಡು, ನೀನು ಪ್ರಯೋಗಮಗ್ನನಾಗು . . . ನಾನು ಈ ವಿಚಾರದಲ್ಲಿ ಸಂಶೋಧನೆ ನಡೆಸುತ್ತೇನೆ . . . . Analyse ಮಾಡು . . . (ಕಾರ್ಯದರ್ಶಿಯು ಹೋದಮೇಲೆ) . . . ಪ್ರಕೃತಿ ವಿಚಿತ್ರವಾದುದು . . . ಲಕ್ಷಗಟ್ಟಲೆ ಕಿಲೋಮಿಾಟರ್ ಸಂಚರಿಸಬಲ್ಲ ಕ್ಷಿಪಣಿಗಳನ್ನು ತಯಾರಿಸಿ ಗಗನಕ್ಕೆಸೆದರೆ, ಆ ಪ್ರಕೃತಿಯು ಉಲ್ಕಾಪಾತಗಳ ಸೈನ್ಯವನ್ನೇ ಸೃಷ್ಟಿಸಿ ಹೊಡೆದಾಡುತ್ತಿದೆ . . . ಹ್ಹಹ್ಹಹ್ಹಹ್ಹಹ್ಹ . . . ಇರಲಿ ನೋಡುವಾ. . ವಿಜ್ಞಾನಕ್ಕೆ ಎದಿರಾವುದು ? . . . (ತುಸಹೊತ್ತು ಮೌನ, ಪ್ರಯೋಗದ ಶಬ್ದ) ಕಾರ್ಯದರ್ಶಿ . . . ಈಗ Rocketನ Speedನ್ನು ನೂರ್ಮಡಿಗೊಳಿಸಿದರೆ ಎಲ್ಲವೂ ಸರಿಹೋಗುತ್ತದೆ . . . . ನಿರಾಶನಾಗುವೆಯೇಕೆ ಕಾರ್ಯದರ್ಶಿ? ಇಲ್ಲಿ ಬಾ . . . ನೋಡು . . . ಈ ಉಪಕರಣಗಳನ್ನೆಲ್ಲಾ ಜೋಡಿಸಿ ತಯಾರಿಸಿದ ಉಪಗ್ರಹ ಉಲ್ಕಾಪಾತಗಳನ್ನು ಸೋಲಿಸಬಲ್ಲದು (ಹೆಮ್ಮೆಯಿಂದ) ಸೆಕೆಂಡಿಗೆ ೧೦ ಕಿಲೋಮಿಾಟರ್ ವೇಗ . . . ಗಂಟೆಗೆ ೩೦,೦೦೦ ಮೈಲಿ ವೇಗ ಕಾರ್ಯದರ್ಶಿ . . . . ಗಗನವೇ ಅಲ್ಲಾಡಿ ಹೋಗುತ್ತದೆ . . . . ಗ್ರಹ ನಕ್ಷತ್ರಗಳನ್ನು ಧೂಳಿಪಟ ಮಾಡಬಲ್ಲದು . . . ಪ್ರಕೃತಿಯನ್ನು ಜುಟ್ಟು ಹಿಡಿದು ಜಯಿಸಬಲ್ಲದು.

(ಅಶರೀರವಾಣಿ) : ಸಾಧ್ಯವಿಲ್ಲ, ವಿಜ್ಞಾನಿ....ಅದು ಸಾಧ್ಯವಿಲ್ಲ....ನೀನೀಗ ನಿರ್ಮಿಸುತ್ತಿರುವ ಉಪಗ್ರಹ ಪ್ರಕೃತಿದೇವಿಯ ಮಕ್ಕಳು ಒದ್ದಾಡುವ ಆಟದ ಚೆಂಡು ಅಷ್ಟೇ....ಮೂರ್ಖ, ಈ ಚೆಂಡು ಗಗನವನ್ನ ಗೆಲ್ಲಬಲ್ಲುದೇ ?

ವಿಜ್ಞಾನಿ: (ರೋಷದಿಂದ) ಯಾರದು ಹಾಗೆ ಬೊಗಳಿದವರು ?....ಉಪಗ್ರಹ ಚೆಂಡೇ? ....ಮಕ್ಕಳಾಟದ ಚೆಂಡು !....ಮೂವತ್ತು ವರ್ಷಗಳು ಅನವರತ ಸಂಶೋಧನೆ ನಡೆಸಿ ತಯಾರಿಸಿದ ಉಪಗ್ರಹ ಆಟದ ಚೆಂಡೆ ?.... ಯಾರದು ಹಾಗೆ ಬೊಗಳಿದವರು ?....

ಆತ್ಮ : ....ನಾನು ವಿಜ್ಞಾನಿ....ನಿನ್ನ ಆತ್ಮ.

ವಿಜ್ಞಾನಿ: ಆತ್ಮ !....ಆತ್ಮವೆ ??....ಯಾವ ಆತ್ಮ ?? ಯಾರ....ಆತ್ಮ ???

ಆತ್ಮ: ವಿಜ್ಞಾನಿಗೆ ಅತೀತವಾದ ಆತ್ಮ....ಆದರೂ ಅಧ್ಯಾತ್ಮಿಕ ಸ್ವರೂಪಿಯಾಗಿ ಅವನ ಹೃದಯದಲ್ಲೇ ಮನೆಮಾಡಿಕೊಂಡಿರುವ ಆತ್ಮ.

ವಿಜ್ಞಾನಿ: ವಿಜ್ಞಾನಿಗೂ ಅತೀತವೇ ?....ಜ್ಞಾನದ ರಾಶಿಯನ್ನೇ ಸೃಷ್ಟಿಸುವ ವಿಜ್ಞಾನಿಗೂ ಅತೀತ !!....ಅದಕ್ಕೂ ಅತೀತವಾದ ಆತ್ಮ.... ನಮ್ಮ ಹೃದಯದಲ್ಲೇ ಇರುವ ಆತ್ಮ....ಆದರೂ ನಮಗೆ ಗೋಚರವಾಗದ ಆತ್ಮ !!!.... ಹ್ಹಹ್ಹಹ್ಹಹ್ಹ....ಇದೇನು ? ಒಗಟೆಯಾಗಿದೆಯಲ್ಲಾ !

ಆತ್ಮ: ....ಇದು ಒಗಟೆಯಲ್ಲ ಬ್ಲೇಗನ್....ಕಠೋರ ಸತ್ಯ. ನೀನು ತಿಳಿದುಕೊಂಡಿಲ್ಲ ಅಷ್ಟೆ.

ವಿಜ್ಞಾನಿ: ಆತ್ಮ....ಹದ್ದುಮೀರಿ ಮಾತನಾಡಬೇಡ....ಜ್ಞಾಪಕವಿರಲಿ, ಇದು ವಿಜ್ಞಾನಿಯ ಪ್ರಯೋಗಶಾಲೆ....ಆಧುನಿಕ ಮಾನವನ ಸುಖ ಸೌಭಾಗ್ಯಗಳ ಉಗಮಸ್ಥಾನ....ಹರಟೆ ಕೊಚ್ಚುವ ಸ್ಥಳವಲ್ಲ....ಎಚ್ಚರಿಕೆ ಇರಲಿ, ಆತ್ಮ.... ಎಚ್ಚರಿಕೆ ಇರಲಿ.

ಆತ್ಮ: ಗೊತ್ತಿದೆ ವಿಜ್ಞಾನಿ... ಇದು ಪ್ರಯೋಗಶಾಲೆಯೆಂದು ನಾನು ಬಲ್ಲೆ....ಆದರೆ ಜಗತ್ತಿನ ಕಲ್ಯಾಣ ಇಲ್ಲಲ್ಲ ಆಗುವುದು....ಇದೊಂದು ಗುರಿಕೆಟ್ಟ ಸ್ಥಳ.... ವಿಶ್ವವಿನಾಶಕ್ಕಾಗಿ ಸೇರಿದ ಹುಚ್ಚರ ಸಂತೆ ಇದು....ಇಲ್ಲಾಗುತ್ತಿರುವುದು ಮಾನವನ ನಾಶ.

ವಿಜ್ಞಾನಿ: ಕಾರ್ಯದರ್ಶಿ....Revolver ಕೊಡು (ತಂದುಕೊಡುವನು) ....ಪಿಶಾಚಿ, ...ನಾನು ಹುಚ್ಚನೇ ?....ಇದೋ ಅನುಭವಿಸು. (ಹೊಡೆಯುವನು. ಆತ್ಮ ನಗುತ್ತದೆ. ಸಾಯುವುದಿಲ್ಲ). (ಚಕಿತನಾಗಿ) .... ಇದೇನು ? ....ಗುಂಡಿ ನೇಟಿಗೂ ಸಾಯಲಾರೆಯಾ ನೀನು ?....

ಆತ್ಮ: ನನಗೆ ಸಾವೆಲ್ಲಿಯದು ವಿಜ್ಞಾನಿ ?....ಸಾವು ನಿನಗೆ....ಗುರಿಯಿಲ್ಲದ ವಿಜ್ಞಾನಿಗೆ ....ಅವನು ತಯಾರಿಸಿದ ಅಸ್ತ್ರಗಳಿಂದ ನಿರ್ಭಾಗ್ಯ ಜನತೆ ಸಾಯುತ್ತಿದೆ.... ಆತ್ಮವಲ್ಲ ಸಾಯುವುದು .... (ಒಂದು ಹಿಡಿ ಬೂದಿಯನ್ನು ಕೊಡವುತ್ತಾ) ಇದೋ ನೋಡು....ಈ ಬೂದಿಯನ್ನು ನೋಡು....ನಿನ್ನ ವೈಜ್ಞಾನಿಕ ಸಂಶೋಧನೆ ಈ ಲೋಕವನ್ನೇ ಸುಡುತ್ತದೆ....ನೀನು ಈಗ ಕಳಿಸಿದ ರಾಕೆಟ್ ಸ್ಫೋಟ್ಟಿ ಅದರಲ್ಲಿದ್ದ ಅಸ್ತ್ರಗಳು ಭೂಮಿಯ ಮೇಲೆ ಬಿದ್ದು ನಿರಪರಾಧಿಗಳು ಸತ್ತರು. ನಿನ್ನ ಗುರಿ ಯಾವುದು ಬಲ್ಲೆಯಾ ?

ವಿಜ್ಞಾನಿ: ...ಬಲ್ಲೆ...ಚೆನ್ನಾಗಿ ಬಲ್ಲೆ...ಸೃಷ್ಟಿಯ ರಹಸ್ಯಗಳನ್ನು ಮುಚ್ಚಿರುವ ಕಪ್ಪು ತೆರೆಯನ್ನು ಛಿದ್ರಗೊಳಿಸುವುದು....ಈ ಮಾನವನನ್ನು ಮೆಟ್ಟಿ ಸೆಟೆದು ನಿಂತಿರುವ ಪ್ರಕೃತಿಯ ಮೇಲೆ ವಿಜ್ಞಾನದ ವಿಜಯಪತಾಕೆ....ಅದು ನನ್ನ ಗುರಿ...ವಿಜ್ಞಾನದ ಗುರಿ.

ಆತ್ಮ: ಮೂರ್ಖ...ನೀನು ಪ್ರಕೃತಿಯನ್ನು ಜಯಿಸಲಾರೆ...ಅರಿಯಬಲ್ಲೆ, ಅಷ್ಟೆ... ವಿಜ್ಞಾನದ ಶಕ್ತಿಗೂ ಮೀರಿದ ಶಕ್ತಿ ಒಂದಿದೆ, ಈ ವಿಶ್ವದಲ್ಲಿ...ನೀನು ಸಹಸ್ರ ಉಪಗ್ರಹಗಳನ್ನು ಬಿಟ್ಟರೂ ಉಲ್ಕಾಪಾತಗಳನ್ನು ಜಯಿಸಲಾರೆ...ಅಂತರಿಕ್ಷ ಜೀವನಕ್ಕೆ ಆಸೆಪಡುವ ನೀನು, ನೀನಿರುವ ಈ ಭೂಮಿಯನ್ನು ಮೊದಲು ಸುಖಮಯವನ್ನಾಗಿ ಮಾಡು...ಅದಕ್ಕಾಗಿ ಪ್ರಯೋಗ ನಡೆಸು...ನಿನ್ನ

ಬಾಳಿಗೊಂದು ಗುರಿ ಇಟ್ಟುಕೋ...ವಿಜ್ಞಾನದ ದಾಸನಾಗಬೇಡ... ವಿಜ್ಞಾನದ ಶಕ್ತಿಯು ಆಧ್ಯಾತ್ಮದಿಂದ ಪ್ರೇರಿತವಾಗಲಿ...ಇನ್ನು ನಾನು ಬರುವೆ... (ಅಂತರ್ಧಾನ).

ವಿಜ್ಞಾನಿ : ಆತ್ಮ...ಆತ್ಮ...ಆತ್ಮ...ಬಾ...ಏಕೆ ಹೊರಟೆ...ನನ್ನ ರಾಕೆಟನ್ನು ಉಲ್ಕಾಪಾತಗಳು ಹೇಗೆ ಸಾಯಿಸಿದವು ಹೇಳು...(ಮೌನ)...ಇಲ್ಲ... ಮಾತಿಲ್ಲ...ನನ್ನ ರಾಕೆಟ್ ಸತ್ತಿತು...ಅದರಲ್ಲಿದ್ದ ಮಾನವರನ್ನು ನಾನೇ ಕೈಯಾರೆ ಕೊಂದಂತಾಯ್ತು...ದಿಟ...ಆತ್ಮ ಹೇಳಿದ್ದು ದಿಟ...ಪ್ರಕೃತಿಯನ್ನು ವಿಜ್ಞಾನಿ ಜಯಿಸಲಾರ...ವಿಜ್ಞಾನದ ಶಕ್ತಿಗೂ ಮೀರಿದ ಯಾವುದೋ ಶಕ್ತಿ ಈ ವಿಶ್ವದಲ್ಲಿದೆ...ಆ ಶಕ್ತಿ ಜಗತ್ತಿಗೆ ರಕ್ಷಣಾಕವಚವನ್ನು ತೊಡಿಸಿದೆ... ಉಲ್ಕಾಪಾತಗಳಿಂದ ರಾಕೆಟ್ ಧ್ವಂಸವಾಗುತ್ತಿದೆ....ಆತ್ಮ....ನೀನು ಹೇಳದುದು ದಿಟ...ನನ್ನ ಗುರು ಐನ್‌ಸ್ಟೀನ್ ಕೂಡ ಇದನ್ನೇ ಬೋಧಿಸುತ್ತಿದ್ದ...ವಿಜ್ಞಾನ ಇರುವುದನ್ನು ಬಿಡಿಸಬಲ್ಲದು...ಏನಿರಬೇಕೆಂಬುದನ್ನು ಹೇಳಲಾರದು... "Science can only ascertain what is it, cannot determine what should be" . . . ಹೌದು . . . ನನ್ನ ವೈಜ್ಞಾನಿಕ ಜ್ಞಾನ ವಿನಾಶಕ್ಕಾಗಿ ಪೋಲಾಗುತ್ತಿದೆ...ನಗರಗಳನ್ನು ಭಸ್ಮಮಾಡಲು ಉಪಯೋಗವಾಗುತ್ತಿದೆ...ನಾನು ಇದನ್ನು ನೋಡಲಾರೆ...ನೋಡಲಾರೆ... (ರಾಕೆಟ್ಟನ್ನು ನೋಡಿ)...ಇದೋ ಇಲ್ಲಿದೆ ಆ ವಿನಾಶದ ಸ್ವರೂಪ. ವಿಜ್ಞಾನಿಯ ಹತೋಟಿ ಮೀರಿದ ಸೃಷ್ಟಿ...ನಿರ್ಮಾಪಕನ ಹಿಡಿತ ತಪ್ಪಿದ ರಾಕ್ಷಸೀ ಸ್ವರೂಪ...ಸೋದರರ ಕೊಲೆಗೆ ಕಾರಣವಾದ ಮಾರಕಾಸ್ತ್ರ. ನಿನ್ನಿಂದ ನನ್ನ ಬಾಳಿನ ಗುರಿ ಸಿಗಲಾರದು...ಈ ಭೂಮಿಯಲ್ಲಿ ಸುಖಶಾಂತಿ ಲಭಿಸಲಾರದು ...ತೊಲಗು, ನೀನು ನಿರ್ನಾಮವಾಗು...(ಒಡೆಯುವನು).

ಕಾರ್ಯದರ್ಶಿ : ಸಾರ್...ಏನು ಕೆಲಸಮಾಡಿದಿರಿ ಸಾರ್...ರಾಕೆಟ್ ಏನು ಮಾಡುತ್ತದೆ ಸಾರ್?...ಯಾರೋ ರಾಕೆಟ್ಟನ್ನು ಯುದ್ಧಕ್ಕಾಗಿ ಉಪಯೋಗಿಸಿಕೊಂಡರೆ ಆ ತಪ್ಪು ನಿಮ್ಮದು ಹೇಗೆ ಸಾರ್?

ವಿಜ್ಞಾನಿ : (ಬೆಪ್ಪಾಗಿ)...ಹೌದು ಕಾರ್ಯದರ್ಶಿ...ನೀನು ಹೇಳುವುದರಲ್ಲೂ ಸತ್ಯವಿದೆ. ಹೌದು...ರಾಕೆಟ್ ನಿರಪರಾಧಿ...ನಾನು ಮಾನವತೆಯ ಕೊಲೆಗಡುಕನಲ್ಲ. ರಾಕೆಟ್ಟನ್ನು ನಿರ್ಮಿಸಿದ ಮಾತ್ರದಿಂದ ನಾನು ಹೇಗೆ ಕೊಲೆಗಡುಕ? ರಾಕೆಟ್ಟನ್ನು ದುರುಪಯೋಗಪಡಿಸಿಕೊಂಡವನು ನಾನಲ್ಲ... ನಾನಲ್ಲ...ಆ್ಹಂ...ಆ್ಹಂ....ಹೇಗೆ?....ಆದರೆ....ಆದರೆ....ಕಾರ್ಯದರ್ಶಿ, ರಾಕೆಟ್ ನಿರ್ಮಾಣ, ನನ್ನ ಕೈಯಿಂದಾಯ್ತು...ಉಪಯೋಗ ನನ್ನ ಕೈಯಲ್ಲಿಲ್ಲ...ನನ್ನ ಕೈಯಲ್ಲಿಲ್ಲ...ರಾಕೆಟ್ ನಿರ್ಮಾಣ ತಪ್ಪೆ?...ನನ್ನ

೩೦ ವರ್ಷಗಳ ತಪಸ್ಸು ವಿನಾಶಕ್ಕಾಗಿ ಮೀಸಲೇ? ಮಾನವನನ್ನು ಕೊಲೆ ಮಾಡಲು ನನ್ನ ಜ್ಞಾನ ವ್ಯರ್ಥವೇ? ಸಂಶೋಧನೆ ತಪ್ಪೆ?...ನನಗರ್ಥ ವಾಗುತ್ತಿಲ್ಲ...ನನಗರ್ಥವಾಗುತ್ತಿಲ್ಲ...ಆತ್ಮ. ಇದೊಂದು ಸಮಸ್ಯೆಯಾಗಿದೆ ...ಒಗಟೆಯಾಗಿದೆ..ಆತ್ಮ...ಇದೊಂದು ಒಗಟೆಯನ್ನು ಬಿಡಿಸು, ಆತ್ಮ.. ವಿಜ್ಞಾನಕ್ಕೆ ಗುರಿಕೊಟ್ಟ ಚೈತನ್ಯಸ್ವರೂಪಿ...ಆತ್ಮ, ಇದೊಂದು ಒಗಟೆ ಯನ್ನು ಬಿಡಿಸು...ಇದೊಂದು ಒಗಟೆಯನ್ನು ಬಿಡಿಸು...*

* ಈ ನಾಟಕವು ೧೯೬೩ನೆಯ ಆಗಸ್ಟ್ ೫ರಂದು ಬೆಂಗಳೂರು ಮತ್ತು ಧಾರವಾಡದ ಆಕಾಶವಾಣಿ ಕೇಂದ್ರಗಳಿಂದ ಪ್ರಸಾರವಾದುದಕ್ಕಾಗಿ ಆಲ್ಲಿನ ಅಧಿಕಾರಿಗಳಿಗೆ ನನ್ನ ವಂದನೆಗಳು.

ಬಡ ದಶರಥನ ಸಾಂತ್ವನ

೧

ಹೇಳಿ ಕೇಳಿ ಕುಚೇಲನಲ್ಲವೆ ನಾನು?
ಅವಳಿಗಿವೆ ಎರಡು ಜಡೆ
ತೊಡುತಾಳವಳು ಮಸ್ಲಿನ್
ತೊಟ್ಟಿದ್ದಾಳೆ ಎತ್ತರದಟ್ಟೆ ದಿಮಾಕು ಚಪ್ಪಲಿ
ಅವರು ಹಾಗೆ
ಇವರು ಹೀಗೆ–
ಸರಿಯೆ, ನಮಗೇಕೆ ಅದು?
ತಿಂಗಳ ಮೊದಲ ದಿನವೇ ಏಕೆ ಹಗರಣ?
ತಗೊ ದುಡ್ಡೆಲ್ಲ ನೀನೆ
ಹಾಲಿನವನಿಗೆ ಮೊಸರಿನವನಿಗೆ ಅಗಸನಿಗೆ
ಇನ್ನು ಕೆಲವರಿಗೆ ನೀನೆ ಉತ್ತರಿಸು
ಸಂಬಳವೇನು–ಅಲ್ಲಾವುದ್ದೀನನದ್ಭುತ ದೀಪವೇ?
ಉಂಗುರವನೇಕೆ ಮಿಕಿ ಮಿಕಿ ನೋಡುತ್ತಿ
ಬೆಪ್ಪೇ, ನಿಮ್ಮಪ್ಪ ಕೊಟ್ಟುದಿದು,
ಮಂತ್ರದುಂಗುರವಲ್ಲ
ನಾಳೆಯಿಂದಲೆ ನಕ್ಷತ್ರಕರ ಪರಿವಾರ ವಕ್ಕರಿಸಲಿದೆ
ಇಗೊ ಕೈಮುಗಿದೆ ನಿನಗೆ,
ನೀನೇ ಆಗು ಮನೆಗೆಜಮಾನಿ.

೨

ಸುಂಟರ ಗಾಳಿಯೇಕೆ ಎಬ್ಬಿಸುವೆ ಮನೆಯೊಳಗೆ ಹೊರಗೆ?
ಹುಬ್ಬ ಕತ್ತಿೀವರಸೆ ಬೇಡ
ಕಣ್ಣ ಚಾವಟಿಯೇಟು ನಿಲ್ಲಿಸು
ಸತ್ತ ವಾತಾವರಣ ಇದು ಬೇಡ
ನಾನೇನು ಶತ್ರುವೇ?
ಮನೆಯಾಗುವುದು ಬೇಡ ಕುರುಕ್ಷೇತ್ರ.

೩

ಬೇಸರಿಯ ಮುತ್ತು ಬೆಂಡೋಲೆ ಉಂಗುರಕೆಲ್ಲ
ಮಾತು ಕಲಿಸಿದ್ದೀಯೆ

ನನ್ನೊಡನಿವರ ರಾಯಭಾರವೆ ?
ಬೇಡ, ನೀನೆ ಮಾತಾಡು.
ಕೈಹಿಡಿದವಳೆ ಮನ ಮುರಿಯದಿರು, ಮಾತಾಡು.
ಕೂದಲು ಕೆದರಿದೆ
ಹಣೆ ಬಿಕೋ ಎನ್ನುತಿದೆ
(ನಾ ಬದುಕಿಲ್ಲವೇನು ?)
ಹೂವ ಹೊಸಕಿರವೆ
(ನಾ ಕೈಗೆ ಸಿಕ್ಕಿದ್ದರೆ ?)
ಅಡಕೆ ಚೆಲ್ಲಿದೆ ಯಾಕೆ ?
ಗಾರೆನೆಲದಲ್ಲಡಕೆ ಮೊಳೆಯುವುದಿಲ್ಲ.
ವೀಳ್ಯದೆಲೆ ಇವ ಕೋಣೆಯೊಳಗೆಲ್ಲ
ಏಕೆ ಹಾಸಿದ್ದೀಯ ?
ಮಾತಾಡು, ಆಡು, ಮಾತಾಡು.
ಬೇಡ ಈ ಮೌನ ಯುದ್ಧ.
ಒಲವೆಲ್ಲವನು ಹೂತು ನಗೆಗೆ ಕಟ್ಟಿರುವೆ ಗೋರಿ
ಒಲವ ಹೆಣ ಮಾಡದಿರು
ಈ ಕೋಣೆ ಮನೆಯಲ್ಲಿ ಕೋಪಗೃಹ ಸಾಧ್ಯವೆ ?
ಆಡು, ಮಾತಾಡು ; ಈ ಮೌನ ಯಾವ ಮಂತ್ರಾಸ್ತ್ರ ?
ನಾನು ದಶರಥನಲ್ಲ
ಬೇಡವೇ ಕೈ ಮುಗಿವೆ ರಾಮಾಯಣ.
ಅವಳಿಗಾದರು ಇತ್ತು ರಾಜ್ಯದ ಲೋಭ
ಸಣ್ಣ ಬಯಕೆಗೆ ನೀ ಕೈಕೆಯಾಗುವುದೆ ?
ಇದ್ದುದರಲ್ಲಿ ಸರಿ ಬದುಕೋಣ
ಬೇಡವೇ ಕೈ ಮುಗಿವೆ
ಚಿನ್ನದ ಜಿಂಕೆ ಬೆನ್ನು ಹತ್ತುವುದು.

—ಜಿ. ಎಸ್. ಸಿದ್ಧಲಿಂಗಯ್ಯ

ಹರಿಣೀಪ್ಲುತ-ಒಂದು ಟಿಪ್ಪಣಿ

"ಹರಿಣಿಗೆ ಹರಿಣೀಪ್ಲುತವೆಂದೂ ಹೆಸರುಂಟು. ಹರಿಣಿ ವರ್ಣಗಣ ವೃತ್ತ. ಮಾತ್ರಾಗಣದಂತೆ ಅದನ್ನು ಹೇಳಲುಬಾರದು. ಅದರ ಲಯ ಸಮನಾಗಿ ಸಾಗುವುದಿಲ್ಲ. ಚರಣದಲ್ಲಿ ಅಲ್ಲಲ್ಲಿ ಲಯವು ಜೋಲಿಹೊಡೆಯುತ್ತದೆ. ಯತಿ ಇಲ್ಲದೆ ಅದರ ಆಟ ಸಾಗದು. ತಾಳಕ್ಕೆ ಒಡಂಬಡುವ ವೃತ್ತವಲ್ಲವಾದುದರಿಂದ ಗೇಯವಲ್ಲ. ಮಂತ್ರದಿಂದ ಉಸಿರು ಜಗ್ಗಿಬಿಟ್ಟು ಜಗ್ಗಿಬಿಟ್ಟು ಹರಿಣಿಯು ಉಚ್ಚರಿಸಬೇಕಾಗುತ್ತದೆ. ಕನ್ನಡ ಶಬ್ದಗಳು ಅದರಲ್ಲಿ ಸುಲಭವಾಗಿ ಹೊಂದಿಕೊಳ್ಳುವುದಿಲ್ಲ. ಲಯವಂತೂ ಕನ್ನಡದ ಜಾಯಮಾನಕ್ಕೆ ಬಲುದೂರ . . . ನಾಗವರ್ಮನು ಯತಿಯನ್ನು ಆರನೆಯ ಸ್ಥಾನ(ಷಟ್ಕ)ದಲ್ಲಿ ಹೇಳಿದ್ದಾನೆ. ಅವನ ಅಭಿಪ್ರಾಯದಲ್ಲಿ ಹರಿಣೀಪ್ಲುತಂ ಕರ್ಣಾಮೃತಂ! . . . ಅದರ ಲಯದಲ್ಲಿ ಸೊಗಸು ತೋರುವುದಿಲ್ಲ."

ಇದು ಡಾ|| ಡಿ. ಎಸ್. ಕರ್ಕಿ ಅವರ ಅಭಿಮತ. ಹರಿಣಿಗೂ ಶಿಖರಿಣಿಗೂ ಸಂಬಂಧವಿರುವುದರಿಂದ ಅದರ ಬಗೆಗೂ ಅವರ ಮಾತನ್ನು ಉದ್ಧರಿಸಬೇಕಾಗಿದೆ—

"ಹರಿಣಿಗಿಂತ ಶಿಖರಿಣಿ ಹೆಚ್ಚು ಸೊಗಸಾದ ವೃತ್ತ. ಅದರ ಲಯದಲ್ಲಿ ಬೆಡಗುಬಿನ್ನಾಣಗಳು ಮೈದೋರುತ್ತವೆ. ವರ್ಣಗಣವೃತ್ತವಾದರೂ ಒಂದಿಷ್ಟು ಗೇಯವಾಗಿದೆ . . . ಯತಿಯು ೬ನೆಯ(ರಸ)ಸ್ಥಾನದಲ್ಲಿ ಮತ್ತು ೧೧ನೆಯ (ರುದ್ರ) ಸ್ಥಾನದಲ್ಲಿ ಬರುತ್ತದೆ. ಶಿಖರಿಣಿಯ ಯತಿ ಅದರ ಲಯಕ್ಕೆ ನಿಜವಾಗಿಯೂ ಒಂದು ಶೋಭೆಯನ್ನುಂಟುಮಾಡುತ್ತದೆ. ಅದರ ಆರನೆಯ ಅಕ್ಷರದ ಯತಿ ಸ್ಥಾನದಲ್ಲಿ ಕಂಠದಿಂದ ಸೊಗಸಾದ ಸ್ವರತರಂಗ ಹೊರಡುತ್ತದೆ. ಅದಕ್ಕಾಗಿಯೇ ನಾಗವರ್ಮನು ಶಿಖರಿಣಿಯನ್ನು "ಜನಾನಂದಂ ಛಂದಂ" ಎಂದು ಹೊಗಳಿದ್ದಾನೆ."[1] ಇನ್ನೊಂದು ಕಡೆ ಹೀಗೆ ಹೇಳುತ್ತಾರೆ. "ಅದು ಒಂದು ಬೇರೆ ತಳಹದಿಯ ಮೇಲೆ ನಿಂತ ಲಯವಿರಲಿಕ್ಕೆ ಬೇಕು . . . ಲಯದ ಪ್ರಕಾರ ವಿರಾಮದ ಸ್ಥಳಗಳನ್ನು ಕೆಳಗಣ ಚರಣದಲ್ಲಿ ತೋರಿಸಿದೆ.

ಯಥೇಚ್ಛಂ ⁝ ಭೋಗ್ಯಂ ವೋ ⁝ ವನಮಿದಮಯಂ ಮೇ ⁝ ಸುದಿವಸಃ

ು — — — — — ುುುುು — — ುುು —

ಮಾತ್ರೆಗಳ ಎಣಿಕೆಯಂತೆ ಚರಣದ ಅಥವಾ ಲಯದ ನಾಲ್ಕೂ ಭಾಗಗಳಲ್ಲಿ ಅನುಕ್ರಮವಾಗಿ ೪, ೬, ೯, ೬ ಮಾತ್ರೆಗಳು ಸೇರಿವೆ. ಅಕ್ಷರಗಳ ಲೆಕ್ಕಾಚಾರದಂತೆ ಅನುಕ್ರಮವಾಗಿ ೩, ೩, ೭, ೪ ಅಕ್ಷರಗಳು ಸೇರಿವೆ. ಆದುದರಿಂದ ಇವು ಮಾತ್ರಾ ಗಣಗಳೂ ಅಲ್ಲ; ಅಕ್ಷರ ಗಣಗಳೂ ಅಲ್ಲ."[2]

---

1 ಕನ್ನಡ ಛಂದೋವಿಕಾಸ, ಪು. ೧೨೦, ೧೨೧.

2 ಅದೇ. ಪು. ೪೪, ೪೫.

ಇಲ್ಲಿ ಒಪ್ಪಬಹುದಾದುದೆಷ್ಟು, ಬಿಡಬಹುದಾದುದೆಷ್ಟು, ವಿಮರ್ಶಿಸಬೇಕಾದುದೆಷ್ಟು ಎನ್ನುವ ವಿವರಕ್ಕೆ ತೊಡಗುವುದಿಲ್ಲ. ಒಟ್ಟಿನಲ್ಲಿ ಮಥಿತಾರ್ಥ ಇಷ್ಟು. 'ಹರಿಣೀಪ್ಲುತದ ಲಯ ಕನ್ನಡದ ಜಾಯಮಾನಕ್ಕೆ ದೂರ. ತಾಳಕ್ಕೆ ಒಡಂಬಡುವ ವೃತ್ತವಲ್ಲ. ಲಯದಲ್ಲಿ ಸೊಗಸಿಲ್ಲ. ಇದಕ್ಕಿಂತ ಹೆಚ್ಚು ಸೊಗಸು ಶಿಖರಿಣಿ. ಒಂದಿಷ್ಟು ಗೇಯವಾಗಿದೆ. ಬೇರೊಂದು ತಳಹದಿಯ ಮೇಲೆ ನಿಂತ ಲಯವಿರಬೇಕು. ಇಲ್ಲಿನವು ಮಾತ್ರಾ ಗಣಗಳೂ ಅಲ್ಲ ; ಅಕ್ಷರ ಗಣಗಳೂ ಅಲ್ಲ '–ಇವಿಷ್ಟು ಹರಿಣೀಪ್ಲುತ ಹಾಗೂ ಶಿಖರಿಣಿಗಳ ಬಗ್ಗೆ ಇರುವ ಚರಿತ್ರೆ ಮತ್ತು ಅಸ್ಪಷ್ಟಕ್ಕಾಗಿ ಉಲ್ಲೇಖಿಸಲಾಗಿದೆ. ಪ್ರಥಮತಃ 'ಹರಿಣೀಪ್ಲುತ' ಎಂಬ ಹೆಸರಿನ ಬಗ್ಗೆ ವಿಚಾರ ಮಾಡಬೇಕಾಗಿದೆ. 'ಹರಿಣೀ' ಎನ್ನುವುದು ಇದರ ನಾಮಾಂತರ. ಆದರೆ ಅದರ ಬಗ್ಗೆ ಇನ್ನಷ್ಟು ವಿಷಯಗಳಿವೆ.

'ನಸಮರಸಲಗ' ಎಂಬ ಲಕ್ಷಣವುಳ್ಳ ವೃತ್ತಕ್ಕೆ ಹರಿಣೀ ಎಂದು ಸಂಸ್ಕೃತದಲ್ಲಿ ಹೆಸರು. ಇದಕ್ಕೆ ವೃಷಭಚರಿತ, ವೃಷಭಲಲಿತ ಎಂಬ ಹೆಸರುಗಳೂ ಇವೆ. ಆರು ಮತ್ತು ನಾಲ್ಕನೆಯ ಅಕ್ಷರಗಳಿಗೆ ಯತಿಯನ್ನು ಹೇಳಲಾಗಿದೆ.[3] ಇದಕ್ಕೆ ಸಂಸ್ಕೃತದಲ್ಲಿ 'ಹರಿಣೀಪ್ಲುತ' ಎಂಬ ಹೆಸರು ಇಲ್ಲ. ಆ ಹೆಸರಿನಲ್ಲಿ ವ್ಯವಹರಿಸುತ್ತಿದ್ದುದು ಕನ್ನಡದಲ್ಲಿ. ನಾಗವರ್ಮನು ಆರಕ್ಕೆ ಮಾತ್ರ ಯತಿ ಹೇಳಿದ್ದಾನೆ.[4] ಪಾದಾಂತ್ಯದಲ್ಲಿ ಯತಿ ಇರಬೇಕೆನ್ನುವುದು ವೃತ್ತಲಕ್ಷಣದಲ್ಲೇ ಅಧ್ಯಾಹಾರ.

ಇದೇ ಜಾತಿಗೆ ಸೇರಿದ ಇನ್ನೊಂದು ವೃತ್ತವಿದೆ. ಸಂಸ್ಕೃತದಲ್ಲಿ ಹರಿಣೀಪ್ಲುತವಿಲ್ಲದಿದ್ದರೂ 'ಹರಿಣಪ್ಲುತ'ವಿದೆ. 'ಮಸಜಜಭರ' ಎನ್ನುವುದು ಇದರ ಲಕ್ಷಣ. ಇದಕ್ಕೆ 'ಹರವರ್ತಕ' ಎನ್ನುವ ಹೆಸರೂ ಇದೆ.[5] ಸ್ವಲ್ಪ ವ್ಯತ್ಯಾಸದಿಂದ ಇದೇ ಜಾತಿಯ 'ಹರನರ್ತನ' ವೃತ್ತ ಸಿದ್ಧಿಸುತ್ತದೆ.[6] ಈ ಹರನರ್ತನವೇ ಕನ್ನಡದ ಮಲ್ಲಿಕಾಮಾಲೆ.[7] ಮಲ್ಲಿಕಾಮಾಲೆ ಅಥವಾ ಹರನರ್ತನದ ಆರಂಭದ '— ⏑' ಅನ್ನು '— —' ಆಗಿ ಮಾಡಿದರೆ ಹರಿಣಪ್ಲುತ ಅಥವಾ ಹರವರ್ತಕವಾಗುತ್ತದೆ. ಈ ಮಾರ್ಪಾಡಿನ ಉದ್ದೇಶ ಪರಿಣಾಮ ಬೇರೆ. ಆದರೆ ಒಂದು ಗಣದ ಮಾತ್ರಾ ಮೌಲ್ಯಕ್ಕೆ ಸಮನಾಗಿ ಮಾರ್ಪಾಡಾದರೆ ಅದು ಲಯವನ್ನು ಮಾರ್ಪಡಿಸುವುದಿಲ್ಲ. ಇದನ್ನು ತರಲ ಹಾಗೂ ಮಲ್ಲಿಕಾಮಾಲೆಗಳ ಹೋಲಿಕೆಯಿಂದ ತಿಳಿಯಬಹುದು. ಇಲ್ಲಿ '⏑⏑' ಎಂಬುದು '— ⏑' ಆಗಿ ತೋರುತ್ತದೆ. ಇದೇ ಬಗೆಯ ಮಾರ್ಪಾಡಿ

[3] ಜಯದಾಮನ್ ಪು. ೧೩೮., ಎಚ್. ಡಿ. ವೆಲಂಕರ್ ಅವರಿಂದ ಸಂಪಾದಿತ.

[4] "ಯತಿ ಷಟ್ಕದೊಳ್" ನಾಗವರ್ಮನ ಛಂದೋಂಬುಧಿ, ಪು. ೪೩, ಎಚ್. ಎಸ್. ರಾಮಸ್ವಾಮಿ ಅಯ್ಯಂಗಾರ್ ಅವರಿಂದ ಸಂಪಾದಿತ, ೧೯೪೬.

[5] ಜಯದಾಮನ್, ಪು. ೧೪೦.

[6, 7] ಮಲ್ಲಿಕಾಮಾಲೆಗೆ ಹರನರ್ತನವೆಂಬುದಾಗಿ ಛಂದೋಮಂಜರಿಕಾರ ಗಂಗಾದಾಸನು ಹೇಳಿರುವುದನ್ನು ಡಾ॥ ಕರ್ಕಿ ಅವರು ಗುರುತಿಸಿದ್ದಾರೆ. ಛಂದೋವಿ. ಪು. ೧೧೯.

ನಿಂದ ಹರವರ್ತಕ ಅಥವಾ ಹರಿಣಪ್ಲುತವೇ ಮಂದಾಕ್ರಾಂತ ವೃತ್ತವಾಗುತ್ತದೆ. ಇಲ್ಲಿ ಯಾವುದಕ್ಕೆ ಯಾವುದು ಮೂಲವೆಂದು ನಿರ್ಧರಿಸುವುದು ಸಾಧ್ಯವಿಲ್ಲ. ಪರಸ್ಪರ ಸಂಬಂಧವನ್ನು ಮಾತ್ರ ಗಮನಿಸಿ ಲಯವನ್ನು ಕಂಡುಕೊಳ್ಳುವುದು ಮುಖ್ಯ. ಈ ದೃಷ್ಟಿಯಿಂದ ಇವೆಲ್ಲವೂ ಪರಸ್ಪರ ಸಂಬಂಧಿ.

ಮೇಲೆ ಹೇಳಿದ ಹರಿಣಪ್ಲುತವಲ್ಲದೆ 'ನಭಭರ' ಎಂಬ ಲಕ್ಷಣವುಳ್ಳ ಇನ್ನೊಂದು ಹರಿಣಪ್ಲುತವಿದೆ. ಇದಕ್ಕೆ ದ್ರುತವಿಲಂಬಿತ, ಸುಂದರೀ ಎಂಬ ಹೆಸರುಗಳೂ ಇವೆ.[8] ನಮ್ಮಲ್ಲೂ ಇದು ದ್ರುತವಿಲಂಬಿತವೇ.[9] ಛಂದೋಂಬುಧಿಯಲ್ಲಿ 'ಸುಂದರೀ' ಇಲ್ಲ. ಆದರೆ 'ಸೌಂದರ' ವೃತ್ತದ ಆದಿಯಲ್ಲಿ ಇದರ ಹೊಳಹಿದೆ. ನಾಲ್ಕನೆಯ ಗಣದಲ್ಲಿ ಅಂತ್ಯ ದೀರ್ಘಗೊಂಡಿದೆ ಅಷ್ಟೆ.[10] 'ಹರಿಣಪ್ಲುತ'ವೆಂಬ ವಿಷಮವೃತ್ತವೂ ಒಂದುಂಟು. ಸಸಸಲಗ—ನಭಭರ ಎನ್ನುವುದು ಇದರ ಲಕ್ಷಣ[11] ಇಲ್ಲಿ ಈ ವಿಷಮವೃತ್ತವೊಂದನ್ನುಳಿದು ಉಳಿದುವು ಪರಸ್ಪರ ಸಂಬಂಧವುಳ್ಳವು. ಈ ವಿಷಮವೃತ್ತ ಮೂಲತಃ ಇದ್ದಿರಲಾರದು. ಇದರ ಎರಡನೆಯ ಭಾಗದಲ್ಲಿ 'ನಭಭರ' ಬಂದಿರುವುದರಿಂದಲೂ, ಅದಕ್ಕೆ ಹರಿಣಪ್ಲುತವೆಂಬ ಹೆಸರು ಇದ್ದುದರಿಂದಲೂ ಆ ಹೆಸರೇ ಇದಕ್ಕೂ ಬಂದಿರಬೇಕು. ಹೆಚ್ಚಿನ ವಿಮರ್ಶೆ ಇಲ್ಲಿ ಅಪ್ರಕೃತ.

ಒಟ್ಟಿನಲ್ಲಿ ಹರಿಣೀಪ್ಲುತ ಬೇರೆ; ಹರಿಣಪ್ಲುತ ಬೇರೆ. ಎರಡೂ ಭಿನ್ನ ಜಾತಿಯವು ಎನ್ನುವುದನ್ನು ಗಮನಿಸಬೇಕು. ಒಂದು ವೃತ್ತದ ಹೆಸರು ಲಯ ಲಕ್ಷಣಸಾಮ್ಯಗಳಿಂದ ಇನ್ನೊಂದು ವೃತ್ತದ ಹೆಸರಾಗಬಹುದು. ಆದರೆ ಎಲ್ಲೆಡೆಗಳಲ್ಲೂ ವೃತ್ತಗಳ ಹೆಸರುಗಳ ಸಾಮ್ಯವಿದ್ದಲ್ಲೆಲ್ಲ ಹೀಗೆಂದು ನಿರ್ಧರಿಸಲಾಗದು. ಕೆಲವೆಡೆ ಅತ್ಯಲ್ಪ ಸಾಮ್ಯವಾದರೂ ಇರುತ್ತದೆ. ವಿಷಮವೃತ್ತವಾದ ಹರಿಣಪ್ಲುತದಲ್ಲಿ ಆ ಹೆಸರಿನ ವೈಶಿಷ್ಟ್ಯ ಕಳೆದುಹೋಗಿದ್ದರೂ 'ನಭಭರ'ವೆಂಬುದಿರುವ ಕಾರಣ ಮಾತ್ರವೇ ಆ ಹೆಸರನ್ನು ಪಡೆಯಿತು. ಹಲವೆಡೆಗಳಲ್ಲಿ ಯಾವ ಸಂಬಂಧವೂ, ಸಾಮ್ಯವೂ ಇಲ್ಲದೆ ಹೆಸರುಗಳ ಗೊಂದಲಗಳುಂಟಾಗುವುದಿದೆ.

ಸಂಸ್ಕೃತದಲ್ಲಿ ನಾವು ಕಂಡಹಾಗೆ ದ್ರುತವಿಲಂಬಿತಕ್ಕೆ ಹರಿಣಪ್ಲುತವೆಂಬ ಹೆಸರಿತ್ತು. ಮಾತ್ರವಲ್ಲದೆ ಖಚರಪ್ಲುತವೆಂಬ ಇನ್ನೊಂದು ವೃತ್ತವೇ ಇದೆ. ಇವೆರಡನ್ನು ಒಪ್ಪಿದರೂ ಸಾಕು. ಆದರೆ 'ಪ್ಲುತ' ಎಂಬುದು ಏಕೆ ಇಲ್ಲಿದೆ?

---

8 ವೃತ್ತರತ್ನಾಕರಕಾರ ಭಟ್ಟಕೇದಾರನ ಹರಿಣಪ್ಲುತವಿದು. ಜಯದಾ. ಪು. ೧೨೯. ನಾಟ್ಯಶಾಸ್ತ್ರದ ಹರಿಣಪ್ಲುತ ಇದೇ. "ಅನುಕರೋತಿಗತೈರ್ಹರಿಣಪ್ಲುತಂ" ನಾಟ್ಯಶಾಸ್ತ್ರ, ೧೫–೬೯.

9 ಛಂದೋಂಬುಧಿ, ಪು. ೩೨.

10 ಛಂದೋಂಬುಧಿ, ಪು. ೪೯.

11 ಜಯದಾಮನ್, ಪು. ೧೫೦.

ಎಂಬ ಪ್ರಶ್ನೆ ಹುಟ್ಟಬಹುದು. ಪ್ಲುತ ತ್ರಿಮಾತ್ರಕವೆನ್ನುವುದನ್ನು ಎಲ್ಲರೂ ಬಲ್ಲರು. ಈ ದೃಷ್ಟಿಯಿಂದ ಈ ಹೆಸರುಗಳಿಗೆ ಏನಾದರೂ ಸಾರ್ಥಕ್ಯವಿದ್ದೀತೆ. ಅಥವಾ ಒಂದು ವೃತ್ತವೆಂದ ಮೇಲೆ ಅದಕ್ಕೊಂದು ಹೆಸರು. ಅದಕ್ಕೆ ಅರ್ಥವೇಕೆ?—ಎನ್ನುವಷ್ಟರಲ್ಲೇ ಮುಕ್ತಾಯವಾಗುತ್ತದೆಯೆ ಎಂಬುದನ್ನು ನೋಡಬೇಕು. ಅಂದರೆ ಎಲ್ಲ ವೃತ್ತಗಳ ಹೆಸರುಗಳಿಗೂ ಅರ್ಥ ಹುಡುಕಿ ಲಯಕ್ಕೆ ಅನ್ವಯಿಸುವುದು ಸರಿಯಲ್ಲ. ಬಹುಶಃ 'ಹರಿಣಪ್ಲುತ, ಖಚರಪ್ಲುತ'ಗಳಲ್ಲಿನ ಪ್ಲುತಶಬ್ದಕ್ಕೆ ಸಾರ್ಥಕ್ಯವಿದ್ದರೆ ಅದನ್ನು ತಿಳಿದ ಕನ್ನಡ ಕವಿಗಳು ಅದೇ ಬಗೆಯನ್ನು ಹರಿಣಿಯಲ್ಲೂ ಗುರುತಿಸಿ ಅದನ್ನು ಹರಿಣೀಪ್ಲುತವೆಂದು ಕರೆಯುವುದು ಸಾಧ್ಯ. ಇನ್ನೊಂದು ವಿಶೇಷವೆಂದರೆ ಸಂಸ್ಕೃತದಲ್ಲೂ 'ಹರಿಣಪ್ಲುತ'ಕ್ಕೆ ಕೈತಪ್ಪಿನಿಂದಾದರೂ 'ಹರಿಣೀಪ್ಲುತ'ವೆಂದು ಬಂದಿಲ್ಲ. ಅಲ್ಲಿ ಇದ್ದುದು ಎರಡೇ. ಮೊದಲನೆಯದಾಗಿ ಹರಿಣಪ್ಲುತ. ಇದೇ ಒಪ್ಪತಕ್ಕ ಹೆಸರು. ಇದಕ್ಕೆ ದ್ರುತವಿಲಂಬಿತ ಎಂಬ ಹೆಸರು ಹೆಚ್ಚು ಪ್ರಚುರವಾಯಿತು. ಎರಡನೆಯದಾಗಿ ಹರಿಣಿ, ಅಷ್ಟೆ. ಸಂಸ್ಕೃತದಲ್ಲಿ 'ಹರಿಣಪ್ಲುತ' ಎಂಬ ಹೆಸರು ಕಣ್ಮರೆಯಾದುದರಿಂದ ಕನ್ನಡದಲ್ಲಿ 'ಹರಿಣಿಪ್ಲುತ' ಪ್ರಚುರವಾಯಿತೆನ್ನಲಾಗದು. 'ಹರಿಣೀ' ವೃತ್ತಕ್ಕೆ 'ಪ್ಲುತ' ಶಬ್ದದ ಸಮಾವೇಶ ಉದ್ದೇಶಪೂರ್ವಕವಾಗಿ ಆದದ್ದು. 'ಹರಿಣೀಪ್ಲುತ'ದ ವಿಚಾರಕ್ಕೆ ಮುನ್ನ 'ಪ್ಲುತ' ವಿಚಾರವನ್ನು ಅತಿ ಸಂಕ್ಷಿಪ್ತವಾಗಿಯಾದರೂ ಉಲ್ಲೇಖಿಸಬೇಕಾಗಿದೆ.[12]

ಭರತನಿಂದ ಆರಂಭಿಸಿ ನಿನ್ನೆಯವರೆಗೆ ಛಂದಶ್ಶಾಸ್ತ್ರವನ್ನು ಬರೆದವರೆಲ್ಲರೂ ಲಘು ಗುರುಗಳ ಜೊತೆಗೆ ಪ್ಲುತವನ್ನೂ ಹೇಳಿದ್ದಾರೆ. ಸದ್ಯ ಕಾಕಪಾದವನ್ನು

---

12 ಲಯವಿವೇಚನೆಯಲ್ಲಿ ಇಂದು ಇದೊಂದು ದೊಡ್ಡ ತೊಡಕು. ಇಲ್ಲಿ ಯತಿ ವಿಚಾರವನ್ನು ಏನೇನೂ ವಿವರಿಸಲು ಸಾಧ್ಯವಾಗಿಲ್ಲ. ಪ್ಲುತ, ಯತಿ, ತ್ವರಿತ, ಮಾತ್ರೆಗಳನ್ನು ಸಾಕಷ್ಟು ವಿವರಿಸಿದರೆ ಮೂಗಿಗಿಂತ ಮೂಗುತಿ ಭಾರವಾಗುತ್ತದೆ. ವಿವರಿಸದಿದ್ದರೆ ಲಯವಿವೇಚನೆ ಅರ್ಥವಾಗತಕ್ಕದ್ದಾಗುವುದಿಲ್ಲ. ಛಂದಸ್ಸಿನ ಮೂಲತತ್ತ್ವಗಳು ನಿರ್ಧರವಾಗದೆ ಲಯವಿವೇಚನೆ ಅರೆಕೆಯಾಗುತ್ತದೆ. ಉದಾಹರಣೆಗೆ 'ಕ' ಎನ್ನುವುದು ಒಂದು ಮಾತ್ರೆಯಲ್ಲವೆಂದಂದು ಅದರ ಆಧಾರದ ಮೇಲೆ ಮುಂದುವರಿದರೆ ಅದನ್ನೊಪ್ಪಲು ಹೇಗೆ ಸಾಧ್ಯ? ಮೊದಲು ಯಾವುದು ಆಧಾರವೋ ಅದರ ಸಾಧುತ್ವ ಸ್ಥಾಪಿತವಾಗಬೇಕು. ಹಾಗೆಯೇ 'ಯತಿ' ವಿಚಾರ. ಯತಿ ಲಯದ ಗತಿಯಲ್ಲಿ ಅತ್ಯಮೂಲ್ಯ. ಅದನ್ನು ಎಲ್ಲರೂ ಒಪ್ಪುತ್ತಾರೆ. ಆದರೆ ಎಲ್ಲೆಲ್ಲಿ ಯತಿ ಏಕೆ ಬರಬೇಕು? ಅದರ ಪರಿಣಾಮವೇನು? ಯತಿಯ ಬಗೆಯೆಷ್ಟು? ಇವು ನಿರ್ಧರವಾಗಿಲ್ಲ. ಕಾವ್ಯಶಿಕ್ಷೆ, ಕಾವ್ಯಮೀಮಾಂಸೆ ಎರಡು ಬಗೆ. ಆದರೆ ಛಂದಸ್ಸಿನ ಇದುವರೆಗಿನ ಶಾಸ್ತ್ರ 'ಶಿಕ್ಷೆ'ಯಾಗಿದೆಯೇ ಹೊರತು 'ಮೀಮಾಂಸೆ'ಯಾಗಿಲ್ಲ. ಆದುದರಿಂದಲೇ ವೃತ್ತವೊಂದು ಹೀಗಿರಬೇಕು ಎನ್ನುವುದು ಸಿಗುತ್ತದೆ. ಏಕಿರಬೇಕು ಎನ್ನುವುದು ಸಿಗುವುದಿಲ್ಲ. ಇದು ಕನ್ನಡದಲ್ಲಿ ಮಾತ್ರವಲ್ಲ ಸಂಸ್ಕೃತದಲ್ಲೂ. ಛಂದಸ್ಸಿನ ಮೂಲತತ್ತ್ವಗಳನ್ನು ವಿವರಿಸುವ 'ಛಂದೋಮೀಮಾಂಸೆ'ಯೊಂದು ಆಗತ್ಯವಾಗಿ ತಳಹದಿಯನ್ನು ಒದಗಿಸಬೇಕಾಗಿದೆ.

ಹೇಳಲಿಲ್ಲ. ಸಂಗೀತದಲ್ಲಿ ನಾಲ್ಕನೆಯ ಒಂದಂಶ ಮಾತ್ರೆಯನ್ನೂ ಅಲಕ್ಷಿಸುವುದಿಲ್ಲ. ಅದಕ್ಕೆ ಅನುದ್ರುತ ಎನ್ನುತ್ತಾರೆ. ಎರಡು ಅನುದ್ರುತಗಳಿಗೆ, ಅಂದರೆ ಅರ್ಧಮಾತ್ರೆಗೆ ದ್ರುತವೆಂದು ಹೆಸರು. ಎರಡು ದ್ರುತಗಳಿಂದ ಒಂದು ಲಘು. ಇದರ ಎರಡರಷ್ಟು ಗುರು. ಸಂಗೀತದಲ್ಲಿ ಪ್ಲುತ ತ್ರಿಮಾತ್ರಕವೆ. ಇದಕ್ಕೆ ಸಹೋದ್ಭವ, ದೀಪ್ತ, ತ್ರಿಯಂಗ ಎಂಬ ಹೆಸರುಗಳೂ ಇವೆ. ಕಾಕಪಾದ ನಾಲ್ಕು ಲಘುಗಳನ್ನು ತೆಗೆದುಕೊಳ್ಳುತ್ತದೆ. ಇದಕ್ಕೆ ಹಂಸಪಾದ, ನಿಶ್ಶಬ್ದ, ಚತುರ್ಲಘು ಎಂದು ನಾಮಾಂತರಗಳು. ೪-೫ ಮಾತ್ರೆಗಳು ಬರುವ ಸಂಕೀರ್ಣಜಾತಿಯಲ್ಲಿ ಆ ಒಟ್ಟು ೯ ಮಾತ್ರೆಗಳಿಗೆ ಮೂರು ಪ್ಲುತಗಳನ್ನು ಕಲ್ಪಿಸಿದರೆ ರೌರವನರಕವೇ ಕಾದಿರುತ್ತದಂತೆ. ಆದರೆ ಈ ಸಮಸ್ಯೆಗಳು ನಮ್ಮ ಛಂದಸ್ಸಿನಲ್ಲಿ ಇಲ್ಲದಿರುವುದು ಸುದೈವವೇ.

ನಮ್ಮಲ್ಲಿ ಪ್ಲುತ ತತ್ವಶಃ ತ್ರಿಮಾತ್ರಕವಾದರೂ ವ್ಯವಹಾರ ಎರಡು ಮಾತ್ರೆಗಳಾಗಿಯೇ. ಅದಕ್ಕೆ ದೀರ್ಘದ, ಗುರುವಿನ ಬೆಲೆ. ನಾಗವರ್ಮ ಕು, ಕೂ, ಕೂ ಎಂದು ಕೋಳಿಯನ್ನು ಕೂಗಿಸಿದಾಗಲೂ ಅದು ಗುರುವನ್ನು ಮೀರಲಿಲ್ಲ, ಪ್ಲುತಕ್ಕೆ ಏರಲಿಲ್ಲ. ಆದರೆ ವೇದದಲ್ಲಿ ಪ್ಲುತ ಪ್ರಯುಕ್ತವೇ ಆಗಿದೆ. ಮಾತ್ರವಲ್ಲ ಇಲ್ಲಿ ಪ್ಲುತ ಬಾಹಿರವಾಗಿರುವುದು ಅಪಭ್ರಂಶಕಾರಣವಾಗುತ್ತದೆ. ಇಂಥ ಅಪಭ್ರಂಶ ಪ್ರಯೋಗಗಳಿಂದ ನಾವು ಮ್ಲೇಚ್ಛರಾಗಬಾರದೆಂದೇ ವ್ಯಾಕರಣ ಕಲಿಯಬೇಕು ಎಂದು ಪತಂಜಲಿಯ ಮಹಾಭಾಷ್ಯ ಆದೇಶ ನೀಡುತ್ತದೆ.[13] ಆದರೆ ಲಯದ ದೃಷ್ಟಿಯಿಂದ ಈ ಪ್ಲುತಕ್ಕೆ ಏನು ಬೆಲೆ ಎನ್ನುವುದು ತೀರ್ಮಾನವಾಗಿಲ್ಲ.

ಒಂದು ಮಾತ್ರೆಯ ಲಘು, ಎರಡು ಮಾತ್ರೆಗಳ ಗುರು ಇವೆರಡರ ಹೊರತು ಪ್ಲುತ ಅಕ್ಷರ ವೃತ್ತಗಳಲ್ಲಾಗಲಿ, ಮಾತ್ರಾವೃತ್ತಗಳನ್ನಾಗಲಿ ಕಾಣುವುದಿಲ್ಲವೆನ್ನುವ ಅಭಿಪ್ರಾಯ ಈಗ ರೂಢವಾಗಿದೆ. ಪ್ಲುತ ಏನಿದ್ದರೂ ವೈದಿಕ ಛಂದಸ್ಸಿಗೇ ಮುಗಿಯಿತು. ವೈದಿಕ ಛಂದಸ್ಸಿನ ಲಯ ನಿಲುಕಲಿಲ್ಲ; ಹೀಗಾಗಿ ಅಲ್ಲಿನ ಪ್ಲುತದ ಪರಿಚಯವೂ ಆಗಲಿಲ್ಲ. ಆದರೆ ಹೊಸಗನ್ನಡ ಛಂದಸ್ಸಿನಲ್ಲಿ ಸಾಕಷ್ಟು ಉದಾಹರಣೆಗಳು ಸಿಗುತ್ತವೆ.

ಅಕ್ಷರ ವೃತ್ತಗಳಲ್ಲಿ ಮಾತ್ರಾಲಯವಿದೆ ಎನ್ನುವುದನ್ನು ಪ್ರಾಚೀನರಾರೂ ಹೇಳಿಲ್ಲ. ಹಾಗೆಂದು ಪ್ರಾಚೀನರಿಗೆ ತಿಳಿದಿರಲಿಲ್ಲವೆಂದಲ್ಲ. ಆದರೆ ಅದನ್ನು ಕಂಡು ಗುರುತಿಸುವ ಕಾರ್ಯ ನಡೆದುದು ಈಚೆಗೆ. 'ಜಾತಿ' ಯಾವಾಗ ನಿಷ್ಪನ್ನವಾಯಿತೋ ಆಗಲೇ ತ್ವರಿತ ವಿಲಂಬ ಕಾರ್ಯಗಳ ಪರಿಚಯವೂ ಇದ್ದಿತೆನ್ನಬಹುದು. ಒಂದು ಲಘ್ವಕ್ಷರ ಗುರುವಾಗುವುದು, ಅಥವಾ ಒಂದು ಲಘ್ವಕ್ಷರ ಇಲ್ಲವೆ

---

[13] ಪ್ರಭಾತಚಂದ್ರಚಕ್ರವರ್ತಿ ಅವರ ಅನುವಾದ, The Indian Historical Quarterly, Vol. I, No. 4, 1925, p. 707.

ವಾಗಿಯೇ ನಡೆಯುತ್ತದೆ. ಲಯದ ಆಯಕಟ್ಟು ಕೆಡಬಾರದೆಂದೇ ಅವು ನಡೆಯುವುದಾಗಿದೆ. ಆದುದರಿಂದ ಮೊದಲು ಲಯವನ್ನು ಕಂಡುಕೊಳ್ಳಬೇಕು. ಮಾತ್ರಾಬಂಧಗಳಲ್ಲಿ ಮಾತ್ರವಲ್ಲ, ಅಕ್ಷರವೃತ್ತಗಳಲ್ಲೂ ಪ್ಲುತಕಲ್ಪನೆಗೆ ಮುನ್ನ ಲಯದ ಹೊಳಹನ್ನು ಗುರುತಿಸಿಕೊಳ್ಳಬೇಕಾಗುತ್ತದೆ. ಮಾತ್ರಾಬಂಧಗಳಲ್ಲಿ ಒಂದು ಜಾತಿಯ ಗಣ ಆವೃತ್ತಗೊಳ್ಳುತ್ತದೆ. ಮಾತ್ರಾಲಯ ಸಿಗುವಂಥ ವೃತ್ತಗಳಲ್ಲಾದರೂ ಈ ಆವೃತ್ತಿಯಿಂದಲೇ ಗೇಯತೆ ಒದಗಿರುವುದು. ಆದರೆ ಎಷ್ಟೋ ವೃತ್ತಗಳಲ್ಲಿ ಲಯ ಇನ್ನೂ ಗುರುತಿಸಲ್ಪಟ್ಟಿಲ್ಲ. ಇದಕ್ಕಾಗಿ ಅವನ್ನು ಅನಾವರ್ತನೀ ಎಂದು ಕರೆದು ಛಂದಶ್ಶಾಸ್ತ್ರಜ್ಞರು ಸಮಾಧಾನಪಟ್ಟುಕೊಂಡರು. ಇಲ್ಲಿ ಎಲ್ಲ ವೃತ್ತಗಳೂ ಮಾತ್ರಾಲಯ ಬದ್ಧವಾಗಿದೆ ಎಂದು ಸಾಧಿಸುವುದು ಅಸಾಧ್ಯವಲ್ಲದಿದ್ದರೂ ನಮಗೆ ಪ್ರಕೃತವಲ್ಲ. ಇಲ್ಲಿ ಹರಿಣೀಪ್ಲುತಕ್ಕೆ ಮಾತ್ರ ದೃಷ್ಟಿಯನ್ನು ಪರಿಮಿತಗೊಳಿಸಿಕೊಳ್ಳುವುದು ಉಚಿತವೆನಿಸಿದೆ.

ಅಕ್ಷರ ವೃತ್ತಗಳಲ್ಲಿ ೩–೪ ಮಾತ್ರೆಗಳ ಲಯ ಅಪರೂಪವಲ್ಲ. ಅದನ್ನು ಕನ್ನಡ ಕೈಪಿಡಿಕಾರರೂ, ಅನಂತರ ಡಾ|| ಡಿ. ಎಸ್. ಕರ್ಕಿ ಅವರೂ ಮಲ್ಲಿಕಾಮಾಲೆ ಹಾಗೂ ತರಲ ವೃತ್ತಗಳಲ್ಲಿ ಗುರುತಿಸಿ ಹೇಳಿದ್ದಾರೆ.[15] ಆದರಿಂದಲೇ ಇಲ್ಲಿ ಪ್ರಾರಂಭಿಸಬಹುದು. ಅಥವಾ ಈ ವೃತ್ತಕ್ಕಿಂತಲೂ ಚಿಕ್ಕದೊಂದನ್ನು ಮೊದಲು ಉದಾಹರಿಸೋಣ.

೧. ತ್ರಿದಶ|ಚಂದ್ರಹು|ತಾಶ|ನಾನಿಲ|ರುಂಲ|ಗೆಂ
 ೩ ೪ ೩ ೪ ೩ ೪

—ಕುಸುಮಾಂಘ್ರಿಪವೃತ್ತ[16]

೨. ಮಲ್ಲಿಕಾ]ಮಾಲೆ|ಯೆಂಬುದು|ನಿಶ್ಚ|ಯಂ ಕವಿ|ರಾಜ|ಹಂಸವಿ|ನಿರ್ಮಿ|ತಂ

—ಮಲ್ಲಿಕಾಮಾಲೆ[17]

೩. ತರಳ|ಲೋಚನೆ|ನಾಮ|ದಿಂ ಕವಿ|ರಾಜ|ಹಂಸವಿ|ನಿರ್ಮಿ|ತಂ(?)

—ತರಲ[18]

೪. ಗುರು ಜ|ಘನೆಲಲಿ|ತಗತಿ|ಎಂದುಂ|ಜನಾ|ನಂದಂ|ನಾಕಿ|ಗಂಪೇ|ಟ್ಟಿಂ

—ಲಲಿತಗತಿ[19]

---

15 ತರಲ ವೃತ್ತದಲ್ಲಿ ಪ್ರಥಮ ಗಣದ ಮೂರು ಮಾತ್ರೆಗಳು ಮೂರು ಲಘುಗಳಾಗಿ ಅವು ತರಲತರಲವಾಗಿ ಇರುವುದರಿಂದ 'ತರಲವೃತ್ತ'ವೆಂಬ ಹೆಸರು ಬಂದಿತೇನೊ ಎಂಬ ಹೊಸ ಅಂಶವೊಂದನ್ನು ಡಾ|| ಕರ್ಕಿ ಅವರು ಊಹಿಸಿದ್ದಾರೆ. ಬಹುಮಟ್ಟಿಗೆ ಹಾಗಿರಲಾರದು. ಹೀಗಿದ್ದರೆ ಚಂಪಕ ಮಾಲೆಯೂ ಮತ್ತು ಅದರಂಥ ಅನೇಕ ವೃತ್ತಗಳೂ ತರಲವಾಗಬಹುದಿತ್ತು. ದ್ರುತವಿಲಂಬಿತದ ಆದಿಯೂ ತರಲವಾಗಿಯೇ ಇದೆ.

16 ಛಂದೋಂಬುಧಿ, ಪು. ೩೮.

17 ಅದೇ. ಪು. ೪೩.

18 ಅದೇ. ಪು. ೪೪.

19 ಅದೇ. ಪು. ೪೭.

ಕೆಲವು ಮಾತುಗಳಲ್ಲಿ ಇದನ್ನು ವಿವೇಚಿಸಬಹುದೆನಿಸುತ್ತದೆ. ಮೂರು ನಾಲ್ಕರ ಲಯಕ್ಕೆ ಇವಿಷ್ಟೇ ಉದಾಹರಣೆಗಳಲ್ಲ. ಆ ಲಯದ ಸಾಕಷ್ಟು ಪರಿಚಯ ಪ್ರಾಚೀನರಲ್ಲಿತ್ತು ಎನ್ನುವುದನ್ನು ಗಮನಿಸಬೇಕು. ಮಲ್ಲಿಕಾಮಾಲೆ ಹಾಗೂ ತರಲ ವೃತ್ತಗಳಲ್ಲಿನ ವ್ಯತ್ಯಾಸವನ್ನು ಎಲ್ಲರೂ ಬಲ್ಲರು. ಆದರೆ ಅದಕ್ಕಿಂತಲೂ ಹಿರಿಯ ವೃತ್ತವಾದ ಲಲಿತಗತಿಯನ್ನು ನೋಡಬೇಕು. ೩–೪ ಅಕ್ಷರಗಳ ಗಣವನ್ನು 'ಜನಾ–ನಂದಂ' ಎಂದು ರೂಪಿಸಿಕೊಂಡಿರುವುದು ಇಲ್ಲಿ ವಿಶೇಷ ಸಂಗತಿಯಾಗಿದೆ. ಸಾಮಾನ್ಯರೂಪಗಳಲ್ಲಿ ⏑⏑⏑/–⏑⏑;—⏑/—⏑⏑; ⏑⏑⏑/⏑⏑⏑⏑ ಎಂಬವು ಇಲ್ಲಿ ಕಾಣಿಸಿಕೊಳ್ಳುತ್ತವೆ. ಸಾಧ್ಯರೂಪಗಳಲ್ಲಿ ⏑⏑⏑/⏑⏑—; —⏑/⏑⏑— ಎಂಬುದನ್ನು ಭಾವಿಸಬಹುದು. ⏑⏑⏑/— — ಎಂಬುದೂ ಲಲಿತಗತಿಯ ಅಂತ್ಯದಲ್ಲಿ ಸಿಗುತ್ತದೆ. ಅದು —⏑/— — ಎಂದೂ ಆದರೆ ಲಯ ಕೊಡುವುದಿಲ್ಲ. ಈ ನಾಲ್ಕು ವೃತ್ತಗಳಲ್ಲೂ ಅಂತ್ಯಾಕ್ಷರವೊಂದನ್ನುಳಿದು ಪ್ಲುತವಿಲ್ಲ. ವೃತ್ತಗಳಲ್ಲಿ ಪಾದದ ಅಂತ್ಯಾಕ್ಷರಗಳ ಬೆಲೆಯನ್ನು ಕುರಿತು ಪ್ರತ್ಯೇಕವಾಗಿಯೇ ವಿಚಾರಮಾಡಬೇಕಾಗುತ್ತದೆ.

ಈಗ ಹರಿಣೀ ಅಥವಾ ಹರಿಣೀಪ್ಲುತವನ್ನು ಉದಾಹರಿಸುತ್ತೇವೆ. ತರಲದೊಡನೆ ಹೋಲಿಸಿ.

ಲಲಿತ|ಹರಿಣೀ|ನೇತ್ರೇ ಕ|ರ್ಣಾಮೃ|ತಂಹರಿ|ಣೀಪ್ಲು|ತಂ[20]
೩ ೪ ೩ ೪ ೩ ೪

ತರಳ|ಲೋಚನೆ|ನಾಮದಿಂ ಕವಿ|ರಾಜ|ಹಂಸವಿ|ನಿರ್ಮಿ|ತಂ(?)
೩ ೪ ೩ ೪ ೩ ೪

ಹರಿಣೀಪ್ಲುತದಲ್ಲಿ ಆದ್ಯಂತಗಳೆರಡೂ ೩–೪ರ ಲಯಕ್ಕೆ ಹೊಂದುತ್ತದೆ. ಆರಂಭದಲ್ಲಿ ಎರಡನೆಯ ಗಣ ಚತುರ್ಮಾತ್ರಕವಾಗಿದ್ದು ತರಲದಲ್ಲಿ ಆದಿ ದೀರ್ಘವಾಗಿದ್ದರೆ ಹರಿಣಿಯಲ್ಲಿ ಅಂತ್ಯ ದೀರ್ಘವಾಗುತ್ತದೆ. ಹರಿಣಿಯ ಅಂತ್ಯ ಸಂಪೂರ್ಣ ತರಲವೇ, ಅಥವಾ ಮಲ್ಲಿಕಾಮಾಲೆಯೇ ಆಗಿದೆ. ಕ್ಲೇಶವಿರುವುದು ಮಧ್ಯೆ, ಮೂರನೆಯ ಗಣದಲ್ಲಿ. ಇಲ್ಲಿ ನಮಗೆ ಬೇಕಾದುದು ೩+೪ ಒಟ್ಟು ೭ ಮಾತ್ರೆಗಳು. ಇರುವುದು ೬ ಮಾತ್ರೆಗಳು. ಆದ್ದರಿಂದ ಇದನ್ನು ಸರಿದೂಗಿಸಲು ಆರಂಭದ ಅಕ್ಷರಕ್ಕೆ ಒಂದು ಮಾತ್ರೆಯ ಹೆಚ್ಚಿನ ಕಾಲವನ್ನು ಕೊಡಬೇಕು. ಆಗ ೩+೪ ಆಗುತ್ತದೆ ೨+೪ಕ್ಕೆ ಪ್ರತಿಯಾಗಿ. ಇದನ್ನು ಹೀಗೆ ತೋರಬಹುದು.

೩
ಲಲಿತ|ಹರಿಣೀ|ನೇ|ತ್ರೇ ಕ|ರ್ಣಾಮೃ|ತಂ ಹರಿ|ಣೀಪ್ಲು|ತಂ
೩ ೪ ೩ ೪ ೩ ೪ ೩ ೪

---

[20] ಅದೇ, ಪು. ೪೩.

ಕೆಲವು ಪ್ರಯೋಗಗಳಲ್ಲಿ ಈ ಪ್ಲುತವನ್ನು ಕಲ್ಪಿಸಿ ಪರಿಣಾಮವನ್ನು ಅನುಭವಿಸಬಹುದು.

೩ ೪ ೩ ೪ ೩ ೪ ೩ ೪
೧. ಯದಿಜ|ವಿಹಿತಂ|ಸ್ಯಾ|ದತ್ಯ|ಷ್ಟಿಪ್ರ|ಯೋಗಸು|ಶಾಸ್ತ್ರ|ಯಂ
ವೃಷಭ|ಲಲಿತಂ|ವೃ|ತ್ತಂ ಜ್ಞೇ|ಯಂತ|ಥಾ ಹರಿ|ಣೀತಿ|ವಾ॥[21]

೩
೨. ಕುಲಿಶಧರವಾ|ತೋರ್ವೀವ್ವೈ|ಶ್ವಾನರಾನಿಲರಂತ್ಯದೊಳ್
೩
ನೆಲಸೆ ಹರಿಯುಂ|ಕಾಮಪ್ರ|ಧ್ವಂಸಿಯುಂ ಯತಿ ಷಟ್ಕದೊಳ್
೩
ನಿಲೆ ಬಗೆದು ಕೇಳ್|ವೃತ್ತಂ ವೃ|ತ್ತಸ್ತನದ್ವಯ ರಾಜಿತೇ
೩
ಲಲಿತ ಹರಿಣೀ|ನೇತ್ರೇ ಕ|ರ್ಣಾಮೃತಂ ಹರಿಣೀಪ್ಲುತಂ[22]

೩
೩. ಕುಮುದನಯನಂ|ಕುಂದಸ್ಮೇ|ರಂಲಸದ್ದ್ವಿಸಜಾನನಂ
೩
ಸಮದಗಮನಂ|ಸಾಮೋದಾಂ|ಗಂ ಸುಧಾ ಮಧುರಾಧರಂ[23]

೩
೪. ಕಮಲನಯನಂ|ಕಂಬುಗ್ರೀ|ವಂ ಘನ ಸ್ತನ ಮಂಡಳಂ
೩
ಭ್ರಮರ ರುಚಿಮತ್|ಕೇಶಂ ಬಿಂ|ಬಾಧರಂ ನಳಿತೋಳ್ ಬೆಡಂ[24]

೩
೫. ಪೊಡೆವ ಸಿಡಿಲಿಂ|ಮಿಂಚಿಂ ಬೋ|ರೆಂದು ಬೀಸುವ ಗಾಳಿಯಿಂ
೩
ಕೆಡೆವ ಮರದಿಂ|ಪಾವಿಂ ತೇ|ಟಿಂದಿರುಂಪೆಗಳಂ ಮನಂ
೩
ಗೆಡಿಪ ಪುಲಿಯಿಂ|ರೌದ್ರಾಕಾ|ರಂಗಳಿಂ ಬಿಡೆ ಪಾಯ್ವ ಬ
೩
ಲ್ದಡಿಗ ಮರುಳಿಂ|ಕಿರ್ಚಿಂ ಕಾ|ಡಾನೆಯಿಂದಳಿವಿಂಡಿನಿಂ॥

21 ನಾಟ್ಯಶಾಸ್ತ್ರ, ಭರತ, ೧೫-೧೦೫.
22 ಛಂದೋಂಬುಧಿ, ಪು. ೪೩.
23 ರಾಜಶೇಖರ ವಿಲಾಸಂ, ೩-೧೮; ಪು. ೫೫, ಕರಿಬಸವಶಾಸ್ತ್ರಿಗಳಿಂದ ಸಂಪಾದಿತ ೧೯೩೦.
24 ಡಾ॥ ಕರ್ಕಿ ಅವರು ಉದಾಹರಿಸಿದ್ದಾರೆ, ಛಂದೋವಿ. ಪು. ೧೨೦; (ಕಾವ್ಯಾವಲೋಕನ, ಪದ್ಯ ೬೭೮).

ಜಡಿದು ಕರದಿಂ|ಪೋಪೋಪೋ|ಗೆಂದು ನೂಂಕುವ ಬೇಡರಿಂ
ಬಡಿಯಲಿಱಿಯಲ್|ಪುಯ್ಯಲ್ಮೇ|ಲ್ವೀಟ್ವಿ ರಾಕ್ಷಸ ತಂಡದಿಂ
ದಡದರ್ಪ ತನುವಂ|ಮತ್ತಂ ನು|ಗ್ಗಾಗೆ ತಿಂಬ ಕಡಂದುಱಿಂ
ಕೆಡೆವ ಮರದಿಂ|ನೂಂಕುತ್ತೊ|ತ್ತುತ್ತೆ ಬಪ್ಪಪೊನಲ್ಗಳಿಂ||[25]

ಇಲ್ಲೆಲ್ಲ ಪ್ಲುತ ಸ್ಪಷ್ಟವಾಗಿರುವುದನ್ನು ಕಾಣಬಹುದು. ಆರು ಅಕ್ಷರಗಳಿಗೆ ಯತಿ ಬಂದು, ಅನಂತರ ಪ್ಲುತಾಕ್ಷರಕ್ಕೆ ಹಾದಿಮಾಡಿಕೊಡುತ್ತದೆ. ಯತಿ ಬಂದ ಮೇಲೆ ಅದರ ಮುಂದಿನ ಶಬ್ದ ಭಿನ್ನವಿರಬೇಕಾಗುತ್ತದೆ. ಹೀಗೆ ಶಬ್ದದ ಆರಂಭವೂ ಮತ್ತು ಆ ಶಬ್ದದ ಆದ್ಯಕ್ಷರ ಪ್ಲುತವಾಗಿರುವುದೂ ಸಂಗತವಾಗಿದೆ. ಧರ್ಮಾಮೃತದ ಉದಾಹರಣೆಗಳಲ್ಲಿ ಪ್ಲುತವು ಅರ್ಥದ ಮೇಲೂ ಪ್ರಭಾವ ಬೀರಿರುವುದನ್ನು ಗಮನಿಸಬಹುದು.

ಸಂಸ್ಕೃತದ ಹರಿಣಿಯಲ್ಲಿ ಷಟ್ಕಕ್ಕೆ ಮಾತ್ರವಲ್ಲದೆ ಅದರ ಮುಂದೆ ಮತ್ತೆ ನಾಲ್ಕು ಅಕ್ಷರಗಳಿಗೆ ಇನ್ನೊಂದು ಯತಿಯನ್ನು ಹೇಳಿರುವುದನ್ನು ಹಿಂದೆಯೇ ಉಲ್ಲೇಖಿಸಲಾಗಿದೆ. ಈ ದೃಷ್ಟಿಯಿಂದಲೂ ಈ ಉದಾಹರಣೆಗಳನ್ನು ಗಮನಿಸಬೇಕು. ಸಂಸ್ಕೃತದ ಉದಾಹರಣೆಯಲ್ಲಿ ಇದು ಸ್ಪಷ್ಟವಾಗಿ ಇದೆ. 'ಯದಿಚವಿಹಿತಂ, ವೃಷಭಲಲಿತಂ' ಎಂದು ಆರು ಆರು ಅಕ್ಷರಗಳಿಗೆ ಯತಿ ಬಂದು ಶಬ್ದರೂಪ ನಿಂತಮೇಲೆ 'ಸ್ಯಾದತ್ಯಷ್ಟಿ, ವೃತ್ತಂಜ್ಞೇಯಂ' ಎಂದು ಕ್ರಮವಾಗಿ ನಾಲ್ಕು ಅಕ್ಷರಗಳು ಬಂದು, ಶಬ್ದರೂಪ ಪುನಃ ನಿಂತು, ಯತಿ ಕಲ್ಪಿತವಾಗಿ ಅನಂತರ 'ಪ್ರಯೋಗ', 'ತಥಾ' ಎಂದ ಹೊಸ ಶಬ್ದವೇ ಆರಂಭವಾಗಿದೆ.

ಕನ್ನಡದಲ್ಲಿ ಈ ಎರಡನೆಯ ಯತಿಯನ್ನು ಹೇಳಿಲ್ಲ. ಛಂದೋಂಬುಧಿಕಾರ ಮೊದಲಿನೆರಡು ಪಾದಗಳಲ್ಲಿ ಈ ಯತಿಯನ್ನು ತಂದಿಲ್ಲದಿರುವುದು ಗಮನಾರ್ಹ. ಆದರೆ ಅನಂತರದ ಎರಡು ಪಾದಗಳಲ್ಲಿ 'ನೇತ್ರೇ ಕರ್ಣಾ,' 'ವೃತ್ತಂ ವೃತ್ತಃ' ಎಂದು ತಂದಿದ್ದಾನೆ. 'ಧರ್ಮಾಮೃತ'ದಲ್ಲಿ ಈ ಯತಿಯನ್ನು ಅಲಕ್ಷಿಸಲಾಗಿದೆ. ಆದರೆ ೩, ೪ನೆಯ ಉದಾಹರಣೆಗಳಲ್ಲಿ 'ಕುಂದಸ್ಮೇರಂ, ಸಾಮೋದಾಂಗಂ, ಕಂಬುಗ್ರೀವಂ,' ಮೊದಲಾಗಿ ಯತಿಕಲ್ಪಿತವಾಗಿ ಹೊಸಶಬ್ದವನ್ನು ಎದುರುನೋಡುತ್ತವೆ. ಆರಂಭದಲ್ಲಿ ಆರಕ್ಕೆ ಬರತಕ್ಕ ಯತಿ ಮುಖ್ಯ, ಅದನ್ನು ಇಟ್ಟುಕೊಂಡರು. ಅನಂತರದ ಯತಿ ಏಕೆ ಬರಬೇಕೆಂಬುದು ಮರೆತುಹೋಯಿತು, ಬಿಟ್ಟುಬಿಟ್ಟನು. 'ಯತಿ ವಿಲಂಘನದಿಂದ ರಿದಲ್ತೆ ಕನ್ನಡಂ!' ಕನ್ನಡಕ್ಕೆ ಯತಿಯಿಲ್ಲ; ಕೋಣಕ್ಕೆ ಮತಿಯಿಲ್ಲ; ಇದರಿಂದ ಲಯವೂ ಇಲ್ಲವೆನ್ನುವ ಸ್ಥಿತಿ ಒದಗಿತು.

---

25 ಧರ್ಮಾಮೃತ ೨–೨೨೯,೩೦.

ಎರಡನೆಯ ಯತಿಯ ಸಾರ್ಥಕ್ಯದ ಬಗ್ಗೆ ಇಲ್ಲಿ ಹೆಚ್ಚು ವಿವರಿಸುವುದಿಲ್ಲ. ಪ್ರಧಾನ ಆಘಾತವನ್ನು ತೇಲಿಸಿ ಅಂತರ ಆಘಾತವನ್ನು ಕಲ್ಪಿಸುವುದು ಯತಿಯ ಕಾರ್ಯಗಳಲ್ಲಿ ಒಂದು. –UU|–UU ಎಂದು ಬಂದಾಗ ಪ್ರತಿಗಣದ ಮೊದಲ ದೀರ್ಘದ ಮೇಲೆ, ಆದ್ಯಕ್ಷರದ ಮೇಲೆ ಆಘಾತ ಬೀಳುತ್ತದೆ. ಇದೇ ಪ್ರಧಾನ ಆಘಾತ, ಗಣಾಘಾತ. ಆದರೆ ಅದನ್ನು ೩–೫ ಆಗಿ ಪರಿವರ್ತಿಸಿದಾಗ ೪–೪ಕ್ಕೆ ಇದ್ದ ಗಣಯತಿ ೩–೫ಕ್ಕೆ ಮಾರ್ಪಡುತ್ತದೆ. ಇಲ್ಲಿ ಎರಡು ಬಗೆಯ ಆಘಾತಗಳಿಗೆ ಅವಕಾಶವಾಗುತ್ತದೆ. ಅದನ್ನು ಹೀಗೆ ತೋರಬಹುದು.

```
ı   ı
–UU|–UU
ı   *ı
UUU|UUUUU
```

ಇಲ್ಲಿ * ಎಂಬಲ್ಲಿ ಅಂತರಾಘಾತವೂ ı ಎಂಬಲ್ಲಿ ಗಣಾಘಾತವೂ ಇರುತ್ತದೆ. ಹೀಗೆ

‘ ಸಾಮೋದಾಂ|ಗಂ ಸುಧಾ ಮಧುರಾಧರ ’ ಎಂಬಲ್ಲಿ ‘ ಗಂ ’ ಎನ್ನುವುದಕ್ಕೆ ಗಣದ ಆಘಾತ, ‘ ಸು ’ ಎಂಬುದಕ್ಕೆ ಅಂತರಾಘಾತ. ತಾಳ ಬೀಳುವುದು ‘ ಗಂ ’ ಅಕ್ಷರಕ್ಕೆ. ಒತ್ತಿ ಹೇಳುವುದು ಶಬ್ದಾದಿಯಾದ ‘ ಸು ’ ಅಕ್ಷರವನ್ನು. ಈ ವೈವಿಧ್ಯ ಕನ್ನಡದಲ್ಲಿ ಹಲವು ವೃತ್ತಗಳಲ್ಲಿ ಮಾಯವಾಯಿತು, ಯತಿ ಬಿಟ್ಟುದರಿಂದ.[26]

ಈಗ ಪುನಃ ಹರಿಣೀಪ್ಲುತವನ್ನೇ ಗಮನಿಸಿ.

```
        ೩
ಲಲಿತ|ಹರಿಣೀ|ನೇ|ತ್ರೇ ಕ|ರ್ಣಾಮೃ|ತಂ ಹರಿ|ಣೀಪ್ಲು|ತಂ
  ೩    ೪   ೩    ೪     ೩     ೪     ೩    ೪
```

ಲಲಿತಗತಿವೃತ್ತದಲ್ಲಿ ೩–೪ ಮಾತ್ರೆಗಳಾಗಿ ‘ ಜನಾನಂದಂ ’ ಎಂಬ ರೂಪವನ್ನು ಕೊಟ್ಟಿರುವುದನ್ನು ಹಿಂದೆಯೇ ನೋಡಿದ್ದೇವೆ. ಇಲ್ಲಿ ‘ ಲಲಿತ ಹರಿಣೀ ’ ಶಬ್ದಕ್ಕೆ ಪ್ರತಿಯಾಗಿ ‘ ಜನಾನಂದಂ ’ ಎಂಬುದನ್ನೇ ಬಳಸೋಣ.

‘ ಜನಾನಂದಂ|ನೇತ್ರೇಕರ್ಣಾಮೃತಂ ಹರಿಣೀಪ್ಲುತಂ ’ ಎಂದಾಗುತ್ತದೆ.
೩

ಈ ವೃತ್ತವೊಂದು ಇಲ್ಲ. ‘ ಣೀಪ್ಲು|ತಂ ’ ಎಂಬ ೩+ಗುರು ರೂಪದಲ್ಲಿರುವ ತ್ರಿಮಾತ್ರಕ ಗಣಕ್ಕೆ ಮೂರು ವಿರಳ ಲಘುಗಳನ್ನು ಹಾಕಿದರೆ ಲಯ ಕೆಡುವುದಿಲ್ಲ. ಇದನ್ನು ಅನ್ವಯಿಸಿದರೆ ಹೀಗಾಗುತ್ತದೆ. ಇದಕ್ಕೆ ಹರಿಣಿಯನ್ನು ಹೋಲಿಸಿ.

---

[26] ಯತಿಯ ಬಗ್ಗೆ ವಿವರವಾಗಿ ಪ್ರತ್ಯೇಕವಾಗಿಯೇ ವಿಚಾರಮಾಡಬೇಕಾಗಿದೆ. ಹರಿಣೀಪ್ಲುತಕ್ಕೆ ಸಂಬಂಧಿಸಿದಂತೆ ಇಷ್ಟು ಸಾಕೆನಿಸುತ್ತದೆ.

        ೩
ಜನಾನಂದಂ|ಛಂದಂ ಶಿಖ|ರಿಣಿಮ|ದೇಭೇಂ|ದ್ರಗಮ|ನೇ[27]

                    ೪
೩   ೪   ೩   —   ೩   ೪   ೩   ೪
ಲಲಿತಹರಿಣೀ|ನೇತ್ರೇ ಕ|ರ್ಣಾಮೃ|ತಂ ಹರಿ|ಣೀಪ್ಲು|ತಂ

ಮೊದಲ ೩–೪ ರ ಗಣದ ವ್ಯತ್ಯಾಸ ಹೇಳಲಾಗಿದೆ. ಎರಡನೆಯ ಗಣ ೩–೪ರಲ್ಲಿ ಪ್ಲುತವಿದೆ. ಅನಂತರ '——' ಎಂಬುದು—ᴗᴗ ಎಂದಾಗಿದೆ. ಹಾಗೆಯೇ ಮುಂದೂ ಕೂಡ. ಅಂತ್ಯದ ᴗᴗᴗ ಅಥವಾ —ᴗ ಎಂಬ ತ್ರಿಮಾತ್ರಕ ಗಣಕ್ಕೆ 'ᴗ—' ಎಂಬ ರೂಪವನ್ನು ಕಲ್ಪಿಸಿದರೆ ಅದು ವಿಜಯಾನನ್ದ ಎಂಬ ವೃತ್ತವಾಗುತ್ತದೆ.

        ೩   ᴗ —
ಜನಾನಂದಂ|ಛಂದಂ ನೆಗ|ಟ್ಟಿ ವಿಜ|ಯಾನ|ನ್ದಮ|ಕ್ಕುಂ[28]
 ೩   ೪   ೩   ೪   ೩   ೪   ೩   ೪

ಹೀಗೆ ಇವನ್ನು ಸ್ಪಷ್ಟಪಡಿಸಬಹುದು.

೩	೪ ೩	೪ ೩	೪ ೩	೪	
ᴗᴗᴗ	ᴗᴗ—|—	— —|—ᴗ	—ᴗᴗ|—ᴗ	—	ಹರಿಣೀಪ್ಲುತ
ᴗ—	——|—	—ᴗᴗ |ᴗᴗᴗ	——|ᴗᴗᴗ	—	ಶಿಖರಿಣಿ
ᴗ—	——|—	—ᴗᴗ |ᴗᴗᴗ	——|ᴗ—	—	ವಿಜಯಾನನ್ದ

ಇಲ್ಲಿ ಹರಿಣಿಯ ರೂಪಾಂತರವೇ ಶಿಖರಿಣಿ ಎನ್ನುವುದು ಕಾಣುತ್ತದೆ. ಶಿಖರಿಣಿಯದೂ ೩–೪ರ ಲಯ. ಪ್ಲುತವೂ ಇದೆ. ಕೆಲವು ಪ್ರಯೋಗಗಳನ್ನು ಗಮನಿಸಬಹುದು.

೧. ಮಹಾನದ್ಯಾ|ಭೋಗಂ ಪುಲಿ|ನಮಿವ ತೇ ಭಾತಿಜಘನಂ
ತಥಾಸ್ಯಂ ನೇ| ತ್ರಾಭ್ಯಾಂ ಭ್ರಮ|ರ ಸಹಿತಂ ಪಂಕಜಮಿವ |
ತನುಸ್ಪರ್ಶ|ಚ್ಛಾಯಂ ಸುತ|ನು ಸುಕುಮಾರೋ ನ ಪುರುಷಃ
ಸ್ತನಾಭ್ಯಾಂ ತು|ಭ್ಯಾಂ ಸಾ ಶಿಖ|ರಿಣಿ ನಿಭಾ ಭಾಸಿ ವನಿತೇ ||[29]

೨. ವನಂಧಾತ್ರೀ|ಚಕ್ರಂಸುರ|ಪ ಪವನಂ ಶೀತಕರನ
ಬ್ಜನಾಭಂ ಭೂ|ತೇಶಂ ನೆಲ|ಸಿ ನಿಲೆ ವಿಶ್ರಾಂತಿಯುವಱೊಳ್
ಮನಂಗೊಂಡಾ|ಱಿಂಬಲ್ಲಿ ನೆ|ಲಸಿರೆ ಕರ್ಣಾಮೃತರಸಂ
ಜನಾನಂದಂ|ಛಂದಂ ಶಿಖ|ರಿಣಿ ಮದೇಭೇಂದ್ರಗಮನೇ[30]

[27] ಛಂದೋಂಬುಧಿ, ಪು. ೪೩.
[28] ಅದೇ. ಪು. ೪೨.
[29] ನಾಟ್ಯಶಾಸ್ತ್ರ, ೧೫–೧೦೪.
[30] ಛಂದೋಂಬುಧಿ, ಪು. ೪೩.

೩. ವಸಂತೇ ವಾ|ಸಂತೀ ಕುಸು|ಮಸುಕುಮಾರೈರವಯವೈ
ಭ್ರಮಂತೀಂ ಕಾಂ|ತಾರೇ ಬಹು|ವಿಹಿತ ಕೃಷ್ಣಾನುಸರಣಾಮ್
ಅಮಂದಂ ಕಂ|ದರ್ಪ ಜ್ವರ|ಜನಿತ ಚಿಂತಾಕುಲತಯಾ
ಚಲದ್ಬಾಧಾಂ|ರಾಧಾಂ ಸರ|ಸಮಿದಮೂಚೇ ಸಹಚರೀ[31]

"ಆಱಿಂಬಲ್ಲಿ" ವಿಶ್ರಾಂತಿ ಎಂದು ಯತಿಯನ್ನು ನಾಗವರ್ಮನು ಹೇಳಿದ್ದಾನೆ. ನಾಟ್ಯಶಾಸ್ತ್ರದ ಉದಾಹರಣೆಯಲ್ಲಿ ಈ ಯತಿ ಕಲ್ಪಿತವಾಗಿದೆ. ಜಯದೇವನೂ ಅದನ್ನು ಪಾಲಿಸಿದ್ದಾನೆ. 'ವಾಸಂತೀ, ಕಾಂತಾರೇ, ಕಂದರ್ಪ, ರಾಧಾಂ' ಎಂಬಲ್ಲಿ ನಿಂತು, ಹೊಸ ಶಬ್ದವನ್ನು ಎದುರುಗೊಳ್ಳುತ್ತವೆ. ಆದರೆ ನಾಗವರ್ಮನೇ ಮೂರನೆಯ ಪಾದದಲ್ಲಿ 'ಆಱಿಂಬ', ಎಂದಂದು 'ಲ್ಲಿನೆಲಸಿರೆ' ಎಂದ ಅರ್ಥ ಶಬ್ದವನ್ನೆದುರಿಸಿ ಯತಿ ವಿಲಂಘನ ಮಾಡಿದ್ದಾನೆ. ಇಲ್ಲಿ ಪ್ಲುತಕ್ಕೆ ಪೂರ್ವದಲ್ಲಿ ಯತಿ ಇರಬೇಕೆಂದಿಲ್ಲ. ಇಲ್ಲಿನ ಯತಿ ಅಂತರಾಘಾತ ನಿರ್ದಿಷ್ಟವಾದುದು. ಇಲ್ಲಿ ಯತಿಯಿಂದ ವಿಚ್ಛೇದಗೊಂಡುಳಿದ ಎರಡು ಲಘುಗಳು ಮುಂದಿನ ಗಣಕ್ಕೆ ಸೇರ ಬಹುದು. ಹಾಗೆ ಸೇರಿ ಮೂರು ಮಾತ್ರೆಗಳ ಉಪಗಣವನ್ನು ಕಲ್ಪಿಸಬಹುದು. ಇದಕ್ಕೆ ನಾಟ್ಯಶಾಸ್ತ್ರದ ಉದಾಹರಣೆಯನ್ನು ನೋಡಬಹುದು. ಇಲ್ಲಿ 'ಪುಲಿನ, ಭ್ರಮರ, ಸುತನು' ಎಂಬ ರೂಪಗಳುಂಟಾಗಿವೆ. ಹಾಗೆಯೇ ನಾಗವರ್ಮನ ಪ್ರಯೋಗದಲ್ಲಿ 'ಸುರಪ, ನೆಲಸಿ,' ಎಂಬಿವೂ, ಜಯದೇವನಲ್ಲಿ 'ಕುಸುಮ, ಸರಸ' ರೂಪಗಳೂ ಇವೆ. ಅಂದರೆ ಮೂರನೆಯ ಬಾರಿ ಬರುವ ೩-೪ ಮಾತ್ರೆಗಳ ಗಣದಲ್ಲಿ ಆದಿ ಲಘುವಿಗೆ ಪುನಃ ಯತಿ ಬರಬೇಕೆಂದಾಯಿತು. ಹರಿಣಿಯಲ್ಲಿ ಇದೇ ಗಣದಲ್ಲಿ ಮೊದಲ ಗುರುವಿಗೆ ಯತಿ ಬಂದುದಕ್ಕೆ ಇದು ಪೂರಕವಾಗಬಹುದು. ಆದರೆ ಈ ಯತಿ ನಿರ್ದಿಷ್ಟವಲ್ಲ; ಐಚ್ಛಿಕ. ನಾಟ್ಯಶಾಸ್ತ್ರದ ಪ್ರಯೋಗದ ಕೊನೆಯ ಪಾದದಲ್ಲಿ ಶಿಖರಿಣಿ ಎಂದಾಗಿ ಎರಡಕ್ಕರಕ್ಕೆ ಯತಿ ಬಂದುದನ್ನೂ ನಾಗವರ್ಮನಲ್ಲೂ ಹಾಗೆಯೇ ಇರುವುದನ್ನೂ ನೋಡಬಹುದು. ಹೀಗಾದಾಗ ಷಟ್ಕಯತಿಯ ಅನಂತರ ಉಳಿಯುವ ಎರಡು ಲಘುಗಳು ಬಿಡಿಯಾಗಿರ ಬಹುದು. ಅದರ ಮುಂದಿನ ಗಣ ಹೊಸ ಶಬ್ದದಿಂದಲೇ, ಜಯದೇವನಲ್ಲಿರುವಂತೆ 'ವಿಹಿತ, ಜನಿತ' ಎಂದು ಆರಂಭವಾಗಬಹುದು.

ಶಿಖರಿಣಿಯ ಅಂತ್ಯದ ತ್ರಿಮಾತ್ರಕ ಗಣ ᴗ–ಆದರೆ ವಿಜಯಾನನ್ದವಾಗುತ್ತದೆ. ಇದನ್ನು ಹಿಂದೆ ಗುರುತಿಸಿದ್ದೇವೆ. ಇದಕ್ಕೆ ಪ್ರವರ ಲಲಿತ ಎನ್ನುವ ಹೆಸರೂ ಇದೆ. ಹರಿಣಿಗೆ ವೃಷಭ ಲಲಿತವೆಂಬ ಹೆಸರಿರುವುದನ್ನು ಗಮನಿಸಿ.

ನಖಾಲೀಢಂ|ಗಾತ್ರಂ ದಶ|ನ ಖಚಿತಂ ಚೋಷ್ಠಗಂಡಂ
ಶಿರಃ ಪುಷ್ಪೋ|ನ್ಮಿಶ್ರಂ ಪ್ರವಿ|ಲುಲಿತ ಕೇಶಾಲಕಾಂತಂ|

---

31 ಗೀತಗೋವಿಂದ, ಪು. ೨೬, ೨೭.

ಗತಿಃ ಖಿನ್ನಾ|ಚೇಯಂವದ|ನಮಪಿ ಸಂಭ್ರಾಂತನೇತ್ರ
ಅಹೋಶ್ಲಾಘ್ಯಂ|ವೃತ್ತಂ ಪ್ರವ|ರಲಲಿತಂ ಕಾಮಚೇಷ್ಟಂ ‖[32]

ಮಲ್ಲಿಕಾಮಾಲೆಯನ್ನು ಛಂದೋಮಂಜರಿಕಾರ ಹರನರ್ತನ ಎಂದು ಕರೆದಿರುವುದನ್ನೂ, ಈ ಹರನರ್ತನದ ಆರಂಭದ ತ್ರಿಮಾತ್ರಕ ಗಣವು ಎರಡು ದೀರ್ಘಗಳಾಗಿ ನಾಲ್ಕು ಮಾತ್ರೆಗಳೆನಿಸಿದರೆ ಹರವರ್ತಕವಾಗುವುದೆಂಬುದನ್ನೂ ಹಿಂದೆಯೇ ಹೇಳಲಾಗಿದೆ. ಈ ವ್ಯತ್ಯಾಸವನ್ನು ಹೀಗೆ ತೋರಬಹುದು.

—⏑—⏑⏑|—⏑—⏑⏑|—⏑—⏑⏑|—⏑— ಹರನರ್ತನ
— — —⏑⏑|—⏑—⏑⏑|—⏑—⏑⏑|—⏑— ಹರವರ್ತಕ

ಈ ಹರವರ್ತಕಕ್ಕೂ ಮಂದಾಕ್ರಾಂತಕ್ಕೂ ಲಯದಲ್ಲಿ ವ್ಯತ್ಯಾಸವಿಲ್ಲ. ಅದನ್ನು ಹೀಗೆ ತೋರಬಹುದು.

— — —⏑⏑|—⏑—⏑⏑|—⏑—⏑⏑|—⏑— ಹರವರ್ತಕ

— — — —|⏑⏑⏑⏑⏑—|—⏑— —|⏑— —
ಕಶ್ಚಿತ್ ಕಾಂತಾ|ವಿರಹಗುರುಣಾ। ಸ್ವಾಧಿಕಾರಾತ್ |ಪ್ರಮತ್ತಃ[33] } ಮಂದಾಕ್ರಾಂತ

ಇಲ್ಲಿರುವುದು ಪ್ಲುತವಲ್ಲ; ಪ್ರತಿಯಾಗಿ, ಅದಕ್ಕೆ ವಿರುದ್ಧವಾಗಿ ತ್ವರಿತ. ಮೊದಲ ಎರಡು ಗುರುಗಳನ್ನು ಮೂರು ಮಾತ್ರೆಗಳ ಕಾಲದಲ್ಲಿ ಉಚ್ಚರಿಸಬೇಕು. ಈಗ ನಾಗವರ್ಮನ ಲಕ್ಷಣ ಲಕ್ಷ್ಯವನ್ನು ನೋಡಬಹುದು.

ಕಾಂತಂ ಧಾತ್ರೀ|ಹಿಮಕೃದಮರಾ|ಕಾಶಯುಗ್ಮೇಶಯುಗ್ಮಾ |
ಕ್ರಾಂತಂ ತೋರ್ಕುಂ|ಪದದಶಕದೊಳ್|ವಿಶ್ರಮಂ ಸಂತತಂತಾಂ ‖
ಕಾಂತೇ ಮತ್ತ|ದ್ವಿರದಗಮನೇ|ಮಲ್ಲಿಕಾಮೋದೆ ಮಂದಾಂ |
ಕ್ರಾಂತಂ ವೃತ್ತಂ|ನೆಗಟ್ದುದಿಳೆಯೊಳ್|ನಾಗವರ್ಮ ಪ್ರಣೀತಂ ‖[34]

ಪದದಶಕದಲ್ಲಿ ಯತಿಯನ್ನು ನಾಗಮರ್ಮ ಹೇಳಿದ್ದಾನೆ. ಅದು ಗಣಯತಿಯೂ ಆಗಿದೆ. ಆದರೆ ನಾಲ್ಕು ಅಕ್ಷರಗಳಿಗೂ ಅಂದರೆ ಮೊದಲ ಗಣ ಮುಗಿಯಬೇಕಾದಲ್ಲೂ ಯತಿ ಕಾಣಿಸುತ್ತದೆ. 'ಕಶ್ಚಿತ್ ಕಾಂತಾ' ಮೊದಲಾಗಿ ಹಲವು ಪ್ರಯೋಗಗಳಲ್ಲಿ ಇದು ಸ್ಪಷ್ಟವಾಗಿದೆ.

ಪ್ಲುತ ಹರಿಣೀಪ್ಲುತಕ್ಕೆ ಮಾತ್ರ ಮೀಸಲಿಲ್ಲವೆಂಬುದನ್ನೂ, ಶಿಖರಿಣಿ ವಿಜಯಾನಂದಗಳಲ್ಲೂ ಪ್ರಯುಕ್ತವೆಂಬುದನ್ನೂ ನೋಡಿದೆವು. ಪ್ಲುತ ೩–೪ರ

32 ನಾಟ್ಯಶಾಸ್ತ್ರ, ೧೫–೧೦೦.

33 'ಪ್ರಮತ್ತಃ' ಎನ್ನುವುದನ್ನು 'ಪ್ರಮತ್ತಹ' ಎಂದು ಓದಬಾರದು.

34 ಛಂದೋಂಬುಧಿ, ಪು. ೪೨.

ಲಯಕ್ಕೆ ಮಾತ್ರವಲ್ಲದೆ ನಾಲ್ಕು ಮಾತ್ರೆಗಳ ಲಯವುಳ್ಳ ವೃತ್ತಗಳಲ್ಲೂ ಕಂಡು ಬರುತ್ತದೆ. ಅದನ್ನು ಸಂಕ್ಷೇಪವಾಗಿ ತೋರಿಸಿಕೊಟ್ಟು ಮುಗಿಸಬಹುದಾಗಿದೆ.

ನಾಲ್ಕು ಮಾತ್ರೆಗಳ ಲಯವುಳ್ಳ ಹಲವು ವೃತ್ತಗಳಿವೆ. ಒಂದನ್ನು ಪರಿಚಯಕ್ಕಾಗಿ ಇಲ್ಲಿ ನೋಡಬಹುದು.

೧. ಭುವನದೊ|ಳೀತೆಜಿದಿಂದಮೆ ಸಂದುದು ನಾಕಿಗನಿಂತಿದು ಹಂಸಗ| ತಿ[35]

೨. ಶೀತಕ| ರ ಪ್ರಕರಂಗಳವೇೞಿಡೆಯೋಳಿಯೊಳೆಯ್ದಲನುಕ್ರಮ| ದಿಂ[36]

ಇಲ್ಲಿ ಮೊದಲನೆಯದಾದ ಹಂಸಗತಿ ವೃತ್ತಕ್ಕೂ ಎರಡನೆಯದಾದ ವನಮಂಜರಿಗೂ ಇರುವ ವ್ಯತ್ಯಾಸವನ್ನು ಗಮನಿಸಬಹುದು. ಈಗ ಪ್ಲುತವನ್ನು ನೋಡೋಣ.

ಇಲ್ಲಿ ಇವನ್ನು ಹೋಲಿಸಿ—

೧. ಭುವನದೊ|ಳೀತೆಜಿ|ದಿಂದಮೆ|ಸಂದುದು|ನಾಕಿಗ|ನಿಂತಿದು|ಹಂಸಗ|ತಿ
ಅಮರಸ|ರೋರುಹ|ಮಿತ್ರಗ|ಣೋದಧಿ|ಸಂಖ್ಯೆ|ಚಂದ್ರಹ|ರಂ

೨. ಶೀತಕ|ರ ಪ್ರಕ|ರಂಗಳ|ವೇೞಿಡೆ|ಯೋಳಿಯೊ|ಳೆಯ್ದಲ|ನು ಕ್ರಮ|ದಿಂ
ಸೋಮಗ|ಣಂಗಳೆ|ನಾಲ್ಕೆಡೆ|ಯೊಳ್ ಬರೆ|ಪಾವ|ಕಂಮುರು|ತಂ

ಹೀಗೆ ಇಲ್ಲಿ ನಾಲ್ಕು ಮಾತ್ರೆಗಳಿರಬೇಕಾದಲ್ಲಿ ಮೂರು ಮಾತ್ರೆಗಳು ಬಂದಿವೆ. ಅವನ್ನು ನಾಲ್ಕಾಗಿ ಮಾಡಿಕೊಳ್ಳಬೇಕು. 'ರವಿಪ್ರಭ'ವೆಂಬ ಅರ್ಧ ಸಮವೃತ್ತವನ್ನು ಪೂರ್ಣವಾಗಿ ನೋಡುವುದು ಲೇಸು.

ಅಮರಸ|ರೋರುಹ ಮಿತ್ರಗಣೋದಧಿ|ಸಂಖ್ಯೆ|ಚಂದ್ರಹರಂ
ಸೋಮಗ|ಣಂಗಳೆ ನಾಲ್ಕೆಡೆಯೊಳ್ ಬರೆ|ಪಾವ|ಕಂಮುರುತಂ
ಕ್ರಮದೊಳೆ|ಬಂದನುಲೋವದೊಳೊಂದಿ ಪ|ದದ್ವ|ಯಂ ನಿಯತಂ
ನಾಮಮಿ|ದರ್ಕೆರವಿಪ್ರಭಮಾಗಲೆ|ವೇೞ್ಕು|ಮುಬ್ಬಮುಖೀ[37]

ನಗರಂಜಿತ ವೃತ್ತದಲ್ಲಿ ಎರಡು ಪ್ಲುತಗಳು ಬರುತ್ತವೆ. ವನಮಂಜರಿಯೊಡನೆ ಇದನ್ನು ಹೋಲಿಸಿ ನೋಡಬಹುದು.

---

35 ಅದೇ. ಪು. ೪೯.

36 ಅದೇ. ಪು. ೪೮.

37 ಛಂದೋಂಬುಧಿ, ಪು. ೫೭.

ಶೀತಕ|ರ ಪ್ರಕ|ರಂಗಳ|ವೇಟಿಡೆ|ಯೋಳಿಯೊ|ಳೆಯ್ದು ಲ|ನು ಕ್ರಮದಿಂ
ಈ ಜಗ|ದೊಳ್ ನಗ|ರಂ ಜಿತ|ಮೆಂಬುದು|ರಂಜಿ|ತಾಧರ|ಪಲ್ಲ|ವೆ[38]

ವೃತ್ತದ ಆದಿಯಲ್ಲೇ ಪ್ಲುತ ಬರಬಹುದು. ಸೌಂದರ ವೃತ್ತದಲ್ಲಿ ಆರಂಭದಲ್ಲೇ ಊನ ಗಣವಿದೆ. ಇದನ್ನು ನಾಲ್ಕು ಮಾತ್ರೆಗಳಿಗೆ ಹೊಂದಿಸಿಕೊಳ್ಳಬೇಕು. ಇಲ್ಲವೆ ಆದಿಯಲ್ಲಿ ಲಘ್ವಕ್ಷರಕಾಲವನ್ನು ಬಿಟ್ಟು ಆರಂಭಿಸಬೇಕು.

ವಿದಿತ|ಮಾಗಿರೆ|ಸೌಂದರ|ಮಾದುದು|ಭಿನ್ನಾಂ|ಭೋಜದ|ಳಾಯತ|ಲೋಚನೇ[39]

ಈ ಊನಗಣ ᑌᑌᑌ ಆಗಿರುವುದಕ್ಕೆ ಪ್ರತಿಯಾಗಿ – ᑌ ಆಗಬಹುದು. ಖಚರ ಪ್ಲುತದಲ್ಲಿ ಆದಿಯಲ್ಲಿ ಇದು ಬರುತ್ತದೆ. ಅಂತ್ಯದಲ್ಲಿ ನಗರಂಜಿತದ ಅಂತ್ಯದಲ್ಲಿರುವಂತೆ ಪ್ಲುತವಿದೆ. ಖಚರಪ್ಲುತದಲ್ಲಿ ಎರಡು ಕಡೆ ಪ್ಲುತಗಳು.

ವಾತ|ಮಿತ್ರಮ|ರುತ್ಪವ|ನಂ ವ್ಯೋ|ಮಾರ್ಕಯು|ಗಂ ತ್ರಿಪು|ರಾಂತ|ಕೋ[40]

ಹೀಗೆ ಚತುರ್ಮಾತ್ರಾಲಯದ ಅಕ್ಷರ ವೃತ್ತಗಳಲ್ಲೂ ಪ್ಲುತವಿರುವುದನ್ನು

---

38 ಆದೇ. ಪು. ೪೬.

39 ಆದೇ. ಪು. ೪೯.

40 ಛಂದೋಂಬುಧಿ, ಪು. ೪೫. ಸಂಪೂರ್ಣ ಪದ್ಯ ಹೀಗಿದೆ.
ವಾತ ಮಿತ್ರಮರುತ್ಪವನಂ ವ್ಯೋಮಾರ್ಕಯುಗಂ ತ್ರಿಪುರಾಂತಕೋ
ಪೇತಮಾಗಿರೆ ವಿಶ್ರಮಂ ತಾಂ ಪಕ್ಷದೊಳೊಂದಿರೆ ನಾಮದಿಂ
ಶಾತ ಕುಂಭ ಘಟೋಪಮ ವೃತ್ತೋತ್ತುಂಗ ಪಯೋಧರಯುಗ್ಮೆ ಧಾ
ತ್ರೀತಳಕ್ಕೆಸೆದತ್ತಿದುಂ ಲೋಕಾನನ್ದಕರಂ ಖಚರಪ್ಲುತಂ

ಇಲ್ಲಿ ಸ್ವೀಕೃತ ಪಾಠ ಸರಿಯಿಲ್ಲ. ಛಂದಸ್ಸು ಕೆಟ್ಟಿದೆ. 'ವಿಶ್ರಮಂ ತಾಂ' ಎನ್ನುವುದಕ್ಕಿಂತ 'ವಿಶ್ರಮಣಂಗಳ್' ಎಂಬ ಪಾಠ ಸೂಕ್ತ, ಛಂದಸ್ಸಿಗೆ ಹೊಂದುತ್ತದೆ. ಹಾಗೆಯೇ ಕೊನೆಯ ಪಾದದಲ್ಲಿ 'ಎಸೆದತ್ತಿದುಂ' ಎಂಬಲ್ಲಿ ಕ್ಲೇಶವಿದೆ. ಇಲ್ಲಿ ಬಿಂದು ಇರಬಾರದು. 'ಎಸೆದತ್ತಿದುಂ' ಎಂದಷ್ಟೇ ಬೇಕಾದುದು. ಸದ್ಯಕ್ಕೆ ಛಂದೋದೃಷ್ಟಿಯಿಂದ ಹೀಗೆ ಇಟ್ಟುಕೊಳ್ಳಬೇಕು. ಸಂಬಂಧ ಪಾಠವನ್ನು ಗ್ರಂಥಸಂಪಾದನಾದೃಷ್ಟಿಯಿಂದ ನಿರ್ಧಾರವಾಗುವವರೆಗಾದರೂ ಲಯಕ್ಕಾಗಿ ಹೀಗಿಟ್ಟುಕೊಳ್ಳಬಹುದು.

ವಾತ|ಮಿತ್ರಮ|ರುತ್ಪವ|ನಂ ವ್ಯೋ|ಮಾರ್ಕಯು|ಗಂತ್ರಿಪು|ರಾಂತ|ಕೋ
ಪೇತ|ಮಾಗಿರೆ ವಿಶ್ರಮಣಂಗಳ್ ಪಕ್ಷದೊಳೊಂದಿರೆ|ನಾಮ|ದಿಂ
ಶಾತ|ಕುಂಭಘಟೋಪಮ ವೃತ್ತೋತ್ತುಂಗಪಯೋಧರ|ಯುಗ್ಮೆ|ಧಾ
ತ್ರೀತ|ಳಕ್ಕೆಸೆದತ್ತಿದು ಲೋಕಾನನ್ದಕರಂ ಖಚ|ರಪ್ಲು|ತಂ

ಗಮನಿಸಬಹುದು. 'ಖಚರಪ್ಲುತ' ಸಂಸ್ಕೃತದಲ್ಲಿ ಹೇಳಿದ್ದಾರೆ. ಇಲ್ಲಿ 'ಪ್ಲುತ' ಶಬ್ದವಿರಲು ಆ ಬಂಧದಲ್ಲಿ ಪ್ಲುತಕಾರ್ಯವಿರುವುದೇ ಕಾರಣವಾಗಿತ್ತು. ಇದನ್ನು ಗಮನಿಸಿ ೩–ಳರ ಲಯದಲ್ಲೂ ಪ್ಲುತವನ್ನು ಕಂಡು ಹರಿಣೀವೃತ್ತವನ್ನು ಹರಿಣೀಪ್ಲುತವೆಂದು ಕರೆದಿರಬೇಕು.

ಇಲ್ಲಿ ಯಾವ ಯಾವ ಬಂಧ ಯಾವ ಯಾವ ಭಾವಕ್ಕೆ ಸೊಗಸು ಎನ್ನುವುದನ್ನು ಹೇಳುವುದಿಲ್ಲ. ಅದು ಸೂಕ್ತವೂ ಅಲ್ಲ. ಕವಿಯ ಯೋಗ್ಯತೆಗೆ ಸಂಬಂಧಿಸಿದುದು. ಅವನಿಗೇ ಅದನ್ನು ಬಿಡೋಣ.

—ಕೆ. ಶಿವರಾಮ ಐತಾಳ

ಪ್ಲುತ–ಪ್ಲವನ

ಪ್ಲುತದ ಮಾತು ಬಂದಾಗ ಪ್ಲವನದತ್ತ ನನ್ನ ಗಮನ ಹರಿಸಿದವರು ನನ್ನ ಪೂಜ್ಯ ಗುರುಗಳಾದ ಆಚಾರ್ಯ ಡಿ. ಎಲ್. ಎನ್. ಅವರು. ಇದಕ್ಕೆ ಮಾತ್ರವಲ್ಲ, ಈ ಲೇಖನದ ಪ್ರತಿ ಮಾತಿಗೂ ಅವರನ್ನು ನೆನೆಯಬೇಕಾಗಿದೆ. ಜಿಗಿಯುವುದು, ಹಾರುವುದು, ನೆಗೆಯುವುದು –ಈ ಪ್ಲವನ ಲಯಾನುಭವದಲ್ಲಿ ಹೇಗೆ ಸಂಗತವಾಗುತ್ತದೆ ಎಂಬುದು ವಿಚಾರಾರ್ಹವಾದುದು. ಈ ಪ್ಲವನಕ್ರಿಯೆ ಪ್ಲುತದಲ್ಲೇಕೆ, ಗುರುವಿನಿಂದಲೇ ಆರಂಭವಾಗುತ್ತದೆ. ಛಂದಸ್ಸಿನ ಮೂಲ ತತ್ತ್ವಗಳಲ್ಲಿ ಇದೂ ಒಂದು.

ಅಕ್ಷರ ದೀರ್ಘತ್ವವನ್ನು ಪ್ರಧಾನವಾಗಿ ಇಬ್ಬಗೆಯಾಗಿ ವಿಂಗಡಿಸಬೇಕು. ಮೊದಲನೆಯದಾಗಿ ಗುರು ಎನಿಸುವ, ದ್ವಿಮಾತ್ರಕವಾದ ದೀರ್ಘ; ಎರಡನೆಯದಾಗಿ ಎರಡಕ್ಕಿಂತ ಹೆಚ್ಚು ಬೆಲೆ ತೆಗೆದುಕೊಳ್ಳುವ ದೀರ್ಘ. ಈ ಬಹುಮಾತ್ರಕ ದೀರ್ಘದಲ್ಲಿ ತ್ರಿಮಾತ್ರಕವಾದ ಪ್ಲುತವೂ, ಚತುಷ್ಕಲೆಯ ಕಾಕಪಾದವೂ, ಅದಕ್ಕೂ ಹೆಚ್ಚಿನ ವಿಲಂಬವೂ ಸೇರಿಕೊಳ್ಳುತ್ತದೆ. ನಮ್ಮ ಪೂರ್ವಾಚಾರ್ಯರು ಸೂತ್ರಮಾತ್ರಕ್ಕಾಗಿ ಪ್ಲುತಕ್ಕೆ ಮೂರು ಮಾತ್ರೆಗಳೆಂದರೂ ಈ ಬಹುಮಾತ್ರಕ ದೀರ್ಘವೆಂಬ ಸ್ಪಷ್ಟ ಅಭಿಮತವನ್ನು ಹೊಂದಿದ್ದರೆನ್ನಲು ಈ ಹಿಂದೆ ಲೇಖನದಲ್ಲಿ ಉದ್ಧರಿಸಿರುವ ಗೀತಗೋವಿಂದದ ವ್ಯಾಖ್ಯಾನದ ಉಲ್ಲೇಖವೇ ಸಾಕಾಗಿದೆ. ಪ್ಲುತದ ಬಗೆಗಳೆಷ್ಟು, ಗತಿಶೀಲವಾದ ಲಯದಲ್ಲಿ ಅದು ಆವಿರ್ಭಾವವಾದಾಗ ಕಾಣುವ ನಿರ್ದಿಷ್ಟ ನಿಯಮಗಳೇನು ಎನ್ನುವುದನ್ನು ಲೇಖನಾಂತರದಲ್ಲಿ ಖಚಿತಪಡಿಸಬಹುದಾಗಿದೆ. ಪ್ಲವನಕ್ರಿಯೆಯ ಪ್ರಸ್ತಾಪಕ್ಕೆ ಗುರುತ್ವದ ಮೂಲವನ್ನೂ ಮತ್ತು ಆ ಸಂಬಂಧದಲ್ಲಿ ಅಕ್ಷರಾಘಾತ ಮತ್ತು ಅವಕ್ಕೆ ಪ್ರಾತಿನಿಧಿಕವಾಗಿ ಬರುವ ವರ್ಣಾನುಕ್ರಮಣಿಕೆಯನ್ನೂ ಖಚಿತಪಡಿಸಿಕೊಳ್ಳಬೇಕು. ಪ್ರಾಸ್ತಾವಿಕವಾಗಿ ಅಕ್ಷರವೃತ್ತಗಳಲ್ಲಿ ಮತ್ತು ನಿರ್ದಿಷ್ಟವಾಗಿ ಹರಿಣೀಪ್ಲುತದಲ್ಲಿ ತ್ರಿಮಾತ್ರಕವಾದ ಪ್ಲುತ ಹೇಗೆ ಗಮನಕ್ಕೆ ಬರುತ್ತದೆನ್ನುವುದು ಮುಖ್ಯವಾಗಿ ಇಲ್ಲಿ ಉದ್ದೇಶವಾಗಿರುವುದರಿಂದ ಮಿಕ್ಕವುಗಳ ವಿವರ ನಮಗೆ ಪ್ರಕೃತವಲ್ಲವಾಗಿ ಅಗತ್ಯವಾದಷ್ಟನ್ನು ಮಾತ್ರ ಉಲ್ಲೇಖಿಸಿ ಕೈಬಿಡಬೇಕಾಗಿದೆ.

ಸುದರ್ಶನ

ಮೊನ್ನೆ ಮೊನ್ನೆ—
ನೂರು ವರ್ಷದ ಹಿಂದೆ,
ಗೆಡ್ಡೆ ಮಂಜಿಗೆ ಚೂರಿ ಇರಿದೆ.
ಬೆಳೆದೆ—
ಸುದರ್ಶನವಾಗಿ
ಪರಿಭ್ರಮಣಕೆ—
ಚೂರು ಚೂರು
ಘನವಿಭ್ರಮ ರಕ್ಕಸನೂರು
ಗರುಡಗತಿಗೆ ಸಿಡಿಲಮತಿಗೆ
ಎರಗೆ ನಿನಗೆ ಪೂರ್ವಪಶ್ಚಿಮ
ನೀನೆ ನೀನೆ—
ಜಟಿಲಗತಿಯ ಕುಟಿಲಮತಿಗೆ
ಅಮಿತ " ಆಶ್ವಶಕ್ತಿ " ಸುತ್ತಿಗೆ.

ವೇದಾಂತದ ಡಿಂಡಿಮವನು ತೂಗಿ ತೊನೆಯುತ
ನಾಡ ಎದೆಯ ವಿಸ್ಫುಲಿಂಗವಾಗಿ ಸಿಡಿದೆ ಸೆಳೆಯುತ;
ತಿರಿದೆ ನುರಿತೆ ಬೆರೆತೆ ಜಗದ ಬಗೆಯಲಿ
ಸದಾ ಸುಳಿವ ಕರ್ಮಶೀಲ ಮಾರುತ
ಒಮ್ಮೆ ಮಿಡಿದೆ ಒಮ್ಮೆ ಮುರಿದೆ, ಮಹಾರಥ!

ಕಾಲಗರ್ಭದಾಳದಿಂದ ಕಾಲಗತಿಗೆ ಬಂದೆನೆಂದೆ,
ವೇದಾಧಾರದಿ ಲೋಕಾಚಾರಕೆ—
ಶುಷ್ಕಾಚಾರದಿ ವಿಶ್ವವಿಚಾರಕೆ—
ಶಿಷ್ಟಾಚಾರದಿ ವಿಶಿಷ್ಟಾಚಾರಕೆ—
ಎಲ್ಲಿಯು ನಿನತೆ ಬೆಳಕಿನ ಹರಕೆ
ಕದಡಿದ ಎದೆಗೆ ಬಾಡಿದ ಮೊಗಕೆ
ತುಡಿಯುತ ಬಿಚ್ಚಿದೆ ನಿನ್ನಾ ರೆಕ್ಕೆ
ಶುಭಮಕ್ಕೆ ವಿಶ್ವಕೆ ಶುಭಮಕ್ಕೆ!

—ಎ. ಎಸ್. ಜಯರಾವ್

ಸ್ವಾಮಿ ವಿವೇಕಾನಂದ

ಪ್ರಪಂಚದ ಚರಿತ್ರೆಯಲ್ಲಿ ನಾಗರಿಕತೆಯ ಮುನ್ನಡೆಗೆ, ಆಗಿನ ಕಾಲದಲ್ಲಿ ಅತಿ ಚಿಕ್ಕ ದೇಶವೆನಿಸಿದ್ದ, ಗ್ರೀಸ್ ದೇಶದ ಕಾಣಿಕೆ ಅಪಾರ. ನಮ್ಮ ಕಾಲದಲ್ಲಿಯೂ ಷೆಲ್ಲಿಯವರು ಹೇಳಿರುವಂತೆ "ನಾಗರಿಕತೆಯ ವಿಷಯದಲ್ಲಿ ನಾವೆಲ್ಲರೂ ತಪ್ಪದೇ ಗ್ರೀಕರೇ. ಅದರಲ್ಲೇನೂ ಸಂಶಯವಿಲ್ಲ." ಇದು ಕ್ರಿಸ್ತ ಪೂರ್ವದ ಮಾತಾಯಿತು. ಅದೇ ರೀತಿ ಗ್ರೀಸಿನ ಆ ಸ್ಥಾನವನ್ನು ಭಾರತದ ಚರಿತ್ರೆಯಲ್ಲಿ ಬಂಗಾಳವು ಪಡೆದುಕೊಂಡಿದೆ. ೧೯ ಮತ್ತು ೨೦ನೆಯ ಶತಮಾನಗಳು ಭಾರತೀಯ ತತ್ವಶಾಸ್ತ್ರದ ದೃಷ್ಟಿಯಿಂದ ಪುನರಾವರ್ತನೆಯ ಯುಗಗಳೆನಿಸಿವೆ. ಕೇವಲ ತತ್ವಶಾಸ್ತ್ರ ವಿಭಾಗವನ್ನೆ ತೆಗೆದುಕೊಂಡರೂ ಒಂದು ಕಡೆ ವೇದಗಳು, ಉಪನಿಷತ್ತುಗಳು, ಗೀತೆ, ಇವುಗಳ ಬೋಧನೆಯನ್ನು ಮನಶ್ಚಕ್ಷುವಿನಲ್ಲಿ ಪ್ರತಿಬಿಂಬಿಸಲು ಪ್ರಯತ್ನಿಸಿದ ಒಂದು ಪಂಗಡ—ಪರಮಹಂಸರು, ವಿವೇಕಾನಂದರು; ಮತ್ತೊಂದು ಕಡೆ ವಿಗ್ರಹಾರಾಧನೆಯನ್ನು ಬಲವಾಗಿ ಖಂಡಿಸಿದ ಶ್ರೀ ದಯಾನಂದ ಸರಸ್ವತಿ, ರಾಜಾರಾಮ ಮೋಹನರಾಯರಂಥ ಪ್ರತಿಭಾಶಾಲಿಗಳು.

ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ, ವಿವೇಕಾನಂದರು ೧೮೬೩ರಲ್ಲಿ ಕಲ್ಕತ್ತೆಯ ಮಧ್ಯಮ ತರಗತಿಯ ಕುಟುಂಬದಲ್ಲಿ ಜನ್ಮತಳೆದರು. ಪುಷ್ಪವು ಅರಳುವ ಕಾಲ ಬಂದರೆ ಅದು ಎಂದಿಗೂ ಕಾಲ ದೇಶಗಳನ್ನು ಗಣಿಸುವುದಿಲ್ಲ. ಗಿಡದಲ್ಲಿ ಹೂ ಅರಳಿದಾಗ ಅದರ ಸವಿಗಂಪು ಸುತ್ತುಮುತ್ತಲಿರುವ ಪ್ರದೇಶವನ್ನು ತುಂಬಿ ಬಹುದೂರ ಹರಡುವುದು. ಅದರಂತೆ ಎಲ್ಲ ಮಾನವರು ಮಾಡಿದ ಸತ್ಕಾರ್ಯದ ಕಂಪು ನಾನಾ ದಿಕ್ಕುಗಳಲ್ಲಿ ಹರಡುವುದು. ಹಾಗೆಯೇ ಇಂದು ವಿವೇಕಾನಂದರ ಕೀರ್ತಿ ಹೆಮ್ಮರದಂತೆ ಭಾರತದಲ್ಲಿ ಮಾತ್ರವಲ್ಲದೆ ವಿದೇಶಗಳಲ್ಲಿಯೂ ಅಮರವಾಗಿ ನಿಂತಿದೆ.

ಅವರು ಮೊದಲಬಾರಿ ಪರಮಹಂಸರನ್ನು ಕಂಡದ್ದು ತಮ್ಮ ಯೌವನದ ದಿನಗಳಲ್ಲಿ; ಅದೂ ಅವರು ಕಲ್ಕತ್ತೆಯ ಕಾಲೇಜಿನಲ್ಲಿ ತಮ್ಮ ವ್ಯಾಸಂಗವನ್ನು ನಡೆಸುತ್ತಿದ್ದಾಗ. ಪರಮಹಂಸರ ದಿವ್ಯವಾಣಿಯನ್ನು ಕೇಳಿದ ದಿನದಂದು, ತಾವು ಕೇಳಿದ, "ನೀವು ದೇವರನ್ನು ನೋಡಿದ್ದೀರಾ? ನೋಡಿದ್ದರೆ ನನಗೆ ತೋರಿಸಿ" ಎಂದು ಕೇಳಿದ ಪ್ರಶ್ನೆಗೆ, ಅವರು ಕೊಟ್ಟ ದಿಟ್ಟ ಉತ್ತರವೇ, ವಿವೇಕಾನಂದರ ಮನಃಪರಿವರ್ತನೆಗೆ ಮುಖ್ಯ ಘಟನೆಯಾಗಿ ಪರಿಣಮಿಸಿತು. ತಂದೆ ವಿಶ್ವನಾಥರ ಅಕಾಲ ಮರಣದಿಂದಾಗಿ ಅವರ ವ್ಯಾಸಂಗವು ಪೂರ್ತಿಯಾಗಲಿಲ್ಲ. ಪರಮಹಂಸರು ಅವರನ್ನು ಮೊದಲಬಾರಿ ಕಂಡಾಗ, "ನಾನು ನಿನಗಾಗಿಯೇ ಕಾಯುತ್ತಿದ್ದೆನು. ನೀನೇಕೆ ಇಷ್ಟು ತಡಮಾಡಿ ಬಂದೆ" ಎಂದು ವಿವೇಕಾನಂದರನ್ನು ಮುಟ್ಟಿ ಆನಂದದ ತನ್ಮಯತೆಯಲ್ಲಿ ಅಪ್ಪಿಕೊಂಡಾಗ, ವಿವೇಕಾನಂದರಿಗೆ ಯಾವುದೋ ಅವ್ಯಕ್ತ ವಿದ್ಯುತ್‌ಪ್ರವಾಹವು ಅವರ ದೇಹದೊಳಕ್ಕೆ ಪ್ರವೇಶಿಸಿದಂತಾಯ್ತೆಂದು ತಮ್ಮ ಜೀವನಚರಿತ್ರೆಯಲ್ಲಿ ಹೇಳಿದ್ದಾರೆ.

ಆದರೆ ಅವರ ಹೆಸರು ಪಾಶ್ಚಾತ್ಯದೇಶಗಳಿಗೆ ತಿಳಿದದ್ದು ಅವರು ಅಮೆರಿಕೆಯಲ್ಲಿ ನೆರೆದ 'ಸರ್ವಧರ್ಮ ಸಮ್ಮೇಳನ'ದಲ್ಲಿ ಹಿಂದೂ ಮತವನ್ನು ಪ್ರತಿನಿಧಿಸಲು ಹೋಗಿದ್ದಾಗ. ನೆರೆದಿದ್ದ ಜನಸಮೂಹವನ್ನೂ, ಪ್ರತಿನಿಧಿಗಳನ್ನೂ ಉದ್ದೇಶಿಸಿ, "ನನ್ನ ಅಮೆರಿಕನ್ ಸೋದರ ಸೋದರಿಯರೆ" ಎಂದು ಕರೆದಾಗ, ಇಡೀ ಜನತೆಯು ಹರ್ಷೋನ್ಮತ್ತವಾಗಿ ಹತ್ತಾರು ನಿಮಿಷಗಳು ಚಪ್ಪಾಳೆ ತಟ್ಟಿ, ಹಿಂದೂ ಧರ್ಮದ ಮೇಲೆ ಸದಾಕಾಲಕ್ಕೂ ಬೆಳಕು ಚೆಲ್ಲುವಂಥ, ಅವರ ನಿರರ್ಗಳ ಉಪನ್ಯಾಸದ ಅಮೃತವಾಣಿಯನ್ನು ಕೇಳಿ ತಣಿದರು. ಈ ಘಟನೆಯನಂತರ ಹತ್ತಾರು ಶಿಷ್ಯರುಗಳನ್ನು ಸಂಪಾದಿಸಿಕೊಂಡು ಭಾರತಕ್ಕೆ ಹಿಂದಿರುಗಿದರು. ಕೊಲಂಬೋದಿಂದ ಆಲ್ಮೋರದವರೆಗೆ ಅವರು ಮಾಡಿದ ಭಾಷಣಗಳು ನಮ್ಮ ಯುವಕರೆಲ್ಲರಿಗೂ ದಾರಿದೀಪದಂತಿವೆ. ಭಾರತೀಯ ತತ್ವಶಾಸ್ತ್ರದ ನಿಜಸ್ವರೂಪವನ್ನು ವಿದೇಶೀಯರಿಗೆ ಮನವರಿಕೆ ಮಾಡಿಕೊಟ್ಟು, ತಾವು ಜೀವಿಸಿದ್ದಷ್ಟು ಕಾಲವೂ, ತತ್ವಶಾಸ್ತ್ರದ ಕೀರ್ತಿ ಪತಾಕೆಯನ್ನು ಹಾರಿಸಿದರು. ಮಲಗಿದ್ದ ಭಾರತದ ಜನತೆಯನ್ನು ಸ್ವಾತಂತ್ರ್ಯವನ್ನು ಸಾಧಿಸಲು ತಮ್ಮ ಸಿಂಹವಾಣಿಯಿಂದ ತಪ್ಪದೆ ಎಚ್ಚರಿಸಿದರು. "ಏಳಿ, ಎಚ್ಚರಗೊಳ್ಳಿ, ನಿಮ್ಮ ಗುರಿಯನ್ನು ಮುಟ್ಟುವವರೆಗೂ ನಿಲ್ಲಬೇಡಿ" ಎಂದು ಕರೆಯನ್ನಿತ್ತರು. "ರಾಷ್ಟ್ರಶಕ್ತಿಯು ಅರಮನೆಯಲ್ಲಿ ನಿಂತಿಲ್ಲ. ಅದು ಬಡಜನರ ಗುಡಿಸಲಲ್ಲಿ ನಿಂತಿದೆ. ರಾಷ್ಟ್ರೋನ್ನತಿಗೆ ಈಗ ನಾವು ಮಾಡಬೇಕಾದ ಮೊದಲನೆಯ ಕೆಲಸ, ಪ್ರತಿಯೊಬ್ಬರಿಗೂ, ಅವರವರಿಗೆ ಆವಶ್ಯಕವಾದ ಧರ್ಮ, ಅರ್ಥ, ಮೋಕ್ಷಗಳನ್ನು ಸಂಪಾದಿಸಲು ಅವಕಾಶ ಕೊಡಬೇಕು. ಹಸಿವು, ಉಪವಾಸ, ದಾರಿದ್ರ್ಯದ ಕ್ರೂರ ಮಾರಿಯನ್ನು ದೇಶದಿಂದ ಹೊರಗಟ್ಟಬೇಕು. ಧರ್ಮವು ನೆಲೆಗೊಳ್ಳಬೇಕಾದರೆ ಮೊದಲು ಹಸಿವನ್ನು ಪರಿಹರಿಸುವುದು ನಮ್ಮ ಮುಖ್ಯ ಕರ್ತವ್ಯ. ಧರ್ಮವೆಂಬುದು ಹಸಿದ ಹೊಟ್ಟೆಗಲ್ಲ. ಭಾರತವು ಬಡತನದ ಕಗ್ಗವಿಯಲ್ಲಿ ಬಿದ್ದಿರುವಾಗ, ಜಪತಪಗಳನ್ನು ಮಾಡಿ ಇಹಜನ್ಮವನ್ನು ಹಾಳುಮಾಡುವುದು ಬೇಡ. ಸಾವಿರಾರು ಕ್ರೂರ ಹಿಂಸೆಗಳಿಂದಲೂ ಕಷ್ಟಗಳಿಂದಲೂ ನರಳುತ್ತಿರುವ, ದೈವಸ್ವರೂಪವಾಗಿ, ಭಗವಂತನ ಸಕಲ ಗುಣಗಳನ್ನು ತಮ್ಮಲ್ಲಿಯೇ ಅಡಗಿಸಿಕೊಂಡಿರುವ ಈ ಬಡಜನರನ್ನು ಸೇವಿಸಿ ಪೂಜಿಸಲು, ನಾನು ಪುನರ್ಜನ್ಮಗಳನ್ನು ಎತ್ತುವಂತಾಗಲಿ" ಎಂದು ಅನನ್ಯವಾಗಿ ಪ್ರಾರ್ಥಿಸಿದ್ದಾರೆ. "ಜನಸೇವೆಯೇ ಜನಾರ್ದನ ಸೇವೆ", "ಧರ್ಮೋ ರಕ್ಷತಿ ರಕ್ಷಿತಃ." ಇವು ತಮ್ಮ ಜೀವನದ ಮಹಾಮಂತ್ರಗಳೆಂದು ಅವರು ಹೇಳುತ್ತಿದ್ದರು.

ಸತ್ಪುರುಷರಾಗಿರುವುದಕ್ಕೆ ಸದಾಚಾರವೇ ಗುರುತು. ಎಲ್ಲಾ ಉಪದೇಶಗಳಿಗಿಂತಲೂ ಸದಾಚಾರವೇ ಹೆಚ್ಚಿನದು. ಅವರು ತಮ್ಮ ಜೀವನದಲ್ಲಿ ನುಡಿದಂತೆ ನಡೆದ ಮಹಾಋಷಿ. "When wealth is lost nothing is lost; when health is lost something is lost; and when character is lost every-

thing is lost" ಎಂಬ ಅವರ ಮಾತುಗಳು ಯುವಕರಿಗೆ ಚಾರಿತ್ರ್ಯದ ಅಡಿಗಲ್ಲಿ ನಂತಿವೆ. "ಧರ್ಮವು ಇಂಡಿಯಾ ದೇಶದ ಅಡಿಗಲ್ಲು. ಧರ್ಮವೇ ಈ ನಾಡಿನ ಜೀವಶಕ್ತಿ. ರಾಷ್ಟ್ರದೇಗುಲವನ್ನು ನಿರ್ಮಿಸಲು ಅದು ಆವಶ್ಯಕ. ಅದೇ ಜೀವಚೈತನ್ಯ. ಸತ್ಯವನ್ನೇ ಆಚರಿಸುತ್ತಾ, ಸತ್ಯದೊಂದಿಗೆ ಇದ್ದು, ಆನಂದವನ್ನನುಭವಿಸಲು ಯತ್ನಿಸುವವರಿಗೆ ಅಸಾಧ್ಯವಾದದ್ದು ಯಾವುದೂ ಇಲ್ಲ. ಎಂದೂ ಅಲಸಿಯಾಗಿರಬೇಡ. ಅಲಸಿಕೆಯೇ ಮಹಾ ಪಾತಕ. ಸತ್ಯದ ತಿಳಿವಳಿಕೆಗೆ ಪರರ ಮೇಲೆ ನಾವು ನಂಬಿಕೆಯಿಟ್ಟರೆ ಅದನ್ನು ತುಳಿದಂತೆಯೇ; ಹೊರಗಡೆಯ ಬಂಧನ ನಮಗಿರಕೂಡದು; ಅವ್ಯಕ್ತನಾಗಿರುವ ದೇವರ ದಿಗಿಲೂ ಇರಕೂಡದು. ನಮಗೆ ನಾವೇ ಬೆಳಕಾಗಬೇಕು. ಮೂಢಾ ಚಾರಗಳೂ, ಒಣಕಟ್ಟಳೆಗಳೂ ನಮ್ಮಿಂದ ದೂರವಿರಬೇಕು. ಪರರಿಂದ ಏನನ್ನೂ ಆಶಿಸದೆ ನಾವು ಸಂಸ್ಕೃತಿಯನ್ನು ಪಡೆದ ಪೂರ್ಣಜ್ಞಾನಿಯಾಗಬೇಕು. ಇದೇ ಅವರ ದಿವ್ಯಬೋಧೆ.

ವೇದಗಳು, ಉಪನಿಷತ್ತುಗಳು, ಹಾಗೂ ಗೀತೆಯಲ್ಲಿ ಅವರು ಅಪಾರ ನಂಬಿಕೆಯನ್ನಿಟ್ಟಿದ್ದರು. "ನಾನು ಎಲ್ಲರ ಕಣ್ಣೆದುರಿಗೆ ಉಪನಿಷತ್ತುಗಳನ್ನು ಎತ್ತಿ ಹಿಡಿದು ಬೋಧಿಸುವವನು. ಶಕ್ತಿಯನ್ನು ಹೊರತು ಇನ್ನೇನನ್ನೂ ಬೋಧಿಸುವುದಿಲ್ಲ." ಆತ್ಮವೇ ಜೀವಶಕ್ತಿ. ಶಕ್ತಿಯೇ ಭಗವಂತನ ಬಲ. ಜಗತ್ತಿನಲ್ಲಿರುವುದು ಒಂದೇ ಒಂದು ಆತ್ಮ; ಜಗತ್ ಸರ್ವವೂ ಆತ್ಮನೇ. ಆತ್ಮನಲ್ಲಿ ಲಿಂಗ, ವರ್ಣಾಶ್ರಮಗಳ ಭೇದವಿಲ್ಲ. ಹಣ, ಕೀರ್ತಿ ದಾಹಗಳು ನಮ್ಮನ್ನು ಈ ಪ್ರಪಂಚಕ್ಕೆ ಬಂಧಿಸುವ ಸಂಕೋಲೆಗಳು. ಆತ್ಮಕ್ಕೆ ಕೊನೆಯಿಲ್ಲ, ಮೊದಲಿಲ್ಲ. ಅದನ್ನು ಕಾಣಲು ನಮ್ಮ ಮನಸ್ಸೇ ಮುಖ್ಯಸಾಧನ. ಆತ್ಮವು ಭಗವಂತನೊಡನೆ ಸೇರಿ ಸಂಗಮವಾಗಲಿರುವು ದೆಂಬುದನ್ನು ಘಂಟೆಯಂತೆ ಉದ್ಘೋಷಿಸುವುದೇ ನಮ್ಮ ವೇದಾಂತದ ತಿರುಳು. ಉಪನಿಷತ್ತುಗಳ ಬೋಧನೆಯ ಸಾರದಿಂದ ಹೊರಹೊಮ್ಮುತ್ತಿರುವ ಸಾರವೆಂದರೆ 'ನಿರ್ಭಯತೆ.' ಅವುಗಳು ಶಕ್ತಿಯ ದೊಡ್ಡ ಗಣಿಗಳು. ಇಡೀ ವಿಶ್ವಕ್ಕೆ ಸಾಕಾಗು ವಷ್ಟು ಶಕ್ತಿ ಅವುಗಳಲ್ಲಿದೆ. ಮಾನಸಿಕ ಮತ್ತು ಧರ್ಮ ಸ್ವಾತಂತ್ರ್ಯಗಳು ಉಪನಿಷತ್ತಿನ ಮೂಲಮಂತ್ರಗಳು. ನೀನು ಸರ್ವವನ್ನೂ ತ್ಯಜಿಸಿ ತ್ಯಾಗಿಯಾಗೆಂದು ಗೀತೆಯು ಬೋಧಿಸುತ್ತದೆ. ನೀನು ಓದುತ್ತಿರು, ಬರೆಯುತ್ತಿರು, ಅಥವಾ ಧ್ಯಾನಮಾಡುತ್ತಿರು ಎಂದೂ ಸೋಮಾರಿಯಾಗಬೇಡ. ಭರತಖಂಡದ ಆದರ್ಶಸ್ತ್ರೀ ಸತಿಯಲ್ಲ, ಮಾತೆ. ನಮ್ಮ ಜನಾಂಗ ಕ್ಷೀಣತೆಗೊಳ್ಳುತ್ತಿರುವುದಕ್ಕೆ ಶಕ್ತಿ ಸ್ವರೂಪಿಣಿಯರಾದಂಥ ಸ್ತ್ರೀಯರನ್ನು ಗೌರವಿಸದಿರುವುದೇ ಮುಖ್ಯಕಾರಣ. ಆಕೆ ಆರ್ಯಾವರ್ತದ ಮಹಾ ದೇವಿ; ಪವಿತ್ರತೆ, ಸೌಜನ್ಯ, ಸೌಶೀಲ್ಯ, ಕರುಣೆ, ಕರ್ಮದಲ್ಲಿ ನಿಸ್ವಾರ್ಥ ಬುದ್ಧಿ, ದೈವಭಕ್ತಿಗಳುಳ್ಳ ಎಂದೆಂದೂ ಬತ್ತದ ಚಿಲುಮೆ. ಕರ್ಮವನ್ನು ಮಾಡುವುದಕ್ಕೆ ಮಾತ್ರ ನಿನಗೆ ಹಕ್ಕು, ಫಲಾಪೇಕ್ಷೆಯನ್ನು ನೀನು ಮಾಡಲೇಕೂಡದು. ಈ ಅವರ ಮಾತು 'ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷುಕದಾಚನ' ಎಂಬ ಗೀತಾಚಾರ್ಯನ

ಮಾತುಗಳನ್ನು ಪ್ರತಿಧ್ವನಿಸುತ್ತವೆ. ಅವರು 'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂಬ ಮನುವಚನವನ್ನು ಬಲವಾಗಿ ಖಂಡಿಸಿದ್ದರು. ಈ ಬಗ್ಗೆ ಅವರ ಮುಖ್ಯ ಶಿಷ್ಯೆಯಾದ ಸಿಸ್ಟರ್ ನಿವೇದಿತರವರು "ನನ್ನ ಗುರುವಾದ ವಿವೇಕಾನಂದರು ಭಾರತದ ಪುರುಷರಿಗಿಂತಲೂ ಸ್ತ್ರೀಯರಲ್ಲಿ ಗಾಢ ನಂಬಿಕೆಯನ್ನಿಟ್ಟಿದ್ದರು. ಭಾರತ ದೇಶದ ಗೃಹಜೀವನವು ಇಡೀ ಜಗತ್ತಿಗೆಲ್ಲ ಆದರ್ಶವಾಗಿರುವುದಕ್ಕೆ ಈ ದೇಶದ ಕುಲಮಾತೆಯರ ತಪಸ್ಯೆಯೇ ಮುಖ್ಯಕಾರಣವೆಂದು ಸಾರಿ ಸಾರಿ ಹೇಳುತ್ತಿದ್ದರು" ಎಂದು ಹೇಳಿರುವ ಮಾತುಗಳು ಅತ್ಯಂತ ಗಮನೀಯವಾಗಿವೆ. ಈ ಎಲ್ಲ ಮಾತುಗಳು ಅವರ ಬೋಧನೆಯ ಸಮುದ್ರದಲ್ಲಿ ಒಂದು ಹನಿಯನ್ನು ತೋರಿಸುವ ಪ್ರಯತ್ನ.

ಪರಮಹಂಸರ ಭೀಮಶಿಷ್ಯ, ಆಜನ್ಮಪೂರ್ಣ ಅಸ್ಖಲಿತ ಬ್ರಹ್ಮಚಾರಿ, ಗುರು ವಾಕ್ಯಪರಿಪಾಲನಾಧುರಂಧರರಾದ ವಿವೇಕಾನಂದರು ಯಾರೊಡನೆಯೂ ವೃಥಾ ವಾದಕ್ಕಿಳಿಯುತ್ತಿರಲಿಲ್ಲ. ಒಮ್ಮೆ ಅವರು ರೈಲುಗಾಡಿಯಲ್ಲಿ ಪ್ರಯಾಣಮಾಡು ತ್ತಿದ್ದಾಗ, ಇಬ್ಬರು ಆಂಗ್ಲ ಮಹನೀಯರು, ಇವರನ್ನೂ, ಕಾವಿಬಟ್ಟೆಯನ್ನೂ ಟೀಕಿಸಿದಾಗ ವಿವೇಕಾನಂದರು ಸುಮ್ಮನಿದ್ದರಂತೆ. ಆಂಗ್ಲರು ತಮ್ಮ ಮಾತುಗಳನ್ನು ನಿಲ್ಲಿಸಿದಾಗ, 'ದಯವಿಟ್ಟು ಕುಡಿಯುವ ನೀರಿದ್ದರೆ ಕೊಡುತ್ತೀರಾ' ಎಂದು ಕೇಳಿದರು. ಆಂಗ್ಲರು ಅವರು ಇಂಗ್ಲಿಷ್ ಬಲ್ಲರೆಂಬುದನ್ನು ಕಂಡು ಡಂಗಾಗಿ, 'ನೀವೇಕೆ ನಾವು ನಿಮ್ಮ ಬಗ್ಗೆ ಮಾತನಾಡಿದಾಗ ಸುಮ್ಮನಿದ್ದಿರಿ' ಎಂದು ಕೇಳಿದಾಗ ಅವರು 'ನಾನು ಮೂರ್ಖರೊಂದಿಗೆ ವೃಥಾ ಚರ್ಚೆಮಾಡಲು ಬಯಸುವುದಿಲ್ಲ' ಎಂದುತ್ತರವಿತ್ತರಂತೆ.

ಈಗ ಭಾರತದ ಎಲ್ಲೆಡೆಯಲ್ಲೂ ವಿವೇಕಾನಂದರ ಶತಮಾನೋತ್ಸವವನ್ನು ಆಚರಿಸುತ್ತಿದ್ದಾರೆ. ಬಂಗಾಳವು ತನ್ನ ಹೆಮ್ಮೆಯ ಪುತ್ರನ ಕೀರ್ತಿಯನ್ನು ಶಾಶ್ವತ ವಾಗಿಡಲು ಅವರ ಹೆಸರಿನಲ್ಲಿ "ಸ್ವಾಮಿ ವಿವೇಕಾನಂದ ವಿಶ್ವವಿದ್ಯಾನಿಲಯ" ಎಂಬ ವಿಶ್ವವಿದ್ಯಾನಿಲಯವನ್ನು ಆರಂಭಿಸಲು ಯೋಚಿಸಿದೆ.

ವಿವೇಕಾನಂದರು 'ಸರ್ವಧರ್ಮ ಸಮ್ಮೇಳನ'ದಿಂದ ಹಿಂತಿರುಗಿ ಬಂದಮೇಲೆ ಮಾಡಿದ ಮತ್ತೊಂದು ಶ್ಲಾಘನೀಯವಾದ ಕೆಲಸವೆಂದರೆ, ಶ್ರೀರಾಮಕೃಷ್ಣರ ದಿವ್ಯವಾಣಿಯನ್ನು ಜನಪ್ರಿಯಗೊಳಿಸಲು ಪ್ರಯತ್ನಿಸಿದ್ದು. "ಶ್ರೀ ರಾಮಕೃಷ್ಣ ಮಠ" ಎಂಬ ಸಂಸ್ಥೆಯ ಶಾಖೆಗಳನ್ನು ದೇಶವಿದೇಶಗಳಲ್ಲಿ ಸ್ಥಾಪಿಸಿ, ಮುಂದಿನ ಯುವಜನಾಂಗವನ್ನು ರೂಪಿಸಲು ತಮ್ಮ ದೇಶದ ಶಿಕ್ಷಣ ಧ್ಯೇಯಗಳನ್ನು ಪ್ರತಿಪಾದಿ ಸಿದರು. ಇಂದು ಆ ಸಂಸ್ಥೆ ಬೃಹತ್ತಾಗಿ ಬೆಳೆದು, ಕ್ಯಾಲಿಫೋರ್ನಿಯ, ನ್ಯೂಯಾರ್ಕ್, ಪ್ಯಾರಿಸ್, ಕಲ್ಕತ್ತ, ಬೊಂಬಾಯಿ, ಮದರಾಸು ಮೊದಲಾದ ನಗರಗಳಲ್ಲಿ ಯುವಕರಿಗಾಗಿ 'ವಿವೇಕಾನಂದ ಕಾಲೇಜ್'; ಸ್ತ್ರೀಯರಿಗಾಗಿ 'ಶಾರದಾಮಣಿ ಕಾಲೇಜು'ಗಳನ್ನು ಅತ್ಯಂತ ಜನಪ್ರಿಯವಾಗಿ ನಡೆಸುತ್ತಿದೆ. ವೇದಾಂತಕೇಸರಿ ಎನಿಸಿದ ವಿವೇಕಾನಂದರು ಒಂದು ವ್ಯಕ್ತಿಯಲ್ಲ, ಎಲ್ಲ ಕಾಲಕ್ಕೂ ದಾರಿದೀಪವಾಗಿ

ನಿಲ್ಲಬಲ್ಲಂಥ ಸಿಡಿಲಿನಂಥ ದಿವ್ಯಶಕ್ತಿ. ಅವರ ನುಡಿಗಳು ಮಿಂಚಿನ ಮಡಿಲಿಂದ ತೂರಿಬಂದ ಸಿಡಿಲ ಕಿಡಿಗಳಂತಿವೆ. ಅವರ ವ್ಯಕ್ತಿತ್ವವನ್ನು ಬಚ್ಚಿಡುವ ಪ್ರಯತ್ನ ಸೂರ್ಯನಲ್ಲಿ ಬೆಳಗುತ್ತಿರುವ ಪ್ರಕಾಶವನ್ನು ಬಚ್ಚಿಡುವ ಪ್ರಯತ್ನದಂತೆ ನಿರರ್ಥಕ ವಾದದ್ದು. ಆ ವ್ಯಕ್ತಿತ್ವವು ಅವರು ಜಗತ್ತಿನ ಮುಂದಿನ ಜನಾಂಗಗಳಿಗೆ ಬಿಟ್ಟು ಹೋಗಿರುವ ಎಂದೆಂದಿಗೂ ಸವೆಯದ ಸ್ಫೂರ್ತಿದಾಯಕವಾದ ಪ್ರಜ್ವಲಿಸುತ್ತಿರುವ, ಪರಂಪರಾನುಗತವಾದ ಆಸ್ತಿಯಾಗಿದೆ.

–ಪಿ. ಸಿ. ಮಲ್ಲೇಶಪ್ಪ

ಅನುಕರಣೆ

ಕಟೆದಿಟ್ಟ ಶಿಲೆಯಂತೆ ಕೈಕಟ್ಟಿ, ಗಟ್ಟಿಗೊಂಡು
ಕುಳಿತೆ ನಿನ್ನಂತೆಯೇ :
ಇದ್ದಷ್ಟೂ ಎಣ್ಣೆ ಸುರಿದೆ. ಕಣ್ಣು—
ಬತ್ತಿ ಪ್ರಜ್ವಲಿಸಿದುವು ಅರೆಕ್ಷಣ, ಮಸೆದ ಕತ್ತಿಯಲಗಿನಂತೆ.
ತಲೆಗೆ ಪಾವುಡ ಬಿಗಿದು ಕಟ್ಟಿ, ಹಣೆ ಮೇಲಷ್ಟು—
ಕೂದಲಿಳಿಬಿಟ್ಟೆ ಛೂರಿಯಂತೆ, ನಿನ್ನಂತೆಯೇ.
ನಿನ್ನೆದೆಯ ಅಗಿದಗಿದು ತೆಗೆಯುತ್ತಲೊಂದೊಂದೆ ಮಸಾಲೆ
ಕೂಡಿಸಿಟ್ಟುಕೊಳ್ಳತೊಡಗಿದೆ, ಅಷ್ಟರಲಿ ಗುಟ್ಟಿನಲ್ಲಿ
ಕುಟ್ಟಿತು ಸಂನ್ಯಾಸದ ಗಂಟೆ, ಕಿಣಿ ಕಿಣಿ.
ಕಾವೆ ಭಗವೆಯುರಿ ನಡುವೆ—ಝಗಮಗಿಸಿ
ಮುಗುಳುಕ್ಕಿದೆ ನೀನು ;
ಶರ್ಟು—ಪ್ಯಾಂಟಿನಲಿ ಸುಟ್ಟು
ಕರಕಾಗಿದ್ದೆ ನಾನು.
ನೀನೆದ್ದು ಹೊರಹೊರಟೆ ಹಳ್ಳ ಹೊಳೆ ಬೆಳ್ಳಿ
ಸ್ನಾನಕ್ಕೆಂದು : ನಾನು ಮರಳಿದೆ ಮತ್ತೆ ಕತ್ತಲೆಗೆ
ಹೊಗೆಯ ಹಿತ್ತಲ ಮನೆಗೆ.
ಅಲ್ಲಿ ಕಂಡದ್ದಿಷ್ಟು :
ಕಪ್ಪು ಬೆಕ್ಕಿನ ಹಳದಿ ಕಣ್ಣು.

—ಬುದ್ದಣ್ಣ ಹಿಂಗಮಿರೆ

ಅಭಿವಂದನೆ

ಸ್ವಾಮಿ ವಿವೇಕಾನಂದರು ಬದುಕಿದ್ದುದು ೪೦ ವರ್ಷಗಳು ಮಾತ್ರವಾದರೂ, ಅವರ ಸಂದೇಶವು ಎಂದಿಗೂ ಮರೆಯಲಾಗದುದು. ಸಮಕಾಲೀನ ಭಾರತದ ನಿರ್ಮಾಪಕರಲ್ಲಿ ಸ್ವಾಮೀಜಿಯವರು ಒಬ್ಬರು. ಅವರು ತಮ್ಮ ಭಾಷಣ ಮತ್ತು ಲೇಖನಗಳಿಂದ ಎಲ್ಲರನ್ನೂ ಪ್ರಭಾವಿತಗೊಳಿಸಿದ್ದಾರೆ. ಅವರಿಗೆ ಅಭಿವಂದನೆಯನ್ನು ಸಲ್ಲಿಸಬೇಕಾದುದು ನಮ್ಮ ಕರ್ತವ್ಯ. ಅವರ ಪ್ರಭಾವವನ್ನು ಮೂರು ಬಗೆಗಳಾಗಿ ವಿಂಗಡಿಸಬಹುದು : (೧) ಸ್ವಾಮಿ ವಿವೇಕಾನಂದರು ವ್ಯಕ್ತಿಗೆ ನೀಡಿದ ಸಂದೇಶ; (೨) ಸ್ವಾಮಿ ವಿವೇಕಾನಂದರ ಭಾರತನಿಷ್ಠೆ ; ಮತ್ತು (೩) ಸ್ವಾಮಿ ವಿವೇಕಾನಂದರು ಮತ್ತು ಪ್ರಪಂಚ.

೧

" ಪ್ರತಿಯೊಂದು ಆತ್ಮವೂ ದೈವಿಕ ಶಕ್ತಿಯನ್ನು ಹೊಂದಿದೆ. ಆಂತರಿಕವಾದ ಮತ್ತು ಬಾಹ್ಯದ ಪ್ರಕೃತಿಯನ್ನು ನಿಯಮದಿಂದ ಹಿಡಿತದಲ್ಲಿಟ್ಟುಕೊಂಡು ಅಂತರ್ಗತವಾದ ದೈವಿಕ ಶಕ್ತಿಯನ್ನು ಪ್ರಕಟಪಡಿಸುವುದೇ ಮಾನವ ಜೀವನದ ಗುರಿ. ಈ ಗುರಿಯನ್ನು ನಿಯಮಿತವಾದ ಕೆಲಸ ಮಾಡುವುದರಿಂದಾಗಲೀ ಪೂಜಿಸುವುದರಿಂದಾಗಲೀ ಮನಸ್ಸನ್ನು ಹತೋಟಿಯಲ್ಲಿಟ್ಟುಕೊಳ್ಳುವುದರಿಂದಾಗಲೀ ವೇದಾಂತಾಭ್ಯಾಸದಿಂದಾಗಲೀ ಸಾಧಿಸಿ ಮುಕ್ತನಾಗು. ಇದೇ ಧರ್ಮ; ವ್ರತ ನಿಯಮ ಉಪವಾಸಾದಿಗಳು ಗ್ರಂಥಾಭ್ಯಾಸ ಮತ್ತು ದೇವಸ್ಥಾನಗಳು ಗೌಣ ; ದ್ವಿತೀಯ ಸ್ಥಾನವನ್ನು ಆಕ್ರಮಿಸುತ್ತವೆ "

ಇದೇ ವ್ಯಕ್ತಿಗೆ ಸ್ವಾಮಿ ವಿವೇಕಾನಂದರು ಕೊಟ್ಟಿರುವ ಸಂದೇಶ. " ಯಾವ ವ್ಯಕ್ತಿಯೂ ಪಾಪಿಯಲ್ಲ; ಎಲ್ಲರಿಗೂ ಮೋಕ್ಷದ್ವಾರವು ತೆರೆದಿದೆ; ಇಡೀ ಜೀವನವು ಸಾಧನೆ." ಈ ಸಂದೇಶವು

ಉತ್ತಿಷ್ಠತ ।
ಜಾಗ್ರತ ।
ಪ್ರಾಪ್ಯವರಾನ್ನಿಬೋಧತ ।

ಎಂಬ ಮೂರು ಅಮರವಾಣಿಗಳಲ್ಲಿ ಅಡಗಿದೆ.

೨

ಸ್ವಾಮಿ ವಿವೇಕಾನಂದರು ಭಾರತನಿಷ್ಠೆಯುಳ್ಳ ವ್ಯಕ್ತಿಯಾಗಿದ್ದರು. ಚರಿತ್ರೆಯಲ್ಲಿ ಅವರ ಜನನಕಾಲವು ನಮ್ಮ ದೇಶದ ದಾರುಣ ದೆಸೆಯನ್ನು ತೋರಿಸುವುದು.

ನಮ್ಮ ದೇಶವು ರಾಜಕೀಯ ದಾಸ್ಯದಲ್ಲಿದ್ದಿತು; ಆರ್ಥಿಕವಾಗಿ ಪರಾವಲಂಬನೆಯೇ ಗತಿ ಎಂದು ನಂಬಿದ್ದ ಕಾಲವದು; ಪಾಶ್ಚಾತ್ಯ ಸಂಸ್ಕೃತಿಯು ಮೇಲ್ಮಟ್ಟದ್ದು, ಭಾರತೀಯ ಸಂಸ್ಕೃತಿಯು ಕೀಳಾದದ್ದು ಎಂದು ಕಲಿತವರೇ ಭಾವಿಸಿದ್ದ ಕಾಲವದು. ಇಂತಹ ಪರಿಸ್ಥಿತಿಯು ಇದ್ದ ಕಾಲದಲ್ಲಿ ಸ್ವಾಮಿಜಿಯವರು ಜನ್ಮತಾಳಿದರು. ಶ್ರೀ ರಾಮಕೃಷ್ಣ ಪರಮಹಂಸರ ಜೀವನ ಮತ್ತು ಸಾಧನೆಗಳಿಂದ ಪ್ರಭಾವಿತರಾಗಿ, ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪಾರಂಗತರಾಗಿ, ಪ್ರಾಚ್ಯ ಮತ್ತು ಪಾಶ್ಚಾತ್ಯ ದರ್ಶನಗಳನ್ನು ಅಭ್ಯಸಿಸಿ ತಿಳಿದವರಾಗಿ, ಭಾರತದ ವೇದಾಂತ ತತ್ತ್ವವು ಇಡೀ ಪ್ರಪಂಚಕ್ಕೆ ಮಾರ್ಗದರ್ಶನ ಮಾಡಬಲ್ಲುದೆಂದು ಸ್ವಾಮೀಜಿಯವರು ಸಾಧಾರವಾಗಿ ತೋರಿಸಿದರು. ರಾಜಕೀಯ ದಾಸ್ಯಕ್ಕಿಂತಲೂ ಹೇಯವಾದುದು ಮಾನಸಿಕ ದೌರ್ಬಲ್ಯವೆಂಬುದನ್ನು ಭಾರತನಿಷ್ಠೆಯುಳ್ಳವರಾದ ಸ್ವಾಮಿ ವಿವೇಕಾನಂದರು ತಮ್ಮ ಭಾಷಣಗಳಿಂದಲೂ ಉಪನ್ಯಾಸಗಳಿಂದಲೂ ಸಿದ್ಧಮಾಡಿ ತೋರಿಸಿದ್ದಾರೆ.

> "ಭಾರತವನ್ನು ನಿರವಶೇಷವಾಗಿ ನಾಶಪಡಿಸುವುದು ಸಾಧ್ಯವಿಲ್ಲ; ಭಾರತವು ಅಮರವಾದುದು. . . . ತನ್ನ ನಾಗರಿಕತೆ ಮತ್ತು ಸಂಸ್ಕೃತಿಗಳಿಂದ ಭಾರತವು ಎಂದಿಗೂ ಜೀವಂತವಾಗಿರುವುದೆಂದು ತಿಳಿ . . . . ಭಾರತಕ್ಕೆ ಉತ್ತಮ ಭವಿಷ್ಯವಿದೆ–ಭವಿಷ್ಯ ಭಾರತವು ಅನ್ಯಾದೃಶವಾಗಿರುತ್ತದೆ."

ಇವು ಸ್ವಾಮೀಜಿಯವರ ಭಾರತನಿಷ್ಠೆ, ಸ್ವದೇಶಪ್ರೇಮ, ಭಾರತದ ತತ್ತ್ವಶಾಸ್ತ್ರದಲ್ಲಿದ್ದ ನಂಬಿಕೆ–ಇವುಗಳನ್ನು ತೋರಿಸುತ್ತವೆ.

೩

ಭಾರತನಿಷ್ಠೆಯುಳ್ಳವರೆಂದಮಾತ್ರಕ್ಕೆ ಸ್ವಾಮಿ ವಿವೇಕಾನಂದರಿಗೆ ಇತರ ದೇಶಗಳು ಮತ್ತು ಇತರ ಜನಾಂಗಗಳನ್ನು ಕಂಡರೆ ಅಸಹಿಷ್ಣುತೆಯಿದ್ದಿತು ಎಂದು ಅರ್ಥಮಾಡಲಾಗದು. 'ಉದಾರಚರಿತಾನಾಂತು ವಸುಧೈವ ಕುಟುಂಬಕಮ್' ಎಂಬುದು ಸ್ವಾಮೀಜಿಯವರ ಜೀವನದಲ್ಲಿ ಕಂಡುಬರುವ ನಿತ್ಯಸತ್ಯ. "ಸತ್ಯವೇ ನನ್ನ ದೇವರು; ಪ್ರಪಂಚವೇ ನನ್ನ ದೇಶ" ಎಂದು ಸ್ವಾಮಿ ವಿವೇಕಾನಂದರು ಘೋಷಿಸಿದ್ದಾರೆ. ಅವರ ಚಿಕಾಗೋ ಭಾಷಣದ ಮೊದಲ ಮಾತುಗಳೆಂದರೆ, "ಅಮೆರಿಕದ (ನನ್ನ) ಸಹೋದರ ಸಹೋದರಿಯರೇ" ಎಂಬುವು. ಈ ಮಾತುಗಳು ಸ್ವಾಮೀಜಿಯವರು ವಿಶ್ವಕುಟುಂಬಿಗಳೆನ್ನುವುದನ್ನು ತೋರಿಸುತ್ತವೆ. ಭಾರತದ ಹಳ್ಳಿಗಳು ಮತ್ತು ಪಾಶ್ಚಾತ್ಯ ನಗರಗಳಲ್ಲಿ ಸ್ವಾಮಿ ವಿವೇಕಾನಂದರು ವಿಶೇಷವನ್ನೇನನ್ನೂ ಕಾಣಲಿಲ್ಲ.

ವಿದ್ಯಾವಿನಯಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ ।
ಶುನಿಚೈವ ಶ್ವಪಾಕೇಚ ಪಂಡಿತಾ ಸಮದರ್ಶಿನಃ ॥

ಎಂಬ ಗೀತಾವಾಕ್ಯದ ಜೀವಂತ ದೃಷ್ಟಾಂತವೆಂದರೆ ಸ್ವಾಮಿ ವಿವೇಕಾನಂದರು. ಈ ಸಮದರ್ಶಿಗಳಾದ ಮಹಾನುಭಾವರು ಸರ್ವಧರ್ಮಸಮನ್ವಯದ ಆಚಾರ್ಯರಾದುದರಲ್ಲಿ ವಿಶೇಷವೇನೂ ಇಲ್ಲ.

" . . ಹಿಂದಿನ, ಇಂದಿನ, ಭವಿಷ್ಯತ್ತಿನ ಪ್ರವಾದಿಗಳೆಲ್ಲರಿಗೂ (ನನ್ನ) ನಮಸ್ಕಾರ ",

ಎಂದು ಸ್ವಾಮೀಜಿಯವರು ಉದ್ಗರಿಸಿದ್ದಾರೆ. ಶ್ರೀ ರಾಮಕೃಷ್ಣಪರಮಹಂಸರ ಉತ್ತಮೋತ್ತಮ ಶಿಷ್ಯರಿಗೆ ಸಲ್ಲುವ ಮಾತುಗಳಿವು.

ಸ್ವಾಮಿ ವಿವೇಕಾನಂದರು ರಾಜಯೋಗದ ಹೆಚ್ಚುಗಳವನ್ನು ತಮ್ಮ ಭಾಷಣಗಳು ಮತ್ತು ಲೇಖನಗಳಲ್ಲಿ ತಿಳಿಸಿದ್ದಾರೆ. ಇದಕ್ಕೆ ಕಾರಣವಿಷ್ಟೆ: ರಾಜಯೋಗವು ಆಸ್ತಿಕ, ನಾಸ್ತಿಕ, ಬೌದ್ಧ, ಕ್ರಿಶ್ಚಿಯನ್ ಭೇದವನ್ನು ಹುಡುಕುವುದಿಲ್ಲ; ಮಾನವರೆಲ್ಲರೂ ಒಂದೇ ರೀತಿಯಾಗಿ ಗೌರವಕ್ಕೆ ಅರ್ಹರು ಎಂಬುದನ್ನು ರಾಜಯೋಗವು ತಿಳಿಸಿಕೊಡುತ್ತದೆ.

* * * *

ಪ್ರತಿಯೊಬ್ಬ ವ್ಯಕ್ತಿಗೂ, ಪ್ರತಿ ಭಾರತೀಯನಿಗೂ ಮತ್ತು ಇಡೀ ಪ್ರಪಂಚಕ್ಕೂ ಸ್ವಾಮಿ ವಿವೇಕಾನಂದರ ಸಂದೇಶವಿದ್ದೇ ಇದೆ. ಧ್ರುವನಕ್ಷತ್ರವು ಅಚಲವಾಗಿದ್ದು ಪ್ರತಿ ಪ್ರಯಾಣಿಕನಿಗೂ ಮಾರ್ಗದರ್ಶನವನ್ನು ಮಾಡುತ್ತಿರುವಂತೆ, ಸ್ವಾಮಿ ವಿವೇಕಾನಂದರೂ ಎಲ್ಲಾ ಜ್ಞಾನಪಿಪಾಸುಗಳಿಗೂ ಸಾಧಕರಿಗೂ ಅವಶ್ಯವಾಗಿದ್ದಾರೆ.

—ಕೆ. ಕೃಷ್ಣ ಅಯ್ಯಂಗಾರ್

ಸ್ವಾಮೀಜಿಯನ್ನು ಕುರಿತು ಪರಮಹಂಸರು

“ನರೇಂದ್ರ ಅತ್ಯಂತ ಉಚ್ಚ ಅಂತಸ್ತಿಗೆ ಸೇರಿದವನು—ನಿರಾಕಾರ ರಾಜ್ಯಕ್ಕೆ ಸೇರಿದವನು. ಆತನಲ್ಲಿ ಪುರುಷಸತ್ತ್ವವಿದೆ. ಅಲ್ಲಿಗೆ ಅಷ್ಟೊಂದುಜನ ಬರುತ್ತಾರೆ, ಅವನಂಥವರು ಬೇರೆ ಯಾರೂ ಇಲ್ಲ.

ಒಮ್ಮೊಮ್ಮೆ ಹಾಗೇ ಕುಳಿತುಕೊಂಡು ಭಕ್ತರ ಸಂಬಂಧವಾಗಿ ಲೆಕ್ಕಾಚಾರ ಹಾಕುತ್ತೇನೆ. ಕೆಲವರು ಹತ್ತುದಳದ, ಇನ್ನು ಕೆಲವರು ಹದಿನಾರುದಳದ, ಮತ್ತೆ ಕೆಲವರು ನೂರುದಳದ ಪದ್ಮಗಳ ಹಾಗೆ ಕಂಡು ಬಂದಿದಾರೆ. ಆದರೆ ಪದ್ಮಗಳ ಮಧ್ಯೆ ನರೇಂದ್ರ ಎಂಬ ಪದ್ಮ ಸಹಸ್ರದಳದ್ದು.

ಉಳಿದವರೆಲ್ಲ ಚೆಂಬು, ಕೊಡ ಇವುಗಳಾದರೆ, ನರೇಂದ್ರ ಒಂದು ಭಾರಿ ಹಂಡೆ. ಕುಂಟೆ ಕೊಳಗಳ ಮಧ್ಯೆ ನರೇಂದ್ರ ಒಂದು ದೊಡ್ಡಕೆರೆ. ಉದಾಹರಣೆಗೆ ಹಲಧಾರ ಪುಕುರ.

ಮೀನುಗಳಲ್ಲಿ ನರೇಂದ್ರ ಕೆಂಪು ಕಣ್ಣುಳ್ಳ ‘ರೂಯಿ’ ಎಂಬ ಹೆಸರಿನ ದೊಡ್ಡ ಮೀನು. ಉಳಿದವರು ವಿವಿಧ ವಿಧದ ಚಿಕ್ಕಪುಟ್ಟ ಮೀನುಗಳು.

ನರೇಂದ್ರ ದೊಡ್ಡಪಾತ್ರೆ—ಬೇಕಾದಷ್ಟು ಸಾಮಾನು ಹಿಡಿಸುತ್ತದೆ. ದೊಡ್ಡ ಟೊಳ್ಳಿರೋ ಬಂಬು. ನರೇಂದ್ರ ಯಾವುದರ ವಶನೂ ಆಗಿಲ್ಲ. ಆಸಕ್ತಿ ಮತ್ತು ಇಂದ್ರಿಯಸುಖಗಳ ವಶನಾಗಿಲ್ಲ. ಆತ ಒಂದು ಗಂಡು ಪಾರಿವಾಳ. ಅದನ್ನು ಕೊಕ್ಕಿನಹತ್ತಿರ ಹಿಡಿದುಕೊಂಡರೆ, ಹಾಗೂ ಹೀಗೂ ಒದರಿ ಬಿಡಿಸಿಕೊಂಡು ಬಿಡುತ್ತದೆ; ಆದರೆ ಹೆಣ್ಣು ಪಾರಿವಾಳ ಸುಮ್ಮನೆ ಇದ್ದು ಬಿಡುತ್ತದೆ.

ನರೇಂದ್ರನದು ಪುರುಷಸ್ವಭಾವ;……………ಸಭೆಯ ಮಧ್ಯದಲ್ಲಿ ನರೇಂದ್ರ ನನ್ನೊಡನೆ ಇದ್ದ ಎಂದರೆ ನನಗೆ ಬಹಳ ಧೈರ್ಯ.”

—‘ವಚನವೇದ’—ಉತ್ತರಾರ್ಧ : ಪುಟ: ೫೪೭–೮

ನೈತಿಕಜೀವನ

"Have faith that you are all, my brave lads, born to do great things. Let not the barks of puppies frighten you, no, not even the thunderbolts of heaven, but stand up and work"

—SWAMI VIVEKANANDA

ಭಾರತಾಂಬೆಯು ಜಗತ್ತಿಗೆ ಅರ್ಪಿಸಿದ ಹಲವಾರು ಭವ್ಯ ಜೀವ ಕುಸುಮಗಳಲ್ಲಿ ಸ್ವಾಮಿ ವಿವೇಕಾನಂದರೂ ಒಬ್ಬರು. ಅವರ ಜೀವಿತಕಾಲ ಮೂವತ್ತೊಂಭತ್ತು ಸಂವತ್ಸರಗಳ ಒಂದು ಅಲ್ಪಾವಧಿಯಾಗಿದ್ದರೂ, ಕೈಗೊಂಡು ಸಾಧಿಸಿದ ಕಾರ್ಯ ಮಹತ್ತಾದುದು, ಬೃಹತ್ತಾದುದು. ಅವರ ಜೀವನ ಮಾನವ ಕೋಟಿಗೇ ಒಂದು ಆದರ್ಶ. ಅಂತಹ ದಿವ್ಯಜೀವನಕ್ಕೆ ಆಧಾರವಾಗಿದ್ದ ದಿವ್ಯ ಶಕ್ತಿ ಯಾವುದು, ಅದನ್ನು ಗಳಿಸಿದ ರೀತಿ ಎಂತು ಎಂಬುದನ್ನು ಅವರ ಜೀವನದ ಕೆಲವು ನಿದರ್ಶನಗಳಿಂದ ವಿವೇಚಿಸೋಣ.

ಮಾನವನ ಜೀವನದ ಆದರ್ಶ ಭವ್ಯವಾಗಿರಬೇಕು, ಉನ್ನತವಾಗಿರಬೇಕು. ಅಂತಹ ಜೀವನದಿಂದ ಮನುಷ್ಯ ಎಂತಹ ಮಹತ್ಕಾರ್ಯವನ್ನಾದರೂ ಸುಲಭವಾಗಿ ಸಾಧಿಸಬಹುದು. ನಮ್ಮ ಭಾವನೆಗಳನ್ನು ಉನ್ನತ ಆದರ್ಶಗಳಿಂದ ಪೋಷಿಸಿದೆ ವೆಂದರೆ ನಮ್ಮ ಜೀವನದ ಕಾರ್ಯಕ್ಷೇತ್ರ ಯಾವುದೇ ಆಗಿರಲಿ ಒಳ್ಳೆಯ ಫಲಗಳ ನ್ನೀಯುವುದರಲ್ಲಿ ಆಶ್ಚರ್ಯವೇನಿಲ್ಲ. ನಮ್ಮ ದೇಶದ ಪ್ರಚಂಡ ಮೇಧಾವಿಗಳು, ಧಾರ್ಮಿಕವ್ಯಕ್ತಿಗಳು, ದೇಶಭಕ್ತರು, ಸಮಾಜಸುಧಾರಕರು ಎಲ್ಲರೂ ತಮ್ಮ ಬಾಲ್ಯದಿಂದಲೇ ತಮ್ಮ ಮುಂದಿನ ಜೀವನಕ್ಕೆ ಬೇಕಾದ ಆದರ್ಶಗಳನ್ನು ಅರಿಯಲು ಉತ್ಸುಕರಾಗಿದ್ದರು, ಅವುಗಳನ್ನು ಅಭ್ಯಾಸಮಾಡುತ್ತಿದ್ದರು.

ಆದರ್ಶ ಜೀವನದ ಮೇಲೆ ಅನೇಕಾನೇಕ ಭಾಷಣಗಳನ್ನು ಕೊಡಬಹುದು, ಲೇಖನಗಳನ್ನು ಬರೆಯಬಹುದು, ಎಲ್ಲವೂ ಬಹಳ ಸುಲಭ. ಆದರೆ, ಅದರ ಆಚರಣೆಯ ಪ್ರಶ್ನೆ ಬಂದಾಗ ಮಾತ್ರ ನಮಗೆ ಅದರ ಕಷ್ಟದ ಅರಿವಾಗುತ್ತದೆ. ಹಲವು ವೇಳೆ ನಮಗೆ ಉನ್ನತಾದರ್ಶಗಳು ಶಬ್ದರೂಪದಲ್ಲಿ ಮಾತ್ರ ಗೋಚರವಾಗಿ ಮಿಕ್ಕೆಲ್ಲ ರೀತಿಗಳಲ್ಲಿಯೂ ಅವ್ಯಕ್ತ, ಅಸ್ಪಷ್ಟವಾಗಿರುತ್ತವೆ. ಇಂತಹ ಅಸ್ಪಷ್ಟ ಆದರ್ಶಗಳನ್ನು ಆಚರಣೆಗೆ ತರುವುದು ಬಹಳ ಕಷ್ಟವಾಗಿ ಕಾಣುತ್ತದೆ. ಅಂತಹ ಸಮಯದಲ್ಲಿ ನಾವು ಸಾಧಕರ ಜೀವನದರ್ಶನ, ಪಠಣಗಳನ್ನು ಶ್ರದ್ಧೆಯಿಂದ ಮಾಡಬೇಕಾಗುತ್ತದೆ. ಅದರಿಂದ ನಮಗಾಗುವ ಉಪಯೋಗ ಅತುಲ, ಅಪರಿಮಿತ.

ಸ್ವಾಮಿ ವಿವೇಕಾನಂದರು ಮಹತ್ವಕೊಡುತ್ತಿದ್ದುದು ನೈತಿಕಜೀವನಕ್ಕೆ.

ನಮ್ಮ ವಿದ್ಯಾಭ್ಯಾಸ ನಮ್ಮನ್ನು ನೀತಿವಂತರನ್ನಾಗಿ ಮಾಡಬೇಕು, ಸುಸಂಸ್ಕೃತರನ್ನಾಗಿ ಮಾಡಬೇಕು. "ನಮ್ಮದು ನಾಸ್ತಿಕ ವಿದ್ಯಾಭ್ಯಾಸವಾಗಬಾರದು. ಅಂತಹ ವಿದ್ಯಾಭ್ಯಾಸದಿಂದ ನಮ್ಮಲ್ಲಿ ದೌರ್ಬಲ್ಯ ಮೂಡುತ್ತದೆ, ವ್ಯಕ್ತಿತ್ವ, ಜೀವನದ ಮೌಲ್ಯ ಹಾಳಾಗುತ್ತದೆ. ಅನೇಕ ವಿಷಯಗಳನ್ನು ಮಿದುಳಿಗೆ ತುರುಕಿ, ಜೀವಿಸಿರುವವರೆಗೂ ಅದನ್ನು ಅರಗಿಸಿಕೊಳ್ಳದೆ ಇದ್ದರೆ ಅದು ವಿದ್ಯಾಭ್ಯಾಸವಲ್ಲ. ನಮಗೆ ಬೇಕಾದದ್ದು ಜೀವನವನ್ನು ಸಾರ್ಥಕಗೊಳಿಸುವ, ನಮ್ಮನ್ನು ಮಾನವರನ್ನಾಗಿ ಮಾಡುವ, ಸುಸಂಸ್ಕೃತರನ್ನಾಗಿ ಮಾಡುವ ವಿದ್ಯಾಭ್ಯಾಸ, ಆಸ್ತಿಕ ವಿದ್ಯಾಭ್ಯಾಸ. ಇಡಿಯ ಜೀವನದಲ್ಲಿ ಐದೇ ಐದು ತತ್ವಗಳನ್ನು ಅರಿತು, ಅಭ್ಯಾಸ ಮಾಡಿ, ನಿನ್ನ ಜೀವನವೇ ಅದನ್ನಾಗಿ ಮಾಡಿಕೊಂಡಿದ್ದರೆ ಆಗ ನೀನು ಇಡೀ ಪುಸ್ತಕಭಂಡಾರವನ್ನೆ ಕಂಠಪಾಠಮಾಡಿಕೊಂಡವನಿಗಿಂತ ವಿದ್ಯಾವಂತ. ವಿಷಯ ಸಂಗ್ರಹಣವನ್ನು ವಿದ್ಯಾಭ್ಯಾಸವೆಂದು ಕರೆಯುವುದಾದರೆ ಪುಸ್ತಕಭಂಡಾರಗಳಿಗಿಂತ ಜ್ಞಾನಿಗಳಿಲ್ಲ, ವಿಶ್ವಕೋಶಗಳಿಗಿಂತ ಋಷಿಗಳಿಲ್ಲ." ಸ್ವಾಮಿಜಿಯವರ ಈ ಅರ್ಥಗರ್ಭಿತ ವಾಣಿಯಲ್ಲಿ ವಿದ್ಯಾಭ್ಯಾಸದ ನೈಜತೆ ಎಷ್ಟು ಚೆನ್ನಾಗಿ ವ್ಯಕ್ತವಾಗುತ್ತದೆ!

ನಮ್ಮ ನೈತಿಕಜೀವನದ ಮಟ್ಟ ಉನ್ನತವಾಗಿದ್ದರೆ ಮಿಕ್ಕೆಲ್ಲ ವಿಷಯದಲ್ಲಿಯೂ ನಮ್ಮ ಜೀವನ ಆದರ್ಶಮಯವಾಗಿರುತ್ತದೆ. ನಮ್ಮ ವಿದ್ಯಾರ್ಥಿ ದೆಸೆಯಲ್ಲಿ ನಾವು ಒಳ್ಳೆಯ ಜೀವನಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಸತ್ಯ, ಪ್ರೇಮ, ನಿರ್ಭಯತೆ, ತ್ಯಾಗ, ಶ್ರದ್ಧೆ, ಏಕಾಗ್ರತೆ ಇವೇ ಮುಂತಾದ ಒಳ್ಳೆಯ ವಿಷಯಗಳನ್ನು ಆಚರಣೆಗೆ ತರಬೇಕು.

"Even if all the world should be against me, Truth must prevail in the end."

ಸತ್ಯವನ್ನೇ ಹೇಳುವುದು, ಸತ್ಯ ಹೇಳಬೇಕೆನ್ನುವಷ್ಟು ಸುಲಭವಲ್ಲ. ಒಂದು ಬಾರಿ ತರುಣ ಸಂನ್ಯಾಸಿ ಸ್ವಾಮಿ ವಿವೇಕಾನಂದರು ಮೈಸೂರು ಮಹಾರಾಜರ ರಾಜಸಭೆಗೆ ಬಂದರಂತೆ. ಧಾರ್ಮಿಕವ್ಯಕ್ತಿಯಾದ ಮಹಾರಾಜರು ಅವರಿಗೆ ಎಲ್ಲ ಗೌರವವನ್ನೂ ತೋರಿಸಿ ರಾಜಸಭೆಯಲ್ಲಿ ಅವರನ್ನು, "ನಮ್ಮ ಸಭಿಕರ ವಿಷಯದಲ್ಲಿ ತಮ್ಮ ಅಭಿಪ್ರಾಯವೇನು?" ಎಂದು ಕೇಳಿದರು. ಸ್ವಾಮಿಜಿ ಹಿಂದು ಮುಂದು ನೋಡದೆ ಸಿಡಿಲುಬಡಿದಂತೆ, "ಸಭಿಕರು ಸಭಿಕರೇ, ಬರಿಯ ಹೊಗಳುಭಟ್ಟರು" ಎಂದುಬಿಟ್ಟರು. ಅರಸರು ಗಾಬರಿಯಾಗಿ ಅವರನ್ನು ಹತ್ತಿರ ಕರೆದು, "ಸ್ವಾಮಿಜಿ, ನೀವು ರಾಜಸಭೆಯಲ್ಲಿ ಆ ರೀತಿ ಮಾತನಾಡಬೇಡಿ, ಅಲ್ಲಿರಬಹುದಾದ ಕೆಲವು ದುಷ್ಟರು ನಿಮಗೆ ವಿಷಕೊಟ್ಟು ಸಾಯಿಸಲೂ ಹಿಂಜರಿಯಲಾರರು" ಎಂದರು. ಆಗ ಸ್ವಾಮಿಜಿ ಹೇಳಿದುದು, "ನಾನು ಸಾಧು. ನಾನು ಪ್ರಾಣಕ್ಕೆ

ಹೆದರುವವನಲ್ಲ. ಆದರೆ ಸತ್ಯವನ್ನು ಬಿಡಲಾರೆ" ಎಂದು. ಅಂತಹ ನಿರ್ಭೀತ ವ್ಯಕ್ತಿ ಸ್ವಾಮಿ ವಿವೇಕಾನಂದರು!

ಮತ್ತೊಂದು ಬಾರಿ ವಿವೇಕಾನಂದರು ಆಳ್ವಾರ್ ಪ್ರಾಂತ್ಯದಲ್ಲಿ ಸಂಚರಿಸುತ್ತಿದ್ದಾಗ ಅಲ್ಲಿಯ ಮಹಾರಾಜ ಮಂಗಳಸಿಂಗರನ್ನೂ ಕಂಡಿದ್ದರು. ಆತನಿಗೆ ವಿಗ್ರಹಾರಾಧನೆಯಲ್ಲಿ ನಂಬಿಕೆಯಿರಲಿಲ್ಲ. ಅವನು ಸ್ವಾಮಿಜಿಯವರಲ್ಲಿ ಈ ವಿಷಯ ಹೇಳಿದಾಗ ಅವರು ಅಲ್ಲಿಯ ಸೇವಕರಿಗೆ, ಅಲ್ಲಿದ್ದ ರಾಜನ ಎದುರಿಗೇ ಅವನ ಒಂದು ಚಿತ್ರದಮೇಲೆ ಉಗುಳುವಂತೆ ಹೇಳಿದರು. ಸೇವಕರು ಭಯದಿಂದ ನಡುಗಿದರು. ಸ್ವಾಮಿಜಿ ಸ್ವಲ್ಪವೂ ವಿಚಲಿತರಾಗದೆ ಹೇಳಿದರು, "ಅದು ಬರಿಯ ಕಾಗದ. ಅದರಲ್ಲಿ ನಿಮ್ಮ ರಾಜನ ರಕ್ತವಿಲ್ಲ, ಮಾಂಸವಿಲ್ಲ. ಕಾಗದದಮೇಲೆ ಉಗುಳುವುದರಲ್ಲೇನು ತಪ್ಪು?" ನಂತರ ರಾಜನನ್ನುದ್ದೇಶಿಸಿ, "ನೋಡಿದಿರಾ, ಅದು ಬರಿಯ ಕಾಗದವಾದರೂ ಅದರಲ್ಲಿ ನಿಮ್ಮ ಚಿತ್ರವಿರುವುದರಿಂದ ಸೇವಕರಿಗೆ ನಿಮ್ಮಲ್ಲಿ ಯಾವ ಭಾವನೆಯಿದೆಯೋ, ಅಂತೆಯೇ ಅದರಲ್ಲಿಯೂ ಇದೆ. ಹಾಗೆಯೇ ವಿಗ್ರಹಾರಾಧನೆ" ಎಂದರು. ಸತ್ಯಪೂರ್ಣವಾದ ಅವರ ಆ ವಾಗ್ಬಾಣದಲ್ಲಿ ಎಂತಹ ನಿರ್ಭೀತಿ ಅಡಗಿದೆ! ಸತ್ಯದ ಅರಿವಾದಮೇಲೆ ನಿರ್ಭೀತಿ ತಾನಾಗಿಯೇ ಬರುತ್ತದೆ. ೨+೨=೪ ಎಂದು ಅನುಭವದಿಂದ ಅರಿತ ಒಬ್ಬ ಚಿಕ್ಕಬಾಲಕ ಎಂತಹ ದೊಡ್ಡಮನುಷ್ಯ ಬಂದು ಅದನ್ನು ತಪ್ಪೆಂದರೂ ಅದನ್ನೇ ಸಾಧಿಸುತ್ತಾನೆಯೇ ವಿನಃ ತನ್ನ ಹೇಳಿಕೆ ತಪ್ಪೆನ್ನುವುದಿಲ್ಲ.

"The idea of true Shraddha must be brought back once more to us, the faith in our own selves must be reawakened, and then only all the problems which face our country will gradually be solved by ourselves"

ನಾವು ತಿಳಿದಿರುವ ವಿಷಯ ಸತ್ಯವೇ ಅಥವಾ ಮಿಥ್ಯವೇ ಎಂದು ಅರಿವಾಗಬೇಕಾದರೆ ನಮ್ಮ ಅಭ್ಯಾಸದಲ್ಲಿ, ಆಚರಣೆಯಲ್ಲಿ, ಶ್ರದ್ಧೆ, ಏಕಾಗ್ರತೆ ಆವಶ್ಯಕ. ಒಂದು ರೀತಿಯಲ್ಲಿ ಶ್ರದ್ಧೆ ಏಕಾಗ್ರತೆಗೆ ಒಯ್ಯುತ್ತದೆ ಎಂದರೂ ತಪ್ಪಾಗಲಾರದು. ಯಾವುದಾದರೂ ಒಂದು ಕತೆ ಬಹಳ ಸ್ವಾರಸ್ಯವಾಗಿದ್ದರೆ ಅದನ್ನು ನಾವು ಶ್ರದ್ಧೆಯಿಂದ ಓದುತ್ತೇವೆ. ಅದನ್ನು ಓದುತ್ತಿರುವ ಸಮಯದಲ್ಲಿ ನಮ್ಮನ್ನು ಯಾರಾದರೂ ಕೂಗಿದರೇ, ನಮ್ಮ ಮುಂದೆ ಯಾರಾದರೂ ಸುಳಿದರೇ ಎಂಬುದು ಕೂಡ ನಮಗೆ ಗೋಚರವಾಗುವುದಿಲ್ಲ.

ಗಂಗೆಯ ದಡದಲ್ಲಿ ಬೆಸ್ತನೊಬ್ಬ ಮೀನನ್ನು ಹಿಡಿಯುತ್ತಿದ್ದನಂತೆ. ಅವನ ಮನಸ್ಸೆಲ್ಲಾ ಮೀನು ಹಿಡಿಯುವುದರಲ್ಲೇ ಮಗ್ನವಾಗಿತ್ತು. ಬಹಳ ಹೊತ್ತಿನ ಮೇಲೆ ಯಾವನೋ ಒಬ್ಬ ದಾರಿಹೋಕ "ಈ ರಸ್ತೆಯಲ್ಲಿ ಯಾವುದಾದರೂ

ಮೆರವಣಿಗೆ ಹೋಯಿತೇ" ಎಂದಾಗ ಬೆಸ್ತ, "ಅದು ನನಗೆ ಗೊತ್ತಿಲ್ಲ" ಎಂದನಂತೆ. ಇದು ಶ್ರೀರಾಮಕೃಷ್ಣ ಪರಮಹಂಸರು ಏಕಾಗ್ರತೆಗೆ ನೀಡುವ ಒಂದು ನಿದರ್ಶನ.

ಒಬ್ಬ ಚಿಕ್ಕಹುಡುಗ. ಅವನಿಗೆ ದೇವರ ಧ್ಯಾನ ಮಾಡಬೇಕೆನ್ನಿಸಿತು. ಸಂಗಡಿಗರೊಡನೆ ದೇವರ ಮುಂದೆ ಪದ್ಮಾಸನಾಸೀನನಾಗಿ ಕುಳಿತ. ಧ್ಯಾನ ಸಾಗಿತು. ಮನೆಯವರೆಲ್ಲರೂ ಹುಡುಗನಿಗಾಗಿ ಹುಡುಕಿದರು. ಎಲ್ಲಿಯೂ ಕಾಣಲಿಲ್ಲ. ಕಡೆಗೆ ಮಹಡಿಯ ಮೇಲಿನ ಕೋಣೆಯ ಬಳಿ ಬಂದರು. ಕೂಗಿದರು, ಉತ್ತರವಿಲ್ಲ. ಮುದ್ದು ಮಗುವಿನ ಮುಂದೆ ದೇವರ ಪಟವಿದೆ. ಧ್ಯಾನಮಗ್ನನಾದ ಆ ಮಗುವಿಗೆ ಬಳಿಯಲ್ಲಿಯೇ ಸುರುಳಿಯಾಗಿ ಹೆಡೆಯೆತ್ತಿ ನಿಮಿರಿರುವ ನಾಗರಹಾವೂ ಸಹ ಗೋಚರವಾಗಲಿಲ್ಲ. ಸಂಗಡಿಗರೆಲ್ಲಾ ಹಾವಿಗೆ ಬೆದರಿ ಓಡಿಹೋಗಿದ್ದರು. ಮನೆಯವರು ಕೂಗಿಕೊಂಡರು, ಹಾವು ಹರಿದುಹೋಯಿತು. ಮಗುವನ್ನೆಬ್ಬಿಸಿದರು. ಆ ಮಗುವಿನ ಮುಖದಲ್ಲಿ ಸ್ವಲ್ಪವೂ ಗಾಬರಿಯ ಚಿಹ್ನೆಯಿರಲಿಲ್ಲ. ಆ ಮಗುವೇ ನರೇಂದ್ರ, ಮುಂದಿನ ಸ್ವಾಮಿ ವಿವೇಕಾನಂದ! ಬೆಳೆಯುವ ಪೈರು ಮೊಳೆಯಲ್ಲಿಯೇ ಕಂಡಿತ್ತು. ಇಂತಹ ಏಕಾಗ್ರತೆಯಿಂದಲೇ ನಮಗೆ ಒಂದು ವಸ್ತುವಿನ, ಅಥವಾ ವಿಷಯದ ವಾಸ್ತವಿಕತೆಯ ಅರಿವಾಗುವುದು. ಶ್ರದ್ಧಾವಿಹೀನವಾದ ಯಾವ ಕೆಲಸವೇ ಆಗಲಿ ಸರಿಯಾದ ರೀತಿಯಲ್ಲಿ ಸಂಪೂರ್ಣವಾಗಲಾರದು. ವಾಸ್ತವಿಕತೆಯ ಅರಿವು ಉಂಟಾದಾಗ ಎಂತಹ ಸಮಯದಲ್ಲಿಯೂ, ನಾವು ಮಿಥ್ಯೆಯನ್ನು ಒಪ್ಪುವುದಿಲ್ಲ. ಅದಕ್ಕೆ ನಿದರ್ಶನಗಳನ್ನು ನಾವು ಹಿಂದೆಯೇ ಕಂಡಿದ್ದೇವೆ. ಅಂತಹ ಸತ್ಯದರ್ಶನದಿಂದ ನಮ್ಮಲ್ಲಿ ಕೆಲವು ಆದರ್ಶಭಾವನೆಗಳೂ ಉನ್ನತ ಧ್ಯೇಯಗಳೂ ಮೂಡುತ್ತವೆ. ಅವುಗಳನ್ನು ಕಾರ್ಯರೂಪಕ್ಕೆ ತರಬೇಕಾದರೆ 'ಬಲ' ಆವಶ್ಯಕ. "ನ್ಯಾಯಮಾತ್ಮಾ ಬಲಹೀನೇನ ಲಭ್ಯಃ", "ಕ್ಷುದ್ರಂ ಹೃದಯ ದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ ಪರಂತಪ" ಎಂಬ ಜೀವಂತ ವಾಕ್ಯಗಳನ್ನು ನಾವು ಮರೆಯುವಂತಿಲ್ಲ. 'ಬಲ' ಎಂದರೆ ಬರಿಯ ದೈಹಿಕ ಬಲವಲ್ಲ, ಆತ್ಮಬಲ, ಮನೋಬಲಕೂಡ. ದೈಹಿಕ, ಆತ್ಮಬಲಗಳೆರಡರ ಸಂಗಮವೇ 'ಸತ್ವ.' ಸತ್ವವಿಹೀನನಾದ ಮನುಷ್ಯನ ಜೀವನ ಬರಡು, ವ್ಯರ್ಥ.

"Great things can be achieved by great sacrifices only."

ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೂ ಸಂಚರಿಸಿ, ಪಂಡಿತ ಪಾಮರರನ್ನೂ, ಅರಸು ಶ್ರೀಮಂತರನ್ನೂ, ಬಡವ ಭಿಕ್ಷುಕರನ್ನೂ ಸಂದರ್ಶಿಸಿ ಭೋಗಯೋಗಗಳನ್ನು ಕಂಡು, ರಾಜರೊಡನೆ ರಾಜನಾಗಿ, ಭಿಕ್ಷುಕರೊಡನೆ ಭಿಕ್ಷುಕನಾಗಿ, ಕಟ್ಟಕಡೆಗೆ ನಮ್ಮ ದೇಶದಲ್ಲಿ ಬೆಳೆದು ಹೆಮ್ಮರವಾಗುತ್ತಿರುವ ದಾರಿದ್ರ್ಯವೃಕ್ಷದ ಉನ್ಮೂಲನಕ್ಕಾಗಿ ಸ್ವಾಮಿ ವಿವೇಕಾನಂದರು ಪಾಶ್ಚಿಮಾತ್ಯ ದೇಶಗಳಿಗೆ ಆರ್ಥಿಕ ಸಹಾಯವನ್ನರಸಿ ಹೊರಟರು. 'ಸರ್ವಧರ್ಮ ಸಮ್ಮೇಳನ' ನಡೆಯುವ ಹಿಂದಿನ

ರಾತ್ರಿ. ಎಲ್ಲೆಲ್ಲೂ ಗಾಢಾಂಧಕಾರ, ಮೈಕೊರೆಯುವ ಛಳಿ, ಬೆಳಗಿನಿಂದ ಊಟವಿಲ್ಲ, ಬೆಚ್ಚನೆಯ ಬಟ್ಟೆಯಿಲ್ಲ. ಈ ಸ್ಥಿತಿಯಲ್ಲಿ ಮಲಗಲು ಹಾಸಿಗೆಯಿಲ್ಲದೆ ಶಿಕಾಗೋ ರೈಲ್ವೇ ನಿಲ್ದಾಣದಲ್ಲಿ ದೊಡ್ಡ ಮರದ ಪೆಟ್ಟಿಗೆಯೊಂದರಲ್ಲಿ ಆಸೀನರಾಗಿದ್ದ ಅವರು ಮರುದಿನ ಮಧ್ಯಾಹ್ನದ ಹೊತ್ತಿಗೆ ವಿಶ್ವವಿಖ್ಯಾತರಾದರು, ಅವರ ಅಮಿತ ಪ್ರೇಮ ದಿಂದ, ಆತ್ಮಬಲದಿಂದ, ಗುರು ರಾಮಕೃಷ್ಣರ ಮೇಲಿನ ವಿಶ್ವಾಸದಿಂದ, ಎಲ್ಲಕ್ಕಿಂತ ಹೆಚ್ಚಾಗಿ ಭಾರತದ ಭ್ರಾತೃಕೋಟಿಯ ಮೇಲಿನ ಮಮತೆಯಿಂದ, ಮಹಾತ್ಯಾಗ ದಿಂದ! ಈ ಶಕ್ತಿ 'ಬ್ರಹ್ಮಚರ್ಯ'ದಿಂದ ಮಾತ್ರ ಸುಲಭಸಾಧ್ಯ. ಆ ಮಾರ್ಗ ಅತೀವ ಕಠಿಣವಾದರೂ ಸ್ವಾಮಿಜಿಯವರಂತಹ ಭವ್ಯಜೀವಿಗಳ ಜೀವನದರ್ಶನ ದಿಂದ ಸುಲಭವಾದೀತು. ಅವರ ಪ್ರೇಮ ಅಪಾರವಾದದ್ದು, ದೀನದಲಿತರನ್ನು, ಕಂಡರೆ ಅವರ ಹೃದಯ ಕರಗಿ ನೀರಾಗುತ್ತಿತ್ತು. 'ಸರ್ವಧರ್ಮ ಸಮ್ಮೇಳನ'ದಲ್ಲಿ ದಿಗ್ವಿಜಯಿಯಾಗಿದ್ದ ಅವರನ್ನು ಅಮೆರಿಕದ ಶ್ರೀಮಂತನೊಬ್ಬನು ಅಂದಿನ ರಾತ್ರಿ ತನ್ನ ಭವನಕ್ಕೆ ಆಹ್ವಾನಿಸಿದ. ಅವರಿಗಾಗಿ ಒಂದು ಕೋಣೆ ಎಲ್ಲ ವೈಭವಗಳಿಂದಲೂ ವಿಜೃಂಭಿಸುತ್ತಿತ್ತು. ಆದರೂ ಮೆತ್ತನೆಯ ಸುಪ್ಪತ್ತಿಗೆಯನ್ನು ತ್ಯಜಿಸಿ ಸ್ವಾಮಿಜಿ ಅಂದು ರಾತ್ರಿ ನೆಲದಮೇಲೆ ಹೊರಳಾಡಿ ಕಣ್ಣೀರು ಸುರಿಸಿದರು, "ಅಯ್ಯೋ! ನನ್ನ ದರಿದ್ರ ಸೋದರರು ನಮ್ಮ ದೇಶದಲ್ಲಿ ಒಂದು ಹಿಡಿ ಕೂಳಿಲ್ಲದೆ ಗೋಳಿಡು ತ್ತಿರುವಾಗ ನನಗೆ ಈ ಭೋಗಜೀವನವೇ?" ಎಂದು ಬಿಸುಸುಯ್ದು ರಾತ್ರಿಯೆಲ್ಲಾ ನೆಲದಮೇಲೆ ಮಲಗಿ ಕಳೆದರು. ಇಂತಹ ಪ್ರೇಮಪೂರ್ಣ ವ್ಯಕ್ತಿಯಾಗಿದ್ದ ಅವರು ಸ್ವತಂತ್ರ ಭಾರತಕ್ಕೆ ಪ್ರಪ್ರಥಮವಾಗಿ ಹೋರಾಡಿದವರು ಎಂದರೆ ಆಶ್ಚರ್ಯವೇನಿಲ್ಲ. ಸ್ವಾಮಿಜಿಯವರ ದೇಶಪ್ರೇಮ ಅತ್ಯುನ್ನತವಾದದ್ದು. 'ಯಾವ ಮಹತ್ಕಾರ್ಯಕ್ಕೇ ಆಗಲಿ, ಮೂರು ವಿಷಯಗಳು ಅತ್ಯಗತ್ಯ. ಪ್ರಪ್ರಥಮವಾಗಿ ನಿಮ್ಮ ಹೃದಯ ಮರುಗಬೇಕು (Feeling). ತರ್ಕದಲ್ಲಾಗಲೀ, ಬುದ್ಧಿಯಲ್ಲಾಗಲೀ ಏನಿದೆ? ಅದು ಎಷ್ಟುದೂರ ಬಂದೀತು? ಹೃದಯದಿಂದಲೇ ಪ್ರೇಮದ ಜನನ. ಜಗದ್ಗರ್ಭ ದಲ್ಲಡಗಿರುವ ಕಟುರಹಸ್ಯಗಳಿಗೆ ಪ್ರೇಮವೇ ಹೆಬ್ಬಾಗಿಲು. ಎರಡನೆಯದಾಗಿ ವ್ಯರ್ಥವಚನಗಳಿಗಿಂತ ಉಪಯುಕ್ತವಾದ ಯಾವುದಾದರೂ ಪರಿಹಾರಗಳನ್ನು (Practical Solution) ಯೋಚಿಸಿ. ಕಷ್ಟದಲ್ಲಿರುವವರಿಗೆ ನಾಲ್ಕು ಹಿತವಚನ ಗಳನ್ನಾಡಿ ಸಮಾಧಾನಮಾಡಿ. ಕಡೆಯದಾಗಿ ನಿಷ್ಠೆ (Steadfastness) ನಿಮ್ಮಲ್ಲಿರಲಿ. ಇಡೀ ಜಗತ್ತೇ ನಿಮಗೆ ತಿರುಗಿಬಿದ್ದರೂ ದೃಢತೆಯಿಂದ, ನಿಷ್ಠೆಯಿಂದ ನಿಮಗೆ ಸತ್ಯ ವೆಂದು ತೋರಿದುದನ್ನುಮಾಡಿ. ಈ ಮೂರೂ ನಿಮ್ಮಲ್ಲಿದ್ದರೆ ಎಂತಹ ಪವಾಡ ಗಳನ್ನಾದರೂ ಮಾಡಬಹುದು' ಎನ್ನುತ್ತಿದ್ದರು ಸ್ವಾಮಿ ವಿವೇಕಾನಂದರು. ದೇಶದ ದಾರಿದ್ರ್ಯವನ್ನು ಸಹಿಸಲಾರದೇ; "ದರಿದ್ರದೇವೋ ಭವ, ಪಾಪಿದೇವೋ ಭವ, ಮೂರ್ಖದೇವೋ ಭವ" ಎಂದು ಸಾರಿದರು. ಅವರ ಸೇವೆಗಾಗಿ ತಮ್ಮ ಜೀವನ ವನ್ನು ಮೀಸಲಿಟ್ಟರು. ಇವೆಲ್ಲವೂ ಅವರ ಬಾಲ್ಯಜೀವನದಲ್ಲಿ ಸಾಧಿಸಿದ

ಮೇಲ್ಮಟ್ಟದ ನೈತಿಕಜೀವನದಿಂದ. ನಮ್ಮ ಜೀವನವನ್ನು ಹಲವಾರು ಒಳ್ಳೆಯ ನಿದರ್ಶನಗಳಿಂದ ಉತ್ತಮಪಡಿಸಿಕೊಂಡರೆ ಮಾತ್ರ ನಾವು ನಿಜವಾದ ಮಾನವರಾದೇವು. ಅಂತಹ ಆದರ್ಶ ಜೀವನಕ್ಕಾಗಿ ಸತತವಾಗಿ ಶ್ರಮಿಸೋಣ, ಅದನ್ನು ನಮ್ಮದಾಗಿ ಮಾಡಿಕೊಳ್ಳೋಣ.

ಉತ್ತಿಷ್ಠತ! ಜಾಗ್ರತ!! ಪ್ರಾಪ್ಯವರಾನ್ನಿಬೋಧತ!!!

—ಎಂ. ಎಸ್. ಅಚ್ಯುತಾನಂತಸ್ವಾಮಿ

ಶ್ರೀರಾಮಕೃಷ್ಣ ಸುಪ್ರಭಾತಂ

೧

ಹೊಮ್ಮುತಿದೆ ಮೂಡಣದಿ ಹೊಂಬೆಳಗರುಣಕಾಂತಿ ;
ಓಡುತಿದೆ ಹಿಂಜರಿದು ತಿಮಿರದ ತಮೋಭ್ರಾಂತಿ ;
ತುಂಬುತಿದೆ ತ್ರೈಭುವನಮಂ ಚೈತನ್ಯಶಾಂತಿ :
ಶ್ರೀರಾಮಕೃಷ್ಣ ಪ್ರಭೋ ತವ ಸುಪ್ರಭಾತಂ !

೨

ತ್ರೇತೆಯೊಳ್ ಶ್ರೀರಾಮನೋಲವತರಿಸಿ ಬಂದೆ ;
ದ್ವಾಪರದೊಳಾ ಕೃಷ್ಣ ಶ್ರೀರೂಪದಲಿ ನಿಂದೆ ;
ಸರ್ವಧರ್ಮಾವತಾರಂ ಕಲಿಯುಗದಿ ಸಂದೆ :
ಶ್ರೀರಾಮಕೃಷ್ಣ ಪ್ರಭೋ ತವ ಸುಪ್ರಭಾತಂ !

೩

ನಜರೇತಿನಲ್ಲಿ ಯೇಸುಸ್ವಾಮಿಯಾಗಿದ್ದೆ ;
ನದಿಯದೊಳ್ ಶ್ರೀಕೃಷ್ಣ ಚೈತನ್ಯನಾಗಿದ್ದೆ ;
ಮತ್ತೆ ಭಾರತದಲ್ಲಿ ನೀ ಮೈದೋರುತಿದ್ದೆ :
ಶ್ರೀರಾಮಕೃಷ್ಣ ಪ್ರಭೋ ತವ ಸುಪ್ರಭಾತಂ !

೪

ನಿನ್ನಿಂದೆ ಪೃಥಿವಿಯಿಂದೋಡಿತು ಮತಭ್ರಾಂತಿ ;
ನಿನ್ನಿಂದೆ ಮಾನವಂಗಾದುದು ಸಹನೆ ಶಾಂತಿ ;
ನಿನ್ನಿಂದೆ ಅಧ್ಯಾತ್ಮವೈಜ್ಞಾನಿಕ ಕ್ರಾಂತಿ :
ಶ್ರೀರಾಮಕೃಷ್ಣ ಪ್ರಭೋ ತವ ಸುಪ್ರಭಾತಂ !

೫

ಸಕಲ ತತ್ತ್ವದ ಸಾರ ಶ್ರೀಮೂರ್ತಿ ನೀನಾದೆ ;
ಸರ್ವ ಮತಧರ್ಮ ಜೀವಜ್ಯೋತಿ ನೀನಾದೆ ;
ಸರ್ವಾವತಾರ ಸಂಪೂರ್ಣ ವಿಭು ನೀನಾದೆ :
ಶ್ರೀರಾಮಕೃಷ್ಣ ಪ್ರಭೋ ತವ ಸುಪ್ರಭಾತಂ !

೬

ಸ್ವಾಗತಿಸುತಿವೆ ಪಕ್ಷಿ ಛಂದಂ ನಮೋನಮಃ !
ಸ್ವಾಗತಿಸುತಿವೆ ಪುಷ್ಪವೃಂದಂ ನಮೋನಮಃ !
ಸ್ವಾಗತಿಸುತಿವೆ ಕೋಟಿ ಹೃದಯಂ ನಮೋನಮಃ !
ಶ್ರೀರಾಮಕೃಷ್ಣ ಪ್ರಭೋ ತವ ಸುಪ್ರಭಾತಂ !

೨೯-೧೧-೧೯೬೩ —ಕುವೆಂಪು

ಕನ್ನಡದ ಕಿಡಿಗಳು

೧. ಕುಳ-ಕ್ಷಳ ನಿಯಮ

ಸೂತ್ರಂ ॥ ಕುಳದ ನಿಯಾಮದೊಳೆಂದುಂ ।
ಕ್ಷಳಕ್ಕೆ ಲಾಕ್ಷರ ವಿಕಲ್ಪಮಿಲ್ಲ ವಿಕಲ್ಪಂ ॥
ಕ್ಷಳನಲ್ಲದಿಲ್ಲ ಸಂಸ್ಕೃತ
ದೊಳಾ ಲಕಾರಕ್ಕೆ ಪೇೞ್ದಿನದಱಿಂ ಕ್ಷಳನಂ

ವೃತ್ತಿ :–ಕುಳಪ್ರಾಸಮಾಗಿ ಪೇೞ್ದ ಕನ್ನಡಗಬ್ಬಂ ಕ್ಷಳನಂ ಸೆಱೆಗೆಯ್ವು ದಾಗಿ ಲಕಾರಮಂ ವಿಕಲ್ಪಂ ಮಾಡಬಾರದು; ಲಕಾರ ಪ್ರಾಸಮಾಗಿ ಪೇೞ್ದ ಕನ್ನಡಗಬ್ಬದೊಳ್ ಕ್ಷಳನಂ ವಿಕಲ್ಪದಿನಿರಿಸಲ್ಬಾರದಾಗಿಯದುವುಮಾಗದು ; ಕ್ಷಳನೆಂಬುದಿಲ್ಲದೆ ಸಂಸ್ಕೃತ ಪದದ ಲಕಾರಕ್ಕೆ ವಿಕಲ್ಪಮಂ ಪೇೞಲ್ಬಾರದಾಗಿ ಕ್ಷಳನನಿದಱೊಳೆ ಬೆರಸಿ ಪೇೞ್ದೆಂ.

ಕುಳಕ್ಷಳಪ್ರಾಸ ಪ್ರಯೋಗಂ :—

ಕಿಳಿರೆ ಹಯಂಗಳ್ ಗರ್ಜಿಸೆ
ಜಳದ ನಿಭಂಗಳ್ ಗಜಂಗಳ್ . . . . . (೧)

ಲಕಾರಕ್ಕೆ ಕ್ಷಳನನಿರಿಸಲ್ಬಾರದುದರ್ಕೆ ಪ್ರಯೋಗಂ :—

ಓಲಗದೊಳೊರ್ಮೆ ನತನರ
ಪಾಲಕ ಚೂಡಾಮಣಿ ದ್ಯುತಿಪ್ಲುತ ಚರಣಂ (೨)

ಮೇಲಿನ ಸೂತ್ರವು ಶ್ರೀ ಡಿ. ಎಲ್. ನರಸಿಂಹಾಚಾರ್–ಇವರಿಂದ ಸಂಪಾದಿಸ ಲ್ಪಟ್ಟು ೧೯೫೪ರಲ್ಲಿ ಪ್ರಕಟಿಸಲ್ಪಟ್ಟ ಶಬ್ದಮಣಿದರ್ಪಣದ ೧೫ನೇ ಪದ್ಯವಾಗಿದೆ. ವೃತ್ತಿಯೂ ಪ್ರಯೋಗವೂ ಅದೇ ಸೂತ್ರದ್ದಾಗಿರುತ್ತದೆ.

ಮೊದಲಾಗಿ ಮೇಲಿನ ವೃತ್ತಿಯನ್ನು ಪರಿಶೀಲಿಸೋಣ :—

೧. "ಕುಳಪ್ರಾಸಮಾಗಿ ಪೇೞ್ದ ಕನ್ನಡಗಬ್ಬಂ" ಎಂದಿದೆ. ಯಾವಾಗಲೂ ಒಂದರ ಹಿಂದೆ ಇನ್ನೊಂದರಂತೆ ಕ್ರಮಪ್ರಕಾರವಾಗಿ ಹೇಳುತ್ತಾ, ವಿವರಿಸುತ್ತಾ ಹೋಗುತ್ತಲಿರುವ ಕೇಶಿರಾಜನು ಇಲ್ಲಿ ಮಾತ್ರ "ವರ್ಣಂಗಳ ಪಾಠಕ್ರಮ ಮರ್ಣವವೃತ ಧಾತ್ರಿಯೊಳ್ ಪ್ರಸಿದ್ಧಂ . . ." ಎಂಬ ಅಕ್ಷರಗಳ ಕುರಿತಾದ ವ್ಯಾಕರಣ ವಿಷಯವನ್ನು ಹೇಳಿದಕೂಡಲೇ, ಕುಳ–ಕ್ಷಳಗಳೆಂದರೇನು ? ಎಂಬು ದನ್ನು ಕೂಡಾ ತಿಳಿಸದೆ ಒಮ್ಮಿಂದೊಮ್ಮೆಲೇ ಅತಿಕಠಿಣ ವಿಷಯವಾದ ಕುಳ–ಕ್ಷಳ ಪ್ರಾಸವನ್ನು ಕುರಿತು ಛಂದಸ್ಸಿಗೆ ಸಂಬಂಧಪಟ್ಟ ವಿಷಯವನ್ನು ಹೇಳಲಿಕ್ಕೆ ಕಾರಣವೇನು ? ಅಕ್ಷರಗಳ ವಿವರವನ್ನು ಮೊದಲು ತಿಳಿಸಿ, ಬೇಕಿದ್ದರೆ ಅವುಗಳ ವ್ಯತ್ಯಾಸವನ್ನು ಇನ್ನೂ ಸ್ಪಷ್ಟಪಡಿಸಲಿಕ್ಕಾಗಿ ಪ್ರಾಸಗಳ ವಿಷಯವನ್ನು ಹೇಳ

ಬಹುದು—ಮತ್ತು ಮುಂದೆ ಹಾಗೆಯೇ ತಿಳಿಸಿದ್ದಾನೆ. ಹಾಗಿರುವಾಗ—ಇಲ್ಲಿ ಮಾತ್ರ ಕುಳ-ಕ್ಷಳಾಕ್ಷರಗಳು ಯಾವುವೆಂದು ಮುಂದೆ ತಿಳಿಸಲಿರುವಾಗ–ಮೊದಲೇ ಪ್ರಾಸದ ವಿಷಯವನ್ನು ಹೇಳಿಯಾನೇ?

೨. "ಲಕಾರಮಂ ವಿಕಲ್ಪಂ ಮಾಡಬಾರದು" ಎಂದರೆ ಕುಳಪ್ರಾಸಕ್ಕೆ ಕ್ಷಳದ ಬದಲಿಗೆ ಲಕಾರವನ್ನು ಇಡಬಾರದೆಂದು ಅರ್ಥವೇ? ಆದರೆ ಕಿಟ್ಟೆಲರಿಂದ ಪ್ರಕಟಿಸಲ್ಪಟ್ಟ ಶಬ್ದಮಣಿದರ್ಪಣದ ಪ್ರಯೋಗದಲ್ಲಿ 'ಜಳದ' ಎನ್ನುವುದರ ಬದಲಿಗೆ 'ಜಲದ' ಎಂದಿದೆ ಮತ್ತು ಅದು ಸರಿಯೆಂದು ಕೂಡಾ ವ್ಯಾಖ್ಯಾನದಲ್ಲಿ ಸ್ಪಷ್ಟಪಡಿಸಿದ್ದು ತಪ್ಪೇ? ಇಲ್ಲವಾದರೆ–ಕುಳಪ್ರಾಸಕ್ಕೆ ಯಾವುದೇ ರೀತಿಯ ಲಕಾರವು ಪ್ರಾಸವಾಗಬಾರದೆಂದು ಅರ್ಥವೇ? ಹಾಗಿದ್ದರೆ ಅದಕ್ಕೇಕೆ ಪ್ರಯೋಗವನ್ನು ಕೊಡಲಿಲ್ಲ?

೩. "ಕ್ಷಳನೆಂಬುದಿಲ್ಲದೆ" ಎಂದರೆ ಸಂಸ್ಕೃತದಲ್ಲಿ ಇಲ್ಲವೆಂದು ಅರ್ಥವೇ? ಹಾಗಿದ್ದರೆ ಸೂತ್ರದ ವಿವರಣೆಗಾಗಿಯೇ ಇರುವ ವೃತ್ತಿಯಲ್ಲಿ "ಸಂಸ್ಕೃತದೊಳ್ ಕ್ಷಳನೆಂಬುದಿಲ್ಲದೆ" ಎಂದೇಕೆ ಸ್ಪಷ್ಟಪಡಿಸಿಲ್ಲ?

೪. "ಸಂಸ್ಕೃತ ಪದದ ಲಕಾರಕ್ಕೆ ವಿಕಲ್ಪಮಂ ಪೇೞಲ್ಬಾರದು" ಎಂದರೆ ಸಂಸ್ಕೃತದ ಲಕಾರವನ್ನು ಕನ್ನಡದಲ್ಲಿ ಳಕಾರವಾಗಿ ಮಾಡಬಾರದೆಂದು ಅರ್ಥವೇ? ಹಾಗಿದ್ದರೆ ಕ್ಷಳವೆಂದರೆ ಯಾವುದು? ಅಥವಾ ಪ್ರಾಸದಲ್ಲಿ ಸಂಸ್ಕೃತದ ಲಕಾರಕ್ಕೆ–ಬೇರೆ ಲಕಾರವನ್ನು ಪ್ರಾಸವಾಗಿ ಇಡಬಾರದೆಂದು ಅರ್ಥವೇ? ಹಾಗಿದ್ದರೆ ಅದು ಕ್ಷಳನೆಂಬುದಿಲ್ಲದ ಕಾರಣದಿಂದಲೇ? ಅಥವಾ ಯಾವ ಸಂಸ್ಕೃತ ಪದದ ಲಕಾರಕ್ಕೆ ಳಕಾರವಿಲ್ಲವೋ ಅದಕ್ಕೆ ವಿಕಲ್ಪಮಾಡಬಾರದೆಂದು ಅರ್ಥವೇ? ಹಾಗಿದ್ದರೆ "ಅದಱಿಂ" ಕ್ಷಳವನ್ನು ಇದರಲ್ಲಿ ಬೆರಸುವ ಅಗತ್ಯವೇನು?

೫. "(ಪೇೞಲ್ಬಾರದು)+ಆಗಿ ಕ್ಷಳನನಿದಱೊಳೆ ಬೆರಸಿ ಪೇೞ್ದಿಂ" ಇಲ್ಲಿ 'ಆಗಿ' ಎಂದರೆ ಯಾವ ಕಾರಣದಿಂದ? 'ಇದಱೊಳೆ' ಎಂದರೆ ಯಾವುದರಲ್ಲಿ?

ಈಗ ವೃತ್ತಿ ಮತ್ತು ಸೂತ್ರಗಳನ್ನು ಹೊಂದಿಸಿ ನೋಡೋಣ:—

೬. ಸೂತ್ರದ 'ನಿಯಾಮ' ಎನ್ನುವುದಕ್ಕೆ ವೃತ್ತಿಯಲ್ಲಿ 'ಪ್ರಾಸ' ಎನ್ನುವ ಅರ್ಥದಿಂದ ಉಪಯೋಗಿಸಿದೆ. ನಿಯಾಮಕ್ಕೆ ಪ್ರಾಸವೆಂದೇ ಅರ್ಥವೇ? ಆ ಅರ್ಥವಿಲ್ಲದಿದ್ದರೂ ಸಂದರ್ಭಕ್ಕೆ ಸರಿಯಾಗಿ ಆ ಅರ್ಥವನ್ನು ಕಲ್ಪಿಸಬಹುದು ಎಂದಿಟ್ಟುಕೊಳ್ಳೋಣ. ನಿಯಾಮಕ್ಕೆ ನಿಯಮ, ವಿಧಿ, ಕ್ರಮ, ರೀತಿ ಎನ್ನುವ ಅರ್ಥ ಸರಿಯಾಗುವಾಗ ಅದನ್ನೇ ಇಡಬಹುದಲ್ಲವೇ? ಅಂತೂ ಪ್ರಾಸವೆಂಬ ಅರ್ಥವೇ ಆಗಬೇಕೆಂದೇನೂ ಇಲ್ಲವಷ್ಟೆ?

೭. "ಲಕಾರ ಪ್ರಾಸಮಾಗಿ ಪೇೞ್ದ ಕನ್ನಡಗಬ್ಬದೊಳ್ ಕ್ಷಳನಂ ವಿಕಲ್ಪದಿ ನಿರಿಸಲ್ಬಾರದಾಗಿಯದುವುಮಾಗದು" ಎಂದು ವೃತ್ತಿಯಲ್ಲಿದೆ. ಈ ವೃತ್ತಿಯ ಅರ್ಥವು ಪ್ರತ್ಯಕ್ಷವಾಗಿಯಾಗಲಿ ಇಲ್ಲವೇ ಅಪ್ರತ್ಯಕ್ಷವಾಗಿಯಾಗಲಿ–ಧ್ವನಿರೂಪ

ದಲ್ಲಿಯಾಗಲಿ ಸೂತ್ರದ ಯಾವುದೇ ಕಡೆಯಲ್ಲಿ ಕಂಡುಬರುವುದೇ? ಇಲ್ಲ. ಹಾಗಿದ್ದರೆ ವೃತ್ತಿಯು ಸೂತ್ರಕ್ಕಿಂತ ಭಿನ್ನವಾಗಿದೆಯೇ?

ಈಗ ಪ್ರಯೋಗವನ್ನು ನೋಡೋಣ:—

೮. "ಲಕಾರಕ್ಕೆ ಕ್ಷಳನನಿರಿಸಲ್ಬಾರದುದರ್ಕೆ ಪ್ರಯೋಗಂ" ಎಂದಿದೆ ಮತ್ತು ಉದಾಹರಣೆಯ ಮೂಲಕ ಓಲಗ-ಪಾಲಕ ಎಂಬ ರೀತಿಯ—ಕನ್ನಡ ಲಕಾರಕ್ಕೆ ಸಂಸ್ಕೃತದ ಲಕಾರದ ಪ್ರಾಸ ಕೂಡದು ಎಂದಲ್ಲವೇ ಇದರ ಅರ್ಥ? ಹಾಗಿದ್ದರೆ ಈ ಕೆಳಗಿನ ಪದ್ಯಗಳನ್ನು ನೋಡಿ:—

"ಅಲರಂಬುಂ ಕರ್ಬುವಿಲ್ ಕೋ ||
ಮಲ ಸರಸಿಜನಾಳ ತಂತು . . . . ||"

(ಕವಿರಾಜಮಾರ್ಗ, III, ೧೨೧)

"ನೆಲಸಿದುವು ನಿಮ್ಮ ಕರುಣಾ
ಬಲದಿಂ ನೀವೆನ್ನನಿಂದು ಮಗನೆಂದುದಱಿಂ ||"

(ಪಂಪಭಾರತ, IX, ೮೦)

"ನಿಲವೇಟ್ಕುಮೆಂದು ನೃಪಕುಲ
ಲಲಾಮನಂತಲ್ಲಿ ಪಲವು ದಿವಸಮನಿರ್ದಂ ||"

(ಕರ್ಣಾಟಕ ಕಾದಂಬರೀ ಸಂಗ್ರಹ, II, ೬೯)

"ಪಲತೆರದ ಪದ್ಯದಿಂದಂ
ಲಲಿತವಚೋರಚನ . . . . ||"

(ಕಾವ್ಯಾವಲೋಕನ, ಸೂತ್ರ ೨೪೬)

"ಜಲಧಿಯ ಸತ್ತ್ವಾಶ್ರಯ ಬಲ
ಜಲಧಿಯ ನಡುವಳುರ್ವ ಕೋಪಶಿಖಿಗಳ ನಡುವಿ ||
ರ್ತಲೆವೊತ್ತಿದ . . . . . . ||"

(ಗದಾಯುದ್ಧ, I, ೨೩)

"ಕೊಲಲಾರ್ಪರೆ ಸಾಯದರಂ
ಲಲಾಟದೊಳ್ ವಿಧಿಯ . . . . . ||"

(ಪಂಪರಾಮಾಯಣ ಸಂಗ್ರಹ, I, ೩೨)

"ಬೆಲೆಗೊಟ್ಟು ತಾರ ಮಧುವಂ
ಮಲಯಾನಿಲನಂ . . . . . ||"

(ನೇಮಿನಾಥಪುರಾಣ, I, ೪೫)

ಈ ಮೇಲಿನ ಪದಗಳಲ್ಲೆಲ್ಲಾ ಕನ್ನಡದ ಲಕಾರವೂ ಸಂಸ್ಕೃತದ ಲಕಾರವೂ ಪ್ರಾಸವಾಗಿ ಬೆರಕೆಯಾಗಿದೆ. ಇದು ಮಾತ್ರವಲ್ಲ ಇನ್ನೂ ಎಷ್ಟೋ ಕವಿಗಳ ಪದ್ಯಗಳಲ್ಲಿ ಇದು ಬೆರಕೆಯಾಗಿದೆ. ಹಾಗಿದ್ದರೆ ಆ ಪದ್ಯಗಳ ಪ್ರಾಸಗಳೆಲ್ಲವೂ ತಪ್ಪೆಂದು ಅರ್ಥವೇ? ಇದೆಲ್ಲಾ ಬೇರೆ ಕವಿಗಳ ವಿಷಯವಾಯಿತು. ಕೇಶಿರಾಜನನ್ನೇ

ತೆಗೆದುಕೊಳ್ಳೋಣ. ಯಾವಾತನು ನಿಯಮವನ್ನು ಪಾಲಿಸಲಿಕ್ಕಾಗಿಯೇ ಶಬ್ದಮಣಿ ದರ್ಪಣದ ರಚನೆಯನ್ನು ಮಾಡಿದನೋ ಆ ದರ್ಪಣಕಾರನೇ ಕೆಳಗಿನ ಸೂತ್ರವನ್ನು ಹೇಳುತ್ತಾನೆ.

ನೆಲೆಗೊಳ್ಗುಂ ಪೂರ್ವಪದಾಂ
ತ್ಯಲೋಪಮದು ಬಹುಳದಿಂದೆ ತತ್ಪುರುಷಕ್ಕ ॥
ಗ್ಗಲಿಪುದುಚಿತಾಕ್ಷರಾಗಮ
ಮೊಲೆಗುಂ ಕೆಳಗಣ್ಗೆ ಕಿಱ್ ಕಿನೆಂಬಾದೇಶಂ ॥

(ಮೇಲೆ ಹೇಳಿದ ಶಬ್ದಮಣಿದರ್ಪಣದ ಪದ್ಯ ೧೪೭. ಸೂತ್ರಸಂಖ್ಯೆಯನ್ನು ಕೊಟ್ಟಿಲ್ಲ.)

ಇದರಲ್ಲಿಯೂ ಸಂಸ್ಕೃತ ಲಕಾರ ಮತ್ತು ಕನ್ನಡ ಲಕಾರಗಳ ಬೆರಕೆಯಾಗಿದೆ. ತಿಳಿದೂ ತಿಳಿದೂ ಬೇಕೆಂದೇ ಕೇಶಿರಾಜನು ತಪ್ಪುಮಾಡುವನೇ? ಇಂತಹ ಸೂತ್ರ ಗಳು ಒಂದೆರಡಲ್ಲ. ಅದೂ ಕೂಡಾ ಶಬ್ದಮಣಿದರ್ಪಣದಲ್ಲಿ ಆರು ಸೂತ್ರಗಳಿವೆ. ಈ ಆರನ್ನೂ ಆತನು ತಪ್ಪಾಗಿ ಬರೆದಾನೇ?

ಈಗ ಮೇಲಿನ ವೃತ್ತಿಯಲ್ಲಿ ಕಂಡು ಬರುವ ಸಂಶಯಗಳನ್ನೆಲ್ಲಾ ೮ ಪ್ರಶ್ನೆಗಳ ರೂಪವಾಗಿ ಕೊಟ್ಟಿದ್ದಾಯಿತು. ಆ ವೃತ್ತಿಯಲ್ಲಿ ಇಷ್ಟು ಬಲವತ್ತರವಾದ ೮ ಸಂಶಯಗಳು ತಲೆದೋರಿದುದರಿಂದಲೂ, ಅವುಗಳಿಗೆ ನನ್ನಲ್ಲೇ ಉತ್ತರ ದೊರಕ ದುದರಿಂದಲೂ ಮತ್ತು ವಿದ್ವಾಂಸರಾದ ಗೆಳೆಯರಿಂದ ಸ್ಪಷ್ಟವಾದ ಉತ್ತರ ಹೊರಡ ದುದರಿಂದಲೂ, ನಾನು ಮೇಲಿನ ವೃತ್ತಿಯನ್ನು ತಪ್ಪಾಗಿರಬೇಕೆಂದು ತಿಳಿಯುತ್ತೇನೆ.

ಹಾಗಿದ್ದರೆ ಆ ಸೂತ್ರದ ಸರಿಯಾದ ಅರ್ಥ ಯಾವುದು? ಎಂದು ವಿಮರ್ಶಿಸುವ ಮೊದಲು ಕೇಶಿರಾಜನ ಕಾಲದ ಕುರಿತು ಸ್ವಲ್ಪ ನೋಡೋಣ. ಕೇಶಿರಾಜನಿಗಿಂತ ಹಿಂದಿನ ವ್ಯಾಕರಣಕಾರನಾದ ನಾಗವರ್ಮನು ಕನ್ನಡದಲ್ಲಿ—ಎ, ಏ, ಐ, ಒ, ಓ, ಔ ಎನ್ನುವ ಸ್ವರಾಕ್ಷರಗಳನ್ನು ಹೇಳಿದ್ದರೂ ಸ್ಪಷ್ಟವಾಗಿ "ನಿಜದಿನೊಳವು" ಎಂದು ಹೇಳಿರಲಿಲ್ಲ. ಮಹಾಪ್ರಾಣಾಕ್ಷರಗಳನ್ನೂ "ಒಳವು ನಿಜೋಜ್ವಳಮಾಗಿ" ಎಂದೂ ಹೇಳಿರಲಿಲ್ಲ. ಱ, ಕುಳ, ಕ್ಷಳಗಳ ಕುರಿತೂ ಹೆಚ್ಚಿನ ವಿವರವನ್ನು ಕೊಟ್ಟಿರಲಿಲ್ಲ. ಆದ್ದರಿಂದ ಅಂದಿನ ಜನರು ತಪ್ಪಾಗಿ ಉಚ್ಚರಿಸುತ್ತಿದ್ದ ಅಥವಾ ಬರೆಯುತ್ತಿದ್ದ ಮತ್ತು ವಿದ್ವಾಂಸರಲ್ಲೇ ಸಂಶಯಗಳನ್ನುಂಟುಮಾಡುತ್ತಿದ್ದ ಮೇಲೆ ಹೇಳಿದ ಅಕ್ಷರ ಗಳನ್ನೆಲ್ಲಾ ವಿವರಿಸಿ ಅದಕ್ಕೊಂದು ನಿಯಮವನ್ನೇರ್ಪಡಿಸಲು ಕೇಶಿರಾಜನು ನಿಶ್ಚೈಸಿದ್ದನು. ಅದಕ್ಕಾಗಿ ಆತನು ಪಟ್ಟ ಶ್ರಮವೆಷ್ಟೆಂಬುದು ಶಬ್ದಮಣಿದರ್ಪಣ ವನ್ನು ಓದಿದಾಗ ಸ್ಪಷ್ಟವಾಗಿ ತಿಳಿದುಬರುವುದು. ಆದ್ದರಿಂದ "ವರ್ಣಂಗಳ ಪಾಠಕ್ರಮಮರ್ಣವವೃತಧಾತ್ರಿಯೊಳ್ ಪ್ರಸಿದ್ಧಂ...." ಎಂದು ಹೇಳಿದೊಡನೆಯೇ ಮೇಲಿನ ಸೂತ್ರವನ್ನು ಹೇಳಿದುದರಿಂದ ಆ ಸೂತ್ರವು ಕುಳ–ಕ್ಷಳಗಳ ನಿಯಮ ವನ್ನೇರ್ಪಡಿಸಲಿಕ್ಕಾಗಿಯೇ ರಚಿಸಲ್ಪಟ್ಟಿತೆಂದು ನನ್ನ ಭಾವನೆ.

ಆ ಅರ್ಥವು ಮೇಲಿನ ಸೂತ್ರದಲ್ಲಿ ಅತಿ ಸುಲಭವಾಗಿ ಹೇಗೆ ಗೊತ್ತಾಗುವು

ದೆಂಬುದನ್ನೀಗ ವಿವರಿಸುತ್ತೇನೆ. ಮೊದಲಾಗಿ ಸೂತ್ರದ ಪೂರ್ವಾರ್ಧವನ್ನು ಪರಿಶೀಲಿಸೋಣ—ಅದರ ಅನ್ವಯವನ್ನು ಹೀಗೆ ಮಾಡಿಕೊಳ್ಳತಕ್ಕದ್ದು: "ಕುಳದ ನಿಯಾಮದೊಳೆಂದುಂ ಲಾಕ್ಷರವಿಕಲ್ಪಮಿಲ್ಲ; ವಿಕಲ್ಪಂ ಕ್ಷಳಕ್ಕೆ" ಈಗ ಇದರ ಅರ್ಥವೇನಾಯಿತು ನೋಡಿರಿ. ಕುಳದ ನಿಯಮದಲ್ಲಿ ಯಾವಾಗಲೂ 'ಲ' ಎಂಬ ಅಕ್ಷರವಿಕಲ್ಪವಿಲ್ಲ. ಕ್ಷಳದ ನಿಯಮದಲ್ಲಿ ಯಾವಾಗಲೂ 'ಲ' ಎಂಬ ಅಕ್ಷರವಿಕಲ್ಪವಿದೆ: ಎಂದರೆ—ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಲಾಕ್ಷರ ವಿಕಲ್ಪವಿಲ್ಲದಿರುವುದೇ ಕುಳ; ಲಾಕ್ಷರ ವಿಕಲ್ಪವಿರುವುದೇ ಕ್ಷಳ. ಇದು ಕುಳ–ಕ್ಷಳ ನಿಯಮ. ಹೀಗಲ್ಲವೇ ಇದರ ಅರ್ಥ?

ಇದಕ್ಕೀಗ ಲಕ್ಷ್ಯವನ್ನಿತ್ತು ವಿವರಿಸುತ್ತೇನೆ.

ಕಿಳಿರೆ—ಕನ್ನಡದ್ದೇ ಆದ ಳಾಕ್ಷರ.
ದಾಳಿಂಬ—ಸಂಸ್ಕೃತದ ಡಕಾರಕ್ಕೆ ಅಪಭ್ರಂಶವಾಗಿ ಬಂದ ಳಾಕ್ಷರ.
ಪೇಳಿಗೆ—ಸಂಸ್ಕೃತದ ಟಕಾರಕ್ಕೆ ಅಪಭ್ರಂಶವಾಗಿ ಬಂದ ಳಾಕ್ಷರ.
ಜಳಂ—ಸಂಸ್ಕೃತದ ಲಕಾರಕ್ಕೆ ಬಂದ ಳಾಕ್ಷರ.

ಈ ಳಕಾರಗಳಲ್ಲಿ ಕುಳ–ಕ್ಷಳಗಳಾಗುವುವೆಂದು ನಿರ್ಣೈಸುವುದು ಹೇಗೆ? ಕಿಳಿರೆ, ದಾಳಿಂಬ, ಪೇಳಿಗೆ ಎಂಬೀ ಮೂರು ಳಕಾರಗಳ ಬದಲಿಗೆ ಲಕಾರವನ್ನು ಪ ಯೋಗಿಸಬಹುದೇ? ಸಾಧ್ಯವಿಲ್ಲ. ಅಥವಾ ಅದು ಲಕಾರದ ಬದಲಿಗೆ ಬಂದ ಳಕಾರಗಳೇ? ಅಲ್ಲ. ಆದ್ದರಿಂದ ಆ ಳಕಾರಕ್ಕೆ ಲಕಾರವಿಕಲ್ಪವಿಲ್ಲ. ಆದ್ದರಿಂದ ಅವು ಕುಳಾಕ್ಷರಗಳಾಗಿವೆ.

ಜಳಂ ಎಂಬಲ್ಲಿನ ಳಕಾರಕ್ಕೆ ಲಕಾರವನ್ನಿಡಬಹುದಾಗಿದೆ ಮತ್ತು ಅದು ಲಕಾರದ ಬದಲಿಗೆ ಬಂದ ಳಕಾರವೂ ಅಗಿದೆ. ಅದ್ದರಿಂದ ಆ ಳಕಾರಕ್ಕೆ ಲಕಾರ ವಿಕಲ್ಪವಿದೆ. ಆದ್ದರಿಂದ ಅದು ಕ್ಷಳಾಕ್ಷರವಾಗಿದೆ.

ಈಗ ಸೂತ್ರದ ಉತ್ತರಾರ್ಧವನ್ನು ನೋಡುವ. ಇದು ಕ್ಷಳವನ್ನು ಇನ್ನೂ ಸ್ಪಷ್ಟವಾಗಿ ವಿವರಿಸುತ್ತದೆ. ಈ ಉತ್ತರಾರ್ಧವನ್ನು ಹೀಗೆಂದು ಅನ್ವಯಮಾಡಿ ಕೊಳ್ಳತಕ್ಕದ್ದು: "ಅಲ್ಲದೆ ಸಂಸ್ಕೃತದೊಳ್ ಆ ಲಕಾರಕ್ಕೆ ಕ್ಷಳಂ ಇಲ್ಲ; ಅದಱಿಂ ಪೇೞ್ದಿಂ ಕ್ಷಳನಂ" ಇಲ್ಲಿ 'ಅಲ್ಲದೆ' ಎಂಬುದಕ್ಕೆ ಮೇಲೆ ಹೇಳಿದ ವಿಷಯವೂ ಅಲ್ಲದೆ ಎಂದರ್ಥ. 'ಆ ಲಕಾರಕ್ಕೆ' ಎಂದರೆ ಪೂರ್ವಾರ್ಧದಲ್ಲಿ ಕ್ಷಳಕ್ಕೆ ಯಾವ ಲಕಾರದ ವಿಕಲ್ಪವಿದೆ ಎಂದು ಹೇಳಿದೆಯೋ ಆ ಲಕಾರಕ್ಕೆ ಎಂದರೆ ಸಂಸ್ಕೃತದ ಲಕಾರಕ್ಕೆ ಎಂದರ್ಥ. ಹಾಗಾದರೆ ಅದರ ಅರ್ಥವು ಹೀಗಾಗುತ್ತದೆ—ಅದೂ ಅಲ್ಲದೆ ಸಂಸ್ಕೃತ ಭಾಷೆಯಲ್ಲಿ ಲಕಾರಕ್ಕೆ ಕ್ಷಳದ ಪ್ರಯೋಗವಿಲ್ಲ. ಅಂದರೆ ಳಕಾರವನ್ನು ಇಡುವುದಿಲ್ಲ. ಆದ್ದರಿಂದ ನಾನು ಇಲ್ಲಿ ಕನ್ನಡದ ಕ್ಷಳವನ್ನು ಹೇಳಿದೆನು. ಇಲ್ಲಿ—ಸಂಸ್ಕೃತ ಭಾಷೆಯಲ್ಲಿ ಕ್ಷಳದ ಪ್ರಯೋಗವಿಲ್ಲ ಎಂದು ಹೇಳಿದ ಕಾರಣ—"ಅದಱಿಂ

ಪೇಟಿದ್ಧಿಂ ಕ್ಷಳನಂ” ಎಂದರೆ ಕನ್ನಡದಲ್ಲಿ ಹೇಳಿದುದೆಂದೇ ಧ್ವನ್ಯಾರ್ಥವಾಗಿ ಗ್ರಹಿಸಿ ಕೊಳ್ಳತಕ್ಕದ್ದು.

ಇಷ್ಟುಮಾತ್ರವಲ್ಲದೆ, ಸೂತ್ರದ ಉತ್ತರಾರ್ಧದಲ್ಲಿ ಕ್ಷಳವನ್ನು ಕುರಿತು ಕೇಶಿರಾಜನು ವಿವರಣೆಯನ್ನು ಕೊಡಲು ಕಾರಣವನ್ನು ಗ್ರಹಿಸಿದಾಗ—ಆತನೇ ಶಬ್ದಮಣಿದರ್ಪಣದ ಅಂತ್ಯದಲ್ಲಿ ಕೊಟ್ಟ ಕನ್ನಡದ ಅಸಾಧಾರಣವಾದ ಲಕ್ಷಣ ಗಳನ್ನು ಹೇಳುವ ಪದ್ಯವನ್ನು ನೆನೆಯಬಹುದಾಗಿದೆ. ಅದು ಹೀಗಿದೆ:—

ಗಮಕಸಮಾಸದಿಂ ಱಳಿಕುಳಕ್ಷಳದಿಂ ಶ್ರುತಿಸಹ್ಯಸಂಧಿಯಿಂ
ಸಮುಚಿತಮಾಗಿ ಬರ್ಪ ಸತಿಸಪ್ತಮಿಯಿಂ ಸಮ ಸಂಸ್ಕೃತೋಕ್ತಿಯಿಂ
ವಮಹಪ ಭೇದದಿಂ ವಿರಹಿತಾವ್ಯಯ ಸಂಸ್ಕೃತ ಲಿಂಗದಿಂ ಪದೋ
ತ್ತಮಶಿಥಿಲತ್ವದಿಂ ಯತಿ ವಿಲಂಘನದಿಂದರಿದಲ್ತೆ ಕನ್ನಡಂ ||

ಇದನ್ನು ನೆನೆದಾಗ “ಪೇಟಿದ್ಧಿನದಱಿಂ ಕ್ಷಳನಂ’ ಎಂದೆನ್ನುವ ಸೂತ್ರದ ಕಡೆಯ ಭಾಗದ ವಿಶೇಷಾರ್ಥವು ತಿಳಿದುಬರುವುದು. “ಕ್ಷಳಪ್ರಯೋಗವು ಸಂಸ್ಕೃತ ದಲ್ಲಿಲ್ಲ. ಆದ್ದರಿಂದ ಅದನ್ನು ಹೇಳಿದುದು ಕನ್ನಡದಲ್ಲೇ ಆಗಿದೆ. ಮತ್ತು ಅದು ಕನ್ನಡದ ಅಸಾಧಾರಣ ಲಕ್ಷಣವಾಗಿದೆ” ಎನ್ನುವ ಗಮ್ಯಾರ್ಥವು ಈಗಲಾದರೂ ಆ ಪದ್ಯದಿಂದ ಹೊರಡುವುದೇ ಇಲ್ಲವೇ? ಸೂತ್ರವನ್ನು ಸರಿಯಾಗಿ ಓದಿ, ಅರ್ಥವಿಸಿ ಕೊಂಡವರು ಹೇಳಲಿ.

ಇಷ್ಟು ಯೋಗ್ಯವೂ, ಸಂದರ್ಭಕ್ಕೆ ಸರಿಯಾದುದೂ, ಸುಲಭದಲ್ಲಿ ಅರ್ಥವಾಗು ವಂತಹದೂ ಮತ್ತು ಸೂತ್ರದ ಶಬ್ದಗಳಿಗೆಲ್ಲ ವ್ಯಾಕರಣಾರ್ಥವೇ ಇರುವಂತಹದೂ ಆದ ಅರ್ಥವು ಮೇಲಿನ ಸೂತ್ರಕ್ಕಿರಲು—ಪ್ರಕೃತ ಶಬ್ದಮಣಿದರ್ಪಣದಲ್ಲಿ ಬರೆದಿರುವ ಕ್ಲಿಷ್ಟವಾಗಿರುವಂತಹದೂ, ಸ್ಪಷ್ಟವಾಗಿ ಅರ್ಥವಾಗದಂತಹದೂ, ಹಲವಾರು ಸಂಶಯುಗಳಿರುವಂತಹದೂ, ಒಂದಕ್ಕೂ ಉತ್ತರ ದೊರಕದಂತಹದೂ, ಮತ್ತು ಸೂತ್ರಕ್ಕೆ ಹೊಂದಿಕೊಳ್ಳದಂತಹದೂ ಆದ ವೃತ್ತಿಯು ತಪ್ಪಾಗಿದೆ ಎಂದು ನಿಸ್ಸಂಶಯವಾಗಿ ಹೇಳಬಹುದು.

ಆದ್ದರಿಂದ ಈಗಲೊಮ್ಮೆ ನಾನು ಆ ಇಡೀ ಸೂತ್ರದ ಅರ್ಥವನ್ನು ಹೇಳು ತ್ತೇನೆ—ಕುಳಕ್ಕೆ ಯಾವಾಗಲೂ ಲಾಕ್ಷರ ವಿಕಲ್ಪವಿಲ್ಲ; ಕ್ಷಳಕ್ಕೆ ಯಾವಾಗಲೂ ಲಾಕ್ಷರ ವಿಕಲ್ಪವಿದೆ. ಇದೇ ಕುಳ—ಕ್ಷಳನಿಯಮವಾಗಿದೆ. ಅದೂ ಅಲ್ಲದೆ ಸಂಸ್ಕೃತ ಭಾಷೆಯಲ್ಲಿ ಲಕಾರಕ್ಕೆ ಕ್ಷಳದ ಪ್ರಯೋಗವಿಲ್ಲ. ಆದ್ದರಿಂದ ಕ್ಷಳವನ್ನು ವಿಶೇಷವಾಗಿ ಕನ್ನಡದಲ್ಲಿ ಹೇಳಿದೆನು.

ನಾನು ಈಗ ತಿಳಿಸಿದ ಅರ್ಥವು ಸರಿಯೆಂದು ಸ್ಪಷ್ಟಪಡಿಸಲಿಕ್ಕಾಗಿ ಇನ್ನೊಂದು ವಿಷಯವನ್ನಿಲ್ಲಿ ತಿಳಿಸುತ್ತೇನೆ. ದರ್ಪಣಕಾರನು ಮುಂದಿನ ಕೆಲವು ಸೂತ್ರಗಳಲ್ಲಿ ದಾಳಿಂಬ, ಕುಂಬಳ, ಪಳಕು, ಪೇಳಿಗೆ ಮುಂತಾದ ಶಬ್ದಗಳು ಅಪಭ್ರಂಶದ ಫಲವಾಗಿ

ಕುಳಗಳಾದುವು ಎನ್ನುತ್ತಾನೆ ಮತ್ತು ಕನ್ನಡದ್ದೇ ಆದ ಕುಳಕ್ಕೆ ಹಲವಾರು ಉದಾಹರಣೆಗಳನ್ನು ಕೊಡುತ್ತಾನೆ. ಆದರೆ ಕುಳವೆಂದರೇನೆಂದು ಒಂದೆಡೆಯೂ ಹೇಳುವುದಿಲ್ಲ. ಆದ್ದರಿಂದ ಪ್ರಕೃತದ ಸೂತ್ರದಲ್ಲಿ ಕುಳವೆಂದರೇನೆಂದು ಹೇಳಿದ್ದಾನೆಂದು ಭಾವಿಸಿದರೆ ತಪ್ಪಾಗದೆಂದು ತಿಳಿಯುತ್ತೇನೆ.

ಆದರೆ ಇಲ್ಲೊಂದು ಸಂಶಯವೇಳುತ್ತದೆ. ಕೇಶಿರಾಜನು ಮುಂದೆ ಒಂದು ಸೂತ್ರದಲ್ಲಿ, ಅನುನಾಸಿಕ ಮತ್ತು ನಿರನುನಾಸಿಕಗಳನ್ನು ಹೇಳುವಾಗ "ಸಂಸ್ಕೃತ ಶಬ್ದ ನಿಯುಕ್ತ ಲಕಾರದ ನೆಲೆಗೆ ನಿಂದು ಸರಿಯಾಗಿ ಸಲ್ವುದಂ ಕ್ಷಳನೆಂಬರ್" ಎಂದು ಹೇಳಿದ್ದಾನೆ. (ಸೂ. ೨೬) ಹಾಗಿದ್ದರೆ ಕ್ಷಳವೆಂದರೇನೆಂದು ಎರಡು ಕಡೆಗಳಲ್ಲಿ ಹೇಳುವ ಆವಶ್ಯಕತೆಯೇನು ? ಎಂದು ಪ್ರಶ್ನೆ ಉದ್ಭವಿಸುತ್ತದೆ. ಆದರೆ ಅದೇ ಮೇಲೆ ಹೇಳಿದ ಶ್ರೀ. ಡಿ. ಎಲ್. ನರಸಿಂಹಾಚಾರ್ ಇವರಿಂದ ಪ್ರಕಟಿಸಲ್ಪಟ್ಟ ಶಬ್ದಮಣಿ ದರ್ಪಣದ ಮೇಲಿನ ಸೂತ್ರದ ಅಡಿಟಿಪ್ಪಣಿಯಲ್ಲಿ ಹೀಗೆಂದು ಬರೆದಿದೆ. "ಕ್ಷಳ ಸಂಜ್ಞೆ ಮುಂ ಪೇಳಿಪಟ್ಟಿತ್ತು. ಇದೇಕೆಂದೊಡೆ ಅನುನಾಸಿಕ ನಿರನುನಾಸಿಕಂಗಳಂ ಹೇಳುವಲ್ಲಿ ಸಂಸ್ಕೃತ ಲಕಾರಕ್ಕೆ ಅನುನಾಸಿಕ ಸಂಜ್ಞೆ ಬಂದಿತೆಂದು ಮರಳಿ ಕ್ಷಳನಂ ಪ್ರಯೋಗಿಸಿದೆಂ"

ಇದೇ ಕಾರಣದಿಂದ ದರ್ಪಣಕಾರನು ಕ್ಷಳವೆಂದರೇನೆಂದು ಎರಡನೇ ಸಲ ಹೇಳಿರಬೇಕೆಂದು ನಾನೂ ಗ್ರಹಿಸುತ್ತೇನೆ.

ಇನ್ನು ಪ್ರಯೋಗದ ಕಡೆಗೆ ಸ್ವಲ್ಪ ಗಮನಕೊಡೋಣ. ಪ್ರಯೋಗವು ಪದ್ಯರೂಪದಲ್ಲಿದೆ. ಪ್ರಕೃತದ ಸೂತ್ರವು ಪ್ರಾಸಕ್ಕೆ ಸಂಬಂಧಪಟ್ಟುದಲ್ಲವೆಂದಾದ ಮೇಲೆ ಆ ಪದ್ಯಗಳ ಆವಶ್ಯಕತೆಯೂ ನಮಗೆ ಇಲ್ಲವೆಂದಾಯಿತು. ಆದ್ದರಿಂದ ಆ ಪದ್ಯರೂಪಗಳು ಅಲ್ಲಿ ಹೇಗೆ ಯಾರಿಂದ ಪ್ರಕಟಿಸಲ್ಪಟ್ಟುವು ಎಂಬ ವಿಷಯವನ್ನು ಬಿಟ್ಟು ಅಲ್ಲಿರುವ ಶಬ್ದಗಳನ್ನಷ್ಟೇ ತೆಗೆದುಕೊಳ್ಳೋಣ. ಸೂತ್ರಕ್ಕೆ ಸಹಕಾರಿಗಳಾದರೆ ಇರಲಿ; ಇಲ್ಲವಾದರೆ ಅವುಗಳನ್ನೂ ಬಿಡಬಹುದು. ಅಲ್ಲಿನ ಶಬ್ದಗಳಾವುವೆಂದರೆ ಕಿಳಿರೆ, ಜಳದ–ಓಲಗ, ಪಾಲಕ.

ಕಿಳಿರೆ—ಇದಂತೂ ಕುಳವೇ (ಹಿಂದೆಯೇ ವಿವರಿಸಿದೆ).

ಜಳದ—ಇದು ಕ್ಷಳ (ಇದನ್ನು ಕೂಡಾ ಹಿಂದೆಯೇ ವಿವರಿಸಿದೆ).

ಇವೆರಡು ಕುಳ-ಕ್ಷಳಗಳಿಗೆ ಕೊಟ್ಟ ಉದಾಹರಣೆಗಳೆಂಬುದರಲ್ಲಿ ಸಂಶಯವಿಲ್ಲ. ನಂತರದ ಎರಡರಲ್ಲಿ ಸಂಶಯ ಉಂಟಾಗುತ್ತದೆ.

ಓಲಗ—ಕನ್ನಡದ ಲಕಾರ. ಇಲ್ಲಿ ಳಕಾರವನ್ನು ಇಡಬಾರದು. ಅಂದರೆ ಕುಳವನ್ನಾಗಿ ಮಾಡಬಾರದು ಎಂಬುದಕ್ಕೆ ಉದಾಹರಣೆಯಾಗಿರಲೂ ಬಹುದು.

ಪಾಲಕ–ಇದು ಸಂಸ್ಕೃತದ ಲಕಾರ. ಇದಕ್ಕೆ ಸಂಸ್ಕೃತ ಭಾಷೆಯಲ್ಲಿ ಳಕಾರವಿಲ್ಲ. ಅಂದರೆ ಕ್ಷಳವಿಲ್ಲ. ಅಥವಾ ಇದನ್ನು ಕನ್ನಡದಲ್ಲಿ ಪ್ರಯೋಗಿಸುವಾಗ

ಕ್ಷಳವನ್ನು ಪ್ರಯೋಗಿಸಬಹುದು. (ಳ ವನ್ನು ಇಡಬಹುದು) ಈ ಎರಡರಲ್ಲಿ ಯಾವುದಾದರೂ ಒಂದಕ್ಕೆ ಉದಾಹರಣೆಯಾಗಿರಲೂ ಬಹುದು.

ಅಥವಾ ಇದೆರಡನ್ನೂ ಸರಿಯಲ್ಲವೆಂದೂ, ಇಲ್ಲಿ ಅಗತ್ಯವಿಲ್ಲವೆಂದೂ ಯಾರಾದರೂ ಹೇಳುವರಾದರೆ ಅವುಗಳನ್ನು ಬಿಟ್ಟುಬಿಡಲೂ ಬಹುದು. ಅಂತೂ ಕುಳ-ಕ್ಷಳಕ್ಕೆ ಉದಾಹರಣೆಗಳಾದ ಮೊದಲಿನ ಕಿಳಿರೆ ಮತ್ತು ಜಳದ ಎನ್ನುವ ಶಬ್ದಗಳು ಸರಿಯಾದ ಉದಾಹರಣೆಗಳಾಗಿವೆ.

ಈ ಮೇಲಿನ ಎಲ್ಲಾ ಕಾರಣಗಳಿಂದ ಕೇಶಿರಾಜನು ಪ್ರಕೃತದ ಸೂತ್ರದಲ್ಲಿ **ಕುಳ-ಕ್ಷಳ ನಿಯಮ**ವನ್ನು ತಿಳಿಸಿದ್ದಾನೆಂದೇ ನನ್ನ ಊಹೆ.

—ಎಸ್. ತಿಮ್ಮಣ್ಣ ಭಟ್

೨. 'ಗುಯ್ಯಲ್'—ಒಂದು ವಿವೇಚನೆ

ಇತ್ತೀಚಿಗೆ "ಪ್ರಬುದ್ಧ ಕರ್ಣಾಟಕ"ದಲ್ಲಿ (ಸಂಪುಟ ೪೪, ಸಂಚಿಕೆ ೪) ಶ್ರೀ ಡಿ. ಎಲ್. ನರಸಿಂಹಾಚಾರ್ಯರು "ಗುಯ್ಯಲ್" ಶಬ್ದದ ಉತ್ಪತ್ತಿಯನ್ನು ಕುರಿತು ಒಂದು ಲೇಖನ ಬರೆದಿದ್ದಾರೆ. ಕನ್ನಡದ ಕೆಲ ಶಾಸನಗಳಲ್ಲಿ ಮಾತ್ರವೇ ಪ್ರಯೋಗಿಸಲ್ಪಟ್ಟ ಜಲಾಶಯಾರ್ಥಕವಾದ ಈ ಶಬ್ದ ಇಂದು ಕನ್ನಡದಲ್ಲಿ ಲುಪ್ತವಾಗಿ ಹೋಗಿದೆಯೆಂದು ಹೇಳಿ ಅವರು, ಈ ಶಾಸನಗಳು ದೊರೆತ ಸ್ಥಳಗಳು ತೆಲುಗು ಸೀಮೆಗೆ ಹತ್ತಿರವಾಗಿರುವುದನ್ನು ಗಮನಿಸಿ ಅದು ತೆಲುಗಿನ "ಗೊಯ್ಯಿ" ಧಾತುವಿನಿಂದ ಹುಟ್ಟಿರಬಹುದೆಂದು ತರ್ಕಿಸಿದ್ದಾರೆ.

ಆದರೆ "ಗುಯ್ಯಲ್" ಶಬ್ದ ಅಥವಾ ಅದಕ್ಕೆ ಜ್ಞಾತಿಯಾದ ಶಬ್ದ ತೆಲುಗಿನಲ್ಲಿ ಹಿಂದಾಗಲಿ ಇಂದಾಗಲಿ ಇದ್ದಂತೆ ಅವರು ತೋರಿಸಿಲ್ಲ. ಆದ್ದರಿಂದ ಅದರ ಮೂಲಶೋಧನೆಗೆ ಬೇರೆಡೆಯೂ ಬೆದಕುವುದು ವಿಹಿತವಾಗಿದೆ.

ತುಳು ಭಾಷೆಯಲ್ಲಿ ಇಂದಿಗೂ "ಗುವ್ವೆಲ್" ಎಂಬ ಪದ ಬಳಕೆಯಲ್ಲಿದೆ. ಅದರ ಅರ್ಥ 'ಬಾವಿ' ಎಂದು. ಹೀಗಿರುವುದರಿಂದ ಕನ್ನಡದ "ಗುಯ್ಯಲ್" ತುಳು "ಗುವ್ವೆಲ್"ನ ಸೋದರ ಶಬ್ದವೆಂದು ಗ್ರಹಿಸಲು ಯಾವ ಆತಂಕವೂ ಕಾಣಿಸುವುದಿಲ್ಲ.

ಹಾಗಾದರೆ ತುಳು "ಗುವ್ವೆಲ್" ಹೇಗೆ ಹುಟ್ಟಿತು? ಎಂಬ ಪ್ರಶ್ನೆ ಏಳುತ್ತದೆ. ತುಳುವಿನಲ್ಲಿ ಅನೇಕ ಪ್ರಭೇದಗಳಿದ್ದು ಅವುಗಳಲ್ಲಿ ಪ್ರಧಾನವಾದವುಗಳೆಂದರೆ ಬ್ರಾಹ್ಮಣ ತುಳು (ಬ್ರಾ. ತು.) ಮತ್ತು ಬ್ರಾಹ್ಮಣೇತರ ತುಳು. (ಬ್ರಾ. ಇ. ತು.) ಈ ಎರಡು ಪ್ರಭೇದಗಳಲ್ಲಿ ಕೆಲ ತೀವ್ರ ಅಂತರಗಳಿವೆ. "ಗುವ್ವೆಲ್" ಎಂಬುದು ಬ್ರಾಹ್ಮಣೇತರ ತುಳು ರೂಪ. ಅದರ ಬ್ರಾಹ್ಮಣ ರೂಪ "ಉಗ್ಗೆಲ್" ಎಂದಾಗಿದೆ.

ಬ್ರಾಹ್ಮಣ ಬ್ರಾಹ್ಮಣೇತರ ತುಳುಗಳ ಶಬ್ದಗಳಲ್ಲಿ ಈ ಬಗೆಯ ಭೇದ ಇದೊಂದೇ ಅಲ್ಲ. ತೆಲುಗಿನಂತೆ ಬ್ರಾಹ್ಮಣೇತರ ತುಳುವಿನಲ್ಲಿ ಪ್ರಥಮ ಸ್ವರವನ್ನು ಲೋಪಮಾಡುವ ಪ್ರವೃತ್ತಿ ಬಹಳವಾಗಿದೆ. ಕೆಲವು ಉದಾಹರಣೆಗಳು:

ಬ್ರಾ. ತು.	ಬ್ರಾ. ಇ. ತು.
ಎರಡ್ (ಎರಡು)	ರಡ್ಡ್
ಒಳಿಪು (ಕರೆ)	ಲೆಪ್ಪು
ಅಡಪು (ಉಳು)	ದಪ್ಪು
ಅಡೆಂಗ್ (ಅಡಗು)	ದೆಂಗ್
ಉಂಬಳ್ (ಇವಳು)	ಮೋಳು
ಉಣ್ಪು (ಅನ್ನ)	ನುಪ್ಪು

"ಪ್ರಬುದ್ಧ ಕರ್ಣಾಟಕ"ದ ಆಶ್ವಯುಜ ಸಂಚಿಕೆಯಲ್ಲಿ ಸಂಪುಟ ೪೫, ಸಂ. ೩ ಮೈಸೂರು ಕನ್ನಡದ ಸಾಮಾಜಿಕ ಪ್ರಭೇದಗಳನ್ನು ಕುರಿತ ಲೇಖನದ ತುದಿಯಲ್ಲಿ

ತುಳು ಭಾಷೆಯ ಬಗ್ಗೆ ಬರುವ ಸಂಕ್ಷಿಪ್ತ ಉಲ್ಲೇಖದಲ್ಲಿ ಹೇಳಿದಂತೆ, ಬ್ರಾಹ್ಮಣ ತುಳುವು ಶಬ್ದಗಳನ್ನು ಎರವಲು ಪಡೆಯುವುದರಲ್ಲಿ ಮುಂದಾದರೂ ಶಬ್ದಪಲ್ಲಟ ವಿಚಾರದಲ್ಲಿ ಅದರ ಗತಿ ಸಾವಕಾಶವಾದದ್ದೆಂಬುದು ನಿಜ. ಮೇಲೆ ಕಾಣಿಸಿದ ಉದಾಹರಣೆಗಳಲ್ಲಿ ಬ್ರಾಹ್ಮಣ ತುಳು ರೂಪಗಳು ಬ್ರಾಹ್ಮಣೇತರ ರೂಪಗಳಿಗಿಂತ ಹೆಚ್ಚು ಪುರಾತನವಾಗಿವೆ ಎಂಬುದು ಸರ್ವಮಾನ್ಯವಾಗಬಹುದೆಂದು ನಾನು ನಂಬಿದ್ದೇನೆ. ತುಳುವಿನ "ಉಗ್ಗೆಲ್" ಕೂಡ "ಗುವ್ವೆಲ್"ಗಿಂತ ಪ್ರಾಚೀನವೆಂದು ಭಾವಿಸಲು ಅಡ್ಡಿಯಿಲ್ಲ.

"ಗುವ್ವೆಲ್" ಮತ್ತು "ಗುಯ್ಯೆಲ್" ಸೋದರ ಶಬ್ದಗಳಾಗಿದ್ದರೆ ಮತ್ತು ಅವುಗಳ ಹಳೆಯ ರೂಪ "ಉಗ್ಗೆಲ್" ಆಗಿದ್ದರೆ "ಉಗ್ಗೆಲ್"ನ ನಿಷ್ಪತ್ತಿಯ ಪ್ರಶ್ನೆ ಬರುತ್ತದೆ. "ಉಗ್ಗೆಲ್"ನಿಂದ "ಗುಯ್ಯೆಲ್" ರೂಪ ನಿಷ್ಪತ್ತಿ ಮಾಡುವುದು ತೆಲುಗು ಗೊಯ್ಯಿ > ಗೊಯಿ > ಗ್ರೊಯಿ (ಗ್ರೊಯ್ಯಿ > ಗೊಯ್ಯಿ > ಗೋಯಿ > ಗೊಯಿ ? ಸಂ.) ಈ ಪರಂಪರೆಯಿಂದ ಮಾಡುವುದಕ್ಕಿಂತ ಸರಳವಾಗಿದೆ.

ಉರ್ಕು, ಉಕ್ಕು, ಉಗ್ಗು, ಒಟ್ಕು (= ಉಕ್ಕಿ ಹರಿ), ಎಂಬ ಧಾತುಗಳು ಕನ್ನಡದಲ್ಲಿ ಧಾರಾಳವಾಗಿವೆ. ಹಾಗೆಯೆ ತುಳುವಿನಲ್ಲಿ (ಒಕ್ಕರ್ (= ಉಕ್ಕಿ ಹರಿ), *ಉಗ್ಗು (= ಚಿಮ್ಮಿ ಚಿಮ್ಮಿ ಹರಿ) ಧಾತುಗಳಿವೆ. ಶ್ರೀಮಾನ್ ಡಿ. ಎಲ್. ನರಸಿಂಹಾಚಾರ್ಯರು ಸರಿಯಾಗಿಯೆ ಹೇಳುವಂತೆ 'ಅಲ್' (= ತುಳು: ಎಲ್) ಎಂಬುದು ಪ್ರತ್ಯಯವಾದರೆ ಉಕ್ಕಿ (ತು. ಉಗ್ಗುದ್ ಇಲ್ಲವೆ ಒಕ್ಕರ್ದ್) ಹರಿಯುವ ಸ್ವಾಭಾವಿಕ ಊಟೆಯಿಂದ ನಿರ್ಮಿಸಲ್ಪಟ್ಟ ಜಲಾಶಯವೇ ಉಗ್ಗು + ಎಲ್=ಉಗ್ಗೆಲ್ ಎಂದಾಗುತ್ತದೆ.

ಶ್ರೀ ನರಸಿಂಹಾಚಾರ್ಯರೇ "ಗುಯ್ಯೆಲ್"ಗೆ ಹೇಳಿರುವ ಅರ್ಥ ಈ ನಿಷ್ಪತ್ತಿಗೆ ತುಂಬಾ ಸರಿಹೋಗುತ್ತದೆ. ತುಮಕೂರು, ಚಿತ್ರದುರ್ಗ ಜಿಲ್ಲೆಗಳಲ್ಲಿ ಇಂದು ತಲಪರಿಗೆಯೇ(="ತಗ್ಗಾದ ಭೂಭಾಗದಲ್ಲಿ ನೀರು ನೆಲದಿಂದ ಒಡೆದು ಹಳ್ಳವಾಗಿ" ಹರಿಯುವ ನೀರಿನ ಆಶಯ) ಹಿಂದೆ "ಗುಯ್ಯೆಲ್" ಆಗಿತ್ತು ಎಂದವರು ವಿವರಿಸಿದ್ದಾರೆ. ಉಗ್ಗೆಲ್ (ಕನ್ನಡ, ಉಕ್ಕಲು) ಎಂದರೆ ಇದೇ ಅರ್ಥ ಕೊಡುತ್ತದೆ. ತುಳುವಿನಲ್ಲಿಯೂ ವಿಶೇಷಾರ್ಥಕವಾಗಿ ಒಂದು ಕಾಲದಲ್ಲಿ ಬಳಸಲ್ಪಡುತ್ತಿದ್ದ ಈ ಶಬ್ದ ಬರಬರುತ್ತಾ ಒಟ್ಟಿನ ಮೇಲೆ 'ಬಾವಿ' ಎಂಬರ್ಥದಲ್ಲಿ ಬಳಕೆಗೆ ಬಂದಿರಬಹುದು. ಶಬ್ದಗಳ ಇತಿಹಾಸದಲ್ಲಿ ಹೀಗೆ ವಿಶೇಷಾರ್ಥಕಗಳು ಸಾಮಾನ್ಯಾರ್ಥಕಗಳಾಗಿ ಬಳಕೆಗೆ ಬರುವುದು ತೀರ ಸಾಮಾನ್ಯ ಘಟನೆ ತಾನೆ ?

ಸೋಜಿಗದ ಸಂಗತಿಯೆಂದರೆ ತೆಲುಗುನಾಡಿನ ಮೇರೆಯ ಬಳಿಯ ಕನ್ನಡ ನಾಡಿನಲ್ಲಿ ಒಮ್ಮೆ ಬಳಕೆಯಲ್ಲಿದ್ದ ಈ ಶಬ್ದ ತೆಲಗುನಾಡಿನಿಂದ ಬಲು ದೂರ ತುಳುನಾಡಿನಲ್ಲಿ ಉಳಿದುಕೊಂಡಿರುವುದು. ಆದರೆ ಎಲ್ಲ ದ್ರಾವಿಡ ಭಾಷೆಗಳಲ್ಲೂ ಹಿಂದೆ ಬಳಕೆಯಲ್ಲಿದ್ದು ಈಗ ಬಳಕೆ ತಪ್ಪಿರುವ ಇಲ್, ಇಲ್ಲು (=ಮನೆ) ಶಬ್ದ ತೆಲಗು ಮತ್ತು ತುಳುವಿನಲ್ಲಿ ಜೀವಂತವಾಗಿ ಉಳಿದಿಲ್ಲವೆ ?

—ಪಾ. ವೆಂ. ಆಚಾರ್ಯ

ಕಾವ್ಯಾವಲೋಕನ

ವೈದ್ಯನ ಮಗಳು (ಐತಿಹಾಸಿಕ ಕಾದಂಬರಿ): ಲೇಖಕರು: ಭಾರತೀಸುತ; ಪ್ರಕಾಶಕರು: ಕಾವ್ಯಾಲಯ, ಮೈಸೂರು ೫; ಕಿರೀಟ ಅಷ್ಟದಳ; ಪು. iv+೩೬೪; ಬೆಲೆ: ಸಾಧಾರಣ ಪ್ರತಿ: ರೂ. ೫, ಕ್ಯಾಲಿಕೋ ಪ್ರತಿ: ರೂ. ೭.

ಕನ್ನಡಸಾಹಿತ್ಯದಲ್ಲಿ ಐತಿಹಾಸಿಕ ಕಾದಂಬರಿಗಳ ಸಂಖ್ಯೆ ವಿರಳ. ಐತಿಹಾಸಿಕ ಘಟನಾವಳಿಗಳನ್ನು ಶ್ರದ್ಧೆಯಿಂದ ಕ್ರಮವರಿತು ಅಳವಡಿಸಿಕೊಂಡ ಸಫಲ ಕಾದಂಬರಿಗಳ ಸಂಖ್ಯೆಯಂತೂ ಅಲ್ಪವೇ ಎನ್ನಬಹುದು. ಹೀಗಾಗಿ "ವೈದ್ಯನ ಮಗಳು" ಕಾದಂಬರಿಯಲ್ಲಿ ಇತಿಹಾಸದ ಪುಟಗಳನ್ನು ಅಳವಡಿಸಿಕೊಂಡಿರುವಲ್ಲಿ, ಲೇಖಕರೇ ಹೇಳುವಂತೆ, ಒಂದು ವಿಶೇಷತೆಯಿದೆ ಎನ್ನಬೇಕು. "ಉಳಿದ ಕಾದಂಬರಿಗಳಲ್ಲಿ ಐತಿಹಾಸಿಕ ಘಟನೆಗಳಿಗೆ ಹೆಚ್ಚು ಮಹತ್ವ ಕೊಡಲಾಗಿದೆ. ನಾನು "ವೈದ್ಯನ ಮಗಳ"ಲ್ಲಿ ಆ ಕಾಲದ ಜನಜೀವನವನ್ನು ಗುರುತಿಸಲು ಪ್ರಯತ್ನ ಮಾಡಿದ್ದೇನೆ" ಎಂದಿರುವ ಮಾತು ಬಹುಪಾಲು ಸತ್ಯವಾಗಿದೆ.

ವಿಷಯಾಸಕ್ತನಾಗಿ ಕೇವಲ ಭೋಗಲೋಲುಪತೆಯಲ್ಲೇ ಮುಳುಗಿ ರಾಜ್ಯನಿರ್ವಹಣೆಯ ಕರ್ತವ್ಯವನ್ನು ಸಂಪೂರ್ಣವಾಗಿ ಮರೆತಿದ್ದ ತನ್ನ ತಂದೆ ನರಸಿಂಹ ದೊರೆಯನ್ನು ಸಿಂಹಾಸನದಿಂದ ಕೆಳಕ್ಕಿಳಿಸಿ ಹೊಯ್ಸಳ ಸಾಮ್ರಾಜ್ಯದ ಆಳ್ವಿಕೆಯ ಸೂತ್ರವನ್ನು ಸ್ವೀಕರಿಸಿದ ಇಮ್ಮಡಿ ವೀರಬಲ್ಲಾಳನು ವಿಧಿಯ ಕೈವಾಡದಿಂದಾಗಿ ಭಗಂದರ ರೋಗಕ್ಕೆ ಈಡಾಗಿ ನರಳುತ್ತಿರುತ್ತಾನೆ. ಅರಸನ ಅಸಹಾಯ ಪರಿಸ್ಥಿತಿಯನ್ನು ಗಮನಿಸಿದ ನೆರೆರಾಜರುಗಳು ಹೊಯ್ಸಳ ಸಾಮ್ರಾಜ್ಯವನ್ನು ಕಬಳಿಸಲು ಹೊಂಚುಹಾಕುತ್ತಿರುತ್ತಾರೆ. ಆಗತಾನೇ ಪ್ರವರ್ಧಮಾನಕ್ಕೆ ಬರುತ್ತಲಿದ್ದ ವೀರಶೈವಮತಕ್ಕೂ ಆ ವೇಳೆಗಾಗಲೇ ಪ್ರಸಿದ್ಧವಾಗಿದ್ದ ಇತರ ಮತಗಳಿಗೂ ಘರ್ಷಣೆ ಉಂಟಾಗಿರುತ್ತದೆ. ಹೀಗಾಗಿ, ಧಾರ್ಮಿಕ ಕ್ಷೇತ್ರದಲ್ಲಿ ಶಾಂತಿ ಸಹನಶೀಲತೆಗಳ ಸ್ಥಾಪನೆಯ ಮಹತ್ವದ ಕರ್ತವ್ಯವೂ ಅರಸನ ಪಾಲಿನದಾಗಿರುತ್ತದೆ. ಈ ಸಂದಿಗ್ಧ ಪರಿಸ್ಥಿತಿಯಲ್ಲಿ ರಾಜನ ದೈಹಿಕ ಸ್ವಾಸ್ಥ್ಯವನ್ನು ದೊರಕಿಸಿಕೊಡುವಲ್ಲಿ ರಾಜವೈದ್ಯರು ವಿಫಲರಾಗಿರುತ್ತಾರೆ. ಮಲ್ಲಿಗೆ ಹಳ್ಳಿಯ ಮುಕ್ಕಣ್ಣಹೆಗ್ಗಡೆ ಹಾಗೂ ಆತನ ಮಡದಿ ನಾಗವ್ವಹೆಗ್ಗಡಿತಿಯರ ಒಲವಿನ ಮಡಿಲಲ್ಲಿ ಬೆಳೆದು ತನ್ನ ಅನಾಥ ಸ್ಥಿತಿಯನ್ನು ಮರೆತ ಚಂಗಲೆಯು ಸಂಸ್ಕೃತ, ಕನ್ನಡ, ತಮಿಳು, ಪ್ರಾಕೃತ ಭಾಷೆಗಳಲ್ಲಿ ಪ್ರವೇಶಹೊಂದಿದ್ದು ಮಾತ್ರವಲ್ಲದೆ ತನ್ನ ತಂದೆ ಮಲ್ಲಣ್ಣಪಂಡಿತರಿಂದ ವೈದ್ಯಶಾಸ್ತ್ರದಲ್ಲಿ ಪ್ರವೀಣತೆಯನ್ನೂ ದೊರಕಿಸಿಕೊಂಡಿದ್ದಳು. ಈಕೆಯ ಶ್ರದ್ಧಾಪೂರ್ವಕವಾದ ಆರೈಕೆಗಳಿಂದಾಗಿ ಹೊಯ್ಸಳ ದೊರೆ ರೋಗಮುಕ್ತನಾಗಿ ತನ್ನ ಸಾಮ್ರಾಜ್ಯನಿರ್ವಹಣೆಯ ಕರ್ತವ್ಯದಲ್ಲಿ ತೊಡಗುತ್ತಾನೆ. ಇದಿಷ್ಟು ಇತಿಹಾಸದ ದೃಷ್ಟಿಯಿಂದ ಕಾದಂಬರಿಯ ಕಥಾಸಾರಾಂಶವೆನ್ನಬಹುದು.

ಆದರೆ ಕಾದಂಬರಿಯ ಸತ್ವಯುತ ಅಂಶ ಇಲ್ಲಿ ಚಿತ್ರಿತವಾಗಿರುವ ಜನಜೀವನ. ತನಗೆ ಆಶ್ರಯವಿತ್ತ ಮುಕ್ಕಣ್ಣಹೆಗ್ಗಡೆ ಹಾಗೂ ಆತನ ಮಡದಿಯ ಪ್ರೇಮಾದರಗಳಲ್ಲಿ ಪೋಷಿತಳಾದ ಚಂಗಲೆ ಸಹಜವಾಗಿಯೇ ಅವರ ಮಗನಾದ ರೇವಣ್ಣನಲ್ಲಿ ಅನುರಾಗ ಹೊಂದುವಳು. ಆದರೆ ಬಹು ಸಂದರ್ಭಗಳಲ್ಲಿಯಂತೆಯೇ ಇಲ್ಲೂ ಅಳಲೆಕಾಯಿ ಪಂಡಿತನ ಮಗಳನ್ನು ಹೆಂಡತಿಯಾಗಿ ಸ್ವೀಕರಿಸಲು ಹೆಗ್ಗಡೆಯ ಮಗನ ಸ್ವಾಭಿಮಾನ, ಸ್ವಪ್ರತಿಷ್ಠೆಗಳು ಅಡ್ಡಿಬಂದುಬಿಡುತ್ತವೆ. ಈ ಎಲ್ಲ ವಿಧದ ವಿರಸದ ಮಕುಟವೆಂಬಂತೆ ರೇವಣ್ಣನು "ನೀನು ನನ್ನ ಬಂಗಾರದವಳಾಗು"ಎಂದ ಮಾತುಗಳು ಚಂಗಲೆಗೆ ಸಹಿಸಲಶಕ್ಯವಾಗಿ ಅವಳೂ ಪ್ರತಿಜ್ಞೆಮಾಡಿಬಿಡುತ್ತಾಳೆ; "ನಾನು ಮಲ್ಲಣ್ಣಪಂಡಿತರ ಮಗಳಾಗಿದ್ದರೆ ನೀನೇ ಹತ್ತು ಜನರ ಸಮ್ಮುಖದಲ್ಲಿ ನನ್ನ ಕೊರಳಿಗೆ ಮಾಲೆ ಸೂಡಿ ತಾಲಿಕಟ್ಟಿದ ಮಡದಿಯಾಗುವೆನು" ಎಂದವಳೇ ಈ ಅಸಾಧ್ಯವಾದುದನ್ನು ಸಾಧ್ಯವೆಂದು ಮಾಡಿ ತೋರಿಸುವುದೇ ತನ್ನ ಜೀವನದ ಮುಂದಿನ ಗುರಿ ಎಂದು ನಿಶ್ಚಯಿಸುತ್ತಾಳೆ. ವೈದ್ಯನ ಮಗಳ ಈ ಪ್ರತಿಜ್ಞೆಯ ಪೂರೈಕೆಯಂತೂ ಸತ್ವಹೀನವಾಗಿದೆ ಎನ್ನದೆ ವಿಧಿಯಿಲ್ಲ. ಪಿರಿಯರಸಿ ಪದ್ಮಲೆ ಹಾಗೂ ವೀರಬಲ್ಲಾಳರ ಪ್ರೀತಿವಿಶ್ವಾಸಗಳಿಂದಾಗಿ ಚಂಗಲೆಯ ಧ್ಯೇಯಸಾಧನೆ ಹೆಚ್ಚು ಸುಕರವೆನಿಸಿದರೂ ಕಾದಂಬರಿಯ ಅಂತ್ಯಭಾಗದಲ್ಲಿ ದೊರೆ ಬಹುವಿಧದಿಂದ ಅನುನಯೋಕ್ತಿಗಳಿಂದಲೇ—ರೇವಣ್ಣನನ್ನು ಕೇಳಿಕೊಂಡರೂ ಚಂಗಲೆಯನ್ನು ವರಿಸಲು ಆತ ನಿರಾಕರಿಸುತ್ತಾನೆ. ಈತನ ಅವಿನಯ, ಅವಿಧೇಯತೆಗಳನ್ನು ಕಂಡ ರಾಜ ಕಿಡಿಕಿಡಿಯಾಗಿ ಆತನ ಉಂಬಳಿಯನ್ನು ಕಸಿದುಕೊಳ್ಳುವುದಾಗಿ ಬೆದರಿಸುತ್ತಾನೆ. ಇಂತಹ ನಿಸ್ಸಹಾಯಕ ಪರಿಸ್ಥಿತಿಯಲ್ಲಿ ಚಂಗಲೆಯನ್ನು ಸ್ವೀಕರಿಸಲು ಒಪ್ಪುತ್ತಾನೆ. ಹೀಗಾಗಿ, ಸಹಜವಾದ ಪ್ರೇಮ ಈ ಹೃದಯಗಳನ್ನು ಒಂದುಗೂಡಿಸದೆ ರಾಜದರ್ಪ ಇವರಿಬ್ಬರನ್ನು ಬಂಧಿಸುತ್ತದೆ. ಕಾದಂಬರಿಯ ಈ ಮುಗಿವು ಅಷ್ಟು ಸಮರ್ಪಕವೆನಿಸದು.

ಹೊಯ್ಸಳ ಸಾಮ್ರಾಜ್ಯದ ಜನಜೀವನವನ್ನು ಚಿತ್ರಿಸುವಲ್ಲಿ ಲೇಖಕರು ಸಫಲರಾಗಿದ್ದಾರೆ. ಮೆಯ್ಗಲಿಗಳಾದ ವೀರಭಟರು ಕಾಡಿನಲ್ಲಿ ಬೇಟೆಯಾಡುವ ಸಂದರ್ಭ ಮನೋಹರವಾಗಿದೆ. ಓಬಲನನ್ನು ಕಾಟಿಗಳು ಅಟ್ಟಿಸಿಕೊಂಡು ಬಂದಾಗ ದಟ್ಟವಾಗಿ ಮುಳ್ಳಿಡಿದ ಹಂಗಾರೆ ಮರವನ್ನೇರಿದ ಅವನ ದುಃಸ್ಥಿತಿಯನ್ನು ಕಂಡು ಮರುಗುವುದರೊಡನೇ ಸ್ವಲ್ಪ ಬೆಚ್ಚುತ್ತೇವೆ. ಅನ್ಯರ ನೆರವಿಲ್ಲದೆ ಏಕಾಂಗ ಶೂರರಂತೆ ಹೊನ್ನಯ್ಯಗವುಂಡರು ಹುಲಿಯನ್ನು ಕೊಲ್ಲುವ ಸನ್ನಿವೇಶವಂತೂ ತುಂಬಾ ಸುಂದರವಾಗಿದೆ. ರಾಜನ ಗರುಡನಾಗಿದ್ದು ಅವನ ಪ್ರಾಣರಕ್ಷಣೆಗೋಸ್ಕರ ತನ್ನನ್ನೇ ಬಲಿಗೊಡುವ ಮುದ್ದಣ್ಣನ ಪ್ರಸಂಗ ಕಾದಂಬರಿಯ ಅಂತ್ಯಭಾಗದಲ್ಲಿ ಕಂಡುಬಂದರೂ ಮನದಲ್ಲಿ ಅಚ್ಚಳಿಯದೆ ಉಳಿಯುತ್ತದೆ. ಚೊಚ್ಚಲುಗರ್ಭಿಣಿಯಾದ ಮಡದಿಯನ್ನೂ, ಜೀವನದ ಭವಿಷ್ಯದ ಸೊಗಸಿನ ದಿನಗಳನ್ನೂ ಬದಿಗೊತ್ತಿ,

ಅರಸನ ಅಪ್ಪಣೆಯಿಂದಾಗಿ ನರಬಲಿ ತಪ್ಪಿದ್ದಕ್ಕೆ ಪ್ರಕುಪಿತಳಾದ ಮಾಕಾಳಿಯು ಹೊಯ್ಸಳ ತಲೆವಣಿಯನ್ನು ಹಿಂಸಿಸುತ್ತಿರುವಳೆಂಬ ಮೂಢನಂಬಿಕೆಯನ್ನು ಒಪ್ಪಿಕೊಂಡು, ತನ್ನ ತ್ಯಾಗದಿಂದಲಾದರೂ ದೇವಿಯನ್ನು ಸಾಂತ್ವನಗೊಳಿಸಲೆಂದು ಹೊರಟ ಮುದ್ದಣ್ಣನ ವ್ಯಕ್ತಿತ್ವ ಅಂದಿನ ಗರುಡರ ಸಾಹಸ ಪೌರುಷಗಳಿಗೆ ಪ್ರತೀಕದಂತಿದೆ.

ಮಲ್ಲಿಗೆಹಳ್ಳಿಯ ಮಹಾಸಭೆಯ ಕಾರ್ಯಕಲಾಪಗಳು ಅಂದಿನ ನ್ಯಾಯ ವಿತರಣೆಯ ವಿಧಾನಕ್ಕೆ ಸೂಚಿಯಾಗಿದೆ. ತಾವಾಗಿ ನಂಬಿದ ಧರ್ಮ ನ್ಯಾಯಗಳನ್ನು ಪರಿಪಾಲಿಸುವುದರಲ್ಲಿ ಆ ಜನ ಪಡೆದಿದ್ದ ಸಿದ್ಧಿಯನ್ನು ಇಲ್ಲಿ ಗಮನಿಸಬಹುದು. ಮಹಾಪಂಡಿತ ವಾಮನಾಚಾರ್ಯರಂತಹ ಧರ್ಮನಿಷ್ಠರು ಅರಸನ ಅಪೇಕ್ಷೆಯಿಂದಾಗಿ ಧರ್ಮಾಧ್ಯಕ್ಷ ಪದವಿಯನ್ನು ಸ್ವೀಕರಿಸಿ ಅಂದಿನ ಧಾರ್ಮಿಕ ಕ್ಷೇತ್ರದಲ್ಲಿನ ಬಿಕ್ಕಟ್ಟನ್ನು ಪರಿಹರಿಸಲು ಪ್ರಯತ್ನಿಸುವುದು ಹೊಯ್ಸಳ ಅರಸುಗಳ ಸರ್ವಧರ್ಮಸಹಿಷ್ಣುತೆಗೆ ಸಾಕ್ಷಿಯಾಗಿದೆ. ದಕ್ಷರೂ ಕರ್ತವ್ಯಪರರೂ ಆದ ಸ್ವಾಮಿಭಕ್ತರ ನೆರವಿನಿಂದಾಗಿ ದೊರೆಗೆ ದೇಶದ ಆಗುಹೋಗುಗಳ ಸುವ್ಯವಸ್ಥೆಯನ್ನು ಸಾಧಿಸಲು ಸಾಧ್ಯವಾಗುತ್ತದೆ.

ಮಾದಲೆ ಓಬಲರು ಕಾದಂಬರಿಯಲ್ಲಿ ಸರಸದಾಂಪತ್ಯದ ಸೊಗಸನ್ನು ತುಂಬಿ ಹರಿಸಿದ್ದಾರೆ. ಇವರ ಪ್ರೇಮದ ಬೆಂಬಲವೇ ಚಂಗಲೆಯ ಪ್ರತಿಜ್ಞಾಸಾಧನೆಯಲ್ಲಿ ಬಹು ಮುಖ್ಯ ಪಾತ್ರವಹಿಸುತ್ತದೆ.

ಅಂದಿನ ಜೀವನವನ್ನು ಚಿತ್ರಿಸುವಲ್ಲಿ ಈಗ ಅಷ್ಟಾಗಿ ಬಳಕೆಯಲ್ಲಿಲ್ಲದ ಅನೇಕ ಪದಗಳನ್ನು ಬಳಸಿದ್ದಾರೆ. (ಉದಾ: ನಿಸ್ಸಾಳ, ಪರೆ, ಸೂಳೈಸು, ಬಿದ್ರೂಟ, ಬೊಜಂಗ, ಓಕೊಡದ ನಾಡು (=ಮರಳಿಬಾರದ ದೇಶ) ಹೊಳಲು, ಕೊಡಸಿಗೆ, ಗುಪ್ತಹೇರ (ಹೇರಕ ಎಂಬ ಪದವನ್ನು ಕಿಟ್ಟೆಲ್ ಕೊಡುತ್ತಾರೆ) ಇತ್ಯಾದಿ. ಕೆಲವು ಸಣ್ಣಪುಟ್ಟ ಮುದ್ರಣ ದೋಷಗಳೂ ತಲೆಹಾಕಿವೆ.

ಒಟ್ಟಿನಲ್ಲಿ, ಹೊಯ್ಸಳ ಸಾಮ್ರಾಜ್ಯದ ಜನಜೀವನವನ್ನು ಓದುಗರಿಗೆ ಪರಿಚಯಮಾಡಿಕೊಡುವಲ್ಲಿ ಈ ಕಾದಂಬರಿ ಸಫಲವಾಗಿದೆಯೆನ್ನಬಹುದು. ಕನ್ನಡಿಗರಿಗೆ ಈಗಾಗಲೇ ಸಾಕಷ್ಟು ಪರಿಚಿತರಾಗಿರುವ ಭಾರತೀಸುತರಿಂದ ಇದಕ್ಕೂ ಮೇಲ್ಮೆಯ ಕೃತಿಗಳನ್ನು ನಿರೀಕ್ಷಿಸಿದಲ್ಲಿ ನಿರಾಶೆಯಾಗದೆಂಬ ಭರವಸೆ ನನಗಿದೆ.

—ಎಸ್. ರಾಘವೇಂದ್ರಭಟ್ಟ

ಅಭೀಪ್ಸೆ: ಲೇಖಕರು: ಶ್ರೀ ಎಚ್. ಜಿ. ಸಣ್ಣಗುಡ್ಡಯ್ಯ; ಪ್ರಕಾಶಕರು: ಸಿರಿಗನ್ನಡ ಪ್ರಕಾಶನ, ತುಮಕೂರು; ಕಿರೀಟ ಅಷ್ಟದಳ; ಪು. xv+೫೮; ಬೆಲೆ: ರೂ. ೧.೨೫

"ಅಭೀಪ್ಸೆ" ಶ್ರೀಮಾನ್ ಸಣ್ಣಗುಡ್ಡಯ್ಯನವರ ಕಾವ್ಯನಿರ್ಮಾಣ ಪ್ರಯತ್ನದ ಪ್ರಥಮ ಪುಷ್ಪವಾದರೂ ಆಸೆಯನ್ನು ಮೂಡಿಸುವ ಸಾರ್ಥಕವಾದ

ಪ್ರಯತ್ನವೆನ್ನಬಹುದು. ೧೯೫೫ರಿಂದ ೧೯೬೧ರ ವರೆಗಿನ ಅವಧಿಯಲ್ಲಿ ರಚಿತವಾದ ಕವನಗಳನ್ನು ಅವುಗಳ ಕಾಲಾನುಕ್ರಮದಲ್ಲಿ ವಿವೇಚಿಸುವುದಾದರೆ ಕವಿಯಲ್ಲಿ ಗಮನಾರ್ಹವಾದ ಬೆಳವಣಿಗೆಯನ್ನು ಗುರುತಿಸಬಹುದು. ವಸ್ತುವಿನ ಆಯ್ಕೆ ಹಾಗೂ ನಿರ್ವಹಣೆ, ಪದಸಂಪತ್ತಿಯ ಸೂಕ್ತಪ್ರಯೋಗ ಹಾಗೂ ನಿರ್ದಿಷ್ಟ ಉದ್ದೇಶ ಇವುಗಳು ಸಾಧಿತವಾಗಿವೆಯೆನ್ನಬಹುದು. ಒಟ್ಟು ೩೨ ಕವನಗಳಲ್ಲಿ ಭಾಷಾಂತರಗಳಾದ ಮೂರನ್ನುಳಿದು ಉಳಿದುವೆಲ್ಲ ಈ ಅವಧಿಯಲ್ಲಿ ರಚಿತವಾದವು. ಭಾಷಾಂತರಗಳಂತೂ ತುಂಬ ಪರಿಣಾಮಕಾರಿಯಾಗಿದ್ದು ಕನ್ನಡದ ಕಟ್ಟಡಕ್ಕೆ ಒಪ್ಪವಾಗಿ ಹೊಂದಿಕೊಂಡಿವೆ. ಈ ಬಗೆಯಲ್ಲಿ "ಸಣ್ಣಮಲ್ಲಿಗೆ" ಕವನವಂತೂ ತುಂಬ ಸೊಗಸಾಗಿದೆ.

....
ಬೇಸಗೆಯಲಿ ಉದುರಿದ ಹನಿಯಂತೆ,
ಬೆಳಗಿನ ಹಸಲೆಯ ಇಬ್ಬನಿಯಂತೆ
ಕರಗಿದೆವೆಂದರೆ ಬರುವೆವೆ ಮತ್ತೆ ?
ಸಣ್ಣಮಲ್ಲಿಗೇ ! ಸಣ್ಣಮಲ್ಲಿಗೇ !
ಬೆಳಗಿನ ರವಿ ಮೇಲೇರುವ ಮುನ್ನವೆ
ಅವಸರದಲಿ ನೀನುದುರಲು ಇಂತು
ಅಳುಬರುವುದು ನನಗೆ.

ಇದೊಂದು ಭಾಷಾಂತರವೆಂಬುದು ಅನುವಾದಕಾರನ ಮಾತಿನಿಂದ ತಿಳಿಯಬಹುದೇ ಹೊರತು ಅದರ ದೇಸಿ ಕನ್ನಡದ ಜಾಯಮಾನಕ್ಕೆ ತುಂಬಾ ಒಗ್ಗಿದ್ದು ಚೇತೋಹಾರಿಯಾಗಿದೆ.

ಉಳಿದ ಸ್ವಂತ ಕವನಗಳಲ್ಲಿ ಕಾಲಾನುಕ್ರಮಣಿಕೆಯ ದೃಷ್ಟಿಯಿಂದ ಇತ್ತೀಚಿನವು ಉತ್ತಮವಾಗಿವೆ. "ಬೀಸುವುದೆ ಇನ್ನೊಮ್ಮೆ ಆ ಚಂಡಪವನ?" ಎಂಬ ಕವನವು ಸದ್ಯದ ನೀರಸಪರಿಸ್ಥಿತಿಯನ್ನು ಮಾರ್ಮಿಕವಾಗಿ ಚಿತ್ರಿಸುತ್ತಾ ನವಚೇತನವನ್ನು ಕಳಕಳಿಯಿಂದ ಹಾರೈಸುವ ಸೊಲ್ಲಿನಿಂದ ತುಂಬಿಕೊಂಡಿದೆ.

....
ಹಿರಿಯರಿದ್ದಾರೆ—
(ಈ ಭರಣಿಮರಕಿನ್ನೂರು, ಗೋಣಿಮರಕಾರ್ನೂರು
ಒಂದೊಂದು ಕೋಡುಗಲ್ಲಿಗು ಸಹಸ್ರವರ್ಷಗಳ ಕೀರುತಿ ಮೇಲ್ಮೆ
ಬೀಳುಕಾಲಿಗೆ........)

ಎಂಬೀ ಸಾಲುಗಳು ಪುರಾತನವೆಂದ ಮಾತ್ರಕ್ಕೆ ಸಕಲ ಗೌರವ ಅಭಿಮಾನಗಳನ್ನೂ ಬಯಸುವ ಪ್ರವೃತ್ತಿಯನ್ನು ಎತ್ತಿ ತೋರಿಸುವುವು.

ಹೆತ್ತು ಹೆಳವಾಗಿ ಕಾಮಾಲೆ ಬಡಿದು
ಒಣಕೋಲುಗಳ ಮೇಲೆ ಭಾರಿ ಪತ್ತಲವನುಟ್ಟು,
ಮೈತುಂಬ ಹೊದ್ದು, ಹಣೆಗೆ ಅಕ್ಷತೆ ಇಟ್ಟು ನಡೆವ ಸಾಧ್ವಿಗಿನ್ನೊಮ್ಮೆ
[ಬರಬಹುದೆ ಹರೆಯ ?
ಅವಳ ನೆತ್ತಿಯ ಮೇಲೆ ಧುಮುಕಲೇ ಬೇಕೆ ಬಿಸಿನೆತ್ತರಭಿಷೇಕ ?
... .

ಎಂಬಲ್ಲಿ ಪ್ರಬಲ ಪರಿವರ್ತನೆಯನ್ನು ನಿರೀಕ್ಷಿಸುವ ದನಿಯಿದೆ.

ಸೋಗಿನ ಆದರ್ಶಪ್ರಿಯತೆಯನ್ನು ಕವಿ ದಿಟ್ಟಮಾತುಗಳಲ್ಲಿ ಹಂಗಿಸುತ್ತಾ 'ಬಿತ್ತಿದ ಮುಖ ತೊಟ್ಟೊಣಗಿದ ನಾಲಗೆ ದೃಷ್ಟಿ ಸತ್ತ ಕಣ್ಣು'ಗಳನ್ನು ಹೊತ್ತ 'ಒಣ ಠೀವಿಯ ಕಲಿಕೆ'ಯನ್ನು ನಿರಾಕರಿಸುತ್ತಾ' ಕರಿನಾಗರ ಚಿರರಕ್ಷೆ'ಯನ್ನು ಕೋರುತ್ತಾರೆ. ಸ್ನೇಹದ ಮಹತ್ವವನ್ನು "ಪಕ್ಕದಲಿ ಎದುರುಗಡೆ ಕುಳುತಿಹರಿವರು, ಗೆಳೆಯರು ಮನೆಯನೇ ಮರೆಸಿದವರು" ಎಂಬ ಕೃತಜ್ಞತೆಯ ಮಾತುಗಳಿಂದ ನೆನೆಯುತ್ತಾರೆ. "ದುಃಖಸಖಿ"ಯನ್ನು 'ನೀ ನನ್ನ ಒಡನಿರಲು ಎದೆ ಬಿರಿದ ಹತ್ತಿಕಾಯಿ ಉರಿಹೊತ್ತಿ ಉರಿಯುತಿಹ ಪರಿಮಳದ ಭರಣಿ' ಎಂಬ ಮಾತುಗಳಲ್ಲಿ ಸ್ಮರಿಸುತ್ತಾರೆ. ಗುಮಾಸ್ತೆಯ ಜೀವನದ ಬೇಸರವನ್ನು ಹೀಗೆಂದು ಚಿತ್ರಿಸುತ್ತಾರೆ—

'ಬಿಸಿಲಿನಲಿ ತಲೆಯೆತ್ತಿ ಬೆವರುತ್ತ ನಿಂತ ದೀಪದ ಕಂಬ
ಪಕ್ಕದಲಿ ಮೈಕಾದು ಸೆಟೆದ ಹೆಂಚಿನ ಮನೆ
ಅಲ್ಲೆ ಹಿಂಗಡೆಯಲ್ಲೆ ಧೂಳು ಮುಕ್ಕಿದ ಹಸುರು ತೆಂಗಿನಗೊನೆ'

ಒಟ್ಟಿನಲ್ಲಿ ಈ ಕವನಸಂಕಲನವು ಕವಿಯ ವ್ಯಕ್ತಿತ್ವವಿಕಾಸವನ್ನು ಪ್ರಕಟಿಸುವಲ್ಲಿ ಸಾಫಲ್ಯವನ್ನು ಸಾಧಿಸಿದೆ ಎನ್ನಬಹುದು. ಶ್ರೀಮಾನ್ ಎನ್. ಎಸ್. ಲಕ್ಷ್ಮೀನಾರಾಯಣಭಟ್ಟರ 'ತಿಲಕ'ವೆಂಬ ಹೆಸರಿನ ಮುನ್ನುಡಿಯು ಕೃತಿಗೆ ಮೆರುಗನ್ನು ತಂದುಕೊಟ್ಟಿದೆ. ಈಗಾಗಲೇ ಮೈಸೂರು ಸರ್ಕಾರ ಉತ್ತಮ ಸಾಹಿತ್ಯಕ್ಕೆ ನೀಡುವ ಬಹುಮಾನವನ್ನು ಈ ಕೃತಿ ಗಳಿಸಿಕೊಂಡಿರುವುದು ಇದರ ಸಫಲತೆಗೆ ಇನ್ನೊಂದು ನಿದರ್ಶನ. ಸಮರ್ಥರಾದ ಈ ಕವಿಗಳಿಂದ ಇಂತಹ ಹಾಗೂ ಇದಕ್ಕೂ ಉತ್ತಮವಾದ ಕೃತಿಗಳನ್ನು ನಿರೀಕ್ಷಿಸೋಣ.

—ಎಸ್. ರಾಘವೇಂದ್ರಭಟ್ಟ

ರಂಗಬಿನ್ನಪ: ಲೇಖಕರು: ಶ್ರೀ ಎಸ್. ವಿ. ರಂಗಣ್ಣ; ಪ್ರಕಾಶಕರು: ಕಾವ್ಯಾಲಯ, ಜಯನಗರ, ಮೈಸೂರು ೫; ಕಿರೀಟ ಅಷ್ಟದಳ; ಪು. XIX + ೬೦೩; ಬೆಲೆ: ಸಾದಾಪ್ರತಿ: ರೂ. ೧೫; ಕ್ಯಾಲಿಕೊ ಪ್ರತಿ: ರೂ. ೨೦.

"ರಂಗಯ್ಯನ ವಚನಗಳ"ನ್ನು ಬಿಡಿಬಿಡಿಯಾಗಿ "ಪ್ರಬುದ್ಧ ಕರ್ಣಾಟಕ"ದಲ್ಲಿ ಓದಿ ಅದರ ಸವಿಯನ್ನು ಚಪ್ಪರಿಸಿ, ಮತ್ತೆ ಮತ್ತೆ ರುಚಿ ನೋಡಬೇಕೆಂದು ಚಾತಕ

ಪಕ್ಷಿಯಂತೆ ಹಾತೊರೆಯುತ್ತಿದ್ದ ರಸಿಕವೃಂದಕ್ಕೆ ಇದೀಗ ಶ್ರೀಮಾನ್ ಎಸ್. ವಿ. ರಂಗಣ್ಣನವರು ಸಾವಿರ ಸಂಖ್ಯೆಯಲ್ಲಿ ಅತ್ಯಮೂಲ್ಯವಾದ ವಚನಕಾಣಿಕೆಯನ್ನು ನೀಡಿರುತ್ತಾರೆ. ಇಷ್ಟು ಬೃಹತ್ತಾದ ಮಹತ್ವಪೂರಿತವಾದ ವಿಶಿಷ್ಟವಾದ ಕೃತಿಯೊಂದು ಲಭಿಸಿದ್ದು ಕನ್ನಡಿಗರ ಸುಕೃತವೇ ಸರಿ. ಕನ್ನಡಿಗರ ಕಿವಿಗೆ ವಚನದ ನಾದ, ಲಯಗಳು ಹೊಸತೇನಲ್ಲ. ನೂರಾರು ವರ್ಷಗಳ ಹಿಂದೆಯೇ ಈ ವಿಶಿಷ್ಟ ಪದ ರಚನೆಯ ಕಿಂಕಿಣಿ ನಾದ ನಮ್ಮ ಕಿವಿಗೆ ಬಿದ್ದಿತು. ಅಲ್ಲಿಂದ ಈಚೆಗೆ, ಆಧುನಿಕ ಕಾವ್ಯಸಂಪ್ರದಾಯ ಇತಿಮಿತಿಗಳಿಲ್ಲದೆ ಬೆಳೆದು ಬಂದಿದ್ದರೂ, ಈ ಪುರಾತನ ಮಾರ್ಗಕ್ಕೆ ಮತ್ತೆ ಮನಸೋತವರು ಬಹು ವಿರಳವೆನ್ನಬಹುದು. ಶ್ರೀ ದ. ರಾ. ಬೇಂದ್ರೆಯವರ " ಕರುಳಿನ ವಚನಗಳು", ಶ್ರೀ ಕುವೆಂಪು ಅವರ " ಕಿಂಕಿಣಿ "ಯ ಗದ್ಯಗೀತಗಳು, ಶ್ರೀ ಜೀರಗೆ ಕಟ್ಟಿ ಬಸವಪ್ಪನವರ ಕೆಲವು ವಚನಗಳು ಮುಂತಾದುವು ಒಮ್ಮೊಮ್ಮೆ ನಮ್ಮ ಕಣ್ಣೆದುರು ಸುಳಿದಾಡಿರುವುದುಂಟು. ಆದರೆ, ಪ್ರಾಚೀನರ ಆ ಹೃದಯದ ಮಿಡಿತ ಮೊರೆತಗಳನ್ನು ಕಿವಿಯಾರೆ ಕೇಳಿ, ಮನವಾರೆ ನಲಿದು, ಮತ್ತೆ ಅದೇ ಧಾಟಿಯಲ್ಲಿ ನಯವಿನಯ ಸಮನ್ವಿತವಾಗಿ ಸಮರ್ಥರಾಗಿ ನುಡಿಯಲು ಹೊರಟ ದಿಟ್ಟ ಹಟಗಾರರೆಂದರೆ ಶ್ರೀಮಾನ್ ರಂಗಣ್ಣನವರೊಬ್ಬರೇ ಸರಿ. ಅವರ ಒಲವಾದರೂ ಇತ್ತ ಹೇಗೆ ಹರಿಯಿತು, ಅದು ಅವರ ಹೃದಯದಲ್ಲಿ ಹೇಗೆ ತುಂಬಿಬಂದಿತು, ಆ ಉತ್ಸಾಹ ಹೇಗೆ ವಚನರೂಪದಲ್ಲಿ ಎರಕಗೊಂಡು ಆಕಾರ ತಾಳಿ ಉದಿಸಿಬಂದಿತು ಎಂಬುದನ್ನು ಲೇಖಕರು ತಮ್ಮ ಪೀಠಿಕೆಯಲ್ಲಿ ಬಹು ಹೃದಯಂಗಮವಾಗಿ ವಿವರಿಸಿದ್ದಾರೆ. ಅವರು ಹೇಳಿರುವ ಆ ಹಿನ್ನೆಲೆ ಈ ರಚನೆಗೆ ಸೊಗಸಾದ ರನ್ನಗನ್ನಡಿಯಂತಿದೆ. ಕನ್ನಡ ಕವಿಗಳ ಶೈಲಿಯ ಅಂತರಂಗವನ್ನು ಹೊಕ್ಕಿ ನೋಡುವುದರಲ್ಲಿ ನಿಪುಣರೆನ್ನಿಸಿಕೊಂಡಿರುವ ನಮ್ಮೆಲ್ಲರ ಹೆಮ್ಮೆಯ ಗುರುಗಳಾದ ಶ್ರೀಮಾನ್ ರಂಗಣ್ಣನವರು ಇಂದು ಈ ವಚನಾರಾಮಕ್ಕೆ ನಮ್ಮನ್ನು ಕರೆದೊಯ್ದು ಅವರ ಜೀವನದ ವಿಸ್ತಾರವನ್ನೂ, ಪರಿಪಕ್ವವಾದ ಪರಿಣತಿಯನ್ನೂ, ಹೃದಯದ ಸಿಹಿ ಕಹಿಗಳನ್ನೂ, ಅಂತರಂಗದ ಅನಂತ ವೈಭವವನ್ನೂ ಮತ್ತೆ ಮತ್ತೆ ಚಪ್ಪರಿಸಿ ಸವಿಯುವಂತೆ ಮಾಡಿಕೊಟ್ಟಿರುತ್ತಾರೆ. ಶ್ರೀ ಡಿ. ವಿ. ಜಿ. ಅವರ " ಮಂಕುತಿಮ್ಮನ ಕಗ್ಗ "ವನ್ನು ಒಂದೇ ಬಾರಿಗೆ ಓದಿ ಮುಗಿಸುವುದು ಹೇಗೆ ಎಗ್ಗತನವಾದೀತೋ ಹಾಗೆಯೇ ಈ ನೂತನ ವಚನಭಾಂಡಾರವನ್ನೂ ಒಂದೇ ಪಟ್ಟಿನಲ್ಲಿ ಓದಿ ಮುಗಿಸಿದನೆಂದು ಹೇಳುವುದು ಗಾಂಪತನವಾದೀತು. ಆದಿ–ಮಧ್ಯ–ಅಂತ್ಯಗಳ ಕಟ್ಟುನಿಟ್ಟಿಗೆ ಒಳಪಡದ ಈ ಕೃತಿಸಂಪುಟವನ್ನು, ಎಲ್ಲಿ ಪುಟ ತಿರುವಿದರೂ ಅಲ್ಲಿ ವಾಮನನೋ, ತ್ರಿವಿಕ್ರಮನೋ ಎದ್ದು ನಿಲ್ಲುತ್ತಾನೆ. ಆಕಾರದಲ್ಲಿ ವಾಮನನೇ ಅಚ್ಚುಮೆಚ್ಚಲ್ಲವೆ? ತ್ರಿವಿಕ್ರಮನಾಗಿ ಬೆಳೆದರೂ ಆತನ ವಟುವೇಷದಲ್ಲಲ್ಲವೇ ಆ ಬೃಹದಾಕಾರ ಹುದುಗಿದ್ದದ್ದು! ವೃಕ್ಷದ ವ್ಯಾಪ್ತಿಗೂ ಮೊದಲು ಬೀಜದ ಆ ಸತ್ವವಲ್ಲವೇ ಅದಕ್ಕೆ ಮುಖ್ಯ ಆಧಾರ! ಅಂತೆಯೇ ವಚನ ಕಿರಿದಾದಷ್ಟೂ ಅದರ ಹಿರಿಮೆ ಅದ್ವಿತೀಯ

ವೆನ್ನಿಸುತ್ತದೆ ಇಲ್ಲಿ. ಇಂಥ ಗ್ರಂಥವನ್ನು ಪರಿಚಯಮಾಡಿಕೊಡಲು ತೊಡಗುವುದೂ ಒಂದು ಸಾಹಸವೇ ಸರಿ. ಯಾವುದನ್ನು ಆರಿಸಿ ತಂದಿಡುವುದು? ಯಾವುದನ್ನು ಬೇಡವೆಂದು ಬಿಡುವುದು? ವಿಷಯದ ವ್ಯಾಪ್ತಿಯಾದರೂ ಅಸ್ಪಿಷ್ಟಲ್ಲ. ಹಸನಾದ ಒಂದು ಬದುಕಿನಲ್ಲಿ, ಹಲವಾರು ಶತಮಾನಗಳ ಗ್ರಂಥಗಳ ನಿರಂತರವಾದ ಅಧ್ಯಯನ ಸಂಪತ್ತು, ಆಲೋಚನಾಪರಂಪರೆ ರಸದ ಘಟ್ಟಿಯಾಗಿ, ಅನುಭವದ ಹಾಲು ಹೊಳೆಯಾಗಿ, ಚಿಂತನದ ಮಂಥನವಾಗಿ, ಸ್ವಾರಸ್ಯದ ಸಾರವಾಗಿ, ಮೂಡಿಬಂದಿರಬೇಕಾದರೆ ಅದನ್ನು ಒಂದೆರಡು ಮಾತುಗಳಲ್ಲಿ ಆಡಿ ಮುಗಿಸುವುದು ಸಾಧ್ಯವಿಲ್ಲ. ಲೇಖಕರು ವಚನರಾಶಿಯನ್ನು ತಂದು ಒಟ್ಟಿದ ಬಳಿಕ ತಾವೇ ಅದರ ವಿಭಾಗಕ್ಕೆ ಕೈ ಹಾಕಿ, ಕಡೆಯಲ್ಲಿ ಒಂದು ವಿಷಯಾನುಕ್ರಮಣಿಕೆಯನ್ನು ಕೊಟ್ಟಿರುವರು. ಆ ಪಟ್ಟಿಯಲ್ಲಿ ಒಟ್ಟು ೩೩೩ ವಿಷಯಗಳ ಹೆಸರು ಬರುತ್ತವೆ. ಒಂದೊಂದರ ಅಡಿಯಲ್ಲೂ ಎಷ್ಟೋ ವಚನಗಳು ಬರುತ್ತವೆ. ಎಂದಮೇಲೆ ಈ ತೆರನಾದ ಕೃತಿಯನ್ನು ಸುಲಭವಾಗಿ ವಿಂಗಡಿಸಿ ಹೇಳುವುದು ಪ್ರಯಾಸವೇ ಸರಿ. ಆದ್ದರಿಂದ ಈ ಪರಿಶೀಲನೆಯಲ್ಲಿ ಲೇಖಕರ ವಿಶಿಷ್ಟವಾದ ಮನೋಧರ್ಮವನ್ನು ನೇರವಾಗಿ ಪರಿಚಯಮಾಡಿಕೊಡಬಲ್ಲ ಕೆಲವು ಕಿರುವಚನಗಳನ್ನೋ ಇಲ್ಲವೇ ಅತಿ ಸಾರವತ್ತಾದ ಪಂಕ್ತಿಗಳನ್ನೋ ಉದಾಹರಿಸಲು ಉದ್ದೇಶಿಸಲಾಗಿದೆ.

ಲೇಖಕರಲ್ಲಿ ಎದ್ದುಕಾಣುವ ದೈವಭಕ್ತಿ, ಕರ್ತವ್ಯನಿಷ್ಠೆಗಳು ಅವರು ಮಾವಿನಕೆರೆಯ ರಂಗನಾಥನ ಅಂಕಿತವನ್ನು ತಮ್ಮ ವಚನಕ್ಕೆ ಸ್ವೀಕರಿಸಿರುವುದರಲ್ಲಿಯೇ ಸುವಿದಿತವಾಗುತ್ತದೆ. ತಮ್ಮ ಇಷ್ಟದೇವತೆ, ಮನೆದೈವವನ್ನು ಕುರಿತು

ಮಾವಿನಕೆರೆಯ ಮಹೇಶ ರಂಗೇಶ,
ಕುಲದೈವ ಮನೆದೈವ
ಬೆಟ್ಟದ ಗುಹೆಯ ಲಿಂಗರೂಪಿ ಲಕ್ಷ್ಮೀಕಾಂತ
ಎನ್ನಪ್ಪ ರಂಗಯ್ಯ ಶಾಂತ!
ಪರಂಜ್ಯೋತಿ ಪುರುಷೋತ್ತಮ ಪೆರ್ಮ ನೀನು
ಓ ರಂಗ; ವಿಪರೀತ ಸಣ್ಣವ ಅಜ್ಞಾನಿ ಕರ್ಮಿ
ನಾನು, ನಿನಗೇನನ್ನು ಹೇಳುವುದು,
ಆವುದನ್ನು ನಿನ್ನಲ್ಲಿ ಕೇಳುವುದು ?
ಒಂದು ವಿನಾ ಮತ್ತಾವ ಕೋರಿಕೆಯು ನನ್ನ ಚಿತ್ತಕ್ಕೆ ತೋರದಯ್ಯ,
ಮಬ್ಬು ಮಬ್ಬಾಗಿ ತೋರಿದರು ಬಾಯಿಗೆ ಬಾರದಯ್ಯ–
ಇಷ್ಟನ್ನು ಮಾತ್ರ ತೊದಲು ನುಡಿಯಲಿ ನಾ ಬೇಡಬಲ್ಲೆ–
ತಂದೆ ನೀನು ನೀಡದಕೆ ಪುರಸ್ಕಾರ–
ನನ್ನ ಪ್ರತಿಯೊಂದು ಯೋಚನೆ ವಚನ ಕೆಲಸ
ಆಗಲಯ್ಯ ನಿನ್ನ ನುತಿ, ನಿನಗೆ ನಮಸ್ಕಾರ

ಎಂದು ಮೊರೆಯಿಡುವರು. ತಮ್ಮ ವಚನಪುಷ್ಪವನ್ನೇ ಆತನಿಗೆ ಸಮರ್ಪಿಸಿ " ಅವೆ

ಎನ್ನ ತಬ್ಬಿಬ್ಬು ವಚನ, ಅಲ್ಪ ತೇಜದ ತಪ್ಪು ತಪ್ಪು ರಚನೆ: ಅವೆ ಎನ್ನ ಬಿನ್ನಪ ರಂಗ, ರಂಗ ಬಿನ್ನಪ!" ಎಂದು ಕೃತಾರ್ಥರಾಗುವರು. ಈ ರೀತಿಯಾದ ಸದಾಲೋಚನೆ ಸದ್ಭಾವನೆಗಳು ಈ ಲೇಖಕರ ಸಾತ್ವಿಕ ಗುಣದ ದ್ಯೋತಕಗಳಾಗಿ ಆಗಿಂದಾಗ್ಗೆ ಮಿಂಚಿನಂತೆ ಪ್ರಕಾಶಿಸಿ, ಬರೆಹಗಾರರನ್ನೂ ಓದುವವರನ್ನೂ ಸನ್ಮಾರ್ಗದತ್ತ ಕರೆದೊಯ್ಯುತ್ತವೆ.

ಕನ್ನಡದ ಹಲವಾರು ಪ್ರಕಾರಗಳಲ್ಲಿ "ವಚನ" ರೀತಿ ಇವರ ಮನಸ್ಸಿಗೆ ಒಪ್ಪಿಗೆಯಾದದ್ದು ಹೇಗೆ ಎಂಬ ಪ್ರಶ್ನೆ ಉಂಟಾಗುವುದು ಸಹಜವೇ ಸರಿ. ಅದಕ್ಕೆ ಅವರೇ ಇತ್ತಿರುವ ಉತ್ತರವಿದು:

ಶಾರದೆಯ ಸೌಮ್ಯತನೂಜೆ ಕನ್ನಡಕೆ
ರಗಳೆ ತಲೆಯ ರಾಗಟೆ;
ತ್ರಿಪದಿ ಹಣೆಯ ತಿಲಕ;
ಚೌಪದಿ ಮೂಗಿನ ನತ್ತು;
ಕಂದ ಕೆನ್ನೆಸರ;
ಷಟ್ಪದಿಗಳವು ಕೊರಳ ಅಡ್ಡಿಕೆ ತಾಳಿ;
ವೃತ್ತಗಳು ವಂಕಿ ನಾಗಮುರಿ;
ಸಾಂಗತ್ಯ ಕೈಕಡಗ, ಕಾಲಿನುಂಗುರ;
ಗದ್ಯ ಸೊಂಟದೊಡ್ಯಾಣ.
ವಚನವೆ! ಬೆರಳಿನುಂಗುರ ನೀನು;
ನಿನ್ನ ಕಾಂತಿಯ ಕಂಡು ಸೈವೆರಗನೈದದ ಕನ್ನಡಿಗನ
ಕಣ್ಣು ದಂಡ.

ಇದು ವಚನದ ಕಾಂತಿಯ ಮಾತಾಯಿತು. ಇನ್ನು ಅದರ ಕ್ರಾಂತಿಯ ಗುಣದ ಕಡೆಗೆ ಲೇಖಕರ ಕಣ್ಣು ಹೊರಳುತ್ತದೆ.

ಕೇವಲ ಎದೆಯುತ್ಸವವಲ್ಲ ನಿನ್ನ ಗುರಿ
ಹೇ ವಚನ!
ಕಡು ಹಿಂದೆ ಹುಟ್ಟಿ
ಜನಪದ ವಿಸ್ತರವ ವಶಪಡಿಸಿಕೊಂಡೆ ನೀನು;
ಧರ್ಮ ವಿಪ್ಲವಕ್ಕೆ ಬಿಚ್ಚಿದ ಸುರಿಗೆಯಾದೆ;
ಶಿವಾಚಾರ ಪ್ರಚಾರಕ್ಕೆ ಸೈಪಿನ ಕೂರಿಗೆಯಾದೆ
....

ಎಂಬುದಾಗಿ ಅದರ ಹಿರಿಮೆಯನ್ನು ಬಾಯಿ ತುಂಬ ಹೊಗಳುವರು. ಅದರ ಸ್ಥಾನದ ನಿರ್ದೇಶನವಾಯಿತು; ಅದರ ಪಾತ್ರದ ಪರಿಶೀಲನೆಯಾಯಿತು. ಇನ್ನು ಅದರ ವಿನ್ಯಾಸದ ವಿಶೇಷವೇನೆಂದರೆ,

ಪ್ರಾಸ ಪ್ರಾಬಲ್ಯದ ಸುಮುಸಮಾನ ಬಂಧನದ
ಅಂದ ಆನಂದ ನಿನ್ನಲ್ಲಿ;
ನಿಯತ ಛಂದಸ್ಸನ್ನು ಪಾರದ ಪದಗತಿಯೆ
ನಿನ್ನಯ ಚೆಂದ.
ಸಂಕ್ಷೇಪ ನಿನ್ನ ನಿಕ್ಷೇಪ;
ಪುನರುಕ್ತಿ ನಿನಗೆ ಮನಸ್ತೃಪ್ತಿ;
ನೇರ ಸಹಜ ರೂಪಕಾಲಂಕಾರದ ಶಕ್ತಿ
ನೀ ಬಹಳವಾಗಿ ಬಳಸಿಕೊಳ್ಳುವ, ಯುಕ್ತಿಯೆನ್ನಲಾಗದ, ಯುಕ್ತಿ.
ತೂಕದ ಅರ್ಥಗಳ ಹೊತ್ತು
ಸರಾಗವಾಗಿ ಸಾಗುವ ಶಬ್ದಗುಚ್ಛ ನಿನ್ನಿಚ್ಛೆ.
ಅಂಥ ಇಂಥ ಕ್ಲಿಷ್ಟತೆಯಿಂದ ಕಷ್ಟಗ್ರಾಹ್ಯವಾದ
ಗ್ರಾಂಥಿಕ ನುಡಿಗಟ್ಟು ನಿನಗೆ ಹೊಲ್ಲ;
ಪರಿಭಾಷೆ ನಿನ್ನಲ್ಲಿ ಇಲ್ಲವೆಂದಲ್ಲ,
ಒಟ್ಟಿನಲಿ ನೀನು ಸ್ಪಷ್ಟ ಸುಲಭ ಮಾತುಗಾರಿಕೆ;
ನಿನ್ನ ಹೆಸರೇ ವಚನ!

ಇದೀಗ ವಚನ ರಚನೆಗೆ ಮಾರುಹೋದ ಮನಸ್ಸಿನ ಮೇಲ್ಮೆ! ವಚನವೈಭವವನ್ನು ಜಗತ್ತಿಗೆ ಸಾರಿ ಹೇಳಿದ ಕನ್ನಡ ನುಡಿಯ ಬಗ್ಗೆ ಲೇಖಕರಿಗಿರುವ ಅಭಿಮಾನ ಹೇಳ ತೀರದ್ದು. ಕಲಿತಿದ್ದು, ಕಲಿಸಿದ್ದು ಇಂಗ್ಲಿಷ್ ಭಾಷೆಯಾದರೂ, ಪಟ್ಟ ಪದವಿಗಳನ್ನು ದೊರಕಿಸಿಕೊಟ್ಟಿದ್ದು ಪರಭಾಷೆಯಾದರೂ, ಲೇಖಕರ ರಕ್ತಗತವಾದದ್ದು ಕನ್ನಡದ ಅಭಿಮಾನ; ಹೃದಯದಲ್ಲಿ ತುಂಬಿತುಳುಕುವುದು ಕನ್ನಡದ ಪ್ರೇಮ.

. . . . ಎನಗೆ ಕನ್ನಡವೆ ಹೊನ್ನು ನುಡಿ,
ಕನ್ನಡವೆ ಮನೆಯ ಮಾಣಿಕ!
ಮುದ್ದು ಕನ್ನಡದಲ್ಲಿ ಕವಿಯ ಕಾಗುಣಿತ
ಹಾಗಿರಲಿ, ಮಗು ತೊದಳಿದರೆ ಸಾಕು,
ಕುತ್ತಿಗೆಯೊತ್ತಿ ಬರುವುದು,
ಕಣ್ಣು ಹರುಷದ ಹಳ್ಳವಾಗುವುದು!
ರಂಗಯ್ಯ, ನಿನ್ನ ಹೆಸರು ಕನ್ನಡ,
ನೀ ಕರ್ನಾಟಕದ ಅಕ್ಕರೆಯ ದೇವರು, ರಂಗ!

ಕನ್ನಡಿಗರಿಗೆ ಕನ್ನಡತನದ ಅರಿವನ್ನು ಉಂಟುಮಾಡುವ ಅಗತ್ಯವನ್ನು ಬಹು ಚೆನ್ನಾಗಿ ಚಿತ್ರಿಸಿರುವರು. ಕನ್ನಡದ ಕಂದನೊಬ್ಬನಿಗೆ ಹುಟ್ಟಿದಂದಿನಿಂದ ವಯಸ್ಕನಾಗುವವರೆಗೆ ಹೇಗೆ ಕನ್ನಡದ ಆಚಾರವನ್ನು ಕಲಿಸಿಕೊಡಬೇಕೆಂಬ ನಿರೂಪಣೆ ಬಹಳ ಸ್ವಾರಸ್ಯವಾಗಿದೆ. ಈ ವಚನಕಾರರ ರತ್ನತ್ರಯಗಳಾವುವು ಬಲ್ಲಿರಾ?

ಕನ್ನಡ ನಾಡು ಮೈಸೂರು ಮಾವಿನಕೆರೆ–ಇವು ಮೂರೆ ನನ್ನ ರತ್ನತ್ರಯ ರಂಗರಾಜ!

ಎನ್ನುವರು. ಇಂಥ ಅಭಿಮಾನ ಹೃದಯವನ್ನು ಮಿಡಿಯದಿದ್ದರೆ ಇಂಥ ನುಡಿಯ ಕೊಡುಗೆ ಹೇಗೆ ದೊರೆತೀತು?

ಕನ್ನಡನಾಡಿನ ವಿಸ್ತಾರದ ಮಾತು ಹಾಗಿರಲಿ; ಲೇಖಕರ ಆಶೋತ್ತರಗಳನ್ನು ಕ್ಷಣಕ್ಷಣಕ್ಕೂ ನಿರೂಪಿಸುವ ಶಕ್ತಿಯಂತಿರುವ ಚಾಮುಂಡಿಬೆಟ್ಟದ ಪ್ರಶಸ್ತಿಯಂತೂ ಈ ಸಂಗ್ರಹದ ಅತ್ಯುತ್ತಮ ಭಾವಗರ್ಭಿತ ರಚನೆಗಳಲ್ಲಿ ಒಂದಾಗಿದೆ ಎನ್ನುವುದರಲ್ಲಿ ಸಂದೇಹವಿಲ್ಲ. "ಚಾಮುಂಡಿಯನು ಸ್ತುತಿಸುವುದು ಪೂರ್ವಾರ್ಜಿತ ಪುಣ್ಯ" ಎಂದು ಒಮ್ಮೆ ಹಿಗ್ಗಿದ ಹೃದಯ, ಮತ್ತೊಮ್ಮೆ ಆ ಸೃಷ್ಟಿವೈಚಿತ್ರ್ಯವನ್ನು ಕಂಡು ನಿರರ್ಗಳವಾಗಿ ನುತಿಸತೊಡಗುವುದು. ಎಂಟು ಪುಟಗಳನ್ನೂ ಮೀರಿ ಸಾಗಿರುವ ಈ ಸ್ತುತಿ ಮಾಲಿಕೆಯ ಕೆಲವು ಪಂಕ್ತಿಗಳನ್ನು ಮಾತ್ರ ಇಲ್ಲಿ ಕೊಡಲಾಗಿದೆ:

ಮೈಸೂರಿನ ಶಾಶ್ವತ ಸೌಭಾಗ್ಯ
ಘನತ್ವವಾಂತು ಪ್ರಕಟವಾಗಿದೆ, ರಂಗ ಸರ್ವೇಶ
ಚಾಮುಂಡಿಯೆಂಬ ಪ್ರತೀತಿಯ ತಾಳಿ

ಎಂದು ಈ ವಚನದ ಆರಂಭ. ಅನಂತರ ಅದರ ಬಾಹ್ಯರೂಪದ ವರ್ಣನೆ; ವಿಭಜನೆ. ಮೈಸೂರಿನಲ್ಲಿ ಆಗ್ನೇಯ ದಿಕ್ಕಿನಲ್ಲಿರುವ ಅದರ ಕಡೆಗೆ ನಮ್ಮನ್ನೇ ಕರೆದೊಯ್ಯುವರು. "ಬರಿ ಬೆಟ್ಟವಲ್ಲಯ್ಯ ಇದು. ಮೈಸೂರಿನ ಶುಚಿಕನಸು ಹೊರಬಂದು ಗಾಳಿಯಲಿ ಮಾಯವಾಗದೆ ವಿಶಾಲ ಸುವ್ಯಕ್ತ ಸ್ವರೂಪವನ್ನ ಗಳಿಸಿಕೊಂಡಿದೆ; ಮೈಸೂರಿನ ಶುದ್ಧ ಸತ್ವ ಸಹಸ್ರಾರು ಶತಮಾನ ಕುದಿದೆದ್ದು ಸಹಸ್ರಾರು ಶತಮಾನ ಆರಿ ಕೆನೆಯಾಗಿ ಕೊನೆಗೆ ಕೈಮುಟ್ಟಿ ಪೂಜಿಸಲು ಅನುವಾದ ಮೂರ್ತಿಯಾಗಿದೆ" ಎನ್ನುವರು. ನಿತ್ಯಸ್ನೇಹಿತನಂತಿರುವ ಬೆಟ್ಟದ ಪ್ರತಿಯೊಂದು ತಗ್ಗು ದಿಣ್ಣೆಗಳನ್ನೂ, ಕಲ್ಲುಮಣ್ಣುಗಳ ಕಣ ಕಣಗಳನ್ನೂ ಹೆಸರಿಟ್ಟು ತೋರಿಸುವರು. ತಾವು ಕಂಡು ಕೇಳಿದ ಇತರ ಯಾವ ಬೆಟ್ಟಗುಡ್ಡಗಳೂ ಈ ಚಾಮುಂಡಿಯನ್ನು ಸರಿಗಟ್ಟಲಾರವು ಎಂಬ ತುಂಬು ನಂಬಿಕೆ ಅವರದು.

ನವ ತೋರ್ಕೆಗಳ ತವರೂರು
ಚಾಮುಂಡಿ, ನವೀನ ಭಾವೋತ್ಕರ್ಷಗಳ
ಪವಿತ್ರ ವರ್ಷ ಚಾಮುಂಡಿ!
ಅರುಣೋದಯದ ನೋಟ ಒಂದು: ನಸುಕಪ್ಪು
ಅವ್ಯಕ್ತತೆಯ ಭೇದಿಸುತ ಸೂಚನೆಯಿಾವ ನೋಟ
ಸೂರ್ಯೋದಯದ ಕಾಣ್ಕೆ ಇನ್ನೊಂದು: ಎಚ್ಚತ್ತು
ಮೈಕೊಡಹುತ್ತ ಕಣ್ಣು ತೆರೆಯುವ ಕಾಣ್ಕೆ.
ಬೆಳಗಿನ ದೃಶ್ಯಕ್ಕೆ ಬೇಗ ಬೇಗ ಲವಲವಿಕೆ
ಹೆಚ್ಚಾಗಿ ಉಲ್ಬಣವಾಗುವ ಚಲಕಾಂತಿ.
ಮಟಮಟ ಮಧ್ಯಾಹ್ನ, ಸ್ಥಿರಬದ್ಧ ಹಠಯೋಗದಲ್ಲಿ
ಆಸನ ಕುಳಿತಿರುವ ಪರಮ ಬಿಗುಮಾನ.
ಅಪರಾಹ್ನದಲ್ಲಿ ಒಂದು ಗುಡ್ಡದ ನೆರಳು
ಮತ್ತೊಂದರಮೇಲೆ ಬಿದ್ದು ತನ್ಮೂಲಕ

ಬೆಳೆಯುವ ಧ್ಯಾನಮಗ್ನತೆಯ ಮೃದುಸೊಬಗು.
ಪಶ್ಚಿಮ ದಿಗಂತದ ಮೇಲೆ ದಿವಾಕರ
ಸೊಗಯಿಸುವಾಗ, ಅತ್ಯುತ್ಕೃಷ್ಟ ಕ್ರಮದಲ್ಲಿ
ದಿವಸ ಸವೆದು ಹೋದದ್ದಕ್ಕೆ
ನಲಿನಲಿವ ಹಸನ್ಮುಖದ ಉಲ್ಲಾಸ
. . . .

ಈ ರೀತಿ ಚಾಮುಂಡಿಬೆಟ್ಟದ ಕ್ಷಣಕ್ಷಣದ ನೋಟವೂ ಲೇಖಕರ ಕಲ್ಪನೆಯನ್ನು ಕೆರಳಿಸುತ್ತದೆ; ಅವರ ಆನಂದ ವಿಕಸಿತವಾಗುತ್ತದೆ. ಈ ಗಿರಿರಾಜ ಮೇಘ ಮುಡಿದರೆ ಒಂದು ಸೊಗಸು; ಮಂಜನ್ನು ಉಟ್ಟರೆ ಒಂದು ಬೆಡಗು; ಬೆಳುದಿಂಗಳಿನಲ್ಲಿ ತೊಳಗಿದರೆ ಒಂದು ವೈಭವ. ಲೇಖಕರಿಗೂ ಬೆಟ್ಟಕ್ಕೂ ಇರುವ ಆತ್ಮೀಯತೆ ಅನಿರ್ವಚನೀಯ. ಪ್ರಾಯದಲ್ಲಿ ಆದರ ಸಾಮೀಪ್ಯ ಅವರಿಗೆ ಸರ್ವದಾ ಆಶ್ರಯ. ಕೆಲವು ವರ್ಷಗಳ ಅಗಲಿಕೆ ಅವರಿಗೆ ಅಸಹನೀಯವಾದ ಯಾತನೆಯನ್ನುಂಟುಮಾಡಿತ್ತು. ಮತ್ತೆ ಅದರೊಂದಿಗೆ ಸಹಜೀವನ ಅವರ ಪಾಲಿಗೆ ಇಹದ ಪರಮಸಾಧನವೇ ಸರಿ. ಈ ರೀತಿಯಾದ ಪ್ರಕೃತಿ ಪ್ರೇಮ, ಸೃಷ್ಟಿಯ ಸಹವಾಸಗಳು ಯಾರಿಗೆ ತಾನೆ ಜೀವನದಲ್ಲಿ ನಲವನ್ನು, ಗೆಲುವನ್ನು, ಬಲವನ್ನು ತಂದೀಯಲಾರದು! ಅಂಥ ಆನಂದವನ್ನು ಒಬ್ಬರೇ ಅನುಭವಿಸಿದರೆ ಪೂರ್ಣವಾದೀತೆ? ಸ್ವಾನುಭವದ ಸವಿಯನ್ನು ಕವಿಹೃದಯ ಇತರರಿಗೂ ನೀಡಿ ತಾನು ದ್ವಿಗುಣವಾಗಿ ಸುಖಿಸುವುದಲ್ಲವೆ? ಈ ಸುಖವೇ ಇಲ್ಲಿ ನಮಗೆ ಸಮಾರಾಧನೆಯ ರೂಪದಲ್ಲಿ ದೊರೆಯುತ್ತದೆ. ವಚನಕಾರರೊಂದಿಗೆ ನಾವೂ ಚಾಮುಂಡಿಯ ಅಡಿಗೋ ಮುಡಿಗೋ ತೆರಳಿ ಅಲ್ಲಿ ಕ್ಷಣಕಾಲ ವಿಹರಿಸಿ ಬರುತ್ತೇವೆ. ಬೇಲೂರಿನ ಶಿಲ್ಪ, ಬೇರೆ ಬೇರೆ ಎಡೆಗಳಲ್ಲಿನ ಬೆಟ್ಟ ಗುಡ್ಡಗಳು, ದೇವಾಲಯಗಳು, ಸೃಷ್ಟಿಯ ಸಹಜ ಚಿತ್ರಗಳು ಮೊದಲಾದುವುಗಳು ವಚನಕಾರರನ್ನು ಇದೇ ರೀತಿ ಕ್ಷಣಕಾಲ ಮುಗ್ಧರನ್ನಾಗಿ ಮಾಡಿ, ಮತ್ತೆ ಅವರ ಆ ದಿವ್ಯಾನುಭವ ವಚನವಾಗಿ ಹೊರ ಹೊಮ್ಮಿರುವುದುಂಟು.

ಲೇಖಕರು ಜೀವನದ ಸುಖ ದುಃಖಗಳೆರಡನ್ನೂ ಚೆನ್ನಾಗಿ ತೂಗಿ ನೋಡ ಬಲ್ಲರು. ಜೀವನವೆಂದರೇನು?

ಮಾನವನ
ಮೊಟ್ಟಮೊದಲಣ ಉಸುರಿಗೂ ಕಟ್ಟಕಡೆ
ಉಸುರಿಗೂ ಮಧ್ಯೆ
ಬೀಸಿ ಹಾಸಿಕೊಂಡಿದೆ. ರಂಗಯ್ಯ
ಅತಿ ಮುಖ್ಯವಿಚಾರ—
ಜೀವನ!

ಜನನ ಮರಣಗಳ ಗಡಿಗಳುಳ್ಳ ಈ ಜೀವನದ ಮತ್ತೊಂದು ವಿಶೇಷವೆಂದರೆ,

ಜನನಕ್ಕೆ ಒಂದೆ ಮಾರ್ಗ, ಮರಣಕ್ಕೆ ಹತ್ತೆಂಟು;
ಇದರ ಗೂಢಾರ್ಥವೇನು, ಶಾಶ್ವತ ರಂಗ?
ಬಾಳುವುದು ದೊಡ್ಡ ಹೊಣೆಗಾರಿಕೆ, ಸಾಯುವುದು ಅತಿ ಸುಲಭ.

ಕಷ್ಟತಪ್ಪಿದ್ದಲ್ಲ; ಬಂದಾಗ ಮಾಡಬೇಕಾದದ್ದೇನು?

ಕಷ್ಟ ನಮ್ಮಲ್ಲಿಗೆ ಬಂದಲ್ಲಿ ನಷ್ಟವಿಲ್ಲ;
ಓ, ರಂಗ ಎದುರಿಸಿ ಗೆಲ್ಲುವ ಧೈರ್ಯ ಹೋದಲ್ಲಿ ನಷ್ಟ.

ಬದುಕಿನ ಬಳ್ಳಿಗೆ ನೀರೆರೆವ ಬಳಗವನ್ನು ಹೇಗೆ ಗುರುತಿಸಿ ತೋರಿಸುತ್ತಾರೆ ನೋಡಿ:

ಪತಿಪರಾಯಣೆಯ ಕೋಮಲ ಕರದ
ಶುಶ್ರೂಷೆ ಚೆಂದ; ಸುಶೀಲ ಪುತ್ರನ
ಶ್ರದ್ಧಾಸಕ್ತ ಸೇವೆ ಚೆಂದ; ಒಳ್ಳೆಯಾಳಿನ
ಉತ್ಸಾಹದೊಳಿಗ ಚೆಂದ, ರಂಗಯ್ಯ.
ಹೆಂಡತಿ ಮಗ ಭೃತ್ಯ ಮೂರ್ವರೊಂದಾಗಿ
ಮೂಡಿ ಬಂದಾಗ ಎದ್ದು ಬರುವ ಸ್ನೇಹಿತನ
ಪ್ರೀತಿ ಎಷ್ಟು ಚೆಂದವೊ ಬಣ್ಣಿಸಲಾರೆ!

ಸ್ನೇಹಿತನ ಪಾತ್ರ ಎಲ್ಲರಿಗೂ ಮಿಗಿಲು. ಮಿತ್ರನೊಬ್ಬನ ಮರಣವನ್ನು ಕಣ್ಣಾರೆ ಕಂಡ ಲೇಖಕರು, ಆತನ ಹೆಂಡತಿಯ ಪಾಡಿಗಾಗಿ ಪರಿತಪಿಸಿ, ಅಗ್ನಿಜ್ವಾಲೆಯಲ್ಲಿ ಬೆಂದುಹೋಗುತ್ತಿರುವ ಕಳೇಬರವನ್ನು ಕಂಡು ತಲ್ಲಣಿಸಿ, ಕಡೆಗೆ ತಮ್ಮ ಕಲ್ಲೆದೆಗೆ ನಾಚಿ, "ಮತ್ತಾವುದನ್ನು ಕಂಡು ಅಂಜೀತು ನನ್ನ ಹೃದಯ, ದೇವರದೇವ ರಂಗಶೂಲಿ" ಎಂದು ತಮ್ಮನ್ನೇ ತಾವು ಪ್ರಶ್ನಿಸಿಕೊಳ್ಳುತ್ತಾರೆ; ನಿಂದಿಸಿಕೊಳ್ಳುತ್ತಾರೆ.

ಸಂಸಾರದ ಹಿತ ಮಿತಗಳನ್ನು ಬಹಳ ಚೆನ್ನಾಗಿ ಹೇಳಿರುತ್ತಾರೆ.

ಸಂಸಾರಶಾಸನವ ವಿಧಿಸಲಿ ಗಂಡ
ಹೆಂಡತಿಯು ತಿದ್ದುಪಡಿಯೊಡನೆ;
ಗೃಹಕೃತ್ಯದೇರ್ಪಾಟ ಕೈಕೊಳಲಿ ಹೆಂಡತಿ,
ಗಂಡನ ಸಲಹೆ ಅಂಗೀಕರಿಸಿ:
ಆ ಮನೆಯಲ್ಲಿ ಸದಾ ಹುಣ್ಣಿಮೆ, ರಂಗಯ್ಯ!

ಅನುರೂಪದ ದಾಂಪತ್ಯ ಬೆಳುದಿಂಗಳಿನಂತಿದ್ದರೆ ಪ್ರತಿಕೂಲದಾಂಪತ್ಯ ಮುಳ್ಳಿನ ಮರವೇರಿದಂತೆ! ಅದರ ಸ್ವರೂಪವನ್ನೂ ಲೇಖಕರು ತೋರಿಸಿಕೊಟ್ಟಿದ್ದಾರೆ.

ಗಂಡ ಹೆಂಡತಿಗೆ:
ಜಾತಿ ಹಯವೆಂದು ಭಾವಿಸಿ ಮನೆಗೆ ತಂದೆ:
ನೀನೊಂದು ಹೇಸರಕತ್ತೆ!

ಹೆಂಡತಿ ಗಂಡನಿಗೆ: ....
ನರಮನುಷ್ಯನೆಂದು ನಂಬಿ ನಾ ಕೈ ಹಿಡಿದೆ:
ನೀನೊಂದು ಭೇತಾಳ!
ಇದೊಂದು ಬಗೆ ಸ್ತ್ರೀಪುರುಷ ಸಂಬಂಧ, ರಂಗಯ್ಯ,

ಮನೆಯು ಬೆಳಗಾಗಬೇಕಾದರೆ ಪಂಚಪ್ರಭೆ ಕೂಡಿರಬೇಕು.

ಐದು ಬೆಳಕುಗಳು ಕೂಡಿ ಹೊಳೆಯಬೇಕು
ಮನೆ ಮನೆಯೆನ್ನಿಸಿಕೊಳ್ಳುವುದಕ್ಕೆ, ರಂಗಧಾಮ.
ದೇವರ ಮುಂದಿಟ್ಟಿರುವ ಮಂಗಳ ಹಣತೆ;
ಯಜಮಾನ ದಕ್ಷತೆಯ ಭದ್ರ ಪ್ರಭೆ;
ಯಜಮಾನಿಯ ಹುಸಿನಗುವಿನ ಶುಭ್ರಜ್ಯೋತಿ;
ಮುದ್ದು ಮಕ್ಕಳ ಆಟ ಪಾಠದ ಉಲ್ಲಾಸ ಪ್ರಕಾಶ;
ಅತಿಥಿ ಸಂತೃಪ್ತಿಯ ನಿರ್ಮಲ ಬೆಳ್ದಿಂಗಳು.
ಪಂಚದೀಪ ಇವು: ಯಾವೊಂದರ ಬೆಳಕು
ಮುಸುಕಾದರೂ ಮನೆ ಅಷ್ಟು ಮಟ್ಟಿಗೆ ಊನ.

ಕಾವ್ಯದ ಸ್ವರೂಪ, ಕವಿ–ವಿಮರ್ಶಕರ ಸಂಬಂಧ, ಶೈಲಿಯ ವಿವಿಧ ವಿನ್ಯಾಸಗಳನ್ನು ಕುರಿತು ಸಿದ್ಧಸಾಹಿತಿಗಳಾದ ವಚನಕಾರರು ಅನೇಕ ಅಭಿಪ್ರಾಯಗಳನ್ನು ಸೂಚಿಸಿರುತ್ತಾರೆ. ಎಷ್ಟೋ ಸಂದರ್ಭಗಳಲ್ಲಿ ತಮ್ಮ ವಚನರಚನೆಯನ್ನೇ ವಿಮರ್ಶೆಯ ಒರೆಗಲ್ಲಿಗಿಟ್ಟು ಪರೀಕ್ಷಿಸಿ ನೋಡಿರುತ್ತಾರೆ.

ಬಾನಿಗೇರಿ ಗಾನಗೈಯಲಿ ಕಾವ್ಯ
ಭಾರದ್ವಾಜ, ತಪ್ಪಲ್ಲ; ಅದರ ಪಾದದ ಮೇಲೆ
ಭೂಮಿಯ ಧೂಳು ಅಂಟಿರಬೇಕು, ಅಷ್ಟೆ.
ಬಲು ಎತ್ತರ ಬೆಳೆದು ಹಣ್ಣುಗೊನೆ ಹೊತ್ತು
ಮೆರೆಯಲಿ ಕಾವ್ಯ ನಾರಿಕೇಳ, ತಪ್ಪಲ್ಲ;
ನೆಲದ ಆಳದೊಳಕ್ಕಿಳಿದು ಒತ್ತಾಗಿ
ಸುತ್ತಿಕೊಂಡಿರಬೇಕು ಅದರ ಬೇರು, ಅಷ್ಟೆ.
ನಿತ್ಯಜೀವನಕ್ಕೆ ಸಂಬಂಧಪಡದ ಸಾಹಿತ್ಯವೇನು,
ಯಾವುದೊ ಕಾಕು ಪಾಕನ್ನ ಗೀಚಿಬಿಟ್ಟು
ಆಚೆಗೆ ತೂರಿಬಿಟ್ಟ ಚೂರು ಕಾಗದವೇನು, ರಂಗದೇವ?

ಈ ದೃಷ್ಟಿಯಲ್ಲಿ ಸಾಹಿತ್ಯದ ಆಳ ಮತ್ತು ಎತ್ತರಗಳು ಹೇಗೆ ಪರಸ್ಪರ ಪೂರಕವಾಗಿರಬೇಕೆಂಬ ತತ್ವ ವಿದಿತವಾಗುತ್ತದೆ. ಜೀವನ ತಳಹದಿಯಾದರೆ, ಅದರ ಉದಾತ್ತತೆಯೇ ಮೇಲಿನ ತುದಿ. ಈ ಎರಡನ್ನೂ ಏಕಕಾಲದಲ್ಲಿ ಸಾಧಿಸಿ ತೋರಿಸುವ ನಿಸ್ಸೀಮ ಒಳ್ಳೆಯ ಸಾಹಿತಿ. ಕವಿ–ವಿಮರ್ಶಕರು ದಾಯಾದಿಗಳಲ್ಲ. ಅವರು ಒಬ್ಬರನ್ನೊಬ್ಬರು ಅರಿತು ಬಾಳಿದರೆ ಸಾರಸ್ವತ ಸಾಮ್ರಾಜ್ಯ ಸುಖಶಾಂತಿಗಳ ಬೀಡಾದೀತು.

....
ಕವಿ ವಿಮರ್ಶಕರ ವ್ಯತ್ಯಾಸ ನಿಜವಾಗಿ
ಅತ್ಯಲ್ಪ. ಇಬ್ಬರಿಗು ಜೀವನವ ಅರಯ್ಯುವುದೆ
ಮುಖ್ಯ ಕೆಲಸ: ಒಬ್ಬನದು ಪ್ರತ್ಯಕ್ಷ ಪ್ರಕಟನೆ,
ಇನೊಬ್ಬನದು ಪರೋಕ್ಷ. ಇಬ್ಬರ ಲೇಖನವು
ಸತ್ಯಾರ್ಥದಲ್ಲಿ ಒಟ್ಟಿನಲ್ಲಿ ಸಾಹಿತ್ಯ.
ಅವರಿಬ್ಬರ ಧೀರ ಸುಂದರ ಕೆಳೆತನ
ಬೆಳೆಯಲಯ್ಯ; ತನ್ಮೂಲಕ ಈ ಯುಗದ
ಯಾಂತ್ರಿಕ ಜಗದ ನಿಸ್ಸಾರತ್ವ ಅಂದಗೇಡು ಬೇಸರ
ನಶಿಸಲಯ್ಯ; ಕವಿಗೆ ವಿಮರ್ಶಕ ವಿಮರ್ಶಕಗೆ
ಕವಿಯೆನಿಪ ದೇವರದೇವ ರಂಗಯ್ಯ.

ಕಾವ್ಯರಚನೆಯಲ್ಲಿ ಪ್ರತಿಭೆ ಪಾಂಡಿತ್ಯಗಳ ಪಾತ್ರವೇನು, ಸೌಂದರ್ಯದ ಸ್ವರೂಪವೆಂತಹುದು, ಬರವಣಿಗೆಯನ್ನು ಮತ್ತೆ ಮತ್ತೆ ತಿದ್ದಿ ಬರೆಯುವ ಅಗತ್ಯವೆಂತಹುದು, ಬರೆದದ್ದೆಲ್ಲ ಸಾಹಿತ್ಯವೆನ್ನಿಸೀತೆ, ಇವೇ ಮೊದಲಾದ ಹಲವಾರು ಪ್ರಶ್ನೆಗಳಿಗೆ ಲೇಖಕರು ಉತ್ತರವಿತ್ತಿದ್ದಾರೆ. ಅವುಗಳ ಸಮಗ್ರ ಸಮೀಕ್ಷೆ ಸಾಹಿತ್ಯದ ಹಿರಿಮೆಯನ್ನು ಪರಿಚಯಮಾಡಿಕೊಡಬಲ್ಲುದು. ಸೌಂದರ್ಯವನ್ನು ಕುರಿತ ಈ ಮುಂದಿನ ಮಾತು ಸ್ವಲ್ಪ ಸೋಜಿಗವೆನ್ನಿಸಬಹುದು:

> "ಸೌಂದರ್ಯ"ವೆಂಬುದು ಯಾವೊಂದು ಅಗಸದಲ್ಲು ಇಲ್ಲದ ಅವಿಗೋಪುರ. "ಸೌಂದರ್ಯ"ವೆ ಸತ್ಯವೆಂದು ತಿಳಿಯುವರು, ಕವಿದ ಭ್ರಾಂತಿಯ ಆಳದ ಬಿಲಕ್ಕೆ ಇಳಿಯುವರು, ನಿರ್ವೀರ್ಯ ಹೆಣ್ಣು ಲೇಖಕರು. ಇರುವುದು ಒಂದೆ: ಸತ್ಯ. ಸತ್ಯವೇ ಸಮಸ್ತವೆಂದು ಸಾರುವರು, ಸಾಫಲ್ಯತೆಯ ಮೇಲ್ಮಂಟಪಕ್ಕೆ ಏರುವರು, ವೀರವರ ಗಂಡು ಕವಿಗಳು. ಸತ್ಯನಿಧಿ ರಂಗನಾಥ.

ಈ ಅಭಿಪ್ರಾಯದ ಅಂತರ್ಯವನ್ನು ಪುನಃ ಪುನಃ ಪರಿಶೀಲಿಸಬೇಕಾಗುತ್ತದೆ. ಸತ್ಯ ಮತ್ತು ಸೌಂದರ್ಯಗಳು ಬೇರೆ ಬೇರೆಯೆ, ಇಲ್ಲವೇ ಒಂದೇ ವಸ್ತುವಿನ ಅವಳಿ ಗುಣಗಳೆ ಎನ್ನುವ ತರ್ಕ ವಿಚಾರಪ್ರಚೋದಕವಾದುದೇ ಸರಿ. ತಿದ್ದಿ ಬರೆಯುವುದರ ಬಗ್ಗೆ ವಚನಕಾರರು ತಮ್ಮ ಖಚಿತವಾದ ತೀರ್ಪನ್ನೇ ಇತ್ತಿದ್ದಾರೆ ಎನ್ನಬಹುದು.

ಅರವತ್ತು ಬಾರಿ ಅಳಿಸಿ ಬರೆಯೊ ಕವಿಯೆ!
ಓದುಗನ ಇನ್ನೊಮ್ಮೆ ಆಕರ್ಷಿಸಲಿಚ್ಛಿಸುವ ಕವಿಯೆ,
ಅರವತ್ತು ಬಾರಿ ಅಳಿಸಿ ಬರೆಯೊ!
'ಹಲಗೆ ಬಳಪವ ಪಿಡಿಯದೊಂದಗ್ಗಳಿಕೆ!' ಎಂದನಲ್ಲವೆ
ಆತುರದ ನಾರಣಪ್ಪ, ಸ್ವೇಚ್ಛೆಯ ಕುಮಾರವ್ಯಾಸ?
ಹಿಡಿದಿದ್ದರೆ ವೆಗ್ಗಳವಾಗುತ್ತಿತ್ತು ಅವನಗ್ಗಳಿಕೆ;
ಬಹುಶಃ ಮನಸ್ಸಿನಲ್ಲಿ ಹಿಡಿದಿದ್ದ, ಬಾಯಿನಲ್ಲಿ ಬಡಾಯಿ.
ಭಾಸ ಕಾಳಿದಾಸರ ಪ್ರಥಮ ಪಾಠಗಳು,

ಪಂಪ ರನ್ನರ ಆರಂಭದೋಲೆಗಳು,
'ಶ್ರೀ' ಮುದ್ದಣರ ಅಶುದ್ಧ ಹಾಳೆಗಳು–
ನಮಗೆ ಉಪಲಬ್ಧವಾಗಿಲ್ಲ.
ಆಗಿದ್ದರೆ ದಕ್ಕುತ್ತಿತ್ತು ಕಾವ್ಯಕಾರಖಾನೆಯ ಮಸಿಯ ರಹಸ್ಯ.
ಕವಿಯ ನಿರ್ಮಾಣ ಎಂದೂ ಮುಗಿಯದ ಗಾಣ;
ನೂರೊಂದು ಪೆಟ್ಟುಗಳಿಂದ ಒಂದು ಪುಟ್ಟ ಪ್ರತಿಮೆ.

....

....

ಈ ಅಭಿಪ್ರಾಯದ ಹಿಂದೆ ಹುದುಗಿರುವ ಸಹನೆಯ ಗುಣ, ವಿಮರ್ಶೆಯ ಅಗತ್ಯಗಳು ಒಪ್ಪತಕ್ಕದ್ದು. ಅನುಷ್ಠಾನ ಎಷ್ಟರಮಟ್ಟಿಗೆ ಎಲ್ಲರಿಂದಲೂ ಸಾಧ್ಯವೆನ್ನುವುದು ಸಂದೇಹವೇ ಸರಿ. ಮೊದಲ ಆವೇಶಕ್ಕೂ ಆ ತರುವಾಯ ಲೇಖಕನಲ್ಲಿ ನಡೆವ ವಿಚಾರ–ವಿಮರ್ಶೆಗಳಿಗೂ ಇರುವ ಅಂತರವನ್ನು ಈ ದೃಷ್ಟಿ ಸಮರ್ಥಿಸುತ್ತದೆ.

ಕಾವ್ಯರಚನೆಗಾಗಿ ಹಾತೊರೆಯುವವರಲ್ಲಿ ಹಲವಾರು ತೆರನುಂಟು. ಒಬ್ಬೊಬ್ಬರ ಪ್ರೇರಣೆ ಒಂದೊಂದು ಒತ್ತಾಯದಿಂದ ಉಂಟಾಗಬಹುದು. ಈ ಚಿತ್ತ ವ್ಯಾಕುಲವನ್ನು ಲೇಖಕರು ಬಹಳ ಅರ್ಥಗರ್ಭಿತವಾಗಿ ಹೇಳಿರುತ್ತಾರೆ.

> ಹೆಚ್ಚಿ ಹರಡಿದೆ ಲೋಕದ ಸುತ್ತ ಬಗೆಬಗೆಯ 'ಕೋಶ'ದಿಂದಾದ ಲೇಖನ ಸರವಿ! ಹಿಂದೆ ಬಹುವಾಗಿ ಬೆಳೆಯುತ್ತಿದ್ದಿತು ಅಮರಕೋಶದ ಬರವಣಿಗೆ: ಇನ್ನು ಅದು ಬುಡಸಹಿತ ನಿರ್ಮೂಲವಾಗಿಲ್ಲ. ಈಗ ಸಾರಸ್ವತಾಕಾಶದಲ್ಲಿ ಸ್ವಚ್ಛಂದವಾಗಿ ಹಾರಾಡುತ್ತಿಹುದು ಶ್ವಾಸಕೋಶ ಹೊರಕ್ಕೂದಿದ ಅವಿಕವಿತೆ. ಅದಕ್ಕೆ ಇದಿರಾಳೊ ಎಂಬಂತೆ ಪರಿದಾಡುತ್ತಿಹುದು ಲಾಲಾಕೋಶದಿಂದ ಬಸಿದು ಬಂದಿರುವ ನೊರೆಗವಿತೆ. ಮತ್ತೊಂದು "ನಾನಿಲ್ಲಿರುವೆ" ಎಂದು ಘೂಗುಟ್ಟುತ್ತಿದೆ: ಅದೆ ಸ್ವಪ್ನಕೋಶದ ಜೇಡಬಲೆ ಸಾಹಿತ್ಯ. ಪಿತ್ಥಕೋಶ ಕಾರುತಿದೆ ಕೆಲ ಪುಸ್ತಕವ. ನರಕದಗಲ ಒಂದು ವಾಙ್ಮಯ ಸೋರುತಿದೆ ಕಾಮಕೋಶದ ದ್ವಾರ. ಸಹಸ್ರಾರು ಕಾಗದ ಕಟ್ಟುಗಳು ಪ್ರಕಟವಾಗುವುವು ಅನ್ನಕೋಶದ ಅಪ್ಪಣೆಯ ಮೇರೆ. ಹುರುಡು ಹೊಟ್ಟೆಕಿಚ್ಚು ಅಜ್ಞಾನ ಜಂಭ ಕೋಪ ಬೇಸರ ನೀಚಸೇವೆ ದುರ್ಬಯಕೆ ದುರಭಿಮಾನ ದಾಸ್ಯ ಯಾವುದೋ ಒಂದರ ಜನ್ಮಕೋಶವನ್ನ ಆನಂದಮಯ ಕೋಶವೆಂದೇ ಬಗೆದು, ಮಾತಿನ ಮರಳು ಮನೆಯನ್ನು ರಚಿಸುವುದು ಸಾಮಾನ್ಯ ವರ್ತನೆಯಾಗಿಬಿಟ್ಟಿದೆ ಲೇಖಕ ಪ್ರಪಂಚದಲ್ಲಿ.
> ಬುದ್ಧಿ ಭಾವಗಳ ವಿವಾಹವಿಲ್ಲದೆ ವೃದ್ಧಿಯಾಗುವುದು ಸದ್ವಂಶ ಸಾಹಿತ್ಯವೇನಯ್ಯ?.

. . . .

ಈ ರೀತಿ ನಮ್ಮ ಆಧುನಿಕ ಸಾಹಿತ್ಯದ ನಿರ್ಮಾಣವನ್ನು ಬಹು ಯಥಾವತ್ತಾಗಿ ಚಿತ್ರಿಸಿರುತ್ತಾರೆ. ಒಳ್ಳೆಯ ವಸ್ತು, ಅಭಿರುಚಿ, ನಿರೂಪಣೆ, ಪ್ರಾಮಾಣಿಕತೆ, ಶ್ರದ್ಧೆ, ಪರಿಶ್ರಮ ಮೊದಲಾದವುಗಳನ್ನು ಮೆಚ್ಚಿಕೊಂಡ ಮನಸ್ಸಿಗೆ ಇಂದಿನ ಅಪಕ್ವವಾದ ರಚನೆಗಳಲ್ಲಿ ಈ ಲೋಪದೋಷಗಳು ಕಂಡುಬರುವುದು ಸ್ವಾಭಾವಿಕವೇ ಸರಿ. ಶಬ್ದಚಮತ್ಕಾರ, ನೀರಸವಾದ ಅಲಂಕಾರ ಪ್ರಯೋಗಗಳನ್ನೂ ಅದೇ ಸರಣಿಯಲ್ಲಿ

ಲೇಖಕರು ಅಲ್ಲಗಳೆದಿರುತ್ತಾರೆ. ಒಂದು ವಚನ (ವ. ೧೦೩) ಪೂರ್ತಿಯಾಗಿ ವಕಾರದ ಅನುಪ್ರಾಸವನ್ನೇ ಪೋಣಿಸಿ ಅದನ್ನು 'ವಚನಾಭಾಸವಿದು ವಧ್ಯ, ವನಮಾಲಿರಂಗ!' ಎಂದು ಆಕ್ಷೇಪಿಸುತ್ತಾರೆ. ಇಂತೆಯೇ ಇನ್ನೊಂದು ವಚನದಲ್ಲಿ (ವ. ೧೦೬) ಚಕಾರದ ಅನುಪ್ರಾಸವನ್ನಿಟ್ಟು "ಚರ್ವಿತ ಚಕಾರವನು ಚಣ ಸಹಿಸು, ಚಕ್ರಧರ ರಂಗ!" ಎಂದು ಆ ಚಮತ್ಕಾರವನ್ನೂ ಟೀಕಿಸಿದ್ದಾರೆ.

ಈ ವಚನಮಂಜರಿಯಲ್ಲಿ ಲೇಖಕರ ವಿಚಾರದ ವಿಲಾಸ ಮನಸೆಳೆಯು ವಂತೆಯೇ ಅವರ ಆತ್ಮಶೋಧನೆಯ ಗುಣವನ್ನು ಕಂಡಾಗಲೆಲ್ಲ ಕವಿಯ ಹೃದಯದ ಸ್ವಭಾವಕ್ಕೆ ತಲೆದೂಗುವಂತಾಗುತ್ತದೆ. ಲೇಖಕರು ತಮಗೆ ವಯಸ್ಸಾದಂತೆಲ್ಲ ತಮ್ಮ ಜನ್ಮದ ಸಾರ್ಥಕ್ಯವನ್ನು ಕುರಿತು ಪ್ರಶ್ನಿಸಿಕೊಳ್ಳುವುದು ಪ್ರತಿಯೊಬ್ಬರಿಗೂ ತಮ್ಮನ್ನೇ ತಾವು ಪ್ರಶ್ನಿಸಿಕೊಳ್ಳುವಂತಾಗುತ್ತದೆ. ಇಪ್ಪತ್ತೊಂಬತ್ತು ವರ್ಷ ತುಂಬಿದಾಗ ತಾವು ಸಾಧಿಸಿದ್ದೇನು ಎಂದು ಮೂದಲಿಸಿಕೊಂಡು ಕಡೆಗೆ ನಿತ್ಯ ತಮ್ಮ ಪಾಲಿನ ಕರ್ತವ್ಯವನ್ನು ಋಜುವಾಗಿ ಶ್ರದ್ಧೆಯಿಂದ ಪಾಲಿಸಿದರೆ ಸಾಕು ಎಂದು ಸಮಾಧಾನಮಾಡಿಕೊಳ್ಳುವರು. ಮತ್ತೆ ಮೂವತ್ತುನಾಲ್ಕರ ಮೆಟ್ಟಿಲನ್ನು ತುಳಿದ ತರುವಾಯ ಇದೇ ರೀತಿಯಾದ ಪ್ರಶ್ನೆ, "ಯಾವುದು ನಿನ್ನ ವರದಿ?" ಎಂದು ಕೇಳುವುದು. ಅದಕ್ಕೆ ವಚನಕಾರರು ಕೊಟ್ಟ ಉತ್ತರ:

. . . .
. . . .
ಮೂವತ್ತುಮೂರು ವಯಸ್ಸು ತುಂಬಿತು, ದಿಟ:
ಆದರೆನಗೇತಕ್ಕೆ ದೊಡ್ಡ ಕುದುರೆಯ ಚೇಷ್ಟೆ?
ಅಂಗೈಯ ಅಂಗೈಮೇಲಿಟ್ಟು ಬಿನ್ನವಿಸುವೆನು:
ಉನ್ನತ ಗುಣವ ಪ್ರಕಟಿಸದಿದ್ದರೂ
ಕಣ್ಣು ಕುಕ್ಕುವ ಕೆಡುಕನೆಸಗಿಲ್ಲ ನಾನು.
ಕರ್ತವ್ಯಗಳ ಪರಿಪಾಲಿಸಿರುವೆ ಆಲಸ್ಯಕ್ಕೆ
ಹೆಚ್ಚಾಗಿ ಆಸ್ಪದ ಕೊಡದೆ.
ಸುಮ್ಮನೆ ವಿಖ್ಯಾತಿಗೋಸ್ಕರ ಖತಿಯಗೊಂಡರೆ
ಆವ ಸುಖ?
ಅದು ನನ್ನ ಜಾಯಮಾನವೆ,
ನನ್ನ ಅಧ್ಯಾಪಕ ವೃತ್ತಿಗೆ ಅದು ಸಮಂಜಸವೆ?
. . . .

ಈ ಆತ್ಮಜಿಜ್ಞಾಸೆ ಎಚ್ಚತ್ತಿರುವ ಚೇತನದ ಒಂದು ಕುರುಹಲ್ಲವೆ? ಇದೇ ಬಗೆಯಾದ ಆತ್ಮವಿಮರ್ಶೆ ವಚನಕಾರರ ಮೂವತ್ತೆಂಟು, ನಲ್ವತ್ತೈದು ಮತ್ತು ಐವತ್ತಾರ ನೆಯ ವಯಸ್ಸುಗಳಲ್ಲಿ ನಡೆದು, ಕಡೆಗೆ ಅರುವತ್ತನ್ನು ಎದುರುಗೊಂಡಾಗ ಅದರ ಆಧಿಕ್ಯವೇನು ಎಂದು ಜಿಜ್ಞಾಸೆ ನಡೆಸುವರು. ಅರುವತ್ತು ವರ್ಷಕ್ಕೆ ನಮ್ಮಲ್ಲಿ

'ಶಾಂತಿ' ಮಾಡುವುದು ಒಂದು ಸಂಪ್ರದಾಯವಷ್ಟೆ. ಅದಕ್ಕೆ ಒಂದು ಹೊಸ ವ್ಯಾಖ್ಯಾನವನ್ನು ಮಾಡುವರು.

ಅರುವತ್ತರ ಅಧಿಕ್ಯವೇನು ?
ದುರ್ಬುದ್ಧಿ ಭಾವೋದ್ರೇಕ ಚಿತ್ತಚಾಪಲ್ಯಗಳನ್ನು
ಆತ್ಮಬಲದಿಂದ ನಿಗ್ರಹಿಸಿ
ಮನಸ್ಸಿಗೆ 'ಶಾಂತಿ' ತಂದುಕೊಳ್ಳುವುದು ಅಗತ್ಯ,
ಅತ್ಯಗತ್ಯ ವರ್ಷವರ್ಷಕ್ಕು, ತಿಂಗಳು ತಿಂಗಳಿಗು,
ಪಕ್ಷಪಕ್ಷಕ್ಕು, ದಿನದಿನವು !

ಈ ಆದರ್ಶ ಪ್ರಶಂಸನೀಯ ಮತ್ತು ಅನುಷ್ಠಾನಯೋಗ್ಯವಾದದ್ದು.

ನಿಂತ ನಿಲುವಿನಲ್ಲಿ, ಕುಳಿತ ಕಡೆಯಲ್ಲಿ ವಚನನಿರ್ಮಾಣದ ಕಡೆಗೆ ಸುತ್ತಿ ಸುಳಿಯುವ ಚಿತ್ತಕ್ಕೆ ಪ್ರಪಂಚದ ಪ್ರತಿಯೊಂದು ಸಂಗತಿಯೂ ಸಂದರ್ಭವೂ, ಪ್ರಶಸ್ತವಾದದ್ದು. ಆದ್ದರಿಂದ ಈ ವಚನಭಾಂಡಾರದಲ್ಲಿ ಕಂಡುಬರುವ ಜೀವನ ಬಹು ವಿಸ್ತಾರವಾದದ್ದು. ನಿಮಿಷ ನಿಮಿಷದ ಆಗುಹೋಗುಗಳಲ್ಲಿ ವಚನಕಾರರ ಹೃದಯವನ್ನು ಹಿಂಡುವ ಪ್ರಕರಣಗಳೆಷ್ಟೋ ಹೇಳತೀರವು; ಅವರ ಮನಸ್ಸನ್ನು ಪ್ರಫುಲ್ಲಗೊಳಿಸಿ ಸಂತೋಷದ ಸವಿಯನ್ನು ನೀಡಬಲ್ಲವು ಎಷ್ಟೋ ಊಹಿಸಲಾಗುವುದಿಲ್ಲ. ಕಟು ಸತ್ಯವನ್ನು ಕಂಡಾಗ ಅವರ ಕಣ್ಣು ಹೇಗೆ ಹನಿಗೂಡುತ್ತದೆ ಎನ್ನುವುದಕ್ಕೆ ಇಲ್ಲಿ ನಿರೂಪಿತವಾಗಿರುವ ವಿಧವೆಯ ಬಾಳಿನ ದಾರುಣ ನಿರೂಪಣೆ ಒಂದು ಉದಾಹರಣೆ.

ಬಯಲಾದ ಮಂಡೆ ಶಿರವಲ್ಲವೇನು ?
ಬೊಟ್ಟಿಲ್ಲದಾ ಹಣೆ ಹಣೆಯಲ್ಲವೇನು ?
ಕೆಂಪು ಬಣ್ಣದೊಳೊಂದಲ್ಲವೇನು ?
ಅವು ಮೂರು ಕೂಡಿದರೆ ಎಂತಾದುದಯ್ಯ ಅಮಂಗಳ ?
ನಿನ್ನ ನೇಮವಲ್ಲ ಅದು, ಮಾವಿನಕೆರೆಯವನೆ:
ಅದು ನಮ್ಮ ಮೂರ್ಖಪ್ರಪಂಚದ ಭ್ರಾಂತಿ,
ಕ್ರೂರ ಕಟ್ಟಳೆಯ ಕುರುಹು
× × × × ×
....
....
ವಿಧವೆಗಿರುವುದು ಅಭಯ ಚಾಮುಂಡಿಯದು.
ಅವಳು ಮುನಿದರೆ ಮುಗಿಯಿತೆಮ್ಮಾಟ.
ಶ್ರದ್ಧೆಯಿಂದ ಪೊರೆದು ಒಲಿಸಿಕೊಳ್ಳುವ ಬುದ್ಧಿ ಬದ್ಧವಾಗಿರಲಯ್ಯ
ನಮ್ಮಲ್ಲಿ ರಂಗ ನಿನ್ನ ಕೃಪೆಯಿಂದ.

ಮೇಲಿಂದ ಮೇಲೆ ಈ ತೆರನಾಗಿ ಮನೆತಪ್ಪಿದ ಹೆಣ್ಣುಮಗಳ ಬಗ್ಗೆ ವಚನಕಾರರು

ವ್ಯಕ್ತಪಡಿಸಿರುವ ಈ ಸಹಾನುಭೂತಿ ನಮ್ಮ ಸಮಾಜಕ್ಕೇ ಒಂದು ಎಚ್ಚರಿಕೆಯನ್ನಿತ್ತಂತಿದೆ.

ಮನೆಯ ಮೂಲೆಯಲ್ಲಿ ಮುದುಡಿ ಕುಳಿತುಕೊಂಡರೆ ಲೋಕಾನುಭವ ದೊರೆಯುವುದಿಲ್ಲ. ಊರೂರುಗಳನ್ನು ಸುತ್ತಿ, ನೂರಾರು ಜನರ ನಡುವೆ ಓಡಾಡಿ, ಸರ್ವದಾ ಜಾಗೃತವಾಗಿರುವ ಪ್ರಜ್ಞೆಗೆ ಮಾತ್ರ ಸಾಧ್ಯ. ಆಗ ಸ್ಫುರಿಸಿದ ಒಂದು ಅನುಭವ ಒಂದು ವಚನಕ್ಕೆ ಸಾಮಗ್ರಿಯಾಗಬಹುದು. ಒಂದು ಪಂಕ್ತಿ ಪ್ರತಿಭಾಪೂರ್ಣವಾಗಿ ಹೊರಹೊಮ್ಮಿ ಬಂದರೂ ಸರಿಯೆ, ವಚನಕಾರ ಕೃತಾರ್ಥನಾಗುತ್ತಾನೆ. ಇಂಥ ಎಷ್ಟೋ ಸಂಗತಿಗಳು ಇಲ್ಲಿ ಮುತ್ತು ರತ್ನಗಳಂತೆ ರಾಶಿರಾಶಿಯಾಗಿ ದೊರೆಯುತ್ತವೆ. ಕೆಲವನ್ನು ಮಾತ್ರ ಇಲ್ಲಿ ಉದಾಹರಿಸಲಾಗಿದೆ.

ಬಿದ್ದರವಮಾನವಿಲ್ಲ ಮುದ್ದು ರಂಗ; ಮತ್ತೆದ್ದು ನಿಲ್ಲದಿರೆ ಅವಮಾನ.

ನಯನ ಸಮ್ಮತವಾದದ್ದು ನೀತಿ ಸಮ್ಮತವಾದಂದು ಕಲಿಕಾಲಕ್ಕೆ ಕೊನೆ, ರಂಗ.

ರಂಗ, ಕಾಯ ಮನಸ್ಸುಗಳು ಕತ್ತರಿಯ ಕಾಲುಗಳು: ಎರಡೊಂದಾಗಿ ಕೂಡದಿದ್ದರೆ ಅಡ್ಡಿ ತೃಣವನು ಕತ್ತರಿಸುವುದೆಂತು?

ಮರಗಳೆಲ್ಲ ಬಾದಾಮಿ ಮಾವು ಆದಂದು, ರಂಗ, ಹಕ್ಕಿಗಳೆಲ್ಲ ಗರುಡ ಪಕ್ಷಿ ಆದಂದು, ಅಚ್ಚಾದುದೆಲ್ಲ ನಂಬಲರ್ಹ.

ಹಿಂದಿನ ಅಭಿಪ್ರಾಯಗಳೆಲ್ಲ ಹುರುಳಿಲ್ಲದೆ ಟೊಳ್ಳಾದಲ್ಲಿ, ಇಂದಿನ ಅಭಿಪ್ರಾಯ ಯಾವುದು ತಿರುಳುಕೂಡಿ ಘಟ್ಟಿಯಾದೀತು ಪುರಾತನ ರಂಗ?

ಕೊಂಚ ಕೆಳಗಿಳಿದು ವಧುವ ಆರಿಸಿಕೊಳ್ಳುವುದು ಒಳ್ಳೆಯದು, ರಂಗ; ಕೊಂಚ ಮೇಲಕ್ಕೆ ಹತ್ತಿ ಸ್ನೇಹಿತನ ಆರಿಸಿಕೊಳ್ಳುವುದು ಒಳ್ಳೆಯದು.

ರಂಗ, ಹಡೆದ ಮಾತ್ರಕ್ಕೆ ಪಡೆದಂತಾಗಲಿಲ್ಲ?

ಏಕಾಂತ ಶಾಂತಿಯಲ್ಲ, ರಂಗಯ್ಯ, ಶಾಂತಿಗೆ ಕಾಲ್ಮಣೆ,

ಅಸಾಧಾರಣ ಜ್ಞಾಪಕಶಕ್ತಿ ಬೇಕಯ್ಯ ಸುಳ್ಳಿಗೆ, ರಂಗಯ್ಯ; ಸಾಧಾರಣ ನೆನಪು ಸಾಕಯ್ಯ ಸತ್ಯಕ್ಕೆ!

ಮಕ್ಕಳ ನಲಿವು, ರಂಗ, ಮಕ್ಕಳಿಗೆ ಸಾಧ್ಯ ....

ವೃದ್ಧಗಾಂಭೀರ್ಯ ಬಾಲಹಾಸ್ಯ ಕೂಡಿದರೆ ಸ್ವರ್ಗ, ಓ ರಂಗ!

ಓ ರಂಗ, ಜಗಕ್ಕೆಲ್ಲ ಅರ್ಥವಾಗುವ ಭಾಷೆ ಒಂದಿದೆ: ದುಡ್ಡು!

ಮಾತು ಹೊಲ್ಲ ಎನ್ನಬೇಕಯ್ಯ ಮಾತಿನಲ್ಲೇ: ಏನಿದು ವಾಣಿಯರಸನ ವ್ಯಂಗ್ಯ, ರಂಗಯ್ಯ?

ಇಂಥ ಅರ್ಥಗರ್ಭಿತವಾದ ಒಂದು ವಾಕ್ಯದ ವಚನವಾದರೂ ಸರಿಯೆ, ಮತ್ತೆ ಮತ್ತೆ

ಚಪ್ಪರಿಸಿ ಅದರ ತಿರುಳನ್ನು ತಿಳಿಯಬೇಕಾಗುತ್ತದೆ. ವಚನಕಾರರು ಎಂಥ ವಿಷಯವನ್ನಾದರೂ ಈ ಎರಕದಲ್ಲಿ ಹೊಯ್ದು ಅದಕ್ಕೆ ಒಂದು ಮೂರ್ತಸ್ವರೂಪ ವನ್ನು ನೀಡಬಲ್ಲರೆಂಬುದನ್ನು ಅವರ ಈ ವಚನವಾರಿಧಿಯನ್ನು ನೇರವಾಗಿ ಕಂಡು, ಸವಿಯಬೇಕು. ಅವರು ಮಾಡಿರುವ ಟೀಟ್ ಮಹನೀಯನ ಗುರುಸ್ತುತಿ, ಬಡತನ ಸಿರಿತನಗಳ ತಾರತಮ್ಯ, ಇಂದಿನ ಜನರ ಆಡಂಬರ ಅಟ್ಟಹಾಸಗಳ ಖಂಡನೆ, ಬದುಕಿನ ಓರೆಕೋರೆಗಳ ಚರ್ಚೆ–ಇವೆಲ್ಲವನ್ನೂ ಈ ಅನುಭವ ಪ್ರಪಂಚದಲ್ಲಿ ಕಾಣ ಬಹುದು. ಇಲ್ಲಿ ನೀತಿಯಿದೆ; ರಸವಿದೆ; ವಿಡಂಬನೆಯಿದೆ; ವಿವೇಚನೆಯಿದೆ; ತರ್ಕವಿದೆ; ಸಿದ್ಧಾಂತವಿದೆ. ಹಲವಾರು ಭಾಷೆಗಳ ಸಾರವಿದೆ; ತುಂಬು ಬದುಕಿನ ಸಂಪತ್ತಿದೆ. ಭಾವದ ಭಾಂಡಾರವಿದೆ; ಶೈಲಿಯ ಸೊಗಸಿದೆ.

ವಚನಗಳ ಸ್ವರೂಪದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಹುದು. ಹಿತಮಿತಗಳೆರಡೂ ವಚನರಚನೆಯ ಮುಖ್ಯ ಲಕ್ಷಣವೆನ್ನುವುದರಲ್ಲಿ ಭಿನ್ನಾಭಿ ಪ್ರಾಯವಿಲ್ಲ. ಆಯಾ ವಸ್ತುವಿಗೆ ಅನುಗುಣವಾಗಿ ವಚನದ ಅಳತೆ ಹೆಚ್ಚು ಕಡಮೆಯಾಗುವುದು ಸಹಜವೇ ಸರಿ. ಒಂದೇ ಒಂದು ವಚನದಲ್ಲಿ ಹಲವಾರು ಅಭಿಪ್ರಾಯಗಳನ್ನು ಗಿಡಿದು ಹೇಳಲು ಹೊರಟಾಗ ಪ್ರಧಾನ ವಿಷಯಕ್ಕೆ ನ್ಯೂನತೆ ಯುಂಟಾಗಿ ರಚನೆಯ ಶೈಥಿಲ್ಯವೋ ಇಲ್ಲವೇ ಭಾವದ ಮುಸುಕೋ ತಲೆದೋರಿ ರಸಿಕರ ಆನಂದಾನುಭವಕ್ಕೆ ಅಡಚಣೆಯಾಗದಿರದು. ಇಲ್ಲಿ ಕಂಡು ಬರುವ ಕೆಲವು ದೀರ್ಘವಚನಗಳು ಪ್ರಸಂಗದಂತೆಯೋ, ಅಥವಾ ಯಾವುದೋ ಒಂದು ಕಿರುಗತೆ ಯಂತೆಯೋ ಪರಿಣಮಿಸಿ, ನಾವು ನಿರೀಕ್ಷಿಸಿದಷ್ಟು ತೃಪ್ತಿ ದೊರೆಯುವುದಿಲ್ಲವೆನ್ನಿಸು ತ್ತದೆ. ಬಹುಪಾಲಿನ ವಚನಗಳು ಗದ್ಯಕ್ಕಿಂತಲೂ ಮಿಗಿಲಾಗಿ ಪದ್ಯದ ನಡೆಯಲ್ಲಿಯೇ ಸಾಗಿ ಅವು ಚಾಟುಗೀತಗಳಂತಿವೆ. ನವ್ಯಕಾವ್ಯದ ಗದ್ಯದ ಲಯವನ್ನು ಗುರುತಿಸ ಬಲ್ಲವರಿಗಂತೂ ಇವು ಪದ್ಯಬಂಧವೆನ್ನಿಸುವಷ್ಟು ಒಪ್ಪಿಗೆಯಾದೀತು. ವಚನಕಾರರು ಸ್ವಭಾವತಃ ಈ ಕಡೆ ತಮ್ಮ ಗಮನವನ್ನು ಹರಿಸಿರುವುದರಿಂದ ಇಂಥ ಅಪೂರ್ವವಾದ ಗುಣ ಲಭಿಸಿರುವುದೇನೂ ಹೆಚ್ಚಲ್ಲ.

ಇಂಥ ಅಮೂಲ್ಯವಾದ ಸಾಹಿತ್ಯಸಂಪತ್ತನ್ನು ಎಲ್ಲರೂ ಸವಿಯುವ ಸದವ ಕಾಶವುಂಟಾಗಬೇಕು. ಪುಸ್ತಕದ ಈಗಿನ ಬೆಲೆ ಕನ್ನಡಿಗರ ಕೈಗೆ ಎಟುಕದ್ದೇ ಸರಿ. ಆದ್ದರಿಂದ ಈ ಸಂಗ್ರಹದಲ್ಲಿನ ಅತ್ಯುತ್ತಮ ವಚನಗಳನ್ನು ಆಯ್ದು ಸಾಮಾನ್ಯ ವಾಚಕರ ಸೌಲಭ್ಯಕ್ಕಾಗಿ ಒಂದು ಸಣ್ಣ ಸಂಪುಟವನ್ನು ಸಿದ್ಧಪಡಿಸುವುದೂ ಸಹ ಯುಕ್ತವಾದೀತು. ಅಷ್ಟೇ ಅಲ್ಲ; ಇಲ್ಲಿನ ಹಲಕೆಲವು ವಚನಗಳನ್ನು ಇತರ ಭಾಷೆಗಳಿಗೂ ಅನುವಾದ ಮಾಡಿ, ಕನ್ನಡದಲ್ಲಿ ನಡೆದಿರುವ ಈ ನೂತನ ಸಾಧನೆಯ ಹೆಮ್ಮೆಯನ್ನು ಪರಿಚಯಮಾಡಿಕೊಡಬೇಕಾದುದೂ ಅತ್ಯಗತ್ಯ.

ಪ್ರಕೃತ ಪುಸ್ತಕಾವಲೋಕನವಾದರೂ ಹೇಳಬೇಕೆಂದು ಆಶಿಸಿದಷ್ಟನ್ನೂ ಹೇಳಿ ಪೂರೈಸಿದ್ದಲ್ಲ. ಗ್ರಂಥದ ಸ್ಥೂಲಪರಿಚಯವನ್ನು ಮಾತ್ರ ಇಲ್ಲಿ ಮಾಡಿ

ಕೊಟ್ಟಿದೆ. ಶ್ರೀಮಾನ್ ಎಸ್. ವಿ. ರಂಗಣ್ಣನವರ ಈ ಸಾಧನೆ ಇಂತೆಯೇ ಮುಂದೆಯೂ ನಮಗೆ ತುಂಬು ಫಲವನ್ನು ನಿಡಲಿ; ಇಂಥ ಶ್ರೇಷ್ಠ ಕೃತಿಗಳಿಂದ ಕನ್ನಡಕ್ಕೆ ಎಂದಿಗೂ ಬಡತನ ಬಂದು ಅಡಸದಂತಿರಲಿ. ಪುರಾತನ ಗ್ರಂಥಗಳ ಅಧ್ಯಯನ, ನೂತನ ಮಾರ್ಗಗಳ ಆವಿಷ್ಕರಣದಿಂದ ನಮ್ಮ ನಾಡು ನುಡಿಗಳ ಮುನ್ನಡೆ ನಿರಂತರವಾಗಿ ಸಾಗಲಿ. ಒಳ್ಳೆಯ ಸಾಹಿತಿ, ಆತನನ್ನು ವಿನಯ ವಿಶ್ವಾಸಗಳಿಂದ ರಸಿಕವೃಂದಕ್ಕೆ ಪರಿಚಯಮಾಡಿಕೊಡುವ ಪರಿಣತ ಪ್ರಕಾಶಕರು ಇಂತೆಯೇ ನಮ್ಮ ಪಾಲಿಗೆ ಹೆಚ್ಚು ಹೆಚ್ಚಾಗುತ್ತಿರಲಿ ಎಂದು ಆಶಿಸುತ್ತೇನೆ.

—ಗುಂಡಮರಾಜು

ಸುವರ್ಣ ಸಂಪುಟ (ವಿಶೇಷಾಂಕ) : ಸಂಪಾದಕರು : ಶ್ರೀ ಹೆಚ್. ಆರ್. ಗುಂಡೂರಾವ್; ಉಪಸಂಪಾದಕರು: ಶ್ರೀ ಹೆಚ್. ಎಸ್. ರೇಣುಕಪ್ರಸಾದ್; ಪ್ರಕಾಶಕರು: ನಲವತ್ತನಾಲ್ಕನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿ, ತುಮಕೂರು; ಕಿರೀಟ ೧/೪ ; ಪು. xxxv+೧೪೩ ; ಬೆಲೆ: ರೂ. ೧-೫೦.

ಇತ್ತೀಚೆಗೆ ತುಮಕೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಸಮಾರಂಭಕ್ಕೆ ತಕ್ಕಂತೆ ಅದರ ಸ್ವಾಗತ ಸಮಿತಿಯವರು ಈ ವಿಶೇಷಾಂಕವನ್ನು ಪ್ರಕಟಿಸಿರುವುದು ತುಂಬ ಪ್ರಶಂಸನೀಯವಾದುದು. ಇದರಲ್ಲಿ ತುಮಕೂರಿನ ಇತಿಹಾಸ ಮತ್ತು ಅಲ್ಲಿನ ಸಾಹಿತಿಗಳನ್ನು ಕುರಿತ ಲೇಖನಗಳನ್ನು ಶ್ರೀ ಬಿ. ಶಿವಮೂರ್ತಿಶಾಸ್ತ್ರಿ, ಶ್ರೀ ಕೆ. ನಾರಾಯಣಾಚಾರ್ಯ ಮತ್ತು ಶ್ರೀ ಹೆಚ್. ಎಸ್. ರೇಣುಕಪ್ರಸಾದ್ ಅವರು ಬರೆದಿರುವರು. ಇವುಗಳಲ್ಲದೆ, ಸಿದ್ಧಗಂಗೆ, ಗೋಡೇಕೆರೆ ಮತ್ತು ಮಂದರಗಿರಿ ಕ್ಷೇತ್ರಗಳನ್ನು ಕುರಿತು ಪ್ರತ್ಯೇಕವಾದ ಲೇಖನಗಳೂ ಇವೆ. ಈ ಸ್ಥಳಪರಿಚಯಗಳ ಮೂಲಕ ತುಮಕೂರು ಜಿಲ್ಲೆಯ ಐತಿಹಾಸಿಕ ಮತ್ತು ಸಾಂಸ್ಕೃತಿಕ ಮಹತ್ವಗಳು ತಕ್ಕಮಟ್ಟಿಗೆ ತಿಳಿದುಬರುತ್ತವೆ. ಈ ಬರೆಹಗಳು ಮಾತ್ರವಲ್ಲದೆ, ಈ ಸಂಚಿಕೆಯಲ್ಲಿ ಕೊಟ್ಟಿರುವ ದೇವಾಲಯಗಳ ಮತ್ತು ಮೂರ್ತಿಗಳ ಚಿತ್ರಗಳು ಇಲ್ಲಿನ ಶಿಲ್ಪಕಲೆಯ ಮೇಲ್ಮೆಯನ್ನು ಪರಿಚಯಮಾಡಿಕೊಡಬಲ್ಲವು. ಸಾಹಿತ್ಯ ವಿಚಾರಕ್ಕೆ ಸಂಬಂಧಿಸಿದ ಲೇಖನಗಳಲ್ಲಿ ಶ್ರೀ ಗೋರೂರು ರಾಮಸ್ವಾಮಿ ಐಯ್ಯಂಗಾರ್ ಅವರ 'ಜನಪದ ರಾಮಾಯಣ' ಎಂಬುದರಲ್ಲಿ ನಮ್ಮ ಜಾನಪದ ಕವಿಗಳ ಕಲ್ಪನಾ ವೈಭವವೇನು ಎನ್ನುವುದು ಹೃದಯಂಗಮವಾಗಿ ವೇದ್ಯವಾಗುತ್ತದೆ. ಶ್ರೀ ಟಿ. ಎಂ. ಪೈ. ಅವರು ಇಂದಿನ ಸಾಹಿತ್ಯದ ಕುಂದುಕೊರತೆಗಳ ಕಡೆಗೆ ನಮ್ಮ ಗಮನವನ್ನು ಸೆಳೆದಿರುತ್ತಾರೆ. "ಸರ್ವಜ್ಞನ ದೃಷ್ಟಿಯಲ್ಲಿ ಸ್ತ್ರೀ" ಎಂಬ ಬರೆಹದಲ್ಲಿ ಕಂಡುಬರುವ ವಿಷಯಪ್ರತಿಪಾದನೆ, "ಭ್ರಮರಗೀತೆ"ಯಲ್ಲಿ ವಿದಿತವಾಗುವ ನೂತನ ವಿಷಯ. "ಕೊಡಗು ಮತ್ತು ಜನಜೀವನ"ದಲ್ಲಿನ ವ್ಯಾಹಹಾರಿಕ ರೀತಿ ನೀತಿಗಳು, "ಸರ್ವಭಾಷಾಮಯೀ ಸಿರಿಭೂವಲಯ"ದಲ್ಲಿನ

ಕುತೂಹಲಮಿಶ್ರಿತವಾದ ಅಂಶಗಳು ಯಾರನ್ನಾದರೂ ವಿಚಾರಮಗ್ನರನ್ನಾಗಿ ಮಾಡಬಲ್ಲವು. ಹರಿದಾಸ ಸಾಹಿತ್ಯದ ಬಗ್ಗೆ ಶ್ರೀ ಎಂ. ರಾಮರಾವ್ ಮತ್ತು ಡಾ|| ಕೆ. ಎಂ. ಕೃಷ್ಣರಾಯರು ಗಮನಾರ್ಹವಾದ ವಿಚಾರಗಳನ್ನು ಸಂಗ್ರಹಿಸಿ ಕೊಟ್ಟಿರುತ್ತಾರೆ. ಒಂದೊಂದು ಲೇಖನವೂ ಪರಿಶ್ರಮಪೂರ್ವಕವಾಗಿದ್ದು ವಾಚಕನ ಅಭಿಲಾಷೆಯನ್ನು ಉತ್ತಮಪಡಿಸುವಂತಿವೆ. ಎರಡೇ ಎರಡು ಸಣ್ಣ ಕಥೆಗಳಿದ್ದರೂ, ಇವುಗಳಲ್ಲಿ ಕಂಡುಬರುವ ಜೀವನ ದೃಷ್ಟಿ ಮನನೀಯವಾಗಿದೆ. ಶ್ರೀಮತಿ ವಿಶಾಲಾಕ್ಷಿ ಲಕ್ಷ್ಮಣಗೌಡ ಅವರ "ಹುಚ್ಚ" ಎಂಬ ಕಥೆ, ವಿಷಯ ಮತ್ತು ವಿಧಾನಗಳೆರಡರಲ್ಲಿಯೂ ಮನವೊಪ್ಪುವಂತಿದೆ. ಹಲವಾರು ಹಿರಿಯ ಮತ್ತು ಕಿರಿಯ ಕವಿಗಳ ಕವನಗಳನ್ನೂ ಸಂಗ್ರಹಿಸಿಕೊಡಲಾಗಿದೆ. ಈ ವಿಭಾಗದ ಕೆಲವು ಕವನಗಳಲ್ಲಿ ತೋರಿಬರುವ ದೃಷ್ಟಿವೈವಿಧ್ಯ, ತಂತ್ರವೈಶಿಷ್ಟ್ಯ ಮತ್ತು ಶೈಲಿಯ ವಿಲಾಸಗಳು ಮೆಚ್ಚುವಂಥವು. ಶುಚಿ–ರುಚಿ, ಅಂದ–ಚೆಂದಗಳನ್ನು ಇಷ್ಟರಮಟ್ಟಿಗೆ ಸರಿಸಮನಾಗಿ ನಿರ್ವಹಿಸಿಕೊಂಡು ಇಂಥ ಉಪಯುಕ್ತವಾದ ಸಮ್ಮೇಳನಾಂಕವನ್ನು ಸಕಾಲದಲ್ಲಿ ಪ್ರಕಟಿಸಿರುವ ಸಂಪಾದಕರಿಗೂ, ಅವರ ಕಾರ್ಯಕ್ಕೆ ನೆರವಿತ್ತಿರುವ ಇತರರಿಗೂ ನಮ್ಮ ಹೃತ್ಪೂರ್ವಕವಾದ ಅಭಿನಂದನೆಗಳು.

—ಸಂ.

ಕನ್ನಡ ಗಾದೆಗಳ ಕೋಶ: ಸಂಪಾದಕರು: ಶ್ರೀ ಟಿ. ವಿ. ವೆಂಕಟರಮಣಯ್ಯ; ಪ್ರಕಾಶಕರು: ಸಮಾಜ ಪುಸ್ತಕಾಲಯ, ಧಾರವಾಡ; ಕಿರೀಟ ಅಷ್ಟದಳ; ಪು. xxiv+೨೪೭; ಬೆಲೆ: ರೂ. ೨.೭೫.

ಪುಸ್ತಕದ ಹೆಸರೇ ಸೂಚಿಸುವಂತೆ ಇದೊಂದು ಗಾದೆಗಳ ಸಂಗ್ರಹ. ಇದರಲ್ಲಿ ಒಟ್ಟು ೪,೨೩೪ ಗಾದೆಗಳಿವೆ. ಸಂಪಾದಕರು ತುಂಬ ಪರಿಶ್ರಮವಹಿಸಿ, ಕನ್ನಡದಲ್ಲಿ ಈ ಬಗ್ಗೆ ಬಂದಿರುವ ಹಿಂದಿನ ಗ್ರಂಥಗಳನ್ನೆಲ್ಲ ಓದಿ ನೋಡಿ, ಈ ನೂತನ ಸಂಗ್ರಹವನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಸಂಗ್ರಹಕಾರ್ಯದಂತೆಯೇ ಇಲ್ಲಿನ ಸಂಪಾದನ ಕಾರ್ಯವೂ ಮೆಚ್ಚುತಕ್ಕುದಾಗಿದೆ. ಲೇಖಕರು ಗಾದೆಗಳಲ್ಲಿ ಬರುವ ವಿಷಯಗಳನ್ನು ವಿಂಗಡಿಸಿ ಒಂದು ಉಪಯುಕ್ತವಾದ ವಿಷಯಸೂಚಿಯನ್ನು ಕೊಟ್ಟಿರುತ್ತಾರೆ. ಕಡೆಯಲ್ಲಿ ೧೦೬ ಗಾದೆಗಳನ್ನು ಆರಿಸಿ ಅವುಗಳಿಗೆ ಸಂವಾದಿಯಾದ ಇಂಗ್ಲಿಷ್ ಸಾಮತಿಗಳನ್ನು ತೋರಿಸಿಕೊಟ್ಟಿರುತ್ತಾರೆ. ಲೇಖಕರ ಈ ಶ್ರದ್ಧೆ, ಸಾಹಸಗಳನ್ನು ಶ್ರೀ ದ. ರಾ. ಬೇಂದ್ರೆಯವರು ಮನವಾರೆ ಮೆಚ್ಚಿ ಮುನ್ನುಡಿಯನ್ನು ಬರೆದಿರುತ್ತಾರೆ. ಲೇಖಕರೂ ಸಹ ತಮ್ಮ 'ಅರಿಕೆ'ಯಲ್ಲಿ ಗಾದೆಯ ಹುಟ್ಟು, ಸ್ವರೂಪ ಮತ್ತು ವ್ಯಾಪ್ತಿಗಳನ್ನು ಕುರಿತು ಸಂಕ್ಷಿಪ್ತವಾಗಿ ಪರಿಚಯ ಮಾಡಿಕೊಟ್ಟಿರುತ್ತಾರೆ.

ಪ್ರಕೃತ ಸಂಗ್ರಹಕಾರರು ಕೆಲವು ಗಾದೆಗಳಿಗೆ ವ್ಯಾಖ್ಯಾನಮಾಡಲು ಪ್ರಯತ್ನಿಸಿದ್ದಾರೆ. ಗಾದೆ ಪ್ರತಿನಿತ್ಯವೂ ಜನರ ನಾಲಿಗೆಯ ಮೇಲೆ ಚಲಿಸುವ

ಸ್ವಭಾವವುಳ್ಳದ್ದು. ಒಂದೇ ಅಭಿಪ್ರಾಯದ ಅನೇಕ ಗಾದೆಗಳಿರಬಹುದು. ಒಂದೇ ಗಾದೆ ಪ್ರಾದೇಶಿಕ ಭೇದದಿಂದ ಬೇರೆ ಬೇರೆ ಪಾಠಗಳನ್ನು ಪಡೆದಿರಬಹುದು. ಈ ಸಮಸ್ಯೆಗಳನ್ನು ಬಿಡಿಸುವುದು ಕಷ್ಟವಾದರೂ, ವ್ಯಾಸಂಗದ ದೃಷ್ಟಿಯಿಂದ ಗಮನಿಸ ಬೇಕಾದುದು ಅತ್ಯಗತ್ಯ. ಈ ಕಾರ್ಯ ಇಲ್ಲಿ ಸ್ವಲ್ಪಮಟ್ಟಿಗೆ ಆಗಿರುವುದು ಸಮಾಧಾನಕರವಾದ ಸಂಗತಿ. ಗಾದೆಯಲ್ಲಿನ ತಿರುಳನ್ನು ಬಿಡಿಸಿ ಹೇಳುವ ಒಂದೆರಡು ಸಂದರ್ಭಗಳಲ್ಲಿ ಭಿನ್ನಾಭಿಪ್ರಾಯಕ್ಕೆ ಅವಕಾಶವಿದೆ. ಉದಾಹರಣೆಗೆ "ಇರುಳು ಕಂಡ ಬಾವಿಯಲ್ಲಿ ಹಗಲು ಬಿದ್ದನು" ಎಂಬ ನಾಣ್ಣುಡಿಯ ಭಾವ 'ಅತ್ಯುಕ್ತಿ' ಯನ್ನು ಸೂಚಿಸುವುದೆಂದು ಹೇಳಿದ್ದಾರೆ. ಇದರ ಅಭಿಪ್ರಾಯ ವಾಸ್ತವವಾಗಿ ತಿಳಿದೂ ತಿಳಿದೂ ತಪ್ಪುಮಾಡಿದನೆಂದು ಹೇಳುವುದು. ರಾತ್ರಿಯೇ ಬಾವಿಯನ್ನು ಗುರುತಿಸಿದ ಗೆಣೆಯ ಹಗಲಿನಲ್ಲಿ ಹೋಗಿ ಬಿದ್ದನೆಂದರೆ ಆತನ ಬುದ್ಧಿಗೆ ಏನು ಹೇಳಬೇಕು? ಈ ಒಟ್ಟು ಅಭಿಪ್ರಾಯ 'ಅತ್ಯುಕ್ತಿ'ಯೆಂಬ ಟಿಪ್ಪಣಿಯಲ್ಲಿ ಸ್ಪಷ್ಟ ವಾಗಲಾರದು. "ಉದ್ದುಳ್ಳವನಿಗೆ ಬುದ್ಧಿಯಿಲ್ಲ" ಎಂಬ ಗಾದೆಯೂ ಸಹ ಹೀಗೆಯೇ ಆಕೃತಿಯ ಬಗ್ಗೆ ಜನರ ಕಲ್ಪನೆಯನ್ನು ತೋರಿಸುತ್ತದೆ. "ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು" ಎಂಬಲ್ಲಿ ಚಿಕ್ಕ ಆಕಾರವನ್ನು ಮೆಚ್ಚಿಕೊಂಡರೆ, ಇಲ್ಲಿ ಎತ್ತರವಾದವನನ್ನು ತೆಗಳುವುದೇ ಮುಖ್ಯಭಾವ. "ಎತ್ತು ಈಯಿತೆಂದರೆ ಕೊಟ್ಟಿಗೆಯಲ್ಲಿ ಕಟ್ಟು ಎಂದನಂತೆ" ಎಂಬ ಗಾದೆಗೆ "ವ್ಯಂಗ್ಯ" ಎಂಬ ಒಂದು ಶಬ್ದದ ವ್ಯಾಖ್ಯಾನ ಸಾಲದೆನ್ನಿಸುತ್ತದೆ. ಇಲ್ಲಿ ಮುಖ್ಯವಾಗಿ, ಪೂರ್ವಾಪರ ವಿಮರ್ಶೆಯನ್ನು ಮಾಡದ ಮನುಷ್ಯನನ್ನು ಟೀಕಿಸಲಾಗಿದೆ. ಈ ಅಭಿಪ್ರಾಯದ ವಿವರಣೆ ಅಗತ್ಯ. ತುರುಕರನ್ನು ಕುರಿತು ಆಕ್ಷೇಪಣೆ ಮಾಡಿರುವ ಒಂದು ಗಾದೆಗೆ (ಸಂ. ೯೩೩) ಇತ್ತೀಚಿನ ಭಾರತದ ವಿಭಜನೆ ಮತ್ತು ಹೈದರಾಬಾದುಗಳ ಘಟನೆ ಗಳ ಕಾರಣವನ್ನು ಹೇಳಿದೆ. ಇದು ಸಮಂಜಸವಾಗಲಾರದು. ಏಕೆಂದರೆ ಈ ಗಾದೆ ಮೇಲೆ ಸೂಚಿಸಿರುವ ಎರಡು ಘಟನೆಗಳಿಗಿಂತಲೂ ಹಳೆಯದು. ಕಿಟ್ಟೆಲ್ಲರವರೇ ಇದನ್ನು ತಮ್ಮ ಕೋಶದಲ್ಲಿ ಉದಾಹರಿಸಿರುತ್ತಾರೆ (ಪು. ೭೪೯). ಮುಖ್ಯವಾಗಿ ಈ ತೆರನಾದ ವ್ಯಾಖ್ಯಾನದ ಪ್ರಯತ್ನ ಅಷ್ಟೇನೂ ಸುಲಭವಲ್ಲವೆಂದು ಯಾರಾದರೂ ಒಪ್ಪಿಕೊಳ್ಳಬೇಕಾದದ್ದು. ಸಾಮತಿಗಳ ಅರ್ಥ ಅವರವರ ಅನುಭವಕ್ಕೆ ತಕ್ಕಂತೆ ವಿಸ್ತಾರವಾಗುತ್ತಾ ಹೋಗುತ್ತದೆ. ಗಾದೆಗಳ ಹಿರಿಮೆಯೇ ಇದು. ಅದರ ಕಾಲವನ್ನು ನಿಷ್ಕರ್ಷಿಸಿ ಹೇಳುವುದು ಎಷ್ಟು ಕಷ್ಟವೋ, ಅದರ ಮೂಲ ಮತ್ತು ವ್ಯಾಪ್ತಿಗಳನ್ನು ಹಿಡಿದಿಟ್ಟು ಹೇಳುವುದೂ ಸಾಹಸವೇ ಸರಿ.

ಪ್ರಕೃತ ಸಂಪಾದಕರು ಈ ಗಾದೆಗಳನ್ನು ಸಂಗ್ರಹಿಸಿದ ವಿವರಗಳನ್ನು ಹೆಚ್ಚಾಗಿ ತಿಳಿಸಿಲ್ಲ. ಇತರ ಗ್ರಂಥಕಾರರಿಂದ ಆರಿಸಿದ್ದೆಷ್ಟು, ಸ್ವತಃ ಹೊಸದಾಗಿ ಶೇಖರಿಸಿದ್ದೆಷ್ಟು, ನಮ್ಮ ಹಳೆಯ ಕಾವ್ಯ ಮತ್ತು ಜನಪದಸಾಹಿತ್ಯಗಳಿಂದ ಪಡೆದುದು ಎಷ್ಟು ಎಂಬ ವಿವರಣೆಯೊಂದನ್ನು ಕೊಟ್ಟಿದ್ದರೆ ಈ ಪುಸ್ತಕದ ಸಂಪಾದನ

ಕಾರ್ಯ ಇನ್ನೂ ಸಮಗ್ರವಾಗಿರುತ್ತಿತ್ತು ಎಂದು ಹೇಳಬಯಸುತ್ತೇವೆ. ಗಾದೆಗಳ ಕೋಶ ದಿನದಿನಕ್ಕೂ ಬೆಳೆಯುತ್ತಿರುವುದನ್ನು ಎಲ್ಲರೂ ಬಲ್ಲರು. ಆಧುನಿಕ ಲೇಖಕರಲ್ಲಿ ಹಲವಾರು ಮಂದಿ ಈ ಕಣಜಕ್ಕೆ ತಮ್ಮ ಕಾಣಿಕೆಯನ್ನು ಸಲ್ಲಿಸಿದ್ದಾರೆ. ಅವುಗಳ ಪೃಥಕ್ಕರಣೆಯೂ ಅಗತ್ಯ. ಸಂಗ್ರಹಕಾರರು ಕೆಲವು ಅಪೂರ್ವ ಶಬ್ದಗಳ ಅರ್ಥವನ್ನೂ ತಿಳಿಸಬೇಕಾಗಿತ್ತೆಂದು ಶ್ರೀ ದ. ರಾ. ಬೇಂದ್ರೆಯವರು ಸೂಚಿಸಿರುತ್ತಾರೆ. ಈ ಅಭಿಪ್ರಾಯವನ್ನು ನಾವೂ ಅನುಮೋದಿಸುತ್ತೇವೆ. ಗ್ರಾಂಥಿಕವಲ್ಲದ ಹಾಗೂ ಕಾಲದ ದೃಷ್ಟಿಯಿಂದ ಪ್ರಾಚೀನವೆನ್ನಿಸುವ ಎಷ್ಟೋ ಶಬ್ದಗಳು ಗಾದೆಗಳಲ್ಲಿ ಹುದುಗಿರುವುದುಂಟು. ಪ್ರಾದೇಶಿಕ ಪ್ರಯೋಗದ ವೈಶಿಷ್ಟ್ಯವೂ ವಿದಿತವಾಗುವುದುಂಟು. ಈ ಕೆಲಸ ಮುಂದಿನ ಆವೃತ್ತಿಯಲ್ಲಿ ತಪ್ಪದೆ ಆದೀತೆಂದು ಎಣಿಸುತ್ತೇವೆ.

ಅಂತೂ, ಪರಿಶ್ರಮಪೂರ್ವಕವಾಗಿ ಸಿದ್ಧಪಡಿಸಿರುವ ಈ ಸಂಗ್ರಹಕಾರರನ್ನು ಮನಃಪೂರ್ವಕವಾಗಿ ಅಭಿನಂದಿಸುತ್ತೇವೆ. ಅಚ್ಚುಕಟ್ಟಾಗಿ, ಚಿತ್ತಾಕರ್ಷಕವಾಗಿ ಪ್ರಕಟಿಸಿರುವ ಸಮಾಜ ಪುಸ್ತಕಾಲಯದ ಅಧಿಕಾರಿಗಳಿಗೂ ನಮ್ಮ ಧನ್ಯವಾದಗಳು. ಪ್ರತಿಯೊಬ್ಬ ಕನ್ನಡಿಗನೂ ಈ ಅಮೂಲ್ಯವಾದ ಕೋಶವನ್ನು ಕೊಂಡು, ಸಂಗ್ರಹಿಸಿ, ಆ ಮೂಲಕ ಇಂಥ ಸ್ತುತ್ಯ ಪ್ರಯತ್ನಗಳಿಗೆ ಉತ್ತೇಜನವನ್ನು ನೀಡಲೆಂದು ಆಶಿಸುತ್ತೇವೆ.

—ಗುಂಡಮರಾಜು

"ಜ್ಞಾನಜ್ಯೋತಿ": ಪ್ರಧಾನ ಸಂಪಾದಕರು: ಶ್ರೀ ನಿ. ಪ್ರ. ಸ್ವ. ಶಾಂತಲಿಂಗಸ್ವಾಮಿಗಳು, ಜೇವರಗಿ; ಪ್ರಕಾಶಕರು: ಆಶಾ ಜನರಲ್ ಸ್ಟೋರ್ಸ್, ಕಲಬುರ್ಗಿ; ಪುಟ. ೩೪೦+೩೦. ಬೆಲೆ: ರೂ. ೪.

'ಅಖಂಡೇಶ್ವರ' ಎಂಬ ಅಂಕಿತದಿಂದ ವಚನಗಳನ್ನು ರಚಿಸಿರುವ ಸುಪ್ರಸಿದ್ಧ ವಚನಕಾರ ಶ್ರೀ ಷಣ್ಮುಖ ಶಿವಯೋಗಿಗಳ ಸ್ಮಾರಕ ಸಂಪುಟ ಈ 'ಜ್ಞಾನಜ್ಯೋತಿ'. ಇದರ ಉದ್ದೇಶ: "ನಾಡಿನ ಜನತೆಯ ಸಂಸ್ಕೃತಿಗೆ ನಿರರ್ಗಳವಾದ ಕೊಡುಗೆಯನ್ನಿತ್ತು ಇಷ್ಟೊಂದು ಪ್ರಭಾವ ಮುದ್ರೆಯನ್ನು ಬೀರಿರುವ ಅಖಂಡೇಶ್ವರ ವಚನಗಳು ಜನತೆಯ ನಾಲಗೆಯಮೇಲೆ ಲಾಸ್ಯವಾಡುತ್ತಿರುವಾಗ, ವಚನಕರ್ತೃಗಳ ಪುಣ್ಯಸ್ಮರಣೆಯೂ ನಡೆಯಬೇಕೆಂಬ ಸದುದ್ದೇಶವೇ ಸಂಪಾದನಾ ಕಾರ್ಯಕ್ಕೆ ಪ್ರೋತ್ಸಾಹವನ್ನೀಡಿತು"—ಎಂಬ ಸಂಪಾದಕರ ಮಾತಿನಲ್ಲಿ ಸ್ಪಷ್ಟವಾಗಿ ಪ್ರತಿಬಿಂಬಿತವಾಗಿದೆ.

ವಚನಸಾಹಿತ್ಯವು "ನಾಡಿನ ಜನತೆಯ ಸಂಸ್ಕೃತಿಗೆ ನಿರರ್ಗಳವಾದ ಕೊಡುಗೆ"ಯನ್ನಿತ್ತಿರುವುದು ನಿಸ್ಸಂದೇಹವಾದ ವಿಚಾರ. ಶ್ರೀಮಾನ್ ಫ. ಗು. ಹಳಕಟ್ಟಿಯವರು 'ವಚನಶಾಸ್ತ್ರಸಾರ'ವನ್ನು ಪ್ರಕಟಿಸಿದಂದಿನಿಂದ ವಚನಸಾಹಿತ್ಯದ ಅಭ್ಯಾಸಕ್ಕೊಂದು ಹೊಸ ಪ್ರಚೋದನೆ ದೊರೆತಂತಾಯಿತು. ಕನ್ನಡ ಸಾಹಿತ್ಯದ ಅತ್ಯಮೂಲ್ಯ ಗಣಿಯೊಂದನ್ನು ಅವರು ಆ ಮೂಲಕ ತೋರಿಸಿಕೊಟ್ಟರು. ಅಲ್ಲಿರುವ

ಅನರ್ಘ್ಯ ರತ್ನಗಳಿಂದ ವಿದ್ವಾಂಸರ ಮನಸ್ಸು ಆಕರ್ಷಿತವಾಯಿತು; ಕನ್ನಡದ ಗರ್ಭದಿಂದ ಅವತರಿಸಿದ ಈ ವಚನಗಳ ದಿವ್ಯಶಕ್ತಿಗಾಗಿ ನಾಡಿನ ಜನ ಹೆಮ್ಮೆಪಡು ವಂತಾಯಿತು.

ವಚನಗಳ ಉಗಮ ೧೨ನೇ ಶತಮಾನಕ್ಕಿಂತ ಹಿಂದಕ್ಕೆ ಹೋಗುತ್ತದೆ. ಬಸವಣ್ಣನವರಿಗಿಂತ ಹಿಂದಿನವನೆಂದು ಹೇಳಲಾದ ದೇವರ ದಾಸಿಮಯ್ಯನೇ ಅತ್ಯಂತ ಸುಂದರವಾದ ವಚನಗಳನ್ನು ಬರೆದಿದ್ದಾನೆ. ಆದರೆ ಬಸವಣ್ಣ, ಅಲ್ಲಮ ಪ್ರಭು, ಅಕ್ಕಮಹಾದೇವಿ ಮೊದಲಾದ ಯುಗಪ್ರವರ್ತಕ ಶಕ್ತಿಗಳ ಅನುಭವವನ್ನು ಅವು ಒಳಗೊಂಡು ಬೆಳೆದುನಿಂತುದು ೧೨ನೆಯ ಶತಮಾನದಲ್ಲಿಯೇ. ಆ ಯುಗದಲ್ಲಿ ಧರ್ಮವು ಜನಜೀವನದ ಎಲ್ಲ ರಂಗಗಳನ್ನೂ ವ್ಯಾಪಿಸಿ, ಮೇಲು ಕೀಳೆನ್ನದೆ ಸ್ತ್ರೀಪುರುಷರೆನ್ನದೆ ಎಲ್ಲರನ್ನೂ ಉದ್ಧರಿಸುವ ಜೀವಂತಶಕ್ತಿಯಾಗಿ ಪರಿಣಮಿಸಿತು. ಅಂತಹ ಪ್ರಭಾವವನ್ನು ಅಂದಿನ ಶರಣರು 'ವಚನ'ಗಳ ಮೂಲಕ ಸಾಧಿಸಿದರು. ಕಾಯಕವನ್ನೇ ಕೈಲಾಸವನ್ನಾಗಿ ಮಾಡಿ ತೋರಿಸಿದರು. ಆ ಮಟ್ಟದ ಅನೇಕ ಅನುಭಾವಿಗಳನ್ನು ಕನ್ನಡ ದೇಶ ಏಕಕಾಲದಲ್ಲಿ ಕಂಡುದು, ಅಭೂತಪೂರ್ವವಾದ ಘಟನೆಯೇ ಸರಿ.

ಆದರೆ ಯುಗಧರ್ಮದ ಪದಾಘಾತಕ್ಕೆ ಸಿಕ್ಕು ಶರಣರ ಕಾರ್ಯಕ್ಷೇತ್ರ, ಮಧ್ಯ ದಲ್ಲಿಯೇ ಕುಸಿದುಬಿದ್ದುದರಿಂದ ಮುಂದೆ ೧೫ನೇ ಶತಮಾನದವರೆಗೂ ವಚನ ಸಾಹಿತ್ಯ ಗುಪ್ತಗಾಮಿಯಾಯಿತು. ೧೫ನೇ ಶತಮಾನದಲ್ಲಿ ಅದರಲ್ಲೂ ಮುಖ್ಯವಾಗಿ ವಿಜಯನಗರದ ಇಮ್ಮಡಿ ಪ್ರೌಢದೇವರಾಯನ ಕಾಲದಲ್ಲಿ ವಚನಸಾಹಿತ್ಯದ ಪುನರುಜ್ಜೀವನ ಪ್ರಾರಂಭವಾಯಿತು. ೧೨ನೇ ಶತಮಾನದಲ್ಲಿ ರಚಿತವಾದ ವಚನ ಗಳ ವ್ಯವಸ್ಥಿತ ವಿವೇಚನೆ, ವಿವರಣೆ, ವ್ಯಾಖ್ಯಾನಗಳು ವಿಶೇಷವಾಗಿ ನಡೆದುವು. ಅದರ ಫಲವಾಗಿ "ಏಕೋತ್ತರ ಶತಸ್ಥಲ", "ಲಿಂಗ ಲೀಲಾವಿಲಾಸ ಚಾರಿತ್ರ" "ಶೂನ್ಯ ಸಂಪಾದನೆ" ಮೊದಲಾದ ಗ್ರಂಥಗಳು ರೂಪುಗೊಂಡವು. ಇದರ ಜೊತೆಗೆ ವಚನಸಾಹಿತ್ಯದ ಹೊಸ ಸೃಷ್ಟಿಯೂ ಆಗದಿರಲಿಲ್ಲ. ಈ ಯುಗದಲ್ಲಿ ಹೆಸರಿಸಬಹುದಾದ ಪ್ರಮುಖ ವಚನಕಾರರೆಂದರೆ ತೋಂಟದ ಸಿದ್ಧಲಿಂಗಯತಿ ಮತ್ತು ಘನಲಿಂಗದೇವ. ಇದಾದನಂತರ ಮತ್ತೊಮ್ಮೆ ೧೭ನೇ ಶತಮಾನದಲ್ಲಿ ವಚನಸಾಹಿತ್ಯವನ್ನು ತಮ್ಮ ನೂತನ ರಚನೆಗಳಿಂದ ಜೀವಂತಗೊಳಿಸಿದವರೆಂದರೆ ಷಣ್ಮುಖ ಶಿವಯೋಗಿಗಳು. ಈ ಮಟ್ಟದ ವಚನಕಾರರು ಕನ್ನಡದಲ್ಲಿ ಇವರಾದ ಮೇಲೆ ಮತ್ತೊಬ್ಬರು ಬರಲಿಲ್ಲ. ವಚನಸಾಹಿತ್ಯದ ಪರಂಪರೆಯಲ್ಲಿ ಬಹುಶಃ ಇವರದೇ ಕೊನೆಯ ದೊಡ್ಡ ಹೆಸರು.

ಕಾಲದ ದೃಷ್ಟಿಯಿಂದ ಇವರು ವಚನಸಾಹಿತ್ಯವಾಹಿನಿಯಲ್ಲಿ ಕೊನೆಯವ ರಾದರೂ ಮಹತ್ವದ ದೃಷ್ಟಿಯಿಂದ ಮೊದಲನೆಯವರ ಮಟ್ಟಕ್ಕೆ ಏರಬಲ್ಲವರು. ಅವರ ಲೋಕಾನುಭವ ಲೋಕಕಾರುಣ್ಯಗಳು ಓದುಗರ ಮನಸ್ಸನ್ನು ಸೂರೆಗೊಳ್ಳು

ತ್ತವೆ; ಅವರ ಯೋಗಸಾಧನೆಯ ಅದ್ಭುತ ಶಕ್ತಿ ಸಾಧಕರನ್ನು ವಿಸ್ಮಯಚಕಿತರನ್ನಾಗಿ ಮಾಡುತ್ತದೆ. ತಮ್ಮ ಸಾಧನೆ ಮತ್ತು ಅನುಭವಗಳನ್ನು ಅಭಿವ್ಯಕ್ತಗೊಳಿಸಲು ಸಹಾಯಕವಾದ ವಚನರಚನೆಯ ಸಿದ್ಧಿಯೂ ಅವರಿಗೆ ಲಭಿಸಿದೆ. ಇಂತಹ ಇವರ ವಚನಗಳನ್ನು ಓದಿದವರಿಗೆ ಇವರ ವ್ಯಕ್ತಿತ್ವದ ವಿಕಾಸವನ್ನು ಮತ್ತು ಅದಕ್ಕೆ ಸಹಾಯಕವಾದ ಹಿನ್ನೆಲೆಯನ್ನೂ ತಿಳಿಯುವ ಕುತೂಹಲ ಸಹಜವಾಗಿಯೇ ಉಂಟಾಗುತ್ತದೆ. ಆದರೆ ಅವರ ಚರಿತ್ರೆಯನ್ನು ತಿಳಿಯುವುದಕ್ಕೆ ಸಹಾಯಕವಾದ ಸಾಮುಗ್ರಿ ಇದುವರೆಗೆ ನಮ್ಮಲ್ಲಿ ಏನೂ ಇರಲಿಲ್ಲವೆಂದೇ ಹೇಳಬೇಕು. ಆ ಕೊರತೆಯನ್ನು ನಿವಾರಿಸುವುದರಲ್ಲಿ ಈ "ಜ್ಞಾನಜ್ಯೋತಿ" ತುಂಬಾ ಉಪಯುಕ್ತ ಗ್ರಂಥವಾಗಿ ಪರಿಣಮಿಸಿದೆ. ಇದನ್ನು ಜೇವರಗಿಯಲ್ಲಿರುವ ಅವರ ಪೀಠಕ್ಕೆ ಪಟ್ಟಾಧಿಕಾರಿಗಳಾಗಿರುವ ಶ್ರೀ ನಿ. ಪ್ರ. ಶಾಂತಲಿಂಗ ಸ್ವಾಮಿಗಳವರೇ ಹೊರತರುತ್ತಿರುವುದು ಅತ್ಯಂತ ಸ್ತುತ್ಯಾರ್ಹವಾದುದು; ಸ್ವಾಗತಾರ್ಹವಾದುದು.

ಷಣ್ಮುಖ ಶಿವಯೋಗಿಗಳನ್ನು ಕುರಿತು ರಚಿತವಾಗಿರುವ ಒಂದೆರಡು ಕವನಗಳೂ ಸೇರಿ ಒಟ್ಟು ಮೂವತ್ತು ಲೇಖನಗಳು ಈ ಗ್ರಂಥದಲ್ಲಿವೆ. ಅವರ ಜೀವನ ಚರಿತ್ರೆ, ಶಿವಯೋಗ ಸಾಧನೆ, ಲೋಕೋಪಕಾರ, ಲೋಕಾನುಭವ, ಧರ್ಮದೃಷ್ಟಿ, ಕಾಯಕ ಜೀವನ ಮೊದಲಾಗಿ ಅವರ ವ್ಯಕ್ತಿತ್ವದ ದರ್ಶನವನ್ನು ನಿರೂಪಿಸುವ ಲೇಖನಗಳು ಇಲ್ಲಿರುವಂತೆಯೇ ಇದೆಲ್ಲಕ್ಕೂ ಹಿನ್ನೆಲೆಯಾದ ಶರಣರ ತತ್ವದರ್ಶನವನ್ನು ಮಾಡಿಕೊಡುವ ಪ್ರಯತ್ನವೂ ಇಲ್ಲಿ ಕಂಡುಬರುತ್ತದೆ. ಗ್ರಂಥದ ಪ್ರಾರಂಭದಲ್ಲಿರುವ ಕೆಲವು ಸಂದೇಶಗಳನ್ನು ಬಿಟ್ಟರೆ ಮುಖ್ಯವಾಗಿ ಗಮನವನ್ನು ಸೆಳೆಯುವ ಅಂಶವೆಂದರೆ ಶ್ರೀಮಾನ್ ಶಿ. ಚ. ನಂದಿಮಠರವರ ಪ್ರಸ್ತಾವನೆ. ತಕ್ಕಮಟ್ಟಿಗೆ ವಿಸ್ತಾರವಾದ ಪ್ರಸ್ತಾವನೆಯಲ್ಲಿ ಅವರು ಷಣ್ಮುಖ ಶಿವಯೋಗಿಗಳ ತಾತ್ವಿಕ ಮುಖವನ್ನು ಸಂಗ್ರಹವಾಗಿ ಪರಿಚಯ ಮಾಡಿಕೊಟ್ಟಿದ್ದಾರೆ.

ಇಲ್ಲಿನ ಲೇಖನಗಳಲ್ಲಿ ವಿಷಯ ವೈವಿಧ್ಯವಿದೆ. ಶ್ರೀ ದೇವೇಂದ್ರಕುಮಾರ ಹಕಾರಿಯವರ ಕವನ ಮೊಟ್ಟಮೊದಲು ಓದುಗರನ್ನು ಸ್ವಾಗತಿಸುತ್ತದೆ. ಅನಂತರ ಶ್ರೀ ಬಸವಲಿಂಗಯ್ಯ ಮಲ್ಲಾಪೂರ ಅವರು ಷಣ್ಮುಖ ಶಿವಯೋಗಿಗಳ ಜೀವನ ಚರಿತ್ರೆಯನ್ನು ಪರಿಚಯ ಮಾಡಿಕೊಟ್ಟಿದ್ದಾರೆ. ಇದು ಇಂಗ್ಲಿಷ್ ಲೇಖನದ ಕನ್ನಡ ಅನುವಾದವೆಂದು ಸಂಪಾದಕರು "ಲೇಖಕರ ಪರಿಚಯ"ದಲ್ಲಿ ಹೇಳಿದ್ದಾರೆ. ಈ ಲೇಖನದಲ್ಲಿ ಶರಣರ ಪರಿಚಯದ ಪೀಠಿಕೆಯೇ ದೀರ್ಘವಾಗಿದೆ, ಮತ್ತು ಕೊನೆಯಲ್ಲಿ ಮಠದ ವರ್ಣನೆ ಮತ್ತು ಪೀಠದ ಪರಂಪರೆಯೂ ಬಂದಿದೆ. ಮುಖ್ಯವಾದ ಭಾಗ, ಅಂದರೆ ಶಿವಯೋಗಿಗಳ ಜೀವನಚರಿತ್ರೆಯೇ ಮೊಟಕಾಗಿದೆ.

ಮುಂದಿನದು ಶ್ರೀ ಶಿವಯೋಗಿಗಳು ಬಂಥನಾಳ ಇವರು ಬರೆದ "ಶ್ರೀ ಷಣ್ಮುಖ ಶಿವಯೋಗಿಗಳು ಗಳಿಸಿದ ಶಿವಯೋಗ ಸಾಧನೆ" ಎಂಬುದು. ಭಾರತದ ಪರಂಪರೆಯನ್ನು ಕಾಯುತ್ತಾ ಬಂದಿರುವ ಮಹಾತ್ಮರಲ್ಲಿ ಷಣ್ಮುಖ ಶಿವಯೋಗಿ

ಗಳು ಒಬ್ಬರಿಂದು ಹೇಳಿ ಅವರ ಶಿವಯೋಗದ ಸ್ವರೂಪವನ್ನು ತಿಳಿಸಿಕೊಡುವ ಪ್ರಯತ್ನವನ್ನು ಮಾಡಿದ್ದಾರೆ. 'ಯೋಗ ಮತ್ತು ಶಿವಯೋಗ,' 'ರಾಜಯೋಗ' 'ರಾಜಯೋಗ ಶಿವಯೋಗ' ಎಂಬ ಉಪವಿಭಾಗಗಳೇನೋ ಈ ಲೇಖನದಲ್ಲಿದ್ದರೂ ರಾಜಯೋಗ ಶಿವಯೋಗಗಳಲ್ಲಿರುವ ಅಂತರವನ್ನು ಓದುಗರು ಅರಿತುಕೊಳ್ಳಲಾರದೇ ಹೋಗುತ್ತಾರೆ. ಶಿವಯೋಗವನ್ನು ಪ್ರತಿಪಾದಿಸುವ ಅವರ ಕೆಲವು ಸುಂದರವಾದ ವಚನಗಳನ್ನು ಆರಿಸಿ ಸೇರಿಸಬಹುದಿತ್ತು—ಎನಿಸುತ್ತದೆ.

ಶ್ರೀ ಎಸ್. ಎಸ್. ಬಾಣದ ಅವರ, "ಷಣ್ಮುಖ ಶಿವಯೋಗಿಗಳು ಮಾಡಿದ ಆದಿಜನರ ಉದ್ಧಾರ" ಎಂಬ ಲೇಖನದ ಬಹುಭಾಗ, ಕನ್ನಡ ಕವಿಗಳು ಮಾಡಿರುವ ಕುಲದ ಮೀಮಾಂಸೆಗೆ ಮೀಸಲಾಗಿದೆ. ಆದಿಜನರನ್ನು ಮೇಲೆತ್ತಲು ಷಣ್ಮುಖ ಶಿವ ಯೋಗಿಗಳು ಕೈಕೊಂಡ ಪ್ರಾಯೋಗಿಕವಾದ ಪ್ರಯತ್ನವೇನೆಂಬುದನ್ನು ಅವರು ಹೇಳಿದ್ದರೆ ಲೇಖನ ಹೆಚ್ಚು ಪ್ರಭಾವಶಾಲಿಯಾಗಿರುತ್ತಿತ್ತು. ಕೊನೆಯಲ್ಲಿ ಅವರು ಹೇಳಿರುವ ಒಂದು ಪವಾಡವೂ ಸಹ ವಿಚಾರವಂತರ ಗಮನವನ್ನು ವಿಶೇಷವಾಗಿ ಸೆಳೆಯಲಾರದು.

ಡಾಕ್ಟರ್ ಹಿರೇಮಲ್ಲೂರ ಈಶ್ವರನ್ ಅವರ ಲೇಖನ "ಷಣ್ಮುಖ ಶಿವ ಯೋಗಿಗಳ ಧರ್ಮದೃಷ್ಟಿ" ಎಂಬುದು. ಲೇಖನ ಬಹಳ ಚಿಕ್ಕದಾದುದರಿಂದಲೋ ಏನೋ ಅವರ ಧರ್ಮದೃಷ್ಟಿಯನ್ನು ಸಂಪೂರ್ಣವಾಗಿ ತೋರಿಸಲಾರದೇ ಹೋಗಿದೆ. "ವಚನಗಳು ವೀರಶೈವ ಧರ್ಮದ ಬೇಕು ಬೇಡಗಳನ್ನು ವಿವರಿಸುವ ವಾಕ್ಕು ಗಳಾಗಿವೆ"—ಎಂದು ವಚನಗಳನ್ನು ಕುರಿತು ಅವರು ಹೇಳಿರುವ ಮಾತಿನ ಅರ್ಥ ವ್ಯಾಪ್ತಿ ಏನೆಂಬುದು ಸ್ಪಷ್ಟವಾಗುವುದಿಲ್ಲ. ಆದರೆ "ಕಲ್ಯಾಣದಲ್ಲಿ ಕ್ರಾಂತಿಯನ್ನು ಒಡಮೂಡಿಸಿದ ಶರಣರ ಕ್ರಿಯಾಶಕ್ತಿ, ಹಾಗೂ ಪ್ರೇರಕ ಶಕ್ತಿಗಳಾಗಲೀ ಷಣ್ಮುಖ ಸ್ವಾಮಿಗಳಲ್ಲಿರಲಿಲ್ಲ ಎಂಬುದನ್ನು ಅವರ ವಚನಗಳೇ ಸೂಚಿಸುವುವು" ಎಂದು ಮುಂತಾಗಿ ಹೇಳಿರುವ ವಿಮರ್ಶಾತ್ಮಕವಾದ ಮಾತುಗಳು ಒಪ್ಪುವಂತಿವೆ.

"ನಾನು ಕಂಡ ಶ್ರೀ ಷಣ್ಮುಖ ಶಿವಯೋಗಿಗಳ ಮಹಾಸ್ಥಾನ" ಎಂಬ ಲೇಖನದಲ್ಲಿ ಶ್ರೀ ಸಿದ್ದಯ್ಯ ಕಡಗಂಚಿಯವರು ಜೇವರಿಗಿಯಲ್ಲಿರುವ ಶಿವಯೋಗಿಗಳ ಮಠವನ್ನೂ ಮತ್ತು ಸುತ್ತಮುತ್ತಲಿನ ಪರಿಸರವನ್ನೂ ಪರಿಚಯ ಮಾಡಿಕೊಟ್ಟಿದ್ದಾರೆ. ಶ್ರೀ ಹಂಜಿಯವರು ಶಿವಯೋಗಿಗಳ ಲೋಕಾನುಭವವನ್ನೂ, ಶ್ರೀ ಕಲ್ಯಾಣಪ್ಪ ಬ್ಯಾಳಿಯವರು, ಅವರ ಷಟ್‌ಸ್ಥಲ ಸಿದ್ಧಾಂತವನ್ನು ಮತ್ತು ಶ್ರೀ ಶಾಂತಯ್ಯ ಕೆಂಪಯ್ಯನ ಮಠ ಅವರು, ಆತ್ಮಜ್ಞಾನವನ್ನು ತಮ್ಮ ಲೇಖನಗಳಲ್ಲಿ ಪರಿಚಯ ಮಾಡಿಕೊಟ್ಟಿದ್ದಾರೆ.

ಅವರ ಸತಿಪತಿ ಭಾವದ ಭಕ್ತಿಯನ್ನು ಕುರಿತು ಶ್ರೀಮತಿ ಕುಮಾರಿ ಮಹಾಂತಮ್ಮ (ಶೈಲಜಾ) ಮತ್ತು ಶ್ರೀಮತಿ ಶಾಂತದೇವಿ ಮಾಳವಾಡ ಅವರ ಎರಡು ಲೇಖನಗಳಿವೆ. ಶ್ರೀಮತಿ ಶೈಲಜಾ ಅವರು ತಮ್ಮ ಮಾತುಗಳಲ್ಲಿ ಮಧುರ

ಭಕ್ತಿಯ ಪರಿಚಯವನ್ನು ಮಧುರವಾಗಿ ಮಾಡಿಕೊಟ್ಟಿದ್ದಾರೆ. ಶ್ರೀಮತಿ ಶಾಂತದೇವಿ ಮಾಳವಾಡ ಅವರು ಶಿವಯೋಗಿಗಳ ಸತಿಪತಿ ಭಾವವನ್ನು ವ್ಯಕ್ತ ಪಡಿಸುವ ಅನೇಕ ವಚನಗಳನ್ನು ಆರಿಸಿ ತಮ್ಮ ಲೇಖನವನ್ನು ಮಧುರತರ ಗೊಳಿಸಿದ್ದಾರೆ.

ಶ್ರೀ ಬಿ. ಸಿ. ಜವಳಿಯವರು ಬರೆದ "ಷಣ್ಮುಖ ಶಿವಯೋಗಿಗಳು ಮತ್ತು ಬುದ್ಧದೇವನು ಸಾರಿದ ಸಂದೇಶ" ಎಂಬ ಲೇಖನ ಗಮನಾರ್ಹವಾದುದಾಗಿದೆ. ಇವರಿಬ್ಬರ ಸಂದೇಶಗಳಲ್ಲಿರುವ ಸಾಮ್ಯ, ವೈಷಮ್ಯವನ್ನು ವ್ಯಕ್ತಪಡಿಸಲು ವಿಶೇಷ ವಾಗಿ ಪ್ರಯತ್ನಿಸಿದ್ದಾರೆ. ಲೇಖನ ತಕ್ಕಮಟ್ಟಿಗೆ ದೀರ್ಘವಾಗಿದ್ದರೂ, ವಿಷಯ ನಿರೂಪಣೆ ಸ್ಪಷ್ಟವಾಗಿಲ್ಲ. ಅವರ ಕೆಲವು ಹೇಳಿಕೆಗಳ ಅರ್ಥವನ್ನು ಅರಿಯುವುದು ಕಷ್ಟವಾಗುತ್ತದೆ. ಉದಾಹರಣೆಗೆ: "ಇದು (ಕರ್ನಾಟಕ) ದಕ್ಷಿಣಾಪಥ ಮತ್ತು ಉತ್ತರ ಹಿಂದುಸ್ಥಾನದ ಮಧ್ಯದಲ್ಲಿದ್ದುದರಿಂದ ದಕ್ಷಿಣದ ಶೈವಭಕ್ತಿ ಮತ್ತು ಉತ್ತರದ ಆರ್ಯಧರ್ಮದ ಭಕ್ತಿ ಇವುಗಳ ಸಂಗಮಸ್ಥಾನವಾದುದರಿಂದ ಭೌಗೋಲಿಕ ವಾಗಿಯೂ ಮಹತ್ವದ ಸ್ಥಾನವಿದೆ." ಎಂಬುದನ್ನು ನೋಡಬಹುದು. ಇನ್ನೊಂದು ಕಡೆ: "ಸಾಂಪ್ರದಾಯಗಳ ವಿರುದ್ಧ ಬುದ್ಧದೇವನ ತರುವಾಯ ದಕ್ಷಿಣ ಹಿಂದು ಸ್ಥಾನದಲ್ಲಿ ನಡೆದ ಈ ಬಂಡು ೧೨ನೇ ಶತಮಾನದಲ್ಲಿ ಬಸವಣ್ಣನವರ ಮುಖಂಡತ್ವ ದಲ್ಲಿ ಶಿವಶರಣರಿಂದೊಡಗೂಡಿ ನಡೆದುಹೋಯಿತು. ಅದನ್ನೇ ನಾವು ಲಿಂಗಾಯಿತ ಧರ್ಮವೆಂದು ಕರೆಯುತ್ತೇವೆ" ಎಂದಿದ್ದಾರೆ. ಆದರೆ ಲಿಂಗಾಯಿತ ಧರ್ಮದ ತಾತ್ವಿಕ ತಳಹದಿಯಮೇಲೆ 'ಬಂಡು' ನಡೆಯಿತೇ ಹೊರತು ಆ 'ಬಂಡ'ನ್ನೇ ಲಿಂಗಾಯಿತ ಧರ್ಮ ಎಂದು ಕರೆಯುವುದಿಲ್ಲ. ಮುಂದೆ ಸಾಮಾಜಿಕ, ನೈತಿಕ, ತಾತ್ವಿಕ ವಿಭಾಗಗಳನ್ನು ಮಾಡಿ ಇವರಿಬ್ಬರ ಸಂದೇಶವನ್ನು ಸಾರಿದ್ದಾರೆ. ಅಂತೂ ಅವರ ಈ ಗಹನವಾದ ಪ್ರಯತ್ನ ಮತ್ತು ಶ್ರಮ ಸ್ತುತ್ಯಾರ್ಹ.

ಅನಂತರ ಶ್ರೀ ಎಂ. ಜಿ. ಬೀರಾದಾರರು 'ಅಖಂಡೇಶ್ವರ ವಚನ ಶಾಸ್ತ್ರ'ದಲ್ಲಿ ಕಂಡುಬರುವ ಸಮಾಜ ರಚನೆಯನ್ನು ಪರಿಚಯ ಮಾಡಿಕೊಟ್ಟಿದ್ದಾರೆ. ಶ್ರೀ ಸಿದ್ದಯ್ಯ ಪುರಾಣಿಕ ಅವರು "೧೭ನೇ ಶತಮಾನದ ಕನ್ನಡ ಸಾಹಿತ್ಯದಲ್ಲಿ ಷಣ್ಮುಖ ಶಿವಯೋಗಿಗಳ ಸ್ಥಾನ" ನಿರ್ದೇಶನವನ್ನು ಮಾಡಿದ್ದಾರೆ. ಶ್ರೀ ಬ. ಮು. ಬಾಗೋಜಿಯವರು ಬಸವಣ್ಣ ಮಹಾದೇವಿಯಕ್ಕ ಇವರ ವಚನಗಳಿಗೂ, ಷಣ್ಮುಖ ಶಿವಯೋಗಿಗಳ ವಚನಗಳಿಗೂ ಸಮನ್ವಯವನ್ನು ಸಾಧಿಸಿ ತೋರಿಸಿದ್ದಾರೆ. ಶ್ರೀ ಜ.ಚ.ನಿ. ಅವರ ಲೇಖನ ಅಖಂಡೇಶ್ವರ ವಚನಗಳ ಅಕೃತ್ರಿಮ ಕಾವ್ಯಕಲೆಯನ್ನು ಚಿತ್ರಿಸಿದೆ. ಶ್ರೀ ವಿ. ಶಿವಾನಂದ ಅವರು ಈ ವಚನಗಳಲ್ಲಿ ಕಂಡು ಬರುವ ಲೋಕೋಕ್ತಿಗಳನ್ನು ಕುರಿತು ಬರೆದಿದ್ದಾರೆ.

ಶ್ರೀ ಶ್ರೀಪತಿ ಆನಂದರಾವ್ ಸರ್ನಾಡ ಅವರು ಅಖಂಡೇಶ್ವರ ವಚನಗಳನ್ನು ಉಪನಿಷತ್ತಿನೊಡನೆ ಹೋಲಿಸಿದ್ದರೆ, ಶ್ರೀ ಮ. ನಿ. ಪ್ರ. ಮೃತ್ಯುಂಜಯ

ಮಹಾಸ್ವಾಮಿಗಳು ಅದನ್ನು ಗೀತೆಯೊಡನೆ ತುಲನಾತ್ಮಕವಾಗಿ ನೋಡಿದ್ದಾರೆ. ಡಾ|| ರಂ. ಶ್ರೀ. ಮುಗಳಿಯವರು ಶಿವಯೋಗಿಗಳ ಕಾಯಕ ಜೀವನವನ್ನೂ ಶ್ರೀ ಮ. ನಿ. ಪ್ರ, ಶಾಂತಲಿಂಗಸ್ವಾಮಿಗಳವರು ಅವರ ಮಹಾಬೆಳಗನ್ನೂ ಬೆಳಗಿಸಿ ತೋರಿಸಿದ್ದಾರೆ. 'ಅಖಂಡೇಶ್ವರನ ವಚನಗಳಲ್ಲಿ ಜೀವನದ ಸಾರ್ಥಕತೆ'ಯನ್ನು ಶ್ರೀ ಸಿಂಪಿ ಲಿಂಗಣ್ಣನವರೂ, 'ಷಣ್ಮುಖಶಿವಯೋಗಿಗಳ ವಿಶ್ವಹಿತ ಚಿಂತನೆಯ ದೃಷ್ಟಿ'ಯನ್ನು ಶ್ರೀ ಅ. ಕೃ. ರಾಮೇಶ್ವರರೂ ಗುರುತಿಸಿದ್ದಾರೆ.

ಈ ಲೇಖನಗಳಲ್ಲದೆ ಶ್ರೀ ಷಡಕ್ಷರಿ ಕವಿಗಳು ಎಂಬುವವರಿಂದ ಶಿವಯೋಗಿಗಳ 'ನುತಿಪಂಚಕ'ವೂ, ಶ್ರೀ ಜ. ಶ್ರೀ. ಜ. ಅವರಿಂದ 'ಗುರುಮೂರ್ತಿಗೆ' ಮತ್ತು ಶ್ರೀ ವಿ. ಶಿವಾನಂದ ಅವರಿಂದ 'ದಿನವೊಂದು ಜೋಗಿಕೊಳ್ಳದಲಿ' ಎಂಬ ಕವನ ಗಳೂ ಕೊನೆಯಲ್ಲಿ ಶ್ರೀ ಹೆಚ್. ಜಿ. ಕಟ್ಟಿ ಅವರಿಂಧ ಪ್ರಾರ್ಥನೆಯೂ ಇವೆ. ಶ್ರೀ ಪಂಚಾಕ್ಷರಿ ಗವಾಯಿಗಳು ಅಖಂಡೇಶ್ವರ ವಚನಗಳಲ್ಲಿ ಐದನ್ನು ಆರಿಸಿ ಸಂಗೀತಕ್ಕೆ ಅಳವಡಿಸಿ ತೋರಿಸಿದ್ದಾರೆ. ಮತ್ತು ಶ್ರೀ ಎಸ್. ಆರ್. ಬೀರಾದಾರ ಅವರು ಐದು ವಚನಗಳನ್ನು ಇಂಗ್ಲೀಷಿಗೂ, ಶ್ರೀ ರಂಗನಾಥರಾವ್ ಅವರು ಐದು ವಚನ ಗಳನ್ನು ಹಿಂದಿಗೂ ಅನುವಾದಮಾಡಿ ಕೊಟ್ಟಿದ್ದಾರೆ. ಹೀಗೆ ಬಹುಮುಖವಾಗಿರುವ ಲೇಖನಗಳನ್ನು ಸಂಗ್ರಹಿಸಿ ಕೊಟ್ಟಿರುವ ಸಂಪಾದಕರ ಶ್ರಮ ಮೆಚ್ಚತಕ್ಕದ್ದು.

ದೂರದ ಜ್ಞಾನಜ್ಯೋತಿಯನ್ನು ಸಮರ್ಪಕವಾಗಿ ಕಾಣುವುದಕ್ಕಾಗಿ ನಿರ್ಮಿತವಾದ 'ದೂರದರ್ಶಕ ಯಂತ್ರ'ವೆಂದು ಈ ಗ್ರಂಥವನ್ನು ಸಂಪಾದಕರು ಕರೆದಿದ್ದಾರೆ. ಈ ಯಂತ್ರವನ್ನು ನಿರ್ಮಿಸುವುದಕ್ಕಾಗಿ ೧೯೫೬ರಲ್ಲಿ ಸಂಶೋಧಕರ ಕೇಂದ್ರವನ್ನು ಸ್ಥಾಪಿಸಲಾಯಿತೆಂದೂ, ಅಂದಿನಿಂದ ಸುಮಾರು ಐದಾರು ವರ್ಷಗಳ ಕಾಲ ನಡೆದ ಸಂಶೋಧನೆಯು ಜ್ಯೋತಿರ್ಮಂಡಲದ ನಾನಾ ಸ್ವರೂಪವನ್ನು ಕಂಡುಹಿಡಿದು ಅದು ಈ ರೂಪದಲ್ಲಿ ಪ್ರಕಟವಾಯಿತೆಂದೂ ಹೇಳಿಕೊಂಡಿದ್ದಾರೆ. ಸಂಪಾದಕರ ಈ ಉನ್ನತ ಆದರ್ಶ ಮತ್ತು ಅದನ್ನು ಸಾಧಿಸುವ ಮಹತ್ವಾಕಾಂಕ್ಷೆಗಳು ಅಭಿನಂದನೀಯವಾದವುಗಳೆಂಬುದರಲ್ಲಿ ಸಂದೇಹವಿಲ್ಲ. ಆದರೆ ಇಷ್ಟೊಂದು ವ್ಯವಸ್ಥಿತವಾದ ರೀತಿಯಲ್ಲಿ ನಿರ್ಮಿತವಾದ 'ದೂರದರ್ಶಕ ಯಂತ್ರ' ಇನ್ನೂ ಹೆಚ್ಚು ಸೂಕ್ಷ್ಮಗ್ರಾಹಿಯಾಗಿಯೂ ದೂರಗ್ರಾಹಿಯಾಗಿಯೂ ಇರಬಹುದಾಗಿತ್ತು ಎನಿಸುತ್ತದೆ. ಅಲ್ಲದೆ ಅಚ್ಚಿನ ದೋಷಗಳೂ, ಅಶುದ್ಧ ಪ್ರಯೋಗಗಳೂ ಇಂತಹ ಗ್ರಂಥಗಳಲ್ಲಿ ಹೆಚ್ಚಾಗಿ ಬರದಂತೆ ಎಚ್ಚರಿಕೆ ವಹಿಸಬೇಕಾದುದು ಆವಶ್ಯಕ. 'ಅವಶ್ಯಕತೆ' 'ಆಲಸ್ಯತೆ' 'ಜಾಡ್ಯತೆ' 'ಜನಪ್ರೀಯತೆ' 'ಶುಲಭ' 'ಸಿದ್ಧಾಂತ ಸಿಖಾಮಣಿ' 'ಭವಷ್ಯ'—ಇತ್ಯಾದಿ ದೋಷಗಳನ್ನು ಸುಲಭವಾಗಿ ತಪ್ಪಿಸಬಹುದಾ ಗಿದ್ದಿತು. ಇವೆಲ್ಲಾ ಗೌಣವಾದುವೆಂದು ಭಾವಿಸಬಹುದು. ಒಟ್ಟಿನಲ್ಲಿ ಷಣ್ಮುಖ ಶಿವಯೋಗಿಗಳ ಮೇಲೆ ಇಂತಹ ಒಂದು ಸ್ಮಾರಕ ಗ್ರಂಥವನ್ನು ತಂದುದು ನಿಜವಾಗಿಯೂ ಪ್ರಶಂಸನೀಯ. ಶಿವಯೋಗಿಗಳ ವಿಚಾರದಲ್ಲಿ ಆಸಕ್ತಿಯುಳ್ಳವ ರೆಲ್ಲರೂ ಓದಲೇಬೇಕಾದ ಗ್ರಂಥ ಈ 'ಜ್ಞಾನಜ್ಯೋತಿ'.

—ಹೆಚ್. ತಿಪ್ಪೇರುದ್ರಸ್ವಾಮಿ

ವಸ್ತುಕೋಶ

ಡಾ|| ರಂ. ಶ್ರೀ. ಮುಗಳಿ, ಎಂ.ಎ., ಬಿ.ಟಿ., ಡಿ.ಲಿಟ್., ಅವರು ೨೮-೧೨-೧೯೬೩ರಂದು ತುಮಕೂರಿನಲ್ಲಿರುವ ಸಿದ್ಧಗಂಗೆಯಲ್ಲಿ ನಡೆದ ನಲವತ್ತ ನಾಲ್ಕನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಾಡಿದ ಅಧ್ಯಕ್ಷ ಭಾಷಣದ ಮುಖ್ಯಾಂಶಗಳು.

"ಭಾರತೀಯ ಐಕ್ಯ ಇಂದಿನ ನಿತಾಂತ ಅಗತ್ಯ. ಭಾಷೆ–ಸಾಹಿತ್ಯ–ಸಂಸ್ಕೃತಿಗಳ ಮೂಲಕ ಈ ಐಕ್ಯವನ್ನು ಹೇಗೆ ಸಾಧಿಸಬೇಕೆಂಬುದು ನಮ್ಮ ಧ್ಯಾನ ವಿಷಯವಾಗಬೇಕು. ಧ್ಯಾನಕ್ಕೆ ಮೊದಲು ಧ್ಯೇಯದ ಮಹತ್ವ ತಿಳಿಯಬೇಕು. ಅಂತೆ ಈ ವಿಷಯವನ್ನು ಸ್ವಲ್ಪ ವಿಸ್ತರಿಸಲು ಬಯಸುತ್ತೇನೆ. ಭಾರತವು ಬಹು ದೊಡ್ಡ ದೇಶ. ತರತರದ ಜನವುಳ್ಳ ದೇಶ. ಇಂಥಲ್ಲಿಯೂ ಪ್ರಾಚೀನಕಾಲದಿಂದ ದ್ರಷ್ಟಾರರು ಭಾರತೀಯ ಐಕ್ಯವಷ್ಟೇ ಏಕೆ, ವಿಶ್ವದ ಐಕ್ಯದ ಸ್ವಪ್ನವನ್ನೂ ಕಂಡರು. "ಅವಿಭಕ್ತಂ ವಿಭಕ್ತೇಷು", ವಿವಿಧತೆಯಲ್ಲಿ ಏಕತೆ, ಇದು ಭಾರತೀಯ ಸಂಸ್ಕೃತಿಯ ಶ್ರೇಷ್ಠ ಆದರ್ಶವಾಯಿತು. ಧಾರ್ಮಿಕ ಜೀವನದಲ್ಲಿ, ತೀರ್ಥಯಾತ್ರೆಯ ಸಂಪ್ರದಾಯಗಳಲ್ಲಿ, ಕೆಲಮಟ್ಟಿಗೆ ಐಕ್ಯಸಾಧನೆಯೂ ನಡೆಯಿತು. ಜೊತೆಗೆ ಜನಾಂಗಿಕವಾದ ಮತ್ತು ರಾಜಕೀಯವಾದ ಸಂಘರ್ಷಗಳೂ ನಡೆದಿದ್ದುವು. ಪರಕೀಯರು ನುಗ್ಗಿ ಬಂದಾಗ ಭಾರತೀಯರ ಅನೈಕ್ಯ ಅವರಿಗೆ ಪಥ್ಯವಾಯಿತು. .... ನಮ್ಮ ದೇಶದ ಸ್ವಾತಂತ್ರ್ಯ, ನಮ್ಮ ಬುದ್ಧಿಯ ಸ್ವಾತಂತ್ರ್ಯ, ನಮ್ಮ ಆತ್ಮದ ಸ್ವಾತಂತ್ರ್ಯ ಎಲ್ಲವೂ ನಷ್ಟವಾಗುವುದರಲ್ಲಿದ್ದುವು. ಆದರೆ ನಾಡಿನ ಸುದೈವದಿಂದ ಭಾರತೀಯ ಚೈತನ್ಯ ಜಾಗೃತವಾಯಿತು. ಅದ್ಭುತ ತ್ಯಾಗ ಐಕ್ಯಗಳ ಬಲದಿಂದ ಹದಿನಾರು ವರ್ಷಗಳ ಹಿಂದೆ ಭಾರತವು ಸ್ವತಂತ್ರವಾಯಿತು. ಚಮತ್ಕಾರವೆಂದರೆ ಪರದಾಸ್ಯದ ಕಾಲ್ಕೆಳಗೆ ನರಳುತ್ತಿರುವ ಕಾಲದಲ್ಲಿ ಜಾಗೃತವಾದ ಸ್ವಾತಂತ್ರ್ಯದಾಹವು ಸ್ವತಂತ್ರ ಭಾರತದಲ್ಲಿ ಕಡಿಮೆಯಾಗುತ್ತ ನಡೆದಿದೆ. ನಾವು ಪರತಂತ್ರರಾಗಿದ್ದಾಗ ತೋರಿದ ಸ್ವಾತಂತ್ರ್ಯಪ್ರೇಮ ಮತ್ತು ಐಕ್ಯಭಾವ ನಾವು ಸ್ವತಂತ್ರರಾದ ಮೇಲೆ ಎಲ್ಲಿ ಹೋದುವು ? .... ಈ ಪರಿಸ್ಥಿತಿಯಲ್ಲಿ ಉತ್ತರದ ಆಕ್ರಮಣ ಎತ್ತರದಿಂದ ಬಂತು. ನಮಗೆ ಎಚ್ಚರು ಬಂತು, ನಾವು ಒಂದಾದೆವು. ಎಲ್ಲ ಬಗೆಯ ತ್ಯಾಗಕ್ಕೆ ಸಿದ್ಧರಾದೆವು. ಭಾರತಮಾತೆಯ ಮುಖದ ಮೇಲಿನ ತೆರೆಯನ್ನು ತೆಗೆದೊಗೆದಂತಾಯಿತು. ಮೂಲ ಸ್ವರೂಪದ ದರ್ಶನವಾಯಿತು. ಆದರೆ ಆ ತೆರೆ ಮತ್ತೆ ಆವರಿಸಿದೆ. .... ಇಂಥ ಸಮಯದಲ್ಲಿ ಭಾರತೀಯ ಐಕ್ಯದ ಮಹತ್ವವನ್ನು ಅರಿತುಕೊಂಡು ಅದನ್ನು ಸಾಧಿಸುವುದು ಹೇಗೆ? ಸ್ಥಿರಗೊಳಿಸುವುದು ಎಂತು? ಈ ಬಗ್ಗೆ ನಾವೆಲ್ಲ ಗಂಭೀರವಾಗಿ ಆಲೋಚಿಸಬೇಕಾಗಿದೆ. ಸಾಹಿತ್ಯ ಸಮ್ಮೇಲನದ ಸಂದರ್ಭಕ್ಕೆ

ಅನುಗುಣವಾದ ರೀತಿಯಲ್ಲಿ ನನಗೆ ತಿಳಿದಿರುವ ಕೆಲವು ಐಕ್ಯ ಸಾಧಕವಾದ ಮನೋಭಾವಗಳನ್ನೂ ಕ್ರಮಗಳನ್ನೂ ಸೂಚಿಸ ಬಯಸುತ್ತೇನೆ.

೧. ದೇಶಾಭಿಮಾನ ಮತ್ತು ಭಾಷಾಭಿಮಾನ ಇವುಗಳ ತಿಕ್ಕಾಟವನ್ನು ತಪ್ಪಿಸುವುದು ಮಾತ್ರವಲ್ಲ, ಇವುಗಳ ಸಮತೂಕ, ವಿವೇಕ ನಮ್ಮ ತಿಳಿವಳಿಕೆಯ ಮತ್ತು ದೈನಂದಿನ ಜೀವನದ ಅವಶ್ಯಭಾಗವಾಗುವಂತೆ ನಾವು ಬಾಳಲು ಕಲಿಯಬೇಕು. ಭಾರತೀಯ ಹಿತದ ಶ್ರುತಿಯಲ್ಲಿ ಪ್ರತಿಯೊಬ್ಬ ಭಾರತೀಯನೂ ತನ್ನ ಜೀವನ ಸಂಗೀತವನ್ನು ನಡೆಸುತ್ತಿರಬೇಕು....ನಂನಮ್ಮ ಭಾಷೆಯ ವಿಷಯದಲ್ಲಿ ನಿರಭಿಮಾನವೂ ಸಲ್ಲದು, ದುರಭಿಮಾನವೂ ಸಲ್ಲದು, ಸದಭಿಮಾನವಿರಬೇಕು. ಈ ಸದಭಿಮಾನವು ನಮ್ಮ ಭಾಷೆಯ ಸಾಹಿತ್ಯ ಸಂಸ್ಕೃತಿಗಳ ಜ್ಞಾನದಿಂದ ಪ್ರೇರಿತವಾಗಿದ್ದಿರಬೇಕು, ಕೇವಲ ಭಾವನೆಯ ಗುರುಳೆಯ ಮೇಲೆ ಕಟ್ಟಿದ ಗಾಳಿಗೋಪುರವಾಗಬಾರದು. ಮಾತೃಭಾಷೆ, ಪ್ರಾದೇಶಿಕ ಭಾಷೆ ಇವು ಯಾರಿಗೂ ಜನ್ಮಜಾತವಾಗಿ ಬರುವುದಿಲ್ಲ. ಅವರವರ ಹುಟ್ಟಿನ ಪರಿಸರದಲ್ಲಿ, ಬೆಳೆದ ಆವರಣದಲ್ಲಿ, ಇವು ಅಭಿವ್ಯಕ್ತಿಯ ಸಾಧನಗಳಾಗಿ ಲಭಿಸುತ್ತವೆ. ಇವುಗಳ ವಿಷಯದಲ್ಲಿ ಅತಿರೇಕದ ಅಭಿಮಾನ ಅಸ್ಮಿತೆಗಳು—ವ್ಯಕ್ತಿಗೂ ದೇಶಕ್ಕೂ ಬಾಧಕವಾಗುತ್ತವೆ. ....ಭಾಷಾಭಿಮಾನದ ಅತಿರೇಕದಿಂದ ಕೆಲವೊಂದು ಸಲ ನಾವು ರಕ್ತದಲ್ಲಿಯೂ ಭಾಷಾಭೇದವನ್ನು ಕಾಣುತ್ತೇವೆ. ರಕ್ತ ಪದದಲ್ಲಿಯ ಲಾಕ್ಷಣಿಕ ಅರ್ಥವನ್ನು ತಿಳಿದುಕೊಳ್ಳಲಾಗದ ಜನವು ಬೇರೆತನದ ಹುಚ್ಚು ಹೊಕ್ಕು ನೆಲದಮೇಲೆ ನಿಜವಾದ ರಕ್ತವನ್ನು ಸುರಿಸಿಯಾರು ಎಂಬುದನ್ನು ಅರಿಯುವ ಎಚ್ಚರ ನಮ್ಮಲ್ಲಿ ಬರಬೇಕು. ಅದೇ ರೀತಿ, ನಮ್ಮ ಭಾಷೆ ಶ್ರೇಷ್ಠ, ಇತರರ ಭಾಷೆ ಕನಿಷ್ಠ ಎಂಬ ಹುಸಿ ಹೆಮ್ಮೆಯೂ ಅಷ್ಟೇ ಅಪಾಯಕಾರಿಯಾದುದು. .... ಇತರ ಭಾಷೆಗಳಲ್ಲಿಯ ಒಳ್ಳೆಯ ಸಾಹಿತ್ಯಕ್ಕೆ ನಮ್ಮ ರಸಿಕತೆ ಹಾತೊರೆಯಬೇಕು, ಒಳ್ಳೆಯ ವಿಚಾರಕ್ಕೆ ನಮ್ಮ ಬುದ್ಧಿ ಆತುರವಾಗಬೇಕು. ಕನಿಷ್ಠಪಕ್ಷಕ್ಕೆ, ತನಗೆ ಗೊತ್ತಿಲ್ಲದ ಭಾಷೆ ಮತ್ತು ಸಾಹಿತ್ಯಗಳ ಬಗ್ಗೆ ಯಾರೂ ಅವಹೇಳನೆಯ ಮಾತುಗಳನ್ನಾಡಬಾರದು. ಅಜ್ಞಾನಜನ್ಯವಾದ ಅಹಂಮನ್ಯತೆ ಮತ್ತು ಇತರರ ನಿಂದೆ ಭಾರತೀಯರಲ್ಲಿ ಬೆಳೆಯುತ್ತ ಹೋದರೆ ಅದರಲ್ಲಿಯ ಒಕ್ಕಟ್ಟು ಕೊನೆಯವರೆಗೆ ಬಿಕ್ಕಟ್ಟೇ ಆಗಿ ಉಳಿದೀತು!

೨. ಭಾರತೀಯ ಐಕ್ಯಕ್ಕೆ ಪೋಷಕವಾದ ವಿಚಾರ ಪ್ರಧಾನ ಮತ್ತು ಸ್ಫೂರ್ತಿ ಪ್ರಧಾನ ಕೃತಿಗಳನ್ನು ಲೇಖಕರು ರಚಿಸಬೇಕು, ವಾಚಕರು ವಾಚಿಸಬೇಕು. ಇಂಥ ಲೇಖನವು ಒಳಗಿನ ಒತ್ತಾಸೆಯಿಂದ ಉಕ್ಕಿ ಬರಬೇಕು, ಹೊರಗಿನ ಒತ್ತಡದಿಂದಲ್ಲ. ∴ ಜಾಜ್ವಲ್ಯಮಾನವಾದ ರಾಷ್ಟ್ರಪ್ರೇಮ, ವಿಶಾಲವಾದ ಆಳವಾದ ಅನುಭವ ಮತ್ತು ವಿಚಾರ ಸಂಪತ್ತಿ, ಭಾರತೀಯ ಸಂಸ್ಕೃತಿಯ ಸಾಕಲ್ಯ ಪರಿಚಯ, ಭಾರತೀಯನಾಗಿ ಬಾಳಬೇಕೆಂಬ ಹವ್ಯಾಸ, ಮುಖ್ಯವಾಗಿ ಪರಿಪಕ್ವವಾದ ಪ್ರತಿಭೆ ಇವಿಲ್ಲದೆ ಇಂಥ ಕೃತಿಗಳು ನಿರ್ಮಾಣವಾಗಲಾರವು.

೩. ಪ್ರತಿಯೊಂದು ಭಾಷೆಯಲ್ಲಿಯ ಒಳ್ಳೆಯ ಕೃತಿಗಳು ಎಲ್ಲ ಇತರ ಭಾಷೆಗಳಲ್ಲಿ ಸಮರ್ಪಕವಾದ ಭಾಷಾಂತರವಾಗಿ ಭಾರತೀಯ ಸಾಹಿತ್ಯದ ಸಮಗ್ರ ದರ್ಶನವು ಎಲ್ಲರಿಗೆ ದೊರೆಯಬೇಕು....ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ವಿದ್ಯಾರ್ಥಿಗಳು ಓದುವ ಪಠ್ಯ ಮತ್ತು ಪಠ್ಯೇತರ ಪುಸ್ತಕಗಳಲ್ಲಿ ಎಲ್ಲ ಭಾಷೆಗಳಲ್ಲಿಯ ಉತ್ತಮ ಕವಿಗಳ ಮತ್ತು ಅವರ ಕೃತಿಗಳ ರಸಪೂರ್ಣ ಪರಿಚಯಗಳು ಬರಬೇಕು. ಅವು ಹೊಸ ಕಣ್ಣನ್ನು ತೆರೆಯಿಸಬೇಕು, ಹೊಸ ಹೆಮ್ಮೆಯನ್ನು ಅರಳಿಸಬೇಕು. ಭಾರತೀಯನ ನವೀನ ವ್ಯಕ್ತಿತ್ವದ ನಾಂದಿಯಾಗಬೇಕು ಅವು.

೪. ಇವೆಲ್ಲ ಕ್ರಮಗಳೊಡನೆ ಸಾಹಿತ್ಯ ಸಂಬಂಧಿಯಲ್ಲದ ಬೇರೆ ಕಾರ್ಯಗಳೂ ಐಕ್ಯಕ್ಕೆ ಪೋಷಕವಾಗಿ ನಡೆಯುವುದು ಆವಶ್ಯಕ. ಈ ದೃಷ್ಟಿಯಿಂದ, ಜನರ ಮನಸ್ಸನ್ನು ಒಡೆಯುವ ಮತ್ತು ಐಕ್ಯಕ್ಕೆ ಭಂಗ ತರುವ ರಾಜಕೀಯ, ಸಾಮಾಜಿಕ, ಆರ್ಥಿಕ ಮುಂತಾದ ಎಲ್ಲ ರಂಗಗಳಲ್ಲಿಯ ಸಮಸ್ಯೆಗಳನ್ನು ಸಣ್ಣ ಪುಟ್ಟವೆಂದು ಅಲ್ಲಗಳೆಯದೆ ನಾಡಿನ ಧುರೀಣರು ಸಮಂಜಸವಾದ ರೀತಿಯಲ್ಲಿ ಬಗೆಹರಿಸಬೇಕು.

೫. ಶಿಕ್ಷಣದ ಎಲ್ಲ ಹಂತಗಳಲ್ಲಿ ಐಕ್ಯಸಾಧಕ ಕ್ರಮಗಳನ್ನು ಕೈಕೊಂಡು ಹೊಸ ಪೀಳಿಗೆಯ ವ್ಯಕ್ತಿತ್ವದಲ್ಲಿ ಭಾರತೀಯತ್ವವನ್ನು ಸ್ಥಿರಗೊಳಿಸಲು ಯತ್ನಿಸಬೇಕಾಗಿದೆ. ನಮ್ಮ ಭಾರತೀಯ ಐಕ್ಯದ ಭಾವನೆ ವಿಚಾರದ ಗಟ್ಟಿ ತಳಹದಿಯ ಮೇಲೆ ನಿಲ್ಲುವಂತೆ ಭಾರತೀಯ ಇತಿಹಾಸ, ಪರಂಪರೆ, ಭಾಷೆ, ಸಾಹಿತ್ಯ—ಇವುಗಳ ವೈವಿಧ್ಯದ ಮತ್ತು ಅವುಗಳಲ್ಲಿ ಅನುಸ್ಯೂತವಾದ ಐಕ್ಯದ ದರ್ಶನವನ್ನು ಜನಕ್ಕೆ ಮಾಡಿಕೊಡಬೇಕಾಗಿದೆ. ವಿಚಾರ ಮತ್ತು ತರ್ಕಗಳಿಗೆ ಒಪ್ಪಿಗೆಯಾಗದ ಭಾವನೆ ಸುಸ್ಥಿರವಾಗಿ ನಿಲ್ಲಲಾರದು, ಬೆಳೆಯಲಾರದು.

ಭಾರತೀಯ ಐಕ್ಯಸಾಧನೆಗಾಗಿ ನಮ್ಮ ಭಾಷೆಗಳ ವಿಷಯದಲ್ಲಿ ಒಂದು ಸಮಂಜಸವಾದ ವಿಚಾರ ಪ್ರಣಾಲಿ ಮತ್ತು ಧೋರಣೆ ಆವಶ್ಯಕವಾಗಿವೆ... ಹಿಂದಿಯ ಬಗ್ಗೆ ಉತ್ತರದವರ ದುಡುಕು, ಅದರಿಂದ ದಕ್ಷಿಣದವರಿಗೆ ಆದ ಮಿಡುಕು, ಇದರಿಂದ ಭಾರತದ ಒಡಕು ಎದ್ದು ಕಾಣುವಂತಾಗಿದೆ. ಇಂಗ್ಲೀಷೇ ರಾಷ್ಟ್ರೀಯ, ಅಂತರರಾಷ್ಟ್ರೀಯ ಸೌಕರ್ಯ ದೃಷ್ಟಿಯಿಂದ ರಾಷ್ಟ್ರಭಾಷೆಯಾಗಲಿ ಎಂದು ಪ್ರತಿಪಾದಿಸುವ ವಿಚಾರವಂತರಿದ್ದಾರೆ. ಸಂಸ್ಕೃತವು ಈ ಸ್ಥಾನಕ್ಕೆ ಅತ್ಯಂತ ಯೋಗ್ಯವೆಂದು ಗಂಭೀರವಾಗಿ ಸಾಧಿಸುವವರಿದ್ದಾರೆ... ಇಂಗ್ಲೀಷು ಎಷ್ಟೇ ಪ್ರಗತ ಭಾಷೆಯಾದರೂ ಈ ದೇಶದ ಸರ್ವಜನದಲ್ಲಿ ಅದು ಬೇರುಬಿಡಲಾರದು. ಹಿಂದೀ ಇದು ಬರೀ ಒಂದು ಪ್ರಾದೇಶಿಕ ಭಾಷೆಯಲ್ಲ. ಅಂತರ್ ರಾಜ್ಯ ವ್ಯವಹಾರಕ್ಕೆ ಅದನ್ನು ಭಾರತದ ಅನೇಕ ಭಾಗಗಳಲ್ಲಿ ಬಳಸುತ್ತಿದ್ದಾರೆ. ಈ ದೃಷ್ಟಿಯಿಂದ ಅದು ನಮ್ಮ ರಾಷ್ಟ್ರಭಾಷೆಯೆಂಬ ನಿರ್ಣಯವು ಯೋಗ್ಯವಾಗಿದೆ. ಎರಡು ಮಾತ್ರ ಪಥ್ಯಗಳನ್ನು ಪಾಲಿಸಬೇಕು. ಒಂದು, ಇತರ ಪ್ರಾದೇಶಿಕ ಭಾಷೆಗಳಿಂದ ಶಬ್ದಗಳನ್ನೂ ಪ್ರಯೋಗಗಳನ್ನೂ ಅವಶ್ಯ ಕಂಡಲ್ಲಿ ಸೇರಿಸಿ ಅದನ್ನು ರಾಷ್ಟ್ರೀಯ

ಯೋಗ್ಯತೆಯ ನವಹಿಂದಿಯನ್ನಾಗಿ ಬೆಳೆಸಬೇಕು. ಎರಡು, ಭಾರತೀಯರಿಗೆಲ್ಲ ವಿಶೇಷವಾಗಿ ಅಹಿಂದೀ ಭಾಷಿಕರಿಗೆ ಗ್ರಾಹ್ಯವಾಗುವವರೆಗೆ ಅದನ್ನು ಕಡ್ಡಾಯವಾಗಿ ಕಾಯಿದೆಯಿಂದ ಒತ್ತಾಯಿಸಕೂಡದು. ಹಿಂದಿ ಮತ್ತು ಇಂಗ್ಲಿಷು ಇವೆರಡೂ ಕೆಲಕಾಲ ಲೋಕಸಭೆಯ ಮತ್ತು ಅಂತರ್ ರಾಜ್ಯ ವ್ಯವಹಾರದ ಭಾಷೆಯಾಗಿರಲಿ ಎಂಬ ನಿರ್ಣಯವು ಸಮಂಜಸವೆಂದು ತೋರುತ್ತದೆ; ಪ್ರಾದೇಶಿಕ ಭಾಷೆ, ಹಿಂದಿ, ಇಂಗ್ಲಿಷು ಈ ಮೂರು ಭಾಷೆಗಳನ್ನು ಎಲ್ಲ ಭಾರತೀಯ ವಿದ್ಯಾರ್ಥಿಗಳು ಬೇರೆ ಬೇರೆ ಮಟ್ಟದಲ್ಲಿ ಕಲಿಯಲೇಬೇಕೆಂಬುದು ತ್ರಿಭಾಷಾ ನಿಯಮದ ಅರ್ಥ, . . . ಒಟ್ಟಿನಲ್ಲಿ ನಮ್ಮ ಶಿಕ್ಷಣಪದ್ಧತಿಯಲ್ಲಿ ಭಾಷಾಭ್ಯಾಸದ ವ್ಯವಸ್ಥೆಯನ್ನು ಈ ರೀತಿ ಮಾಡುವುದರಿಂದ ಭಾಷಾ ವಿಷಯಕ ಸಂಘರ್ಷಗಳು 'ಅಳಿದು' ಸ್ನೇಹ ಸೌಹಾರ್ದಗಳು ಬೆಳೆದು ರಾಷ್ಟ್ರೀಯ ಐಕ್ಯಕ್ಕೆ ಬೇಕಾದ ವಾತಾವರಣವು ಉಂಟಾದೀತು ಎಂಬುದೇ ನಮ್ಮ ಮುಖ್ಯ ಮನೋಭಾವ.

ದೇಶಕ್ಕೆಲ್ಲ ಒಂದೇ ಲಿಪಿಯಿರಬೇಕು, ಅದರಿಂದ ಒಂದಕ್ಕಿಂತ ಹೆಚ್ಚು ಭಾಷೆಗಳನ್ನು ಕಲಿಯಲು ಸುಲಭವಾಗುತ್ತದೆ ಎಂಬುದನ್ನು ಹಲವು ವಿಚಾರವಂತರು ಹೇಳುತ್ತ ಬಂದಿದ್ದಾರೆ . . . ನನ್ನ ಮಟ್ಟಿಗೆ ಈ ಹವ್ಯಾಸವನ್ನು ಸದ್ಯಃ ಬಿಟ್ಟುಬಿಡುವುದು ಯುಕ್ತವೆಂದು ಕಾಣುತ್ತದೆ.

ರಾಷ್ಟ್ರೀಯ ಐಕ್ಯವು ಸುದೃಢವಾಗಬೇಕಾದರೆ ರಾಷ್ಟ್ರದ ಘಟಕಗಳಾದ ಪ್ರಾಂತಗಳು ತಂತಮ್ಮೊಳಗಿನ ಸಮಸ್ಯೆಗಳನ್ನು ರಾಷ್ಟ್ರೀಯ ಹಿತದೃಷ್ಟಿಯಿಂದ ಪರಿಹರಿಸಿಕೊಂಡು ಅನ್ಯೋನ್ಯ ಸ್ನೇಹ ಸಹಕಾರಗಳನ್ನು ಹೆಚ್ಚುಹೆಚ್ಚಾಗಿ ದೃಢಗೊಳಿಸಬೇಕು.

ಕರ್ನಾಟಕದ ಇಂದಿನ ಒಂದು ದುಃಖವೇನು? ಕರ್ನಾಟಕ ಪ್ರಾಂತವಾದರೂ ಆ ಹೆಸರಿನಿಂದ ಅದನ್ನು ಕರೆಯುವಂತಿಲ್ಲ. "ಹೆಸರಾಗಿಯೂ ಕೂಡ ಹೇಳ ಹೆಸರಿಲ್ಲ" ಎಂದು ಅಂಬಿಕಾತನಯದತ್ತರು ಮಾರ್ಮಿಕವಾಗಿ ಹೇಳಿದ ಮಾತು ಮರ್ಮಕ್ಕೆ ಹತ್ತುವಂತೆ ದಿಟವಾಗಿಬಿಟ್ಟಿತು . . . ನಿಜವಾಗಿ ಈ ಹೆಸರಿನ ಹಟದ ಹಿಂದೆ ಒಂದು ಭೀತಿಯಿದೆ, ರಾಜನೀತಿಯಿದೆ. ಇದನ್ನು ವಿಂಗಡಿಸಿ ನೋಡಿದರೆ ಕನ್ನಡಿಗರಲ್ಲಿಯ ಭಾವೈಕ್ಯವು ಕನ್ನಡಿಯೊಳಗಿನ ಗಂಟಾಗಿದೆ, ಈ ಸಮಸ್ಯೆ ಕಗ್ಗಂಟಾಗುತ್ತ ಹೊರಟಿದೆ ಎಂಬುದು ಎದ್ದು ಕಾಣುವಂತಿದೆ.

ಕನ್ನಡ ಸಂಸ್ಕೃತಿಯ ಸಮಗ್ರ ಸ್ವರೂಪದ ಜ್ಞಾನ, ಜ್ಞಾನ ಪೂರ್ವಕವಾದ ಸದಭಿಮಾನ, ಸದಭಿಮಾನದಿಂದ ಪ್ರೇರಿತವಾದ ನಡೆನುಡಿ–ಇದೇ ಕನ್ನಡಿಗರನ್ನು ಒಂದುಗೂಡಿಸುವ ಶಕ್ತಿ. ಈ ಶಕ್ತಿ ಸರ್ವವ್ಯಾಪಿಯಾಗಿ ಜನರಲ್ಲಿ ಜಾಗೃತವಾದರೆ, ನಾಡಿನ ತುಂಬೆಲ್ಲ ಮಿಂಚಿನಂತೆ ಹರಿದಾಡಿದರೆ ದೋಷಗಳನ್ನೆಲ್ಲ ಸಿಡಿಲಿನಂತೆ ಅದು ನಾಶಗೊಳಿಸುತ್ತದೆ, ಗುಣಗಳನ್ನೆಲ್ಲ ಬೆಳಕಿಗೆ ತರುತ್ತದೆ.

. . . ಕನ್ನಡ ಸಂಸ್ಕೃತಿಯ ಅಂಗವಾದ ಕನ್ನಡ ಸಾಹಿತ್ಯವನ್ನು ಕಣ್ಣಿಟ್ಟು

ನೋಡೋಣ. ಅದರಲ್ಲಿ ಚೆಲುವಾಗಿರುವುದನ್ನು ತಲೆಯ ಮೇಲಿಟ್ಟು ಕುಣಿಯೋಣ, ತಲೆಯೊಳಗೆ ಹಾಕಿಕೊಂಡು ಬಾಳೋಣ. ಆಗ ಕನ್ನಡ ಜನವನ್ನು ಒಂದುಗೊಳಿಸುವ ಮಹಾಶಕ್ತಿ ಈ ಸಾಹಿತ್ಯದಲ್ಲಿದೆ ಎಂಬುದರ ಅರಿವು ಬರುವುದು. ಸಾವಿರಾರು ವರ್ಷಗಳಿಂದ ಬೆಳೆದುಬಂದ ಈ ಕನ್ನಡ ಸಾಹಿತ್ಯವು ವಿಪುಲವೂ ವಿವಿಧವೂ ಆಗಿದೆ. ಎಲ್ಲ ಮತ ಪ್ರವಾಹಗಳು ಈ ಮಹಾನದಿಯಲ್ಲಿ ಬಂದು ಸೇರಿವೆ. ಇದರಲ್ಲಿ ಸಂಘರ್ಷವಿದೆ, ಅದನ್ನು ಮೀರಿದ ಸಮನ್ವಯವಿದೆ. ಮತೀಯ ಭಾಗವಿದೆ, ಮತಾತೀತ ಭಾಗವಿದೆ. ಮಾರ್ಗವಿದೆ, ದೇಸಿಯಿದೆ, ಸ್ಥಿತಿಯಿದೆ, ಗತಿಯಿದೆ, ಕ್ರಾಂತಿಯಿದೆ, ಶಾಂತಿಯಿದೆ. ಹೊಸಗನ್ನಡ ಸಾಹಿತ್ಯದಲ್ಲಿ ವೈವಿಧ್ಯವು ಇನ್ನೂ ಹೆಚ್ಚಿದೆ. ವ್ಯಕ್ತಿತ್ವವು ಇನ್ನೂ ಅರಳಿದೆ. ಎಲ್ಲ ಕನ್ನಡಿಗರು ಈ ಸಾಹಿತ್ಯದಲ್ಲಿಯ ಒಳ್ಳೆಯದನ್ನು ಓದಬೇಕು, ಸವಿಯಬೇಕು, ನುರಿಯಬೇಕು, ಅರಿಯಬೇಕು. ತಂತಮ್ಮ ಬಾಳಿನಲ್ಲಿ ಇದರಿಂದ ಸ್ಫೂರ್ತಿಯನ್ನು ಪಡೆಯಬೇಕು, ಬೆಳಕನ್ನು ಕಾಣಬೇಕು. ಕರ್ನಾಟಕದಲ್ಲಿ ಬೇರೆ ಕಡೆಗೆ ಇರುವಂತೆ ಜಾತಿ, ಮತ, ಪಂಥಗಳಿವೆ, ಬೇರೆ ಬೇರೆ ದೇಸಿಗಳಿವೆ, ಉಪಭಾಷೆಗಳಿವೆ; ಅವುಗಳ ವೈವಿಧ್ಯವನ್ನು ಕಳೆದುಕೊಳ್ಳಬೇಕಿಲ್ಲ, ಅದು ಶಕ್ಯವೂ ಅಲ್ಲ . . . . ಕನ್ನಡ ಕುಲ, ಕನ್ನಡ ಕುಟುಂಬ ಎಂಬ ಸದಭಿಮಾನವೇ ನಮ್ಮನ್ನು ಕೂಡಿಸಬಲ್ಲುದು. ಸ್ವತಂತ್ರಭಾರತದ ಪ್ರಭಾವಿಯಾದ ಅಂಗವಾಗಿ ಈ ಕನ್ನಡ ಕುಲವನ್ನು ನಾವು ಕಟ್ಟಬೇಕು. ಇದು ಯಾವ ಹೊಸ ಸಂಘರ್ಷಗಳನ್ನು ಹುಟ್ಟಿಸಬಾರದು, ಇದ್ದ ಸಂಘರ್ಷಗಳನ್ನು ಆರಿಸಬೇಕು. ಭೇದದಲ್ಲಿಯ ಅಭೇದವನ್ನು, ವೈವಿಧ್ಯದಲ್ಲಿಯ ಏಕತ್ವವನ್ನು ಸಾಧಿಸಬೇಕು. ' ಸಮರಸವೇ ಜೀವನ ' ಎಂಬ ಸಿದ್ಧಿಗೆ ವೀಳ್ಯವೆತ್ತಬೇಕು.

ಕರ್ನಾಟಕ ವಿದ್ಯಾವರ್ಧಕ ಸಂಘ, ತರುವಾಯ ಕನ್ನಡ ಸಾಹಿತ್ಯ ಪರಿಷತ್ತು ಈ ಸಂಸ್ಥೆಗಳು ಅತ್ಯಂತ ಪ್ರತಿಕೂಲವಾದ ಪರಿಸ್ಥಿತಿಯಲ್ಲಿ ಕನ್ನಡಿಗರನ್ನು ಒಂದುಗೂಡಿಸಲು ಮತ್ತು ಅವರ ಆಶೋತ್ತರಗಳನ್ನು ಮೂರ್ತಗೊಳಿಸಲು ಪ್ರಯತ್ನ ಮಾಡಿದವು. ಕರ್ನಾಟಕ ಪ್ರಾಂತವಾಗಬೇಕೆಂಬುದು ಅವು ಕಂಡ ಹಿರಿಗನಸುಗಳಲ್ಲಿ ಹಿರಿಯದಾಗಿತ್ತು. ಆ ಕನಸು ನನಸಾಗಿ ಕನ್ನಡನಾಡು ಒಂದಾಗಿರುವ ಸಂದರ್ಭದಲ್ಲಿ ಈ ಸಂಸ್ಥೆಗಳನ್ನೂ ಇವನ್ನು ಕಟ್ಟಿಲೆಸಗಿದ ಹಿರಿಯರನ್ನೂ ಇಂದಿಗೂ ಮನಃಪೂರ್ವಕವಾಗಿ ಸೇವೆ ಸಲ್ಲಿಸುತ್ತಿರುವ ಕಾರ್ಯಕರ್ತರನ್ನೂ ನಾವು ಅತ್ಯಂತ ಕೃತಜ್ಞತೆಯಿಂದ ವಂದಿಸಬೇಕು.

ಮೈಸೂರು ಸರಕಾರವು ಕನ್ನಡದ ಮುನ್ನಡೆಯ ದೃಷ್ಟಿಯಿಂದ ಕೆಲವು ಕಾರ್ಯಕ್ರಮಗಳನ್ನು ಕೈಕೊಂಡಿರುವುದಕ್ಕಾಗಿ ಅದನ್ನು ನಾವು ಹಾರ್ದಿಕವಾಗಿ ಅಭಿನಂದಿಸಬೇಕಾಗಿದೆ. ಮುಖ್ಯವಾಗಿ ಕನ್ನಡವು ಆಡಳಿತದ ಭಾಷೆಯಾಗಬೇಕೆಂದು ನಿರ್ಣಯವನ್ನು ಮಾಡಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲು ಸರಕಾರವು ಇತ್ತೀಚೆಗೆ ಮನಸ್ಸುಮಾಡಿದೆ. ಕರ್ನಾಟಕ ಪ್ರಾಂತರಚನೆಯ ಮೂಲಭೂತ

ತತ್ವದ ವಿಜಯವಿದು. . . .ಕನ್ನಡಿಗರಿಗೆ ಪ್ರಪಂಚದ ಅದ್ಯ ಯಾವತ್ತಾದ ಜ್ಞಾನವು ಕನ್ನಡದಲ್ಲಿ ದೊರೆಯಬೇಕು, ಅದರಿಂದ ಅವರು ಜ್ಞಾನಸಂಪನ್ನರಾಗಿ ಸ್ವತಂತ್ರ ವಿಚಾರಿಗಳಾಗಿ ತಮ್ಮ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಬೇಕು. ಕರ್ನಾಟಕಕ್ಕೆ ಮತ್ತು ಭಾರತಕ್ಕೆ ತಮ್ಮ ಕಾಣಿಕೆಗಳನ್ನು ಸಲ್ಲಿಸಬೇಕು. ಕರ್ನಾಟಕ ಪ್ರಾಂತ ರಚನೆಯಲ್ಲಿದ್ದ ಇನ್ನೊಂದು ಮೂಲಭೂತ ತತ್ವವಿದು. ಈವರೆಗೆ ಕನ್ನಡದಲ್ಲಿ ಜ್ಞಾನ-ವಿಜ್ಞಾನ ಸಾಹಿತ್ಯ, ವಿಚಾರ ಸಾಹಿತ್ಯ ಮೈಸೂರು ಮತ್ತು ಕರ್ನಾಟಕ ವಿಶ್ವವಿದ್ಯಾಲಯ, ಮಿಂಚಿನಬಳ್ಳಿ ಮುಂತಾದ ಗ್ರಂಥಮಾಲೆ ಇವುಗಳ ಪರಿಶ್ರಮದ ಮೂಲಕ ಕೆಲಮಟ್ಟಿಗೆ ನಿರ್ಮಾಣವಾಗಿದೆ. ಯಾವ ಕ್ಷೇತ್ರದಲ್ಲಿ ಯಾವ ಗ್ರಂಥಗಳ ಕೊರತೆಯಿದೆ ಎಂಬುದರ ಪಟ್ಟಿಮಾಡಿ ಸರಕಾರದ ನೆರವಿನಿಂದ ಈ ಸಂಸ್ಥೆಗಳು ರಾಶಿರಾಶಿಯಾಗಿ ಸಣ್ಣ ಹಾಗೂ ದೊಡ್ಡ ಪ್ರಮಾಣದ ಪುಸ್ತಕಗಳನ್ನು ಪ್ರಕಟಿಸುವಂತಾಗಲಿ. ಕಾಲೇಜು ಮಟ್ಟದಲ್ಲಿ ಕನ್ನಡ ಮಾಧ್ಯಮವಾಗುವುದಕ್ಕೂ ಇವುಗಳಿಂದ ಪುಟ ದೊರೆಯುತ್ತದೆ.

. . . . . ಹಳೆಯ ಸಾಹಿತ್ಯದಲ್ಲಿ ನೀತಿ, ಧರ್ಮ, ಮತ ಇವು ಪ್ರಮುಖ ಪ್ರೇರಣೆಗಳಾಗಿದ್ದರೆ ಇಂದು ಇವುಗಳ ಸಾರಭೂತವಾದ, ಆದರೆ ಅವಕ್ಕಿಂತ ಬೇರೆಯಾದ ಮಾನವ ಸಂಸ್ಕೃತಿ ಹೊಸ ಸಾಹಿತ್ಯದ ಪ್ರಮುಖ ಪ್ರೇರಕವಾಗಿರುತ್ತದೆ. ಸಾಮಾನ್ಯವಾಗಿ ಇಂದಿನ ಲೇಖಕನ ಉಚ್ಚತಮ ಆದರ್ಶದಲ್ಲಿ ಮತಧರ್ಮಕ್ಕೆ ಹೆಚ್ಚಿನ ಸ್ಥಾನವಿಲ್ಲ, ಮಾನವ ಸಂಸ್ಕೃತಿಗೆ ಆ ಸ್ಥಾನ ಸಂದಿದೆ. ಸಂಸ್ಕೃತಿಯೆಂದರೇನು, ಮಾನವ ಸಂಸ್ಕೃತಿಯೆಂದರೇನು ಈ ಪ್ರಶ್ನೆಗಳಿಗೆ ಅವನ ಉತ್ತರಗಳು ಯಾವಾಗಲೂ ಖಚಿತವಾಗಿರುತ್ತವೆ ಎಂದು ತೋರುವುದಿಲ್ಲ. ಸಂಧಿಕಾಲದ ಜೀವನದಲ್ಲಿರುವ ಎಲ್ಲ ವಿರೋಧಗಳೂ, ವಿರೋಧಾಭಾಸಗಳೂ ಅವನ ವ್ಯಕ್ತಿತ್ವದಲ್ಲಿ ಎದ್ದು ಕಾಣುತ್ತವೆ. ಅವನ ವ್ಯಕ್ತಿತ್ವವು ರೂಪುಗೊಳ್ಳುವುದರಲ್ಲಿದೆ. ಅದು ಒಂದೇ, ಎರಡೇ, ಹಲವೇ ಎನ್ನುವಷ್ಟು ಅದಕ್ಕೆ ಸಂಕೀರ್ಣತೆಯಿದೆ. ಆದರೆ, ತನ್ನ ಬಾಳಿಗೆ, ತನ್ನ ತಿಳಿವಳಿಕೆಗೆ ಪ್ರಾಮಾಣಿಕನಾಗಿ ಅವನು ಬೆಳೆಯುತ್ತಿದ್ದಾನೆ ಎಂಬ ಮಟ್ಟಿಗೆ ಅವನಿಗೆ ಸ್ವತಂತ್ರ ವ್ಯಕ್ತಿತ್ವವಿದೆ. ಯಾವ ಹಿಂದಿನ ಕಾಲದಲ್ಲಿಯೂ ಇಲ್ಲದಂಥ ಸ್ವಾತಂತ್ರ್ಯ ಮತ್ತು ವೈವಿಧ್ಯ ಇಂದಿನ ಲೇಖಕನ ವ್ಯಕ್ತಿತ್ವದಲ್ಲಿ ಕಣ್ಣಿಗೆ ಬೀಳುತ್ತದೆ. ಇದಕ್ಕೆ ಅನುಗುಣವಾಗಿ ಅವನು ಆಸ್ತಿಕ, ನಾಸ್ತಿಕ, ಧ್ಯೇಯವಾದಿ, ವಾಸ್ತವವಾದಿ. ಯಾವ ವಾದಿಯಾದರೂ ತನ್ನ ಜೀವಸ್ವರದೊಡನೆ ಸಂವಾದಿಯಾಗಿದ್ದರಾಯಿತು ಎಂಬುದು ಮುಖ್ಯ ಸಂಗತಿ. ಅವನ ವಿಷಯದ ಆಯ್ಕೆಯಲ್ಲಿ, ಪ್ರತಿಪಾದನೆಯ ರೀತಿಯಲ್ಲಿ–ಸಾಹಿತ್ಯದ ಎಲ್ಲ ಪ್ರಕ್ರಿಯೆಗಳಲ್ಲಿಯೂ ಅವನಿಗೆ ಇಂದು ಸಂಪೂರ್ಣ ಸ್ವಾತಂತ್ರ್ಯವಿದೆ. ಹೊಸ ಹೊಸ ರೂಪಗಳನ್ನು ಆತನು ನಿರ್ಮಿಸಿಕೊಳ್ಳಬಲ್ಲನು ; ಹೊಸ ಹೊಸ ಛಂದಗಳಲ್ಲಿ ಹಾಡಬಲ್ಲನು. ಅವನ ವಿಚಾರಕ್ಕೆ, ಅನುಭವಕ್ಕೆ, ಅಭಿವ್ಯಕ್ತಿಗೆ ಯಾವ ಎಲ್ಲೆಯೂ ಇಲ್ಲ. ಆದರೆ ಈ ಅನಿರ್ಬಂಧ ಸ್ವಾತಂತ್ರ್ಯದ

ಸದುಪಯೋಗವನ್ನು ಮಾಡಿಕೊಳ್ಳಲು ಅವನು ಮುಗಿಲೆತ್ತರ ಬೆಳೆಯಬೇಕಾಗುತ್ತದೆ. ಬಾಳ ಕಡಲಲ್ಲಿ ಮುಳುಗೇಳಬೇಕಾಗುತ್ತದೆ. ಕಣ್ಣೀರನ್ನು ಕುಡಿಯಬೇಕಾಗುತ್ತದೆ. ನುಡಿಯ ಟಂಕಸಾಲೆಯಲ್ಲಿ ಸತತವಾಗಿ ದುಡಿಯಬೇಕಾಗುತ್ತದೆ.

ಕನ್ನಡ ಸಾಹಿತ್ಯಕ್ಕೆ ಸಾವಿರಾರು ವರ್ಷಗಳ ಹಳಮೆಯಿದೆ, ಸಾವಿರಾರು ಕೃತಿಗಳ ಕಣಜವಿದೆ. ಈ ಸಾವಿರದ ಅಂಕಿಗಿಂತ **"ಸಾವಿರದ"** ಕೃತಿಗಳೆಷ್ಟು ಎಂಬುದರಿಂದ ಅದರ ಬೆಲೆಯೇರುತ್ತದೆ, ಕಳೆ ಕಟ್ಟುತ್ತದೆ. ಕನ್ನಡಿಗರ ಸುದೈವದಿಂದ ಅಂಥ ಕೆಲವು ಕೃತಿಗಳು ವಿಧ ವಿಧ ರೂಪ ತಾಳಿ ಕನ್ನಡ ಸರಸ್ವತಿಯ ಮಕುಟರತ್ನಗಳಾಗಿ ಮೆರೆಯುತ್ತಿವೆ ಎಂದು ಹೆಮ್ಮೆಯಿಂದ ಹೇಳಬಹುದು. ಚಂಪು, ವಚನ, ರಗಳೆ, ಷಟ್ಪದಿ, ಸಾಂಗತ್ಯ, ತ್ರಿಪದಿ, ಕೀರ್ತನೆ ಈ ಎಲ್ಲ ರೂಪಗಳಲ್ಲಿ ಕನ್ನಡ ಪ್ರತಿಭೆ ಹಿಂದಿನ ಕಾಲದಲ್ಲಿ ಬೆಳಗಿದೆ. ಅವುಗಳಲ್ಲಿ ಕೆಲವಾದರೂ ಉತ್ತಮ ಕಾವ್ಯದ ಒರೆಗೆ ಹತ್ತುವುವು. ಸಂಸ್ಕೃತ ಕಾವ್ಯದಿಂದ ಸ್ಫೂರ್ತಿ ಪಡೆದು ಸಂಪ್ರದಾಯದ ಸಂಕೋಲೆಗಳನ್ನು ತಾನಾಗಿ ತೊಟ್ಟು ಸಹ ಕನ್ನಡ ಚಂಪೂ ಕಾವ್ಯ ತನ್ನ ಶಿಖರಗಳಲ್ಲಿ ಹೆಚ್ಚಿನ ರಸಸಿದ್ಧಿಯನ್ನು ಎತ್ತಿ ತೋರಿಸಿದೆ . . . ವಚನ ವಾಙ್ಮಯದಲ್ಲಿ ಅನುಭಾವ ಗದ್ಯವು ಭಾವಕವಿತೆಯ ವಾಹಕವಾಗಿ, ಎತ್ತರದ ಅನುಭವವನ್ನು ಜನದ ಹತ್ತಿರ ತಂದು ಬಿತ್ತರಿಸುವ ಸವಿನುಡಿಯಾಗಿ, ಚೆಲ್ಲವರಿದಿದೆ. ಕನ್ನಡವು ಜಗತ್ತಿಗೆ ನೀಡಿದ ಅನೂನದಾನವಾಗಿದೆ. ರಗಳೆಯಲ್ಲಿ ಭಕ್ತರ ಜೀವದ ಭಾವದ ಹೊಳೆ ಬಿಚ್ಚುತವಾಗಿ ತಡೆಯಿಲ್ಲದೆ ಕಡೆಯಿಲ್ಲದೆ ಹರಿದಿದೆ. ಷಟ್ಪದಿ ವಿಶಾಲ ಪಾತ್ರವಾಗಿ ತರತರದ ಗಾತ್ರವಾಗಿ ತನ್ನ ತೊಡೆಯ ಮೇಲೆ ಕತೆ, ಪಾತ್ರ, ವರ್ಣನೆಗಳ ತೆಪ್ಪಗಳನ್ನು ತೇಲಿಸುತ್ತ ನಿದಾನವಾಗಿ ಸಾಗಿದೆ. ತ್ರಿಪದಿ, ಸಾಂಗತ್ಯ, ಕೀರ್ತನೆಗಳು ಜನಜೀವನ, ಜನಭಾಷೆಗೆ ಇನ್ನೂ ಹತ್ತಿರ ಬಂದು ಜೀವನ ವಿವೇಕವನ್ನೂ, ಸಮನ್ವಯ ದರ್ಶನವನ್ನೂ, ಭಕ್ತಿಸಾರವನ್ನೂ ಸುಲಭತರವಾಗಿ ಸಾರಿರುತ್ತವೆ. ಈ ಸಾಹಿತ್ಯರೂಪಗಳ ಸಾರ್ಥಕ್ಯದಲ್ಲಿಯೂ ಹಳೆಯ ಕಾವ್ಯ ತನ್ನ ಸಿದ್ಧಿಯನ್ನು ಹೊಂದಿ ನಿಂತಿದೆ. ಹಳೆಯ ಕಾವ್ಯದ ಸಿದ್ಧಿ ತಲೆದೂಗಿಸುವಂತೆ ಅದರ ಅಸಿದ್ಧಿ ಕಣ್ಣೊತ್ತುವುದು . . . . ಹಳೆಯ ಕಾವ್ಯ ಪೌರಾಣಿಕ ಪಾತ್ರಗಳ ತತ್ಕಾಲೀನ ಮಹಾವ್ಯಕ್ತಿಗಳ ಚರಿತ್ರನಿರೂಪಣೆಯಲ್ಲಿ ಹೆಚ್ಚು ತೊಡಗಿ ಪ್ರತ್ಯಕ್ಷ ಜೀವನದ ಪ್ರತಿಬಿಂಬವಾಗಲು ಹವಣಿಸಲಿಲ್ಲ. ಅದರ ಪ್ರಕೃತಿವರ್ಣನೆಗಳು ಬಹುಮಟ್ಟಿಗೆ ಕವಿಸಮಯದ ಪಡಿಯಚ್ಚಿನಲ್ಲಿ ಮೂಡಿಸಿದ ಪ್ರತಿಕೃತಿಗಳಾದುವು. ಇದನ್ನೆಲ್ಲ ಹೇಳುವಾಗ ನಮ್ಮ ಉತ್ತಮ ಕಾವ್ಯಗಳಲ್ಲಿ, ಇತರ ಕಾವ್ಯದ ಉತ್ತಮ ಭಾಗಗಳಲ್ಲಿ ಮೂಡಿರುವ ಹೃದಯಸ್ಪರ್ಶಿಯಾದ ಜೀವನಚಿತ್ರಣ ಮತ್ತು ಪ್ರಕೃತಿವರ್ಣನೆ ಇವುಗಳ ಸ್ವಾರಸ್ಯವನ್ನು ಅಲ್ಲಗಳೆಯುತ್ತೇವೆಂದು ಯಾರೂ ಭಾವಿಸಬಾರದು. ಅಂದಂದಿನ ಮಿತಿಯಲ್ಲಿ ಹಳೆಯ ಕವಿಗಳು ತಮ್ಮ ಕಲ್ಪಕತೆಯನ್ನು ಚೆನ್ನಾಗಿ ತೋರಿದ್ದಾರೆ.

. . . . ಭಾವಗೀತೆ, ಸಣ್ಣಕತೆ, ಕಾದಂಬರಿ, ನಾಟಕ, ಪ್ರಬಂಧ, ವಿಮರ್ಶೆ, ಚರಿತ್ರೆ ಈ ಮೊದಲಾದ ರೂಪಗಳಲ್ಲಿ ಹೊಸಗನ್ನಡವು ಮೇಲ್ಮೆಯನ್ನು ಪಡೆದಿದೆ. ವಿಶೇಷತಃ ಕನ್ನಡ ಭಾವಗೀತೆ, ಬಗೆಬಗೆಯ ಬೆಡಗು, ಆಳ ನಿರಾಳ, ಕುಣಿತ ಮಣಿತ ಇವುಗಳಲ್ಲಿ ಒಳ್ಳೆಯ ಮಟ್ಟವನ್ನು ತೋರಿದೆ, ತನ್ನ ಉತ್ತಮಿಕೆಯಲ್ಲಿ ಅನ್ಯ ಭಾರತೀಯ ಭಾಷೆಗಳಲ್ಲಿಯ ಉತ್ತಮ ಕೃತಿಗೆ ಸರಿದೊರೆಯಾಗಿದೆ. ಒಳ್ಳೆಯ ಸಣ್ಣ ಕತೆ–ಕಾದಂಬರಿಗಳು ಸಂಖ್ಯೆಯಲ್ಲಿ ಅಷ್ಟು ಹೆಚ್ಚಾಗಿಲ್ಲವಾದರೂ ತಂತ್ರ–ವೈವಿಧ್ಯ ದಲ್ಲಿ ಮತ್ತು ಕುಶಲ ರಚನೆಯಲ್ಲಿ ಎತ್ತಿದಕೈಯಾಗಿವೆ. ಮುಖ್ಯವಾಗಿ ಸ್ವತಂತ್ರ ವ್ಯಕ್ತಿತ್ವ, ಅನುಭವ ಪ್ರಾಮಾಣ್ಯ, ಪ್ರಯೋಗಶೀಲತೆ, ವಾಸ್ತವ ಪ್ರಜ್ಞೆ, ವಿಶ್ವದೃಷ್ಟಿ ಇವುಗಳಲ್ಲಿ ಹೊಸ ಸಾಹಿತ್ಯವು ತನ್ನದೇ ಆದ, ಹಿಂದೆಂದೂ ತೋರದ ಕಳೆಯನ್ನು ಪಡೆದಿದೆ, ಹೆಚ್ಚು ಹೆಚ್ಚಾದ ಸಿದ್ಧಿಯತ್ತ ಸಾಗಿದೆ. ಅದರ ಅಸಿದ್ಧಿಯನ್ನು ಅನೇಕ ರೀತಿಯಲ್ಲಿ ಹೇಳಬಹುದು. ಬೆಳೆಯುತ್ತಿರುವ ಯಾವ ಸಾಹಿತ್ಯದ ಬಗ್ಗೆಯೂ ಹೇಳಬಹುದು. ಹೊಸ ಕಾವ್ಯದಲ್ಲಿ ರಮ್ಯ, ನವ್ಯ ಎಲ್ಲ ಪ್ರಕಾರಗಳೂ ಬಂದಿದ್ದರೂ ಎಷ್ಟು ಅವು ಜೀವನಸ್ಪರ್ಶಿಯಾಗಿವೆ ಎಂಬುದನ್ನು ಪರೀಕ್ಷಿಸಿ ನೋಡಬೇಕು. ತನ್ನ ವ್ಯಕ್ತಿತ್ವದಲ್ಲಿ ಅವೆಷ್ಟು ಬೆರೆತುಬಂದಿವೆ, ಸುತ್ತುಮುತ್ತಿನ ಜೀವನಕ್ಕೆ ಅದೆಷ್ಟು ಹೊಂದಿ ಬಂದಿವೆ ಎಂಬ ಪ್ರಶ್ನೆಯನ್ನು ಕವಿ ಕೇಳಬೇಕು. ಕೆಲವು ಸಲ ಕಡ ತಂದ ಗರಿಗಳನ್ನು ಸಿಕ್ಕಿಸಿಕೊಂಡು ನಮ್ಮ ಕವಿತೆಯ ನವಿಲು ಕುಣಿಯುವಂತೆ ಕಾಣುತ್ತದೆ. ಕತೆ ಕಾದಂಬರಿಗಳೂ ಕೆಲವು ಸಲ ಒಪ್ಪಿಯೊ, ಒಪ್ಪದೆಯೊ ಪಶ್ಚಿಮದ ನಿರ್ಮಿತಿಯ ನಿರ್ಮಾಲ್ಯಗಳಾಗಿ ತೋರುತ್ತವೆ.

ಆಧುನಿಕ ಸಾಹಿತ್ಯದ ಮುನ್ನಡೆಯ ದೃಷ್ಟಿಯಿಂದ ಲೇಖಕರ ಬಗ್ಗೆ ರಸಿಕರ ಮತ್ತು ವಿಚಾರವಂತರ ಹೊಸ ಅಪೇಕ್ಷೆಗಳಾವುವು, ಅವನ್ನು ಹೇಗೆ ಪೂರೈಸಬೇಕು ಎಂಬುದು ಈಗ ಯೋಚಿಸಬೇಕಾದ ವಿಷಯವಾಗಿದೆ.

೧. ಮೊದಲನೆಯದಾಗಿ, ಇಂದಿನದು ಅವಸರದ ಯುಗವೆಂದು ಅವಸರದ ಬರೆವಣಿಗೆಗೆ ಯಾರೂ ಕೈಹಾಕಬಾರದು. ವಿಚಾರಪ್ರಧಾನವಾದ ಪುಸ್ತಕವಿರಲಿ, ನಿರ್ಮಿತಿಪ್ರಧಾನವಾದ ಕೃತಿಯಿರಲಿ, ಯಾವುದಕ್ಕೂ ಲೇಖಕನು ಸಾಧ್ಯವಿದ್ದಷ್ಟು ಪೂರ್ವಸಿದ್ಧತೆಯನ್ನು ಮಾಡಿಕೊಳ್ಳಬೇಕು . . . . . ಲೇಖಕನು ಭೋಕ್ತನಾಗ ಬೇಕು, ಸಾಕ್ಷಿಯಾಗಬೇಕು. ತಾನು ಕಣ್ಣೀರಿಡಬೇಕು, ಹೆರವರ ಕಣ್ಣೀರೊರಸ ಬೇಕು. ಮನವನ್ನು ಘನದತ್ತ ಹೊರಳಿಸಬೇಕು, ಹೃದಯವನ್ನು ಸದಯವಾಗು ವಂತೆ ಅರಳಿಸಬೇಕು. ಅನುಭವದ ಕ್ಷಿತಿಜಗಳನ್ನು ಕ್ಷಣಕ್ಷಣಕ್ಕೆ ವಿಸ್ತರಿಸಬೇಕು. ಸತ್ಯ ಶಿವ ಸುಂದರಗಳ ನಿತ್ಯ ಉಪಾಸಕನಾಗಬೇಕು . . . . ಆಧುನಿಕ ಲೇಖಕರು ತಾವು ಆಧುನಿಕರೆಂದು ತೋರಿಸುವ ಹಟದಿಂದ ಪ್ರಾಚೀನರು ತೋರಿದ ಒಳ್ಳೆಯ ದಾರಿಯನ್ನು ಬಿಡಕೂಡದು.

೨. ಅನುಭವ ಮತ್ತು ವಿಚಾರಗಳ ಸಂಪತ್ತಿಯೊಂದಿಗೆ ಲೇಖಕನಿಗೆ ಭಾಷಾ

ಸಂಪತ್ತಿಯೂ ಇರಬೇಕು. ಕನ್ನಡ ಲೇಖಕನು ಭಾಷಾಸಂಪತ್ತಿಯನ್ನು ತನ್ನದಾಗಿಸಿಕೊಳ್ಳಲು ಹಳೆಯ ಮತ್ತು ಹೊಸ ಕನ್ನಡ ಸಾಹಿತ್ಯದಲ್ಲಿಯ ಎಲ್ಲ ಒಳ್ಳೆಯ ಕೃತಿಗಳನ್ನು, ಉತ್ತಮ ಕೃತಿಗಳನ್ನಾದರೂ ಓದಬೇಕು, ನುರಿಸಿಕೊಳ್ಳಬೇಕು . . . . ಬಳಕೆಯ ಮಾತಿನ ಎಲ್ಲ ಸವಿ ಸೊಗಸನ್ನೂ ಅರಿತಿರಬೇಕು. ಜನಪದ ಸಾಹಿತ್ಯವನ್ನೂ ಓದಿ ಮೆಚ್ಚಿಕೊಂಡಿರಬೇಕು. ಸಂಸ್ಕೃತ ಭಾಷೆಯ ಅಭ್ಯಾಸವೂ ಸಂಸ್ಕೃತ ವಾಙ್ಮಯದ ಅಭ್ಯಾಸವೂ ಕನ್ನಡ ಲೇಖಕರಿಗೆ ಅವಶ್ಯವೆಂಬುದನ್ನು ಎಷ್ಟು ಎತ್ತಿ ಹೇಳಿದರೂ ಸಾಲದು.

೩. ಮೇಲೆ ತಿಳಿಸಿದಂತೆ ಎಲ್ಲ ಬಗೆಯ ಸಿದ್ಧತೆ ಮಾಡಿಕೊಂಡು ಸ್ಫೂರ್ತಿಯ ಸತ್ಯತೆಯ ಮನವರಿಕೆ ಮಾಡಿಕೊಂಡು ಬರೆದ ಕೃತಿ ತಾನಾಗಿ ಸಂಸ್ಕಾರಸಂಪನ್ನವಾಗಿರುತ್ತದೆ. ಅದರ ಮುಖದ ಮೇಲೆ ಮೂಡುವ ಕಳೆಯೇ ಬೇರೆ. ಇಷ್ಟಾದರೂ ಲೇಖಕರು ತಮ್ಮ ಮೊದಮೊದಲಿನ ಕೃತಿಗಳನ್ನು ಬಲ್ಲವರ ಕಣ್ಣಿಗೆ ಹಾಕಬೇಕು, ಮಿತ್ರರ ಮುಂದೆ ಓದಿ ತೋರಿಸಬೇಕು. ಅವರ ಸಲಹೆ ಸೂಚನೆಗಳನ್ನು ಮನಗಂಡು ಅವಶ್ಯ ಸಂಸ್ಕರಣವನ್ನು ಮಾಡಿ ಅವನ್ನು ಅಚ್ಚಿಗೆ ಕೊಡಬೇಕು.

೪. . . . . ಬೆಲೆ ಕೊಟ್ಟು ಪುಸ್ತಕಗಳನ್ನು ಸ್ವಂತಕ್ಕೆ ಸಂಗ್ರಹಿಸುವ ಮತ್ತು ಓದುವ ವಾಚಕವರ್ಗದ ಸಂಖ್ಯೆಯನ್ನು ಹೆಚ್ಚಿಸಲು ಪ್ರಯತ್ನಗಳು ನಡೆಯಬೇಕು. ಇದಕ್ಕಾಗಿ ಕನ್ನಡ ಸಾಹಿತ್ಯ ಪರಿಷತ್ತು ಒಂದು ಯೋಜನೆಯನ್ನು ಮಾಡಬಹುದು. ಪ್ರತಿ ಮೂರು ತಿಂಗಳಿಗೊಮ್ಮೆ ಸಾಹಿತ್ಯ ರೂಪದ ಪ್ರಕಾರ ವಿಂಗಡಿಸಿ ಆಯಾ ವರ್ಷದಲ್ಲಿ ಪ್ರಕಟವಾಗಿರುವ ಎಲ್ಲ ಪುಸ್ತಕಗಳ ಪಟ್ಟಿಯನ್ನು ಸಂಕ್ಷಿಪ್ತ ಪರಿಚಯದೊಡನೆ "ಕನ್ನಡ ನುಡಿ"ಯಲ್ಲಿ ಪ್ರಕಟಿಸಬೇಕು. ಜೊತೆಗೆ ಒಮ್ಮೆ ಕಾವ್ಯ, ಇನ್ನೊಮ್ಮೆ ಕತೆ ಕಾದಂಬರಿ, ಮುಂದೆ ನಾಟಕ, ಕೊನೆಗೆ ಪ್ರಬಂಧಾದಿ ವಾಙ್ಮಯ ಹೀಗೆ ಪ್ರತ್ಯೇಕ ಸಾಹಿತ್ಯರೂಪದಲ್ಲಿ ಹಿಂದಿನ ವರುಷದಲ್ಲಿ ಆಗಿರುವ ಪ್ರಗತಿಯನ್ನು, ಎತ್ತಿ ತೋರಿಸಬೇಕಾದ ಕೃತಿಪರಿಚಯದೊಡನೆ ವಿಮರ್ಶಕರಿಂದ ಬರೆಯಿಸಿ ಪ್ರಕಟಿಸಬೇಕು.

೫. ಕನ್ನಡದ ಮಟ್ಟಿಗೆ ಹೇಳುವುದಾದರೆ ಸ್ವಾತಂತ್ರ್ಯ ಸಂಗ್ರಾಮವನ್ನು ಚಿತ್ರಿಸುವ ಕೆಲವು ಒಳ್ಳೆಯ ಕೃತಿಗಳು ಜನ್ಮತಾಳಿವೆ. ದೇಶದ ದಾರಿದ್ರ್ಯ, ಬರಗಾಲ, ಅನ್ನಸಮಸ್ಯೆ ಇವನ್ನು ಕರುಳು ಹಿಂಡುವಂತೆ ವರ್ಣಿಸಿರುವ ಕೃತಿಗಳೂ ನಿರ್ಮಾಣವಾಗಿವೆ. ಅದಿಲ್ಲ, ಇದಿಲ್ಲ ಎಂದು ದೂರುವ ರಾಜಕೀಯ ಮಿತ್ರರು ಇವುಗಳ ಮೇಲೆ ಕಣ್ಣು ಹಾಯಿಸಬೇಕು. ಲೇಖಕನ ಮೇಲೆ ಜನಜೀವನದ ಪ್ರಭಾವವಾಗಬೇಕಾಗಿರುವಂತೆ ಜನಸೇವಕರ ಮೇಲೆ ಸಾಹಿತ್ಯದ ಸಂಸ್ಕಾರವಾಗಬೇಕು. ಅವರಿಗೆ ಕನ್ನಡ ಸಂಸ್ಕೃತಿಯ ದರ್ಶನವಾಗಬೇಕು.

೬. ಹೊಸಗನ್ನಡ ಸಾಹಿತ್ಯದ ಈವರೆಗಿನ ನಿರ್ಮಿತಿಯನ್ನು ನೋಡಿದರೆ ಎಲ್ಲ ಸಾಹಿತ್ಯ ರೂಪಗಳಲ್ಲಿ ಇನ್ನೂ ಮಿಗಿಲಾದ ಆಶಯವೈವಿಧ್ಯ, ತಂತ್ರಕೌಶಲ್ಯ,

ರಸಪೂರ್ಣತೆ ಅಪೇಕ್ಷಣೀಯವಾಗಿವೆ. ವಿಶೇಷವಾಗಿ ನಾಟ್ಯಸೃಷ್ಟಿ ಸಂಖ್ಯೆ ಮತ್ತು ಗುಣವತ್ತೆಯಲ್ಲಿ ಹೆಚ್ಚುವಂತೆ ನೋಡಿಕೊಳ್ಳಬೇಕಾಗಿದೆ . . . . ನಾಟಕ ಸೃಷ್ಟಿಯಂತೆ ಚಲನಚಿತ್ರ ಸೃಷ್ಟಿಯೂ ಕನ್ನಡ ನಾಡಿನಲ್ಲಿ ಅಭಿವೃದ್ಧಿ ಹೊಂದುವುದನ್ನು ನಾವು ನೀವೆಲ್ಲ ತೀವ್ರವಾಗಿ ಬಯಸುತ್ತೇವೆ.

೭. ಇಂದಿನ ಕಥೆ ಕಾದಂಬರಿಗಳಲ್ಲಿ ಮತ್ತು ನಾಟಕ ಚಲನಚಿತ್ರಗಳಲ್ಲಿ ಆಕ್ಷೇಪಾರ್ಹವಾದ ಅಶ್ಲೀಲ ಸನ್ನಿವೇಶಗಳೂ ಸಂಭಾಷಣೆಗಳೂ ಅಧಿಕಪ್ರಮಾಣದಲ್ಲಿವೆಯೆಂಬ ದೂರು ಕೇಳಬರುತ್ತದೆ, ಯಾವುದಕ್ಕೆ ಅಶ್ಲೀಲವೆನ್ನಬೇಕು ಎಂಬುದು ತುಂಬ ಜಟಿಲ ಪ್ರಶ್ನೆ . . . . ಒಂದು ಮಾತಿನಲ್ಲಿ ಹೇಳಬಹುದಾದರೆ, ನರಕದಲ್ಲಿ ಅಭಿರುಚಿಯನ್ನಲ್ಲ, ಅರುಚಿಯನ್ನು, ಹೇಯಭಾವವನ್ನು ಹುಟ್ಟಿಸುವ ಬಗೆಯಲ್ಲಿ ಅದರ ಚಿತ್ರಣವಿರಬೇಕು. ಅಶ್ಲೀಲವು ಅಪರಿಹಾರ್ಯವಾಗಿ ಬಂದರೂ ಸೂಕ್ಷ್ಮ ಕಲೆಯ ಕುಂಚದಿಂದ ಅದು ಸುಶ್ಲೀಲವಾಗಿ ಪರಿಣಮಿಸಬೇಕು.

೮. ಜ್ಞಾನ ವಿಜ್ಞಾನ ಸಾಹಿತ್ಯ, ವಿಚಾರ ಸಾಹಿತ್ಯ ಮತ್ತು ವಿಮರ್ಶಾ ಸಾಹಿತ್ಯ ಇವುಗಳ ಕೊರತೆಯನ್ನು ಕಳೆದ ಕೆಲವು ವರ್ಷಗಳಲ್ಲಿ ಹೋಗಲಾಡಿಸುವ ಸ್ತುತ್ಯ ಪ್ರಯತ್ನಗಳಾಗಿವೆ. ಆದರೆ ಈ ತ್ರಿವಿಧ ಸಾಹಿತ್ಯ ಎಷ್ಟು ಪ್ರಮಾಣದಲ್ಲಿ ಬೇಕೊ ಅಷ್ಟು ಲಭಿಸಿಲ್ಲ. ಈ ದಾರಿಯಲ್ಲಿ ಉತ್ಸಾಹಪೂರ್ಣವಾದ ಯೋಜನಾಬದ್ಧವಾದ ಪ್ರಚಂಡ ಕಾರ್ಯಕ್ಕೆ ಅವಕಾಶವಿದೆ. ವಿಶೇಷತಃ ವಿಮರ್ಶೆಯ ಬೆಳವಣಿಗೆಗೆ ಹೆಚ್ಚು ಗಮನವನ್ನು ಕೊಡುವುದು ತೀರ ಅಗತ್ಯವಾಗಿದೆ . . . . . ಯಾರ ವಿಮರ್ಶೆಯೂ ಕೊನೆಯ ಮಾತಲ್ಲ, ವಿಮರ್ಶೆಯ ವಿಮರ್ಶೆಗೂ ಅವಕಾಶವಿದೆ ಎಂಬ ಮನೋವೃತ್ತಿ ಹೆಚ್ಚಬೇಕು.

ಕನ್ನಡ ಸಾಹಿತ್ಯದ ರಸಸ್ಪರ್ಶದಿಂದ ಕನ್ನಡಿಗರ ಭಾವೈಕ್ಯವಾಗಬೇಕು, ಕನ್ನಡ ಭಾಷೆ ಸಾಹಿತ್ಯ ಸಂಸ್ಕೃತಿಗಳು ಅಚ್ಚುಕಟ್ಟಾದ ಬಗೆಯಲ್ಲಿ ಮುನ್ನಡೆಯಬೇಕು, ಮೇಲ್ಮೆಯನ್ನು ಪಡೆಯಬೇಕು.

ಸಂಪಾದಕೀಯ

ಮೈಸೂರು ವಿಶ್ವವಿದ್ಯಾನಿಲಯದ ಘಟಿಕೋತ್ಸವ

ಮೈಸೂರು ವಿಶ್ವವಿದ್ಯಾನಿಲಯದ ೧೯೬೩ನೆಯ ವರ್ಷದ ಘಟಿಕೋತ್ಸವ ವನ್ನು ಡಿಸೆಂಬರ್ ಏಳನೆಯ ತಾರೀಖು ಶನಿವಾರ ಕ್ರಾಫರ್ಡ್ ಭವನದಲ್ಲಿ ಎಂದಿ ನಂತೆಯೇ ಬಹಳ ವಿಜೃಂಭಣೆಯಿಂದ ಆಚರಿಸಲಾಯಿತು. ಈ ಸಮಾರಂಭಕ್ಕೆ ಈ ಬಾರಿ, ಮೈಸೂರು ವಿಶ್ವವಿದ್ಯಾನಿಲಯದ ಪ್ರತಿಭಾವಂತ ಹಿರಿಯ ವಿದ್ಯಾರ್ಥಿ ಗಳಲ್ಲಿ ಒಬ್ಬರೂ, ರಿಸರ್ವ್ ಬ್ಯಾಂಕಿನ ನಿವೃತ್ತ ಗವರ್ನರವರೂ ಆದ ಶ್ರೀಮಾನ್ ಎಚ್. ವಿ. ಆರ್. ಐಯ್ಯಂಗಾರ್ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ, ನೂತನ ಪದವೀಧರರನ್ನು ಕುರಿತು ವಿಚಾರಪ್ರದವಾದ ಭಾಷಣವನ್ನು ಮಾಡಿದರು. ಇದೇ ಸಂದರ್ಭದಲ್ಲಿ, ಕರ್ನಾಟಕ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದ ಶ್ರೀ ಡಿ. ಸಿ. ಪಾವಟೆ ಮತ್ತು ಕನ್ನಡದ ಸುಪ್ರಸಿದ್ಧ ಲೇಖಕರಾದ ಶ್ರೀ ಕೋಟಾ ಶಿವರಾಮ ಕಾರಂತ ಅವರುಗಳಿಗೆ ಗೌರವಪೂರ್ವಕವಾದ ಡಾಕ್ಟರೇಟ್ ಪ್ರಶಸ್ತಿ ಗಳನ್ನು ನೀಡಲಾಯಿತು.

ಶ್ರೀಮಾನ್ ಎಚ್. ವಿ. ಆರ್. ಐಯ್ಯಂಗಾರ್ ಅವರು ತಮ್ಮ ಭಾಷಣದಲ್ಲಿ ಭಾರತದ ಇಂದಿನ ಆರ್ಥಿಕ ಪ್ರಗತಿಯನ್ನು ಕುರಿತು ಹಲವಾರು ಉಪಯುಕ್ತ ಸಲಹೆ ಗಳನ್ನು ನೀಡಿದರು. ಪ್ರಾರಂಭದಲ್ಲಿ, ತಾವು ವಿದ್ಯಾರ್ಥಿಯಾಗಿದ್ದ ಕಾಲದಲ್ಲಿ ದೇಶವು ಇದ್ದ ಸ್ಥಿತಿಗತಿಗಳನ್ನು ಬಹಳ ಸ್ವಾರಸ್ಯವಾಗಿ ಚಿತ್ರಿಸಿದರು. ದೇಶವು ಪರಕೀಯರ ಆಡಳಿತದಲ್ಲಿದ್ದಾಗ ಕೈಗಾರಿಕೆಯ ಮೂಲಕ ಏಳಿಗೆ ಪಡೆಯಲು ಇದ್ದ ಅಡ್ಡಿ ಅಡಚಣೆಗಳನ್ನು ಚಿತ್ರಿಸಿ, ಅಂಥ ವಿಷಮ ಪರಿಸ್ಥಿತಿಯಲ್ಲಿಯೂ ಜಮ್‌ಷೆಡ್‌ಜಿ ತಾತಾ ಅವರು ಹೇಗೆ ಮುಂದೆ ಬಂದು ತಮ್ಮ ವಿಶ್ವವಿಖ್ಯಾತವಾದ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯನ್ನು ಸ್ಥಾಪಿಸಿದ ಸಂಗತಿಯನ್ನು ಬಹು ಚಿತ್ರವತ್ತಾಗಿ ಪ್ರಸ್ತಾವಿಸಿದರು. ಕೈಗಾರಿಕೆಯ ಕ್ಷೇತ್ರದಲ್ಲಿ ಹಿಂದುಳಿದಿದ್ದಂತೆಯೇ, ಅಂದಿನ ಸಾಮಾಜಿಕ ಜೀವನವೂ ಹೇಗೆ ಪ್ರಗತಿವಿರೋಧವಾಗಿ ತಟಸ್ಥವಾಗಿದ್ದಿತೆಂಬುದನ್ನು ಬಹು ಸ್ವಾರಸ್ಯವಾಗಿ ಹೇಳಿದರು. ಪ್ರಕೃತದಲ್ಲಿಯಾದರೋ, ಭಾರತ ಸ್ವತಂತ್ರವಾಗಿ, ಪಂಚವಾರ್ಷಿಕ ಯೋಜನೆಗಳ ಮೂಲಕ ರಾಷ್ಟ್ರವು ಪ್ರಗತಿಪರವಾಗುತ್ತಿರುವ ಈ ಶುಭ ಸನ್ನಿವೇಶದಲ್ಲಿ ಪ್ರತಿಯೊಬ್ಬರಿಗೂ ಮುನ್ನಡೆಯಲು ವಿಶೇಷ ಅವಕಾಶವಿರು ವುದರ ಕಡೆಗೆ ವಿದ್ಯಾರ್ಥಿಗಳ ಗಮನವನ್ನು ಸೆಳೆದರು. ಸಂತತವಾದ ಶ್ರಮದಿಂದ ಭಾರತದ ಭವಿಷ್ಯವನ್ನು ರೂಪಿಸಬೇಕೆಂಬುದಾಗಿ ಎಚ್ಚರಿಸಿದರು.

ಭಾರತದ ಆರ್ಥಿಕಾಭಿವೃದ್ಧಿಯಾಗಲು ಖಾಸಗಿ ಉದ್ಯಮಗಳಿಗೆ ಹೆಚ್ಚು ಹೆಚ್ಚಾದ ಉತ್ತೇಜನವೀಯಬೇಕಾದುದು ಅತ್ಯಗತ್ಯವೆಂದು ಒತ್ತಿ ಹೇಳಿದರು.

ಸರ್ಕಾರದವರು ಈ ಬಗ್ಗೆ ಬಹುಮಟ್ಟಿಗೆ ಉದಾರವಾಗಿದ್ದು ವರ್ತಿಸಿದ್ದೇ ಆದರೆ ದೇಶದ ಪ್ರಗತಿ ಬಹು ಸಮರ್ಪಕವಾಗಿ ಆದೀತೆಂದು ಅಭಿಪ್ರಾಯಪಟ್ಟರು. ಸರ್ಕಾರದವರಿಗೂ ಮತ್ತು ಖಾಸಗಿಯವರಿಗೂ ಲಾಭ ಸಂಪಾದನೆಯಲ್ಲಿ ಯಾವ ಅಂತರವೂ ಸಲ್ಲದೆಂದೂ, ಆದರೆ ಅದನ್ನು ಗಳಿಸುವ ಹಾಗೂ ವಿನಿಯೋಗಿಸುವ ವಿಧಾನವು ಮುಖ್ಯವಾದುದೆಂದೂ ಸಮರ್ಥಿಸಿದರು. ದೇಶದ ಸಾಮಾಜಿಕ ಪ್ರಗತಿಗೆ ವಿರೋಧವಾಗದಂತೆ ಖಾಸಗಿ ಉದ್ಯಮಗಳ ಬೆಳವಣಿಗೆಗೆ ಸಾಕಷ್ಟು ಅವಕಾಶವಿರಬೇಕೆಂದು ಹೇಳಿದರು.

ದೇಶದ ಪ್ರಗತಿಗೆ ಕೈಗಾರಿಕೆಗಳು, ಖಾಸಗಿ ಉದ್ಯಮಗಳು ಎಷ್ಟರಮಟ್ಟಿಗೆ ಅಗತ್ಯವೋ ಹಾಗೆಯೇ ಸುವ್ಯವಸ್ಥಿತವಾದ ಆಡಳಿತವೂ ಸಹ ಬಹು ಮುಖ್ಯವಾದ ಅಂಗವೆಂದು ಸೂಚಿಸಿದರು. ಈ ವಿಷಯವನ್ನು ಪ್ರಸ್ತಾಪಿಸುತ್ತ, ಮೈಸೂರು ಸಂಸ್ಥಾನದಲ್ಲಿ ಹಿಂದೆ ಇದ್ದ ಆಡಳಿತದ ಸುವ್ಯವಸ್ಥಿತವಾದ ರೀತಿ ನೀತಿಗಳನ್ನು ಸ್ಮರಿಸಿದರು. ಅದರಲ್ಲಿಯೂ ಮುಖ್ಯವಾಗಿ, ದಿವಂಗತ ಎಂ. ವಿಶ್ವೇಶ್ವರಯ್ಯನವರ ಕಾಲದಲ್ಲಿ ಮೈಸೂರು ಸಂಸ್ಥಾನವು ಹೇಗೆ ಸರ್ವತೋಮುಖವಾಗಿ ಪ್ರಗತಿಯನ್ನು ಸಾಧಿಸಿತೆಂಬುದನ್ನು ಬಹು ಹೆಮ್ಮೆಯಿಂದ ನೆನೆದರು. ಪ್ರಜಾಪ್ರಭುತ್ವವನ್ನು ಅಂಗೀಕರಿಸಿರುವ ಇಂದಿನ ಸರ್ಕಾರದ ವಿಧಾನದಲ್ಲಿ ವ್ಯಕ್ತವಾಗುತ್ತಿರುವ ಕೆಲವು ಕುಂದುಕೊರತೆಗಳನ್ನು ಉದಾಹರಿಸಿ, ಅವುಗಳನ್ನು ನಿವಾರಿಸಲು ಸರ್ವಪ್ರಯತ್ನಗಳನ್ನೂ ಕೈಕೊಳ್ಳಬೇಕೆಂದು ನಮ್ರಪೂರ್ವಕವಾಗಿ ವಿನಂತಿಮಾಡಿಕೊಂಡರು.

ಭರತಖಂಡದ ಏಳಿಗೆಗೆ ಪ್ರತಿಯೊಬ್ಬ ಪ್ರಜೆಯೂ ನಿಷ್ಠೆಯಿಂದ ದುಡಿಯಬೇಕೆಂದೂ, 'ಸಂಬಳಕ್ಕೆ ತಕ್ಕ ದುಡಿಮೆ' ಎಂಬ ಭಾವನೆ ಸಲ್ಲದೆಂದೂ, ಈ ವಿಷಯದಲ್ಲಿ ಪ್ರಗತಿಪರವಾದ ಇಂದಿನ ಜಪಾನ್ ದೇಶವು ನಮಗೆ ಉತ್ತಮೋತ್ತಮವಾದ ಆದರ್ಶವಾಗಬಲ್ಲುದೆಂದೂ ತಿಳಿಸಿದರು. ಮೇಧಾವಿಗಳೂ, ಭರತಖಂಡದ ಅರ್ಥಶಾಸ್ತ್ರಜ್ಞರಲ್ಲಿ ಒಬ್ಬರೂ, ಮೈಸೂರಿನವರೂ ಆದ ಶ್ರೀಮಾನ್ ಹೆಚ್. ವಿ. ಆರ್. ಐಯಂಗಾರ್ ಅವರು ತಮ್ಮ ಭಾಷಣದಲ್ಲಿ ನಮ್ಮ ಪದವೀಧರರಿಗೆ ನಮ್ಮ ದೇಶದ ವಾಸ್ತವಿಕ ಚಿತ್ರವನ್ನು ಬಹು ಉಜ್ವಲವಾಗಿ ಚಿತ್ರಿಸಿರುತ್ತಾರೆ. ಅವರ ಈ ಉಪದೇಶವು ಸ್ವಾನುಭವದಿಂದ ಕೂಡಿ ಹಿತವೂ ಮಿತವೂ ಆಗಿದ್ದು ಬಹು ಉಪಯುಕ್ತವಾಗಿದೆಯೆನ್ನುವುದರಲ್ಲಿ ಸಂದೇಹವಿಲ್ಲ. ವಿದ್ಯಾವಂತನಾದ ಪ್ರತಿಯೊಬ್ಬ ಪ್ರಜೆಯೂ, ತನ್ನ ಮತ್ತು ಸ್ವದೇಶದ ಅಭಿವೃದ್ಧಿಗಾಗಿ ಹೇಗೆ ಕಂಕಣಬದ್ಧನಾಗಿ ಶ್ರಮಿಸಬೇಕೆಂಬುದನ್ನು ನಿದರ್ಶನಪೂರ್ವಕವಾಗಿ ಸ್ಪಷ್ಟವಾಗಿ ವಿವರಿಸಿರುತ್ತಾರೆ. ಅವರು ನೀಡಿರುವ ಈ ಹಿತೋಪದೇಶವು ಸಫಲವಾಗಿ ಭಾರತದ ಭವಿಷ್ಯವು ಆಶಾದಾಯಕವಾಗಲೆಂದು ಆಶಿಸುತ್ತೇವೆ.

ಗೌರವಪೂರ್ವಕವಾದ ಡಾಕ್ಟರೇಟ್ ಪ್ರಶಸ್ತಿಗಳ ವಿತರಣೆ

ಇದೇ ಘಟಿಕೋತ್ಸವದಲ್ಲಿ ಶ್ರೀಯುತರುಗಳಾದ ಡಿ. ಸಿ. ಪಾವಟೆ ಮತ್ತು ಕೋಟಾ ಶಿವರಾಮ ಕಾರಂತ ಅವರಿಗೆ ಗೌರವಪೂರ್ವಕವಾದ ಡಾಕ್ಟರೇಟ್ ಪ್ರಶಸ್ತಿಗಳನ್ನು ನೀಡಲಾಯಿತು. ಶ್ರೀಯುತರಾದ ಡಿ. ಸಿ. ಪಾವಟೆ, ಎಂ.ಎ. (ಕ್ಯಾಂಟಬ್) ಅವರು ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಮಾಡಿರುವ ಸೇವೆಯನ್ನು ಮುಕ್ತಕಂಠದಿಂದ ಪ್ರಶಂಸಿಸಲಾಯಿತು. ಶ್ರೀಯುತರು ಶಾಲೆ ಕಾಲೇಜುಗಳಲ್ಲಿ ಮೊದಲಿನಿಂದಲೂ ಅತ್ಯಂತ ಪ್ರತಿಭಾವಂತ ವಿದ್ಯಾರ್ಥಿಗಳಾಗಿದ್ದು ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದಲ್ಲಿ ಗಣಿತಶಾಸ್ತ್ರದಲ್ಲಿ ಅತ್ಯಂತ ಶ್ರೇಷ್ಠ ಸ್ಥಾನದಲ್ಲಿ ಉತ್ತೀರ್ಣರಾಗಿ ಖ್ಯಾತ ವಿದ್ವಾಂಸರೆನ್ನಿಸಿಕೊಂಡವರು. ಭಾರತದಲ್ಲಿ ಕೆಲವು ಕಾಲ ಕಾಶಿ ವಿಶ್ವವಿದ್ಯಾನಿಲಯದಲ್ಲಿ ಗಣಿತಶಾಸ್ತ್ರದ ಪ್ರಾಧ್ಯಾಪಕರಾಗಿದ್ದರು. ಅನಂತರ ಕ್ರಿ. ಶ. ೧೯೩೦ರಲ್ಲಿ ಬೊಂಬಾಯಿ ಸರ್ಕಾರದ ವಿದ್ಯಾಭ್ಯಾಸದ ಇಲಾಖೆಯನ್ನು ಸೇರಿ ಅನೇಕ ವರ್ಷಗಳ ಕಾಲ ಅಮೂಲ್ಯವಾದ ಸೇವೆಯನ್ನು ಸಲ್ಲಿಸಿದರು. ವಿದ್ಯಾಭ್ಯಾಸದ ಇಲಾಖೆಯ ಮುಖ್ಯಾಧಿಕಾರಿಗಳಾಗಿದ್ದು ಉಪಯುಕ್ತವಾದ ಕೆಲಸವನ್ನು ನಿರ್ವಹಿಸಿದರು. ಸರ್ಕಾರದ ಕೆಲಸದಿಂದ ನಿವೃತ್ತರಾದ ಮೇಲೆ ಶ್ರೀಯುತರು ಕ್ರಿ. ಶ. ೧೯೫೪ರಿಂದ ಕರ್ನಾಟಕ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿ ಮೇಲಿಂದ ಮೇಲೆ ಆಯ್ಕೆಯಾಗಿ ಆ ಸಂಸ್ಥೆಯ ಪ್ರಗತಿಗೆ ಸಂತತವಾಗಿ ಶ್ರಮಿಸುತ್ತಿರುತ್ತಾರೆ. ದಿನ ದಿನಕ್ಕೂ ಕರ್ನಾಟಕ ವಿಶ್ವವಿದ್ಯಾನಿಲಯದ ಮೇಲ್ಮೆ ಹೆಚ್ಚುತ್ತಿದೆ. ಅದು ಕನ್ನಡಿಗರ ಆದರ ಅಭಿಮಾನಗಳಿಗೆ ಪಾತ್ರವಾಗಿದೆ. ಈ ಎಲ್ಲ ಶ್ರೇಯಸ್ಸಿಗೂ ಅದರ ಉಪಕುಲಪತಿಗಳಾಗಿರುವ ಶ್ರೀಮಾನ್ ಡಿ. ಸಿ. ಪಾವಟೆ ಅವರ ಮೇಲ್ವಿಚಾರಣೆಯೇ ಕಾರಣವೆಂದು ಹೇಳಿದರೆ ಅತಿಶಯೋಕ್ತಿಯಾಗದು. ಶ್ರೀಯುತರು ವಿಶ್ವವಿದ್ಯಾನಿಲಯದ ಆಯೋಗ ಸಮಿತಿಯ ಸದಸ್ಯರಾಗಿರುತ್ತಾರೆ. ವಿದ್ಯಾಭ್ಯಾಸಕ್ಕೆ ಸಂಬಂಧಿಸಿದ ಇತರ ಸಮಿತಿಗಳಲ್ಲಿ ಸದಸ್ಯರಾಗಿಯೋ, ಅಧ್ಯಕ್ಷರಾಗಿಯೋ ಇದ್ದುಕೊಂಡು ಅನೇಕ ರೀತಿಗಳಲ್ಲಿ ಉತ್ತಮ ಸೇವೆಯನ್ನು ಸಲ್ಲಿಸಿರುತ್ತಾರೆ. ಇಂಥ ವಿಖ್ಯಾತರಾದ ವಿದ್ವಾಂಸರನ್ನು ಅವರ ಪಾಂಡಿತ್ಯ, ಪ್ರತಿಭೆ ಮತ್ತು ಸಂತತವಾದ ಸೇವಾಕಾರ್ಯಗಳಿಗಾಗಿ ವಿಶ್ವವಿದ್ಯಾನಿಲಯವು ಗೌರವಪೂರ್ವಕವಾದ ಡಿ.ಎಸ್‌ಸಿ. ಪ್ರಶಸ್ತಿಯನ್ನು ನೀಡಿ ಸನ್ಮಾನಿಸಿದ್ದು ಸೂಕ್ತವಾದುದೇ ಸರಿ. ಈ ವಿಶೇಷವಾದ ಪ್ರಶಸ್ತಿಯನ್ನು ಪಡೆದ ಸನ್ಮಾನ್ಯ ಡಿ. ಸಿ. ಪಾವಟೆ ಅವರಿಗೆ ಈ ಮೂಲಕ ನಮ್ಮ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸಬಯಸುತ್ತೇವೆ. ಅವರ ಸೇವೆ ಇದೇ ರೀತಿಯಲ್ಲಿ ಕನ್ನಡ ನಾಡಿಗೂ, ಭಾರತಕ್ಕೂ ಇನ್ನೂ ಹೆಚ್ಚು ಹೆಚ್ಚಾಗಿ ದೊರೆಯುವ ಸದವಕಾಶಗಳುಂಟಾಗಲೆಂದು ಆಶಿಸುತ್ತೇವೆ.

ಕನ್ನಡದ ಮೇಲ್ಮೆಗಾಗಿ ಹಗಲಿರುಳೂ ನಿಷ್ಠೆಯಿಂದ ದುಡಿಯುತ್ತಿರುವ ಶ್ರೀಮಾನ್ ಕೋಟಾ ಶಿವರಾಮ ಕಾರಂತ ಅವರಿಗೆ ಮೈಸೂರು ವಿಶ್ವವಿದ್ಯಾನಿಲಯವು

ಗೌರವಪೂರ್ವಕವಾದ ಡಿ.ಲಿಟ್., ಪ್ರಶಸ್ತಿಯನ್ನು ನೀಡಿ ಸನ್ಮಾನಿಸಿದ ಸಂಗತಿ ಎಲ್ಲರಿಗೂ ಆನಂದವನ್ನುಂಟುಮಾಡತಕ್ಕುದೇ ಸರಿ. ಶ್ರೀಮಾನ್ ಶಿವರಾಮ ಕಾರಂತ ಅವರು ಕನ್ನಡಕ್ಕೆ ಸಲ್ಲಿಸುತ್ತಿರುವ ಸೇವೆ ಅನಂತಮುಖವಾದದ್ದು. ಅವರು ಸರ್ವದಾ ಪ್ರಯೋಗ ಪಟುಗಳೇ ಸರಿ. ನಾಟಕ, ನರ್ತನ, ಕಥೆ, ಕಾದಂಬರಿ ಮೊದಲಾದ ಯಾವ ಪ್ರಕಾರವನ್ನೇ ತೆಗೆದುಕೊಳ್ಳಲಿ ಅವರು ನೂತನವಾಗಿ ಪ್ರಯೋಗಗಳನ್ನು ನಡೆಸಿ, ಯಶಸ್ವಿಯಾಗಿರುತ್ತಾರೆ. ಮಕ್ಕಳಿಗಾಗಿ ಪರಿಶುದ್ಧವಾದ ಸಾಹಿತ್ಯವನ್ನು ಸೃಷ್ಟಿಸಿರುವುದಷ್ಟೇ ಅಲ್ಲದೆ, ಅವರ ವಿದ್ಯಾಭ್ಯಾಸ ಕ್ರಮದಲ್ಲೇ ಪರಿವರ್ತನೆಯನ್ನು ಮಾಡಬಯಸಿ "ಬಾಲವನಂ" ಎಂಬ ಶಾಲೆಯನ್ನು ತೆರೆದು ಅನೇಕ ಪ್ರಯೋಗ ಗಳನ್ನು ನಡೆಸಿದ ನಿಪುಣರು ಅವರು. ಅವರು ಸಂಗ್ರಹಿಸಿ ಪ್ರಕಟಿಸಿರುವ "ಬಾಲ ಪ್ರಪಂಚ"ದ ಸಂಪುಟಗಳು ಕನ್ನಡ ಸಾರಸ್ವತ ಪ್ರಪಂಚದಲ್ಲಿಯೇ ಅದ್ವಿತೀಯವಾದ ಒಂದು ಸಾಧನೆ. ಇಂತೆಯೇ ಶ್ರೀಯುತರು ಇತ್ತೀಚೆಗೆ ಪ್ರಕಟಿಸಿರುವ ವಿಜ್ಞಾನ ಸಂಬಂಧವಾದ ಒಂದೊಂದು ಸಂಪುಟವೂ ಕನ್ನಡಕ್ಕೆ ಅಮೂಲ್ಯವಾದ ಕೊಡುಗೆ ಗಳಾಗಿವೆ; ವಿಸ್ಮಯಕಾರಿಯಾದ ಸಾಹಸಕಾರ್ಯ. ಸಂಘಸಂಸ್ಥೆಗಳೂ ಅಷ್ಟು ಸಮರ್ಪಕ ವಾಗಿ ಶೀಘ್ರವಾಗಿ ನಡೆಸಲು ಕಷ್ಟ ಸಾಧ್ಯವಾದ ಈ ಮಹಾ ಉದ್ಯಮದಲ್ಲಿ ಅವರು ಯಶಸ್ವಿಯಾಗಿದ್ದಾರೆ. ಕನ್ನಡ ಭಾಷೆ ವಿಜ್ಞಾನ ಮಾಧ್ಯಮವಾಗಬಲ್ಲುದು ಎಂಬುದನ್ನು ಇಷ್ಟೊಂದು ಬೃಹತ್ ಪ್ರಮಾಣದಲ್ಲಿ ಶಕ್ತಿವತ್ತಾಗಿ ತೋರಿಸಿಕೊಟ್ಟ ಸನ್ಮಾನ್ಯ ಕಾರಂತರ ಕೆಚ್ಚನ್ನು ಮೆಚ್ಚಿದರೆ ಸಾಲದು, ಅದನ್ನು ಗೌರವಿಸಿ ಅನುಸರಿಸಬೇಕು ವಿಜ್ಞಾನವಿದರು. ಸಿದ್ಧ ಸಾಹಿತಿಯಾದವನು ಜನತೆಯನ್ನು ಎಷ್ಟೆಲ್ಲ ರೀತಿಯಲ್ಲಿ ಎಚ್ಚರಿಸಬಲ್ಲ ಎಂಬುದಕ್ಕೆ ಶ್ರೀ ಕಾರಂತರ ಈ ಕಾರ್ಯವೆ ಸಾಕ್ಷಿ! ಶ್ರೀಯುತರು ಯಕ್ಷಗಾನದ ಆಗು ಹೋಗುಗಳನ್ನು ಆಳವಾಗಿ ಅಧ್ಯಯನಮಾಡಿ ಅದನ್ನು ಕುರಿತು ಒಂದು ಉದ್ಗ್ರಂಥವನ್ನು ಬರೆದಿರುವುದಲ್ಲದೆ, ಆ ಕಲೆಯ ಪುನರುಜ್ಜೀವನಕ್ಕಾಗಿ ಕಾರ್ಯತಃ ತುಂಬ ಶ್ರಮಿಸುತ್ತಿರುವುದು ಸ್ತುತ್ಯವಾದ ಸಂಗತಿ. ಶ್ರೀಮಾನ್ ಶಿವರಾಮ ಕಾರಂತರ ಪ್ರತಿಭೆಯ ಆಳ ಅಗಲಗಳನ್ನು ಇಷ್ಟೆಂದು ಬೊಟ್ಟುಮಾಡಿ ತೋರಿಸುವಂತಿಲ್ಲ. ಕನ್ನಡಕ್ಕಾಗಿಯೇ ತಮ್ಮ ಬದುಕನ್ನು ಮುಡುಪಿಟ್ಟು, ಕಷ್ಟ ನಿಷ್ಠೂರಗಳನ್ನು ಲೆಕ್ಕಿಸದೆ, ಸ್ತುತಿ ಸನ್ಮಾನಗಳಿಗೆ ಮೈಮರೆಯದೆ ವಿಶಿಷ್ಟವಾದ ವ್ಯಕ್ತಿತ್ವವುಳ್ಳ ಸಾಹಸಪ್ರಿಯರಾದ ಈ ಸಾಹಿತಿಗಳು ನಮ್ಮ ನಾಡಿನ ಒಂದು ಭಾಗ್ಯವೇ ಸರಿ. ಇಂಥ ಸಿದ್ಧಸಾಹಿತಿಗಳನ್ನು ಬರಮಾಡಿಕೊಂಡು ಅವರನ್ನು ಆದರಪೂರ್ವಕವಾಗಿ ಗೌರವಿಸಿ, ಪ್ರಶಸ್ತಿಯನ್ನು ನೀಡಿ ಸನ್ಮಾನಿಸಿದ್ದು ಉಚಿತವೇ ಆಗಿದೆ. ಈ ವಿಶೇಷ ಗೌರವವನ್ನು ಪಡೆದ ನಮ್ಮ ನಾಡಿನ ಹಿರಿಯ ಸಾಹಿತಿಗಳಾದ ಶ್ರೀಮಾನ್ ಕೋಟಾ ಶಿವರಾಮ ಕಾರಂತ ಅವರಿಗೆ ನಮ್ಮ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಈ ಮೂಲಕ ಸಲ್ಲಿಸಬಯಸುತ್ತೇವೆ. ಅವರ ಈ ಸಾಹಿತ್ಯಸೇವೆ ನಮ್ಮ ನಾಡಿಗೆ ಹಾಗೂ ನುಡಿಗೆ ಇನ್ನೂ ಹೆಚ್ಚು ಹೆಚ್ಚಾಗಿ ಲಭಿಸಿ, ಕನ್ನಡದ ಜ್ಞಾನಭಾಂಡಾರ ಸರ್ವದಾ ಅಭಿವೃದ್ಧಿಯಾಗುತ್ತಿರಲೆಂದು ಕೋರುತ್ತೇವೆ.

ನಲವತ್ತನಾಲ್ಕನೆಯ ಕನ್ನಡ ಸಾಹಿತ್ಯ ಸಮ್ಮೇಳನ

ನಲವತ್ತನಾಲ್ಕನೆಯ ಕನ್ನಡ ಸಾಹಿತ್ಯ ಸಮ್ಮೇಳನವು ೧೯೬೩ನೆಯ ಡಿಸೆಂಬರ್ ೨೮, ೨೯ ಮತ್ತು ೩೦ನೆಯ ತಾರೀಖುಗಳಲ್ಲಿ ತುಮಕೂರಿನ ಸಿದ್ಧಗಂಗಾ ಕ್ಷೇತ್ರದಲ್ಲಿ ಎಂದಿನಂತೆಯೇ ಅತ್ಯಂತ ವಿಜೃಂಭಣೆಯಿಂದ ನೆರವೇರಿತು. ಸಮ್ಮೇಳನಕ್ಕೆ ನಾಡಿನ ನಾನಾ ಕಡೆಗಳಿಂದ ಅನೇಕ ವಿದ್ವಾಂಸರೂ, ಕನ್ನಡದ ಅಭಿಮಾನಿಗಳೂ ಆಗಮಿಸಿದ್ದರು. ಸಿದ್ಧಗಂಗಾಮಠದ ಗುರುವರೇಣ್ಯರಾದ ಪೂಜ್ಯ ಶ್ರೀ ಶ್ರೀ ಶಿವ ಕುಮಾರ ಸ್ವಾಮಿಗಳವರ ನೇತೃತ್ವದಲ್ಲಿ ನಡೆದ ಈ ಸಾಹಿತ್ಯ ಸಮ್ಮೇಳನದ ವಿಶಿಷ್ಟ ವ್ಯವಸ್ಥೆಗಳೂ ಸಮರ್ಪಕವಾಗಿದ್ದು, ಪವಿತ್ರವಾದ ವಾತಾವರಣದಲ್ಲಿ ಸಮ್ಮೇಳನದ ಸಮಸ್ತ ಕಾರ್ಯಕಲಾಪಗಳೂ ಯಶಸ್ವಿಯಾಗಿ ನಡೆದದ್ದು ಒಂದು ಹೆಮ್ಮೆಯೇ ಸರಿ. ಕನ್ನಡನಾಡಿನ ವಿಖ್ಯಾತ ವಿದ್ವಾಂಸರಾದ ಡಾ|| ರಂ. ಶ್ರೀ. ಮುಗಳಿ ಎಂ.ಎ., ಬಿ.ಟಿ., ಡಿ.ಲಿಟ್., ಅವರು ಈ ಬಾರಿಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ರಾಗಿ ಆಯ್ಕೆಯಾಗಿದ್ದು, ಅತ್ಯಂತ ಬೋಧಪ್ರದವಾದ ಭಾಷಣವನ್ನು ಮಾಡಿದರು. ಅವರ ಭಾಷಣದ ಸಾರಾಂಶವನ್ನು "ವಸ್ತುಕೋಶ"ದಲ್ಲಿ ಕೊಡಲಾಗಿದೆ. ಶ್ರೀಯುತರು ತಮ್ಮ ಭಾಷಣದಲ್ಲಿ ಕನ್ನಡನಾಡು ಮತ್ತು ಭಾರತದ ಐಕ್ಯ ವಿಚಾರ ವನ್ನು ಕುರಿತು ಸಮಯೋಚಿತವಾದ ಸಲಹೆಗಳನ್ನು ನೀಡಿರುತ್ತಾರೆ. ನಮ್ಮನ್ನು ಮತ್ತೆ ಮತ್ತೆ ಬಾಧಿಸುತ್ತಿರುವ ವಿವಿಧ ಭಾಷೆಗಳ ಸಮಸ್ಯೆಯನ್ನೂ ಬಗೆಹರಿಸಲು ಪ್ರಯತ್ನಿಸಿರುತ್ತಾರೆ. ಆಧುನಿಕ ಕನ್ನಡ ಸಾಹಿತ್ಯದ ಗುಣದೋಷಗಳನ್ನು ಬಹು ಜಾಣ್ಮೆಯಿಂದ ಬಿಡಿಸಿ ತೋರಿಸಿರುತ್ತಾರೆ. ಕನ್ನಡ ಸಾಹಿತ್ಯದ ಸಮಗ್ರ ಸ್ವರೂಪ ವನ್ನು ಮೇಲಿಂದ ಮೇಲೆ ಪರಿಶೀಲಿಸಿರುವ ಡಾ|| ರಂ. ಶ್ರೀ. ಮುಗುಳಿ ಅವರು ಹೇಳಿರುವ ಈ ಸಲಹೆ ಸೂಚನೆಗಳು ಸ್ವಾಗತಾರ್ಹವಾಗಿವೆ.

ಸಮ್ಮೇಳನದ ಅಂಗವಾಗಿ ಮಹಿಳಾಗೋಷ್ಠಿ, ಸಾಹಿತ್ಯಗೋಷ್ಠಿ, ಕವಿಗೋಷ್ಠಿ. ಪತ್ರಿಕಾಗೋಷ್ಠಿ ಮತ್ತು ನಾಟಕಗೋಷ್ಠಿಗಳು ಆಯಾ ಕ್ಷೇತ್ರಗಳಲ್ಲಿ ನಿಷ್ಣಾತರಾದ ವಿದ್ವಾಂಸರ ನೇತೃತ್ವದಲ್ಲಿ ನಡೆದುವು. ಪ್ರತಿಯೊಂದು ಗೋಷ್ಠಿಯಲ್ಲಿಯೂ ಆಯಾ ವಿಚಾರಕ್ಕೆ ಸಂಬಂಧಿಸಿದಂತೆ ವಿದ್ವಾಂಸರುಗಳ ವಿಚಾರವಿನಿಮಯ ನಡೆಯಿತು. ಮಹಿಳಾಗೋಷ್ಠಿಯ ಅಧ್ಯಕ್ಷತೆಯನ್ನು ವಹಿಸಿದ್ದ ಡಾ|| ಸರೋಜಿನಿ ಮಹಿಷಿ ಅವರು ತಮ್ಮ ಭಾಷಣದಲ್ಲಿ ಇಂದಿನ ಸಮಾಜದಲ್ಲಿ ಸ್ತ್ರೀಯರ ಪಾತ್ರವೇನೆಂಬುದನ್ನೂ, ಸಾಹಿತ್ಯಕ್ಷೇತ್ರದಲ್ಲಿ ಅವರು ಎಷ್ಟುಮಟ್ಟಿಗೆ ತಮ್ಮ ಸೇವೆಯನ್ನು ಸಲ್ಲಿಸಿದ್ದಾ ರೆಂಬುದನ್ನೂ, ವಿದ್ವತ್ಪೂರ್ವಕವಾಗಿ ವಿವರಿಸಿದರು. ಕನ್ನಡ ಜಾನಪದ ಸಾಹಿತ್ಯಕ್ಕೆ ಅಜ್ಞಾತರಾಗಿ ಕಾಣಿಕೆ ನೀಡಿರುವ ಹಳ್ಳಿಯ ಹೆಣ್ಣುಮಕ್ಕಳನ್ನು ಸ್ಮರಿಸಿ, ಸಮಾಜ ದಲ್ಲಿ ಕ್ರಾಂತಿಯಾದಂತೆಲ್ಲ ಸ್ತ್ರೀಯರ ಸ್ಥಿತಿಗತಿಗಳು ಹೇಗೆ ಪ್ರಗತಿ ಪಥದಲ್ಲಿ ಸಾಗುತ್ತಿವೆ ಎಂಬುದನ್ನು ಸಮರ್ಥಿಸಿದರು. ಇಂದಿನ ಭಾರತದಲ್ಲಿ ಹೆಣ್ಣು ಮಕ್ಕಳಿಗೆ ಎಂಥ ಶ್ರೇಷ್ಠವಾದ ಭವಿಷ್ಯವಿದೆಯೆಂಬುದನ್ನು ತೋರಿಸಿಕೊಟ್ಟು,

ಕನ್ನಡ ಲೇಖಕಿಯರು ಈವರೆಗೆ ಮಾಡಿರುವ ಕೆಲಸವನ್ನು ಸಂಕ್ಷಿಪ್ತವಾಗಿ ಪರಿಚಯ ಮಾಡಿಕೊಟ್ಟರು. ಸಾಹಿತ್ಯಗೋಷ್ಠಿಯ ಅಧ್ಯಕ್ಷರಾದ ಶ್ರೀಮಾನ್ ರಾ. ಯು. ಧಾರವಾಡಕರ್ ಅವರು ತಮ್ಮ ಭಾಷಣದಲ್ಲಿ ಸಾಹಿತ್ಯದ ವ್ಯಾಸಂಗದಲ್ಲಿ ತೋರಿ ಬರುತ್ತಿರುವ ಆಸೆ ನಿರಾಸೆಗಳೆರಡನ್ನೂ ಪೃಥಕ್ಕರಿಸಿ, ನಿತ್ಯ ಜೀವನಕ್ಕೂ ಅಧ್ಯಯನಕ್ಕೂ ಇರುವ ಸಂಬಂಧವನ್ನು ಸೂಕ್ಷ್ಮವಾಗಿ ಪರಿಶೀಲಿಸಿದರು. ಸಾಹಿತ್ಯದ ಸೃಷ್ಟಿ ಹಸನಾಗಬೇಕೆಂದು ಹಾರೈಸಿ "ಸಾಹಿತ್ಯ ನಿರ್ಮಿತಿಯ ಜೊತೆಗೆ ಸಾಹಿತ್ಯ ವಿಮರ್ಶೆಯೂ, ಜಿಜ್ಞಾಸೆಯೂ, ವಿಶ್ಲೇಷಣೆಯೂ, ರಸವಿಮರ್ಶೆಯೂ ವಿಪುಲವಾಗಿ ಬೆಳೆದು ಬರಬೇಕು" ಎಂದು ಅಭಿಪ್ರಾಯಪಟ್ಟರು. ಈ ಗೋಷ್ಠಿಯ ಪ್ರಾಸ್ತಾವಿಕ ಭಾಷಣ ಮಾಡುತ್ತ ಶ್ರೀಮಾನ್ ಡಿ. ಜವರೇಗೌಡ ಅವರು ಕನ್ನಡ ಸಾಹಿತ್ಯದ ಸ್ವರೂಪ, ಸತ್ವ ಮತ್ತು ಸಿದ್ಧಿಗಳ ಇತಿಹಾಸವನ್ನೇ ಸಂಕ್ಷಿಪ್ತವಾಗಿ ಚಿತ್ರಿಸಿ, ಸಮಷ್ಟಿ ಪ್ರಜ್ಞೆ ವಿಕಾಸವಾದರೆ ಮಾತ್ರ ಮಹಾಸಾಹಿತ್ಯ ಸೃಷ್ಟಿಗೊಳ್ಳಬಲ್ಲುದೆಂಬುದನ್ನು ಸ್ಪಷ್ಟೀಕರಿಸಿ, ಹೊಸಗನ್ನಡ ಭಾಷೆ–ಸಾಹಿತ್ಯಗಳ ಪರಿಪುಷ್ಟಿಗೆ ಹೇಗೆ ಭಾಷಾಂತರ ಕಾರ್ಯ ಪೋಷಕವಾಗಬಲ್ಲುದೆಂಬುದನ್ನು ವಿವೇಚಿಸಿ, ಹಳಗನ್ನಡ ಕೃತಿಗಳನ್ನು ಹೊಸಗನ್ನಡ ಗದ್ಯದಲ್ಲಿ ಮರುವುಟ್ಟಿಸುವ ಪ್ರಯೋಗಗಳು ಅಗತ್ಯವೆಂದೂ, ಆಗಲೆ ಶೀಘ್ರವಾಗಿ ಲುಪ್ತವಾಗುತ್ತಿರುವ ಗ್ರಾಮ್ಯ ಶಬ್ದಸಂಪತ್ತಿಯನ್ನು ಆಯಾ ಪ್ರದೇಶದ ಲೇಖಕರು ತಮ್ಮ ತಮ್ಮ ಕೃತಿಗಳಲ್ಲಿ ಮೈಗೂಡಿಸಿಕೊಳ್ಳುವುದು ಸೂಕ್ತವೆಂದೂ ತಿಳಿಸಿ, ಆಧುನಿಕ ಕನ್ನಡ ಸಾಹಿತ್ಯ ಹೇಗೆ ಸಮಯೋಚಿತವಾಗಿ ಸಂಪುಷ್ಟವಾಗಿ ಜ್ಞಾನ ವಿಜ್ಞಾನಗಳ ನಿರೂಪಣೆಗೆ ಎಷ್ಟರಮಟ್ಟಿಗೆ ಸೂಕ್ತವಾದ ಮಾಧ್ಯಮವಾಗಬಲ್ಲುದು ಎಂಬುದನ್ನು ಒತ್ತಿ ಹೇಳಿದರು. ಕನ್ನಡದ ಸರ್ವತೋಮುಖವಾದ ಅಭಿವೃದ್ಧಿಗೆ ಹಲವಾರು ಉಪಯುಕ್ತವಾದ ಸಲಹೆಗಳನ್ನಿತ್ತು, "ಕನ್ನಡಕ್ಕಾಗಿ ಕೈಯೆತ್ತು; ನಿನ್ನ ಕೈ ಕಲ್ಪವೃಕ್ಷವಾಗುತ್ತದೆ! ಕನ್ನಡಕ್ಕಾಗಿ ಕೊರಳೆತ್ತು; ಅಲ್ಲಿ ಪಾಂಚಜನ್ಯ ಮೂಡುತ್ತದೆ! ಕನ್ನಡಕ್ಕಾಗಿ ಕಿರುಬೆರಳೆತ್ತಿದರೂ ಸಾಕು, ಇಂದು ಅದೆ ಗೋವರ್ಧನಗಿರಿಧಾರಿಯಾಗುತ್ತದೆ" ಎಂಬುದಾಗಿ ಕನ್ನಡದ ಅಭಿಮಾನ ಅಭಿವೃದ್ಧಿಗಳ ಬಗ್ಗೆ ಸರ್ವದಾ ಜಾಗೃತರಾಗಿರುವಂತೆ ಎಚ್ಚರಿಸಿದರು. ಕವಿಗೋಷ್ಠಿಯು ಸುಪ್ರಸಿದ್ಧ ತರುಣಕವಿಗಳಾದ ಡಾ|| ಜಿ. ಎಸ್. ಶಿವರುದ್ರಪ್ಪ ಅವರ ನೇತೃತ್ವದಲ್ಲಿ ಸಾಗಿತ್ತು. ಶ್ರೀಯುತರು ತಮ್ಮ ಭಾಷಣದಲ್ಲಿ ಕವಿ-ಕಾವ್ಯಗಳ ಸಂಬಂಧವನ್ನು ರೇಖಿಸಿ, ಕನ್ನಡದಲ್ಲಿ ಇಂದು ಗೊಂದಲವನ್ನೆಬ್ಬಿಸಿರುವ 'ನವ್ಯಕಾವ್ಯ'ದ ಬಗ್ಗೆ ತಮ್ಮ ಅಭಿಪ್ರಾಯವನ್ನು ಬಹು ಅರ್ಥವತ್ತಾಗಿ ತಿಳಿಸಿದರು. ನವ್ಯಕಾವ್ಯದ ರೂಪುರೇಷೆಗಳನ್ನು ಚಿತ್ರಿಸಿ, "ನವೋದಯ ಕಾವ್ಯದಿಂದ ನವ್ಯಕಾವ್ಯದ ಕಡೆಗೆ ನಮ್ಮ ಕವಿಗಳ ಕಣ್ಣು ಹೊರಳಿದಾಗ, ಅವರಿಗೆ ಪ್ರಧಾನವಾದ ಪ್ರಚೋದನೆ ಒದಗಿದ್ದು ಪಶ್ಚಿಮದಿಂದ, ಅದೂ ಟಿ. ಎಸ್. ಎಲಿಯಟ್‌ನ ಕಾವ್ಯಪರಂಪರೆಯಿಂದ—ಎಂಬುದನ್ನು ಒಪ್ಪಿಕೊಳ್ಳಬೇಕು. ಎಲಿಯಟ್‌ನ ಕಾವ್ಯವನ್ನು ಓದಿ, ಅದರ ನಾವೀನ್ಯತೆಗೆ

ಬೇರೆಗಾಗಿ, ಕೆಲವು ವ್ಯಕ್ತಿಗಳು ಪ್ರಯೋಗದಲ್ಲಿ ತೊಡಗಿದ್ದರಿಂದ ನವ್ಯಕಾವ್ಯ ಆವಿರ್ಭವಿಸಿತೇ ಹೊರತು, ಇಲ್ಲಿನ ಜನಜೀವನದ ಆಂತರಿಕ ಒತ್ತಡಗಳ ಕಾರಣದಿಂದ ಅಲ್ಲ. ಈ ಪ್ರಯೋಗ ಅಕಾಲಿಕವೆಂದಾಗಲೀ, ಅಸಾರ್ಥಕವೆಂದಾಗಲೀ ಯಾರೂ ಹೇಳಲಾರರು. ಪ್ರಯೋಗವಂತೂ ಅತ್ಯಂತ ಅಗತ್ಯವಾಗಿತ್ತು. ಆದರೆ ಈ ಪ್ರಯೋಗದಲ್ಲಿ ಒಂದು ಪ್ರಮಾದವಾಯಿತು. ಅದು ಈ ಕಾವ್ಯದಲ್ಲಿ ವ್ಯಕ್ತಗೊಂಡ ಮೂಲ ಮನೋಧರ್ಮ ಮತ್ತು ಅದರ ಸಮರ್ಥನೆಗಾಗಿ ತಯಾರಾದ ಹಸಿ ಹಸಿ ಸಿದ್ಧಾಂತಗಳು. ಎಲಿಯಟ್‌ನ ಕಾವ್ಯದಿಂದ ಪ್ರಚೋದಿತವಾಗಿ ಅಲ್ಲಿನ ರೀತಿ, ತಂತ್ರ ವೈವಿಧ್ಯ ಇತ್ಯಾದಿಗಳನ್ನು ನಮ್ಮಲ್ಲಿ ತಂದದ್ದು ಸ್ವಾಗತಾರ್ಹ; ಆದರೆ ಇಲ್ಲಿ ರೂಪುಗೊಂಡ ಕಾವ್ಯವೂ 'ಭಾವ'ದಲ್ಲಿ ಅಲ್ಲಿನ ಮನೋಭಾವವನ್ನೆ ಯಥಾವತ್ತಾಗಿ ಅನುಕರಿಸಿದ್ದು ವಿಷಾದನೀಯ" ಎಂದು ಈ ನೂತನ ಸಂಪ್ರದಾಯದ ಉಗಮದ ಗುಣದೋಷಗಳನ್ನು ತೋರಿಸಿಕೊಟ್ಟು ನವ್ಯಕಾವ್ಯದಲ್ಲಿ ಕಂಡುಬರುವ ನೂತನ ವಾದ ಪ್ರತಿಮೆಗಳು, ಆಡುಮಾತಿನ ಸರಣಿಗಳನ್ನು ಮೆಚ್ಚಿ, ಅದು ಓದುಗರಿಂದ ದೂರ ಸರಿದುದಕ್ಕಾಗಿ ವಿಷಾದಪಟ್ಟರು. ಭಿನ್ನಾಭಿಪ್ರಾಯಗಳು ಬೆಳೆದು ಭಿನ್ನ ಭಿನ್ನ ಪಂಥಗಳು ಏರ್ಪಟ್ಟ ಬಗ್ಗೆ ವ್ಯಾಕುಲಗೊಂಡರು. ಕಡೆಗೆ "ಇನ್ನು ನವ್ಯ–ಅನವ್ಯ ಇತ್ಯಾದಿ ಮಾತುಗಳನ್ನು ಆದಷ್ಟು ಕಡಿಮೆಮಾಡುವುದು ಅಗತ್ಯವಾಗಿದೆ. ನವೋದಯ ಕಾವ್ಯಪರಂಪರೆಯಿಂದ ಮುಂದುವರಿದ ಪರಂಪರೆಯೊಂದನ್ನು ಗುರುತಿಸಲು "ನವ್ಯ" ಎಂಬ ಹೆಸರನ್ನು ಒಂದು ಪಾರಿಭಾಷಿಕ ಪದವನ್ನಾಗಿ ಬಳಸಲಾಯಿತೆಂದು ಭಾವಿಸುವುದು ಒಳ್ಳೆಯದು. ನವ್ಯಕಾವ್ಯ, ನವ್ಯವಲ್ಲದ ಕಾವ್ಯ; ನವ್ಯ ಕವಿ, ರೋಮ್ಯಾಂಟಿಕ್ ಕವಿ ಇತ್ಯಾದಿ ಹಣೆಚೀಟಿಗಳನ್ನು ಅಂಟಿಸಿ ಕೂಗಾಡುವುದರಿಂದ ಯಾವ ಒಳಿತೂ ಸಾಧಿತವಾಗಲಾರದು. ಯಾವ ಕಾವ್ಯವೇ ಆಗಲಿ ನಿಜವಾಗಿಯೂ ಕಾವ್ಯವಾಗಬೇಕಾದರೆ ಅದು ನವ್ಯವಾಗಿರಲೇ ಬೇಕು" ಎಂದು ತಿಳಿಸಿದರು. ಹಿರಿಯ ಕವಿಗಳಾದ ಶ್ರೀಮಾನ್ ಪು. ತಿ. ನರಸಿಂಹಾಚಾರ್ಯ ಅವರು ಈ ಗೋಷ್ಠಿಯ ಪ್ರಾಸ್ತಾವಿಕ ಭಾಷಣವನ್ನು ಮಾಡಿ, ಕಾವ್ಯಪ್ರಜ್ಞೆಯ ರಹಸ್ಯವನ್ನು ಬಹು ಮಾರ್ಮಿಕವಾಗಿ ನಿರೂಪಿಸಿದರು. ನಮ್ಮೊಳಗೆ ಮಲಗಿರುವ ಪುರುಷೋತ್ತಮನನ್ನು ಜಾಗ್ರತಗೊಳಿಸಲು ಸಂತರು ಸಿದ್ಧರು ಋಷಿಗಳು ಕವಿ ವಿಭೂತಿಗಳೂ ಅನೇಕ ಮಾರ್ಗಗಳನ್ನು ಕಂಡರು; ಕವಿ ರಸಪಥವನ್ನು ಹಿಡಿದ. ತನ್ನ ಮಾತಿನ ಸೊಗಸಿನ ಮೂಲಕ ಇಂದ್ರಿಯದ್ವಾರದ ಪ್ರವೇಶವನ್ನು ಪಡೆದು ಕೊಂಡು, ಭಾವಗಳ ಚೆಲುವಿನಿಂದ ಮನೋದ್ವಾರವನ್ನೂ ಹೊಕ್ಕು, ರಸ ಸತ್ತ್ವದಿಂದ ಅಹಂಕಾರ ಚಿತ್ತ ದ್ವಾರವನ್ನು ದಾಟಿ ಅಲ್ಲಿ ಮುಂದೆ ಗರ್ಭಗುಡಿಯಲ್ಲಿ ಜಾಗರದಲ್ಲಿರುವ ಪುರುಷೋತ್ತಮನನ್ನು ಕಾಣುತ್ತಾನೆ ಶ್ರೇಷ್ಠತಮ ಕವಿ, ಋಷಿಕವಿ. ನಮ್ಮ ಒಳ್ಳೆಯ ಕವಿಗಳೂ ಈಚೀಚೆಯ ಬಾಗಿಲುಗಳಲ್ಲೆ ಉಳಿದಿರುತ್ತಾರೆ; ಋಷಿಕವಿ ಮಾತ್ರ ಆ ನೆಲೆಗೂ ಸಾಗುತ್ತಾನೆ–ಎಂದು ತಮ್ಮದೇ ಆದ, ವಿಶಿಷ್ಟವೂ ಬಂಧುರವೂ ನಿಶಿತಮತಿ

ಜನ್ಯವೂ ಚಿಂತನಶೀಲವೂ ಆದ ರಸತತ್ತ್ವವನ್ನು ಕವಿವರ್ಯರು ವರ್ಣಿಸಿದರು. ಪತ್ರಿಕಾ ಗೋಷ್ಠಿಯ ಅಧ್ಯಕ್ಷತೆಯನ್ನು 'ಪ್ರಜಾವಾಣಿ' ಪತ್ರಿಕೆಯ ಸಂಪಾದಕರಾದ ಶ್ರೀ ಟಿ. ಎಸ್. ರಾಮಚಂದ್ರರಾವ್ ಅವರು ವಹಿಸಿದ್ದರು. ಶ್ರೀಯುತರು ತಮ್ಮ ಭಾಷಣದಲ್ಲಿ ಪತ್ರಿಕಾ ಪ್ರಕಟನೆಯ ಕ್ಷೇತ್ರದಲ್ಲಿ ಕಂಡುಬರುವ ಕಷ್ಟನಷ್ಟಗಳನ್ನು ಹೃದಯಂಗಮ ವಾಗಿ ಚಿತ್ರಿಸಿ, ಕನ್ನಡ ಪತ್ರಿಕೆಗಳು ಈವರೆಗೆ ಏನನ್ನು ಸಾಧಿಸಿವೆ ಎಂಬುದನ್ನು ವಿವರಿಸಿದರು. ಪತ್ರಿಕಾಕರ್ತನು ಬಳಸುವ ಭಾಷೆ, ಆ ಕ್ಷೇತ್ರದಲ್ಲಿನ ಆತುರ ಆತಂಕಗಳು, ಇಡೀ ಕನ್ನಡ ನಾಡಿನಲ್ಲಿ ಕೆಲವು ವಿಚಾರಗಳ ಬಗ್ಗೆ ಏಕರೂಪವಾದ ಶಬ್ದಗಳನ್ನು ಪ್ರಯೋಗಿಸುವ ವಿಚಾರ—ಇವೇ ಮೊದಲಾದ ಅಂಶಗಳನ್ನು ಕುರಿತು ಸಮಾಲೋಚನೆ ಮಾಡಿದರು. 'ಪ್ರಪಂಚ' ಪತ್ರಿಕೆಯ ಸಂಪಾದಕರಾದ ಶ್ರೀಮಾನ್ ಪಾಟೀಲ ಪುಟ್ಟಪ್ಪನವರು ಈ ಗೋಷ್ಠಿಯನ್ನು ಉದ್ಘಾಟಿಸುತ್ತ, ಪತ್ರಿಕಾ ಪ್ರಕಟನೆಯ ಕ್ಲೇಶಗಳನ್ನು ಹೇಳಿದ್ದಲ್ಲದೆ, ಈ ಉದ್ಯಮವನ್ನು ಕೈಕೊಳ್ಳಲು ಮುಂದೆ ಬರುವ ತರುಣರಿಗೆ ಯಾವ ರೀತಿಯಾದ ಶಿಕ್ಷಣವನ್ನು ನೀಡಬೇಕೆನ್ನುವು ದನ್ನು ಕುರಿತು ಪ್ರಸ್ತಾವಿಸಿದರು. ನಾಟಕ ಗೋಷ್ಠಿಯ ಉದ್ಘಾಟನೆಯನ್ನು ಪದ್ಮಶ್ರೀ, ರಾಜಸೇವಾಸಕ್ತ ಶ್ರೀ ಸಿ. ಕೆ. ವೆಂಕಟರಾಮಯ್ಯ, ಎಂ.ಎ., ಎಲ್‌ಎಲ್.ಬಿ., ಅವರು ಮಾಡಿದರು. ಅಧ್ಯಕ್ಷಭಾಷಣವನ್ನು ಮಾಡಿದ ಡಾ|| ಎಂ. ಎಸ್. ಸುಂಕಾಪೂರ, ಅವರು ಕನ್ನಡ ನಾಟಕಗಳ ಸಮಗ್ರ ಇತಿಹಾಸವನ್ನೇ ಸಭೆಗೆ ಪರಿಚಯ ಮಾಡಿಕೊಟ್ಟರು. ಹಳ್ಳಿಗಳ ಕಡೆ ಕ್ಷೀಣಿಸುತ್ತಿರುವ ನಮ್ಮ ಬಯಲಾಟಗಳ ಸಂರಕ್ಷಣೆಯ ಬಗ್ಗೆ ಒತ್ತಿ ಹೇಳಿದರು. ಆಧುನಿಕ ಕನ್ನಡ ನಾಟಕ ರಂಗಕ್ಕೆ ದಿವಂಗತ ಟಿ. ಪಿ. ಕೈಲಾಸಂ ಅವರು ನೀಡಿದ ನವಸ್ಫೂರ್ತಿಯನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸಿದರು. ಶ್ರೀಮಾನ್ ಶ್ರೀರಂಗ ಅವರ ಪ್ರಯೋಗ ಗಳನ್ನು ಪ್ರಶಂಸಿಸಿದರು. ಮುಂದೆ ಕನ್ನಡರಂಗಭೂಮಿ ಪ್ರವರ್ಧಮಾನವಾಗಲು ಅನುಸರಿಸಬೇಕಾದ ಮಾರ್ಗಗಳನ್ನು ಕುರಿತು ನಾಟಕಲೇಖಕರು, ನಟರು ಮತ್ತು ನಾಟಕ ಸಂಸ್ಥೆಗಳ ಮಾಲೀಕರು ಹೇಗೆ ಪರಸ್ಪರವಾಗಿ ಸಹಕರಿಸಿ ಶ್ರಮಿಸ ಬೇಕೆನ್ನುವುದನ್ನು ವಿಚಾರಮಾಡಿದರು. ಇಷ್ಟೇ ಅಲ್ಲದೆ, ಪ್ರೇಕ್ಷಕ ವರ್ಗದವರ ಉತ್ತೇಜನವೂ ಯಾವ ರೀತಿ ದೊರೆಯಬೇಕೆನ್ನುವುದನ್ನು ತಿಳಿಸಿಕೊಟ್ಟರು.

ಈ ರೀತಿ ಮೂರು ದಿವಸಗಳೂ ಅನೇಕ ಗೋಷ್ಠಿಗಳು ನಡೆದುವು. ಜನ ಕಿಕ್ಕಿರಿದು ಸೇರುತ್ತಿದ್ದ ಸಭಾಂಗಣವು ಯಾವಾಗಲೂ ಉತ್ಸಾಹಪೂರ್ಣವಾ ಗಿರುತ್ತಿತ್ತು. ಸಮ್ಮೇಳನದ ಅಂಗವಾಗಿ ಏರ್ಪಡಿಸಿದ್ದ ಮನೋರಂಜನೆಯ ವಿವಿಧ ಕಾರ್ಯಕ್ರಮಗಳು ಜನಾನುರಾಗಕ್ಕೆ ಪಾತ್ರವಾದುವು. ಇಂತೆಯೇ ಚಿತ್ರಕಲೆ, ಪುಸ್ತಕ ಮತ್ತು ಪುರಾತನ ಓಲೆಯ ಗ್ರಂಥಗಳ ಪ್ರದರ್ಶನವು ವಿಶಿಷ್ಟವಾಗಿತ್ತು. ಮೇಲೆ ಹೇಳಿದ ಅನೇಕ ಗೋಷ್ಠಿಗಳಲ್ಲಿ ಕೆಲವು ಮಾರ್ಪಾಡುಗಳಾಗುವುದು ಅಗತ್ಯ ವೆಂದು ತೋರಿಬರುತ್ತದೆ. ಪ್ರತಿಯೊಂದು ಗೋಷ್ಠಿಗೂ, ಅಧ್ಯಕ್ಷರು ಮತ್ತು ಪ್ರಾಸ್ತಾ

ವಿಕ ಭಾಷಣಕಾರರನ್ನು ನೇಮಿಸುವುದರಿಂದ ಸಭೆಗೆ ನಿಯಾಮಿತವಾಗಿರುವ ಕಾಲದ ಬಹುಭಾಗವು ಭಾಷಣಕ್ಕೇ ಹಿಡಿಸುವುದುಂಟು. ಎಷ್ಟೋ ವೇಳೆ, ಈ ಎರಡು ಭಾಷಣಗಳಲ್ಲಿಯೂ ಒಂದೇ ವಿಷಯ ಪುನರಾವೃತ್ತಿಯಾಗುವ ಸಂಭವವೂ ಉಂಟು. ಆದ್ದರಿಂದ, ಈ ಪದ್ಧತಿಯನ್ನು ಸುಧಾರಿಸುವುದು ಅಗತ್ಯ. ಅಧ್ಯಕ್ಷರು ಕಾರ್ಯ ಕಲಾಪಗಳನ್ನು ಮಾತ್ರ ನಿರ್ವಹಿಸಿದ್ದೇ ಆದರೆ, ಪ್ರಾಸ್ತಾವಿಕ ಭಾಷಣಕಾರರು ಆಯಾ ಗೋಷ್ಠಿಯ ವಿಚಾರವನ್ನು ಮುಂದಿಡಬಹುದು. ಅಧ್ಯಕ್ಷರು ವಿದ್ವಾಂಸರ ಅಭಿಪ್ರಾಯಗಳನ್ನು ಸಮಾಲೋಚಿಸಿ ಕಡೆಯಲ್ಲಿ ಒಂದು ಭಾಷಣ ಮಾಡಬಹುದು. ಅಂತೂ ಕಾಲದ ದೃಷ್ಟಿಯಿಂದ ಈ ಬದಲಾವಣೆ ಅಗತ್ಯ. ಎರಡನೆಯದಾಗಿ ಆಯಾ ಗೋಷ್ಠಿಯಲ್ಲಿ ಭಾಗವಹಿಸುವ ವಿದ್ವಾಂಸರ ಸಂಖ್ಯೆ ಮುಂಚಿತವಾಗಿಯೇ ನಿಯಮಿತವಾಗಿರಬೇಕು. " ಮುಂತಾದವರು " ಎಂಬ ಹೆಸರಿನಲ್ಲಿ ಆಯಾ ವೇಳೆಗೆ ಅಲ್ಲಿ ಬಂದಿದ್ದವರು ಭಾಗವಹಿಸುವ ಸಂಪ್ರದಾಯ ಸರಿಯೆನಿಸದು. ಈ ಬಾರಿಯ ಕವಿಗೋಷ್ಠಿ ಈ ಅಕ್ರಮದಿಂದ ಬಹುಮಟ್ಟಿಗೆ ನೀರಸವಾಗಿ ಪರಿಣಮಿಸಿತೆಂದು ಹೇಳಲು ವಿಷಾದವಾಗುತ್ತದೆ. ಈ ಒಂದೊಂದು ಗೋಷ್ಠಿಯ ಉದ್ದೇಶವೂ ಸಾರ್ಥಕವೆನ್ನಿಸಬೇಕಾದರೆ ಆಯಾ ಕ್ಷೇತ್ರಗಳಲ್ಲಿ ಹಲವಾರು ವರ್ಷಗಳ ಕಾಲ ಶ್ರಮಿಸಿ, ತಮ್ಮ ತಮ್ಮ ಪ್ರತಿಭೆ ಪಾಂಡಿತ್ಯಗಳಿಂದ ಪ್ರತಿಷ್ಠಿತರಾದಂಥ ಗಣ್ಯ ವಿದ್ವಾಂಸರನ್ನು ಭಾಗವಹಿಸುವಂತೆ ಆಯ್ಕೆ ಮಾಡುವುದು ಅತ್ಯಗತ್ಯ. ನಮ್ಮ ನಾಡಿಗೆ ಮತ್ತು ನುಡಿಗೆ ದುಡಿಯುತ್ತಿರುವ ಅನೇಕ ಹಿರಿಯರಿಗೆ ಇಂಥ ಸಮಾರಂಭಗಳಲ್ಲಿ ಆದ್ಯತೆ ದೊರೆಯದಿದ್ದರೆ ಬೇರೆ ಎಲ್ಲಿ ಅವರಿಗೆ ದೊರೆಯಬೇಕು? ಇದು ಪರಿಷತ್ತಿನ ಮತ್ತು ಆಯಾ ಸಮ್ಮೇಳನದ ಸ್ವಾಗತ ಸಮಿತಿಯವರ ಗುರುತರವಾದ ಹೊಣೆ. ಇತ್ತೀಚೆಗೆ ನಡೆಯುತ್ತಿರುವ ಗೋಷ್ಠಿಗಳಲ್ಲಿ ಆಧುನಿಕ ಕನ್ನಡ ಸಾಹಿತ್ಯದ ಬಗ್ಗೆ ಹೆಚ್ಚು ವಿಚಾರವಿಮರ್ಶೆಗಳು ನಡೆಯುತ್ತಿವೆಯೇ ಹೊರತು, ಪ್ರಾಚೀನ ಗ್ರಂಥಗಳ ಪರಿಶೀಲನೆ, ಕಾವ್ಯಭಾಗಗಳ ವಾಚನ ಮೊದಲಾದ ಕಾರ್ಯಕ್ರಮಗಳು ಸಾಕಾದಷ್ಟು ಆಗುತ್ತಿಲ್ಲ. ಇತ್ತೀಚೆಗೆ ಜನಪದ ಸಾಹಿತ್ಯದ ಸಂಗ್ರಹಕಾರ್ಯ ಬಹಳ ಆಶಾದಾಯಕವಾಗಿ ನಡೆದಿದೆ. ಈ ಬಗ್ಗೆ ಒಂದು ವಿಚಾರಗೋಷ್ಠಿ ಅಗತ್ಯ. ಪ್ರತಿಯೊಂದು ಸಮ್ಮೇಳನದಲ್ಲಿಯೂ ಯಾವುದಾದರೂ ಒಂದು ಕಾವ್ಯಪ್ರಕಾರವನ್ನೋ, ಇಲ್ಲವೇ ಪುರಾತನ ಶ್ರೇಷ್ಠ ಕವಿಯ ಕೃತಿಗಳನ್ನೋ ಕುರಿತು ಒಂದು ಗೋಷ್ಠಿಯನ್ನು ತಪ್ಪದೆ ಏರ್ಪಡಿಸಿದರೆ ತುಂಬ ಉಪಯುಕ್ತವಾದೀತು. ಸಾವಿರಾರು ರೂಪಾಯಿಗಳು ವೆಚ್ಚವಾಗುವ ಇಂಥ ಸಮ್ಮೇಳನಗಳು ಕೇವಲ ವಿಹಾರ ವಿನೋದಗಳಲ್ಲಿಯೇ ಮುಕ್ತಾಯವಾಗದೆ ವಿಚಾರಪೂರ್ಣವಾದ ವಿದ್ವತ್ ಸಮ್ಮೇಳನಗಳೂ ಆಗಿ ನಾಡಿಗೆ ಶ್ರೇಯಸ್ಕರವಾಗಿರಬೇಕೆಂಬುದೇ ಈ ಸೂಚನೆಯ ಮುಖ್ಯ ಉದ್ದೇಶ. ಕನ್ನಡ ಅಭಿಮಾನಿಗಳೂ, ಕನ್ನಡ ವಿದ್ವಾಂಸರೂ ಒಂದು ಕಡೆ ಸೇರುವ ಈ ಸಮಾರಂಭ ಪ್ರಾಚೀನ ಮತ್ತು ನವೀನ ಸಂಪ್ರದಾಯಗಳೆರಡನ್ನೂ ಸಮನ್ವಯಗೊಳಿಸಿಕೊಂಡು ಸರ್ವರಿಗೂ ಫಲಪ್ರದವಾಗಲೆಂದು ಆಶಿಸುತ್ತೇವೆ.

ಬಾಷ್ಪಾಂಜಲಿ

ಶ್ರೀಮಾನ್ ' ಆನಂದ ' ಅವರ ನಿಧನ

ಕನ್ನಡ ಸಣ್ಣಕತೆಗಳ ಹೆಸರೆತ್ತಿದ ಕೂಡಲೆ ತಟ್ಟನೆ ನೆನಪಾಗುವ ಹೆಸರುಗಳಲ್ಲಿ ಶ್ರೀಮಾನ್ ' ಆನಂದ'ರದು ಒಂದು. ಆ ಅಂಕಿತದಲ್ಲಿ ಕಥೆಗಳನ್ನು ಬರೆದು ನಮಗೆ ಅನ್ವರ್ಥವಾಗಿ ಆನಂದವನ್ನು ನೀಡುತ್ತಿದ್ದ ಶ್ರೀಮಾನ್ ಎ. ಸೀತಾರಾಂ ಅವರು ೧೬–೧೧–೧೯೬೩ ರಂದು ನಮ್ಮನ್ನು ಅಗಲಿಹೋದದ್ದು ಕನ್ನಡಿಗರ ದುರ್ದೈವವೇ ಸರಿ. ಶ್ರೀಯುತರು ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಗಳಾಗಿದ್ದ ಕಾಲಕ್ಕೆ, ಆಗತಾನೆ ಕನ್ನಡದಲ್ಲಿ ಸಣ್ಣಕತೆಗಳು ಕಣ್ತೆರೆಯಲಾರಂಭಿಸಿದ್ದುವು. ಆ ನವೋದಯ ಕಾಲದಲ್ಲಿ ಶ್ರೀಮಾನ್ ಆನಂದ ಅವರು “ ಭವತಿ ಭಿಕ್ಷಾಂ ದೇಹಿ ” ಎಂಬ ಕಥೆಯನ್ನು ಬರೆದು ಹಿರಿಯರ ಪ್ರಶಂಸೆಗೆ ಪಾತ್ರರಾದರು. ಅಂದಿನಿಂದ ಏಕಪ್ರಕಾರವಾಗಿ ಅನೇಕ ಸಣ್ಣಕತೆಗಳನ್ನು ರಚಿಸಿ, ಅದರಲ್ಲಿ ಒಂದು ಅಪೂರ್ವವಾದ ಸಿದ್ಧಿಯನ್ನು ಸಂಪಾದಿಸಿದ್ದರು. ಶ್ರೀಯುತರು ಶೃಂಗಾರವನ್ನು ಬಹು ನಯವಾಗಿಯೂ, ನವಿರಾಗಿಯೂ, ಸುಸಂಸ್ಕೃತವಾದ ರೀತಿಯಲ್ಲಿಯೂ ನಿರೂಪಿಸುವ ನೈಪುಣ್ಯವನ್ನು ಪಡೆದಿದ್ದರು. ಅವರ ಶೈಲಿಯಂತೂ, ಸಮಯೋಚಿತವಾಗಿ ಸರಳವಾಗಿಯೂ, ಅರ್ಥವತ್ತಾಗಿಯೂ, ಹಿತಮಿತವಾದ ಸಂಸ್ಕೃತ ಶಬ್ದಗಳಿಂದ ಕೂಡಿ ಗಂಭೀರ ವಾಗಿಯೂ ಇರುತ್ತಿದ್ದಿತು. “ ಕೆಲವು ಕಥೆಗಳು ” ಎನ್ನುವುದೇ ಅವರ ಮೊಟ್ಟ ಮೊದಲನೆಯ ಕಥಾಸಂಕಲನ. ಅನಂತರ ಪ್ರಕಟವಾದ ಒಂದೊಂದು ಕಥಾ ಸಂಗ್ರಹವೂ ಅವರ ಪ್ರತಿಭೆಯು ಪ್ರವರ್ಧಮಾನಕ್ಕೆ ಬಂದ ಕುರುಹುಗಳಾಗಿವೆ. ಶ್ರೀಮಾನ್ ಆನಂದ ಅವರು ಲೇಖನವನ್ನೇ ವೃತ್ತಿಯನ್ನಾಗಿ ಸ್ವೀಕರಿಸಿದ ಮೇಲೆ ಕಾದಂಬರಿ, ನಾಟಕ, ಅನುವಾದಗಳು ಮತ್ತು ನುಡಿಚಿತ್ರಗಳನ್ನು ಬರೆಯತೊಡ ಗಿದರು. ಯಾವ ಕೃತಿಯೂ ಸಹ ಎಂದಿಗೂ ಗುಣದ ದೃಷ್ಟಿಯಿಂದ ಹಿಂದೆ ಬಿದ್ದಿಲ್ಲ. ಮಹಾಸಾಹಿತಿ ಲಿಯೋ ಟಾಲ್‌ಸ್ಟಾಯ್ ಅವರ ಆತ್ಮಕಥೆಯನ್ನೂ, ಅಲೆಕ್ಸಿ ಟಾಲ್‌ಸ್ಟಾಯ್ ಅವರ ಮಹಾಕಾದಂಬರಿ ' ಆರ್ಡಿಯಲ್ ' (ಉಗ್ರಪರೀಕ್ಷೆ) ನ್ನೂ ಶ್ರೇಷ್ಠವಾಗಿ ಅನುವಾದ ಮಾಡಿರುವುದೂ ಅಲ್ಲದೆ ಮತ್ತೆಷ್ಟೋ ರೂಪಾಂತರ ಕೃತಿಗಳನ್ನೂ ರಚಿಸಿದರು. ಆಧುನಿಕ ಕನ್ನಡ ಸಾಹಿತ್ಯದ ಇತಿಹಾಸವನ್ನು ಬರೆಯು ವಲ್ಲಿ ಸಣ್ಣ ಕತೆಯ ಪ್ರಾಕಾರದಲ್ಲಿ ಸರ್ವದಾ ಬೆಳಗುತ್ತಿರುವ ಹಣತೆಗಳಲ್ಲಿ ಆನಂದರು ತಮ್ಮ ಜೀವನ ತೈಲವನ್ನೆರೆದು ಹತ್ತಿಸಿರುವ ಜ್ಯೋತಿಯೂ ಒಂದು ಎನ್ನುವುದನ್ನು ಯಾರೂ ಮರೆಯುವಂತಿಲ್ಲ. ಸ್ನೇಹಪರರೂ, ಸಹೃದಯಿಗಳೂ, ಸರ್ವದಾ ಸುಪ್ರಸನ್ನ ಚಿತ್ತರೂ ಆಗಿದ್ದ ' ಆನಂದ 'ರು ತಮ್ಮ ೬೧ನೆಯ ವಯಸ್ಸಿನಲ್ಲಿ ಅನಿರೀಕ್ಷಿತವಾಗಿ ಹೃದಯಸ್ತಂಭನದಿಂದ ದೈವಾಧೀನರಾದದ್ದು ಕನ್ನಡಕ್ಕೆ ಒಂದು ದೊಡ್ಡ ನಷ್ಟವೇ.

ಸರಿ. ಪರಮಾತ್ಮನು ದಿವಂಗತರ ಆತ್ಮಕ್ಕೆ ಶಾಂತಿಯನ್ನೂ, ಅವರ ಬಂಧು ಮಿತ್ರರಿಗೆ ಈ ದುರ್ಭರವಾದ ವಿಯೋಗವನ್ನು ಸಹಿಸುವ ಸ್ಥೈರ್ಯವನ್ನೂ ದಯಪಾಲಿಸಲೆಂದು ಬೇಡುತ್ತೇವೆ.

ಸರ್ದಾರ್ ಕೆ. ಎಂ. ಫಣಿಕ್ಕರ್ ಅವರ ನಿಧನ

ಇತ್ತೀಚೆಗೆ ತಾನೆ ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಯ ಅಧಿಕಾರ ವನ್ನು ವಹಿಸಿಕೊಂಡ ಸರ್ದಾರ್ ಕೆ. ಎಂ. ಫಣಿಕ್ಕರ್ ಅವರು ೧೦-೧೨-೬೩ರಂದು ಹಠಾತ್ತನೆ ಹೃದಯಸ್ತಂಭನದಿಂದ ನಿಧನರಾದದ್ದು ಒಟ್ಟು ದೇಶಕ್ಕೇ ಅಪಾರವಾದ ನಷ್ಟವೇ ಸರಿ. ಮೊನ್ನೆ ತಾನೆ ಆ ಮಹನೀಯರನ್ನು ನಮ್ಮ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿ ಹೃತ್ಪೂರ್ವಕವಾಗಿ ಸ್ವಾಗತಿಸಿದ ನಮಗೆ ಈಗ ಅವರ ಹಠಾತ್ತಾದ ಮರಣಕ್ಕಾಗಿ ಕಂಬನಿ ಮಿಡಿಯುವ ದೌರ್ಭಾಗ್ಯವೊದಗಿದೆ. ಶ್ರೀಯುತರ ಪ್ರತಿಭೆ ಬಹುಮುಖವಾದದ್ದು. ಇತಿಹಾಸ, ಸಾಹಿತ್ಯ, ರಾಜಕೀಯಶಾಸ್ತ್ರ, ಸಾರ್ವಜನಿಕ ಆಡಳಿತಗಳಲ್ಲಿ ಅವರು ಅದ್ವಿತೀಯವಾದ ಅನುಭವವನ್ನೂ ವಿದ್ವತ್ತನ್ನೂ ಗಳಿಸಿದ್ದರು. ನಮ್ಮ ದೇಶದ ಏಳಿಗೆಗೆ ಸಂಬಂಧಿಸಿದ ರಾಜಕೀಯ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಅವಿಶ್ರಾಂತವಾದ ಸೇವೆ ಸಲ್ಲಿಸಿದ್ದರು. ಶ್ರೀಯುತರ ಸೇವಾಕ್ಷೇತ್ರವು ಎಷ್ಟು ವೈವಿಧ್ಯ ಹಾಗೂ ವಿಸ್ತೃತವಾಗಿದ್ದಿತೋ ಅವರ ಗ್ರಂಥರಾಶಿಯೂ ಸಹ ಅಷ್ಟೇ ಅಪಾರವಾದುದು. ಚರಿತ್ರೆಯೇ ಆಗಲಿ, ಸಾಹಿತ್ಯವೇ ಆಗಲಿ, ಪ್ರಚಲಿತ ರಾಜಕೀಯ ಸಮಸ್ಯೆಯೇ ಆಗಲಿ, ಪೂರ್ವಾಪರಗಳನ್ನು ತಮ್ಮದೇ ಆದ ನಿಲುವಿನಿಂದ ವಿಮರ್ಶಿಸಿ, ವಿಚಾರಿಸಿ, ಸ್ವತಂತ್ರವಾದ ಮತ್ತು ನೂತನವಾದ ಅಭಿಪ್ರಾಯಗಳನ್ನು ಕೆಚ್ಚಿನಿಂದ ಮುಂದಿಡುವ ಮನೋಧರ್ಮ ಅವರದಾಗಿತ್ತು. ಅವರ ವಿಚಾರದಲ್ಲಿ ವೃದ್ಧಾಪ್ಯದ ಅನುಭವವೂ, ಪ್ರತಿಪಾದನೆ ಯಲ್ಲಿ ಯುವಕರ ಉತ್ಸಾಹವೂ ಮಿಳಿತವಾಗಿದ್ದು ಎಲ್ಲರಿಗೂ ಅತ್ಯಂತ ಪ್ರಬೋಧಕ ವಾಗಿರುತ್ತಿತ್ತು. ಇಂಥ ಮೇಧಾವಿಗಳೂ, ಕಾರ್ಯದಕ್ಷರೂ ಆದ ಗಣ್ಯ ವಿದ್ವಾಂಸರು ನಮ್ಮ ವಿಶ್ವವಿದ್ಯಾನಿಲಯದ ಆಡಳಿತವನ್ನು ವಹಿಸಿಕೊಂಡಿದ್ದು ನಮ್ಮೆಲ್ಲರಿಗೂ ಒಂದು ಶುಭೋದಯದ ಸೂಚನೆಯೆನಿಸಿತ್ತು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅನೇಕ ನೂತನವಾದ ಯೋಜನೆಗಳನ್ನು ಕಾರ್ಯರೂಪಕ್ಕೆ ತಂದು, ಇಲ್ಲಿನ ಹಲವಾರು ಕುಂದುಕೊರತೆಗಳನ್ನು ನಿವಾರಿಸಬೇಕೆಂದು ಅವರು ಸಂಕಲ್ಪಿಸಿದ್ದರು. ಅವರ ನೇತೃತ್ವದಲ್ಲಿ ವಿಶ್ವವಿದ್ಯಾನಿಲಯವು ನಾನಾ ರೀತಿಯಾಗಿ ಪ್ರಗತಿಪರವಾದೀತೆಂದು ಪ್ರತಿಯೊಬ್ಬರ ಆಕಾಂಕ್ಷೆಯಾಗಿತ್ತು. ಆದರೆ, ಶ್ರೀಯುತರು ಇದ್ದಕ್ಕಿದ್ದಂತೆಯೇ ದೈವಾಧೀನರಾದದ್ದು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಮಾತ್ರವಲ್ಲದೆ, ಒಟ್ಟು ದೇಶದ ಆಶೋತ್ತರಗಳಿಗೆಲ್ಲ ಒಂದು ದೊಡ್ಡ ಆಘಾತವುಂಟಾಯಿತು. ಈ ನಿರಾಶೆ ಯನ್ನು ಮಾತುಗಳಿಂದ ಹೇಳಲಸದಳ. ಕಟ್ಟಕಡೆಯತನಕ ತಮಗೆ ಅತ್ಯಂತ

ಆಪ್ತವಾದ ವಿದ್ವತ್ ಕಾರ್ಯದಲ್ಲಿಯೇ ನಿರತರಾಗಿದ್ದು ಹೃದಯಸ್ತಂಭನದಿಂದ ನಿಧನರಾದರು. ವಿದ್ವತ್ಪೂರ್ಣವಾದ ಅವರ ಬದುಕು ಅಸದೃಶವಾದ ರೀತಿಯಲ್ಲಿ ಕೊನೆಗಂಡಿತು. ಭಗವಂತನು ಶ್ರೀಯುತರ ಆತ್ಮಕ್ಕೆ ಶಾಂತಿಯನ್ನೂ ಅವರ ಮನೆಯವರಿಗೆ ಈ ಅನಿರೀಕ್ಷಿತ ದುಃಖವನ್ನು ಸಹಿಸುವ ಸಹನೆಯನ್ನೂ ದೇಶ, ವಿದೇಶಗಳಲ್ಲಿರುವ ಅವರ ಸಾವಿರಾರು ಮಿತ್ರರಿಗೆ ಈ ವಿಯೋಗದಿಂದ ಉಂಟಾಗಿರುವ ವ್ಯಥೆಯನ್ನು ಸಹಿಸಿಕೊಳ್ಳುವ ಶಕ್ತಿಯನ್ನೂ ನೀಡಲೆಂದು ಕೋರುತ್ತೇವೆ.

ಡಾ|| ಬಿ. ಎ. ಸಾಲೆತೊರೆ, ಎಂ.ಎ., ಪಿಎಚ್.ಡಿ., ಡಿ.ಫಿಲ್., ಅವರ ನಿಧನ.

ಕನ್ನಡ ನಾಡು ಮತ್ತು ಭಾರತದ ಇತಿಹಾಸ ತಜ್ಞರಲ್ಲಿ ಒಬ್ಬರಾದ ಡಾ|| ಬಿ. ಎ. ಸಾಲೆತೊರೆ ಅವರು ೧೮–೧೨–೧೯೬೩ರಂದು ಧಾರವಾಡದಲ್ಲಿ ನಿಧನರಾದರೆಂಬ ಸುದ್ದಿ ಅತ್ಯಂತ ವಿಷಾದಕರವಾದುದು. ಶ್ರೀಯುತರು ಅನೇಕ ವರ್ಷಗಳ ಕಾಲ ಇತಿಹಾಸ ಕ್ಷೇತ್ರದಲ್ಲಿ ಶ್ರಮಿಸಿ, ಬೇರೆ ಬೇರೆ ವಿದ್ಯಾ ಸಂಸ್ಥೆಗಳಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ, ಈಗ್ಗೆ ಕೆಲವು ವರ್ಷಗಳಿಂದ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಇತಿಹಾಸದ ಪ್ರಾಧ್ಯಾಪಕರೂ ಮತ್ತು ಕನ್ನಡ ಸಂಶೋಧನೆ ಸಂಸ್ಥೆಯ ಮುಖ್ಯಾಧಿಕಾರಿಗಳೂ ಆಗಿದ್ದು ಉತ್ತಮೋತ್ತಮವಾದ ಕೆಲಸವನ್ನು ನಿರ್ವಹಿಸಿದ್ದರು. ಈಗ ತಾನೆ ತಮ್ಮ ಹುದ್ದೆಯಿಂದ ನಿವೃತ್ತರಾಗಿದ್ದರು. ಶ್ರೀಯುತರು ವಿಜಯನಗರದ ಸಾಮಾಜಿಕ ಮತ್ತು ರಾಜಕೀಯ ಜೀವನವನ್ನು ಕುರಿತು ಬರೆದಿರುವ ಎರಡು ಸಂಪುಟಗಳಂತೂ ಇತಿಹಾಸ ಕ್ಷೇತ್ರದಲ್ಲಿ ಚಿರಸ್ಮರಣೀಯ ಗ್ರಂಥಗಳಾಗಿವೆ. ಕರ್ನಾಟಕದ ಚರಿತ್ರೆಯನ್ನು ಕುರಿತು ಬರೆದಿರುವ ಗ್ರಂಥವೂ, ಹಲವಾರು ಲೇಖನಗಳೂ ಅಷ್ಟೇ ಅಮೂಲ್ಯವಾಗಿವೆ. ಶ್ರೀಯುತರ ಬರೆಹಗಳಲ್ಲಿ ಕಂಡು ಬರುವ ವಿಷಯಸಂಪತ್ತು, ಸ್ವತಂತ್ರ ದೃಷ್ಟಿ, ವಿಚಾರವಿನ್ಯಾಸ, ಸ್ಪಷ್ಟವಾದ ಅಭಿಪ್ರಾಯಗಳು ಇತಿಹಾಸದ ಅಧ್ಯಯನವನ್ನು ಕೈಕೊಳ್ಳುವವರಿಗೆ ತುಂಬ ಆದರ್ಶಯುತವಾದ ಗುಣಗಳು. ದೇಶ ಮತ್ತು ವಿದೇಶಗಳಲ್ಲಿ ನಡೆದ ಇತಿಹಾಸ ಸಂಬಂಧವಾದ ಅನೇಕ ಗೋಷ್ಠಿಗಳಲ್ಲಿ ಶ್ರೀಯುತರು ಭಾಗವಹಿಸಿದ್ದರು. ಭಾರತದ ಪ್ರಾಚ್ಯಭಾಂಡಾರದ ಮುಖ್ಯಾಧಿಕಾರಿಗಳಾಗಿದ್ದುದಲ್ಲದೆ, ೧೯೫೩ರಲ್ಲಿ ಹೇಗ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಪ್ರಾಚ್ಯಭಾಂಡಾರದ ಸಮ್ಮೇಳನಕ್ಕೆ ಭಾರತದ ಪ್ರತಿನಿಧಿಯಾಗಿ ಹೋಗಿದ್ದರು. ಕನ್ನಡ ನಾಡಿನ ಈ ಗಣ್ಯ ವಿದ್ವಾಂಸರು ತಮ್ಮ ೬೩ನೆಯ ವಯಸ್ಸಿನಲ್ಲಿ ಇದ್ದಕ್ಕಿದ್ದಂತೆಯೇ ಹೃದಯಸ್ತಂಭನದಿಂದ ನಿಧನರಾದದ್ದು ಅತ್ಯಂತ ದುಃಖಕರವಾದ ಸಂಗತಿ. ಕರ್ನಾಟಕದ ನಿರ್ಮಾಣವಾಗಿರುವ ಈ ತರುಣದಲ್ಲಿ ಅದರ ಇತಿಹಾಸವನ್ನು ಜನರಿಗೆ ಮುಂದಟ್ಟು ಮಾಡಿಕೊಡಲು ಇಂಥ ನುರಿತ ಹಾಗೂ ಅರಿತ ವಿದ್ವಾಂಸರ ಅಗತ್ಯ ಬಹಳವಾಗಿತ್ತು. ಅವರನ್ನು ಕಳೆದುಕೊಂಡ ನಾಡು ತುಂಬ ನಷ್ಟಕ್ಕೆ ಗುರಿಯಾಗಿದೆ. ಅವರ ಅನಿರೀಕ್ಷಿತವಾದ ಸಾವಿನಿಂದ ಉಂಟಾಗಿರುವ ದುಃಖವನ್ನು

ಸಹಿಸಲು ಅವರ ಬಂಧುಮಿತ್ರರಿಗೆಲ್ಲ ಪರಮಾತ್ಮನು ಧೈರ್ಯವನ್ನೂ, ಮೃತರ ಆತ್ಮಕ್ಕೆ ಶಾಂತಿಯನ್ನೂ ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ.

ವಿನಂತಿ

ಸಂಪಾದಕ ಮಂಡಲಿಯವರು ತೀರ್ಮಾನಿಸಿದ್ದಂತೆ 'ಪ್ರಬುದ್ಧ ಕರ್ಣಾಟಕ'ದ ೪೫ನೆಯ ಸಂಪುಟದ ಈ ನಾಲ್ಕನೆಯ ಸಂಚಿಕೆಯನ್ನು ಸ್ವಾಮಿ ವಿವೇಕಾನಂದರವರ ವಿಶೇಷ ಸಂಚಿಕೆಯನ್ನಾಗಿ ಪ್ರಕಟಿಸಬೇಕೆಂಬುದಾಗಿ ಸಂಕಲ್ಪಿಸಿ ಅದಕ್ಕಾಗಿ ಅನೇಕ ವಿದ್ವಾಂಸರುಗಳನ್ನು ಲೇಖನಗಳನ್ನು ಕೊಡಬೇಕೆಂಬುದಾಗಿ ಕೇಳಿಕೊಳ್ಳಲಾಗಿತ್ತು. ಕೆಲವರು ತಮ್ಮ ಅಮೂಲ್ಯವಾದ ಲೇಖನಗಳನ್ನಿತ್ತು ಉಪಕರಿಸಿದ್ದಾರೆ. ಇನ್ನೂ ಹಲವಾರು ಲೇಖನಗಳು ಬರುವುದೆಂಬ ನಿರೀಕ್ಷೆಯಿತ್ತು. ಅವುಗಳಿಗಾಗಿ ಎದುರು ನೋಡಿ, ಸಕಾಲದಲ್ಲಿ ನಮಗೆ ಲೇಖನಗಳು ಲಭಿಸದೆ ಹೋದ ಪ್ರಯುಕ್ತ, ಪ್ರಕೃತ ಸಂಚಿಕೆಯಲ್ಲಿ ಇತರ ಲೇಖನಗಳನ್ನೂ ಸೇರಿಸಬೇಕಾಗಿ ಬಂದುದಲ್ಲದೆ, ಈ ಸಂಚಿಕೆ ಪ್ರಕಟವಾಗಲು ನಮ್ಮ ನಿರೀಕ್ಷೆಗೂ ಮೀರಿ ವಿಳಂಬವಾಯಿತು. ಇದಕ್ಕಾಗಿ ಚಂದಾದಾರರೂ, ನಮ್ಮ ಅಭಿಮಾನಿಗಳೂ ಅನ್ಯಥಾ ಭಾವಿಸಬಾರದಾಗಿ ವಿನಯಪೂರ್ವಕವಾಗಿ ವಿನಂತಿಮಾಡಿಕೊಳ್ಳುತ್ತೇವೆ. ಕ್ರೋಧಿ ಸಂವತ್ಸರದ ಚೈತ್ರ ಸಂಚಿಕೆಯನ್ನು ಅತ್ಯಲ್ಪ ಕಾಲದಲ್ಲಿಯೇ ನಮ್ಮ ಚಂದಾದಾರರಿಗೆ ತಲಪಿಸುವ ಭರವಸೆಯನ್ನು ಕೊಡಲು ಆಶಿಸುತ್ತೇವೆ.

ಪ್ರಬುದ್ಧ ಕರ್ಣಾಟಕ

ವಿಜ್ಞಾನಾಂಕ

(ಶೋಭಕೃತು ಸಂವತ್ಸರ)

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೬೪

ವಿಷಯ ಸೂಚಿಕೆ

ಪ್ರಬುದ್ಧ ಕರ್ಣಾಟಕ

ಶೋಭಕೃತು ಸಂವತ್ಸರ   ೧೭೮   ಪುಷ್ಯ ಸಂಚಿಕೆ

ಯಂತ್ರಶಿಲ್ಪಿಯ ಕನಸುಗಳು

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

೩. ಗಾಳಿಯಿಂದ ಶಕ್ತಿ

'ಗಾಳಿಯು ಎಷ್ಟು ಚಂಚಲ!' ಎಂದರೆ 'ಎಲ್ಲಿ?' ಎಂದು ಕೇಳಬೇಕಾಗುತ್ತದೆ. ಬೆಂಗಳೂರಿನಲ್ಲಿ ಇದನ್ನು ನಂಬುವ ಹಾಗಿಲ್ಲ. ಆದರೆ ಅಂಟಾರ್ಕ್ಟಿಕದಲ್ಲಿ ಒಂದು ಕಡೆ ವರ್ಷದಲ್ಲಿ ೭ ತಿಂಗಳು ಕಾಲ ಸಂತತವಾಗಿ ಗಂಟೆಗೆ ೪೫ ಮೈಲಿಗಿಂತ ಹೆಚ್ಚಿನ ವೇಗದಲ್ಲಿ ಬೀಸುತ್ತದೆ.

ಮಾನವನ ಇತಿಹಾಸದಲ್ಲಿ ವಾಯುಶಕ್ತಿಯು ಮುಖ್ಯವಾದ ಪಾತ್ರವನ್ನು ವಹಿಸಿದೆ. ಮೊದಲು ಕೈಕಾಲುಗಳ ಬಲದಿಂದ ನಡೆಯುತ್ತಿದ್ದ ಹಡಗುಗಳು ಆಮೇಲೆ ಅನೇಕ ಶತಮಾನಗಳ ಕಾಲ ವಾಯುಬಲದಿಂದ ನಡೆದವು. ಹೊಸ ಭೂಭಾಗಗಳನ್ನು ಪತ್ತೆಮಾಡಿದ್ದು ಈ ಬಲದಿಂದಲೇ. ನೆಲದಮೇಲೆ ವಾಹನಗಳನ್ನು ಗಾಳಿಯ ಬಲದಿಂದ ನಡೆಸುವುದು ಸಾಧ್ಯವಾಗಿಲ್ಲ. ಆದರೆ ನಿತ್ಯದ ರೊಟ್ಟಿಗೆ ಹಿಟ್ಟನ್ನು ಗೋಧಿಯಿಂದ ವಾಯುಬಲವೇ ಒದಗಿಸುತ್ತಿತ್ತು. ಈ ಸಾಧನೆಯು ೧೨ನೇ ಶತಮಾನದಲ್ಲಿ ಜರ್ಮನಿ, ನೆದರ್‌ಲ್ಯಾಂಡ್ಸಿನ ಮೂಲಕ ಉತ್ತರ ಯೂರೋಪಿಗೆ ಬಂತು. ಹಾಲೆಂಡ್ ಬೆಳೆದದ್ದು ಗಾಳಿಯ ಬಲದಿಂದ. ಗಾಳಿಯ ಯಂತ್ರಗಳಿಂದ ನೀರನ್ನು ತಗ್ಗಾದ ಪ್ರದೇಶಗಳಿಂದ ಎತ್ತಿ ವ್ಯವಸಾಯ ಯೋಗ್ಯವಾಗಿ ಮಾಡಿದರು. ಬೇರೆ ಕಡೆಗಳಲ್ಲಿ ನೀರಾವರಿಗೂ ಈ ಬಲದಿಂದಲೇ ನೀರನ್ನು

ಎತ್ತಿದ್ದಾಯಿತು. ಈಗಲೂ ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿಯೂ ಕೆನಡದಲ್ಲಿಯೂ ಸುಮಾರು ೫ ಲಕ್ಷ ಪಂಪುಗಳು ಗಾಳಿಯ ಬಲದಿಂದ ನಿತ್ಯವೂ ನಡೆಯುತ್ತಿವೆ. ಜಲಯಾನಕ್ಕೆ ಆವಿಯು ಬರುವವರೆಗೂ ಗಾಳಿಯನ್ನು ಬಿಟ್ಟರೆ ಗತಿಯೇ ಇರಲಿಲ್ಲ. ಹಿಟ್ಟಿನ ಗಿರಣಿಗಳಲ್ಲಿ ನಾಲ್ಕು ತಿಂಗಳಿಗಾಗುವಷ್ಟು ಹಿಟ್ಟನ್ನು ಗಾಳಿಯು ಅನುಕೂಲವಾಗಿದ್ದಾಗ ಕೆಲವೇ ದಿನಗಳಲ್ಲಿ ಬೀಸಬಹುದಿತ್ತು. ಗಾಳಿಯೇ ಸೂರ್ಯನ ಶಕ್ತಿಯ ಪ್ರಭಾವದಿಂದ ಬೀಸುತ್ತದೆ. ಭೂಮಿಯ ಪರಿಭ್ರಮಣದಿಂದ ಗಾಳಿಯ ಮೇಲೆ—ಅದರ ದಿಕ್ಕಿನ ಮೇಲಲ್ಲ—ಪರಿಣಾಮವಾಗುತ್ತದೆ. ಆದ್ದರಿಂದ ಸ್ವಭಾವವಾಗಿಯೇ ಅದು ಶಾಶ್ವತವಾಗಿ ದೊರೆಯುವುದಿಲ್ಲ. ಆದರೆ ಫ್ರಾನ್ಸಿನ ಭೌತಶಾಸ್ತ್ರಜ್ಞ ಡ್ಯೂಬೊ ಉತ್ತರ ಆಫ್ರಿಕದಲ್ಲಿ ಅಟ್ಲಾಸ್ ಪರ್ವತ ಪ್ರಾಂತದಲ್ಲಿ ಲಂಬವಾದ ಗಾಳಿಯ ಕಂಬವನ್ನು ಪಡೆಯುವುದು ಸಾಧ್ಯವೆಂದನು. ಅಲ್ಲಿ ಯಾವ ಇಂಧನವೂ ಸಿಕ್ಕುವುದಿಲ್ಲ. ಆದರೆ ಶಕ್ತಿಯ ಆವಶ್ಯಕತೆ ಹೇರಳವಾಗಿದೆ.

ಮೋಡಗಳಿಲ್ಲದ ಆಕಾಶದಲ್ಲಿ ಸುಡುವ ಮರುಭೂಮಿಯಲ್ಲಿ ಹತ್ತಿರದಲ್ಲಿ ಕಡಿದಾದ ಎತ್ತರವಾದ ಬೆಟ್ಟಗಳಿದ್ದರೆ ಶಕ್ತವಾದ ಲಂಬವಾದ ಗಾಳಿಯನ್ನು ಪಡೆಯಬಹುದು. ಸಮುದ್ರಮಟ್ಟದಲ್ಲಿ ಬಯಲಿನಲ್ಲಿ ಗಾಳಿಯ ಒತ್ತಡವು ಸುಮಾರು ೭೬೦ ಮಿಲಿಮೀಟರು ಪಾದರಸದಷ್ಟಿರುತ್ತದೆ. ಅದರ ಮೇಲೆ ೬,೬೦೦ ಅಡಿ ಎತ್ತರದ ಪರ್ವತದ ಮೇಲೆ ಒತ್ತಡವು ೫೯೫ ಮಿಲಿಮೀಟರಿಗೆ ಇಳಿಯುತ್ತದೆ. ಗುಡ್ಡದ ಮೇಲೆ ಶಾಖವು ಕೆಲವು ವೇಳೆ ೫ ಡಿಗ್ರಿ ಸೆಂಟಿಗ್ರೇಡಿನಷ್ಟೂ ಮರುಭೂಮಿಯ ಮರಳಿನ ಮೇಲೆ ೪೩ ಡಿಗ್ರಿಯಷ್ಟೂ ಇರುತ್ತದೆ. ಸಾಮಾನ್ಯವಾಗಿ ಮೇಲಕ್ಕೆ ಹೋದ ಹಾಗೂ ಶಾಖವೂ ಒತ್ತಡವೂ ಕ್ರಮೇಣ ವ್ಯತ್ಯಾಸವಾಗುತ್ತವೆ. ಆದರೆ ಒಂದು ಹೊಗೆಯ ಗೂಡನ್ನು ಮಾಡಿ ಬಿಸಿಯಾದ ಗಾಳಿಗೆ ದಾರಿಯನ್ನು ತೋರಿಸಿದರೆ ಗೂಡಿನೊಳಗಡೆ ಚಂಡಮಾರುತವೇ ಪ್ರಾರಂಭವಾಗುತ್ತದೆ. ಇದರ ವೇಗವು ಸೆಕೆಂಡಿಗೆ ೧೮೦ ಅಡಿಗಳವರೆಗೂ ಹೋಗಬಹುದು. ಇದನ್ನು ಬಳಸಿಕೊಳ್ಳುವ ಗಾಳಿಯ ಟರ್ಬೈನು ಪರ್ವತ ಶಿಖರದ ಮೇಲೆ ಇರಬೇಕಾಗುತ್ತದೆ. ಈ ಕೊಳವಿಯನ್ನು ಸಿಮೆಂಟಿನಿಂದ ೩೦ ಅಡಿ ವ್ಯಾಸದ ಅಗಲ ಮಾಡಬಹುದು. ಗುಡ್ಡದ ಮೇಲಿನಿಂದ ಕೊಳವಿಯಲ್ಲಿ ಉರುಳುವ ನೀರಿನ ಯಂತ್ರಕ್ಕೆ ಇದನ್ನು ಹೋಲಿಸಬಹುದು. ಆದರೆ ಇದರಲ್ಲಿ ಗಾಳಿಯು ಕೆಳಗಿನಿಂದ ಮೇಲಕ್ಕೆ ಏರುತ್ತದೆ. ಇಂಥ ಯಂತ್ರವು ಕೆಲಸಮಾಡುವುದರಲ್ಲಿ ಸಂಶಯವೇ ಇಲ್ಲ. ಆದರೆ ಸಾಕಷ್ಟು ದಕ್ಷತೆ ಇರುತ್ತದೆಯೆ? ಎಂಬುದೇ ಪ್ರಶ್ನೆ.

ಇನ್ನೊಂದು ಫ್ರೆಂಚ್ ಕಲ್ಪನೆಯೂ ಡ್ಯೂಬೋವಿನ ಹೊಗೆಗೂಡಿನ ಹಾಗೆಯೇ ಇದೆ. ಆದರೆ ಅದರ ಅಳತೆ ಚಿಕ್ಕದು. ಕೆಲಸಮಾಡುವ ತತ್ತ್ವ ಬೇರೆ. ಗಾಳಿಯಲ್ಲಿ ನಿಲ್ಲುವಷ್ಟು ಬಲಿಷ್ಠವಾದ ಲೋಹದ ತಗಡಿನ ಹೊಗೆಗೂಡಿನ ಮೇಲುಗಡೆ ತೆರೆದು ಕೆಳಗಡೆ ಗಾಳಿಯು ಧಾರಾಳವಾಗಿ ಒಳಗೆ ಬರುವ ಹಾಗೆ ಅನೇಕ ದೊಡ್ಡ ರಂಧ್ರ

ಗಳಿವೆ. ಎತ್ತರವು ೬೦ ರಿಂದ ೭೫ ಅಡಿಯವರೆಗೂ ಇರಬಹುದು. ಮೇಲುಗಡೆ ಈ ಗೂಡಿನ ವ್ಯಾಸದ ಎರಡರಷ್ಟು ವ್ಯಾಸದ ತಗ್ಗಾದ ಹೊಗೆಗೂಡನ್ನು ಕತ್ತು ಪಟ್ಟಿಯ ಹಾಗೆ ಕೂರಿಸಿದೆ. ಈ ಪಟ್ಟಿಯು ಮೂಲೆಪಟ್ಟಿಗಳ ಆಧಾರದ ಮೇಲೆ ನಿಂತಿರುವುದರಿಂದ ಹೊಗೆಗೂಡಿಗೂ ಕತ್ತುಪಟ್ಟಿಗೂ ಮಧ್ಯೆ ಧಾರಾಳವಾಗಿ ಗಾಳಿಯು ನುಗ್ಗಬಹುದು. ಈ ಉಪಕರಣವನ್ನು ಗಾಳಿಗೆ ಎದುರಾಗಿ ನಿಲ್ಲಿಸಿದರೆ ಗಾಳಿಯು ಯಾವ ದಿಕ್ಕಿನಲ್ಲಾದರೂ ಬೀಸುತ್ತಿರಲಿ, ಕತ್ತುಪಟ್ಟಿಗೂ ಹೊಗೆಗೂಡಿಗೂ ನಡುವೆ ನುಗ್ಗಿ ಹೊಗೆಗೂಡಿನ ಒಳಗಡೆ ಗಾಳಿಯನ್ನು ಚಲನಮಾಡಿಸುತ್ತದೆ. ಹೊಗೆಗೂಡಿನಲ್ಲಿ ಗಾಳಿಯು ಕೆಳಗಡೆ ಇರುವ ರಂಧ್ರಗಳಲ್ಲಿ ನುಗ್ಗಿ ಮೇಲಿನ ತೆರೆದ ಬಾಯಿಯ ಮಾರ್ಗವಾಗಿ ಮಾತ್ರ ಹೋಗಬಲ್ಲದು. ಈ ಗಾಳಿಯ ರಂಧ್ರಗಳ ಮೇಲುಗಡೆ ಟರ್ಬೈನನ್ನು ಇಟ್ಟಿರುತ್ತಾರೆ. ಇದೇನೋ ಸರಳವಾಗಿದೆ. ಸುಮಾರಾಗಿ ಬೆಲೆಯೂ ಕಡಿಮೆ. ಆದರೆ ಈಗ ಫ್ರಾನ್ಸಿನಲ್ಲಿ ಕಲ್ಲಿದ್ದಿಲಿನ ಜೊತೆಯಲ್ಲಿ ಪೈಪೋಟಿಯನ್ನು ಮಾಡುವಷ್ಟು ಅಗ್ಗವಾಗಿಲ್ಲ.

ಗಾಳಿಯೇನೋ ಅಗ್ಗವಾಗಿದೆ. ಆದರೆ ಅದನ್ನು ಎಲ್ಲಾ ಕಡೆಯಲ್ಲಿಯೂ ನಂಬಬಹುದೆ? ಅಂತೂ ಹೇಗಾದರೂ ಮಾಡಿ ಅದನ್ನು ಉಪಯೋಗಿಸಬೇಕೆನ್ನಿಸುತ್ತದೆ. ಸದ್ಯದಲ್ಲಿ ಬೇರೆ ಯಾವ ಶಕ್ತಿಯ ಆಕರವನ್ನಾದರೂ ಹಿಡಿಯಲೇಬೇಕು. ಗಾಳಿಯನ್ನು ನೆಲದ ಮಟ್ಟದಲ್ಲಿ ನಂಬುವ ಹಾಗೆಯೇ ಇಲ್ಲ. ಮೇಲುಗಡೆ ಸುಮಾರಾಗಿ ನಂಬಲೇಬಹುದು. ಸುಮಾರು ೧,೦೦೦ ಅಡಿಯಿಂದ ೧,೫೦೦ ಅಡಿಯ ಎತ್ತರದಲ್ಲಿ ಗಾಳಿಯನ್ನು ನೆಚ್ಚಬಹುದೆಂಬ ಊಹೆಯ ಮೇಲೆ ಜರ್ಮನಿಯ ಹರ್ಮನ್ ಹಾನೆಫ್ ೧೯೩೫ರಲ್ಲಿಯೇ ೧,೦೦೦ ಅಡಿ ಎತ್ತರದ ಗಾಳಿಯ ಗೋಪುರಗಳನ್ನು ಗಾಳಿಯ ಯಂತ್ರದ ಚಕ್ರಗಳೊಂದಿಗೆ ಕಟ್ಟಿದನು. ಅವನ ಅಂದಾಜಿನಲ್ಲಿ ಇಂಥ ಜನರೇಟರುಗಳು ವರ್ಷಕ್ಕೆ ೪,೦೦೦ ಗಂಟೆಗಳ ಕಾಲವಾದರೂ ಕೆಲಸ ಮಾಡಬಹುದಿತ್ತು. ಎಂದರೆ, ಶೇಕಡ ೪೫ರಷ್ಟು ಕಾಲವಾಯಿತು. ಇದೂ ಹೆಚ್ಚೆಂದು ಆತನ ಪ್ರತಿಕಕ್ಷಿಗಳು ವಾದಿಸಿದರು. ಒಂದಾದಮೇಲೊಂದು ಬಂದ ಸರ್ಕಾರಗಳಲ್ಲಿ ಯಾವುದೂ ಈತನಿಗೆ ಉತ್ತೇಜನವನ್ನು ಕೊಡಲಿಲ್ಲ. ಕೊನೆಗೆ ೧೯೫೩ ರಲ್ಲಿ ಸ್ಪೆಡ್‌ಗಾರ್ಡಿನ ಹತ್ತಿರ ಸಲಕ್ ಎಂಬ ಸಣ್ಣ ಪಟ್ಟಣದಲ್ಲಿ ಜನರು ೧೩೦ ಅಡಿ ವ್ಯಾಸದ ಸಣ್ಣ ಗೋಪುರಕ್ಕೆ ಹಣವನ್ನು ಒದಗಿಸಿದರು. ಸಾಮಾನ್ಯವಾಗಿ ಕಲ್ಲಿದ್ದಿಲನ್ನು ಉರಿಸುವ ಯಂತ್ರದಲ್ಲಿ ಈ ಪಟ್ಟಣದಲ್ಲಿ ವಿದ್ಯುತ್ತು ಉತ್ಪಾದನೆಯಾಗುತ್ತದೆ. ಹಾನೆಫ್ ಜನರೇಟರು ಸಮರ್ಪಕವಾಗಿ ಕೆಲಸಮಾಡಿದರೆ ಎಷ್ಟೋ ಕಲ್ಲಿದ್ದಿಲು ಉಳಿಯುತ್ತದೆ. ಗಾಳಿಯು ಪ್ರಬಲವಾಗಿಲ್ಲದೆ ಇದ್ದಾಗ ಮತ್ತೆ ಕಲ್ಲಿದ್ದಿಲಿನ ಯಂತ್ರವನ್ನೇ ಬಳಸಬಹುದು. ಗಾಳಿಯಷ್ಟು ಅನಿಶ್ಚಿತವಾದ ಆಧಾರದ ಮೇಲೆ ಅವಲಂಬಿಸಬೇಕಾದಾಗ ಕೈಗಾವಲಿಗಾಗಿ ಬೇರೆ ಜನರೇಟರು ಇರಬೇಕಾದ್ದು ಅನಿವಾರ್ಯ.

೧೯೩೯ರಲ್ಲಿ ಅಮೆರಿಕದಲ್ಲಿ ಬಾಸ್ಟನ್ನಿನ ಪುಡ್ನಮ್ಮಿಗೆ ರಟ್ಲೆಂಡಿನ ಹತ್ತಿರ ಒಂದು ಬೆಟ್ಟದ ಮೇಲೆ ಗಾಳಿಯ ಜನರೇಟರನ್ನು ಸ್ಥಾಪಿಸಬಹುದೆಂದು ತೋರಿತು. ವಿಮಾನದ ರೆಕ್ಕೆಯ ಸುತ್ತಲೂ ಗಾಳಿಯು ಹೇಗೆ ಹರಿಯುವುದೆಂದು ಎರಡು ದಶಕಗಳ ಹಿಂದಿಗಿಂತಲೂ ೧೯೩೯ರಲ್ಲಿ ಚೆನ್ನಾಗಿ ತಿಳಿದದ್ದರಿಂದ ಗಾಳಿಯ ಜನರೇಟರನ್ನು ಆಗ ಸುಲಭವಾಗಿ ಸಂವಿಧಾನ ಮಾಡಬಹುದಿತ್ತು. ಗಾಳಿಯ ಯಂತ್ರದ ವಿನ್ಯಾಸದಲ್ಲಿ ಯಾವಾಗಲೂ ರೆಕ್ಕೆಯ ಅಲಗಿನ ತುದಿಯ ವೇಗಕ್ಕೂ ಸಾಮಾನ್ಯವಾಗಿ ಗಾಳಿಯ ವೇಗಕ್ಕೂ ಇರುವ ಸಂಬಂಧವು ಮುಖ್ಯವಾದ ಅಂಶ. ನಿಧಾನವಾಗಿ ತಿರುಗುವ ಹಲವು ಅಲಗುಗಳುಳ್ಳ ಗಾಳಿಯ ಯಂತ್ರದಲ್ಲಿ ಈ ದಾಮಾಷೆಯು ೧ ೧/೨ ಇರಬಹುದು. ಎಂದರೆ, ಗಾಳಿಯು ಗಂಟೆಗೆ ೩೦ ಮೈಲಿಯ ವೇಗದಲ್ಲಿ ಬೀಸುತ್ತಿದ್ದರೆ ಅಲಗುಗಳ ತುದಿಗಳು ೪೫ ಮೈಲಿಯ ವೇಗದಲ್ಲಿ ತಿರುಗುತ್ತವೆ. ಹಳೆಯ ಕಾಲದ ಹಾಲೆಂಡಿನ ಯಂತ್ರದಲ್ಲಿ ಈ ಸಂಬಂಧವು ೨ರಿಂದ ೩ರವರೆಗೂ ಇತ್ತು. ರಟ್ಲೆಂಡಿನ ಯಂತ್ರದಲ್ಲಿ ಈ ದಾಮಾಷೆಯು ೬ರಷ್ಟಿತ್ತು. ಈಚಿನ ಸಂವಿಧಾನಗಳಲ್ಲಿ ಇದು ಇನ್ನೂ ಹೆಚ್ಚಾಗುತ್ತದೆ.

ಈ ಗಾಳಿಯ ಟರ್ಬೈನಿನ ಗೋಪುರವು ೧೨೫ ಅಡಿ ಎತ್ತರವಾಗಿತ್ತು. ಅದಕ್ಕೆ ೧೭೫ ಅಡಿ ವ್ಯಾಸದ ಎರಡು ಅಲಗುಗಳುಳ್ಳ ಇಂಪೆಲರನ್ನು ಜೋಡಿಸಿದ್ದರು. ಅದನ್ನು ತಾನಾಗಿಯೇ ಗಾಳಿಯು ಬೀಸುವ ದಿಕ್ಕಿಗೆ ತಿರುಗುವ ಹಾಗೆ ಏರ್ಪಾಡು ಮಾಡಿದ್ದರು. ಇದು ೧೯೪೧ರಿಂದ ೧೯೪೫ರ ವರೆಗೂ ಕೆಲಸಮಾಡಿ ಯುದ್ಧದಲ್ಲಿ ಅಪಘಾತಕ್ಕೊಳಗಾಯಿತು. ಇದನ್ನು ರಿಪೇರಿ ಮಾಡುವುದಕ್ಕೆ ಆಗ ಸಿಬ್ಬಂದಿಯಾಗಲಿ ಸಾಮಗ್ರಿಯಾಗಲಿ ದೊರಕಲಿಲ್ಲ. ಅದರಿಂದ ವಿದ್ಯುತ್ತು ಉತ್ಪಾದನೆಯಾಗುತ್ತಿದ್ದರೂ ಆಮೇಲೆ ಅದರ ಮೇಲೆ ಯಾರೂ ಗಮನವನ್ನು ಕೊಡಲಿಲ್ಲ.

ಈ ಗಾಳಿಯ ಯಂತ್ರದ ಅನುಭವದಿಂದ ನೆಲದ ಮಟ್ಟದ ಮೇಲೆ ೫೦೦ ಅಡಿಯ ಎತ್ತರದಲ್ಲಿ ಗಾಳಿಯನ್ನು ಧಾರಾಳವಾಗಿ ನಂಬಬಹುದೆಂದು ತಿಳಿದುಬಂದಿದೆ. ಒಂದು ಪ್ರದೇಶದಲ್ಲಿ ತಿಂಗಳು ತಿಂಗಳೂ ಒದಗುವ ವಿದ್ಯುತ್ತಿನಲ್ಲಿ ಹೆಚ್ಚಿನ ಬದಲಾವಣೆಯಿಲ್ಲ. ಅಮೆರಿಕದಲ್ಲಿ ಜೂನಿನಿಂದ ಸೆಪ್ಟೆಂಬರಿನವರೆಗೆ ಗಾಳಿಯು ಕಮ್ಮಿ. ಅಕ್ಟೋಬರಿನಿಂದ ಮೇವರೆಗೆ ಹೆಚ್ಚು. ಬೇರೆ ಬೇರೆ ದೇಶಗಳಲ್ಲಿ ಈ ಪರಿಸ್ಥಿತಿಯು ಬದಲಾಗಲೇ ಬೇಕು.

ಅಮೆರಿಕದ ಇಂಜಿನಿಯರ್ ಥಾಮಸ್ ಸಂವಿಧಾನಮಾಡಿದ ಏರೋಜನರೇಟರು ೨೩೫ ಅಡಿ ಉದ್ದದ ಸೇತುವೆಯ ಹಾಗಿದೆ. ಅದರ ಎರಡು ಕೊನೆಗಳಲ್ಲಿಯೂ ಒಂದೊಂದು ಗಾಳಿಯ ಟರ್ಬೈನನ್ನು ಜೋಡಿಸಿದ್ದಾರೆ. ಈ ಸೇತುವೆಯ ಮಧ್ಯಭಾಗವನ್ನು ಒಂದು ತಿರುಗುವ ಮೇಜಿನ ಮೇಲೆ ೪೭೫ ಅಡಿ ಎತ್ತರದ ಗೋಪುರದ ಮೇಲುಗಡೆ ಕೂರಿಸಿದ್ದಾರೆ. ಅದರಿಂದ ಸೇತುವೆಯೇ ಧಾರಾಳವಾಗಿ ತಿರುಗಬಹುದು. ಇಂಥ ಹತ್ತು ಹನ್ನೆರಡು ಜನರೇಟರುಗಳನ್ನು ಕಟ್ಟಿ ವಿದ್ಯುತ್ತಿನ

ಸಂಬಂಧವನ್ನು ಕಲ್ಪಿಸಿದರೆ ಎರಡು ಮೂರು ಜನರೇಟರುಗಳು ಗಾಳಿಯಿಲ್ಲದೆ ನಿಂತರೂ ಉಳಿದವು ಕೆಲಸಮಾಡುತ್ತವೆ. ಆದರೂ ಕೇವಲ ಗಾಳಿಯ ಯಂತ್ರ ಗಳನ್ನೇ ನಂಬುವುದರಲ್ಲಿ ತೊಂದರೆಯಿದೆ. ಅದಕ್ಕಾಗಿ ಇವನ್ನು ಜಲವಿದ್ಯುತ್ತಿನ ಯಂತ್ರಗಳೊಂದಿಗೆ ಸೇರಿಸಿದಾಗ ಗಾಳಿಯು ಬೀಸಿದಾಗ ಗಾಳಿಯ ಯಂತ್ರಗಳನ್ನೂ ಉಳಿದ ಕಾಲದಲ್ಲಿ ಜಲವಿದ್ಯುತ್ತನ್ನೂ ಉಪಯೋಗಿಸಿಕೊಳ್ಳಬಹುದು.

ಏರೋ-ಜನರೇಟರುಗಳ ಬೆಲೆಯು ಭಾರತಗಳ ಟರ್ಬೈನುಗಳಿಗಿಂತ ಕಡಿಮೆ. ಅವು ಬೇಗ ಉಪಯೋಗಕ್ಕೆ ಬರಬಹುದು. ಆದರೆ ಜಲವಿದ್ಯುತ್ ಯಂತ್ರಗಳಿರುವ ಕಡೆ ಇವನ್ನು ಜೋಡಿಸಬೇಕು.

೪. ಅಗ್ನಿಪರ್ವತಗಳಿಂದ ಶಕ್ತಿ

ಕೊರೆಯುವ ಚಳಿಯ ಉತ್ತರ ಅಟ್ಲಾಂಟಿಕ್ ಸಾಗರದಲ್ಲಿ ಶಾಶ್ವತವಾದ ಹಿಮಭೂಮಿಗಳಿಂದ ತುಂಬಿದ ಐಸ್‌ಲೆಂಡ್ ಎಂಬ ದ್ವೀಪವಿದೆ. ಅದರ ಉತ್ತರದ ಪರ್ಯಾಯದ್ವೀಪವು ಉತ್ತರಧ್ರುವವೃತ್ತವನ್ನು ಮುಟ್ಟುತ್ತದೆ. ಇದರ ವಿಸ್ತೀರ್ಣವು ೪೦,೦೦೦ ಚದರಮೈಲಿ. ಜನಸಂಖ್ಯೆ ಚದರಮೈಲಿಗೆ ಮೂರು. ಇಲ್ಲಿ ಒಂದು ಹಿಮಭೂಮಿಯೇ ವೇಲ್ಸಿನ ಅರ್ಧದಷ್ಟಿದೆ. ಇಂಥ ದ್ವೀಪದಲ್ಲಿ ೧೯೫೨ರ ಬೇಸಿಗೆಯಲ್ಲಿ ಶಾಲೆಯ ಬಾಲಕ ಬಾಲಕಿಯರಿಗೆ ಆಗ ತಾನೆ ಕೊಯ್ದ ಐದೈದು ಬಾಳೆಯ ಹಣ್ಣುಗಳನ್ನು ಹಂಚಿದರು. ಅಲ್ಲಿ ಬಾಳೆಯಗಿಡ ಹೇಗೆ ಬೆಳೆಯಿತು?

ಐಸ್ಲೆಂಡ್ ಅಗ್ನಿಪರ್ವತಗಳ ಭೂಮಿ. ಅದರ ಪರ್ವತಗಳು ಜೀವಂತ ಇಲ್ಲವೆ ತೆಪ್ಪಗಾದ ಅಗ್ನಿಪರ್ವತಗಳು. ಬಯಲುಗಳು ಹೆಪ್ಪುಗಟ್ಟಿದ ಲಾವದ ಹೊಳೆಗಳು. ಅಗ್ನಿಪರ್ವತಗಳಿರುವ ಕಡೆಗಳಲ್ಲೆಲ್ಲಾ ಮರಳುವ ನೀರಿನ ಚಿಲುಮೆಗಳಿವೆ. ಇಲ್ಲಿನ ಮಹಿಳೆಯರು ಅಹಿಂಸಾತ್ಮಕವಾದ ಕಾದ ನೀರಿನ ಚಿಲುಮೆಗಳಲ್ಲಿ ಪಾತ್ರೆಗಳನ್ನೂ ಬಟ್ಟೆಗಳನ್ನೂ ಬಹುಕಾಲದಿಂದ ತೊಳೆಯುತ್ತಿದ್ದಾರೆ.

೧೯೧೬ರಲ್ಲಿ ಬುಡಪೆಸ್ಟ್ ಇಂಜಿನಿಯರಿಂಗ್ ಕಾಲೇಜಿನ ಅಧ್ಯಾಪಕನಾದ ವಿಜ್ಞಾನಿಯು ಕಾದ ಚಿಲುಮೆಯಿರುವ ಕಡೆ ಬಾವಿಯನ್ನು ತೋಡಿದರೆ ಸಂತತವಾಗಿ ಬಿಸಿನೀರು ಮೇಲಕ್ಕೆ ಬರುವುದೆಂದು ತರ್ಕಮಾಡಿದನು. ನಗರಸಂಸ್ಥೆಗೂ ಸರ್ಕಾರಕ್ಕೂ ಹೇಳಿದನು. ಅವರು ಲಕ್ಷ್ಯಕ್ಕೆ ತರಲಿಲ್ಲ. ಇವೊತ್ತಿಗೂ ಬುಡಪೆಸ್ಟ್ ನಗರವು ಅಗ್ನಿಪರ್ವತಗಳ ಶಾಖವನ್ನು ಉಪಯೋಗಿಸಿಕೊಳ್ಳುತ್ತಿಲ್ಲ. ಆದರೆ ದೂರದ ಐಸ್ಲೆಂಡ್ ಉಪಯೋಗಿಸುತ್ತಿದೆ.

ಐಸ್‌ಲೆಂಡಿನಲ್ಲಿ ರೈಕ್‌ಜಾವಿಕ್ ಪಟ್ಟಣಕ್ಕೆ ೧೦ ಮೈಲಿ ದೂರದ ರೈಕರ್ ಕಣಿವೆಯಲ್ಲಿ ಮೊದಲು ೧೯೩೦ರಲ್ಲಿ ನೀರಿನ ಬಾವಿಗಳನ್ನು ತೋಡಿ ಆಸ್ಪತ್ರೆ, ಪಾಠ ಶಾಲೆಗಳು, ಮತ್ತು ಕೆಲವು ಮನೆಗಳಿಗೆ ಸೆಂಟಿಗ್ರೇಡ್ ೯೦ ಡಿಗ್ರಿಯ ನೀರನ್ನು ಒದಗಿಸಿದರು. ೧೯೩೩ರಲ್ಲಿ ೧೪ ಬಾವಿಗಳಿಂದ ಮಿನಿಟ್ಟಿಗೆ ೧೫೦೦ ಗ್ಯಾಲನ್

ಕುದಿಯುವ ನೀರು ಒದಗುತ್ತಿತ್ತು. ೧೯೫೧ರ ವೇಳೆಗೆ ೪೩ ಬಾವಿಗಳಿಂದ ಎಲ್ಲಾ ಸಾರ್ವಜನಿಕ ಕಟ್ಟಡಗಳಿಗೂ ಮುಕ್ಕಾಲು ಪಾಲು ಖಾಸಗಿ ಕಟ್ಟಡಗಳಿಗೂ ನಲ್ಲಿಗಳಿಂದ ಬಿಸಿನೀರನ್ನು ಒದಗಿಸಿದರು. ಈಚೆಗೆ ದಿನಕ್ಕೆ ೧೦ ಲಕ್ಷ ಸಲೆ ಅಡಿ ನೀರು ಒದಗುತ್ತಿದೆ. ಈ ನೀರನ್ನು ಸಮಶೀತೋಷ್ಣವಲಯದ ಗಿಡಗಳನ್ನು ಬೆಳೆಯುವ ಗಾಜಿನ ಮನೆಗಳಿಗೆ ಒದಗಿಸಿ ಬಾಳೆ ಮೊದಲಾದ ಆಹಾರದ ಸಸ್ಯಗಳನ್ನು ಬೆಳೆಯುತ್ತಿದ್ದಾರೆ. ೧೯೫೨ರಲ್ಲಿ ೧೮ ಎಕರೆಗಳಲ್ಲಿ ಸಸ್ಯಗಳನ್ನು ಬೆಳೆಯುತ್ತಿದ್ದರು. ಈ ವಿಸ್ತೀರ್ಣವು ಈಗ ಇನ್ನೂ ಹೆಚ್ಚಾಗಿದೆ.

ಇದು ಮೊದಲನೆಯ ಹೆಜ್ಜೆ. ಮುಂದೆ ಇನ್ನೂ ಶಾಖವಾದ ಭೂಮಿಯ ಪದರಗಳಿಂದ ಕುದಿಯುವ ನೀರಿಗೆ ಬದಲಾಗಿ ಆವಿಯನ್ನು ತೆಗೆದು ಟರ್ಬೋ–ಜನರೇಟರುಗಳನ್ನು ನಡೆಸಿ ವಿದ್ಯುತ್ತನ್ನು ತೆಗೆಯುತ್ತಾರೆ.

ಇಟಲಿಯ ಪಶ್ಚಿಮಕ್ಕೆ ಟಸ್ಕನಿಯಲ್ಲಿ ನೆಪೋಲಿಯನ್ ಮಹಾಶಯನನ್ನು ಬಂಧನದಲ್ಲಿಟ್ಟಿದ್ದ ಎಲ್ಬ ದ್ವೀಪದ ಆಚೆಗೆ ಅಗ್ನಿಪರ್ವತಗಳ ಪ್ರದೇಶದಲ್ಲಿ ಲಾರ್ಡರೆಲ್ಲೊ ಎಂಬ ಕಡೆ ಇಂಥದೊಂದು ಶಕ್ತಿಯ ಉತ್ಪಾದನಾ ಕೇಂದ್ರವಿದೆ. ಇಲ್ಲಿನ ಮಣ್ಣು ಭೂಗರ್ಭದ ಶಾಖದಿಂದ ಕೆಂಪು–ಬಳದಿ ಬಣ್ಣಕ್ಕೆ ಹುರಿದಹಾಗಿದೆ. ಮುಟ್ಟಿದರೆ ಬಿಸಿಯಾಗಿದೆ. ಗಂಧಕ ಮತ್ತು ಹೈಡ್ರೊಜನ್ ಸಲ್ಫೈಡಿನ ವಾಸನೆಯು ಗಾಳಿಯಲ್ಲಿ ಸದಾ ತುಂಬಿರುತ್ತದೆ. ಕಾದ ಮಣ್ಣಿನ ಬಿರುಕುಗಳಿಂದ ಹಾವಿನ ಹಾಗೆ ಬುಸುಗುಟ್ಟುತ್ತಾ ಆವಿಯು ಹೊರಕ್ಕೆ ಬರುತ್ತದೆ. ಅಲ್ಲಿನ ಜನ ಈ ಬುಗ್ಗೆಗಳನ್ನು "ಸೋಫಿಯೋನಿ" ಎಂದು ಕರೆಯುತ್ತಾರೆ. ಕೆಲವು ಕಡೆ ಆವಿಯು ಮೇಲಕ್ಕೆ ಚಿಮ್ಮದೆ ತಳಮಳಗುಟ್ಟುತ್ತಿರುವ ಬಿಸಿಯಾದ ಮಣ್ಣಿನಿಂದ ತುಂಬಿದ ಕುಂಟೆಗಳಲ್ಲಿ ತುಂಬಿಕೊಳ್ಳುತ್ತದೆ. ಇವನ್ನು 'ಲ್ಯಾಗೊನಿ' ಎನ್ನುತ್ತಾರೆ. ಹತ್ತಿರದಲ್ಲಿ ಹುಲ್ಲೂ ಹುಟ್ಟುವುದಿಲ್ಲ.

ಕ್ರಿ. ಪೂ. ಮೊದಲನೆಯ ಶತಮಾನದಲ್ಲಿ ಬಾಳಿದ ಕವಿ ಲ್ಯುಕ್ರೆಷಿಯಸ್ 'ಸೋಫಿಯೋನಿ' ಮತ್ತು 'ಲ್ಯಾಗೊನಿ'ಗಳ ಹೆಸರನ್ನು ತನ್ನ ಕವನಗಳಲ್ಲಿ ಹೇಳಿದ್ದಾನೆ. ಆಮೇಲೆ ಪ್ರತಿ ಶತಮಾನದಲ್ಲಿಯೂ ಇವನ್ನು ವರ್ಣಿಸಿರುವುದರಿಂದ ಇವು ಇನ್ನೂ ಕೆಲವು ಶತಮಾನಗಳಾದರೂ ಇರುತ್ತವೆಯೆಂದು ಊಹಿಸಬಹುದು.

ಕ್ರಿ. ಶ. ೧೭೬೯ರಲ್ಲಿ ಒಬ್ಬ ವೈದ್ಯನು ಆ ಪ್ರದೇಶದ ಭೂಗರ್ಭಸ್ಥಿತಿಯನ್ನು ಅಧ್ಯಯನಮಾಡಿ ಒಂದು ಗ್ರಂಥವನ್ನು ಬರೆದನು. ಈ ಪುಸ್ತಕವನ್ನು ನೋಡಿ ಹೋಫರ್ ಎಂಬ ಜರ್ಮನ್ ವೈದ್ಯನು ೧೭೭೭ರಲ್ಲಿ ಅಲ್ಲಿಗೆ ಹೋಗಿ ಲ್ಯಾಗೋನಿಯ ರುಚಿಯನ್ನು ನೋಡಿದಾಗ ಅದರಲ್ಲಿ ಬೋರಿಕ್ ಆಮ್ಲವು (H_3BO_3) ಇದೆಯೆಂದು ಹೇಳಿದನು. ರಸಾಯನಶಾಸ್ತ್ರವನ್ನು ತಿಳಿಯದೆ ಇದ್ದ ಪ್ರಾಯೋಗಿಕ ದೃಷ್ಟಿಯುಳ್ಳವನೊಬ್ಬನು ಅಲ್ಲಿಗೆ ಹೋಗಿ ನೀರನ್ನು ಅಲ್ಲಿಯೇ ಇದ್ದ ಶಾಖದಿಂದ ಕಾಯಿಸಿ ೧೭೭೯ರಲ್ಲಿ ಬೋರಿಕ್ ಆಮ್ಲವನ್ನು ತಯಾರಿಸಿ ಆ ವಿಚಾರವಾಗಿ ಬರೆದನು. ಆಗ

ಒಂದಾದಮೇಲೊಂದು ಕಂಪೆನಿಯು ಅಲ್ಲಿ ಭೂಮಿಯನ್ನು ಕೊಂಡುಕೊಂಡು ಸ್ಪೈಪ್ರೋಟಿಯಿಂದ ಆಮ್ಲವನ್ನು ತಯಾರಿಸಲು ಹೊರಟರು. ೧೮೧೮ರಲ್ಲಿ ಲಾರ್ಡರೆಲ್ ಅವರ ಕಂಪೆನಿಯು ಕೊಳಗಳಿಗೆ ಆ ನೀರನ್ನು ಬಿಟ್ಟು ಅವುಗಳ ಮೇಲೆ ದೊಡ್ಡ ಇಟ್ಟಿಗೆಯ ಗುಮ್ಮಟಗಳನ್ನು ಕಟ್ಟಿದರು. ಅವು ಅಂಡಾಕಾರವಾಗಿ ವ್ಯಾಸದಲ್ಲಿ ಒಂದು ದಿಕ್ಕಿನಲ್ಲಿ ೬೫ ಅಡಿ, ಇನ್ನೊಂದು ಕಡೆ ೫೦ ಅಡಿಯಷ್ಟು ದೊಡ್ಡದಾಗಿದ್ದವು. ಸಣ್ಣ ಗುಮ್ಮಟಗಳ ವ್ಯಾಸ ಒಂದು ಕಡೆ ೧೬ ಅಡಿ, ಇನ್ನೊಂದು ಕಡೆ ೧೩ ಅಡಿ. ಒಳಗಿನ ನೀರನ್ನು ನೈಸರ್ಗಿಕವಾದ ಆವಿಯಿಂದ ಕಾಯಿಸಿದರು. ಅನುಕೂಲವಾದ ಕಡೆ ಆವಿಯ ಬುಗ್ಗೆಯ ಮೇಲೆಯೇ ಗುಮ್ಮಟಗಳನ್ನು ಕಟ್ಟಿದರು.

ಕಾಲುಶತಮಾನದ ತರುವಾಯ ಕಂಪೆನಿಯ ಮಾಲೀಕನಾದ ಏಡ್ರಿಯನ್ ಹೊಸ ಬಾಯಿಲರನ್ನು ನಿರ್ಮಿಸಿದನು. ೨೩೦ ಅಡಿ ಉದ್ದ, ಆರೇಳು ಅಡಿ ಅಗಲವಾದ ತಟ್ಟೆಯಾದ ಇಟ್ಟಿಗೆಯ ತೊಟ್ಟಿಯನ್ನು ಕೊಂಚ ಇಳಿಜಾರಿನಲ್ಲಿ ಕಟ್ಟಿ ಮೇಲುಗಡೆ ನೀರನ್ನು ಹರಿಸಿ ಕೆಳಗೆ ಆವಿಯನ್ನು ಬಿಟ್ಟಾಗ ನೀರು ಆವಿಯಾಗಿ ಬೋರಿಕ್ ಆಮ್ಲದ ದ್ರಾವಕವು ತೊಟ್ಟಿಯ ಕೆಳಗಡೆ ನಿಲ್ಲುತ್ತದೆ. ಅದನ್ನು ಶುದ್ಧಿ ಮಾಡುವುದಕ್ಕಾಗಿ ಸಾಗಿಸುತ್ತಾರೆ.

೧೮೫೬ರಲ್ಲಿ ಈ ಕಂಪೆನಿಯು ನೆಲದಲ್ಲಿ ತೋಡಿ ಆವಿಯ ಬುಗ್ಗೆಯನ್ನು ಕೃತಕವಾಗಿ ಹೊರಹೊಮ್ಮಿಸಿದರು. ಮೊದಲು ಈ ಆವಿಯನ್ನು ತಮ್ಮ ಕೈಗಾರಿಕೆಯಲ್ಲಿ ಬಳಸುತ್ತಿದ್ದರು. ಇದರಿಂದ ವಿದ್ಯುತ್ತನ್ನು ಉತ್ಪಾದನೆ ಮಾಡುವ ಯೋಚನೆ ೧೮೯೪ರಲ್ಲಿ ಡಾಕ್ಟರ್ ರೈನೊ ಅವರಿಗೆ ಬಂತು. ಅವರು ಆಗ ಬಳಕೆಯಲ್ಲಿದ್ದ ಕೊಳವಿಗಳ ಕುದಿಪಾತ್ರೆಯಲ್ಲಿ ನೀರನ್ನು ಕಾಯಿಸಿ ಆವಿಯನ್ನು ಪಡೆದರು. ಇದರಲ್ಲಿ ಕಡಾಯದ ಒಳಗಡೆ ಕೊಳವಿಗಳಲ್ಲಿ ಕಾದ ಅನಿಲಗಳನ್ನು ಬಿಡುತ್ತಾರೆ. ಕೊಳವಿಗಳ ಮಧ್ಯದಲ್ಲಿರುವ ನೀರು ಕಾದು ಆವಿಯಾಗಿ ಮೊದಲು ೯ ಅಶ್ವಸಾಮರ್ಥ್ಯದ ಆವಿಯ ಎಂಜಿನ್ನನ್ನು ನಡೆಸಿತು. ಅಂತೂ ಇದರಿಂದ ಶಕ್ತಿಯ ಉತ್ಪಾದನೆಯು ಸಾಧ್ಯವೆಂದು ತಿಳಿಯಿತು.

ಈ ಆವಿಯ ಎದುರಿನಲ್ಲಿ ಹುಟ್ಟುಗಾಲಿಯನ್ನು (Paddle-Wheel) ಇಟ್ಟಾಗ ಗಾಲಿಯೇನೋ ತಿರುಗುತ್ತಿತ್ತು. ಆದರೆ ಅದು ನೀರಿನ ಹನಿಗಳಿಂದ ತುಕ್ಕು ಹಿಡಿಯಿತು. ೧೯೦೪ರಲ್ಲಿ ಈ ಹನಿಗಳನ್ನು ತಡೆದು ಆವಿಯಿಂದ ೩/೪ ಅಶ್ವ ಸಾಮರ್ಥ್ಯದ ಎಂಜಿನ್ನನ್ನು ನಡೆಸಿದರು. ಎಂಜಿನ್ನನ್ನು ಡೈನಾಮೋಗೆ ಜೋಡಿಸಿ ೫ ವಿದ್ಯುದ್ದೀಪಗಳನ್ನು ಉರಿಸುವಷ್ಟು ವಿದ್ಯುತ್ತನ್ನು ಅಂತೂ ಉತ್ಪಾದನೆ ಮಾಡಿದರು. ಮಾರನೆಯ ವರ್ಷ ೪೦ ಅಶ್ವಸಾಮರ್ಥ್ಯದ ಆವಿಯ ಎಂಜಿನ್ನಿಗೆ ಡೈನಾಮೋವನ್ನು ಜೋಡಿಸಿ ಕಾರಖಾನೆ, ಎಂಜಿನಿಯರುಗಳೂ ಕಾರ್ಮಿಕರೂ ವಾಸಮಾಡುತ್ತಿದ್ದ ಹಳ್ಳಿ, ಎಲ್ಲಕ್ಕೂ ವಿದ್ಯುದ್ದೀಪಗಳನ್ನು ಒದಗಿಸಿದರು.

ಒಂದು ದಿನ ಆವಿಯ ಎಂಜಿನ್ನು ನಿಂತಿತು. ಎಣ್ಣೆ ಹಾಕಿದ್ದರಿಂದ ಉಪಯೋಗ

ವಾಗಲಿಲ್ಲ. ಅದನ್ನು ಬಿಚ್ಚಿದಾಗ ಆವಿಯಲ್ಲಿ ಉಳಿದಿದ್ದ ಆಮ್ಲದಿಂದ ಒಳಭಾಗ ವೆಲ್ಲಾ ತಿಂದುಹೋಗಿತ್ತು. ಆಗಿನಿಂದ ಆವಿಯನ್ನು ಹುಷಾರಾಗಿ ವಿಶ್ಲೇಷಣ ಮಾಡಿ ಅದರ ಒತ್ತಡವನ್ನೂ ಶಾಖವನ್ನೂ ಅಳೆಯುತ್ತಿದ್ದಾರೆ. ತಣ್ಣಗಿರುವ ಆವಿಯು ಸೆಂಟಿಗ್ರೇಡ್ ೧೪೦ ಡಿಗ್ರಿಗಳ ಶಾಖದಲ್ಲಿಯೂ ಬಿಸಿಯಾದ್ದು ೨೨೫ ಡಿಗ್ರಿ ಗಳಲ್ಲಿಯೂ ಹೊರಕ್ಕೆ ಬರುತ್ತದೆ. ಬುಗ್ಗೆಯ ಬಾವಿಯಲ್ಲಿ ಒತ್ತಡವು ಚದರ ಅಂಗುಲಕ್ಕೆ ೭೦ ಪೌಂಡುಗಳಿದ್ದು ಆವಿಯನ್ನು ಮುಚ್ಚಿದ ಪಾತ್ರೆಯೊಳಕ್ಕೆ ಬಿಟ್ಟಾಗ ೪೦೦ ಪೌಂಡಿಗೆ ಏರುತ್ತದೆ. ಈಗ ಆವಿಗಾಗಿ ೧,೨೦೦ ಅಡಿ ಆಳದವರೆಗೂ ಬಾವಿ ಗಳನ್ನು ತೋಡುತ್ತಿದ್ದಾರೆ. ಆಳವಾದ ಬಾವಿಗಳಿಂದ ಬರುವ ಆವಿಯ ಶಾಖವು ಹೆಚ್ಚಾಗಿರುತ್ತದೆ.

ಆವಿಯಲ್ಲಿರುವ ಅಶುದ್ಧತೆಯ ಪ್ರಮಾಣವು ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸ ವಾಗುತ್ತದೆ. ಸ್ವರೂಪವು ಬದಲಾಗುವುದಿಲ್ಲ. ಲಾರ್ಡರೆಲ್ಲೊದಲ್ಲಿ ಇವು ನೂರಕ್ಕೆ ಆರರಷ್ಟೂ, ಲಾಗೋದಲ್ಲಿ ನಾಲ್ಕರಷ್ಟೂ ಇವೆ. ಇವುಗಳಲ್ಲಿ ಮುಖ್ಯವಾದ್ದು ಇಂಗಾಲಾಮ್ಲ (೪%). ಮೆಥೇನ್, ಹೈಡ್ರೊಜನ್ ಸಲ್ಫೈಡ್–ಇವು ಶೇಕಡ ೦.೧ರಷ್ಟಿವೆ. ಸಾರಜನಕ, ಬೋರಿಕ್‌ಆಮ್ಲ ಮತ್ತು ಅಮೋನಿಯ ಇನ್ನೂ ಕಮ್ಮಿ. ಆದರೆ ಅವು ಎಂಥ ಆವಿಯ ಎಂಜಿನ್ನನ್ನಾದರೂ ಧ್ವಂಸಮಾಡುವಷ್ಟಿವೆ. ಎಂಜಿನ್ನನ್ನು ಹಾಳುಮಾಡದೆ ಇರಬೇಕಾದರೆ ಆವಿಯ ಒತ್ತಡವನ್ನು ಉಪಯೋಗಿಸಿ ಕೊಳ್ಳದೆ ಅದರ ಶಾಖವನ್ನು ಮಾತ್ರ ಬಳಸಿಕೊಳ್ಳಬೇಕು. ಮೊದಲನೆಯ ಆವಿಯ ಟರ್ಬೋ-ಜನರೇಟರು ಲಾರ್ಡರೆಲ್ಲೋದಲ್ಲಿ ೧೯೧೩ರಲ್ಲಿ ಸ್ಥಾಪಿತವಾಯಿತು. ಟರ್ಬೈನಿನ ಅಶ್ವಸಾಮರ್ಥ್ಯ ೩೦೦. ಅದು ೪,೦೦೦ ವೋಲ್ಟ್. ೨೫೦ ಕಿಲೋವಾಟಿನ ಜನರೇಟರನ್ನು ಓಡಿಸುತ್ತಿತ್ತು. ಮಾರನೆಯ ವರ್ಷ ಇದರ ಹನ್ನೆರಡರಷ್ಟು ವಿದ್ಯುತ್ತನ್ನು ಉತ್ಪಾದಿಸಬಲ್ಲ ಮೂರು ಯಂತ್ರಗಳು ಬಂದ ಮೇಲೆ ಇದರಿಂದ ಲಾಭ ಬರಲು ಪ್ರಾರಂಭವಾಯಿತು. ಕೊನೆಗೆ ಇಲ್ಲಿಂದ ಕಲ್ಲಿದ್ದಲಿನ ಲೋಕೋ ಗಳನ್ನು ಉಪಯೋಗಿಸುತ್ತಿದ್ದ ಇಟಲಿಯ ರೈಲ್ವೆಗಳೂ ವಿದ್ಯುತ್ತಿನ ಬಲದಿಂದ ಓಡಹತ್ತಿದವು.

ಇಲ್ಲಿನ ಆವಿಯಲ್ಲಿರುವ ಶೇಕಡ ೪ರಷ್ಟು ಇಂಗಾಲಾಮ್ಲವನ್ನು ಏಕೆ ಪೋಲು ಮಾಡಬೇಕು? ಸರಿ. ೧೯೩೦ರಲ್ಲಿ ಶುದ್ಧ ಇಂಗಾಲಾಮ್ಲವನ್ನು ತಯಾರಿಸುವ ಕಾರಖಾನೆಯು ಬೋರಿಕ್ ಆಮ್ಲದ ತಯಾರಿಯ ಜೊತೆಗೆ ಸೇರಿತು. ಆವಿಯಲ್ಲಿ ೧೦೦೦ಕ್ಕೆ ಒಂದು ಭಾಗದಷ್ಟಿರುವ ಮೆಥೇನ್ ಮತ್ತು ಜಲಜನಕವನ್ನು ರಾಸಾಯ ನಿಕರು ಶೇಖರಿಸಿ ಕೈಗಾರಿಕೆಗಳಲ್ಲಿ ಉರಿಸುವುದಕ್ಕೆ ಬಳಸಿದರು. ಸುಮಾರಾಗಿ ಇಷ್ಟೇ ಪ್ರಮಾಣದ ಹೈಡ್ರೊಜನ್ ಸಲ್ಫೈಡಿನಿಂದ ಗಂಧಕದ ಆಮ್ಲವನ್ನು ತಯಾರಿ ಸಿದರು. ಕೊನೆಗೆ ಲಕ್ಷಕ್ಕೆ ಒಂದು ಪಾಲಿನಷ್ಟಿರುವ ಹೀಲಿಯಂ ಅಪೂರ್ವ ಅನಿಲ ವನ್ನೂ ಪ್ರತ್ಯೇಕಿಸಿ ಬೆಲೂನುಗಳನ್ನು ತುಂಬುವುದಕ್ಕೆ ಬಳಸಿದರು. ಹೀಗೆ ಮೊದಲು

ಬಿಸಾಡಬೇಕಾಗಿದ್ದ ಅಶುದ್ಧ ವಸ್ತುಗಳನ್ನೆಲ್ಲಾ ಪರಿಷ್ಕರಿಸಿ ಮಾರಿ ಹಣವನ್ನು ಸಂಪಾದಿಸಿದರು.

ಲ್ಯಾಗೋನಿಗಳು ಚಿಕ್ಕದಾಗಿದ್ದರೂ ಅವುಗಳಿಂದ ನೀರನ್ನು ಎತ್ತಿದ ಹಾಗೂ ತುಂಬುತ್ತಿದ್ದವು. ಇಲ್ಲಿ ಒಂದು ಬಾವಿಯನ್ನು ತೋಡಿದರೆ ನೀರು ಮೇಲಕ್ಕೆ ಏರಬಹುದು. ಇಲ್ಲದೆ ಹೋದರೆ ಪಂಪುಮಾಡಬಹುದು. ಅಂತೂ ಇದರಿಂದ ಹೆಚ್ಚಾಗಿ ಬೋರಿಕ್ ಆಮ್ಲವನ್ನು ಪಡೆದದ್ದಾಯಿತು. ೧೯೩೧ರಲ್ಲಿ ಒಂದು ಅನಿರೀಕ್ಷಿತವಾದ ಘಟನೆಯು ನಡೆಯಿತು. ಒಂದು ಕೊರೆಯುವ ಯಂತ್ರವು ೮೭೭ ಅಡಿ ಆಳವಾಗಿ ಬಾವಿಯನ್ನು ತೋಡಿದ್ದಾಗ ಇದ್ದಕ್ಕಿದ್ದಹಾಗೆ ನಿಂತಿತು. ಮಾರನೆಯ ದಿನ ಬಾವಿಯೇ ಹಾರಿಹೋಗಿ ೨೫ ಮೈಲಿಯ ಆಚೆಗೆ ಫ್ಲಾರೆನ್ಸ್‌ನಲ್ಲಿ ಕೇಳುವಷ್ಟು ಶಬ್ದವನ್ನು ಮಾಡಿತು. ಈ ಬುಗ್ಗೆಯು ಗಂಟೆಗೆ ೨೨೦ ಟನ್ ಆವಿಯನ್ನು ಗಾಳಿಗೆ ಎರಚಿತು. ಒಂದೇ ಸಮವಾಗಿ ೨೨ ದಿನಗಳವರೆಗೂ ಚಿಮ್ಮಿದ ಮೇಲೆ ಈ ದೊಡ್ಡ ಸೋಫೋನಿಯು ಹದಕ್ಕೆ ಬಂತು. ೧೯೩೨ರಲ್ಲಿ ಮತ್ತೊಂದು ಇಂಥ ಸೋಫೋನಿಯು ೬೯೫ ಅಡಿ ಆಳದಿಂದ ಹೊರಕ್ಕೆ ಚಿಮ್ಮಿತು. ಹಿಂದಿನ ಬಾವಿಯಲ್ಲಿನ ಆವಿಯ ಶಾಖವು ಸೆಂಟಿಗ್ರೇಡ್ ೨೦೫ ಡಿಗ್ರಿಗಳಾಗಿದ್ದರೆ ಇದರ ಶಾಖವು ೧೮೦ ಡಿಗ್ರಿಗಳಷ್ಟಿತ್ತು. ಇದರಿಂದ ಗಂಟೆಗೆ ೧೭೦ ಟನ್ ಆವಿಯು ಹೊರಕ್ಕೆ ಬಂತು. ಮತ್ತೊಂದು ೧೯೩೬ರಲ್ಲಿ ಹೊರಹೊಮ್ಮಿತು. ಹೀಗೆ ೧೯೩೬ರಲ್ಲಿ ಎರಡನೆಯ ಮಹಾಯುದ್ಧವು ಪ್ರಾರಂಭವಾದಾಗ ಒಟ್ಟು ೧೪೦ ಬಾವಿಗಳಿಂದ ೭,೦೦೦ ಟನ್ ಆವಿಯು ಹೊರಸೂಸುತ್ತಿತ್ತು.

ಮಿತ್ರರಾಷ್ಟ್ರಗಳ ಸೇನೆಗಳು ಇಟಲಿಯಲ್ಲಿ ಇಳಿಯುವವರೆಗೂ ಈ ಬುಗ್ಗೆಗಳು ಹೊರಹೊಮ್ಮುತ್ತಲೇ ಇದ್ದವು. ಹಿಂದಕ್ಕೆ ಸರಿಯುತ್ತಿದ್ದ ಜರ್ಮನ್ ಸೇನೆಗಳು ರೈಲುಗಳನ್ನು ನಡೆಸುತ್ತಾ ದೀಪಗಳನ್ನು ನಗರಗಳಿಗೆ ಒದಗಿಸುತ್ತಾ ಇದ್ದ ಉತ್ಪಾದನಾ ಕೇಂದ್ರವನ್ನು ಶತ್ರುಗಳಿಗೆ ಉಡುಗೊರೆಯಾಗಿ ಕೊಟ್ಟಾರೆ? ಬಾವಿಯ ಮುಚ್ಚಳಗಳನ್ನು ಕಿತ್ತು ಆವಿಯು ಉಪಯೋಗವಿಲ್ಲದೆ ಗಾಳಿಗೆ ಹೋಗುವಂತೆ ಮಾಡಿದರು. ಡೈನಮೋಗಳಿಗೆ ಡೈನಾಮೈಟನ್ನಿಟ್ಟು ಸಿಡಿಸಿದರು. ಆದರೆ ೧೫ ಕಿಲೋವಾಟ್ ಜನರೇಟರು ಇಟಲಿಯನರಿಗೆ ಸಿಕ್ಕಿತು. ಅಮೆರಿಕದಿಂದ ಸಹಾಯ ಬಂದ ಮೇಲೆ ಮತ್ತೆ ಹಿಂದಿನಂತೆ ವಿದ್ಯುತ್ತಿನ ಉತ್ಪಾದನೆಯಾಗುತ್ತಿದೆ.

ಆದರೆ, 'ಲಾರ್ಡರೆಲ್ಲೊ ಕನಸಾಗಿಯೇ ಉಳಿದಿದೆಯೆ?' ಎಂದರೆ ಒಂದು ರೀತಿಯಲ್ಲಿ ಹೌದು ಎನ್ನಬೇಕಾಗುತ್ತದೆ. ಇಲ್ಲಿ ದೊರೆತ ಅನುಭವವನ್ನು ಉಪಯೋಗಿಸಬಹುದಾದ ಪ್ರದೇಶಗಳು ಅನೇಕವಾಗಿವೆ. ನೇಪಲ್ಸ್ ಹತ್ತಿರ ವೆಸೂವಿಯಸ್ ಅಗ್ನಿಪರ್ವತದ ಹತ್ತಿರವೂ ಸಿಸಿಲಿಯ ಹತ್ತಿರವೂ ಇಂಥ ಭೂಭಾಗಗಳಿವೆ. ಐಸ್‌ಲೆಂಡ್ ನ್ಯೂಸೀಲೆಂಡ್ ಇವೆ.

ನ್ಯೂಸೀಲೆಂಡಿನಲ್ಲಿ ಬಾವಿಗಳನ್ನು ೩,೨೦೦ ಅಡಿ ಆಳವಾಗಿ ತೆಗೆದಿದ್ದಾರೆ.

ಇಲ್ಲಿ ಚದರಂಗುಲಕ್ಕೆ ೧,೪೫೦ ಪೌಂಡು ಒತ್ತಡದ ಆವಿಯು ಹೊರಕ್ಕೆ ಬರುತ್ತದೆ. ಈಗ ಅಲ್ಲಿರುವ ಬಾವಿಗಳಿಂದಲೇ ೨ಲಕ್ಷ ಜನರಿರುವ ಪ್ರದೇಶಕ್ಕೆ ವಿದ್ಯುತ್ತನ್ನು ಒದಗಿಸಬಹುದು.

ಜಾವದಲ್ಲಿನ ಅಗ್ನಿಪರ್ವತಗಳನ್ನೂ ಹೀಗೆ ಉಪಯೋಗಿಸಿಕೊಳ್ಳಬಹುದು. ಉತ್ತರ ಅಮೆರಿಕದಲ್ಲಿ ಅಲಾಸ್ಕದಲ್ಲಿಯೂ ಸಂಯುಕ್ತ ಸಂಸ್ಥಾನಗಳಲ್ಲಿಯೂ ಕೆಲವು ಸ್ಥಳಗಳು ಈ ಕೆಲಸಕ್ಕೆ ಅನುಕೂಲವಾಗಿವೆ.

ಅಗ್ನಿಪರ್ವತಗಳ ಶಾಖವನ್ನು ಬಳಸಿಕೊಂಡ ಹಾಗೆಯೇ ಭೂಮಿಯ ಒಳಭಾಗದ ಶಾಖವನ್ನೂ ಉಪಯೋಗಿಸಿಕೊಳ್ಳುವುದು ಸಾಧ್ಯ. ಭೂಮಿಯಲ್ಲಿ ೩ ಮೈಲಿ ಆಳದ ಬಾವಿಯನ್ನು ತೋಡಿದರೆ ಉಷ್ಣವು ಸೆಂಟಿಗ್ರೇಡ್ ೧೩೫ ಡಿಗ್ರಿಗಳಿರುತ್ತದೆ. ೫ ಮೈಲಿ ಆಳದ ಬಾವಿಯ ಅಡಿಯಲ್ಲಿ ೨೩೩ ಡಿಗ್ರಿಗೆ ಏರುತ್ತದೆ. ಪಶ್ಚಿಮ ಜರ್ಮನಿಯ ನ್ಯೂಫೆನ್ನಿನ ಹತ್ತಿರ ೩ ಮೈಲಿ ಆಳದ ಬಾವಿಯ ತಳದಲ್ಲಿ ಉಷ್ಣವು ಸೆಂಟಿಗ್ರೇಡ್ ೪೮೦ ಡಿಗ್ರಿಗಳಿರುತ್ತದೆ. ಇದರಿಂದ ಸಾಕಷ್ಟು ಆಳವಾಗಿ ಅಗೆದರೆ ಎಲ್ಲಿ ಬೇಕಾದರೂ ಶಾಖವು ದೊರೆಯುತ್ತದೆ ಎಂದ ಹಾಗಾಯಿತು.

ಟರ್ಬೈನನ್ನು ನಿರ್ಮಿಸಿದ ಪಾರ್ಸನ್ಸ್ ಈ ದಾರಿಯಲ್ಲಿ ಯೋಚಿಸಿದ್ದನು. ನೀರು ಕುದಿಯುವಷ್ಟು ಆಳಕ್ಕೆ ಬಾವಿಯನ್ನು ತೋಡಿ ಕೆಲವು ಅಡಿಗಳ ವ್ಯಾಸದ ಒಂದು ಬಾವಿಯ ಪಕ್ಕದಲ್ಲಿ ಉಕ್ಕಿನ ತಗಡುಗಳನ್ನು ಬಡಾಯಿಸಿ ಶುಭ್ರವಾದ ನೀರನ್ನು ಕೆಳಕ್ಕೆ ಬಿಟ್ಟು ದಾರಿಯಲ್ಲಿ ಅಲ್ಲಲ್ಲಿ ನೀರಿನ ಟರ್ಬೈನುಗಳನ್ನು ಜನರೇಟರುಗಳಿಗೆ ಜೋಡಿಸಬಹುದು. ಆ ಬಾವಿಯ ಕೆಳಗಿನಿಂದ ಇನ್ನೊಂದು ಅಂಥದೇ ಬಾವಿಯನ್ನು ತೋಡಿ ಅದರಲ್ಲಿ ಆವಿಯು ಹೊರಹೊಮ್ಮುವ ಹಾಗೆ ಮಾಡಿ ದಾರಿಯಲ್ಲಿ ಆವಿಯ ಟರ್ಬೈನುಗಳನ್ನು ಅಲ್ಲಲ್ಲಿ ಇಡಬಹುದು.

ಒಂದು ಸೆಕೆಂಡಿಗೆ ೩೫೦ ಸಲೆ ಅಡಿ ನೀರನ್ನು ಬಳಸುವ ಜಲಶಕ್ತಿಯ ಕೇಂದ್ರಗಳು ಭೂಮಿಯ ಮೇಲೆ ಎಷ್ಟೋ ಇವೆ. ಈ ನೀರನ್ನು ಭೂಗರ್ಭದ ಶಾಖವು ಸೆಂಟಿಗ್ರೇಡ್ ೧೬೦ ಡಿಗ್ರಿಗೆ ಕಾಯಿಸಿದರೆ ಅದರಿಂದ ಉತ್ಪತ್ತಿಯಾಗುವ ವಿದ್ಯುತ್ತು ಪ್ರಪಂಚದಲ್ಲಿ ಉತ್ಪತ್ತಿಯಾಗುವ ವಿದ್ಯುತ್ತಿನ ಶೇಕಡ ಅರ್ಧಭಾಗವಾಗುತ್ತದೆ. ಎಂದರೆ ೨೦೦ ಇಂಥ ಕೇಂದ್ರಗಳನ್ನು ನಿರ್ಮಿಸಿದರೆ ಪ್ರಪಂಚಕ್ಕೆಲ್ಲಾ ಬೇಕಾಗುವ ವಿದ್ಯುತ್ತನ್ನು ಪಡೆಯಬಹುದು. ಇದರಲ್ಲಿರುವ ತೊಂದರೆಯು ಅಷ್ಟು ಆಳವಾದ ಬಾವಿಗಳನ್ನು ತೋಡಲಾಗುವುದಿಲ್ಲವೆಂದಲ್ಲ. ಬಂಡೆಯೇ ಸೆಂಟಿಗ್ರೇಡ್ ೧೬೦ ಡಿಗ್ರಿಯ ಶಾಖದಲ್ಲಿರುತ್ತದೆ. ಅಲ್ಲಿ ಅಗೆಯುವುದು ಹೇಗೆ?


(ಸಶೇಷ)

—ಎಚ್. ಸಿ. ಕಪಿನೀಪತಿಭಟ್ಟ

ಚಿನ್ನ

ಮಾನವನ ಇತಿಹಾಸದಷ್ಟೇ ಪುರಾತನವಾದುದು ಚಿನ್ನದ ಇತಿಹಾಸ. ಬಹು ಹಿಂದಿನ ಕಾಲದಿಂದಲೂ ಪುರಾತನರನ್ನು ಚಿನ್ನ ತನ್ನ ಸುಂದರ ಹೊಳಪು ಮತ್ತು ಮಿರುಗುವ ಬಣ್ಣದಿಂದ ಆಕರ್ಷಿಸಿತ್ತು. ಈ ತೆರನಾದ ವಿಶೇಷಗುಣಗಳು ಮತ್ತಾವ ಲೋಹದಲ್ಲೂ ಕಂಡುಬರುವುದಿಲ್ಲ. ಇದರಿಂದಲೇ ಚಿನ್ನಕ್ಕೊಂದು ವಿಶಿಷ್ಟವಾದ, ತನ್ನದೇ ಆದ ಗಣನೀಯವಾದ ಸ್ಥಾನವಿದೆ—ಖನಿಜ ಪ್ರಪಂಚದಲ್ಲಿ. ಅಂತರಾಳದಲ್ಲಿ ಹುದುಗಿ ದೃಷ್ಟಿಗೆ ಅಗೋಚರವಾಗಿರುವ ಬದಲು ಅನೇಕ ನದಿ ದಂಡೆಗಳಲ್ಲಿನ ಮರಳು–ಮೆಕ್ಕಲುಗಳಲ್ಲಿ ಹೊನ್ನಿನ ಕಣಗಳು ಬೆರೆತು ಥಳಥಳಿಸುತ್ತವೆ. ಹೀಗೆ ಮೇಲೆಯೇ ಕಾಣಿಸಿಕೊಂಡು ತನ್ನ ಹೊಂಬಣ್ಣದಿಂದ ಮಾನವನ ಕಣ್ಣನ್ನು ಕುಕ್ಕಿ 'ಇಗೋ ನಾನಿಲ್ಲಿದ್ದೇನೆ' ಎಂದು ಅವನ ಗಮನವನ್ನು ತನ್ನತ್ತ ಸೆಳೆಯುತ್ತದೆ. ಹೀಗೆ ಸುಲಭವಾಗಿ ದಕ್ಕುವ ಚಿನ್ನವನ್ನು ಹುಡುಕಿಕೊಂಡು ಪ್ರಪಂಚದ ನಾನಾ ಕಡೆ ಬಂದೊದಗುವ ಕಷ್ಟ ನಷ್ಟಗಳನ್ನೂ, ಪ್ರಾಣಾಪಾಯಗಳನ್ನೂ ಲೆಕ್ಕಿಸದೆ ಅಲೆದಾಡಿದ್ದಾರೆ. ಮುಂದೆ ಈ ತೆರನಾದ ಅಲೆದಾಟಗಳು ಅನೇಕ ಪ್ರದೇಶಗಳಲ್ಲಿ ಶ್ರಮಪೂರಿತವಾದ ಗಣಿಯ ಕೆಲಸಗಳಿಗೆ ನಾಂದಿಯಾಗಿವೆ. ಮಾನವನ ನಾಗರಿಕತೆಯ ಇತಿಹಾಸದಲ್ಲಿ ಚಿನ್ನ ಹಾಸುಹೊಕ್ಕಾಗಿ ಸೇರಿದೆ ಎಂದರೆ ಉತ್ಪ್ರೇಕ್ಷೆಯಾಗಲಾರದು.

ಹಿಂದೆ ಅನೇಕ ಸಾಮ್ರಾಜ್ಯಗಳು ಚಿನ್ನವನ್ನೇ ಆಶ್ರಯಿಸಿ ವೈಭವದಿಂದ ಮೆರೆದುವು. ಇಂದಿಗೂ ಸಹ ಒಂದು ರಾಷ್ಟ್ರದ ಸಂಪತ್ತಿನ ಅಳತೆಗೋಲು ಚಿನ್ನ. ಅಲ್ಲಿಯ ನಾಣ್ಯ–ನೋಟಿನ ಚಲಾವಣೆಗೆ ಮೂಲಾಧಾರ ಆ ಸರ್ಕಾರದಲ್ಲಿರುವ ಚಿನ್ನದ ನಿಧಿ. ನವೀನ ಶಿಲಾಯುಗಕ್ಕೆ ಸೇರಿದ ಗುಹೆಗಳಲ್ಲೂ, ಕೆಲವು ಪ್ರಾಚ್ಯ ಸಂಶೋಧನೆಗಳಲ್ಲೂ ಚಿನ್ನದ ಬಳಕೆಗೆ ಸಂಬಂಧಿಸಿದ ಆಧಾರಗಳು, ಕುರುಹುಗಳು ದೊರೆತಿವೆ. ಚಿನ್ನ ಭೂಮಿಯ ಪ್ರತಿಯೊಂದು ಭಾಗದಲ್ಲೂ ಹಲಕೆಲವು ಪ್ರಮಾಣದಲ್ಲಿ ದೊರೆಯುತ್ತದೆ. ಸಾಮಾನ್ಯವಾಗಿ ಇದಕ್ಕೂ ಬೆಳ್ಳಿಗೂ ನಿಕಟವಾದ ಸ್ನೇಹ. ಚಿನ್ನದ ನಿಕ್ಷೇಪಗಳು ಎಲ್ಲಾ ಬಗೆಯ ಶಿಲಾವಿನ್ಯಾಸಗಳಲ್ಲೂ ಕಂಡುಬಂದಿವೆ. ಅಲ್ಲದೆ ಇತರ ಮೂಲಧಾತುಗಳೊಡನೆ ವಿಧ ವಿಧ ಪ್ರಮಾಣದಲ್ಲಿ ಬೆರೆತು ದೊರೆಯುವುದೂ ಉಂಟು. ಭೂಮಿಯ ಮೇಲ್ಭಾಗದಲ್ಲಿರುವ ಚಿನ್ನಹುದುಗಿರುವ ಶಿಲೆಗಳು ಕಾಲಕ್ರಮೇಣ ಗಾಳಿ, ಮಳೆ, ಸೂರ್ಯನ ಶಾಖ–ಇವುಗಳ ಹಾವಳಿಗೆ ಒಳಗಾಗಿ ಒಡೆದು ಸಣ್ಣ ಚೂರುಗಳಾದಾಗ ಅಭೇದ್ಯವಾದ ಸಣ್ಣ ಸಣ್ಣ ಚಿನ್ನದ ಕಣಗಳು ಬೇರಾಗಿ ಒಂದು ಕಡೆ ಶೇಖರವಾಗುತ್ತವೆ. ಇತರ ವಸ್ತುಗಳಿಗಿಂತ ಚಿನ್ನ, ಹೆಚ್ಚು ಭಾರವಾಗಿರುವ ಕಾರಣ ಹೆಚ್ಚು ತೂಕವಲ್ಲದ ಇತರ ಕಣಗಳು ಬೀಸುವ ಗಾಳಿ, ಹರಿಯುವ ನೀರು ಇವುಗಳಿಂದ ಪ್ರತ್ಯೇಕಿಸಲ್ಪಟ್ಟು ಚಿನ್ನದ ಕಣಗಳು ಮಾತ್ರ ಒಂದು ನಿರ್ದಿಷ್ಟವಾದ ಅನುಕೂಲ ವಾತಾವರಣವಿರುವ ಸ್ಥಳದಲ್ಲಿ ಸಂಗ್ರಹವಾಗುತ್ತವೆ.


MAP SHOWING GOLD DEPOSITS IN INDIA
ಇಂಡಿಯಾದ ಚಿನ್ನದ ನಿಕ್ಷೇಪಗಳು
NEPAL
EAST PAKISTAN
CHOTANAGAPUR
CULCUTTA
BOMBAY
VISHAKHAPATNAM
HYDARABAD
GOA
BELLARY
HUTTI
KOLAR
MYSORE
MADRAS
COCHIN
ಚಿನ್ನದ ಅದಿರಿನ ಪ್ರದೇಶಗಳು
POTENTIALLY WORKABLE AREAS
CHOTANAGAPUR
ANANTAPUR
DHARWAR
WYNAAD
ಗಣಿಕೆಲಸ ನಡೆಯುತ್ತಿರುವ ಪ್ರದೇಶಗಳು
ACTUAL GOLD MINING AREAS
KOLAR (12,494 ACRES)
HUTTI (1,306 ACRES)

ಚಿನ್ನದ ಅದಿರು ಸಾಮಾನ್ಯವಾಗಿ ಮೂರು ತೆರೆನಾದ ರೀತಿಗಳಲ್ಲಿ ದೊರೆಯುತ್ತದೆ. ಇವು ಯಾವುವೆಂದರೆ (೧) ಬೆಣಚುಕಲ್ಲಿನ ಸಿರಗಳಲ್ಲಿ, (೨) ನದಿಗಳ ದಂಡೆಯಲ್ಲಿನ ಮೆಕ್ಕಲು ನಿಕ್ಷೇಪಗಳಲ್ಲಿ, (೩) ಇತರ ಮೂಲ ಲೋಹಗಳ ಜತೆಯಲ್ಲಿ.

ಪ್ರಪಂಚದಲ್ಲಿ ಸುಮಾರು ೭೫ ದೇಶಗಳಲ್ಲಿ ಚಿನ್ನ ದೊರೆಯುತ್ತದೆ. ೧೪೯೩ ರಿಂದ ೧೯೬೦ರ ವರೆಗಿನ ಪ್ರಪಂಚದ ಚಿನ್ನದ ಒಟ್ಟು ಉತ್ಪತ್ತಿ ೨,೦೩೩,೦೦೦,೦೦೦ ಔನ್ಸ್‌ಗಳೆಂದು ಅಂದಾಜುಮಾಡಲಾಗಿದೆ. ಇದರಲ್ಲಿ ನೂರಕ್ಕೆ ೬೦ ಭಾಗ ಸರ್ಕಾರ ಮತ್ತು ಪ್ರಮುಖ ಬ್ಯಾಂಕುಗಳ ಖಜಾನೆಗಳಲ್ಲೂ, ೨೫ ಭಾಗ ಖಾಸಗಿ ಸಂಸ್ಥೆಗಳು ಮತ್ತು ಜನಸಾಮಾನ್ಯರಲ್ಲೂ ಸೇರಿದೆ. ಉಳಿದ ೧೫ ಭಾಗ ಕಳೆದುಹೋಗಿ ಕಾಣೆಯಾಗಿದೆ.

ನಮ್ಮ ದೇಶದಲ್ಲಿ ಬಹುಶಃ ವೇದಗಳ ಕಾಲದಿಂದಲೂ ಚಿನ್ನದ ಹೆಸರು ಕೇಳಿ ಬರುತ್ತದೆ. ಅಲ್ಲದೆ ರೋಮನ್ನರಿಗೂ, ಗ್ರೀಕರಿಗೂ ಇದರ ಪರಿಚಯ ಸಾಕಷ್ಟು ಇದ್ದಿತೆಂಬುದಕ್ಕೆ ಅನೇಕ ದಾಖಲೆಗಳಿವೆ. ಇತಿಹಾಸದಲ್ಲಿ ಕಂಡುಬರುವಂತೆ ಚಿನ್ನದ ಗಣಿಯ ಕೆಲಸದ ಮೊಟ್ಟಮೊದಲಿನ ಪ್ರಸ್ತಾಪ ಸುಮಾರು ಕ್ರಿ. ಶ. ೭೭ರಲ್ಲಿ– ಅದರಲ್ಲೂ ನಮ್ಮ ದೇಶದಲ್ಲಿ. ಗಣಿಯ ಕಾರ್ಯ ಬಹು ತೀವ್ರಗತಿಯಿಂದ ಕ್ರಿ. ಶ. ೧೩೦೦ರ ವರೆಗೆ–ಮಹಮ್ಮದೀಯ ಶಕೆ ಆರಂಭವಾಗುವವರೆಗೆ ಸಾಗಿತು. ಅಂದಿನಿಂದ ಕ್ರಿ. ಶ. ೧೬೦೦ರ ವರೆಗೆ ಇಂಡಿಯಾದ ಇತಿಹಾಸದಲ್ಲಿ ಇದರ ಸೊಲ್ಲೇ ಕೇಳಿ ಬರುವುದಿಲ್ಲ. ಇದಾದ ಮೇಲೆ ೧೭೯೩ರಿಂದ ಮಲಬಾರ್ ಪ್ರದೇಶದಲ್ಲಿ ಚಿನ್ನದ ಗಣಿಯ ಕಾರ್ಯಾಚರಣೆ ನಡೆಯಿತು. ಇದು ಸುಮಾರು ೧೮೬೩ರ ತನಕ ಮುಂದುವರೆದು, ಆಮೇಲೆ ಲಾಭದಾಯಕವಲ್ಲದ ಕಾರಣ ನಿಂತುಹೋಯಿತು. ಬಹುಶಃ ಈ ಸುಮಾರಿಗೆ ಅಂದರೆ ೧೮೦೦ರಿಂದ ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಚಿನ್ನದ ಗಣಿಯ ಕೆಲಸ ಪ್ರಾರಂಭವಾದಂತೆ ಕಂಡುಬಂದಿದೆ. ಆದರೂ ೧೮೪೮ರಲ್ಲಿ ದೊರೆತ ಕ್ಯಾಲಿಫೋರ್ನಿಯಾ ಗಣಿಗಳ ಕಾಲದವರೆಗೆ ಇದು ಯಾವ ಪ್ರಾಮುಖ್ಯತೆಯನ್ನೂ ಗಳಿಸಲಿಲ್ಲ. ಸುಮಾರು ೧೯೦೫ರವರೆಗೆ ಈ ಗಣಿಗೆ ಚಿನ್ನದ ಉತ್ಪನ್ನದಲ್ಲಿ ಅಗ್ರಸ್ಥಾನವಿತ್ತು. ಅನಂತರ ದಕ್ಷಿಣ ಆಫ್ರಿಕದ ಟ್ರಾನ್ಸ್‌ವಾಲ್ ಗಣಿಗಳು ಈ ಸ್ಥಾನವನ್ನು ಆಕ್ರಮಿಸಿದುವು. ಅಂದಿನಿಂದ ಇಂದಿನವರೆಗೂ ಈ ಅಗ್ರಮಾನ್ಯ ದಕ್ಷಿಣ ಆಫ್ರಿಕದ್ದೇ ಆಗಿದೆ. ಪ್ರಪಂಚದ ಸದ್ಯದ ಚಿನ್ನದ ಒಟ್ಟು ಉತ್ಪನ್ನದಲ್ಲಿ ಅರ್ಧಕ್ಕೂ ಹೆಚ್ಚಿನದು ಈ ದೇಶದ್ದು. ೧೯೬೦ರವರೆಗೆ ಈ ರಾಷ್ಟ್ರದ ಒಟ್ಟು ಉತ್ಪನ್ನ ೧೯೭,೮೩೪,೬೮೨ ಔನ್ಸ್‌ಗಳು. ಅಂದರೆ ವಿಶ್ವದ ಒಟ್ಟು ಉತ್ಪನ್ನದ ನೂರು ಭಾಗದಲ್ಲಿ ಹದಿನೈದರಷ್ಟು. ನಮ್ಮ ನಾಡಿನ ಕೋಲಾರ ಚಿನ್ನದ ಗಣಿಗಳಲ್ಲಿ ಬಹು ಪುರಾತನ ಕಾಲದಲ್ಲೇ ಗಣಿಯ ಕೆಲಸ ನಡೆದ ಅನೇಕ ಕುರುಹುಗಳಿವೆ. ಈಚಿನ ವರ್ಷಗಳಲ್ಲಿ ಕೆಲಸ ಆರಂಭವಾದುದು ೧೮೮೨ರಿಂದ. ಅಂದಿನಿಂದ ೧೯೬೧ ಮಾರ್ಚಿ ತಿಂಗಳವರೆಗೆ ಸುಮಾರು ೨೫,೮೭೭,೦೦೦ ಔನ್ಸ್‌ಗಳಷ್ಟು

ಚಿನ್ನ ಇಲ್ಲಿ ದೊರೆತಿದೆ. ಇದು ವಿಶ್ವದ ಒಟ್ಟು ಉತ್ಪನ್ನದಲ್ಲಿ ನೂರಕ್ಕೆ ಕೇವಲ ೧.೫ ರಷ್ಟು!

ಶಿಲೆಗಳಲ್ಲಿ ಚಿನ್ನ ದೊರೆಯುವಿಕೆ : ಚಿನ್ನ ಭೂಚರಿತ್ರೆಯಲ್ಲಿ ಅತಿಪುರಾತನವಾದ ಪ್ರಿ–ಕೇಂಬ್ರಿಯನ್ ವರ್ಗದ ಶಿಲೆಗಳಿಂದ ಹಿಡಿದು ಟರ್ಷಿಯರಿ ವರ್ಗದ ಶಿಲೆಗಳನ್ನೊಳಗೊಂಡ ನಾನಾ ವರ್ಗದ ಶಿಲೆಗಳಲ್ಲಿ ಹುದುಗಿದೆ. ಈ ಶಿಲೆಗಳು ಪ್ರಪಂಚದ ನಾನಾ ಕಡೆ ಕಂಡುಬರುತ್ತವೆ. ಶಿಲೆಗಳಲ್ಲಿ ದೊರೆಯುವ ಚಿನ್ನದ ಪ್ರಮಾಣ ಅತ್ಯಲ್ಪ–೧೦೦,೦೦೦,೦೦೦ ಭಾಗಕ್ಕೆ ಕೇವಲ ಒಂದು ಭಾಗದಷ್ಟು. ಈ ಕಾರಣ ಅದಿರಿನಲ್ಲಿ ೧,೦೦೦,೦೦೦ ಭಾಗಕ್ಕೆ ಒಂದು ಭಾಗದಷ್ಟು ಚಿನ್ನ ಬೆರೆತಿದ್ದರೂ ಗಣಿಯ ಕೆಲಸ ಲಾಭದಾಯಕವಾಗಿ ಪರಿಣಮಿಸಿದೆ. ಪ್ರತಿ ವರ್ಷವೂ ಪ್ರಪಂಚದ ನಾನಾ ಗಣಿಗಳಲ್ಲಿ ಸುಮಾರು ೧೦೦ ಮಿಲಿಯನ್ ಟನ್ನಷ್ಟು ಅದಿರನ್ನು ಒಪ್ಪಮಾಡಿ ೧,೧೦೦ ಟನ್‌ಗಳಷ್ಟು ಅಂದರೆ ೩೦ ಮಿಲಿಯನ್ ಔನ್ಸ್‌ಗಳಷ್ಟು ಚಿನ್ನವನ್ನು ಪಡೆಯುತ್ತಿದ್ದಾರೆ. ಸುಮಾರು ಒಂದು ಟನ್ ಶಿಲೆಯಲ್ಲಿ ಕೇವಲ ಅರ್ಧ ಔನ್ಸ್‌ನಷ್ಟು ಚಿನ್ನವನ್ನು ಹೊಂದಿರುವ ಅದಿರನ್ನು ಅತ್ಯಂತ ಉತ್ತಮ ದರ್ಜೆಯದೆಂದು ಪರಿಗಣಿಸಲಾಗಿದೆ. ಚಿನ್ನ ಅಲ್ಪ ಸ್ವಲ್ಪ ಪ್ರಮಾಣದಲ್ಲಿ ಸಮುದ್ರದ ನೀರಿನಲ್ಲೂ ದೊರೆಯುತ್ತದೆ. ಒಂದು ಘನಮೈಲಿ ನೀರಿನಲ್ಲಿ ಸುಮಾರು ೬೦೦,೦೦೦ ಔನ್ಸ್‌ಗಳಷ್ಟು ಚಿನ್ನವಿರುತ್ತದೆಂದು ನಿರ್ಧರಿಸಲಾಗಿದೆ. ಸದ್ಯಕ್ಕೆ ಇದರಿಂದ ಚಿನ್ನ ಪಡೆಯುವ ವಿಧಾನ ಲಾಭದಾಯಕವಾಗಿಲ್ಲ. ವಿಜ್ಞಾನದ ಹೊಸ ಪ್ರಯೋಗಗಳಿಂದ ಇದು ಸುಲಭಸಾಧ್ಯವಾದೀತು.

ಚಿನ್ನ ಸಾಮಾನ್ಯವಾಗಿ ಎರಡು ತೆರನಾಗಿ ದೊರೆಯುತ್ತದೆ. (೧) ಮೂಲ ನಿಕ್ಷೇಪಗಳು ಮತ್ತು (೨) ಮೆಕ್ಕಲು ನಿಕ್ಷೇಪಗಳು. ಮೂಲ ನಿಕ್ಷೇಪಗಳ ಗುಂಪಿಗೆ ಚಿನ್ನದ ಸಿರಗಳು ಮತ್ತು ಎಳೆಗಳನ್ನು ಸೇರಿಸಬಹುದು. ಇವು ಸಾಮಾನ್ಯವಾಗಿ ಗ್ರಾನೈಟ್ ಮೊದಲಾದ ಅಗ್ನಿಶಿಲಾರೂಪಗಳ ಸಮೀಪದಲ್ಲಿ ಕಂಡುಬರುತ್ತವೆ. ಅದರಲ್ಲೂ ಶಿಲಾರೂಪ ನಾಡಶಿಲೆಯನ್ನು ಸೋಕುವ ಕಡೆ ಲೋಹದ ಉತ್ಪತ್ತಿಗೆ ಬಹಳ ಅನುಕೂಲವಾದ ವಾತಾವರಣವಿರುತ್ತದೆ. ಸಿರಗಳಲ್ಲಿ ಚಿನ್ನ ಬೆಣಚು ಅಥವಾ ಕಾಚು, ಗಂಧಕಯುಕ್ತವಾದ ಖನಿಜಗಳು, ಕ್ಲೋರೈಟ್ ಮತ್ತು ಕ್ಯಾಲ್ಸೈಟ್ ಖನಿಜಗಳೊಡನೆ ಬೆರೆತಿರುತ್ತದೆ. ಇವುಗಳಲ್ಲಿ ಬೆಣಚಿನ ಸಿರಗಳು ಉತ್ತಮ ದರ್ಜೆಯ ಅದಿರೆಂದು ಪರಿಗಣಿತವಾಗಿದೆ. ಚಿನ್ನದ ಎಳೆಗಳು, ನರಗಳು, ಕಣಗಳು, ಅತಿಸೂಕ್ಷ್ಮವಾದ ರೇಕುಗಳು ಬೆಣಚಿನಲ್ಲಿ ಹುದುಗಿರುತ್ತವೆ. ಇವು ಸಾಮಾನ್ಯವಾಗಿ ಹೆಚ್ಚಿನ ಆಳದಲ್ಲಿ ಉಷ್ಣಾಂಶ ಹೆಚ್ಚಾಗಿರುವ ಕಡೆ ಕಂಡುಬರುತ್ತವೆ. ಕೋಲಾರದ ಚಿನ್ನದ ಗಣಿಗಳ ಅದಿರು ಈ ಜಾತಿಯದು. ಕೆಲವು ಕಡೆ ಅಷ್ಟು ಹೆಚ್ಚಿನ ಉಷ್ಣಾಂಶವಿಲ್ಲದ ಪ್ರದೇಶಗಳಲ್ಲೂ ಚಿನ್ನದ ಅದಿರು ದೊರೆಯುತ್ತದೆ. ಅಮೆರಿಕದ ಕೊಲರಾಡೋ ಚಿನ್ನದಗಣಿಗಳು ಈ ಬಗೆಯವು. ಈ ಎರಡು ಗುಂಪಿಗೂ ಸೇರಿದ ಭೂಭಾಗಗಳಲ್ಲೂ ಅಂದರೆ ಅಷ್ಟು ಅಧಿಕ ಅಥವಾ ಕನಿಷ್ಠ ಉಷ್ಣಾಂಶ ಮತ್ತು ಒತ್ತಡವಿರದ

ಕ್ಯಾಲಿಫೋರ್ನಿಯಾ ಚಿನ್ನದ ಗಣಿಗಳಲ್ಲಿ ಉತ್ತಮ ಅದಿರು ಕಂಡುಬಂದಿದೆ. ಅಷ್ಟು ಆಳದಲ್ಲಿರದೆ ಮೇಲ್ಭಾಗದಲ್ಲಿರುವ ಗಣಿಗಳಲ್ಲಿ ಅದಿರು ಬಹು ಜಾಗ್ರತೆಯಾಗಿ ಮುಗಿದುಹೋದ ಸಂದರ್ಭಗಳುಂಟು.

ಮೆಕ್ಕಲು ನಿಕ್ಷೇಪಗಳಲ್ಲಿ ನಾನಾ ಗಾತ್ರದ ಚಿನ್ನದ ಕಣಗಳು ಮತ್ತು ಗಟ್ಟಿಗಳು ಕಂಡುಬರುತ್ತವೆ. ಇಂತಹ ಕಡೆ ಮೂಲಶಿಲೆಯಲ್ಲಿ ಹುದುಗಿರುವ ಚಿನ್ನವನ್ನು ಪ್ರಕೃತಿ ನಮಗಾಗಿ ಬೇರ್ಪಡಿಸಿ ಶೇಖರಿಸಿರುತ್ತದೆ. ಇವು ಸಾಮಾನ್ಯವಾಗಿ ಭೂಮಿಯ ಮೇಲ್ಭಾಗದಲ್ಲಿ-ನದಿಯ ತೀರಗಳು, ಸಮುದ್ರದ ಕರೆ ಈ ಆಯಕಟ್ಟಿನ ಪ್ರದೇಶಗಳಲ್ಲಿ ಕಂಡುಬರುತ್ತವೆ. ಕ್ಯಾಲಿಫೋರ್ನಿಯಾ ಮತ್ತು ಆಫ್ರಿಕದ ರ್‍ಯಾಂಡ್ ಪ್ರದೇಶಗಳಲ್ಲಿ ಈ ತೆರನಾದ ಮೆಕ್ಕಲು ನಿಕ್ಷೇಪಗಳು ಇತರ ಶಿಲಾವಸ್ತುಗಳಿಂದ ಮುಚ್ಚಿಹೋಗಿ ಸ್ವಲ್ಪಮಟ್ಟಿನ ಆಳದಲ್ಲಿ ಹುದುಗಿರುವುದೂ ಉಂಟು. ಅಲಾಸ್ಕ ಪ್ರಾಂತದಲ್ಲಿ ಉತ್ತಮ ಬಗೆಯ ಸಮುದ್ರ ಮೆಕ್ಕಲು ನಿಕ್ಷೇಪಗಳು ಕಂಡುಬಂದಿವೆ.

ನಮ್ಮ ನಾಡಿನ ಅನೇಕ ಕಡೆ ನದಿಯ ಮರಳು ಮತ್ತು ಮೆಕ್ಕಲಿನೊಡನೆ ಚಿನ್ನದ ಕಣಗಳು ಬೆರೆತಿವೆ. ಮೇಲೆ ವಿವರಿಸಿರುವಂತೆ ಇದು ಒಂದೇ ಸ್ಥಳದಲ್ಲಿ ಶೇಖರವಾಗಿಲ್ಲ. ಮರಳು ಮತ್ತು ಮೆಕ್ಕಲನ್ನು ಸೋಸಿ ಜಾಲಿಸುವುದರ ಮೂಲಕ ಚಿನ್ನವನ್ನು ಪಡೆಯಬಹುದು. ಇದನ್ನೇ ಮುಖ್ಯ ಉದ್ಯಮವಾಗುಳ್ಳ ಜಲಗಾರರನ್ನು ಜ್ಞಾಪಿಸಿಕೊಳ್ಳಬಹುದು. ಅನೇಕ ಶತಮಾನಗಳಿಂದ ಇದು ವಂಶಪಾರಂಪರ್ಯವಾಗಿ ನಡೆದುಬಂದ ಕಸುಬಾಗಿದೆ.

ಪ್ರಪಂಚದ ಚಿನ್ನದ ನಿಕ್ಷೇಪಗಳು : ಪ್ರಪಂಚದ ನಾನಾ ಕಡೆ ಇರುವ ನಿಕ್ಷೇಪಗಳಲ್ಲಿ ಸುಮಾರು ೧,೦೦೦,೦೦೦,೦೦೦ ಔನ್ಸ್‌ಗಳಷ್ಟು ಚಿನ್ನ ದೊರೆಯಬಹುದೆಂದು ಅಂದಾಜುಮಾಡಲಾಗಿದೆ. ಇವುಗಳಲ್ಲಿ ರಷ್ಯದ ನಿಕ್ಷೇಪಗಳನ್ನು ಬಹು ಉತ್ತಮ ದರ್ಜೆಯವೆಂದು ಹೇಳಬಹುದು. ದಕ್ಷಿಣ ಆಫ್ರಿಕದ ನಿಕ್ಷೇಪಗಳಲ್ಲಿ ಕಡೆಯ ಪಕ್ಷ ೫೦೦,೦೦೦,೦೦೦ ಔನ್ಸ್‌ಗಳಷ್ಟು ಚಿನ್ನ ದೊರೆಯಬಹುದು. ೧೯೪೪ರಲ್ಲಿ ನಿರ್ಧರಿಸಿದಂತೆ ಅಮೆರಿಕದ ಸಂಯುಕ್ತ ಸಂಸ್ಥಾನಗಳು ಮತ್ತು ಅಲಾಸ್ಕಗಳಲ್ಲಿ ಸುಮಾರು ೬೯,೦೦೦,೦೦೦ ಔನ್ಸ್‌ಗಳಷ್ಟು ದೊರೆಯಬಹುದೆಂದು ನಿರ್ಧರಿಸಲಾಯಿತು. ಈ ದೃಷ್ಟಿಯಿಂದ ನಮ್ಮ ದೇಶದ ಚಿನ್ನದ ನಿಕ್ಷೇಪಗಳು ಅಷ್ಟು ಆಶಾದಾಯಕವಾಗಿಲ್ಲ.

ಇಂಡಿಯಾದ ಚಿನ್ನದ ನಿಕ್ಷೇಪಗಳು : ನಮ್ಮ ದೇಶದ ಚಿನ್ನದ ಸಂಪತ್ತು ಬಹು ಹಿಂದಿನ ಕಾಲದಿಂದಲೂ ಪ್ರಸಿದ್ಧವಾದುದು. ಮಹಾಭಾರತದ ಕಾಲದಿಂದಲೂ ಚಿನ್ನದ ಉಪಯೋಗ ತಿಳಿದುಬಂದಿದೆ. ವೇದಗಳಲ್ಲಿ ಅನೇಕ ಕಡೆ ಚಿನ್ನದ ಹೆಸರು ಕೇಳಿಬರುತ್ತದೆ.

ಇತಿಹಾಸದ ದಾಖಲೆಗಳನ್ನು ಅಧ್ಯಯನಮಾಡಿದಲ್ಲಿ ಪ್ಲಿನಿ ಕ್ರಿ.ಶ. ೭೭ರಲ್ಲಿ ದಕ್ಷಿಣ ಇಂಡಿಯಾದಲ್ಲಿ ನಡೆಯುತ್ತಿದ್ದ ಚಿನ್ನದ ಗಣಿಯ ಕೆಲಸವನ್ನು ಉಲ್ಲೇಖಿ

ಸಿದ್ಧಾನೆ. ಇತಿಹಾಸದ ದೃಷ್ಟಿಯಿಂದ ಇದೇ ಪ್ರಥಮ ಉಲ್ಲೇಖ. ಅಂದು ಮೊದಲಾದ ಗಣಿಯ ಕಾರ್ಯಾಚರಣೆ ಕ್ರಿ.ಶ. ೧೩೦೦ರ ತನಕ ಕ್ರಮೇಣ ಹೆಚ್ಚಿದ ಹಾಗೆ ಕಂಡುಬಂದಿದೆ. ಅದರಲ್ಲೂ ಕ್ರಿ.ಶ. ೧೦೦೦ದಲ್ಲಿ ಇದು ಅತ್ಯಂತ ಉನ್ನತ ಮಟ್ಟದಲ್ಲಿತ್ತೆಂದು ಹೇಳಬಹುದು. ಕ್ರಿ.ಶ. ೧೩೦೦ರಿಂದ ೧೬೦೦ರವರೆಗೆ ಗಣಿಯ ಕೆಲಸಕಾರ್ಯಗಳನ್ನು ಕುರಿತ ಅಂಶ ಭಾರತದ ಇತಿಹಾಸದಲ್ಲಿ ಎಲ್ಲೂ ವ್ಯಕ್ತಪಟ್ಟಿಲ್ಲ. ಬಹುಶಃ ಆಗ ದಂಡೆತ್ತಿ ಬರುತ್ತಿದ್ದ ಮಹಮ್ಮದೀಯ ದಾಳಿಕಾರರಿಗೆ ಈ ಸಂಪನ್ಮೂಲ ಗೊತ್ತಾಗದಿರಲೆಂಬ ಉದ್ದಿಶ್ಯದಿಂದ ಹೀಗಾಗಿರಬಹುದು. ಇದಾದಮೇಲೆ ೧೮೭೩ರಲ್ಲಿ ಮಲಬಾರ್‌ನಲ್ಲಿ ಚಿನ್ನದ ಗಣಿಯ ಕೆಲಸ ಆರಂಭವಾಯಿತು. ಆದರೆ, ಸುಮಾರು ೧೮೭೮ರವರೆಗೆ ಇಲ್ಲಿ ಯಾವ ಬಗೆಯ ಸುವ್ಯವಸ್ಥಿತವಾದ ಗಣಿಯ ಕೆಲಸವೂ ನಡೆದಂತೆ ಕಂಡುಬರುವುದಿಲ್ಲ. ಆ ವರ್ಷದಿಂದ ೧೮೮೧ರವರೆವಿಗೆ ಮೂವತ್ತಮೂರು ಗಣಿ ಕಂಪೆನಿಗಳು ಪ್ರಾರಂಭವಾಗಿ ೧೮೯೩ರ ವೇಳೆಗೆ ಸುಮಾರು ೬೦೦ ಔನ್ಸ್‌ಗಳಷ್ಟು ಚಿನ್ನ ಉತ್ಪತ್ತಿಯಾಯಿತು.

ಕೋಲಾರದ ಗಣಿಯ ಪ್ರದೇಶದಲ್ಲಿ ಕೆಲಸ ನಡೆದು ಕುರುಹುಗಳು ೧೮೦೨ರಲ್ಲೇ ಪತ್ತೆಮಾಡಲ್ಪಟ್ಟರೂ ೧೮೭೧ರ ವೇಳೆಗೆ ಮಾತ್ರ ಗಣಿಯ ಕೆಲಸಕ್ಕೆ ರಹದಾರಿ ದೊರೆಯಿತು. ೧೮೮೪ರ ಸುಮಾರಿಗೆ ಇದ್ದುಬದ್ದ ಅದಿರೆಲ್ಲಾ ಬರಿದಾಗಿ ಗಣಿಯ ಕೆಲಸವೇ ನಿಂತುಹೋಗುವ ಪ್ರಮೇಯ ಬಂತು. ಆದರೆ, ಅದೃಷ್ಟವಶಾತ್ ೧೮೮೫ರಲ್ಲಿ ಹಳೆಯ ಗಣಿಯೊಂದರಲ್ಲಿ ಅತ್ಯಂತ ಉತ್ತಮ ದರ್ಜೆಯ ಅದಿರನ್ನೊಳಗೊಂಡ ನಿಕ್ಷೇಪ ಬೆಳಕಿಗೆ ಬಂತು. ಅಲ್ಲದೆ ಗಣಿಯ ಚಟುವಟಿಕೆ ತೀವ್ರಗೊಂಡು ಇದುತನಕ ಅವ್ಯಾಹತವಾಗಿ ನಡೆದುಬಂದಿದೆ. ೧೯೬೧ರ ಮಾರ್ಚಿ ೩೧ರ ತನಕ ಈ ಗಣಿಗಳಲ್ಲಿ ೨೩ ಮಿಲಿಯನ್ ಔನ್ಸ್‌ಗಳಷ್ಟು ಚಿನ್ನ ದೊರೆತಿದೆ.

ಇಂಡಿಯಾದ ಎಲ್ಲಾ ಪ್ರಾಂತಗಳಲ್ಲೂ ಚಿನ್ನ ಅಲ್ಪಸ್ವಲ್ಪ ಪ್ರಮಾಣದಲ್ಲಿ ದೊರೆಯುತ್ತದೆ. ಅದರಲ್ಲೂ ನದಿಯ ತೀರದ ಮೆಕ್ಕಲಿನಿಂದ ಚಿನ್ನವನ್ನು ಜಾಲಿಸಿ ತೆಗೆಯುವ ಜಲಗಾರರು ಅನೇಕ ಪ್ರಾಂತಗಳಲ್ಲಿದ್ದಾರೆ. ಇದು ಅಷ್ಟೇನೂ ಲಾಭದಾಯಕ ಉದ್ಯಮವಲ್ಲದಿದ್ದರೂ ಇಂದಿಗೂ ಅವರ ಕುಲಕಸುಬಾಗಿ ಮುಂದುವರಿಯುತ್ತಿದೆ. ಈ ದೃಷ್ಟಿಯಿಂದ ವಿವೇಚಿಸಿದಲ್ಲಿ ಹಿಮಾಲಯ ತಪ್ಪಲು ಪ್ರದೇಶದಲ್ಲಿನ ಟಿಪನ್ ಕದಂಬಶಿಲೆ ಮತ್ತು ಮರಳುಶಿಲಾ ಸಮುದಾಯ, ಛೋಟಾನಾಗಪುರ ಜಿಲ್ಲೆಯ ರೂಪಾಂತರ ಶಿಲೆಗಳ ಜಾಡು ಮತ್ತು ನಮ್ಮ ಸೀಮೆಯ ಧಾರವಾಡ ಶಿಲಾ ಸಮುದಾಯಗಳ ಮೂಲಕ ಹರಿಯುವ ನದಿಯತೀರ ಪ್ರದೇಶಗಳಲ್ಲಿ ಚಿನ್ನದ ಕಣಗಳು ಕಂಡುಬಂದಿವೆ.

ಉತ್ತಮ ದರ್ಜೆಯ ಅದಿರಿನ ಪ್ರದೇಶಗಳು—ಮೈಸೂರು, ಮದರಾಸು, ಛೋಟಾನಾಗಪುರ ಮತ್ತು ಆಂಧ್ರ ಪ್ರದೇಶದಲ್ಲಿವೆ. ಈ ಪ್ರದೇಶಗಳಲ್ಲಿ ಅನೇಕ ಕಡೆ ಪುರಾತನರಿಂದ ಗಣಿಯ ಕೆಲಸ ಬಹುಮಟ್ಟಿಗೆ ನಡೆದಿದೆ. ಹಲವಾರು ಕಡೆ ಅವರು

ಅತ್ಯಂತ ಕಡಮೆ ದರ್ಜೆಯ ಅದಿರನ್ನೂ ಸಹ ಒಪ್ಪಮಾಡಿ ಚಿನ್ನವನ್ನು ಪಡೆದಿದ್ದಾರೆ. ಆದರೆ ಗಣಿಯ ಕೆಲಸ ಅಷ್ಟು ಆಳಕ್ಕೆ ವ್ಯಾಪಿಸಿಲ್ಲ. ಬಹುಮಟ್ಟಿಗೆ ಈಚಿನ ಗಣಿಯ ಕೆಲಸಗಳೆಲ್ಲವೂ ಈ ಹಳೆಯ ಗಣಿಗಳಿದ್ದ ಕಡೆಗಳಲ್ಲೇ ಪ್ರಾರಂಭವಾಗಿರುವುದು ಗಮನಾರ್ಹವಾದ ಅಂಶ. ಇವನ್ನು ಹೊರತು ಇದು ತನಕ ಯಾವ ಹೊಸ ಗಣಿಯನ್ನೂ ಈಚಿನ ಪೀಳಿಗೆಯವರು ಕಂಡುಹಿಡಿದ ಹಾಗೆ ಕಾಣೆ.

ಧಾರವಾಡ ಶಿಲಾಸ್ತೋಮದ ಮುಖ್ಯವಾದ ಎರಡು ಶಾಖೆಗಳು ಮೈಸೂರು ಸೀಮೆಯ ಉದ್ದಕ್ಕೂ ಹಬ್ಬಿ ಹರಡಿವೆ. ಹಳೆಯ ಗಣಿಗಳೆಲ್ಲವೂ ಈ ಜಾಡಿನ ನಾನಾ ಕಡೆ ಕಂಡುಬಂದಿವೆ. ಚಿತ್ರದುರ್ಗ, ಹಾಸನ, ಕೋಲಾರ, ಮೈಸೂರು, ಶಿವಮೊಗ್ಗ, ತುಮಕೂರು, ಧಾರವಾಡ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಚಿನ್ನ ಸಿಗುತ್ತದೆ. ೧೮೦೨ರಲ್ಲೇ ಭೂಮಿಯ ಮೇಲ್ಭಾಗದಲ್ಲಿ ಚಿನ್ನದ ಕಣಗಳು ಕೂಡಿರುವ ಸುಮಾರು ೧೩೦ ಚದರ ಮೈಲಿ ವಿಸ್ತೀರ್ಣದ ಪ್ರದೇಶವನ್ನು ಪತ್ತೆ ಹಚ್ಚಲಾಯಿತು. ಪಾಲಾರ್ ಮತ್ತು ಪೆನ್ನಾರ್ ನದಿಗಳ ಕಣಿವೆಗಳಲ್ಲಿ ಉತ್ತಮ ದರ್ಜೆಯ ನಿಕ್ಷೇಪಗಳು ಬೆಳಕಿಗೆ ಬಂದುವು. ಈ ಪ್ರದೇಶದಲ್ಲಿ ಕೆಲವು ಕಡೆ ಒಂದು ಟನ್ ಮೆಕ್ಕಲುಮಣ್ಣಿಗೆ ೧೨.೫ ಗ್ರೇನ್‌ಗಳಷ್ಟು ತೂಕದ ಚಿನ್ನವಿರುವುದು ತೋರಿಬಂದಿತು.

ಮೂಲಚಿನ್ನ ಕೋಲಾರದ ಚಿನ್ನದ ಗಣಿಗಳು ಮತ್ತು ಹಟ್ಟಿ ಗಣಿಗಳ ಪ್ರದೇಶದಲ್ಲಿ ಧಾರವಾಡ ಶಿಲಾಸ್ತೋಮಕ್ಕೆ ಸೇರಿದ ಹಾರನ್‌ಬ್ಲೆಂಡ್ ಪದರು ಶಿಲೆಯಲ್ಲಿ ಹರಡಿರುವ ಬೆಣಚುಕಲ್ಲಿನ ಸಿರಗಳಲ್ಲಿ ದೊರೆಯುತ್ತದೆ. ಇವೆರಡರಲ್ಲಿ ಮುಖ್ಯವಾದುದು ಕೋಲಾರದ ಗಣಿಗಳು. ಇಲ್ಲಿ ಚಿನ್ನ ಒಂದು ಬಗೆಯ ಬೂದು ಅಥವಾ ತೆಳು ನೀಲಿಬಣ್ಣದ ಬೆಣಚಿನ ಸಿರಗಳಲ್ಲಿ ಬಹುತೇಕ ದೊರೆಯುತ್ತದೆ. ಈ ಗಣಿಯಿರುವ ಧಾರವಾಡ ಶಿಲಾಜಾಡು ಅಷ್ಟು ವಿಸ್ತಾರವಾಗಿರದೆ ಉತ್ತರ ದಕ್ಷಿಣ ಸುಮಾರು ೫೦ ಮೈಲಿಯಷ್ಟು ಉದ್ದಕ್ಕೂ ಹರಡಿದೆ. ಇದರಲ್ಲಿ ಕೇವಲ ನಾಲ್ಕು ಮೈಲಿಗಳಷ್ಟು ಉದ್ದವಾಗಿರುವ ಮಾರಿಕುಪ್ಪಂ ಬಳಿಯ ಪ್ರದೇಶವೇ ಬಹು ಮುಖ್ಯವಾದುದು. ಇಲ್ಲಿ ಪುರಾತನರು ಕೆಲಸಮಾಡಿ ಕೈಬಿಟ್ಟ ಅನೇಕ ಹಳೆಯ ಗಣಿಗಳು ಕಂಡುಬಂದಿವೆ. ಹಿಂದಿನ ಕಾಲದಲ್ಲಿ ಇಲ್ಲಿ ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಗಣಿ ಕೆಲಸ ನಡೆಯುತ್ತಿದ್ದಿತೆಂದು ಹೇಳಬಹುದು. ಅನೇಕ ಗಣಿಗಳು ಆಧುನಿಕ ರೀತಿಯವಾಗಿರದೆ ಬೃಹದಾಕಾರದ ಕೂಪಗಳಂತಿವೆ. ಕೋಲಾರದಲ್ಲಿ ಸುಮಾರು ೩೦೦ ಅಡಿಗಳ ಆಳದವರೆಗೂ, ಹಟ್ಟಿಯಲ್ಲಿ ೬೪೦ ಅಡಿ ಆಳದವರೆಗೂ ಕೆಲಸ ನಡೆದಿದ್ದಿತು. ಈಗ ಇವುಗಳಲ್ಲಿ ಬಹು ಭಾಗ ಮಣ್ಣಿನಿಂದ ಮುಚ್ಚಿಹೋಗಿದೆ. ಮಣ್ಣಿನಲ್ಲಿ ಬೆರೆತ ಕಲ್ಲಿನ ಚೂರುಗಳು ಮತ್ತು ಬೆಣಚಿನ ಪುಡಿ ಹಿಂದೆ ನಡೆದ ಕೆಲಸದ ಸಾಕ್ಷಿಯಾಗಿವೆ. ಬಹುಶಃ ಉತ್ತಮ ದರ್ಜೆಯ ಅದಿರು ಮುಗಿದ ಮೇಲೆ ಕೆಲಸ ನಿಂತುಹೋದ ಸೂಚನೆಗಳಿವೆ. ಹೀಗೆ ಇವು ನಮ್ಮ ಪುರಾತನರ ಗಣಿ ಕೆಲಸದ ವಿಶೇಷ ಅನುಭವ ಮತ್ತು ಕೌಶಲ್ಯಕ್ಕೆ ತೋರುಗಂಬಗಳಾಗಿವೆ. ಈ ಬಗೆಯ ಕುರುಹುಗಳು ಮಾರಿ

ಕುಪ್ಪಂನ ನಾಲ್ಕು ಮೈಲಿಯ ಜಾಡಿನುದ್ದಕ್ಕೂ ಅಲ್ಲಲ್ಲೇ ಹರಡಿವೆ. ಈಚಿನ ಕೆಲಸದ ಪ್ರಾರಂಭ ೧೮೭೧ ರಲ್ಲಿ. ಮೊಟ್ಟಮೊದಲಿಗೆ ಆ ವರ್ಷ ಇಲ್ಲಿ ಗಣಿ ಕೆಲಸ ನಡೆಸಲು ಉರಿಗಾಂ ಗೋಲ್ಡ್ ಮೈನಿಂಗ್ ಕಂಪೆನಿ ಎಂಬ ಸಂಸ್ಥೆಗೆ ಸರ್ಕಾರದ ಅನುಮತಿ ಯನ್ನು ನೀಡಲಾಯಿತು. ಅವರಿಂದ ಅಷ್ಟು ಹೆಚ್ಚಿನ ಕೆಲಸ ನಡೆಯಲಿಲ್ಲ. ಸುಮಾರು ೧೮೮೦ರ ವೇಳೆಗೆ ಹೆಚ್ಚು ಹಣವನ್ನು ಶೇಖರಿಸಿ ನಿರ್ದಿಷ್ಟವಾದ ರೀತಿಯಲ್ಲಿ ಗಣಿಯ ಕೆಲಸವನ್ನು ಪ್ರಾರಂಭಿಸಲಾಯಿತು. ಆದರೂ ಕೆಲಸ ಅಷ್ಟು ಲಾಭ ದಾಯಕವಾಗಿ ಕಂಡುಬರಲಿಲ್ಲ. ಮುಂದೆ ೧೮೮೫ರಲ್ಲಿ ಮೆ|| ಜಾನ್ ಟೇಲರ್ ಅಂಡ್ ಸನ್ಸ್ ಎಂಬ ಕಂಪೆನಿಯವರು ಈ ಕೆಲಸವನ್ನು ವಹಿಸಿಕೊಂಡರು. ಅದೃಷ್ಟ ವಶಾತ್ ಕೇವಲ ೨೫೯ ಅಡಿ ಆಳದಲ್ಲೇ ಉತ್ತಮ ದರ್ಜೆಯ ಸಿರವೂ ದೊರೆಯಿತು. ಅಂದಿನಿಂದ ಇಂದಿನವರೆಗೂ ಗಣಿಯ ಕೆಲಸ ಒಂದೇಸಮನೆ ಲಾಭದಾಯಕವಾದ ರೀತಿಯಲ್ಲಿ ನಡೆಯಿತು. ಇಲ್ಲಿ ದೊರೆತ ಚಿನ್ನದ ಬಹು ಭಾಗ ನಾಲ್ಕು ಮೈಲಿ ಉದ್ದ ಮತ್ತು ನಾಲ್ಕು ಅಡಿ ಮಂದವಾಗಿರುವ ಛಾಂಪಿಯನ್ ಸಿರದಲ್ಲಿ ಕಂಡುಬಂದಿದೆ. ಈ ಸಿರ ಮೈಸೂರು, ಛಾಂಪಿಯನ್ ರೀಫ್, ಉರಿಗಾಂ ಮತ್ತು ನಂದಿದುರ್ಗ— ಈ ಗಣಿಗಳ ಉದ್ದಕ್ಕೂ ಹರಡಿದೆ. ಇದು ಉತ್ತರ ದಕ್ಷಿಣ ಹಬ್ಬಿದ್ದು ಮೇಲ್ಭಾಗದಲ್ಲಿ ಭೂಮಟ್ಟದಿಂದ ೪೫°–೬೦° ಡಿಗ್ರಿಗಳಷ್ಟು ಇಳಿವೋರೆಯನ್ನು ತೋರಿಸುತ್ತಾ ಆಳಕ್ಕೆ ಹೋದಂತೆ ಕಡಿದಾಗುತ್ತಾ ನೆಟ್ಟಗಾಗುತ್ತದೆ.

ಕೋಲಾರ ಗಣಿಗಳ ವೈಶಿಷ್ಟ್ಯವೆಂದರೆ ಅತ್ಯಂತ ಉತ್ತಮ ದರ್ಜೆಯ ಅದಿರಿ ನಿಂದ ಕೂಡಿದ ನಿಕ್ಷೇಪಗಳು. ಹಲವು ಕಡೆ ಇವು ಬಹು ವಿಸ್ತಾರವಾಗಿದ್ದು ಗಣಿಯ ಪ್ರಗತಿಗೆ ಮುಖ್ಯ ಕಾರಣವಾಗಿವೆ. ಆಳಕ್ಕೆ ಹೋದಂತೆಲ್ಲಾ ಇವು ಹೆಚ್ಚಿನ ಪ್ರಮಾಣದಲ್ಲಿ ತೋರಿಬರಬಹುದೆಂದು ಈಚಿನ ಭೂಶೋಧನೆಗಳಿಂದ ಊಹಿಸಲಾಗಿದೆ. ಇಲ್ಲಿ ಉತ್ಪನ್ನವಾಗುವ ಚಿನ್ನದಲ್ಲಿ ಬಹು ಭಾಗ ಛಾಂಪಿಯನ್ ಗಣಿಯಿಂದ ಬರುತ್ತದೆ. ಓರಿಯಂಟಲ್ ಎಂಬ ಮತ್ತೊಂದು ಸಿರ ಗಾತ್ರದಲ್ಲಿ ದೊಡ್ಡದಾಗಿದ್ದರೂ ಪಿರೈಟ್ ಎಂಬ ಖನಿಜವನ್ನು ಹೆಚ್ಚು ಪ್ರಮಾಣದಲ್ಲಿ ಹೊಂದಿರುವ ಕಾರಣ ಅಷ್ಟು ಲಾಭದಾಯಕವಲ್ಲ. ಇದು ಬಹುಮಟ್ಟಿಗೆ ನಂದಿದುರ್ಗ ಗಣಿಯಲ್ಲಿ ಕಂಡುಬರುತ್ತದೆ.

ಕೋಲಾರದ ಗಣಿಗಳು ಸುಮಾರು ೧೧,೦೦೦ ಅಡಿ ಆಳವಾಗಿದ್ದು ಇಂಡಿಯಾದ ಅತ್ಯಂತ ಆಳವಾದ ಗಣಿಗಳು, ಅಲ್ಲದೆ ಪ್ರಪಂಚದ ಅತ್ಯಂತ ಆಳವಾದ ಗಣಿಗಳ ಲ್ಲೊಂದು. ಅತ್ಯಂತ ಆಳದಲ್ಲಿನ ಶ್ರಮಸಾಧ್ಯವಾದ ಗಣಿಯ ಕೆಲಸ ಅನೇಕ ಸಮಸ್ಯೆಗಳನ್ನು ತಂದೊಡ್ಡಿದೆ. ಅಷ್ಟು ಆಳದಲ್ಲಿರುವ ದುಸ್ಸಹವಾದ ಉಷ್ಣತೆಯನ್ನು ಕಡಮೆ ಮಾಡುವುದು, ಪ್ರಾಣಾಧಾರವಾದ ಪರಿಶುದ್ಧವಾದ ಗಾಳಿಯನ್ನು ಒದಗಿ ಸುವುದು ಮತ್ತು ಶ್ರಮಜೀವಿಗಳಿಗೆ ಯಾವ ಬಗೆಯ ತೊಂದರೆಯೂ ಆಗದ ರೀತಿಯಲ್ಲಿ ಗಣಿಯ ಕೆಲಸವನ್ನು ವ್ಯವಸ್ಥೆಮಾಡುವುದು ಮುಖ್ಯ ಸಮಸ್ಯೆಗಳಾಗಿವೆ. ಗಣಿಯ ಆಳಕ್ಕೆ ಪರಿಶುದ್ಧವಾದ ಗಾಳಿಯನ್ನು ಕಳುಹಿಸುವ ಇಲ್ಲಿನ ವ್ಯವಸ್ಥೆ

ಪ್ರಪಂಚದಲ್ಲೇ ಅತಿ ಉತ್ತಮವಾದುದು. ಇದಲ್ಲದೆ ಆಳಕ್ಕೆ ಹೋದಂತೆ ಒತ್ತಡವೂ ಹೆಚ್ಚುತ್ತಾ ಹೋಗುತ್ತದೆ. ೧೦,೦೦೦ ಅಡಿಗಳ ಆಳದಲ್ಲಿ ಶಿಲಾ ಒತ್ತಡ ಪ್ರತಿ ಚದರ ಅಡಿಗೆ ೮೦೦ ಟನ್‌ಗಳಿಗಿಂತಲೂ ಅಧಿಕವಾಗಿರುತ್ತದೆ. ಈ ತೆರನಾದ ಸನ್ನಿವೇಶದಲ್ಲಿ ಗಣಿ ಕೆಲಸಮಾಡುವಾಗ ಒತ್ತಡ ವ್ಯತ್ಯಾಸಗಳುಂಟಾಗಿ ಆಗಾಗ ಶಿಲಾ ಸಿಡಿತಗಳು ಸಂಭವಿಸಿ ಹೆಚ್ಚಿನ ನಷ್ಟವನ್ನೂ, ಹಲವು ವೇಳೆ ಪ್ರಾಣಹಾನಿಯನ್ನೂ ಉಂಟುಮಾಡಬಹುದು. ಇವನ್ನು ತಡೆಗಟ್ಟಲು ಅಥವಾ ಸಾಧ್ಯವಾದಷ್ಟು ಮಟ್ಟಿಗೆ ಕಡಿಮೆ ಮಾಡಲು ಗಣಿಯ ಒಳಭಾಗದಲ್ಲಿ ಆಯಕಟ್ಟಿನ ಸ್ಥಳಗಳಲ್ಲಿ ಉಕ್ಕಿನ ಚೌಕಟ್ಟುಗಳನ್ನೂ, ಕಲ್ಲು ಅಥವಾ ಕಾಂಕ್ರೀಟ್ ಕಂಬಗಳನ್ನೂ, ಕಮಾನುಗಳನ್ನೂ ನಿರ್ಮಿಸಿದ್ದಾರೆ. ಹೀಗೆ ಇಲ್ಲಿ ಕೆಲಸ ಬಹು ಒಪ್ಪವಾದ, ಸುವ್ಯವಸ್ಥಿತವಾದ ರೀತಿಯಲ್ಲಿ ನಡೆದು ಕೋಲಾರದ ಗಣಿಗಳು ವಿಶ್ವದಲ್ಲೇ ಉತ್ತಮ ಹೆಸರನ್ನು ಸಂಪಾದಿಸಿವೆ.

ಇದುತನಕ ಈ ಗಣಿಗಳು ೬೫೦ ಕೋಟಿ ರೂಪಾಯಿಗಳಿಗೂ ಹೆಚ್ಚು ಬೆಲೆ ಬಾಳುವ ಚಿನ್ನವನ್ನು ಉತ್ಪತ್ತಿಮಾಡಿವೆ. ಇಲ್ಲಿಯ ಭೂವಿನ್ಯಾಸವನ್ನು ಅಧ್ಯಯನ ಮಾಡಿರುವ ವಿಜ್ಞಾನಿಗಳು ೧೫,೦೦೦ ಅಡಿಗಳಿಗೂ ಮೀರಿದ ಆಳದಲ್ಲಿ ಚಿನ್ನದ ಸಿರ ದೊರೆಯಬಹುದೆಂದು ತಿಳಿಸಿದ್ದಾರೆ. ಅಲ್ಲದೆ ಆಗಾಗ ಉತ್ತಮ ದರ್ಜೆಯ ಅದಿರಿನ ನಿಕ್ಷೇಪಗಳೂ ದೊರೆಯಬಹುದೆಂದು ಅಭಿಪ್ರಾಯಪಟ್ಟಿದ್ದಾರೆ. ಆದರೂ ಆಳಕ್ಕೆ ಹೋದಂತೆ ಕೆಲಸ ಕಷ್ಟಕರವಾಗಿ ಉತ್ಪನ್ನ ಕಡಮೆಯಾಗಬಹುದೆಂದು ಭಾವಿಸಿದರೆ ತಪ್ಪಾಗಲಾರದು.

ಹಟ್ಟಿ ಚಿನ್ನದ ಗಣಿಗಳು : ಪ್ರಾಮುಖ್ಯತೆಯಲ್ಲಿ ಇವು ಕೋಲಾರದ ಗಣಿಗಳಿಗೆ ಎರಡನೆಯವು. ಒಂದು ರೀತಿಯಲ್ಲಿ ಹೇಳುವುದಾದರೆ ಇವು ಕೋಲಾರ ಗಣಿಗಳ ವಿಸ್ತರಣವೆಂದೂ ಅಭಿಪ್ರಾಯಪಡಲಾಗಿದೆ. ಧಾರವಾಡ ಶಿಲಾಸ್ತೋಮದ ಮಾಸ್ಕಿ ಜಾಡಿನಲ್ಲಿ ಈ ಗಣಿಗಳಿವೆ. ೧೮೮೭ರಲ್ಲಿ 'ದಿ ಹೈದರಾಬಾದ್ (ಡೆಕ್ಕನ್) ಕಂಪೆನಿ' ಎಂಬ ಸಂಸ್ಥೆ ಇಲ್ಲಿ ಕೆಲಸವನ್ನು ಮೊದಲುಮಾಡಿತು. ೧೮೯೯ರ ವೇಳೆಗೆ ಹಟ್ಟಿ, ವೊಂಡಳ್ಳಿ, ಮಸ್ಕಿ, ತೋಪುದೊಡ್ಡಿ, ಬುಧಿನಿ ಮುಂತಾದ ಗ್ರಾಮಗಳ ಸುತ್ತಮುತ್ತ ಗಣಿಯ ಕೆಲಸ ನಡೆಯುತ್ತಿತ್ತು. ಇವುಗಳಲ್ಲಿ ವೊಂಡಳ್ಳಿ ಗಣಿಯೇ ಮೊಟ್ಟಮೊದಲು ಪ್ರಾರಂಭವಾದುದು. ೧೮೯೫ರಿಂದ ೧೯೦೦ರ ವರೆಗೆ 'ವೊಂಡಳ್ಳಿ ಗೋಲ್ಡ್ ಮೈನಿಂಗ್ ಕಂಪೆನಿ'ಯವರ ನೇತೃತ್ವದಲ್ಲಿ ಕೆಲಸ ನಡೆಯಿತು. 'ಹಟ್ಟಿ ಗೋಲ್ಡ್ ಮೈನ್ಸ್ ಲಿಮಿಟೆಡ್' ಎಂಬ ಸಂಸ್ಥೆ ೧೯೦೩ರಿಂದ ೧೯೨೦ರ ತನಕ ಕೆಲಸ ನಡೆಸಿ ೨,೫೬,೪೭೪ ಔನ್ಸ್‌ಗಳಷ್ಟು ಚಿನ್ನವನ್ನು ಪಡೆಯಿತು. ವಿಶೇಷ ಭೂಶೋಧನೆಯನ್ನು ನಡೆಸಿ ೧೯೪೨ರಲ್ಲಿ ಸುಮಾರು ೨,೯೯,೫೩೬ ಟನ್‌ಗಳಷ್ಟು ಚಿನ್ನದ ಅದಿರು ದೊರೆಯಬಹುದೆಂದೂ, ಇವುಗಳಲ್ಲಿ ಪ್ರತಿ ಟನ್ನಿಗೆ ೪.೨೬ ಪೆನಿವೇಟ್‌ಗಳಷ್ಟು ಚಿನ್ನ ಇರಬಹುದೆಂದೂ ಅಂದಾಜುಮಾಡಲಾಯಿತು. ಅಲ್ಲದೆ ೧೯೫೦ರಲ್ಲಿ ಹಳೆಯ ಶೇಖರಣೆಗಳನ್ನೂ ಒಪ್ಪಮಾಡಲಾಯಿತು. ಹೀಗಾಗಿ ೧೯೫೫ರ ಹೊತ್ತಿಗೆ

ಸುಮಾರು ೩,೦೦,೦೦೦ ಔನ್ಸ್ ಚಿನ್ನ ದೊರೆಯಿತು. ಸದ್ಯದಲ್ಲಿ ಈ ಗಣಿಗಳ ಸರಾಸರಿ ವಾರ್ಷಿಕ ಉತ್ಪನ್ನ ೧೫,೦೦೦ ಔನ್ಸ್‌ಗಳು. ಕೇಂದ್ರ ಸರ್ಕಾರದ ನೆರವಿನಿಂದ ಈ ಗಣಿಗಳನ್ನು ಅಭಿವೃದ್ಧಿಪಡಿಸುವ ಯೋಜನೆಗಳಿವೆ.

ಇಂಡಿಯಾದ ಇತರ ಚಿನ್ನದ ಪ್ರದೇಶಗಳು : ಈಗ ಕೆಲಸ ನಡೆಯುತ್ತಿರುವ ಕೋಲಾರ ಮತ್ತು ಹಟ್ಟಿಗಣಿಗಳಲ್ಲದೆ, ಹಿಂದೆ ಕೆಲಸ ನಡೆದು ಲಾಭದಾಯಕವಲ್ಲವೆಂದು ಕೈಬಿಟ್ಟ ಹಲಕೆಲವು ಪ್ರದೇಶಗಳಿವೆ. ಇವೇ ವೈನಾಡು, ಛೋಟಾ ನಾಗಪುರ, ಧಾರವಾಡ ಮತ್ತು ಅನಂತಪುರ. ಸದ್ಯದ ಪರಿಸ್ಥಿತಿಯಲ್ಲಿ ಈ ಪ್ರದೇಶಗಳಲ್ಲಿ ಮತ್ತೆ ಭೂಶೋಧನೆ ನಡೆಸಿ ಗಣಿಯ ಕೆಲಸವನ್ನೂ ಪ್ರಾರಂಭಿಸುವುದು ಲಾಭದಾಯಕವಾದೀತು.

ವೈನಾಡು ಚಿನ್ನದ ಪ್ರದೇಶ : ದಕ್ಷಿಣ ಮಲಬಾರಿನ ನದಿ ಮತ್ತು ತೊರೆಗಳ ದಂಡೆಯಲ್ಲಿ ಮೆಕ್ಕಲು ಚಿನ್ನ ದೊರೆಯುತ್ತಿರುವ ಸಂಗತಿ ೧೮೭೩ರಿಂದ ಉಲ್ಲೇಖಿತವಾಗಿದೆ. ಅದೇ ವೇಳೆಗೆ ಬೆಣಚಿನ ಸಿರಗಳಲ್ಲಿ ಚಿನ್ನಕ್ಕಾಗಿ ಕರುಂಬರು ಕೆಲಸ ಮಾಡಿ ಕೈಬಿಟ್ಟ ಅನೇಕ ಹಳೆಯ ಗಣಿಗಳು ಬೆಳಕಿಗೆ ಬಂದವು. ಆದರೂ ೧೮೭೫ರ ತನಕ 'ಆಲ್ಫ ಗೋಲ್ಡ್ ಕಂಪೆನಿ' ಎಂಬ ಸಂಸ್ಥೆ ಪ್ರಾರಂಭವಾಗುವವರೆಗೂ ಯಾವ ಹೆಚ್ಚಿನ ಕೆಲಸವೂ ಆಗಿರಲಿಲ್ಲ. ಸುಮಾರು ೨,೦೦೦ ಚ.ಮೈಲಿ ವಿಸ್ತೀರ್ಣದ ಪ್ರದೇಶದಲ್ಲಿ ಚಿನ್ನವನ್ನು ಹೊಂದಿರುವ ಶಿಲೆಗಳು ಹರಡಿವೆ ಎಂದು ನಿರ್ಧರಿಸಲಾಯಿತು. ಕೆಲವು ಸಿರಗಳಲ್ಲಿ ಪ್ರತಿ ಟನ್ನಿಗೂ ಸರಾಸರಿ ೭ ಪೆನಿವೇಟ್‌ಗಳಷ್ಟು ಚಿನ್ನ ದೊರೆಯಬಹುದೆಂದೂ ತಿಳಿಸಲಾಯಿತು. ದೇವಲ ಮತ್ತು ಪಂಡಲೂರು ಎಂಬಲ್ಲಿ ಬಹು ಉತ್ತಮ ದರ್ಜೆಯ ಸಿರಗಳಿವೆ. ಇದರಿಂದ ಉತ್ತೇಜಿತರಾಗಿ ೧೮೭೯ರಿಂದ ೧೮೮೩ರ ವರೆಗೆ ತೀವ್ರಗತಿಯಲ್ಲಿ ಚಿನ್ನಕ್ಕಾಗಿ ಭೂಶೋಧನೆ ನಡೆದು ಸುಮಾರು ೩೩ ಸಂಸ್ಥೆಗಳು ಗಣಿಯ ಕೆಲಸವನ್ನು ನಡೆಸಿದುವು. ಪುನಃ ೧೮೯೯–೧೯೦೦ರಲ್ಲಿ ಸ್ವಲ್ಪ ಕೆಲಸ ನಡೆದು ಸುಮಾರು ೬ ಕೋಟಿ ರೂಪಾಯಿ ವೆಚ್ಚಕ್ಕೆ ಕೇವಲ ೬೩೦ ಔನ್ಸ್‌ಗಳಷ್ಟು ಚಿನ್ನ ದೊರೆಯಿತು. ಸುವ್ಯವಸ್ಥಿತವಾದ ರೀತಿಯಲ್ಲಿ ಗಣಿಯ ಕೆಲಸ ನಡೆಯದೆ ಇದ್ದುದು ಇದಕ್ಕೆ ಮುಖ್ಯ ಕಾರಣವಾಗಿರಬಹುದು. ಏಕೆಂದರೆ ಈಚಿನ ವರ್ಷಗಳಲ್ಲಿ, ಅಂದರೆ ೧೯೩೯-೧೯೪೦ ಮತ್ತು ೧೯೫೧ರ ಶೋಧನೆಗಳ ಪ್ರಕಾರ ವೈನಾಡು ಚಿನ್ನದ ಪ್ರದೇಶ ಲಾಭದಾಯಕವಾದುದು.

ಛೋಟಾನಾಗಪುರ ಚಿನ್ನದ ಪ್ರದೇಶ : ಇಲ್ಲಿ ಮುಖ್ಯವಾಗಿ ಆರ್ಜಿಲೈಟ್, ಫಿಲ್ಲೈಟ್, ಮೈಕಾ ಮತ್ತು ಟಾಲ್ಕ್ ಪದರುಶಿಲೆಗಳಿಂದ ಕೂಡಿದ ಶಿಲಾಸಮುದಾಯವಿದೆ. ಇವುಗಳಲ್ಲಿ ಹರಡಿರುವ ಬಿಳಿಯ ಬೆಣಚಿನೊಡನೆ ಚಿನ್ನ ಬೆರೆತಿದೆ. ೧೮೮೮ರಲ್ಲೇ ಗಣಿಯ ಕೆಲಸ ಮೊದಲಾದರೂ ಅದು ಬಹುಕಾಲ ಮುಂದುವರೆಯಲಿಲ್ಲ. ೧೮೯೨ರ ವೇಳೆಗೆ ಈ ಪ್ರದೇಶಕ್ಕೆ ಬರುತ್ತಿದ್ದ ಚಿನ್ನದ 'ನೂಕುನುಗ್ಗಲು' ನಿಂತಿತು. ಇಲ್ಲಿ ಮತ್ತು ನೆರೆಯ ಸಿಂಘ್‌ಭೂಮ್ ಮತ್ತು ಧಾಲ್‌ಭೂಮ್‌ಗಳಲ್ಲಿ ಮತ್ತೆ

ಭೂಶೋಧನೆ ನಡೆಸುವುದು ಅಗತ್ಯ. ೧೯೧೯–೨೦ರಲ್ಲಿ ಥಾಲ್‌ಭೂವ್‌ನಲ್ಲಿ ಗಣಿ ಕೆಲಸ ನಡೆದು ಸುಮಾರು ೬,೦೩೪ ಔನ್ಸ್‌ಗಳಷ್ಟು ಚಿನ್ನ ದೊರೆಯಿತು. ಇಲ್ಲಿಯ ಪೊರೆಜರ್ನಾ ಎಂಬಲ್ಲಿಯ ಅದಿರಿನಲ್ಲಿ ಟನ್ನಿಗೆ ೨೦ ಪೆನಿವೇಟ್‌ಗಳಿಗೂ ಹೆಚ್ಚಿಗೆ ದೊರೆಯಿತು. ಮನ್‌ಭೂವ್‌ನ ಲಾವಾ ಪ್ರದೇಶದಲ್ಲಿ ಕೆಲಕಾಲ ಗಣಿ ಕೆಲಸ ನಡೆದು ನಿಂತಿತು.

ಧಾರವಾಡ ಚಿನ್ನದ ಪ್ರದೇಶ: ಧಾರವಾಡ ಶಿಲಾಜಾಡಿನ ಉತ್ತರ ದಿಕ್ಕಿನ ಅಂತ್ಯದಲ್ಲಿ ಚಿನ್ನದ ಪ್ರದೇಶವಿದೆ. ಇಲ್ಲಿ ಚಿನ್ನದ ಸಿರಗಳು ಅನೇಕವಿದ್ದರೂ ಗಾತ್ರ ಮತ್ತು ವಿಸ್ತೀರ್ಣದಲ್ಲಿ ಅಷ್ಟು ಪ್ರಾಮುಖ್ಯವಲ್ಲ. ಕೆಲವು ಕಡೆ ಮಾತ್ರ ಟನ್ನಿಗೆ ೨ ಔನ್ಸ್ ೧೫ ಪೆನಿವೇಟುಗಳಷ್ಟು ಚಿನ್ನವನ್ನು ಹೊಂದಿರುವ ಅತಿ ಉತ್ತಮವಾದ ಅದಿರೂ ಕಂಡುಬಂತು. ದಂಬಳ, ದೋಣಿ, ಸುರತೂರು ಮತ್ತು ಅತ್ತಿಕಟ್ಟೆ ಗ್ರಾಮಗಳ ಬಳಿ ಮೆಕ್ಕಲು ಚಿನ್ನ ಕೊಂಚಮಟ್ಟಿಗೆ ದೊರೆಯುತ್ತದೆ. ೧೮೭೪ರಲ್ಲಿ ದಂಬಳದ ಬಳಿ ಚಿನ್ನಸಿರವೊಂದು ಕಂಡುಬಂದಿತು. 'ಧಾರ್‌ವಾರ್ ರೀಫ್ಸ್ ಗೋಲ್ಡ್ ಮೈನಿಂಗ್ ಕಂಪೆನಿ ಲಿಮಿಟೆಡ್' ಎಂಬ ಸಂಸ್ಥೆ ಇಲ್ಲಿ ಭೂಶೋಧನೆ ನಡೆಸಿ ೧೯೦೭ರಲ್ಲಿ ಗಣಿಯ ಕೆಲಸವನ್ನು ಪ್ರಾರಂಭಿಸಿತು. ಆ ವರ್ಷ ೪,೯೧೬ ಔನ್ಸ್ ಮತ್ತು ಮರುವರ್ಷ ೭,೨೮೨ ಔನ್ಸ್ ಚಿನ್ನವನ್ನೂ ಉತ್ಪತ್ತಿಮಾಡಿತು. ಇದರ ಬೆಲೆ ಸುಮಾರು ೧೨ ಲಕ್ಷ ರೂಪಾಯಿಗಳು.

ಅನಂತಪುರ ಚಿನ್ನದ ಪ್ರದೇಶ: ಇಲ್ಲಿಯೂ ಸಹ ಧಾರವಾಡ ಶಿಲಾಸ್ತೋಮಕ್ಕೆ ಸೇರಿದ ಶಿಲೆಗಳಲ್ಲಿ ಚಿನ್ನ ದೊರೆಯುತ್ತದೆ. ೧೯೦೫ರಲ್ಲಿ 'ಅನಂತಪುರ ಗೋಲ್ಡ್‌ಫೀಲ್ಡ್ ಲಿಮಿಟೆಡ್' ಸಂಸ್ಥೆಯವರು ಮತ್ತು ೧೯೦೮ರಲ್ಲಿ ಮತ್ತೊಂದು ಸಂಸ್ಥೆಯವರೂ ಇಲ್ಲಿ ಕೆಲಕಾಲ ಕೆಲಸವನ್ನು ನಡೆಸಿದರು. ಪುರಾತನ ಗಣಿಗಳಲ್ಲಿ ಕೆಲಸ ನಡೆದು ೧೯೨೮ರ ವೇಳೆಗೆ ೧,೧೫೦ ಅಡಿ ಆಳವನ್ನು ಮುಟ್ಟಿ ಗಣಿಯ ಕೆಲಸವನ್ನು ನಿಲ್ಲಿಸಲಾಯಿತು. ೧೯೧೦ರಲ್ಲಿ ೨,೫೫೨ ಔನ್ಸ್‌ಗಳೂ ಮತ್ತು ೧೯೧೫ರಲ್ಲಿ ೫೩,೮೭೦ ಔನ್ಸ್‌ಗಳಷ್ಟೂ ಚಿನ್ನ ದೊರೆಯಿತು. ಇದರ ಬೆಲೆ ಸುಮಾರು ಒಂದು ಕೋಟಿ ರೂಪಾಯಿ.

ಇಂಡಿಯಾದ ಮೆಕ್ಕಲು ಚಿನ್ನದ ನಿಕ್ಷೇಪಗಳು: ಮೂಲಚಿನ್ನ ಬಹುಮಟ್ಟಿಗೆ ದಕ್ಷಿಣ ಇಂಡಿಯಾದ ಧಾರವಾಡ ಶಿಲಾಸ್ತೋಮಕ್ಕೆ ಮೀಸಲಾಗಿದೆ. ಉತ್ತರ ಇಂಡಿಯಾದಲ್ಲಿ ಇದು ಕಂಡುಬಂದಿಲ್ಲ. ಆದರೆ ಸಿಂಧೂ–ಗಂಗಾ ಬಯಲು ಪ್ರದೇಶದ ಅಸ್ಸಾಂ, ಬಿಹಾರ್, ಉತ್ತರಪ್ರದೇಶ, ಕಾಶ್ಮೀರ ಪ್ರಾಂತಗಳಲ್ಲಿ ಅನೇಕ ಕಡೆ ನದಿಯ ಮೆಕ್ಕಲಿನಲ್ಲಿ ಚಿನ್ನದ ಕಣಗಳು ಕಂಡುಬಂದಿವೆ. ಅಲ್ಲದೆ ದಕ್ಷಿಣ ಇಂಡಿಯಾದ ಧಾರವಾಡ, ರಾಯಚೂರು, ಬಳ್ಳಾರಿ, ಶಿವಮೊಗ್ಗ, ವಾರಂಗಲ್ಲು, ಕೊಯಮತ್ತೂರು, ಮಧುರೆ, ಮಲಬಾರ್ ಜಿಲ್ಲೆಗಳಲ್ಲಿ ಹರಿಯುವ ಅನೇಕ ನದಿಗಳ ಮೆಕ್ಕಲಿನಲ್ಲಿ ಚಿನ್ನ ಬೆರೆತಿದೆ. ಕಬ್ಬಿಣವನ್ನು ಬಿಟ್ಟರೆ ಚಿನ್ನವೇ ಇಂಡಿಯಾದ ಬಹು ಭಾಗಗಳಲ್ಲಿ ದೊರೆಯುವ ಖನಿಜವಾಗಿದೆ.

ಗಣಿಯ ಕೆಲಸ : ಚಿನ್ನದ ಅದಿರನ್ನು ಆಳದಿಂದ ಅಗೆದು ಹೊರತೆಗೆಯ ಬೇಕು. ಇದು ಬಹು ಶ್ರಮಸಾಧ್ಯವಾದ ಕೆಲಸ. ಹೆಚ್ಚಿನ ಹಣ ಮತ್ತು ಜನ ಬೇಕು. ಈ ಕೆಲಸ ಎಷ್ಟು ಶ್ರಮಪೂರಿತವೆಂದರೆ ಒಂದು ಟನ್ ಚಿನ್ನವನ್ನು ಪಡೆಯಲು, ೧,೦೦,೦೦೦ ಟನ್‌ಗಳಿಗೂ ಹೆಚ್ಚಿನ ಅದಿರನ್ನು ತೆಗೆದು ಪುಡಿಮಾಡಿ ಒಪ್ಪಮಾಡಬೇಕು. ಅಲ್ಲದೆ ಗಣಿ ಕೆಲಸದ ವಿಧಾನ ಎಲ್ಲಾ ಪ್ರದೇಶಗಳಲ್ಲೂ ಒಂದೇ ತೆರನಾಗಿರದೆ ಶಿಲಾವಿನ್ಯಾಸ ಮತ್ತು ಅದಿರಿನ ರೀತಿಯನ್ನು ಅವಲಂಬಿಸಿರು ತ್ತದೆ. ಭೂಮಿಯಿಂದ ಹೊರತೆಗೆದ ಅದಿರಿನ ಚೂರುಗಳನ್ನು ದೊಡ್ಡ ದೊಡ್ಡ ಕುಟ್ಟುವ ಯಂತ್ರಗಳ ಸಹಾಯದಿಂದ ನಯವಾದ ಪುಡಿಮಾಡಲಾಗುವುದು. ಚಿನ್ನ ದೊಡನೆ ಬೆರೆತಿರುವ ಇತರ ವಸ್ತುಗಳನ್ನು ಯಂತ್ರಗಳ ಸಹಾಯದಿಂದ ಬೇರ್ಪಡಿಸು ತ್ತಾರೆ. ಅನಂತರ ಪಾದರಸ, ಸಯನೈಡ್ ಮೊದಲಾದ ರಸಾಯನಿಕ ದ್ರವಗಳ ಸಹಾಯದಿಂದ ಚಿನ್ನವನ್ನು ಒಪ್ಪಮಾಡುತ್ತಾರೆ. ಇದನ್ನು ಮತ್ತೆ ಕುಲುಮೆ ಗಳಲ್ಲಿಟ್ಟು ಕರಗಿಸಿ ಶುದ್ಧಮಾಡಿ ಇಟ್ಟಿಗೆ ಅಥವಾ ಗಟ್ಟಿಗಳಾಗಿ ಎರಕ ಹುಯ್ಯು ತ್ತಾರೆ. ಸಾಮಾನ್ಯವಾಗಿ ಚಿನ್ನದೊಡನೆ ಬೆರೆತಿರುವ ಲೋಹಗಳಲ್ಲಿ ಮುಖ್ಯ ವಾದುದು ಬೆಳ್ಳಿ. ಚಿನ್ನವನ್ನು ಒಪ್ಪಮಾಡುವಾಗ ಇದು ಉಪವಸ್ತುವಾಗಿ ದೊರೆಯು ತ್ತದೆ. ಹೀಗೆ ಒಪ್ಪಮಾಡಿದ ಚಿನ್ನದ ಪ್ರತಿ ನಾಲ್ಕು ಭಾಗಗಳಿಗೆ ಒಂದು ಭಾಗ ಬೆಳ್ಳಿ ಬರುತ್ತದೆ. ತವರದ ಮುಖ್ಯ ಅದಿರಾದ ಕ್ಯಾಸಿಟರೈಟ್, ಯುರೇನಿಯಂ ಖನಿಜಗಳು, ಪ್ಲಾಟಿನಂ ಖನಿಜಗಳು ಸಾಮಾನ್ಯವಾಗಿ ಚಿನ್ನದ ಅದಿರು ಮತ್ತು ಮೆಕ್ಕಲಿನೊಡನೆ ಬೆರೆತಿರುತ್ತದೆ.

ಕೋಲಾರ ಗಣಿಗಳ ರಾಷ್ಟ್ರೀಕರಣ : ಗಣಿಯ ಕೆಲಸ ಆರಂಭವಾದಂದಿನಿಂದ ಇಂಗ್ಲೆಂಡಿನ ಮೆ॥ ಜಾನ್ ಟೇಲರ್ ಅಂಡ್ ಸನ್ಸ್ ಎಂಬ ಸಂಸ್ಥೆಯವರು ಕೆಲಸ ವನ್ನು ಬಹು ಉತ್ತಮವಾದ ಮತ್ತು ಲಾಭದಾಯಕವಾದ ರೀತಿಯಲ್ಲಿ ನಡೆಸಿದರು. ೧೯೫೬ರ ನವೆಂಬರ್ ೧ನೇ ತಾರೀಕು ಮೈಸೂರು ಸರ್ಕಾರದವರು ಸುಮಾರು ಎರಡು ಕೋಟಿ ರೂಪಾಯಿಗಳ ಪರಿಹಾರದ್ರವ್ಯವನ್ನು ಕೊಟ್ಟು ಗಣಿಯ ಕೆಲಸವನ್ನು ತಾವೇ ವಹಿಸಿಕೊಂಡರು. ಕೆಲವು ತಿಂಗಳ ಹಿಂದೆ ಇದನ್ನು ಕೇಂದ್ರ ಸರ್ಕಾರ ದವರು ತಮ್ಮ ಆಡಳಿತಕ್ಕೆ ತೆಗೆದುಕೊಂಡರು. ಉತ್ಪನ್ನ ಲಾಭದಾಯಕವಲ್ಲದ್ದ ರಿಂದ ಗಣಿಯನ್ನೇ ಮುಚ್ಚುವ ಮಾತು ಪತ್ರಿಕೆಗಳಲ್ಲಿ (ಇದರ ಜತೆಗೆ ಹಟ್ಟಿ ಚಿನ್ನದ ಗಣಿಯನ್ನೂ ಸಹ) ಆಗಾಗ ಕೇಳಿಬರುತ್ತಿದೆ.

ಚಿನ್ನದ ಉಪಯೋಗ : ಅಂತರರಾಷ್ಟ್ರೀಯ ಬ್ಯಾಂಕಿಂಗ್ ವ್ಯವಹಾರಗಳಲ್ಲಿ ಚಿನ್ನ ಬಹು ಮುಖ್ಯವಾದುದು. ರಾಷ್ಟ್ರಗಳ ನಾಣ್ಯಚಲಾವಣೆಯಲ್ಲೂ ಚಿನ್ನಕ್ಕೆ ಪ್ರಮುಖವಾದ ಸ್ಥಾನವಿದೆ. ಅಲ್ಲದೆ ವೈಜ್ಞಾನಿಕ ಸಂಶೋಧನೆಗಳು ಮತ್ತು ಕೆಲವು ವಿಶೇಷ ರೀತಿಯ ಉಪಕರಣಗಳ ತಯಾರಿಕೆಗೆ ಚಿನ್ನ ಬಹು ಉಪಯುಕ್ತ ವಾದುದು. ಕ್ಷಿಪಣಿ ಮತ್ತು ರಾಕೆಟ್‌ಗಳ ಮೇಲ್ಭಾಗದಲ್ಲಿ ಚಿನ್ನದ ಅತಿ ತೆಳುವಾದ

ಪೊರೆಯಿರುತ್ತವೆ. ಇದರಿಂದ ಇನ್‌ಫ್ರರೆಡ್ ಕಿರಣ ಪ್ರತಿಫಲನಕ್ಕೆ ಬಹಳ ಅನುಕೂಲ. ಚಿನ್ನದ ಪಾರದರ್ಶಕವಾದ ಅತಿಸೂಕ್ಷ್ಮವಾದ ಪೊರೆಯನ್ನು ಮೋಟಾರು ವಾಹನಗಳ ಕಿಟಕಿಗಳ ಗಾಜಿನ ಬಾಗಿಲುಗಳ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ. ದಟ್ಟವಾದ ಮಂಜು ಕವಿದಾಗ ಇದರಿಂದ ವಾಹನ ಸಂಚಾರಕ್ಕೆ ಯಾವ ಅಡ್ಡಿಯೂ ಆಗುವುದಿಲ್ಲ. ಈಚೆಗೆ 'ವೈರ್‌ಲೆಸ್ ಕಮ್ಯುನಿಕೇಷನ್ಸ್'ಗೆ ಸಂಬಂಧಿಸಿದ ಟ್ರಾನ್ಸಿಸ್ಟರ್‌ಗಳ ತಯಾರಿಕೆಯಲ್ಲಿ ಚಿನ್ನವನ್ನು ಬಳಸುತ್ತಾರೆ. ಆಭರಣ ಮತ್ತು ಇತರ ಕಲಾತ್ಮಕ ವಸ್ತುಗಳ ತಯಾರಿಕೆಗಂತೂ ಚಿನ್ನ ಬಹು ಆವಶ್ಯಕ.

ಪ್ರಪಂಚದ ಚಿನ್ನದ ಉತ್ಪನ್ನ : ಉತ್ಪನ್ನವಾದ ಚಿನ್ನದಲ್ಲಿ ಬಹು ಭಾಗ ದಿನಬಳಕೆಗೆ ಬರದೆ ಭಂಡಾರಗಳನ್ನು ಸೇರುತ್ತದೆ. ಇದುವರೆಗೆ ಉತ್ಪತ್ತಿಯಾದ ಒಟ್ಟು ಚಿನ್ನದಲ್ಲಿ ಸುಮಾರು ಶೇಕಡಾ ೬೦ರಷ್ಟು ಸರ್ಕಾರದ ಉಗ್ರಾಣಗಳಲ್ಲಿದೆ. ೧೯೪೪ರಿಂದ ಈವರೆಗೆ (೧೯೫೩ರನ್ನು ಹೊರತು) ಉತ್ಪನ್ನ ಒಂದೇ ಸಮನಾಗಿ ಹೆಚ್ಚುತ್ತಿದೆ. ೧೯೬೧ರ ಉತ್ಪನ್ನ-ರಷ್ಯಾ ಮೊದಲಾದ ಕಮ್ಯುನಿಸ್ಟ್ ರಾಷ್ಟ್ರಗಳನ್ನು ಹೊರತು, ೩೪.೭ ಮಿಲಿಯನ್ ಔನ್ಸ್‌ಗಳು. ಇದರಲ್ಲಿ ಬಹು ಭಾಗ, ಸುಮಾರು ಮೂರು ಭಾಗಗಳಲ್ಲಿ ಎರಡರಷ್ಟು ದಕ್ಷಿಣ ಆಫ್ರಿಕಾ ದೇಶದ್ದಾಗಿದೆ. ರಷ್ಯಾ ದೇಶದ ಉತ್ಪನ್ನ ನಿರ್ದಿಷ್ಟವಾಗಿ ಗೊತ್ತಿಲ್ಲದಿದ್ದರೂ ಪ್ರತಿ ವರ್ಷ ೧೦ರಿಂದ ೧೭ ಮಿಲಿಯನ್ ಔನ್ಸ್‌ಗಳಷ್ಟು ಚಿನ್ನ ಉತ್ಪತ್ತಿಯಾಗಬಹುದೆಂದು ಪ್ರವೀಣರು ಊಹಿಸಿದ್ದಾರೆ. ೧೯೬೧ರಲ್ಲಿ ರಷ್ಯಾದಿಂದ ಸುಮಾರು ೫ ೧/೨ ಮಿಲಿಯನ್ ಔನ್ಸ್‌ಗಳು ಬ್ರಿಟನ್ ಮತ್ತು ಇತರ ರಾಷ್ಟ್ರಗಳಿಗೆ ರಫ್ತಾಯಿತು. ರಷ್ಯಾದ ಚಿನ್ನದ ಸಂಗ್ರಹದ ಬೆಲೆ ೧,೯೦೦ ಕೋಟಿ ರೂಪಾಯಿಗಳಿಂದ ೪,೨೭೫ ಕೋಟಿ ರೂಪಾಯಿಗಳವರೆಗೆ ಇರಬಹುದೆಂದು ಅಭಿಪ್ರಾಯಪಡಲಾಗಿದೆ. ಅಮೆರಿಕ ಸಂಯುಕ್ತಸಂಸ್ಥಾನಗಳ ಸುವರ್ಣ ಸಂಗ್ರಹದ ಬೆಲೆ ಸುಮಾರು ೮೦೨ ಕೋಟಿ ರೂಪಾಯಿಗಳೆಂದೂ ಅಂದಾಜು ಮಾಡಲಾಗಿದೆ.

೧೯೫೧ರಿಂದ ಈವರೆಗೆ ಇಂಡಿಯಾ ಸರ್ಕಾರದವರು ೧೭೭.೭೬ ಕೋಟಿ ರೂಪಾಯಿಗಳು ಬೆಲೆಬಾಳುವ ಚಿನ್ನದ ಸಂಗ್ರಹವನ್ನು ಒಂದೇ ರೀತಿ ಕಾಪಾಡಿಕೊಂಡು ಬಂದಿದ್ದಾರೆ.

ಈಚಿನ ವರ್ಷಗಳಲ್ಲಿ ಅಮೆರಿಕಾದ ಚಿನ್ನದ ಸಂಗ್ರಹದಲ್ಲಿ ಸುಮಾರು ಶೇಕಡಾ ೩೫ರಷ್ಟು ಇಳಿಮುಖವಾಯಿತು. ಡಾಲರ್ ಮೌಲ್ಯವನ್ನು ಕಾಪಾಡಲು ಈ ಖೋತಾವನ್ನು ತುಂಬಲೇಬೇಕು. ಅಮೆರಿಕ ಇತರ ರಾಷ್ಟ್ರಗಳಿಗೆ ಕೊಡುತ್ತಿರುವ ಆರ್ಥಿಕ ನೆರವೇ ಇದಕ್ಕೆ ಕಾರಣ. ಈ ಮಧ್ಯೆ ಅಲ್ಲಿನ ಚಿನ್ನದ ಗಣಿಗಳ ಮಾಲೀಕರು ಸರ್ಕಾರ ಚಿನ್ನದ ಬೆಲೆಯನ್ನು ಹೆಚ್ಚಿಸಬೇಕೆಂದೂ, ಹೀಗೆ ಮಾಡುವುದರಿಂದ ಮಾತ್ರ ಹೆಚ್ಚು ಚಿನ್ನದ ಉತ್ಪನ್ನಕ್ಕೆ ಪ್ರೇರಕವಾಗಬಹುದೆಂದೂ ತಿಳಿಸಿದ್ದಾರೆ. ಇದಕ್ಕೆ ಸರ್ಕಾರೀ ವಲಯಗಳಲ್ಲಿ ಒಮ್ಮತವಿಲ್ಲ. ಹೀಗಾಗಿ ರಾಷ್ಟ್ರಧನ (ಚಿನ್ನದ ಸಂಗ್ರಹ)

ಕ್ರಮೇಣ ಕರಗುತ್ತಿದೆ. ಇದನ್ನು ಸಕಾಲದಲ್ಲಿ ತಡೆಗಟ್ಟದಿದ್ದಲ್ಲಿ ಅಮೆರಿಕ ಸಂಸ್ಥಾನವೇ ಅಲ್ಲದೆ ಇಡೀ ಪ್ರಪಂಚದ ಆರ್ಥಿಕ ವ್ಯವಸ್ಥೆಯೇ ಬದಲಾದೀತು.

ಇಂಡಿಯಾಕ್ಕೆ ಚಿನ್ನದ ಕಳ್ಳಸಾಗಾಣಿಕೆ: ಅಂತರರಾಷ್ಟ್ರೀಯ ಬೆಲೆಗಿಂತ ಇಂಡಿಯಾದಲ್ಲಿ ಚಿನ್ನಕ್ಕೆ ಹೆಚ್ಚಿನ ಬೆಲೆ ಸಿಗುವುದರಿಂದ ಹೊರದೇಶಗಳಿಂದ ಇಲ್ಲಿಗೆ ಕಳ್ಳತನದಲ್ಲಿ ಚಿನ್ನವನ್ನು ಸಾಗಿಸುವುದು ಬಹು ಲಾಭದಾಯಕ ವ್ಯಾಪಾರವಾಗಿ ಪರಿಣಮಿಸಿದೆ. ಜನಗಳಿಗೆ ಚಿನ್ನದಮೇಲಿರುವ ವ್ಯಾಮೋಹವೇ ಇದಕ್ಕೆ ಕಾರಣ ವೆಂದರೂ ತಪ್ಪಾಗಲಾರದು. ೧೯೬೦ರಲ್ಲಿ ೧.೨ ಕೋಟಿ ರೂಪಾಯಿ ಬೆಲೆಯ ಮತ್ತು ೧೯೬೧ರಲ್ಲಿ ೨.೮ ಕೋಟಿ ರೂಪಾಯಿ ಬೆಲೆಯ ಈ ಬಗೆಯ ಅಕ್ರಮ ಚಿನ್ನವನ್ನು ಸರ್ಕಾರ ಮುಟ್ಟುಗೋಲು ಹಾಕಿತು. ಪೇಟೆಯಲ್ಲಿ ಚಿನ್ನದ ಮಾರಾಟದ ಅಂಕಿ ಅಂಶಗಳನ್ನು ಗಮನಿಸಿದಲ್ಲಿ ಇನ್ನೂ ಹೆಚ್ಚಿನ ಪ್ರಮಾಣ ದಲ್ಲಿ ಕಳ್ಳಸಾಗಾಣಿಕೆ ಮತ್ತು ವ್ಯಾಪಾರ ನಡೆಯುತ್ತಿದೆಯೆಂದು ತಿಳಿಯಬಹುದು. ವರ್ಷಕ್ಕೆ ಸುಮಾರು ೩೫ ಕೋಟಿ ರೂಪಾಯಿ ಬೆಲೆಯ ಚಿನ್ನ ಅಕ್ರಮವಾದ ರೀತಿಯಲ್ಲಿ ನಮ್ಮ ದೇಶಕ್ಕೆ ಬರುತ್ತಿದೆಯೆಂದು ಭಾವಿಸಲಾಗಿದೆ. ಈಚಿನ ಚಿನ್ನದ ನಿಯಂತ್ರಣ ಆಜ್ಞೆಯಿಂದ ಇದನ್ನು ಬಹುಮಟ್ಟಿಗೆ ತಡೆಗಟ್ಟಲಾಗಿದೆ ಎಂದು ಸರ್ಕಾರದ ಅಭಿಪ್ರಾಯ.

ಚಿನ್ನದ ಸಂಗ್ರಹ: ಪ್ರಪಂಚದ ನಾನಾ ರಾಷ್ಟ್ರಗಳಲ್ಲಿ ಸುಮಾರು ೧೫.೫ ಬಿಲಿಯನ್ ಡಾಲರ್ ಬೆಲೆ ಬಾಳುವ ಚಿನ್ನವನ್ನು ನಾಣ್ಯ ಮತ್ತು ಗಟ್ಟಿಗಳ ರೂಪದಲ್ಲಿ ಸಂಗ್ರಹಿಸಿಡಲಾಗಿದೆ. ಇದು ರಷ್ಯಾ ಹೊರತು ಇತರ ರಾಷ್ಟ್ರಗಳ ವಾರ್ಷಿಕ ಉತ್ಪನ್ನದ ಹದಿಮೂರರಷ್ಟು. ಫ್ರಾನ್ಸ್ ದೇಶ ೪.೧ ಬಿಲಿಯನ್ ಡಾಲರ್ ಬೆಲೆ ಬಾಳುವ ಚಿನ್ನವನ್ನು ಸಂಗ್ರಹಿಸಿ ಮೊದಲ ಸ್ಥಾನವನ್ನು ಪಡೆದಿದೆ.*

—ಬಿ. ವಿ. ಗೋವಿಂದರಾಜುಲು

* (೧೯೬೨ರ ಡಿಸೆಂಬರ್ ತಿಂಗಳಲ್ಲಿ ಪ್ರಕಟವಾದ 'ಮಿನರಲ್ ಮಾರ್ಕೆಟ್ಸ್'—ಸಂಪುಟ ೧, ಸಂಚಿಕೆ ೧, ಪತ್ರಿಕೆಯಲ್ಲಿ ಪ್ರಕಟವಾದ Gold ಎಂಬ ಲೇಖನವನ್ನು ಅನುಸರಿಸಿ ಈ ಲೇಖನವನ್ನು ಬರೆಯಲಾಗಿದೆ. ಇದಕ್ಕೆ ಅನುಮತಿಯನ್ನಿತ್ತ ಆ ಪತ್ರಿಕೆಯ ಸಂಪಾದಕವರ್ಗಕ್ಕೆ ಅನಂತ ವಂದನೆಗಳು.)

ಅನುಬಂಧ ೧

ಬೊಂಬಾಯಿ ಚಿನಿವಾರಕಟ್ಟೆಯಲ್ಲಿ ಚಿನ್ನದ ದೈನಂದಿನ ಸರಾಸರಿ ಬೆಲೆ

ವರ್ಷ	ಔನ್ಸಿಗೆ ಬೆಲೆ (ರೂ. ಗಳಲ್ಲಿ)	ವರ್ಷ	ಔನ್ಸಿಗೆ ಬೆಲೆ (ರೂ. ಗಳಲ್ಲಿ)
೧೮೪೧	೪೪.೬೯	೧೯೪೧–೧೯೪೨	೧೨೧.೯೦
೧೮೯೩–೧೯೧೪	೬೫.೭೬	೧೯೪೨–೧೯೪೩	೧೫೮.೦೪
೧೯೧೭	೭೬.೫೫	೧೯೪೩–೧೯೪೪	೨೦೦.೨೧
೧೯೧೮	೮೭.೬೮	೧೯೪೪–೧೯೪೫	೨೦೯.೫೦
೧೯೧೯	೯೧.೭೯	೧೯೪೫–೧೯೪೬	೨೧೯.೭೨
೧೯೨೦	೬೮.೫೦	೧೯೪೬–೧೯೪೭	೨೭೬.೯೩
೧೯೨೧	೬೮.೫೦	೧೯೪೭–೧೯೪೮	೨೯೫.೯೭
೧೯೨೫	೫೮೨.೨	೧೯೪೮–೧೯೪೯	೩೧೪.೦೩
೧೯೨೬–೧೯೨೭	೫೮.೮೫	೧೯೪೯–೧೯೫೦	೩೧೪.೯೦
೧೯೨೭–೧೯೨೮	೫೮.೮೨	೧೯೫೦–೧೯೫೧	೩೧೬.೮೮
೧೯೨೯–೧೯೩೦	೫೮.೭೦	೧೯೫೧–೧೯೫೨	೨೯೮.೮೫
೧೯೩೦–೧೯೩೧	೫೯.೬೭	೧೯೫೨–೧೯೫೩	೨೪೧.೧೪
೧೯೩೧–೧೯೩೨	೬೬.೪೯	೧೯೫೩–೧೯೫೪	೨೩೫.೮೮
೧೯೩೨–೧೯೩೩	೮೦.೩೩	೧೯೫೪–೧೯೫೫	೨೪೪.೮೭
೧೯೩೩–೧೯೩೪	೮೮.೪೪	೧೯೫೫–೧೯೫೬	೨೫೫.೫೭
೧೯೩೪–೧೯೩೫	೯೮.೫೮	೧೯೫೬–೧೯೫೭	೨೭೮.೬೮
೧೯೩೫–೧೯೩೬	೯೬.೭೬	೧೯೫೭–೧೯೫೮	೨೮೯.೧೯
೧೯೩೬–೧೯೩೭	೯೫.೨೯	೧೯೫೮–೧೯೫೯	೨೯೮.೮೩
೧೯೩೭–೧೯೩೮	೮೬.೨೮	೧೯೫೯–೧೯೬೦	೩೨೨.೫೩
೧೯೩೮–೧೯೩೯	೯೭.೬೫	೧೯೬೦–೧೯೬೧	೩೫೭.೩೭
೧೯೩೯–೧೯೪೦	೧೦೯.೨೪	೧೯೬೧–೧೯೬೨	೩೭೭.೦೮
೧೯೪೦–೧೯೪೧	೧೧೬.೦೯		


ಅನುಬಂಧ ೨

ಇಂಡಿಯಾ ದೇಶದ ಚಿನ್ನದ ಉತ್ಪನ್ನ

ವರ್ಷ	ಉತ್ಪನ್ನ (ಔನ್ಸ್ ಗಳಲ್ಲಿ)	ಬೆಲೆ (ರೂ. ಗಳಲ್ಲಿ)	ವರ್ಷ	ಉತ್ಪನ್ನ (ಔನ್ಸ್ ಗಳಲ್ಲಿ)	ಬೆಲೆ (ರೂ. ಗಳಲ್ಲಿ)
೧೮೮೨	೧೪	೭೫೦	೧೯೧೦	೫,೭೩,೧೦೦	೩,೩೦,೩೭,೩೦೦
೧೮೮೩	೧೮೦	೮,೦೨೫	೧೯೧೧	೫,೮೩,೬೦೦	೩,೩೫,೭೨ ೧೦೦
೧೮೮೪	೧,೬೦೦	೭೧,೪೦೦	೧೯೧೨	೫,೯೦,೬೦೦	೩.೪೦,೭೭,೧೦೦
೧೮೮೫	೮,೩೦೦	೩,೭೨,೯೦೦	೧೯೧೩	೫,೯೫,೮೦೦	೩,೪೩,೭೮,೮೦೦
೧೮೮೬	೨೧,೨೦೦	೯,೪೫,೪೦೦	೧೯೧೪	೬,೦೭,೪೦೦	೩,೫೦,೭೫,೭೦೦
೧೮೮೭	೧೯,೧೦೦	೮,೫೫,೪೦೦	೧೯೧೫	೬,೧೬,೭೦೦	೩,೫೬,೪೭,೭೦೦
೧೮೮೮	೪೩,೩೦೦	೧೯,೩೩,೨೦೦	೧೯೧೬	೫,೯೮,೪೦೦	೩,೪೫,೪೫,೩೦೦
೧೮೮೯	೧,೦೦,೩೦೦	೪೪,೮೨,೯೦೦	೧೯೧೭	೫,೭೪,೩೦೦	೩,೩೩.೨೮,೨೦೦
೧೮೯೦	೧,೩೭,೫೦೦	೬೧,೪೨,೯೦೦	೧೯೧೮	೫,೩೬,೧೦೦	೩,೦೯,೦೨,೩೦೦
೧೮೯೧	೧,೬೯,೩೦೦	೭೫,೬೪,೯೦೦	೧೯೧೯	೫,೦೭,೩೦೦	೨,೨೫,೬೦,೪೦೦
೧೮೯೨	೨,೦೮,೮೦೦	೯೩,೩೨,೪೦೦	೧೯೨೦	೪,೯೯,೧೦೦	೨,೭೮,೨೯,೨೦೦
೧೮೯೩	೨,೬೩,೪೦೦	೧,೧೭,೭೨,೬೦೦	೧೯೨೧	೪,೩೨,೭೦೦	೩,೦೭,೫೪,೬೦೦
೧೮೯೪	೧,೮೧,೪೦೦	೧,೧೯,೨೭,೩೦೦	೧೯೨೨	೪,೩೮,೩೦೦	೨,೭೮,೬೧,೬೦೦
೧೮೯೫	೨,೨೨,೧೦೦	೧,೪೬,೦೪,೨೦೦	೧೯೨೩	೩,೮೩,೬೦೦	೨,೫೪,೩೩,೮೦೦
೧೮೯೬	೨,೮೦,೪೦೦	೧,೮೪,೩೫,೭೦೦	೧೯೨೪	೩,೯೬,೩೦೦	೨,೫೩,೯೬.೭೦೦
೧೮೯೭	೩,೯೦,೬೦೦	೨,೨೩,೦೮,೫೦೦	೧೯೨೫	೩,೯೩,೯೦೦	೨,೨೨,೫೫,೦೦೦
೧೮೯೮	೪,೧೮,೯೦೦	೨,೩೯,೭೮,೭೦೦	೧೯೨೬	೩,೮೪,೦೦೦	೨,೧೭,೫೨,೧೦೦
೧೮೯೯	೪,೫೬,೦೦೦	೨,೫೬,೯೫,೯೦೦	೧೯೨೭	೩,೮೪,೨೦೦	೨,೧೭,೯೫,೭೦೦
೧೯೦೦	೫,೧೩,೦೦೦	೨,೮೩,೬೮,೧೦೦	೧೯೨೮	೩,೭೨,೦೦೦	೨,೧೮,೪೦,೧೦೦
೧೯೦೧	೫,೩೨,೧೦೦	೨,೮೯,೬೦,೩೦೦	೧೯೨೯	೩,೬೩,೮೦೦	೨,೦೦,೬೧,೭೦೦
೧೯೦೨	೫,೩೭,೬೦೦	೨,೯೬,೩೦,೦೦೦	೧೯೩೦	೩,೨೯,೨೦೦	೧,೮೬,೮೦,೮೦೦
೧೯೦೩	೬,೦೧,೭೦೦	೩,೪೪,೭೮,೬೦೦	೧೯೩೧	೩,೩೦,೫೦೦	೨,೦೮,೦೦,೦೦೦
೧೯೦೪	೬,೧೮,೫೦೦	೩,೯೪,೭೯,೨೦೦	೧೯೩೨	೩,೨೯,೬೦೦	೨,೫೩,೪೭,೮೦೦
೧೯೦೫	೬,೩೧,೮೦೦	೩,೬೩,೬೮,೨೦೦	೧೯೩೩	೩,೩೬,೧೦೦	೨,೭೬,೩೬,೪೦೦
೧೯೦೬	೫,೭೯,೨೦೦	೩,೩೩,೨೧,೬೦೦	೧೯೩೪	೩,೨೧,೩೦೦	೨,೯೨,೯೭,೯೦೦
೧೯೦೭	೫,೫೪,೧೦೦	೩,೧೭,೮೨,೬೦೦	೧೯೩೫	೩,೨೬,೧೦೦	೩,೦೨,೮೬,೨೦೦
೧೯೦೮	೫,೫೯,೭೦೦	೩,೨೨,೦೪,೨೦೦	೧೯೩೬	೩,೩೧,೯೦೦	೩,೦೪,೯೮,೪೦೦
೧೯೦೯	೫,೭೪,೮೦೦	೩,೩೦,೭೩,೦೦೦	೧೯೩೭	೩,೩೦,೮೦೦	೩,೦೩,೯೫,೯೦೦

(*Continued*)

ವರ್ಷ	ಉತ್ಪನ್ನ (ಔನ್ಸ್‌ಗಳಲ್ಲಿ)	ಬೆಲೆ (ರೂ. ಗಳಲ್ಲಿ)	ವರ್ಷ	ಉತ್ಪನ್ನ (ಔನ್ಸ್‌ಗಳಲ್ಲಿ)	ಬೆಲೆ (ರೂ. ಗಳಲ್ಲಿ)
೧೯೩೮	೩,೨೬,೨೦೦	೩,೦೪,೭೫,೪೦೦	೧೯೫೦	೧,೯೬,೮೦೦	೫,೯೨,೧೨,೦೦೦
೧೯೩೯	೩,೧೫,೦೦೦	೩,೨೪,೩೪,೪೦೦	೧೯೫೧	೨,೨೬,೪೦೦	೬,೭೫,೩೦,೭೦೦
೧೯೪೦	೩,೦೦,೦೦೦	೩,೨೪,೬೧,೧೦೦	೧೯೫೨	೨,೫೩,೩೦೦	೬,೦೪,೩೧,೮೦೦
೧೯೪೧	೨,೮೦,೦೦೦	೩,೨೪,೮೦,೦೦೦	೧೯೫೩	೨,೨೩,೪೦೦	೫,೦೭,೩೪,೯೦೦
೧೯೪೨	೨,೬೦,೦೦೦	೩,೧೪,೬೦,೦೦೦	೧೯೫೪	೨,೩೯,೨೦೦	೫,೬೨,೦೬,೮೦೦
೧೯೪೩	೨,೫೫,೦೦೦	೪,೦೨,೯೦,೦೦೦	೧೯೫೫	೨,೧೦,೯೦೦	೫,೨೦,೧೪,೦೦೦
೧೯೪೪	೧,೮೮,೨೦೦	೩,೫೫,೦೧,೬೦೦	೧೯೫೬	೨,೦೯,೩೦೦	೫,೭೬,೭೩,೦೦೦
೧೯೪೫	೧,೬೮,೪೦೦	೩,೩೯,೬೫,೦೦೦	೧೯೫೭	೧,೭೯,೨೦೦	೫,೧೦,೬೯,೦೦೦
೧೯೪೬	೧,೩೧,೮೦೦	೩,೪೮,೯೦,೩೦೦	೧೯೫೮	೧,೭೦,೧೦೦	೪,೯೯,೮೮,೦೦೦
೧೯೪೭	೧,೭೧,೭೦೦	೪,೮೯,೫೪,೬೦೦	೧೯೫೯	೧,೬೫,೫೦೦	೫,೩೬,೦೪,೦೦೦
೧೯೪೮	೧,೮೦,೪೦೦	೫,೪೩,೨೦,೨೦೦	೧೯೬೦	೧,೬೦,೦೦೦	೫,೬೬,೭೪,೦೦೦
೧೯೪೯	೧,೬೪,೨೦೦	೪,೯೯,೦೦,೩೦೦	೧೯೬೧	೧,೫೫,೬೦೦	೫,೯೧,೦೩,೦೦೦


680
640
600
560
520
480
440
400
360
320
280
240
200
160
120
80
40
1884 1888 1892 1896 1900 1904 1908 1912 1916 1920 1924 1928 1932 1936 1940 1944 1948 1952 1956 1960 1964

ಅನುಬಂಧ ೩

ಇಂಡಿಯಾಕ್ಕೆ ಆಮದು ಮಾಡಿಕೊಂಡ ಚಿನ್ನ


ವರ್ಷ	ಮೊತ್ತ (ಸಾವಿರ ಔನ್ಸ್‌ಗಳಲ್ಲಿ)	ಬೆಲೆ (ಲಕ್ಷ ರೂ. ಗಳಲ್ಲಿ)	ವರ್ಷ	ಮೊತ್ತ (ಸಾವಿರ ಔನ್ಸ್‌ಗಳಲ್ಲಿ)	ಬೆಲೆ (ಲಕ್ಷ ರೂ. ಗಳಲ್ಲಿ)
೧೯೦೧–೦೫	—	೩,೧೧೦	೧೯೪೮–೪೯	೧	೩
೧೯೦೬–೧೦	—	೫,೮೭೦	೧೯೪೯–೫೦	೧	೨
೧೯೧೧–೧೫	—	೧೨,೧೭೦	೧೯೫೦–೫೧	೭	೨೧
೧೯೧೬–೨೦	—	೬,೭೦೦	೧೯೫೧–೫೨	೪೦	೧೧೬
೧೯೨೧–೨೫	—	೧೪,೩೫೦	೧೯೫೨–೫೩	೧	೨
೧೯೨೬–೩೦	—	೧೦,೭೭೦	೧೯೫೩–೫೪	೧	೨
೧೯೩೮–೩೯	೭೯	೭೩	೧೯೫೫	೩.೧೫	೮.೧
೧೯೪೫–೪೬	೧೧	೨೨	೧೯೫೬	೬.೬೬	೧೬.೭
೧೯೪೬–೪೭	೩೮೯	೯೪೬	೧೯೫೭	೨೯. ೭	೮೦
೧೯೪೭–೪೮	೩೫೦	೯೮೨	೧೯೫೮	೩೨.೨೮	೮೭

೧೯೫೮ರಿಂದ ಈಚೆಗೆ ವಿವರಗಳು ದೊರೆತಿಲ್ಲ

ಅನುಬಂಧ ೪

ಕೋಲಾರ ಚಿನ್ನದ ಗಣಿಗಳ ಉತ್ಪನ್ನ

ವರ್ಷ	ಹಿಟ್ಟು ಮಾಡಿದ ಅದಿರು (ಟನ್‌ಗಳಲ್ಲಿ)	ಚಿನ್ನದ ಉತ್ಪನ್ನ (ಔನ್ಸ್‌ಗಳಲ್ಲಿ)	ಅದಿರಿನಲ್ಲಿ ಚಿನ್ನದ ಪ್ರಮಾಣ(ಪೆನಿವೇಟುಗಳು-ಟನ್ನಿಗೆ)
೧೮೮೨-೧೯೫೨	೨೭೨,೬೫,೭೦೩	೧೬,೭೯,೮೦೫	—
೧-೪-೧೯೫೧— ೩೧-೧೨-೫೧	೪,೩೪,೧೧೦	೧,೪೫,೦೨೭	೧೨.೩೦
೧೯೫೨	೫,೮೪,೦೦೧	೨,೦೮,೯೪೮	೭.೦೭
೧೯೫೩	೫,೪೪,೧೫೯	೧,೯೧,೧೯೫	೬.೯೦
೧೯೫೪	೬,೨೯,೪೬೬	೨,೨೦,೩೧೩	೬.೯೬
೧೯೫೫	೫,೮೬,೭೮೭	೧,೯೩,೯೬೭	೬.೫೬
೧೯೫೬	೬,೦೨,೭೯೯	೧,೭೭,೭೧೫	೫.೮೬
೧-೧-೫೬–೨೮-೧೧-೫೬			
೨೯-೧೧-೫೬—	ಗಣಿಗಳ ರಾಷ್ಟ್ರೀಕರಣ		
೩೧-೩-೫೮	೮,೭೬,೯೧೨	೨,೧೭,೯೩೮	೫.೧೪
೧೯೫೮-೫೯	೬,೩೬,೧೮೧	೧,೫೦,೭೮೧	೪.೭೪
೧೯೫೯-೬೦	೬,೪೭,೩೬೯	೧,೫೩,೪೪೨	೪.೭೨
೧೯೬೦-೬೧	೫,೮೧,೮೦೧	೧,೩೯,೮೫೪	೪.೮೦
೧೯೬೧-೬೨	೬,೧೨,೫೩೪	೧,೩೯,೪೯೮	೪.೪೪
ಗಣಿಗಳಲ್ಲಿ ಕೆಲಸ ಅದಿರಿನಲ್ಲಿ	ಆರಂಭವಾದಂದಿನಿಂದ ಚಿನ್ನದ ಪ್ರಮಾಣ	ಮಾರ್ಚ್ ೧೯೬೨ರ ವರೆಗೆ	೮.೯೬
ಗಣಿಗಳು	**ಆರಂಭವಾದಂದಿನಿಂದ**	**ಇಂದಿನವರೆಗೆ :**	
ಉರಿಗಾಂ ಗಣಿಗಳು	೭೭,೯೧,೧೪೬	೪೦,೬೮,೭೯೩	—
ಬಾಲಘಾಟ್ ಗಣಿಗಳು	೧೩,೪೭,೫೭೮	೮,೬೫,೭೨೯	—
ಇತರ ಗಣಿಗಳು	—	೨,೦೦,೦೦೦	—


ಕೋಲಾರ ಚಿನ್ನದ ಗಣಿಗಳಲ್ಲಿ ಉತ್ಪನ್ನವಾದ ಚಿನ್ನದ ಮೊತ್ತ ಮತ್ತು ಮೌಲ್ಯ
ಮೊತ್ತ 1000 ಔನ್ಸ್‌ಗಳಲ್ಲಿ; ಮೌಲ್ಯ 100,000 ರೂ ಗಳಲ್ಲಿ
700
650
600
550
500
450
400
350
300
250
200
150
100
50
ಮೊತ್ತ
ಮೌಲ್ಯ
1884 1889 1894 1899 1904 1909 1914 1919 1924 1929 1934 1939 1944 1949 1954 1959
1961

ಅನುಬಂಧ ೫

ಪ್ರಪಂಚದ ಚಿನ್ನದ ಉತ್ಪನ್ನ (ಸಾವಿರ ಔನ್ಸ್‌ಗಳಲ್ಲಿ)

ದೇಶ	೧೯೫೦	೧೯೫೧	೧೯೫೨	೧೯೫೩	೧೯೫೪	೧೯೫೫	೧೯೫೬	೧೯೫೭	೧೯೫೮	೧೯೫೯	೧೯೬೦	೧೯೬೧
ಆಸ್ಟ್ರೇಲಿಯ	೮೫೮	೮೮೬	೯೮೦	೧,೦೭೫	೧,೧೧೮	೧,೦೪೯	೧,೦೩೦	೧,೦೮೪	೧,೧೦೦	೧,೦೯೦	೧,೧೦೦	೧,೧೦೦
ಕಾಂಗೋ	೩೩೯	೩೫೨	೩೬೯	೩೭೧	೩೬೫	೩೭೦	೩೭೪	೩೭೪	೩೫೬	೩೫೧	೩೦೦	೩
ಕೆನಡ	೪,೪೬೧	೪,೩೨೯	೪,೪[illegible]೨	೪,೦೫೬	೪,೩೬೬	೪,೫೪೨	೪,೩೮೪	೪,೪೩೪	೪,೫೭೧	೪,೪೮೪	೪,೬೦೦	೪,೪೦೦
ಕೊಲಂಬಿಯ	೩೭೯	೪೩೧	೪೨೨	೪೩೭	೩೭೭	೩೮೧	೪೩೮	೩೨೫	೩೭೨	೩೯೮	೪೦೦	೪೦೧
ಘಾನಾ	೬೫೯	೬೯೯	೯೯೧	೨೨೩	೨೮೭	೬೮೭	೬೩೯	೭೯೦	೮೦೩	೯೧೩	೯೦೦	೯೦೦
ಇಂಡಿಯ	೧೯೭	೨೨೬	೨೨೩	೨೨೮	೨೩೯	೨೧೧	೨೦೯	೧೭೯	೧೧೦	೧೬೫	೧೬೦	೧೫೫
ಜಪಾನ್	೧೩೫	೧೭೭	೨೦೧	೪೮೩	೨೯೩	೨೯೧	೨೯೧	೨೫೩	೨೬೧	೨೫೮	—	—
ಮೆಕ್ಸಿಕೊ	೪೦೮	೩೬೪	೪೫೯	೨೬೨	೩೮೭	೩೮೩	೩೫೦	೩೫೭	೩೩೨	೩೧೪	೩೦೦	೩೦೦
ನಿಕರಾಗುವಾ	೨೨೯	೨೫೧	೨೫೫	೭೩೧	೩೨೨	೨೩೭	೨೧೭	೨೦೪	೨೧೫	೨೧೮	೨೦೦	೨೦೦
ಫಿಲಿಪ್ಪೈನ್ಸ್	೩೩೪	೩೯೪	೪೫೯	೪೮೧	೪೧೬	೪೧೯	೪೦೬	೩೮೦	೪೨೩	೪೦೩	೪೦೦	೪೦೦
ದ.ರೊಡಿಷಿಯಾ	೫೧೧	೪೮೭	೪೯೭	೫೦೧	೫೩೬	೫೨೫	೫೩೬	೫೫೭	೫೫೫	೬೬೭	೬೦೦	೬೦೦
ದ.ಆಫ್ರಿಕಾ ಯೂನಿಯನ್	೧೧,೬೬೪	೧೧,೫೧೬	೧೧,೮೧೯	೧೧,೮೪೧	೧೩,೨೩೭	೧೪,೬೦೨	೧೬,೮೯೭	೧೩,೦೩೨	೧೭,೬೬೬	೨೦,೦೬೫	೨೧,೪೦೦	೨೨,೯೦೦
ಅಮೆರಿಕ ಸಂ.※ ಸಂಸ್ಥಾನ	೨,೨೮೯	೧,೮೯೫	೧,೯೨೨	೧,೯೭೦	೧,೮೭೭	೧,೮೫೯	೧,೮೬೫	೧,೮೦೦	೧,೭೫೯	೧,೬೦೪	೧,೭೦೦	೧,೫೦೦
ರಷ್ಯಾ †	೮,೦೦೦	೯,೫೦೦	೯,೫೦೦	೯,೦೦೦	೯,೦೦೦	೯,೦೦೦	೧೦,೦೦೦	೧೦,೦೦೦	೧೦,೦೦೦	೧೦,೦೦೦	೧೦,೦೦೦	೧೦,೦೦೦
ಒಟ್ಟು	೩೨,೭೦೦	೩೩,೦೦೦	೩೪,೩೦೦	೩೩,೭೦೦	೩೩,೭೨೦	೩೫,೦೦೦	೩೬,೩೦೦	೩೮,೪೦೦	೪೦,೬೦೦	೪೦,೮೦೦	೪೩,೭೦೦	೪೪,೭೦೦

※ ಅಲಾಸ್ಕ ಸಹ ಸೇರಿ

† ನಿಖರವಾದ ಅಂಕಿಗಳು ತಿಳಿದಿಲ್ಲ

ನಮ್ಮ ಆರ್ಥಿಕ ಯೋಜನಾಯಂತ್ರ

ನಿರ್ದಿಷ್ಟ ಗುರಿಗಳನ್ನು ನಿಯಮಿತ ಕಾಲಾವಧಿಯಲ್ಲಿ ವಿವೇಚನಾಯುತ ರೀತಿನೀತಿಗಳ ಮೂಲಕ ಸಾಧಿಸುವುದೇ ಯೋಜನಾಮಾರ್ಗ. ನಮ್ಮ ದೇಶದ ಆರ್ಥಿಕ ಹಾಗೂ ಸಾಮಾಜಿಕ ಪ್ರಗತಿ ಸಾಧಿಸಲು ನಾವು ೧೯೫೧ರಿಂದ ಯೋಜನಾ ಮಾರ್ಗ ಹಿಡಿದಿದ್ದೇವೆ. ನಿರ್ದಿಷ್ಟ ಗುರಿಗಳನ್ನೂ ಹಾಗೂ ಅವುಗಳನ್ನು ಮುಟ್ಟಲು ಬೇಕಾಗುವ ಸಾಧನಗಳ ಮತ್ತು ರೀತಿನೀತಿಗಳ ವಿವರಗಳನ್ನು ಒಳಗೊಂಡ ಯೋಜನೆಗಳನ್ನು ರಚಿಸುವುದು ಮತ್ತು ಯೋಜನೆಗಳ ಫಲಾಫಲ ಸಮೀಕ್ಷೆ ನಡೆಸುವುದು ಇವು ಆರ್ಥಿಕ ಯೋಜನೆಯ ಮುಖ್ಯ ಕಾರ್ಯಭಾಗಗಳಾಗಿವೆ.[1] ಈ ಕಾರ್ಯಗಳನ್ನು ನಡೆಯಿಸಲು ಬೇಕಾಗುವ ಅಂಗ, ಉಪ ಅಂಗಸಂಸ್ಥೆಗಳಿಂದ ಕೂಡಿದ ವ್ಯವಸ್ಥೆಯೇ 'ಆರ್ಥಿಕ ಯೋಜನಾಯಂತ್ರ'ವಾಗಿದೆ. ನಮ್ಮ ದೇಶದಲ್ಲಿ ರೂಪುಗೊಳ್ಳುತ್ತಿರುವ ಆರ್ಥಿಕ ಯೋಜನಾಯಂತ್ರದ ರೂಪುರೇಷೆಗಳನ್ನು ಸ್ಥೂಲವಾಗಿ ವಿವರಿಸುವುದೇ ಈ ಲೇಖನದ ಉದ್ದೇಶ.

ರಾಜಕೀಯ ಹಾಗೂ ಆರ್ಥಿಕ ಲಕ್ಷಣಗಳು ಮತ್ತು ಯೋಜನಾಯಂತ್ರ : ಯೋಜನಾಯಂತ್ರದ ಸ್ವರೂಪ ಹಾಗೂ ಕಾರ್ಯಾಚರಣೆಗಳು ದೇಶದ ರಾಜಕೀಯ ಮತ್ತು ಆರ್ಥಿಕ ಸಾಮಾನ್ಯ ಲಕ್ಷಣಗಳನ್ನು ಅವಲಂಬಿಸಿವೆ. ಇವುಗಳಲ್ಲಿ ನಾಲ್ಕು ಮುಖ್ಯ ಲಕ್ಷಣಗಳು ಗಮನಾರ್ಹವಾಗಿವೆ. ಮೊದಲನೆಯದಾಗಿ, ನಮ್ಮದು ಪ್ರಜಾಪ್ರಭುತ್ವ ರಾಷ್ಟ್ರ. ಆರ್ಥಿಕ ಯೋಜನೆಯು ಹೆಚ್ಚು ತೀವ್ರಸ್ವರೂಪ ತಾಳಿದರೆ ಸಾಧಾರಣವಾಗಿ ಸರ್ವಾಧಿಕಾರ ಪ್ರಭುತ್ವದ (Dictatorship) ಸಂಭವ ಅಥವಾ ಭಯವಿರುತ್ತದೆ. ಈ ಅನಪೇಕ್ಷಿತ ಪರಿಣಾಮವನ್ನು ತಡೆಗಟ್ಟಬೇಕು. ಆರ್ಥಿಕ ಯೋಜನೆಯು ನಮ್ಮ ಪ್ರಜಾಪ್ರಭುತ್ವದ ಮೂಲಭೂತ ಮೌಲ್ಯಗಳನ್ನು ಅಳಿಸದಂತೆಯೂ ಹಾಗೂ ಪ್ರಜಾಪ್ರಭುತ್ವವನ್ನು ಚೆನ್ನಾಗಿ ಪೋಷಿಸುವಂತೆಯೂ ಇರುವಂತೆ ನೋಡಿಕೊಳ್ಳಬೇಕು. ರಚಿಸಲಾಗುವ ಯೋಜನಾಂಗಗಳು ಈ ರಾಜಕೀಯ ಧ್ಯೇಯಕ್ಕೆ ಅನುಗುಣವಾಗಿರಬೇಕು.

ಎರಡನೆಯದಾಗಿ, ನಮ್ಮದು 'ಫೆಡರಲ್' ರಾಜ್ಯಾಂಗ. ಅಧಿಕಾರ, ಕರ್ತವ್ಯ ಹಾಗೂ ಜವಾಬ್ದಾರಿ, ಹಣಬಲ ಇವುಗಳನ್ನು ಕೇಂದ್ರ ಹಾಗೂ ಸಂಸ್ಥಾನಗಳು ರಾಜ್ಯಾಂಗ ಪ್ರಕಾರ ಹಾಗೂ ಕಾರ್ಯತಃ ಹಂಚಿಕೊಂಡು ಆಡಳಿತ ನಿರ್ವಹಿಸುತ್ತಿವೆ. ಯೋಜನೆಗಳನ್ನು ತಯಾರಿಸುವುದರಲ್ಲಿಯೂ ಸಂಸ್ಥಾನಗಳು ಹಾಗೂ

---

1. ಇತರ ಕಾರ್ಯಭಾಗಗಳು ಎರಡು : (೧) ಯೋಜನೆಗಳನ್ನು ವಿಧಿವತ್ತಾಗಿ ಕೈಕೊಳ್ಳುವುದು ; ಇದು ಶಾಸಕಾಂಗಕ್ಕೆ (Legislature) ಸೇರಿದ ಕೆಲಸ. (೨) ಯೋಜನೆಗಳನ್ನು ಜಾರಿಗೆ ತಂದು ಕಾರ್ಯಗತ ಮಾಡುವುದು ; ಇದು ಕಾರ್ಯಾಂಗಕ್ಕೆ (Executive) ಸೇರಿದುದು.

ಕೇಂದ್ರ ಸರ್ಕಾರಗಳಲ್ಲಿ ಅನೇಕ ಬಾಬುಗಳ ಬಗ್ಗೆ ಒಂದು ರೀತಿಯ ಹಂಚಿಕೆ ಏರ್ಪಟ್ಟಿದೆ. ಈ ಎಲ್ಲ ಹಂಚಿಕೆಗಳಲ್ಲಿ ಪರಸ್ಪರ ಹೊಂದಾಣಿಕೆ ಮತ್ತು ಸ್ಪಷ್ಟ ಮತವಿರಬೇಕಾದುದು ಅವಶ್ಯಕ. ಕಾರ್ಯತಃ ಇಂತಹ ಹಂಚಿಕೆಗಳಲ್ಲಿ ಅನೇಕ ಸಮಸ್ಯೆಗಳು ಉದ್ಭವಿಸುವುವು. ಏಕೆಂದರೆ, ಸಂಸ್ಥಾನಗಳು ತಮ್ಮದೇ ಆದ ಪ್ರಾದೇಶಿಕ ದೃಷ್ಟಿಯಿಂದ ತಯಾರಿಸಿದ ಪ್ರಾಜೆಕ್ಟುಗಳಿಗೆ ಆದ್ಯತೆ ಕೇಳುವ ಪ್ರವೃತ್ತಿ ಯನ್ನು ಹೊಂದಿರುವುದಾದರೆ ಕೇಂದ್ರವು ಏಕರೂಪತೆ ಅಥವಾ ಉನ್ನತ ದಕ್ಷತೆ ಹೆಸರಿನಲ್ಲಿ ಅತಿಯಾಗಿ ಪ್ರವೇಶಿಸುವ ಪ್ರವೃತ್ತಿಯನ್ನು ಹೊಂದಿರುವುದು. ಇಂತಹ ಪರಿಸ್ಥಿತಿಯನ್ನು ಪರಸ್ಪರ ಚರ್ಚೆಗಳ ಮೂಲಕ ಇತ್ಯರ್ಥಗೊಳಿಸಲು ನಮ್ಮ ಯೋಜನಾಯಂತ್ರದಲ್ಲಿಯೂ ಸೂಕ್ತ ವ್ಯವಸ್ಥೆಯಿರಬೇಕು.

ಮೂರನೆಯದಾಗಿ, ನಮ್ಮದು ಸಾರ್ವಜನಿಕ ವಲಯ ಹಾಗೂ ಖಾಸಗಿ ವಲಯಗಳೆರಡೂ ಇರುವ ಮಿಶ್ರ ಆರ್ಥಿಕತೆ (Mixed Economy) ಆಗಿದೆ. ಖಾಸಗಿ ವಲಯಕ್ಕೆ ಅನ್ವಯಿಸುವ ಯೋಜನೆಗಳನ್ನು ರೂಪಿಸುವುದರಲ್ಲಿಯೂ ಖಾಸಗಿ ವಲಯದ ಸಹಕಾರ ಪಡೆಯುವುದರಲ್ಲಿಯೂ ಈ ವಲಯದ ಪ್ರತಿನಿಧಿಗಳಿಗೆ ಯೋಜನಾಯಂತ್ರದಲ್ಲಿ ಸಾಕಷ್ಟು ಪ್ರಾತಿನಿಧ್ಯ ಮತ್ತು ಪ್ರಾಮುಖ್ಯತೆ ನೀಡಬೇಕಾ ದುದು ಆವಶ್ಯಕ. ಹೀಗೆ ಯೋಜನಾಯಂತ್ರವು ಮಿಶ್ರ ಆರ್ಥಿಕತೆಯ ವಿಶೇಷ ಆವಶ್ಯಕತೆಗಳನ್ನು ಪೂರೈಸುವಂತಹುದಾಗಿರಬೇಕು.

ನಾಲ್ಕನೆಯದಾಗಿ, ನಮ್ಮ ದೇಶ ಆರ್ಥಿಕವಾಗಿ ಹಿಂದುಳಿದ ದೇಶ. ತೀವ್ರ ಗತಿಯಲ್ಲಿ ಆರ್ಥಿಕಾಭಿವೃದ್ಧಿ ಸಾಧಿಸುವ ಕಾರ್ಯ ಮಹತ್ತರವಾದುದು. ನಮ್ಮ ಅಭಿವೃದ್ಧಿಯೋಜನೆಗೆ ಮಹಾವ್ಯವಸ್ಥೆಯೇ ಬೇಕು. ಆದರೆ, ಮಹತ್ತರವಾದ ಹಾಗೂ ಸಂಪೂರ್ಣವಾದ ಯೋಜನಾಯಂತ್ರ ರಚನೆಗೆ ಸಾಕಷ್ಟು ನುರಿತ ಸಿಬ್ಬಂದಿ ಹಾಗೂ ಜನಬಲ ನಮ್ಮಲ್ಲಿ ಇರುವುದಿಲ್ಲ. ಯೋಜನಾಕ್ರಮಗಳಲ್ಲಿ ನುರಿತ ಸಿಬ್ಬಂದಿಯು ಕಾಲಕ್ರಮೇಣವಾಗಿ ತಯಾರಾಗಬೇಕಾಗಿದೆ. ಇಂತಹ ಸಂದರ್ಭದಲ್ಲಿ ಸ್ಥಾಪನೆಯಾಗುವ ಯೋಜನಾಯಂತ್ರವು ಒಂದು ರೀತಿಯಲ್ಲಿ ಅಪರಿಪೂರ್ಣವಾಗಿದ್ದು ಪರಿಪೂರ್ಣತೆಯತ್ತ ಬೆಳೆಯಬೇಕಾಗಿದೆ. ದಕ್ಷತೆಯಿಂದ ಕರ್ತವ್ಯ ನಿರ್ವಹಿಸಬಲ್ಲ ಇಂತಹ ಯೋಜನಾಯಂತ್ರವನ್ನು ಆದಷ್ಟು ಶೀಘ್ರವಾಗಿ ರೂಪಿಸುವುದೂ ಸಹ ಯೋಜನೆಯ ಭಾಗವಾಗಬೇಕು.

ಹೀಗೆ ಪ್ರಜಾಪ್ರಭುತ್ವ, 'ಫೆಡರಲ್' ರಾಜ್ಯಾಂಗ, ಮಿಶ್ರ ಆರ್ಥಿಕತೆ ಮತ್ತು ಆರ್ಥಿಕ ಅನಭಿವೃದ್ಧಿ—ಈ ನಾಲ್ಕು ಮುಖ್ಯ ಸಾಮಾನ್ಯ ಲಕ್ಷಣಗಳಿಗೆ ಅನುಗುಣ ವಾಗಿ ನಮ್ಮ ಆರ್ಥಿಕ ಯೋಜನಾಯಂತ್ರವು ವ್ಯವಸ್ಥಿತವಾಗಬೇಕು. ಈ ನಿಟ್ಟಿ ನಲ್ಲಿಯೇ ನಮ್ಮ ಯೋಜನಾಯಂತ್ರವು ರೂಪುಗೊಳ್ಳುತ್ತಿರುವುದು ಕೆಳಗಣ ವಿವರಣೆಯಿಂದ ವ್ಯಕ್ತವಾಗುವುದು.

ಯೋಜನಾ ನಿಯೋಗ (Planning Commission)**:** ನಮ್ಮ ರಾಜ್ಯಾಂಗವು

ಘೋಷಿಸಿರುವ ಸರ್ಕಾರಿ ನೀತಿ ನಿರ್ದೇಶಕ ತತ್ವಗಳು (Directive Principles of State Policy) ದೇಶದ ಆರ್ಥಿಕ ಅಭಿವೃದ್ಧಿ ಹಾಗೂ ಯೋಗಕ್ಷೇಮಗಳ ಬಗ್ಗೆ ಸರ್ಕಾರದ ಮೇಲೆ ವಿಶೇಷ ಜವಾಬ್ದಾರಿಯನ್ನು ಹಾಕಿವೆ. ಈ ಜವಾಬ್ದಾರಿ ನಿರ್ವಹಣೆಯ ಅನುಸಾರವಾಗಿಯೇ ಇಂಡಿಯ ಸರ್ಕಾರವು ಮಾರ್ಚಿ ೧೯೫೦ರಲ್ಲಿ ಯೋಜನಾ ನಿಯೋಗವನ್ನು ಸ್ಥಾಪಿಸಿತು. ಈ ಮುಖ್ಯವಾದ ಸಂಸ್ಥೆಯನ್ನು ವಿಶೇಷ ಶಾಸನದ ಆಧಾರದ ಮೇಲೆ ಸ್ಥಾಪಿಸದೆ ಇಂಡಿಯ ಸರ್ಕಾರದ ಮಸೂದೆಯೊಂದರ (Resolution) ಆಧಾರದ ಮೇಲೆ ಸ್ಥಾಪಿಸಲಾಗಿದೆ. ಇದಕ್ಕೆ ಸಲ್ಲತಕ್ಕ ಶಾಸನ ಬದ್ಧವಾದ ಸ್ಥಾನಮಾನಗಳನ್ನು (Constitutional Status) ನೀಡುವ ಪ್ರಶ್ನೆ ಆಲೋಚನಾರ್ಹವಾಗಿದೆ.

ನಿಯೋಗದಲ್ಲಿ ಇರಬೇಕಾದವರ ಸಂಖ್ಯೆಯ ಬಗ್ಗೆ ಮಿತಿ ಸೂಚಿತವಾಗಿಲ್ಲ ದಿದ್ದರೂ ಮಿತವಾದ ಸಂಖ್ಯೆಯನ್ನೇ ಈವರೆವಿಗೆ ಇಟ್ಟುಕೊಳ್ಳಲಾಗಿದೆ. ಪ್ರಥಮ ಯೋಜನೆಯಲ್ಲಿ ಏಳು, ದ್ವಿತೀಯ ಹಾಗೂ ತೃತೀಯ ಯೋಜನೆ ನಿರ್ಮಾಣ ಕಾಲದಲ್ಲಿ ಒಂಬತ್ತು ಸದಸ್ಯರಿದ್ದು ಈಗ ಹನ್ನೊಂದು ಮಂದಿ ಸದಸ್ಯರಿರುತ್ತಾರೆ. (ಇವರುಗಳ ಹೆಸರುಗಳನ್ನು ಅನುಬಂಧದಲ್ಲಿ ಕೊಡಲಾಗಿದೆ). ಇವರಲ್ಲಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷರೂ ಸೇರಿರುತ್ತಾರೆ. ಮೊದಲಿನಿಂದಲೂ ಅಧ್ಯಕ್ಷರಾಗಿರುವ ಪ್ರಧಾನ ಮಂತ್ರಿ ಶ್ರೀ ಜವಹರ್‌ಲಾಲ್ ನೆಹ್ರೂ ಅವರಲ್ಲದೆ ಇಬ್ಬರು, ಮೂವರು ಹಿರಿಯ ಕೇಂದ್ರ ಸಚಿವರುಗಳೂ ನಿಯೋಗದ ಸದಸ್ಯರಾಗಿರುತ್ತಾರೆ. ಉಳಿದ ಸದಸ್ಯರು ನಿಪುಣರೂ, ನಿಷ್ಪಕ್ಷಪಾತಿಗಳೂ ಆದ ಗಣ್ಯವ್ಯಕ್ತಿಗಳಾಗಿರುತ್ತಾರೆ. ನಿಯೋಗದ ವಿವಿಧ ಕಾರ್ಯಭಾಗಗಳನ್ನು ಸದಸ್ಯರುಗಳೊಳಗೆ ಸೂಕ್ತವಾಗಿ ಹಂಚ ಲಾಗಿರುತ್ತದೆ (ಅನುಬಂಧ ೨ರಲ್ಲಿ ಇಂದಿನ ಹಂಚಿಕೆಯನ್ನು ತೋರಿಸಲಾಗಿದೆ). ಕೇಂದ್ರ ಸಚಿವ ಸಂಪುಟದ ಕಾರ್ಯದರ್ಶಿಯೇ ನಿಯೋಗದ ಕಾರ್ಯದರ್ಶಿಯೂ ಆಗಿರುತ್ತಾರೆ. ಜೊತೆಗೆ ಇನ್ನೊಬ್ಬರು ಉಪಕಾರ್ಯದರ್ಶಿಯೂ ಮತ್ತು ಸಹ ಕಾರ್ಯದರ್ಶಿಗಳ ಅಂತಸ್ತು ಹೊಂದಿರುವ ಮೂರು ಜನ ಸಲಹಾಗಾರರು (Advisers) ಇರುವರು.

ಪ್ರಧಾನಮಂತ್ರಿ ಹಾಗೂ ಹಿರಿಯ ಕೇಂದ್ರ ಸಚಿವರಿರುವ ನಿಯೋಗವು ನಿಷ್ಪಕ್ಷಪಾತವಾಗಿಯೂ, ಸ್ವಾತಂತ್ರ್ಯತೆಯಿಂದಲೂ ಹಾಗೂ ವಾಸ್ತವತೆಯಿಂದಲೂ ಅದರ ಕಾರ್ಯಾಚರಣೆಗಳನ್ನು ನಡೆಸಬಲ್ಲದೇ ಎಂಬ ಶಂಕೆ ಉದ್ಭವಿಸುವುದು ಸಹಜ. ಪ್ರಧಾನಿಯವರು ಹಾಗೂ ಸಚಿವ ಸದಸ್ಯರುಗಳು ಪ್ರಬಲ ರಾಜಕೀಯ ಪಕ್ಷಕ್ಕೆ ಸೇರಿರುವವರು ; ಪ್ರಭಾವಶಾಲಿಗಳು ; ಪಕ್ಷದ ಹಾಗೂ ಸರ್ಕಾರದ ನೀತಿ ಗಳನ್ನು ಸಮರ್ಥಿಸುವಂತಹ ಯೋಜನೆಗಳನ್ನು ಇವರು ಮುಂದಿಡುವುದು ಸ್ವಾಭಾ ವಿಕವೇ ಆಗಿದೆ. ಆದರೆ ಪ್ರತಿಭಾವಂತರೂ, ತಜ್ಞರೂ ಆಗಿರುವ ಇತರ ಸದಸ್ಯರುಗಳು ಸಚಿವ ಸದಸ್ಯರುಗಳು ಹೇಳಿದುದಕ್ಕೆ 'ಅಸ್ತು' ಎಂದು ಮಾತ್ರ ಹೇಳುವವರಾಗಿ

ದ್ದಾರೆಂದು ತಿಳಿಯುವುದು ತಪ್ಪು. ಅಲ್ಲದೆ ನಿಯೋಗವು ಅನೇಕ ನಿಪುಣರ ಸಮಿತಿ ಉಪಸಮಿತಿಗಳ ವರದಿಗಳ ಆಧಾರದ ಮೇಲೆ ನಿರ್ಧಾರ ಕೈಕೊಳ್ಳುವವರಾಗಿದ್ದಾರೆ. ಆದುದರಿಂದ ನಿಯೋಗವು ಸಚಿವ ಸಂಪುಟದ ಪ್ರತಿಬಿಂಬವೆಂದು ಹೇಳಲಾಗದು. ಸರ್ಕಾರದ ಪ್ರಸಕ್ತ ರೀತಿನೀತಿಗಳನ್ನೂ, ಬದಲಾಯಿಸುತ್ತಿರುವ ಆರ್ಥಿಕ ಸ್ಥಿತಿಗತಿಗಳನ್ನೂ ಹಾಗೂ ರಾಷ್ಟ್ರವು ಒಪ್ಪಿರುವ ಆರ್ಥಿಕ—ಸಾಮಾಜಿಕ ಧ್ಯೇಯಗಳನ್ನೂ ಗಮನಿಸಿ ಸೂಕ್ತವಾದ ರಾಷ್ಟ್ರೀಯ ಯೋಜನೆಗಳನ್ನು ರೂಪಿಸುವ ಸಾಮರ್ಥ್ಯ ಹೊಂದಿರುವ ಯೋಜನಾ ನಿಯೋಗವು ಸರ್ಕಾರದ ಮತ್ತು ಸಾರ್ವಜನಿಕರ ಮನ್ನಣೆಗೆ ಪಾತ್ರವಾಗಿದೆ ಎಂದು ಹೇಳಬಹುದು.

ಯೋಜನಾ ನಿಯೋಗದ ನಿರ್ಧಾರಗಳು ಸಚಿವಸಂಪುಟಕ್ಕೆ (Cabinet) ನಿಯೋಗವು ಮಾಡುವ ಶಿಫಾರಸುಗಳಾಗಿರುವುವೇ ಹೊರತು ವಿಧಾಯಕವಾಗಿಲ್ಲ. ಹಾಗೂ ಯೋಜನಾ ನಿಯೋಗಕ್ಕೆ ಕಾರ್ಯಕಾರಿ (Executive) ಹೊಣೆಯೂ ಇರುವುದಿಲ್ಲ. ಅದರ ಕಾರ್ಯವ್ಯಾಪ್ತಿಗೆ ಅನೇಕ ಬಾಬುಗಳು ಸೇರಿವೆ. ಆರ್ಥಿಕ ಸಾಧನ–ಸಂಪತ್ತುಗಳ ಅಂದಾಜುಮಾಡುವುದು ಹಾಗೂ ಅಭಿವೃದ್ಧಿಗೆ ಬೇಕಾಗ ಬಹುದಾದ ಇನ್ನೂ ಹೆಚ್ಚಿನ ಸಾಧನಗಳನ್ನು ಶೇಖರಿಸುವ ಮಾರ್ಗಗಳನ್ನು ಹುಡುಕುವುದು; ಇವುಗಳನ್ನು ಪರಿಣಾಮಕಾರಿಯಾಗಿ ಉಪಯೋಗಿಸುವಂತಹ ಯೋಜನೆಗಳನ್ನು ತಯಾರಿಸುವುದು; ವಿವಿಧ ಕ್ಷೇತ್ರಗಳ ಹಾಗೂ ಆರ್ಥಿಕ ಚಟುವಟಿಕೆಗಳ ಬಗ್ಗೆ ನಿರ್ದಿಷ್ಟ ಗುರಿಗಳನ್ನು ಗೊತ್ತುಮಾಡುವುದು; ವಿರಳ ಸಾಧನಗಳ ಬಳಕೆಯಲ್ಲಿ ಇರಬೇಕಾದ ಸರತಿಯನ್ನು (Priorities) ನಿಶ್ಚಯಿಸುವುದು; ಪ್ರಾಜೆಕ್ಟುಗಳ ಸಾಗಣೆಯ ಗತಿಯನ್ನು ಗೊತ್ತುಮಾಡಿ (Phasing the Projects) ವಿವಿಧ ಹಂತಗಳಿಗೆ ಬೇಕಾಗುವ ಸಾಧನಗಳನ್ನು ಹಂಚುವುದು; ಯೋಜನೆಯ ಸಾಗಣೆಗೆ ಇರುವ ಅಡ್ಡಿ ಆತಂಕಗಳ ಅಧ್ಯಯನ ನಡೆಯಿಸಿ ಇವುಗಳನ್ನು ಹೋಗಲಾಡಿಸಲು ಆವಶ್ಯಕ ಕ್ರಮಗಳನ್ನು ಸೂಚಿಸುವುದು; ಯೋಜನಾಕ್ರಮಗಳನ್ನು ಕಾರ್ಯಗತಮಾಡಲು ಬೇಕಾದ ಉಪಕರಣಗಳನ್ನೂ, ವ್ಯವಸ್ಥೆಯನ್ನೂ ಸೂಚಿಸುವುದು; ಯೋಜನೆಯ ಫಲಾಫಲಗಳ ಬಗ್ಗೆ ಆಗಿಂದಾಗ್ಗೆ ಸಮೀಕ್ಷೆ ಹಾಗೂ ಪರಿಶೀಲನೆಗಳನ್ನು ನಡೆಯಿಸಿ ಯೋಜನೆಯ ಗುರಿಗಳಲ್ಲಾಗಲಿ, ರೀತಿನೀತಿಗಳಲ್ಲಾಗಲಿ ಬೇಕೆಂದು ತೋರುವ ಮಾರ್ಪಾಡುಗಳನ್ನು ಸಲಹೆ ಮಾಡುವುದು; ಕೇಂದ್ರ ಅಥವಾ ಸಂಸ್ಥಾನ ಸರ್ಕಾರಗಳು ಕೇಳಿಕೊಳ್ಳುವ ವಿಷಯಗಳ ಬಗ್ಗೆ ಅಭಿಪ್ರಾಯ ಹಾಗೂ ಶಿಫಾರಸುಗಳನ್ನು ಮುಂಡಿಸುವುದು; ಒಟ್ಟಿನಲ್ಲಿ, ಯೋಜನೆಯ ನಿರ್ಮಾಣ, ಯೋಜನಾಪ್ರಗತಿಯ ಸಮೀಕ್ಷೆ ಹಾಗೂ ಯೋಜನೆಯ ಪುನರ್ವಿಮರ್ಶೆ—ಇವುಗಳಿಗೆಲ್ಲಕ್ಕೂ ಸಂಬಂಧಿಸಿದ ಕಾರ್ಯಾಚರಣೆಗಳು ಯೋಜನಾ ನಿಯೋಗದ ಕರ್ತವ್ಯಗಳಾಗಿವೆ.

ನಿಯೋಗದ ಕಛೇರಿ: ಉನ್ನತ ಅಧ್ಯಯನ, ಪರಿಶೀಲನೆ ಹಾಗೂ

ಸಮನ್ವಯ ಸಂಸ್ಥೆಯಾದ ಯೋಜನಾ ನಿಯೋಗದ ಕಛೇರಿಯ ಕಾರ್ಯಾಚರಣೆಗಳಿಗೆ ತಕ್ಕಹಾಗೆ ವಿಭಾಗ, ಶಾಖೆ, ಉಪಶಾಖೆಗಳು ವ್ಯವಸ್ಥಿತವಾಗಿವೆ. ಯೋಜನಾ ನಿಯೋಗದ ಕಛೇರಿಯಲ್ಲಿ ಎರಡು ಬಗೆಯ ವಿಭಾಗಗಳಿವೆ: (೧) ತಾಂತ್ರಿಕ (Technical) ವಿಭಾಗ, (೨) ಸಾಮಾನ್ಯ (General) ವಿಭಾಗ. ತಾಂತ್ರಿಕ ವಿಭಾಗಗಳಲ್ಲಿ ಸಾಮಾನ್ಯ ಶಾಖೆಗಳು, ವಿಷಯ ಶಾಖೆಯುಗಳು ಎಂಬ ಎರಡು ಬಗೆ.

ಸಾಮಾನ್ಯ ಶಾಖೆಗಳು ಇವು: (೧) ಯೋಜನಾ ಸಮನ್ವಯ (Co-ordination), (೨) ಕಾರ್ಯಕ್ರಮ ಆಡಳಿತ (Programme Administration), (೩) ಆರ್ಥಿಕ ಅಂಕಿ ಅಂಶಗಳು ಹಾಗೂ ಸರ್ವೆಗಳು (Surveys), (೪) ದೂರದರ್ಶಿ ಯೋಜನೆ (Perspective Planning), (೫) ಸಾಧನ-ಸಂಪತ್ತುಗಳು ಹಾಗೂ ವೈಜ್ಞಾನಿಕ ಶೋಧನೆ, (೬) ಶ್ರಮ (Labour) ಹಾಗೂ ಉದ್ಯೋಗ, (೭) ಅಂತರ ರಾಷ್ಟ್ರೀಯ ವ್ಯಾಪಾರ ಹಾಗೂ ಅಭಿವೃದ್ಧಿ, (೮) ಸಾರ್ವಜನಿಕ ಸಹಕಾರ, (೯) ಸಮಾಚಾರ ಹಾಗೂ ಪ್ರಕಾಶನ (Publicity), (೧೦) ವಿಶೇಷ ಪ್ರದೇಶಗಳ ಶಾಖೆ (Division for Special Areas).

ವಿಷಯ ಶಾಖೆಗಳು ಇವು: (೧) ವ್ಯವಸಾಯ ಹಾಗೂ ಸಹಕಾರ, (೨) ಸ್ಥಳೀಯ ಕಾಮಗಾರಿಗಳು (Local Works), (೩) ನೀರಾವರಿ ಹಾಗೂ ವಿದ್ಯುಚ್ಛಕ್ತಿ, (೪) ತೈಲ ಹಾಗೂ ಖನಿಜಗಳು, (೫) ಗ್ರಾಮೀಣ ಹಾಗೂ ಚಿಕ್ಕ ಕೈಗಾರಿಕೆಗಳು, (೬) ದೊಡ್ಡಪ್ರಮಾಣದ ಕೈಗಾರಿಕೆಗಳು, (೭) ಯಾನವಾಹನ ಹಾಗೂ ಸಂಪರ್ಕ, (೮) ವಿದ್ಯಾಭ್ಯಾಸ, (೯) ಆರೋಗ್ಯ, (೧೦) ಗೃಹನಿರ್ಮಾಣ ಹಾಗೂ ಸಾಮಾಜಿಕ ಯೋಗಕ್ಷೇಮ.

ಸಾಮಾನ್ಯ ವಿಭಾಗದಲ್ಲಿ ಆಡಳಿತ ಶಾಖೆ ಮತ್ತು ಸಮನ್ವಯ, ವ್ಯವಸ್ಥೆ ಹಾಗೂ ಕ್ರಮಗಳು (Methods) ಎಂಬ ಎರಡು ಶಾಖೆಗಳು ಇವೆ.

ಮೇಲೆ ಹೇಳಿರುವುದರಲ್ಲಿ ಕೆಲವು ಶಾಖೆಗಳು ದೊಡ್ಡವು; ಕೆಲವು ಚಿಕ್ಕವು. ದೊಡ್ಡ ಶಾಖೆಯನ್ನು 'ಡಿವಿಶನ್' (Division) ಎಂದೂ, ಚಿಕ್ಕದನ್ನು 'ಸೆಕ್ಷನ್' (Section) ಎಂದೂ ಕರೆಯಲಾಗಿದೆ. ಡಿವಿಶನ್ನಿನ ಮುಖ್ಯಾಧಿಕಾರಿ 'ಚೀಫ್' (Chief); ಸೆಕ್ಷನ್ನಿನ ಮುಖ್ಯಾಧಿಕಾರಿ 'ಡೈರೆಕ್ಟರು' (Director). ಕೆಲವು ಶಾಖೆಗಳ ಒಂದೊಂದು ಗುಂಪೂ ಒಬ್ಬ ಸಹ-ಕಾಯದರ್ಶಿಯ ಅಥವಾ 'ಅಡ್ವೈಸರ್' (Adviser) ದರ್ಜೆಯ ಅಧಿಕಾರಿಯ ಕೈಕೆಳಗೆ ಇರುತ್ತವೆ.

ಮೇಲೆ ಹೇಳಿರುವ ವಿವಿಧ ಶಾಖೆಗಳಲ್ಲಿ ಅನೇಕ ತಜ್ಞರು ಕಾರ್ಯಮಗ್ನರಾಗಿರುತ್ತಾರೆ. ಅರ್ಥಶಾಸ್ತ್ರ, ಅಂಕಿ ಅಂಶಶಾಸ್ತ್ರ, ಶಿಲ್ಪಶಾಸ್ತ್ರ, ಭೌತವಿಜ್ಞಾನಗಳು, ವಿದ್ಯಾಭ್ಯಾಸ, ವೈದ್ಯಕೀಯ, ಆಡಳಿತ—ಈ ಎಲ್ಲಾ ಜ್ಞಾನ ವಿಭಾಗಗಳ ಪಂಡಿತರೂ ನಿಯೋಗದ ಉನ್ನತ ಅಧಿಕಾರವರ್ಗದಲ್ಲಿ ಸೇರಿರುತ್ತಾರೆ. ಇಂತಹವರ ಸಂಖ್ಯೆ ೧೯೬೧ನೆಯ ಅಕ್ಟೋಬರಲ್ಲಿ ಸುಮಾರು ೧೪೦ ಎಂದು ತಿಳಿದಿದೆ. ಯೋಜ

ನೆಯ ಕಾರ್ಯವಿಸ್ತಾರ ಗಮನಿಸಿದರೆ ಈ ಜನಬಲ ಕಡಮೆಯೆಂದೇ ಹೇಳಬಹುದು. ಆದರೆ ಯೋಜನೆ ಕಾರ್ಯಕ್ಕೆ ಕೇಂದ್ರ ಹಾಗೂ ಸಂಸ್ಥಾನ ಸರ್ಕಾರಗಳ ಶಾಖೆಗಳಲ್ಲಿರುವ ಒಟ್ಟು ನೂರಾರು ಅಂತಹ ತಜ್ಞರು ಸಹಕರಿಸುತ್ತಿರುತ್ತಾರೆಂಬುದು ಗಮನಾರ್ಹವಾದ ವಿಷಯ.

ಯೋಜನೆಗಳ ಬಗ್ಗೆ ಅನೇಕ ವಿವರಗಳು ಸರ್ಕಾರಗಳ ವಿವಿಧ ಶಾಖೆಗಳಲ್ಲಿ ತಯಾರಾಗುವುವು. ಕೇಂದ್ರದ ಒಂದೊಂದು ಸಚಿವ ಶಾಖೆಯಲ್ಲಿಯೂ ಸಂಶೋಧನೆಗೆ (Research) ಒಂದು ಸಿಬ್ಬಂದಿ ಏರ್ಪಾಟಾಗಿದೆ. ಸಂಸ್ಥಾನ ಸರ್ಕಾರಗಳು ಯೋಜನಾ ನಿಯೋಗದ ಕಾರ್ಯದಲ್ಲಿ ಅವುಗಳ ಯೋಜನೆಗಳ ಕರಡುಪ್ರತಿಗಳನ್ನು (Drafts) ತಯಾರಿಸುವುದರ ಮೂಲಕವೂ, ನಿಯೋಗವು ಕೇಳುವ ವಿಷಯುಗಳನ್ನು ಒದಗಿಸುವುದರ ಮೂಲಕವೂ ಭಾಗವಹಿಸುವುವು. ಅಲ್ಲದೆ ಯೋಜನಾ ನಿಯೋಗವು ಅದರ ಕಾರ್ಯಸ್ವರೂಪ ಹಾಗೂ ಕಾರ್ಯವಿಸ್ತಾರಕ್ಕೆ ಅನುಗುಣವಾಗಿ ಅನೇಕ ಅಂಗಸಂಸ್ಥೆಗಳನ್ನು ಸ್ಥಾಪಿಸಿದೆ ಹಾಗೂ ಕೆಲವು ಸಾರ್ವಜನಿಕ ಸಂಸ್ಥೆಗಳೊಡನೆಯೂ ಸೂಕ್ತಸಂಬಂಧಗಳನ್ನು ಬೆಳೆಸಿಕೊಂಡಿದೆ.

ಕ್ರಿಯಾತಂಡಗಳು (Working Groups) : ಕ್ರಿಯಾತಂಡಗಳು, ಸ್ಥಾಯಿ ಸಲಹಾ ಸಮಿತಿಗಳು, ಸಂಶೋಧನೆ ಅಥವಾ ಸಮೀಕ್ಷಾ ಸಮಿತಿಗಳು ಇವೆಲ್ಲವೂ ನಿಯೋಗವು ರಚಿಸಿ ಉಪಯೋಗಿಸುತ್ತಿರುವ ಅಂಗಸಂಸ್ಥಾರೂಪಗಳಾಗಿವೆ. ವಿವಿಧ ಕಾರ್ಯಕ್ರಮಗಳ ವಿವರಗಳನ್ನು ತಯಾರಿಸುವುದಕ್ಕೋಸ್ಕರ ಯೋಜನಾ ನಿಯೋಗವು ಅನೇಕ ಕ್ರಿಯಾತಂಡಗಳನ್ನು ತಾತ್ಕಾಲಿಕ ಆಧಾರದ ಮೇಲೆ ರಚಿಸುವುದು.

ಆಯಾ ಕೆಲಸಕ್ಕೆ ಸಂಬಂಧಪಟ್ಟ ಸಚಿವಶಾಖೆಯ ಕಾರ್ಯದರ್ಶಿಯು ಆ ಕ್ರಿಯಾತಂಡದ ಅಧ್ಯಕ್ಷರಾಗಿರುವರು. ಒಂದೊಂದು ತಂಡದಲ್ಲಿಯೂ ಅರ್ಥಶಾಸ್ತ್ರಜ್ಞರೂ, ಆಡಳಿತಗಾರರೂ, ತಂತ್ರಜ್ಞರೂ (Technicians) ಇರುವರು. ಆಯಾ ಸಚಿವ ಶಾಖೆ ಹಾಗೂ ಯೋಜನಾ ನಿಯೋಗದ ಸಂಬಂಧಪಟ್ಟ ಶಾಖೆಗಳಿಂದ ಕ್ರಿಯಾತಂಡದ ಸದಸ್ಯರು ಆರಿಸಲ್ಪಡುವರು. ಈ ಮೂಲಕ ಯೋಜನಾ ನಿಯೋಗ ಹಾಗೂ ಸಚಿವಶಾಖೆಗಳೊಳಗೆ ಆವಶ್ಯಕ ಸಂಪರ್ಕ ಏರ್ಪಡಿಸಿದಂತಾಗಿದೆ. ಅಲ್ಲದೆ ಯೋಜಿತ ಕಾರ್ಯಕ್ರಮವನ್ನು ಕಾರ್ಯಗತಮಾಡುವ ಅಧಿಕಾರಿಗಳನ್ನು ಇಂತಹ ಕಾರ್ಯಕ್ರಮಗಳನ್ನು ರೂಪಿಸುವ ಹಂತದಲ್ಲಿಯೇ ಜೊತೆಗೆ ಸೇರಿಸಿಕೊಂಡಂತೆ ಆಗಿದೆ. ಯೋಜನೆಗಳನ್ನು ತಯಾರಿಸುವುದಕ್ಕೆ ಈ ಕ್ರಿಯಾತಂಡಗಳ ವರದಿಗಳೇ ಮೂಲ ಆಧಾರ ಎನ್ನಬಹುದು. ಮೂರನೆಯ ಪಂಚವಾರ್ಷಿಕ ಯೋಜನೆ ತಯಾರಿಸುವ ಸಂದರ್ಭದಲ್ಲಿ ೨೨ ಅಂತಹ ಕ್ರಿಯಾತಂಡಗಳನ್ನು ನೇಮಿಸಲಾಗಿದ್ದಿತು.

ಸ್ಥಾಯಿ ಸಲಹಾಸಮಿತಿಗಳು (Standing Advisory Bodies) : ಹೆಚ್ಚಾಗಿ ಖಾಸಗಿ ನಿಪುಣರನ್ನು ಒಳಗೊಂಡ ೧೩ ಸ್ಥಾಯಿ ಸಲಹಾ ಅಂಗ ಸಂಸ್ಥೆ

ಗಳನ್ನು ಯೋಜನಾ ನಿಯೋಗವು ಸ್ಥಾಪಿಸಿದೆ. ಇವುಗಳಲ್ಲಿ ಆರ್ಥಿಕ, ವೈಜ್ಞಾನಿಕ, ವ್ಯವಸಾಯ, ಭೂಸುಧಾರಣೆ, ಆಯುರ್ವೇದ, ಆರೋಗ್ಯ, ವಿದ್ಯಾಭ್ಯಾಸ ಮತ್ತು ಗೃಹನಿರ್ಮಾಣ ಹಾಗೂ ಪ್ರಾದೇಶಿಕ ಅಭಿವೃದ್ಧಿ ಇವುಗಳಿಗೆ ಸಂಬಂಧಿಸಿದಂತೆ ಎಂಟು ನಿಪುಣರ 'ಪೇನೆಲ್'ಗಳು (Panel of Experts) ಇವೆ. ಮೂರು ಸಲಹಾ ಸಮಿತಿಗಳು (Advisory Committees) ಈ ರೀತಿ ಇವೆ:

(೧) ನೀರಾವರಿ, ನದಿ ಹತೋಟಿ, ಹಾಗೂ ವಿದ್ಯುಚ್ಛಕ್ತಿ ಪ್ರಾಜೆಕ್ಟುಗಳು.

(೨) ಕೇಂದ್ರ ಸಚಿವಶಾಖೆಗಳ ಸಾರ್ವಜನಿಕ ಸಹಕಾರ ಕಾರ್ಯಕ್ರಮಗಳು ಮತ್ತು

(೩) ರಾಷ್ಟ್ರೀಯ ಅಭಿವೃದ್ಧಿ ಕಾರ್ಯದಲ್ಲಿ ವಿವಿಧ ರಾಷ್ಟ್ರೀಯ ಸ್ವಯಂ ಸೇವಕ ಸಂಸ್ಥೆಗಳನ್ನು ಕೂಡಿಸುವ ಕಾರ್ಯಕ್ರಮಗಳು.

ಇನ್ನೆರಡು ಮುಖ್ಯವಾದ ಸ್ಥಾಯಿ ಸಲಹಾಸಮಿತಿಗಳು (Consultative Committees) ಇವು: (೧) ಲೋಕಸಭೆಯ ೩೦ ಸದಸ್ಯರು ಮತ್ತು ರಾಜ್ಯಸಭೆಯ ೧೦ ಸದಸ್ಯರು ಇರುವ ಹಾಗೂ ಯೋಜನಾ ಆಯೋಗದ ಉಪಾಧ್ಯಕ್ಷರು ಅಧ್ಯಕ್ಷರಾಗಿರುವ ಸಲಹಾಸಮಿತಿ ಒಂದನೆಯದು. (೨) ಪಾರ್ಲಿಮೆಂಟಿನ ಮುಖ್ಯ ರಾಜಕೀಯ ಪಂಗಡಗಳ ಮುಖಂಡರನ್ನು ಒಳಗೊಂಡ ಹಾಗೂ ಕೇಂದ್ರ ಪ್ರಧಾನಮಂತ್ರಿಯವರು ಅಧ್ಯಕ್ಷರಾಗಿರುವ ಸಲಹಾಸಮಿತಿ ಇನ್ನೊಂದು.

ಈ ಮೇಲಿನ ೧೩ ಸ್ಥಾಯಿ ಸಮಿತಿಗಳೂ ಸಾಧಾರಣವಾಗಿ ವರ್ಷಕ್ಕೆ ಎರಡು, ಮೂರು ಬಾರಿ ಸೇರಿ ಅವುಗಳ ವ್ಯಾಪ್ತಿಗೆ ಸೇರಿದ ವಿಷಯಗಳ ಬಗ್ಗೆ ಸಲಹೆಗಳನ್ನು ನೀಡುವುವು.

ಸಮೀಕ್ಷಾ ಹಾಗೂ ಸಂಶೋಧನೆ ಸಮಿತಿಗಳು: ಪ್ರಗತಿಪರಿಶೀಲನೆ (Evaluation) ಹಾಗೂ ಸಂಶೋಧನೆಗೋಸ್ಕರ ಯೋಜನಾ ನಿಯೋಗಕ್ಕೆ ಸೇರಿದಂತೆ ಮೂರು ಸಹ-ಸಂಸ್ಥೆಗಳು (Associated bodies) ಇವೆ. (೧) ಯೋಜನೆ 'ಪ್ರಾಜೆಕ್ಟು'ಗಳ ಸಮಿತಿ:—ಕೇಂದ್ರ ಗೃಹಮಂತ್ರಿ ಇದರ ಅಧ್ಯಕ್ಷರು. ಕೇಂದ್ರ ಹಾಗೂ ಸಂಸ್ಥಾನಗಳ ಪ್ರಾಜೆಕ್ಟುಗಳ ಬಗ್ಗೆ ಕ್ಷೇತ್ರ ಪರಿಶೀಲನೆಗಳನ್ನು (Field investigations) ನಡೆಸಲೋಸುಗ ತಂಡಗಳನ್ನು ನೇಮಿಸುವುದು ಈ ಸಮಿತಿಯ ಮುಖ್ಯ ಕರ್ತವ್ಯವಾಗಿದೆ. (೨) ಕಾರ್ಯಕ್ರಮ ಪ್ರಗತಿ ಪರಿಶೀಲನಾ ಸಂಸ್ಥೆ (Programme Evaluation Organisation) ಎಂಬುದು ಸಾಮುದಾಯಿಕ ಅಭಿವೃದ್ಧಿಕಾರ್ಯದ ಫಲಾಫಲಗಳನ್ನು ಆಗಿಂದಾಗ್ಯೆ ಕ್ರಮವಾಗಿ ಪರಿಶೀಲಿಸುವುದಕ್ಕೋಸ್ಕರ ಮೊದಲು ಸ್ಥಾಪಿಸಲಾಯಿತು. ತರುವಾಯ ಗ್ರಾಮಾಭಿವೃದ್ಧಿ ಬಗ್ಗೆ ಅನೇಕ ಇತರ ಕಾರ್ಯಕ್ರಮಗಳ ಪರಿಶೀಲನೆಯೂ ಈ ಸಂಸ್ಥೆಯ ಕಾರ್ಯವ್ಯಾಪ್ತಿಗೆ ಸೇರಿದೆ. (೩) ಸಂಶೋಧನಾ ಕಾರ್ಯಕ್ರಮಗಳ ಸಮಿತಿಯು

(Research Programmes Committee) ಯೋಜಿತಾಭಿವೃದ್ಧಿಗೆ ಸಂಬಂಧಿಸಿದ ಆರ್ಥಿಕ, ಸಾಮಾಜಿಕ ಹಾಗೂ ಆಡಳಿತ ಸಮಸ್ಯೆಗಳನ್ನು ಕುರಿತ ಸಂಶೋಧನೆಯನ್ನು ವ್ಯವಸ್ಥೆಗೊಳಿಸುವ ಸಂಸ್ಥೆಯಾಗಿದೆ. ಯೋಜನಾ ನಿಯೋಗದ ಉಪಾಧ್ಯಕ್ಷರೂ, ಇದರ ಅಧ್ಯಕ್ಷರೂ, ಕೆಲವು ಹಿರಿಯ ಸಮಾಜ ವಿಜ್ಞಾನಿಗಳೂ ಇದರ ಸದಸ್ಯರಾಗಿರುತ್ತಾರೆ.

ಇತರ ಸಂಸ್ಥೆಗಳ ಸಹಕಾರ: ಮೇಲೆ ಹೇಳಿರುವ ಕ್ರಿಯಾ ತಂಡಗಳು, ಸ್ಥಾಯಿಾ ಸಮಿತಿಗಳು ಮತ್ತು ಸಂಶೋಧನೆ ಹಾಗೂ ಸಮೀಕ್ಷಾ ಸಮಿತಿಗಳಲ್ಲದೆ ಯೋಜನಾ ನಿಯೋಗವು ಇತರ ಸಾರ್ವಜನಿಕ ಮತ್ತು ಖಾಸಗಿ ಸಂಸ್ಥೆಗಳ ಸಹಾಯವನ್ನು ಪಡೆಯುತ್ತಿದೆ. ಇವುಗಳಲ್ಲಿ ಮುಖ್ಯವಾದುವು ಇವು:— (೧) ಕೇಂದ್ರೀಯ ಅಂಕಿ ಅಂಶಗಳ ಸಂಸ್ಥೆ (Central Statistical Organisation)– ಈ ಸಂಸ್ಥೆಯ ನಿರ್ದೇಶಕರು (Director) ಯೋಜನಾ ನಿಯೋಗದ ಅಂಕಿ ಅಂಶ ಹಾಗೂ ಸರ್ವೆ ವಿಭಾಗದ ಮುಖ್ಯಾಧಿಕಾರಿಗಳೂ ಆಗಿರುತ್ತಾರೆ. ಇದರಿಂದ ಈ ಎರಡು ಸಂಸ್ಥೆಗಳಿಗೂ ನಿಕಟ ಬಾಂಧವ್ಯ ಉಂಟಾಗಿದೆ. (೨) ಇಂಡಿಯದ ರಿಸರ್ವ್ ಬ್ಯಾಂಕು–ನಮ್ಮ ದೇಶದ ಈ ಕೇಂದ್ರ ಬ್ಯಾಂಕಿನ ಆರ್ಥಿಕ ಶಾಖೆ ಮುಖ್ಯಸ್ಥರಾದ ಕಾರ್ಯಕಾರಿ–ನಿರ್ದೇಶಕರು ಯೋಜನಾ ನಿಯೋಗದ ಸಾಧನ–ಸಂಪತ್ತುಗಳ (Resources) ಕ್ರಿಯಾ ತಂಡದ ಸದಸ್ಯರಾಗಿರುತ್ತಾರೆ. ಈ ಮೂಲಕವೂ ಹಾಗೂ ಕೇಂದ್ರ ಬ್ಯಾಂಕಿನೊಡನೆ ಬೆಳೆಸುತ್ತಿರುವ ಇತರ ಸಂಬಂಧಗಳ ಮೂಲಕವೂ ರಿಸರ್ವ್ ಬ್ಯಾಂಕು ಯೋಜನಾ ಕಾರ್ಯದಲ್ಲಿ ಭಾಗವಹಿಸುತ್ತಿದೆ. (೩) ಆಮೇಲೆ ಯೋಜನಾ ನಿಯೋಗವು ರಚಿಸಿರುವ ಅರ್ಥಶಾಸ್ತ್ರಜ್ಞರ 'ಪೇನೆಲ್' ಒಂದು ಇದೆ. ದೇಶದ ಪ್ರಖ್ಯಾತ ಅರ್ಥಶಾಸ್ತ್ರಜ್ಞರ ಈ ಸಮಿತಿಯು ಯೋಜನೆಯ ಎಲ್ಲಾ ಭಾಗಗಳನ್ನೂ ವಿಮರ್ಶಿಸಿ ಅದರ ಅಭಿಪ್ರಾಯವನ್ನೂ ಸಲಹೆಗಳನ್ನೂ ಕೊಡುವುದು. (೪) ಕೇಂದ್ರದ ವಾಣಿಜ್ಯ ಹಾಗೂ ಕೈಗಾರಿಕಾ ಸಚಿವ ಶಾಖೆಯು ಕೆಲವು ಮುಖ್ಯ ಕೈಗಾರಿಕೆಗಳಿಗೆ ಒಂದೊಂದಕ್ಕೆ ಒಂದೊಂದು ಅಭಿವೃದ್ಧಿ ಸಮಿತಿಯನ್ನು ಸ್ಥಾಪಿಸಿದೆ. ಖಾಸಗಿ ವಲಯದ ಉದ್ಯಮಗಳ, ತಂತ್ರಜ್ಞರ ಹಾಗೂ ಅನುಭೋಗಿಗಳ ಪ್ರತಿನಿಧಿಗಳು ಈ ಸಮಿತಿಗಳ ಸದಸ್ಯರು. ಯೋಜನಾ ನಿಯೋಗವು ಈ ವಿವಿಧ ಅಭಿವೃದ್ಧಿ ಸಮಿತಿಗಳೊಡನೆಯೂ ನಿಕಟ ಸಂಪರ್ಕವಿಟ್ಟುಕೊಂಡಿದೆ. (೫) 'ಫೆಡರೇಷನ್ ಆಫ್ ಇಂಡಿಯನ್ ಛೇಂಬರ್ ಆಫ್ ಕಾಮರ್ಸ್', 'ಅಸೋಸಿಯೇಟೆಡ್ ಛೇಂಬರ್ ಆಫ್ ಕಾಮರ್ಸ್,' 'ಅಖಿಳ–ಭಾರತ ತಯಾರಿಕೆಯವರ ಸಂಘ' (All-India Manufacturers Organisation) ಇಂತಹ ಖಾಸಗಿ ಉದ್ಯಮಿ ಸಂಸ್ಥೆಗಳ ಪ್ರತಿನಿಧಿಗಳೊಡನೆ ಯೋಜನಾ ನಿಯೋಗವು ಚರ್ಚೆಗಳಿಗೆ ಹಾಗೂ ವಿಚಾರ–ವಿನಿಮಯಕ್ಕೆ ಅವಕಾಶವೇರ್ಪಡಿಸುವುದು.

ಹೀಗೆ ಯೋಜನಾ ನಿಯೋಗವು ಅನೇಕ ಅಂಗ, ಉಪ ಅಂಗಸಂಸ್ಥೆಗಳ

(ಸರ್ಕಾರಿ ಹಾಗೂ ಖಾಸಗಿ), ಸಹಕಾರ ಪಡೆದು ಯೋಜನೆಯನ್ನು ರೂಪಿಸುವ, ಸಮಿಾಕ್ಷಿಸುವ ಹಾಗೂ ಪುನರ್ವಿಮರ್ಶಿಸಿ ರೂಪಿಸುವ ಕಾರ್ಯಗಳನ್ನು ನಡೆಸುವುದು.

ಸ್ಥಳೀಯ ಮಟ್ಟದಲ್ಲಿ ಯೋಜನಾಯಂತ್ರ: ಮೇಲೆ ಹೇಳಿರುವಂತೆ ಯೋಜನಾ ಯಂತ್ರವು ಮೇಲಿನ ಹಂತಗಳಲ್ಲಿ ಬೆಳೆಯುತ್ತಿರುವುದರ ಜೊತೆಗೆ ಗ್ರಾಮ, ತಾಲ್ಲೂಕು, ಜಿಲ್ಲೆ ಮಟ್ಟಗಳಲ್ಲಿಯೂ ಯೋಜನಾಯಂತ್ರವು ರೂಪುಗೊಳ್ಳುತ್ತಿರುವುದು ಅತಿ ಮುಖ್ಯವಾದ ವಿಷಯವಾಗಿದೆ. ಏಕೆಂದರೆ, ವಿಸ್ತಾರ ಹಾಗೂ ವೈವಿಧ್ಯಪೂರ್ಣವಾದ ಹಾಗೂ 'ಫೆಡರಲ್' ರಾಜ್ಯಾಂಗವಿರುವ ನಮ್ಮ ದೇಶದ ಯೋಜನಾಯಂತ್ರವು ಪರಿಪೂರ್ಣವಾಗಬೇಕಾದರೆ ಸ್ಥಳೀಯ ಹಾಗೂ ಸಂಸ್ಥಾನಿಕ ಮಟ್ಟಗಳಲ್ಲಿ ಸೂಕ್ತವಾದ ಯೋಜನಾವ್ಯವಸ್ಥೆ ಸ್ಥಾಪನೆಯಾಗಬೇಕು. ಒಟ್ಟು ರಾಷ್ಟ್ರಮಟ್ಟಕ್ಕೆ ಅನ್ವಯಿಸುವ ಯೋಜನೆಗಳು ಸ್ಥಳೀಯ ಮಟ್ಟದಲ್ಲಿ ರಚಿಸಲಾಗುವ ಯೋಜನೆಗಳ ಆಧಾರದ ಮೇಲೆ ರೂಪುಗೊಳ್ಳಬೇಕೆಂಬುದು ಯೋಜನಾ ನಿಯೋಗದ ಅಭಿಪ್ರಾಯವಾಗಿದ್ದಾಗ್ಯೂ ಇದು ಪೂರ್ಣವಾಗಿ ಸಾಧ್ಯವಾಗಬೇಕಾದರೆ ಸ್ಥಳೀಯ ಮಟ್ಟದ ವ್ಯವಸ್ಥೆ ಉತ್ತಮಗೊಳ್ಳಬೇಕು. ಈ ದೃಷ್ಟಿಯಿಂದ ಕೆಲವು ಮುಖ್ಯ ಕ್ರಮಗಳನ್ನು ಕೈಕೊಳ್ಳಲಾಗುತ್ತಿದೆ.

ಮೊದಲನೆಯದಾಗಿ, ಪ್ರತಿಯೊಂದು ಸಂಸ್ಥಾನದಲ್ಲೂ ಒಂದೊಂದು ಸಂಸ್ಥಾನ ಯೋಜನಾ ನಿಯೋಗವನ್ನು ನಿರ್ಮಿಸಬೇಕೆಂದು ಆಲೋಚಿಸಲಾಗಿದೆ; ಹಾಗೂ ಕೆಲವು ಸಂಸ್ಥಾನಗಳು ಇಂತಹ ಉಪಸಂಸ್ಥೆಗಳನ್ನು ಆಗಲೇ ಸ್ಥಾಪಿಸಿವೆ. ಎರಡನೆಯದಾಗಿ, ಈಗ ದೇಶದಾದ್ಯಂತವೂ ಸ್ಥಾಪನೆಯಾಗಿರುವ ಸಾಮುದಾಯಿಕ ಅಭಿವೃದ್ಧಿ 'ಬ್ಲಾಕು'ಗಳಿಗೆ ಸ್ಥಳೀಯ ಸ್ಥಿತಿಗತಿಗಳಿಗನುಸಾರವಾಗಿ ಯೋಜನೆಗಳನ್ನು ರಚಿಸುವ ಕಾರ್ಯವನ್ನು ವಹಿಸಲಾಗಿದೆ. ಪ್ರಜಾಪ್ರಭುತ್ವವನ್ನು ಭದ್ರವಾಗಿ ನೆಲೆಗೊಳಿಸಿ ಯಶಸ್ವಿಯಾಗುವಂತೆ ಮಾಡಬೇಕಾದರೆ ವಿಕೇಂದ್ರೀಕರಣ ಅವಶ್ಯಕವೆಂದು ಗ್ರಹಿಸಿ ಪಂಚಾಯತಿ ರಾಜ್ಯಸ್ಥಾಪನೆಗೂ, ಸಹಕಾರಸಂಸ್ಥೆಗಳ ಬೆಳವಣಿಗೆಗೂ ಈಚೆಗೆ ವಿಶೇಷ ಗಮನ ನೀಡಲಾಗುತ್ತಿದೆ. ಈ ಬೆಳವಣಿಗೆಗಳು ಮತ್ತು ಸಾಮುದಾಯಿಕ ಅಭಿವೃದ್ಧಿ 'ಬ್ಲಾಕು'ಗಳು ಸ್ಥಳೀಯ ಮಟ್ಟದಲ್ಲಿ ಸ್ಪಷ್ಟವಾದ ಯೋಜನೆಗಳನ್ನು ತಯಾರಿಸಲು ಸಹಾಯಕವಾಗಿವೆ. ಜಿಲ್ಲೆ ಹಾಗೂ 'ಬ್ಲಾಕು' ಯೋಜನೆಗಳ ಆಧಾರದಮೇಲೆ ಸಂಸ್ಥಾನ ಯೋಜನೆಗಳನ್ನು ರೂಪಿಸಬೇಕೆಂದು ಮೂರನೆಯ ಪಂಚವಾರ್ಷಿಕ ಯೋಜನೆಯನ್ನು ತಯಾರಿಸುವ ಸಂದರ್ಭದಲ್ಲಿಯೇ ಯೋಜನಾ ನಿಯೋಗವು ಸಂಸ್ಥಾನಗಳಿಗೆ ಸೂಚನೆ ಕೊಟ್ಟಿದ್ದಿತು. ಆದರೆ ಅನೇಕ ಕುಂದುಕೊರತೆಗಳಿಂದ ಸ್ಥಳೀಯ ಯೋಜನೆಗಳನ್ನು ತಯಾರಿಸುವುದು ಸಾಧ್ಯವಾಗಲಿಲ್ಲ. ಅಂಕಿ ಅಂಶಗಳ ಸಂಗ್ರಹ ಹಾಗೂ ಪರಿಷ್ಕರಣ ಮಾಡಲು ಮತ್ತು ಇವುಗಳನ್ನು ಸರಿಯಾಗಿ ಉಪಯೋಗಿಸಿ ಯೋಜನೆಗಳನ್ನು ರಚಿಸಲು ಸರಿಯಾದ ಸಿಬ್ಬಂದಿ ಇಲ್ಲದಿರುವುದೇ ಮುಖ್ಯ ಕೊರತೆಯಾಗಿದೆ. ಈಗ ಸ್ಥಾಪನೆ

ಯಾಗಿರುವ ಜಿಲ್ಲಾ ಸಮಿತಿಗಳು, ಪಂಚಾಯಿತಿ ಸಮಿತಿಗಳು ಹಾಗೂ 'ಬ್ಲಾಕು' ಸಮಿತಿಗಳು, ಇವುಗಳ ಸದಸ್ಯರು ಯೋಜನಾಕ್ರಮಗಳ ಬಗ್ಗೆ ಹೆಚ್ಚು ಹೆಚ್ಚು ತಿಳಿವಳಿಕೆ ಪಡೆದಂತೆ ಈ ಕೊರತೆಯು ನಿವಾರಣೆಯಾಗಿ ಸ್ಥಳೀಯ ಯೋಜನಾಯಂತ್ರವು ನಿರ್ಮಾಣವಾದಂತಾಗುವುದು. ಆಗಲೇ ರಚಿಸಲಾಗುತ್ತಿರುವ ನಾಲ್ಕನೆಯ ಪಂಚವಾರ್ಷಿಕ ಯೋಜನೆಗೆ ಈ ಸ್ಥಳೀಯ ಯೋಜನಾ ಯಂತ್ರವೂ ನೆರವಾಗುತ್ತಿದೆ.

ರಾಷ್ಟ್ರೀಯ ಅಭಿವೃದ್ಧಿ ಸಭೆ (National Development Council): ರಾಷ್ಟ್ರೀಯ ಯೋಜನಾಯಂತ್ರದಲ್ಲಿ ರಾಷ್ಟ್ರೀಯ ಅಭಿವೃದ್ಧಿ ಸಭೆಗೆ ಅತ್ಯಂತ ಮುಖ್ಯವಾದ ಸ್ಥಾನವಿದೆ. ಪ್ರಧಾನಮಂತ್ರಿ, ಸಂಸ್ಥಾನಗಳ ಮುಖ್ಯಮಂತ್ರಿಗಳು, ಮತ್ತು ಯೋಜನಾ ನಿಯೋಗದ ಸದಸ್ಯರು—ಇವರುಗಳನ್ನು ಒಳಗೊಂಡ ಈ ಸಭೆಯು ಉನ್ನತ ಪ್ರಭಾವವುಳ್ಳ ಅಂಗವಾಗಿರುವುದರಲ್ಲಿ ಆಶ್ಚರ್ಯವೇನಿಲ್ಲ. ಇದರ ಕಾರ್ಯಕಲಾಪಗಳಲ್ಲಿ ಕೇಂದ್ರ ಹಾಗೂ ಸಂಸ್ಥಾನಗಳ ಇತರ ಸಚಿವರುಗಳೂ ಭಾಗ ವಹಿಸುವುದುಂಟು.

ಯೋಜನೆಯ ನಿರ್ಮಾಣದ ವಿವಿಧ ಹಂತಗಳಲ್ಲಿಯೂ, ಯೋಜನೆಗಳನ್ನು ಪುನರ್ವಿಮರ್ಶಿಸುವಾಗಲೂ ರಾಷ್ಟ್ರೀಯ ಅಭಿವೃದ್ಧಿ ಸಭೆಯು ಸೇರಿ ಅದರ ಅಭಿಪ್ರಾಯಗಳನ್ನು ಮಂಡಿಸುವುದು. ಕಾಲಕಾಲಕ್ಕೂ ಯೋಜನೆಯ ಕಾರ್ಯ ಗತಿಯನ್ನು ವೀಕ್ಷಿಸುವುದು ; ರಾಷ್ಟ್ರೀಯ ಅಭಿವೃದ್ಧಿಗೆ ಸಂಬಂಧಿಸಿದ ಸಾಮಾಜಿಕ ಹಾಗೂ ಆರ್ಥಿಕ ನೀತಿಗಳನ್ನು ವಿವೇಚಿಸುವುದು ; ಯೋಜನಾಕ್ರಮಗಳಿಗೆ ಜನರ ಸಹಕಾರ ಹೆಚ್ಚಿಸಲು, ಯೋಜನೆಯ ಆಡಳಿತ ದಕ್ಷತೆ ಹೆಚ್ಚಿಸಲು, ಹಿಂದುಳಿದಿರುವ ಜನಾಂಗಗಳ ಹಾಗೂ ಪ್ರದೇಶಗಳ ಅಭಿವೃದ್ಧಿ ಸಾಧಿಸಲು ಮತ್ತು ಸಾಮಾನ್ಯವಾಗಿ ಆರ್ಥಿಕ ಯೋಜನಾ ಗುರಿಗಳನ್ನು ಸಾಧಿಸಲು ಆವಶ್ಯಕವಾಗುವ ಕ್ರಮಗಳನ್ನು ಶಿಫಾರಸುಮಾಡುವುದು ;—ಇವೆಲ್ಲವೂ ರಾಷ್ಟ್ರೀಯ ಅಭಿವೃದ್ಧಿ ಸಭೆಯ ಕರ್ತವ್ಯ ಗಳಾಗಿವೆ. ಈ ಸಭೆಯು ಅನುಮೋದಿಸಿದ ನಂತರವೇ ಯೋಜನೆಗಳು ಪಾರ್ಲಿ ಮೆಂಟಿನ ಅವಗಾಹನೆ ಹಾಗೂ ಅನುಮೋದನೆಗೆ ಕೊಂಡೊಯ್ಯಲ್ಪಡುವುವು. ಅಲ್ಲದೆ ಈ ಸಭೆಯ ತೀರ್ಮಾನಗಳನ್ನು ವಾಸ್ತವವಾಗಿಯೂ ಅಂತಿಮ ತೀರ್ಮಾನ ಗಳೆಂದೇ ಭಾವಿಸಬಹುದಾಗಿದೆ.

ರಾಷ್ಟ್ರೀಯ ಯೋಜನೆಯನ್ನು ಕೇಂದ್ರದ ಪಾರ್ಲಿಮೆಂಟೂ, ಸಂಸ್ಥಾನಗಳ ಯೋಜನೆಗಳನ್ನು ಆಯಾ ಸಂಸ್ಥಾನದ ವಿಧಾನಸಭೆಯೂ ಅನುಮೋದಿಸಿದ ನಂತರ ಯೋಜನೆಗಳು ಜಾರಿಗೆ ಬರುವುವು. ಇವುಗಳನ್ನು ಕಾರ್ಯಗತಮಾಡುವ ಜವಾಬ್ದಾರಿ ಕೇಂದ್ರ ಹಾಗೂ ಸಂಸ್ಥಾನ ಸರ್ಕಾರಗಳಿಗೆ ಸೇರಿದೆ. ಯೋಜನಾಯಂತ್ರವು ಆಗಿಂದಾಗ್ಗೆ ಪ್ರಗತಿಯ ಸಮೀಕ್ಷೆಯನ್ನು ನಡೆಸುವುದಲ್ಲದೆ ಆವಶ್ಯಕ ಹೊಸ ಕ್ರಮ ಗಳನ್ನೂ, ಯೋಜನೆಯಲ್ಲಿನ ಬದಲಾವಣೆಗಳನ್ನೂ ಸೂಚಿಸುವುದು.

ನಮ್ಮ ಯೋಜನಾಯಂತ್ರವು ಅನೇಕ ಅಂಗ, ಉಪ ಅಂಗಸಂಸ್ಥೆಗಳಿಂದ ಕೂಡಿರುವ ಮತ್ತು ಕೇಂದ್ರ, ಸಂಸ್ಥಾನಗಳ ಸರ್ಕಾರಗಳೊಡನೆಯೂ ಹಾಗೂ ಕೆಲವು ಸಾರ್ವಜನಿಕ ಸಂಸ್ಥೆಗಳೊಡನೆಯೂ ಅನೇಕ ವಿಧದಲ್ಲಿ ಸಂಪರ್ಕವಿಟ್ಟು ಕೊಂಡಿರುವ ಅಗಾಧವಾದ ಯಂತ್ರವಾಗಿದೆ ಎಂಬುದು ಮೇಲಿನ ಸಂಕ್ಷಿಪ್ತ ವಿವರಣೆ ಯಿಂದ ವ್ಯಕ್ತವಾಗುವುದು. ಯೋಜನಾ ನಿರ್ಮಾಣವು ಸ್ಥಳೀಯ ಹಾಗೂ ರಾಷ್ಟ್ರೀಯ ಕಾರ್ಯಕ್ರಮವಾಗಿದೆ. ನಮ್ಮ ಯೋಜನಾ ಆರ್ಥಿಕತೆ (Planned Economy) ಮುಂದುವರಿದಂತೆ ಈ ಯಂತ್ರವು ಗಾತ್ರದಲ್ಲಿ ಬೆಳೆಯುವುದರ ಜೊತೆಗೆ ಕಾರ್ಯದಕ್ಷತೆಯನ್ನು ಉತ್ತಮಗೊಳಿಸಿಕೊಂಡು ಅದರ ವಿವಿಧ ಭಾಗ ಗಳಲ್ಲಿ ಇನ್ನೂ ಹೆಚ್ಚು ಹೊಂದಾಣಿಕೆ ಏರ್ಪಡಿಸಿಕೊಂಡು ಯೋಜನಾ ಮಾರ್ಗವು ಆರ್ಥಿಕ ಬೆಳವಣಿಗೆ ಹಾಗೂ ಯೋಗಕ್ಷೇಮ ಮತ್ತು ಪ್ರಜಾಪ್ರಭುತ್ವ ಇವೆರಡನ್ನೂ ಸಮನ್ವಯಗೊಳಿಸಬಲ್ಲದೆಂಬುದನ್ನು ಸಮರ್ಥಿಸುವುದೆಂದು ಆಶಿಸಬಹುದಾಗಿದೆ.

—ಅ. ಪು. ಶ್ರೀನಿವಾಸಮೂರ್ತಿ

ಅನುಬಂಧ ೧

ಯೋಜನಾ ನಿಯೋಗದ ಸದಸ್ಯರು*

ಪ್ರಥಮ ಯೋಜನೆ	ದ್ವಿತೀಯ ಯೋಜನೆ	ತೃತೀಯ ಯೋಜನೆ	ಇಂದು (ಜನವರಿ ೧೯೬೪)
ಶ್ರೀ ಜವಹರ್‌ಲಾಲ್ ನೆಹ್ರೂ (ಅಧ್ಯಕ್ಷ)	ಶ್ರೀ ಜವಹರ್‌ಲಾಲ್ ನೆಹ್ರೂ (ಅಧ್ಯಕ್ಷ)	ಶ್ರೀ ಜವಹರ್‌ಲಾಲ್ ನೆಹ್ರೂ (ಅಧ್ಯಕ್ಷ)	ಶ್ರೀ ಜವಹರ್‌ಲಾಲ್ ನೆಹ್ರೂ (ಅಧ್ಯಕ್ಷ)
ಶ್ರೀ ಗುಲ್‌ಜಾರಿಲಾಲ್ ನಂದ (ಉಪಾಧ್ಯಕ್ಷ)	ಶ್ರೀ ವಿ. ಟಿ. ಕೃಷ್ಣಮಾಚಾರಿ (ಉಪಾಧ್ಯಕ್ಷ)	ಶ್ರೀ ಗುಲ್‌ಜಾರಿಲಾಲ್ ನಂದ (ಉಪಾಧ್ಯಕ್ಷ)	ಶ್ರೀ ಅಶೋಕ ಮೆಹ್ತಾ (ಉಪಾಧ್ಯಕ್ಷ)
ಶ್ರೀ ವಿ. ಟಿ. ಕೃಷ್ಣಮಾಚಾರಿ	ಶ್ರೀ ಗುಲ್‌ಜಾರಿಲಾಲ್ ನಂದ	ಶ್ರೀ ಮೊರಾರ್ಜಿ ದೇಸಾಯ್	ಶ್ರೀ ಶ್ರೀಮನ್ ನಾರಾಯಣ್
ಶ್ರೀ ಸಿ. ಡಿ. ದೇಶಮುಖ್	ಶ್ರೀ ಸಿ. ಡಿ. ದೇಶಮುಖ್	ಶ್ರೀ ವಿ. ಕೆ. ಕೃಷ್ಣಮೆನನ್	ಶ್ರೀ ಟಿ. ಯನ್. ಸಿಂಗ್
ಶ್ರೀ ಜಿ. ಎಲ್. ಮೆಹತಾ	ಶ್ರೀ ಕೆ. ಸಿ. ನಿಯೋಗಿ	ಶ್ರೀ ಸಿ. ಎಂ. ತ್ರಿವೇದಿ	ಶ್ರೀ ಪಿ. ಸಿ. ಮಹಲನೊಬಿಸ್
ಶ್ರೀ ಆರ್. ಕೆ. ಪಾಟೀಲ್	ಶ್ರೀ ಜೆ. ಸಿ. ಘೋಷ್	ಶ್ರೀ ಶ್ರೀಮನ್ ನಾರಾಯಣ್	ಡಾ॥ ಎಂ. ಎಸ್. ಥ್ಯಾಕರ್
ಶ್ರೀಮತಿ ಜಿ. ದುರ್ಗಬಾಯಿ		ಶ್ರೀ ಟಿ. ಯನ್. ಸಿಂಗ್	ಶ್ರೀ ತರ್‌ಲೋಕ್‌ಸಿಂಗ್
		ಶ್ರೀ ಎ. ಎನ್. ಕ್ಹೊಸ್ಲಾ	ಶ್ರೀ ಜಿ. ಎಲ್. ನಂದ
		ಶ್ರೀ ಪಿ. ಸಿ. ಮಹಲನೊಬಿಸ್	ಶ್ರೀ ಟಿ. ಟಿ. ಕೃಷ್ಣಮಾಚಾರಿ
			ಡಾ॥ ವಿ. ಕೆ. ಆರ್. ವಿ. ರಾವ್
			ಶ್ರೀ ಬಿ. ಆರ್. ಭಗತ್

* ಪ್ರಥಮ, ದ್ವಿತೀಯ ಹಾಗೂ ತೃತೀಯ ಪಂಚವಾರ್ಷಿಕ ಯೋಜನೆಗಳಿಗೆ ಸಹಿ ಹಾಕಿರುವವರ ಮತ್ತು ಶ್ರೀ ಅಶೋಕ ಮೆಹ್ತಾರವರು ಉಪಾಧ್ಯಕ್ಷರಾದ ನಂತರ ಇರುವವರ ಸದಸ್ಯರ ಹೆಸರುಗಳನ್ನು ಈ ಪಟ್ಟಿಯಲ್ಲಿ ಕೊಡಲಾಗಿದೆ.

ಅನುಬಂಧ ೨

ಯೋಜನಾ ನಿಯೋಗದ ಸದಸ್ಯರುಗಳಲ್ಲಿ ಕಾರ್ಯಕ್ಷೇತ್ರಗಳ (Port-Folios) ಹಂಚಿಕೆ

೧.	ಶ್ರೀ ಜವಹರ್‌ಲಾಲ್ ನೆಹ್ರೂ,—(ಅಧ್ಯಕ್ಷ)....	
೨.	ಶ್ರೀ ಅಶೋಕ ಮೆಹ್ತಾ—(ಉಪಾಧ್ಯಕ್ಷ)	ಯೋಜನಾ ಸಮನ್ವಯ, ಆಡಳಿತ ಹಾಗೂ ಸಮನ್ವಯ; ಕಾರ್ಯಕ್ರಮ ಆಡಳಿತ, ಆರ್ಥಿಕ ಬೆಳವಣಿಗೆ ಹಾಗೂ ನೀತಿ, ಸಮಾಚಾರ ಹಾಗೂ ಪ್ರಚಾರ, ಸಾಧನ-ಸಂಪತ್ತುಗಳ ಕಾರ್ಯಕ್ರಮ ಸಮಿತಿ.
೩.	ಶ್ರೀ ಶ್ರೀಮನ್ ನಾರಾಯಣ್	ಆಹಾರ, ಸಾಮುದಾಯಿಕ ಅಭಿವೃದ್ಧಿ, ಸಹಕಾರ, ಗ್ರಾಮೀಣ ಅಭಿವೃದ್ಧಿ, ಕಾಮಗಾರಿಗಳು ಹಾಗೂ ಭೂ ಸುಧಾರಣೆಗಳು; ಒಟ್ಟಿನಲ್ಲಿ ವ್ಯವಸಾಯ.
೪.	ಶ್ರೀ ಟಿ. ಯನ್. ಸಿಂಗ್	ಕೈಗಾರಿಕೆಗಳು, ಗ್ರಾಮ ಹಾಗೂ ಚಿಕ್ಕ ಪುಟ್ಟ ಕೈಗಾರಿಕೆಗಳು, ತೈಲ ಹಾಗೂ ಖನಿಜಗಳು ಮತ್ತು ಪುನರ್ವ್ಯವಸ್ಥೆ (Rehabilitation).
೫.	ಪ್ರೊ॥ ಮಹಲನೊಬಿಸ್	ದೀರ್ಘಕಾಲಾವಧಿ ಯೋಜನೆ, ಅಂಕಿ ಅಂಶಗಳು ಹಾಗೂ ಸರ್ವೆಗಳು (Surveys).
೬.	ಡಾ॥ ಎಂ. ಎಸ್. ಥ್ಯಾಕರ್	ಪ್ರಾಕೃತಿಕ ಸಾಧನಸಂಪತ್ತುಗಳು, 'ತಾಂತ್ರಿಕ' ಜನಬಲ, ಗೃಹನಿರ್ಮಾಣ, ನೀರಾವರಿ ಹಾಗೂ ವಿದ್ಯುಚ್ಛಕ್ತಿ, ನೀರು ಸರಬರಾಯಿ, ನಿರ್ಮಾಣ ಮಿತವ್ಯಯ(Construction Economies).
೭.	ಶ್ರೀ ತರ್‌ಲೋಕ್‌ಸಿಂಗ್	ಆಡಳಿತ, ಯಾನವಾಹನ ಹಾಗೂ ಸಂಪರ್ಕ, ಸಾರ್ವಜನಿಕ ಆಡಳಿತ, ಯೋಜನಾ ಪ್ರಾಜೆಕ್ಟುಗಳ ಸಮಿತಿ.
೮.	ಶ್ರೀ ಜಿ. ಎಲ್. ನಂದ	ಯೋಜನಾ ಮಂತ್ರಿ, ಸಾರ್ವಜನಿಕ ಸಹಕಾರ, ಪಾನನಿರೋಧ.
೯.	ಡಾ॥ ವಿ. ಕೆ. ಆರ್. ವಿ. ರಾವ್	ವಿದ್ಯಾಭ್ಯಾಸ, ಜನಬಲ ಯೋಜನೆ(Man-power planning), ಆರೋಗ್ಯ, ಶ್ರಮ (Labour) ಹಾಗೂ ಉದ್ಯೋಗ, ಸಾಮಾಜಿಕ ಯೋಗಕ್ಷೇಮ, ವಿದೇಶಿ ಸಹಾಯ, ವಿದೇಶಿ ವಿನಿಮಯ, ಯೋಜನಾಭಿವೃದ್ಧಿ, ಅಂತರರಾಷ್ಟ್ರೀಯ ವ್ಯಾಪಾರ ಹಾಗೂ ಅಭಿವೃದ್ಧಿ, ಕಾರ್ಯಕ್ರಮ ಪ್ರಗತಿ ಪರಿಶೀಲನಾ ಸಂಸ್ಥೆ (Programme Evaluation Organization).
೧೦.	ಶ್ರೀ ಟಿ. ಟಿ. ಕೃಷ್ಣಮಾಚಾರಿ	ಹಣಕಾಸಿನ ಸಾಧನಗಳು (Financial Resources).
೧೧.	ಶ್ರೀ ಬಿ. ಆರ್. ಭಗತ್	'ಪಾರ್ಲಿಮೆಂಟರಿ' ವ್ಯವಹಾರ (Parliamentary Business).

ವಿಜ್ಞಾನ ವೀಕ್ಷಣೆ

ಇನ್ನು ಸುಮಾರು ಇಪ್ಪತ್ತು ವರ್ಷಗಳಲ್ಲಿ ಜನ ಪ್ರಕೃತಿಯಲ್ಲಿರುವ ಜೀವಂತ ಪ್ರಾಣಿಗಳೊಂದಿಗೆ ಮಾತನಾಡಲು ಸಮರ್ಥರಾಗುವರೆಂದು ನಂಬಲಾಗಿದೆ. ಡಾಲ್ಫಿನ್ (ಕೊಂಕುಮೀನು)ಗಳೊಂದಿಗೆ ನಾವು ಮಾತನಾಡಲು ಸಾಧ್ಯವಾಗುವುದು ಹೆಚ್ಚು ಸಂಭವ. ಇದಾದರೆ ಮಾನವಕೋಟಿಗೆ ಒಂದು ಮಹಾ ವರಪ್ರಸಾದ ಲಭಿಸಿದಂತಾಗುತ್ತದೆ. ಅತ್ಯುತ್ತಮ ಮೀನು ದೊರಕುವ ಕ್ಷೇತ್ರಗಳಿಗೆ ಕೊಂಡೊಯ್ಯಲು ಮಾರ್ಗದರ್ಶಿಗಳಾಗಿ ಇವುಗಳಿಗೆ ಸರಿಸಾಟಿ ಬೇರೆ ಇಲ್ಲ. ಇವು ನೌಕಾಯಾನ ನಕ್ಷೆಗಳನ್ನು ರಚಿಸುವುದರಲ್ಲೂ ನಮಗೆ ನೆರವಾಗಬಲ್ಲವು. ಬಹುಶಃ ಭವಿಷ್ಯತ್ತಿನಲ್ಲಿ ಒಂದು ದಿನ ಇವುಗಳು ನಮಗೆ ಮಹಾಸಾಗರಗಳ ಅಡಿನೆಲದಿಂದ ಮರಳುಕಣಗಳನ್ನು ಅಥವಾ ಸಮುದ್ರದೊಳಕ್ಕೆ ಬಿದ್ದಿರುವ ರಾಕೆಟ್ ಕೋಶಗಳ ಕಣಗಳನ್ನು ತಂದುಕೊಡಲಿರುವುವು.

ಡಾಲ್ಫಿನ್‌ಗಳು ಮಾನವನ ಮೆದುಳಿಗೆ ಅತ್ಯಂತ ಹೆಚ್ಚಿನ ಸಾದೃಶ್ಯತೆ ಹೊಂದಿರುವಂಥ ನರವ್ಯೂಹಾಪದ್ಧತಿಯನ್ನು ಪಡೆದಿರುತ್ತವೆ. ಇವು ಮನುಷ್ಯರಿಗೆ ಚಿಂಪಾನ್ಸೀಗಳಂತಹ ನರವಾನರಗಳಿಗಿಂತ ಹೆಚ್ಚು ಸಮೀಪವೆಂದು ಅನೇಕ ವಿಜ್ಞಾನಿಗಳು ಪ್ರತಿಪಾದಿಸುತ್ತಾರೆ. ಇತ್ತೀಚಿನ ವರ್ಷಗಳಲ್ಲಿ ಡಾಲ್ಫಿನ್‌ಗಳು ಅನೇಕ ಕ್ಷೇತ್ರಗಳ ವಿಜ್ಞಾನಿಗಳ ಗಮನ ಆಕರ್ಷಿಸಿವೆ. ನೀರಿನ ವಿರುದ್ಧ ಘರ್ಷಣೆಯನ್ನು ಏನೇನೂ ಇಲ್ಲದಿರುವಂತೆ ಮಾಡಿರುವ ಡಾಲ್ಫಿನ್‌ನ ಚರ್ಮದ ಅತ್ಯದ್ಭುತ ಗುಣವನ್ನು ನೌಕಾರಚಯಿತರುಗಳು ಅಭ್ಯಸಿಸುತ್ತಿದ್ದಾರೆ.

ಡಾಲ್ಫಿನ್‌ಗಳ ಸಹಾಯದಿಂದ ವಿಜ್ಞಾನಿಗಳು ಕೆಸರು ತುಂಬಿದ ನೀರಿನಲ್ಲೂ ಅಥವಾ ಸೂರ್ಯನ ಬೆಳಕು ಭೇದಿಸಿಕೊಂಡು ಹೋಗಲಾರದಂಥ ಸಮುದ್ರದ ಅತ್ಯಂತ ಆಳಗಳಲ್ಲೂ ಮೀನನ್ನು "ಕಾಣ"ಲು ಸಾಧ್ಯವಾಗಬಹುದು. ಡಾಲ್ಫಿನ್‌ಗಳ ಹೈಡ್ರಾಲಿಕ್ ಶಬ್ದಕ ವ್ಯವಸ್ಥೆಯು ನಮ್ಮ ಅತ್ಯುತ್ತಮ ಶಬ್ದಾತೀತ ಹೈಡ್ರಾಲಿಕ್ ಶಬ್ದಗಳಿಗಿಂತ ಕಳಪೆಯಾಗೇನೂ ಕೆಲಸಮಾಡದು. ಅದಕ್ಕೆ ಬದಲಾಗಿ, ಎಷ್ಟೋ ರೀತಿಯಲ್ಲಿ ಹೆಚ್ಚು ಚೆನ್ನಾಗಿಯೇ ಕೆಲಸಮಾಡುತ್ತದೆ.

—"ಸೋವಿಯತ್ ದೇಶ"ದಿಂದ
ಡಿಸೆಂಬರ್ ೧೯೬೩.

ಸಾದರ ಸ್ವೀಕಾರ

ರವೀಂದ್ರ ಕಥಾಮಂಜರಿ—೨ (ಕಥಾಸಂಗ್ರಹ) : ಅನುವಾದಕರು: ಶ್ರೀ ಅಹೋಬಲ ಶಂಕರ; ಪ್ರಕಾಶಕರು: ಕಾವ್ಯಾಲಯ, ಮೈಸೂರು; ಕಿರೀಟ ಅಷ್ಟದಳ; ಪು. viii + ೫೧೪ ; ಬೆಲೆ: ಸಾದಾಪ್ರತಿ: ರೂ. ೮ ; ಕ್ಯಾಲಿಕೊ: ರೂ. ೧೦.

ಹುಟ್ಟೂರಿನ ಮೋಹ—(ಚಿತ್ರಗಳು) : ಲೇಖಕರು : ಶ್ರೀ ಎ. ಎಸ್. ರಾಮಕೃಷ್ಣ ; ಪ್ರಕಾಶಕರು : ಕಾವ್ಯಾಲಯ, ಮೈಸೂರು; ಕಿರೀಟ ಅಷ್ಟದಳ; ಪು. ix + ೧೧೦ ; ಬೆಲೆ: ಸಾದಾಪ್ರತಿ : ರೂ. ೨ ; ಕ್ಯಾಲಿಕೊ : ರೂ. ೩-೫೦.

ನೀತಿಚಿಂತಾಮಣಿ—೭ (ಸಣ್ಣ ಕತೆಗಳು): ಲೇಖಕರು ಶ್ರೀ ಎಂ. ಎಸ್. ಪುಟ್ಟಣ್ಣ ; ಪ್ರಕಾಶಕರು : ಕಾವ್ಯಾಲಯ, ಮೈಸೂರು; ಕಿರೀಟ ಅಷ್ಟದಳ; ಪು. ೩೨; ಬೆಲೆ : ನಪೈ. ೫೦.

ಗಂಟೆಗೋಪುರ—(ಸಣ್ಣ ಕತೆಗಳು) : ಲೇಖಕರು : ಶ್ರೀ ಹೊಯಿಸಳ ; ಪ್ರಕಾಶಕರು : ಕಾವ್ಯಾಲಯ, ಮೈಸೂರು; ಕಿರೀಟ ಅಷ್ಟದಳ; ಬೆಲೆ : ನಪೈ. ೫೦.

ರಂಗಬಿನ್ನಪ-(ವಚನಗಳು) : ಲೇಖಕರು : ಶ್ರೀ ಎಸ್. ವಿ. ರಂಗಣ್ಣ ; ಪ್ರಕಾಶಕರು : ಕಾವ್ಯಾಲಯ, ಮೈಸೂರು; ಕಿರೀಟ ಅಷ್ಟದಳ; ಪು. xx + ೬೦೪ : ಬೆಲೆ: ಸಾದಾಪ್ರತಿ: ರೂ. ೧೫ ಕ್ಯಾಲಿಕೊ : ರೂ. ೨೦.

ನಂಟರು—(ಲಘು ಪ್ರಬಂಧಗಳು): ಲೇಖಕರು: ಶ್ರೀ ತೀ. ನಂ. ಶ್ರೀಕಂಠಯ್ಯ ; ಪ್ರಕಾಶಕರು : ಶಾರದಾ ಮಂದಿರ, ರಾಮಯ್ಯರ್ ರಸ್ತೆ, ಮೈಸೂರು-೪ ; ಕಿರೀಟ ಅಷ್ಟದಳ ; ಪು. viii + ೧೪೯ ; ಬೆಲೆ: ಸಾದಾಪ್ರತಿ: ರೂ. ೨-೫೦ ; ಕ್ಯಾಲಿಕೊ: ರೂ. ೪.

ಏಕಾಂಕ ಸಂಗ್ರಹ — (ನಾಟಕಗಳ ಸಂಕಲನ) : ಸಂಪಾದಕರು : ಶ್ರೀ ಅದ್ಯ ರಂಗಾಚಾರ್ಯ; ಪ್ರಕಾಶಕರು : ಶಾರದಾಮಂದಿರ, ರಾಮಯ್ಯರ್ ರಸೆ, ಮೈಸೂರು-೪; ಡೆಮ್ಮಿ ಅಷ್ಟದಳ ; ಪು. xii + ೨೦೮ ; ಬೆಲೆ: ರೂ. ೫.

ಮಹಾತ್ಮಾಗಾಂಧೀ—(ಜೀವನ ಚರಿತ್ರೆ) : ಮೂಲ ಲೇಖಕರು : ಶ್ರೀ ಬಿ. ಆರ್. ನಂದಾ ; ಅನುವಾದಕರು : ಶ್ರೀ ಜಿ. ವಿ. ನಾರಾಯಣಮೂರ್ತಿ; ಪ್ರಕಾಶಕರು : ಉಷಾ ಸಾಹಿತ್ಯಮಾಲೆ, ಮೈಸೂರು : ಡೆಮ್ಮಿ ಅಷ್ಟದಳ; ಪು. ix + ೫೫೭ ; ಬೆಲೆ: ರೂ. ೧೬.

ಶ್ರೀ ಬಸವಣ್ಣನವರ ವಚನ ಸಂಗ್ರಹ—(ವಚನ ಸಂಕಲನ) : ಸಂಪಾದಕರು : ಶ್ರೀ ಸ. ಸ. ಮಾಳವಾಡ; ಪ್ರಕಾಶಕರು : ಸಮಾಜ ಪುಸ್ತಕಾಲಯ, ಧಾರವಾಡ ೧ ; ಕಿರೀಟ ಅಷ್ಟದಳ ; ಪು. xxviii + ೨೦೫ ; ಬೆಲೆ: ರೂ. ೩.

ಭಾವವಾಣಿ—(ಕವನ ಸಂಕಲನ) : ಲೇಖಕರು : ಶ್ರೀ ಸಿ. ಕೆ. ತುಕಾರಾಮು ; ಪ್ರಕಾಶಕರು : ವಿದ್ಯಾನಿಧಿ ಪ್ರಕಾಶನ ಮಂದಿರ, ಜಾಲೀಹಾಳ; ಕಿರೀಟ ಅಷ್ಟದಳ ; ಪು. xvi + ೮೦ ; ಬೆಲೆ : ರೂ. ೧-೨೫.

ಬಿಸಿಲಹೂ—(ಕವನ ಸಂಕಲನ) : ಲೇಖಕರು : ಶ್ರೀ ಸೋಮಶೇಖರ ಇಮ್ರಾಪೂರ ; ಪ್ರಕಾಶಕರು : ಶ್ರೀ ಸೋಮಶೇಖರ ಜಿ. ಇಮ್ರಾಪೂರ, ಸ್ನೇಹಕುಂಜ, ಜನತಾ ಕಾಲೇಜು, ಧಾರವಾಡ ; ಕಿರೀಟ ಅಷ್ಟದಳ ; ಪು. ೭೨ ; ಬೆಲೆ : ರೂ. ೧.

ಕನ್ನಡ ಗಾದೆಗಳ ಕೋಶ—(ಗಾದೆಗಳ ಸಂಕಲನ) : ಸಂಪಾದಕರು : ಶ್ರೀ. ಟಿ. ವಿ ವೆಂಕಟರಮಣಯ್ಯ ; ಪ್ರಕಾಶಕರು : ಸಮಾಜ ಪುಸ್ತಕಾಲಯ, ಧಾರವಾಡ; ಕಿರೀಟ ಅಷ್ಟದಳ; xxiv + ೨೪೭ ; ಬೆಲೆ : ೨–೭೫.

ಹುಕ್ಕೇರಿಕರ ರಾಮರಾಯರು—(ಜೀವನ ಚರಿತ್ರೆ) : ಲೇಖಕರು : ಶ್ರೀ ಆರ್. ಜಿ. ಮುತಾಲೀಕ ದೇಸಾಯಿ; ಪ್ರಕಾಶಕರು : ಜನತಾ ಶಿಕ್ಷಣ ಸಮಿತಿ, ವಿದ್ಯಾಗಿರಿ, ಧಾರವಾಡ; ಡೆಮ್ಮಿ ಅಷ್ಟದಳ; ಪು. xiv + ೧೮೪ ; ಬೆಲೆ : ರೂ. ೬.

ಜೈನಧರ್ಮಪರಿಚಯ—(ವಿಮರ್ಶಾತ್ಮಕ ಗ್ರಂಥ) : ಲೇಖಕರು : ಶ್ರೀ ಸಿ. ಎಸ್. ಲಿಂಗಣಯ್ಯ, ಬಿ. ಎ. (ಆನರ್ಸ್); ಮಾರಾಟಗಾರರು : ಸತ್ಯಶೋಧನ ಪುಸ್ತಕ ಭಂಡಾರ, ಕೋಟೆ, ಬೆಂಗಳೂರು; ಕಿರೀಟ ಅಷ್ಟದಳ; ಪು. xiv + ೧೧೨ ; ಬೆಲೆ : ರೂ. ೧.

ಶ್ರೀ ವಿಜಯಧ್ವಜಾಚಾರ್ಯರು—(ಜೀವನ ಚರಿತ್ರೆ) : ಲೇಖಕರು : ವಿದ್ವಾನ್ ಕೆ. ವೆಂಕಟರಾಯಾಚಾರ್ಯ ; ಪ್ರಕಾಶಕರು : ವಿಜಯ ಸಾಹಿತ್ಯಮಾಲೆ; ಸುರತ್ಕಲ್, ದ. ಕ.; ಕಿರೀಟ ಅಷ್ಟದಳ ; ಪು. ೧೬ ; ಬೆಲೆ : ನಪೈ. ೨೫.

ಸೂಕ್ತಿ ಮಂಜರಿ—(ಕವಿತೆ) : ಲೇಖಕರು : ಶ್ರೀ ಕ. ಪು. ಸೀತಾರಾಮ ಕೆದ್ಲಾಯ ; ಪ್ರಕಾಶಕರು : ಶ್ರೀ ಕ. ಪು. ಸೀತಾರಾಮ ಕೆದ್ಲಾಯ, ಶಿಶಿಲ, ಅರಸಿನಮಕ್ಕಿ, ದಕ್ಷಿಣ ಕನ್ನಡ; ಫೂಲ್ಸ್‌ಕ್ಯಾಪ್ ೧|೮, ಪು. ೨೦ ; ಬೆಲೆ : ನಪೈ. ೩೦.

ದೇಹಲೋಕದಲ್ಲಿ ಪುಟ್ಟ—(ವೈಜ್ಞಾನಿಕ ಕಿರುಗತೆ) : ಲೇಖಕರು : ಡಾ॥ ಎ. ಸುಬ್ಬರಾವ್, ಎಂ. ಎಸ್‌ಸಿ., ಪಿಎಚ್‌ಡಿ. ; ಪ್ರಕಾಶಕರು : ಸಾರಸವಿಹಾರ, ಸರಸ್ವತಿಪುರ, ಮೈಸೂರು ೫ ; ಪು. ೫೯ ; ಬೆಲೆ : ರೂ. ೧–೫೦.

ಅಕ್ಕಮಹಾದೇವಿ—(ನಾಟಕ) : ಲೇಖಕರು : ಡಾ॥ ರಂ. ಶ್ರೀ. ಮುಗಳಿ ; ಪ್ರಕಾಶಕರು : ಉಷಾಸಾಹಿತ್ಯಮಾಲೆ, ಮೈಸೂರು ; ಕಿರೀಟ ಅಷ್ಟದಳ ; ಬೆಲೆ : ರೂ. ೧.

ಅಕ್ಬರ್—(ಜೀವನ ಚರಿತ್ರೆ) : ಮೂಲ ಲೇಖಕರು : ಲಾರೆನ್ಸ್ ಬಿನಿಯನ್ ; ಅನುವಾದಕರು : ಶ್ರೀ ಡಿ. ಜವರೇಗೌಡ; ಪ್ರಕಾಶಕರು : ಉಷಾಸಾಹಿತ್ಯಮಾಲೆ, ಮೈಸೂರು ; ಕಿರೀಟ ಅಷ್ಟದಳ; ಪು. ೧೪೫ ; ಬೆಲೆ : ರೂ. ೨–೫೦.

ರಣಕಹಳೆ—(ಸಮರ ಗೀತೆಗಳು) : ಸಂಪಾದಕರು; ಶ್ರೀ ಕೆ. ಭೀಮರಾವ್ ; ಪ್ರಕಾಶಕರು : ರಾಷ್ಟ್ರಕೂಟ ಪ್ರಕಾಶನ, ಚಾಮರಾಜಪೇಟೆ, ಬೆಂಗಳೂರು ೧೮ ; ಕಿರೀಟ ಅಷ್ಟದಳ; ಪು. ೪೮ ; ಬೆಲೆ : ನಪೈ. ೭೫.

ಕಾಯಕಕಲೆ—(ವಿಮರ್ಶಾತ್ಮಕ ಗ್ರಂಥ) ; ಲೇಖಕರು : ಸೂರ್ಯ ಸಿಂಹಾಸನಾಧೀಶ್ವರ ಶ್ರೀ ಜ. ಚ. ನಿ. ಅವರು ; ಪ್ರಕಾಶಕರು : ಶ್ರೀ ಶೈಲ ಜಗದ್ಗುರು ನಿಡುಮಾಮಿಡಿ ಪುಸ್ತಕ ಭಂಡಾರ, ಹ. ಭ. ಸಮಾಜ ರಸ್ತೆ, ಬೆಂಗಳೂರು ೪ ; ಕಿರೀಟ ಅಷ್ಟದಳ; ಪು. xvi + ೨೦೮ ; ಬೆಲೆ : ಸಾದಾಪ್ರತಿ: ರೂ.೩ ; ಕ್ಯಾಲಿಕೋ: ರೂ. ೪.

ರಜತರೇಖೆ—(ಬಾನುಲಿ ರೂಪಕಗಳು) ; ಲೇಖಕರು : ಶ್ರೀ ಸಿದ್ದಯ್ಯ ಪುರಾಣಿಕ; ಪ್ರಕಾಶಕರು : ಕರ್ನಾಟಕ ಸಹಕಾರಿ ಸಾಹಿತ್ಯ ಸಂಘ, ಲಿಮಿಟೆಡ್, ಧಾರವಾಡ ; ಕಿರೀಟ ಅಷ್ಟದಳ ; ಪು. vi + ೧೪೩ ; ಬೆಲೆ : ರೂ. ೧–೫೦.

ಇದ್ದು ಜಯಿಸಬೇಕು—(ಕಿರು ಕಾದಂಬರಿ): ಲೇಖಕರು: ಶ್ರೀ ಎನ್. ಎಸ್. ಗದಗಕರ; ಪ್ರಕಾಶಕರು: ಶ್ರೀ ಎನ್. ಎಸ್. ಗದಗಕರ, ಎಂ. ಎ,. ಶುಕ್ರವಾರ ಪೇಟೆ, ನವಲೂರ ಅಗಸಿ, ಧಾರವಾಡ; ಕಿರೀಟ ಅಷ್ಟದಳ; ಪು. ೫೦; ಬೆಲೆ: ನಪೈ. ೮೦.

ಯುಗಪ್ರವರ್ತಕ ಬಸವಣ್ಣನವರು—(ಪ್ರಬಂಧಗಳ ಸಂಗ್ರಹ): ಲೇಖಕರು: ಶ್ರೀ ಚಿಂತಾಮಣಿ; ಪ್ರಕಾಶಕರು: ಕರ್ನಾಟಕ ಸಹಕಾರಿ ಸಾಹಿತ್ಯ ಸಂಘ, ಲಿಮಿಟೆಡ್, ಧಾರವಾಡ; ಕಿರೀಟ ಅಷ್ಟದಳ; ಪು. viii + ೯೪; ಬೆಲೆ: ರೂ. ೧–೫೦.

ಭಾರತ ಸ್ವಾತಂತ್ರ್ಯದ ಬೆಳ್ಳಿ ಚುಕ್ಕಿ—(ವಿಚಾರಾತ್ಮಕ ಗ್ರಂಥ); ಲೇಖಕರು: ಶ್ರೀ ಗ. ಸ. ಹಾಲಪ್ಪ, ಎಂ. ಎ. (ಕೊಲಂಬಿಯಾ); ಪ್ರಕಾಶಕರು: ಕರ್ನಾಟಕ ಸಹಕಾರಿ ಸಾಹಿತ್ಯ ಸಂಘ, ಲಿಮಿಟೆಡ್, ಧಾರವಾಡ; ಕಿರೀಟ ಅಷ್ಟದಳ; ಪು. ೧೭೯; ಬೆಲೆ: ರೂ. ೧–೫೦.

ಸಮರ ದುಂದುಭಿ—(ಕಾವ್ಯ ಸಂಗ್ರಹ): ಸಂಪಾದಕರು: ಡಾ॥ ಆರ್. ಸಿ. ಹಿರೇಮಠ ಎಂ. ಎ., ಪಿಎಚ್. ಡಿ. ಮತ್ತು ಡಾ॥ ಎಂ. ಎಸ್. ಸುಂಕಾಪುರ, ಎಂ. ಎ., ಪಿಎಚ್. ಡಿ; ಪ್ರಕಾಶಕರು: ಕರ್ನಾಟಕ ಸಹಕಾರಿ ಸಾಹಿತ್ಯ ಸಂಘ, ಲಿಮಿಟೆಡ್, ಧಾರವಾಡ; ಕಿರೀಟ ಅಷ್ಟದಳ; ಪು. ೧೪ + ೧೧೪; ಬೆಲೆ: ರೂ. ೧–೫೦.

ಕನ್ನಡ ಜಾನಪದ ಗೀತಗಳು—(ವಿಮರ್ಶಾತ್ಮಕ ಗ್ರಂಥ): ಲೇಖಕರು: ಡಾ॥ ಬಿ. ಎಸ್. ಗದ್ದಗಿಮಠ, ಎಂ. ಎ., ಪಿಚ್. ಡಿ.; ಪ್ರಕಾಶಕರು: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ; ಕಿರೀಟ ೧|೪; ಪು. xi + ೩೯೨; ಬೆಲೆ: ರೂ. ೫.

ನಿಜಗುಣ ಶಿವಯೋಗಿಕೃತ ವಿವೇಕ ಚಿಂತಾಮಣಿ—(ಮರಾಠಿ ಅನುವಾದ): ಅನುವಾದಕರು: ಶಾಂತಲಿಂಗ ಶಿವಯೋಗಿ; ಸಂಪಾದಕರು: ಪಂಡಿತ್ ಆವಳೀಕರ; ಪ್ರಕಾಶಕರು: ಕರ್ನಾಟಕ ಮತ್ತು ಪೂನ ವಿಶ್ವವಿದ್ಯಾಲಯಗಳು; ಡೆಮ್ಮಿ ೧|೮; ಪು. iii + ೪೩೬; ಬೆಲೆ: ರೂ. ೬–೭೫.

ಸುವರ್ಣ ಸಂಪುಟ—(ವಿಶೇಷ ಸಂಪುಟ): ಪ್ರಕಾಶಕರು: ೪೪ ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿ, ಸಿದ್ಧಗಂಗೆ, ತುಮಕೂರು; ಕಿರೀಟ ೧|೪; ಪು. XLviii + ೧೪೪; ಬೆಲೆ: ರೂ. ೧–೫೦.

ಶ್ರೀ ಜೈನಸಿದ್ಧಾಂತ ಭಾಸ್ಕರ್ (The Jaina Antiquary)—(ವಜ್ರಮಹೋತ್ಸವ ವಿಶೇಷಾಂಕ) (ಷಾಣ್ಮಾಸಿಕ ಹಿಂದಿ ಪತ್ರಿಕೆ): ಸಂಪಾದಕರು: ಡಾ॥ ಜ್ಯೋತಿಪ್ರಸಾದ ಜೈನ್, ಎಂ, ಎ., ಎಲ್.ಎಲ್. ಬಿ., ಪಿಎಚ್. ಡಿ., ಮತ್ತು ಡಾ॥ ನೇಮಿಚಂದ್ರ ಶಾಸ್ತ್ರೀ, ಜ್ಯೋತಿಷಾಚಾರ್ಯ, ಎಂ. ಎ., ಪಿಎಚ್. ಡಿ.; ಪ್ರಕಾಶಕರು: ದೇವಕುಮಾರ ಜೈನ್ ಓರಿಯೆಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್, ಜೈನ ಸಿದ್ಧಾಂತ ಭವನ, ಆರಾ; ಸಂಪುಟ xxii, ಸಂ. ೧; ವಾರ್ಷಿಕ ಚಂದಾ: ಸ್ವದೇಶ: ರೂ ೬; ವಿದೇಶ: ರೂ. ೧೦.

ಮೋಡಣ್ಣನ ಗೆಳೆಯರು—(ಶಿಶು ಸಾಹಿತ್ಯ): ಲೇಖಕರು: ಶ್ರೀ ಜಿ. ಎಂ. ಹನಸೋಗೆ; ಪ್ರಕಾಶಕರು: ಶ್ರೀ ಶಾರದಾ ಪ್ರೆಸ್, ಮೈಸೂರು; ಕಿರೀಟ ಅಷ್ಟದಳ; ಪುಟ. ೫೦; ಬೆಲೆ: ನಪೈ. ೭೫.

ತಮ್ಮಣ್ಣ-ತಂಗಚ್ಚಿ—(ಶಿಶು ಸಾಹಿತ್ಯ): ಲೇಖಕರು: ಶ್ರೀ ಜಿ. ಎಂ. ಹನಸೋಗೆ; ಪ್ರಕಾಶಕರು: ಜನಪದ ಸಾಹಿತ್ಯ ಅಕಾಡೆಮಿ, ಮೈಸೂರು; ಕಿರೀಟ ಅಷ್ಟದಳ; ಪು. ೩೮; ಬೆಲೆ: ರೂ. ೧.

ಸುಬೋಧ—(ಶ್ರೀ ಪುರಂದರ ವಿಶೇಷಾಂಕ): ಸಂಪಾದಕರು: ಶ್ರೀ ಯಂ. ರಾಮರಾವ್; ಪ್ರಕಾಶಕರು: ಸುಬೋಧ ಪ್ರಕಟನಾಲಯ, ಚಾಮರಾಜಪೇಟೆ, ಬೆಂಗಳೂರು ೧೮; ಸಂಪುಟ ೩೮; ಸಂಚಿಕೆ, ೧; ಪು. ೭೬; ಬೆಲೆ: ನಪೈ. ೫೦.

ಶರೀರ ಶಿಕ್ಷಣ ಸಂಘಟನೆ—(ಶೈಕ್ಷಣಿಕ ಗ್ರಂಥ): ಮೂಲಲೇಖಕರು: ಶ್ರೀ ಪಿ. ಎಂ. ಜೋಸೆಫ್, ಬಿ. ಎಸ್‌ಸಿ., ಬಿ. ಪಿ. ಇ; ಎಂ. ಇಡಿ.; ಅನುವಾದಕರು: ಶ್ರೀ ಕೆ. ಜಿ. ನಾಡಗೀರ, ಬಿ. ಎ., ಬಿ. ಟಿ., ಡಿ. ಪಿ. ಇಡಿ.; ಪ್ರಕಾಶಕರು: ಮಲ್ಲಸಜ್ಜನ ವ್ಯಾಯಾಮಶಾಲಾ, ಧಾರವಾಡ; ಕಿರೀಟ ಅಷ್ಟದಳ; ಪು. ix+ ೨೩೦; ಬೆಲೆ: ರೂ. ೨-೫೦.

ಶರೀರ ಶಿಕ್ಷಣದ ತತ್ವದರ್ಶನ—(ಶೈಕ್ಷಣಿಕ ಗ್ರಂಥ): ಲೇಖಕರು: ಶ್ರೀ. ಕೆ. ಜಿ. ನಾಡಗೀರ, ಬಿ. ಎ., ಬಿ. ಟಿ., ಡಿ. ಪಿ. ಇಡಿ.: ಪ್ರಕಾಶಕರು: ಮಲ್ಲಸಜ್ಜನ ವ್ಯಾಯಾಮ ಶಾಲಾ, ಧಾರವಾಡ; ಕಿರೀಟ ಅಷ್ಟದಳ; ಪು. ೯೧; ಬೆಲೆ: ರೂ. ೧-೫೦.

ಶರೀರ ಶಿಕ್ಷಣ ಮತ್ತು ವಿಧಾನ—(ಶೈಕ್ಷಣಿಕ ಗ್ರಂಥ): ಲೇಖಕರು: ಶ್ರೀ ಕೆ. ಜಿ. ನಾಡಗೀರ, ಬಿ. ಎ., ಬಿ. ಟಿ., ಡಿ. ಪಿ. ಇಡಿ.; ಪ್ರಕಾಶಕರು: ಮಲ್ಲಸಜ್ಜನ ವ್ಯಾಯಾಮ ಶಾಲಾ, ಧಾರವಾಡ; ಕಿರೀಟ ಅಷ್ಟದಳ; ಪು. ii+ ೨೭೨; ಬೆಲೆ: ರೂ. ೩-೫೦.

ಅಮೃತ ಬಿಂದು—(ಆಧ್ಯಾತ್ಮಿಕ ವಿಚಾರ): ಸಂಗ್ರಾಹಕರು: ಶ್ರೀ ಋಷಿಕುಮಾರ್; ಪ್ರಕಾಶಕರು: ಪುರಾಣ ವಿಜ್ಞಾನ ಪ್ರಕಾಶನ, ಚನ್ನಗಿರಿ; ಕಿರೀಟ ಅಷ್ಟದಳ; ಪು. ೨೯; ಬೆಲೆ: ನಪೈ. ೫೦.

ಜೀವನ—(ಶ್ರೀ ಪುರಂದರದಾಸರ ವಿಶೇಷಾಂಕ): ಸಂಪಾದಕರು: ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್; ಪ್ರಕಾಶಕರು: ಜೀವನ ಕಾರ್ಯಾಲಯ, ಗವೀಪುರಂ, ಬೆಂಗಳೂರು ೧೯; ಸಂಪುಟ ೨೪, ಸಂಚಿಕೆ, ೯; ಬೆಲೆ?

ಕುಮ್ಮಟ ಕೇಸರಿ—(ಜೀವನ ಚಿತ್ರಣ): ಲೇಖಕರು: ಶ್ರೀ ಜಿ. ವರದರಾಜರಾವ್; ಪ್ರಕಾಶಕರು: ಉಷಾ ಸಾಹಿತ್ಯಮಾಲೆ, ಮೈಸೂರು; ಕಿರೀಟ, ಅಷ್ಟದಳ; ಪು. xxx+ ೧೪೪; ಬೆಲೆ: ಸಾದಾಪ್ರತಿ: ರೂ. ೨-೫೦; ಕ್ಯಾಲಿಕೋ: ರೂ: ೪.

ಮಧ್ಯಬಿಂದು—(ಕವನ ಸಂಕಲನ): ಲೇಖಕರು: ಶ್ರೀ ಚಂದ್ರಶೇಖರ ಪಾಟೀಲ; ಪ್ರಕಾಶಕರು: ಶ್ರೀ ಚಂದ್ರಶೇಖರ ಪಾಟೀಲ, ಎಂ. ಎ., ಕರ್ನಾಟಕ ಕಾಲೇಜು, ಧಾರವಾಡ: ಮಾರಾಟಗಾರರು: ಸಮಾಜ ಪುಸ್ತಕಾಲಯ, ಧಾರವಾಡ; ಕಿರೀಟ ಅಷ್ಟದಳ; ಪು. ೭೨; ಬೆಲೆ: ರೂ. ೧-೫೦.

ಕೃತ್ತಿಕೆ—(ಕವನ ಸಂಕಲನ): ಕವಿ: ಶ್ರೀ ಕುವೆಂಪು; ಪ್ರಕಾಶನ: ಉದಯರವಿ, ಮೈಸೂರು-೨; ಆಕಾರ: ಕಿರೀಟ ಅಷ್ಟದಳ; ಮುದ್ರಣ: ಎರಡನೆಯ ಮುದ್ರಣ ೧೯೬೩; ಪು. viii+೯೮; ಬೆಲೆ: ಸಾದಾಪ್ರತಿ: ರೂ. ೨-೫೦; ಉತ್ತಮಪ್ರತಿ: ರೂ. ೫.

ಅನಿಕೇತನ—(ಕವನ ಸಂಕಲನ): ಕವಿ : ಶ್ರೀ ಕುವೆಂಪು; ಪ್ರಕಾಶನ: ಉದಯರವಿ, ಮೈಸೂರು ೨–; ಆಕಾರ: ಕಿರೀಟ ಅಷ್ಟದಳ; ಮುದ್ರಣ: ಮೊದಲ ಮುದ್ರಣ ೧೯೬೩; ಪು.: vi + ೬೬; ಬೆಲೆ: ಸಾದಾಪ್ರತಿ: ರೂ. ೨–೨೫; ಉತ್ತಮಪ್ರತಿ: ರೂ. ೮.

ರಸೋ ವೈ ಸಃ—(ಸಾಹಿತ್ಯ ವಿಮರ್ಶೆ ಮತ್ತು ಕಾವ್ಯಮೀಮಾಂಸೆ): ಮೀಮಾಂಸಕರು: ಶ್ರೀ ಕುವೆಂಪು; ಪ್ರಕಾಶನ: ಉದಯರವಿ, ಮೈಸೂರು–೨; ಆಕಾರ: ಕಿರೀಟ ಅಷ್ಟದಳ; ಮುದ್ರಣ: ಮೊದಲ ಮುದ್ರಣ ೧೯೬೩; ಪು. : iv + ೧೩೬; ಬೆಲೆ: ಸಾದಾಪ್ರತಿ: ರೂ. ೩–೫೦; ಉತ್ತಮಪ್ರತಿ: ರೂ. ೬.

ರವೀಂದ್ರನಾಥ ಠಾಕೂರ್ ನಿಬಂಧಮಾಲಾ ಭಾಗ-೨—(ಅನುವಾದ): ಅನುವಾದಕರು: ಶ್ರೀ ಎ. ಆರ್. ಕೃಷ್ಣಶಾಸ್ತ್ರೀ ಅವರು; ಪ್ರಕಾಶನ: ಸಾಹಿತ್ಯ ಅಕಾಡೆಮಿ, ನವದೆಹಲಿ; ಮಾರಾಟಗಾರರು: ಕಾವ್ಯಾಲಯ, ಮೈಸೂರು–೪; ಆಕಾರ: ಡೆಮ್ಮಿ ಅಷ್ಟದಳ; ಪ್ರಥಮ ಮುದ್ರಣ ೧೯೬೩; ಪು.: xvi + ೪೪೦; ಬೆಲೆ: ರೂ. ೭–೭೫.

ಪುರಂದರ ಪುಣ್ಯಸ್ಮರಣೆ—(ಸ್ಮರಣ ಸಂಚಿಕೆ) ಪ್ರಕಾಶನ: ಶ್ರೀ ಪುರಂದರದಾಸರ ನಾಲ್ಕನೆ ಶತಮಾನೋತ್ಸವ ಸಂಯುಕ್ತ ಸಮಿತಿ, ಹೊಸಪೇಟೆ; ಆಕಾರ: ಕಿರೀಟ ೧/೪; ಪುಟ: viii + ೮೦ + vi; ಬೆಲೆ: ರೂ. ೨.

ಸಾಹಿತಿಗಳ ಸಂಗದಲ್ಲಿ—(ವ್ಯಕ್ತಿ ಕೃತಿ ಚಿತ್ರ) ಕೃತಿಕಾರರು: ಶ್ರೀ ದೇಜಗೌ ಅವರು; ಪ್ರಕಾಶನ: ಜನಪದ ಸಾಹಿತ್ಯ ಅಕಾಡೆಮಿ, ಮೈಸೂರು–೫; ಆಕಾರ: ಕಿರೀಟ ಅಷ್ಟದಳ: ಮೊದಲ ಮುದ್ರಣ: ೧೯೬೪; ಪು.: viii + ೨೦೫ + iii; ಬೆಲೆ: ರೂ. ೩.

ಪ್ರಬುದ್ಧ ಕರ್ಣಾಟಕ

ಸಂಪುಟ ೪೫

(ಶೋಭಕೃತು ಸಂವತ್ಸರ)

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೬೩–೬೪

ವಿಷಯ ಸೂಚಿಕೆ

೩. ನಾಟಕ

೪. ಕಥೆಗಳು

೫. ಪ್ರಬಂಧ, ಹರಟೆ, ಇತ್ಯಾದಿ

(ವಿ.ವಿ. = ವಿಜ್ಞಾನ ವಿಭಾಗ)

ಮೈಸೂರು ಮಹಾರಾಜರವರ ಕಾಲೇಜಿನ
ಕರ್ಣಾಟಕ ಸಂಘದ ಪ್ರಕಟಣೆಗಳು

೧. **ನಾಗಾನಂದ ನಾಟಕ**—ಅನಂತನಾರಾಯಣ ಶಾಸ್ತ್ರಿ; ಬೆಲೆ: ರೂ. ೧.

೨. **ಕರ್ಣಾಟಕ ಮೃಚ್ಛಕಟಿಕ ಪ್ರಕರಣಂ**—ಆಸ್ಥಾನಕವಿ ನಂಜನಗೂಡು ಸುಬ್ಬಾಶಾಸ್ತ್ರಿಗಳವರಿಂದ; ರೂ. ೧-೭೫ ನ.ಪೈ.

ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ಕೆಲವು ಪ್ರಕಟಣೆಗಳು

೧. **ಲಿಯೊನಾರ್ಡ್**—ಎಸ್. ಜಿ. ಶಾಸ್ತ್ರೀ .... ರೂ. ೧-೫೦
(ಬ್ಯೋರನ್‌ಸನ್ ಬರೆದ ನಾಲ್ಕಂಕದ ನಾಟಕ)

೨. **ಸಂಸಕವಿ**—ಹಲವು ಲೇಖಕರು .... ರೂ. ೩-೭೫
('ವಿಗಡವಿಕ್ರಮರಾಯ' ಬರೆದ ಕವಿಯ ಕಾವ್ಯಜೀವನ)

೩. **ಧರ್ಮಪದ ಪ್ರವೇಶಿಕಾ**—ಜಿ. ಪಿ. ರಾಜರತ್ನಂ .... ರೂ. ೧-೦೦
(ಬುದ್ಧವಚನ, ಬಸವವಚನಗಳ ಹೋಲಿಕೆಗಳು)

೪. **ನಮ್ಮ ಬೇಂದ್ರೆಯವರು**—ವಿದ್ಯಾರ್ಥಿಗಳಿಂದ .... ರೂ. ೧-೨೫
(ಬೇಂದ್ರೆಯವರ ಕವನಗಳ ವಿಮರ್ಶೆ)

೫. **ಹೂವಿನ ಪೂಜೆ**—ವಿದ್ಯಾರ್ಥಿಗಳಿಂದ .... ರೂ. ೧-೨೫
(ಬುದ್ಧನಿಗೆ ಅರ್ಪಿಸಿದ ಬರಹಗಳು)

೬. **ಶ್ರೀ ರಾಮಚಂದ್ರಪ್ರಭು**—(ಜ್ಞಾಪಕರೂಪ) .... ರೂ. ೧-೫೦
(ಡಿ.ವಿ.ಜಿ. ಅವರ 'ಶ್ರೀರಾಮಪರೀಕ್ಷಣ'ದ ಸುಲಭರೂಪ)

೭. **ಬಿದನೂರಿನ ರಾಣಿ ವೀರಮ್ಮಾಜಿ**—(ಜ್ಞಾಪಕರೂಪ) .... ರೂ. ೧-೨೫

೮. **ಹೆಜ್ಜೆಪಾಡು** (ಕವನಗಳು)—ವಿ. ಸೀ. .... ರೂ. ೧-೭೫

೯. **ದೀಪಗಳು** (ಕವನಗಳು)—ವಿ. ಸೀ. .... ರೂ. ೧-೨೫

೧೦. **ಅಭಿಜ್ಞಾನ ಶಾಕುಂತಲ ನಾಟಕ**—ವಿ. ಸೀ. .... ರೂ. ೨-೫೦
(ವಿಮರ್ಶಾತ್ಮಕ ಪರಿಚಯ)

೧೧. **ಗಿಳಿವಿಂಡು** (ಕವನಗಳು)—ಎಂ. ಗೋವಿಂದ ಪೈ .... ರೂ. ೨-೫೦

ಅಚ್ಚಿನಲ್ಲಿ

೧೨. **ಸೊಹ್ರಾಬ್-ರುಸ್ತುಂ** (ನಾಟಕ)—ವಿ. ಸೀ.

೧೩. **ಪಂಚಕಲಶ ಗೋಪುರ** (ಚಿತ್ರಗಳು)—ಬಿ. ಜಿ. ಎಲ್. ಸ್ವಾಮಿ

ಸಂಪಾದಕರು: ಎಸ್. ನಾರಾಯಣಶೆಟ್ಟಿ, ಎಂ.ಎ.; ಡಾ|| ಜಿ. ವರದರಾಜರಾವ್,
ಎಂ.ಎ., ಪಿಎಚ್.ಡಿ.

ಪ್ರಕಾಶಕರು: ಪಿ. ಮಲ್ಲಿಕಾರ್ಜುನಪ್ಪ, ಎಂ.ಎಸ್‌ಸಿ.
ಡೈರೆಕ್ಟರ್, 'ಪ್ರಸಾರಾಂಗ', ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.